ಆತ್ಮಕಥೆ ಅಥವಾ ನನ್ನ ಸತ್ಯಾನ್ವೇಷಣೆ

(೧)

★

ಮೋ. ಕ. ಗಾಂಧೀ

★

ಪ್ರಕಾಶಕರು :

ಗಾಂಧೀ ಸ್ಮಾರಕ ನಿಧಿ

ಕುಮಾರ ಪಾರ್ಕ್ ಪೂರ್ವ, ಬೆಂಗಳೂರು-೫೬೦ ೦೦೧.

"ಹೊರಗಿನ ಯಾವುದೇ ಸತ್ತೆಯ ನೆರವಿಲ್ಲದೆ ತಮ್ಮ ಜನತೆಗೆ ನಾಯಕರಾಗಿದ್ದರು. ರಾಜನೀತಿಜ್ಞರೆನಿಸಿದ್ದರೂ ಅವರು ಬರೀ ಯುಕ್ತಿ, ತಂತ್ರ, ಉಪಾಯ ಮತ್ತು ಪ್ರಭುತ್ವವನ್ನಾಶ್ರಯಿಸಲಿಲ್ಲ. ಮನವೊಲಿಸಿಕೊಳ್ಳುವುದರಲ್ಲಿ ಅವರ ವ್ಯಕ್ತಿತ್ವ ಅತ್ಯಂತ ಪರಿಣಾಮಕಾರಿ. ಅವರದು ಗೆಲುವಿನ ಹೋರಾಟ, ಸೇನೆ ಮತ್ತು ಬಲಾತ್ಕಾರದ ವಿಷಯದಲ್ಲಿ ಅವರಿಗೆ ಯಾವಾಗಲೂ ತಿರಸ್ಕಾರ. ಅವರದು ವಿವೇಕ ಬುದ್ಧಿ ; ನಮ್ರತೆಯ ಮೂರ್ತಿಮಂತ ಸ್ವರೂಪ. ಅವರ ನಿಷ್ಠೆ ಸಂಕಲ್ಪ ಬದಲಾಗದಂಥದು. ಮಣಿಯುವ ಸ್ವಭಾವವೇ ಅವರದಲ್ಲ. ಜನತೆಯ ಕಲ್ಯಾಣಕ್ಕಾಗಿ ಅವರು ತಮ್ಮನ್ನು ಸಮರ್ಪಿಸಿಕೊಂಡರು. ಅವರು ವಿರೋಧಿಸಿದ್ದು ಯುರೋಪಿನ ಪಾಶವೀ ಶಕ್ತಿಯನ್ನು. ಅದೂ ಸಾಮಾನ್ಯ ಮನುಷ್ಯನಿಗೆ ಎಟುಕುವ ರೀತಿಯಲ್ಲಿ ; ಘನತೆ-ಗೌರವಗಳನ್ನು ಕಾಪಾಡಿಕೊಂಡು. ಎಲ್ಲ ಕಾಲಕ್ಕೂ ಎದ್ದು ನಿಲ್ಲುವಂತಹ ಶ್ರೇಷ್ಠ ಮಾರ್ಗ ಅವರದು. ರಕ್ತ-ಮಾಂಸಗಳಿಂದಿದ್ದ ಇಂತಹ ವ್ಯಕ್ತಿ ಜಗತ್ತಿನಲ್ಲಿ ಸಂಚರಿಸಿದ್ದನೆ, ಬದುಕಿದ್ದನೆ ಎಂದು ಮುಂಬರುವ ಪೀಳಿಗೆ ಸಂಶಯಪಡಬಹುದು."

—ಆಲ್‌ಬರ್ಟ್ ಐನ್‌ಸ್ಟೀನ್

ಗಾಂಧೀ ಗ್ರಂಥಮಾಲೆ-೧

ಆತ್ಮಕಥೆ ಅಥವಾ ನನ್ನ ಸತ್ಯಾನ್ವೇಷಣೆ

(೧)

ಮೋ. ಕ. ಗಾಂಧೀ

ಅನುವಾದಕರು :
ಗೊರೂರು ರಾಮಸ್ವಾಮಿ ಅಯ್ಯಂಗಾರ್

ಪ್ರಕಾಶಕರು :
ಗಾಂಧೀ ಸ್ಮಾರಕ ನಿಧಿ
ಕುಮಾರ ಪಾರ್ಕ್ ಪೂರ್ವ, ಬೆಂಗಳೂರು-೫೬೦ ೦೦೧.

ATMAKATHE ATHAVA NANNA SATYANVESHANE

Author : Mohandas Karamchand Gandhi

Translator : Gorur Ramaswamy Iyengar

Publisher : Karnataka Gandhi Smarak Nidhi
Kumara Park, Bangalore-1.
(By the kind permission of the
Navajeevan Trust, Ahmedabad-14.)

ಮೊದಲನೆಯ ಮುದ್ರಣ ೧೯೬೨

ಎರಡನೆಯ ಮುದ್ರಣ ೧೯೮೭


ಬೆಲೆ : ೧೫-೦೦

(ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಧನ ಸಹಾಯದಿಂದ ರಿಯಾಯಿತಿ ಬೆಲೆ)


ಮುದ್ರಕರು :

ಶ್ರೀನಿಧಿ ಪವರ್ ಪ್ರೆಸ್

ನಂ. ೫/೧, ಆರ್. ಕೆ. ಪುರಂ, ಬೆಂಗಳೂರು-೫೬೦ ೦೦೯.



ಲಂಡನ್ನಿನಲ್ಲಿ ನ್ಯಾಯಶಾಸ್ತ್ರದ ವಿದ್ಯಾರ್ಥಿಯಾಗಿ ಗಾಂಧೀ
(ತೆಂಡುಲಕರರ 'ಮಹಾತ್ಮಾ' ಗ್ರಂಥದಿಂದ)



ಪೋರ್‌ಬಂದರಿನಲ್ಲಿ ಗಾಂಧೀ ಜನ್ಮಸ್ಥಳ
(ಚಿತ್ರ : ಶ್ರೀಮತಿ ಸುಮತಿ ಮೊರಾರ್ಜಿ ಅವರ ಸಂಗ್ರಹದಿಂದ)




ತಂದೆ : ಕರಮ್‌ಚಂದ್ ಉತ್ತಮ್‌ಚಂದ್ ಗಾಂಧೀ
(ತೆಂಡುಲಕರರ 'ಮಹಾತ್ಮಾ' ಗ್ರಂಥದಿಂದ)



ತಾಯಿ : ಪುತಲೀಬಾಯಿ

(ತೆಂಡುಲಕರರು 'ಮಹಾತ್ಮಾ' ಗ್ರಂಥದಿಂದ)



೧೭ ವರ್ಷದ ಬಾಲಕ ಗಾಂಧೀ – ರಾಜಕೋಟೆಯಲ್ಲಿ
(ತೆಂಡುಲಕರರ 'ಮಹಾತ್ಮಾ' ಗ್ರಂಥದಿಂದ)



ಸಹೋದರ ಲಕ್ಷ್ಮೀದಾಸ್ ಸಂಗಡ—೧೮೮೬
(ತೆಂಡುಲಕರರ 'ಮಹಾತ್ಮಾ' ಗ್ರಂಥದಿಂದ)



ಲಂಡನ್‌ನಲ್ಲಿ ಶಾಕಾಹಾರಿ ಸಂಘದ ಸವಸ್ಯರೊಡನೆ ಗಾಂಧೀಜೀ–೧೮೯೦ ರಲ್ಲಿ
(ತೆಂಡುಲಕರರ 'ಮಹಾತ್ಮಾ' ಗ್ರಂಥದಿಂದ)

ಪ್ರಕಾಶಕರ ಬಿನ್ನಹ

ಮಹಾತ್ಮಾ ಗಾಂಧೀಯವರ "ಆತ್ಮಕಥೆ ಅಥವಾ ನನ್ನ ಸತ್ಯಾನ್ವೇಷಣೆ" ಗ್ರಂಥ ವಾಚಕರ ಕೈ ಸೇರುತ್ತಿದೆ. ಮೊದಲನೆಯ ಮುದ್ರಣ ಮುಗಿದು ಹಲವಾರು ವರ್ಷಗಳು ಕಳೆದುಹೋದವು. ಆರ್ಥಿಕ ಅಡಚಣೆಯಿಂದಾಗಿ ಈ ಅಮೂಲ್ಯ ಗ್ರಂಥವನ್ನು ಪ್ರಕಟಿಸಲು ಸಾಧ್ಯವಾಗಲಿಲ್ಲ. ಮೇಲೆ ಮೇಲೆ ವಾಚಕರು ಒತ್ತಾಯ ಪಡಿಸುತ್ತಿದ್ದುದರಿಂದ ಹೇಗಾದರೂ ಮಾಡಿ ಗ್ರಂಥವನ್ನು ಹೊರತರುವ ನಿರ್ಣಯವನ್ನು ಗಾಂಧೀ ನಿಧಿಯ ಕಾರ್ಯಕಾರಿ ಸಮಿತಿ ಅನುಮೋದಿಸಿತು.

ಮಹಾಪುರುಷರ ಜೀವನ ಇಡೀ ಮನುಕುಲಕ್ಕೇ ದಾರಿದೀಪವಿದ್ದಂತೆ ಸೂರ್ಯ-ಚಂದ್ರರ ಬೆಳಕು ಹೇಗೋ ಹಾಗೆ. ಅವರ ಜೀವನವನ್ನು ಅವರೇ ಬರೆದಾಗ ಅದೊಂದು ಶಾಶ್ವತ ನಿಧಿ ಎನಿಸಿಕೊಳ್ಳುತ್ತದೆ. ಅಂತಹ ಒಂದು ನಿಧಿ ಇಡೀ ಮಾನವ ಜಾತಿಯು ಕೈ ಸೇರಿರುವುದು, ಸೇರುತ್ತಿರುವುದು, ಒಂದು ಮಹಾ ಭಾಗ್ಯ. ಇದು ಸಾಮಾನ್ಯ ಮನುಷ್ಯನಾಗಿ ಹುಟ್ಟಿ ದೇವ ಮಾನವನಾಗಿ ಬೆಳಗಿದ ಗಾಂಧೀಜಿಯ ಸಾಧನೆ ಮತ್ತು ತಪಸ್ಸಿನ ಬೆಳಕು ಚೆಲ್ಲುವ ಚಾರಿತ್ರಿಕ ಗ್ರಂಥವೂ ಹೌದು; ಅಂತೆಯೇ ಆಧ್ಯಾತ್ಮಿಕ ಮೌಲ್ಯದ ಆತ್ಮೋನ್ನತಿಯ ಪರಿಪಾಕವೂ ಹೌದು.

ಗಾಂಧೀಜಿ ನಡೆಸುತ್ತಿದ್ದ ಸತ್ಯಾಗ್ರಹ ಸಂಗ್ರಾಮದಲ್ಲಿ ಹೊರಬಂದ ಅಪೂರ್ವ ಗ್ರಂಥ ಇದು. ಗೆಳೆಯರ ಒತ್ತಾಯಕ್ಕೆ ಮಣಿದು ಅವರು ಬಿಡುವಾದಾಗಲೆಲ್ಲ ಇದನ್ನು ಬರೆದು ಮುಗಿಸಿದರು. ೧೯೨೦ರ ವರೆಗಿನ ಅವರ ಜೀವನ ಚಿತ್ರ ಇದರಲ್ಲಿ ಮೂಡಿ ಬಂದಿದೆ. ಆಮೇಲೆ ಅವರಿಗೆ ಬಿಡುವೇ ಸಿಗಲಿಲ್ಲ. ಸ್ವಾತಂತ್ರ್ಯ ಹೋರಾಟದ ಪಾಂಚಜನ್ಯವನ್ನು ಮೊಳಗಿಸುವುದರಲ್ಲಿ ಅವರು ತಲ್ಲೀನರಾಗಿದ್ದರು. ಅದರ ಪ್ರತಿಧ್ವನಿಗೆ ಸ್ಪಂದಿಸುತ್ತಿದ್ದ ಕೋಟ್ಯಾನು ಕೋಟಿ ಜನತೆಗೆ ಸಾರಥಿಯಾಗಿದ್ದರು. ಹಾಗಾಗಿ ಅವರ ಉಳಿದ ಜೀವನ ಅವರ ಲೇಖನಿಯಿಂದ ಹೊರಬರುವುದು ಸಾಧ್ಯವಾಗಲಿಲ್ಲ. ಆ ಕೆಲಸವನ್ನು

ಅವರ ಸಹಪ್ರವರ್ತಿಗಳು ಮಾಡಿ ಮುಗಿಸಿದ್ದಾರೆ. ಅದನ್ನಷ್ಟೆ ನಾವು ಓದಿ ತೃಪ್ತಿ ಪಟ್ಟುಕೊಳ್ಳಬೇಕಾಗಿದೆ.

ಮಹಾತ್ಮಾ ಗಾಂಧಿಯವರು ಬರೆದ "ಆತ್ಮಕಥೆ ಅಥವಾ ನನ್ನ ಸತ್ಯಾನ್ವೇಷಣೆಯು" ಈ ಕನ್ನಡ ಅನುವಾದವನ್ನು ಮುಕ್ಕೋಟಿ ಕನ್ನಡಿಗರಿಗೆ ಸಮರ್ಪಿಸುತ್ತಿದ್ದೇವೆ. ಕಾಗದದ ಬೆಲೆ, ಮುದ್ರಣ ವೆಚ್ಚ ವಿಪರೀತವಾಗಿ ಏರಿರುವ ಈ ಕಾಲದಲ್ಲಿ ಗ್ರಂಥಗಳನ್ನು ಅಚ್ಚು ಹಾಕಿಸುವುದೇ ಕಠಿಣವಾಗಿದೆ. ಆದರೂ ಕರ್ನಾಟಕ ಸರ್ಕಾರ ನೀಡಿರುವ ಅನುದಾನದಿಂದಾಗಿ ಈ ಗ್ರಂಥ ಹೊರಬರಲು ಸಾಧ್ಯವಾಯಿತು. ಮೈಸೂರು ಕಾಗದ ಕಾರ್ಖಾನೆಯ ಅಧಿಕಾರಿಗಳು ನೇರವಾಗಿ ಸಹಕರಿಸಿ ನಮಗೆ ಸಹಾಯ ಮಾಡಿದ್ದಾರೆ. ಎರಡೇ ಎರಡು ತಿಂಗಳಲ್ಲಿ ಸುಮಾರು ೪೦೦ ಪುಟದ ಈ ಗ್ರಂಥವನ್ನು ಹೊರತರಲು ಶ್ರೀನಿಧಿ ಮುದ್ರಣಾಲಯದ ಮಾಲೀಕರು ಮತ್ತು ಅವರ ಕಾರ್ಯಕರ್ತರು ತುಂಬಾ ಶ್ರಮವಹಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆ ಸಲ್ಲಬೇಕು. ಸಹೃದಯರಾದ ವಾಚಕರು ತಮ್ಮದೇ ಆದ ಈ ಗ್ರಂಥವನ್ನು ಸ್ವೀಕರಿಸುವರೆಂದು ನಂಬಿದ್ದೇವೆ.

ಪಿ. ವೆಂಕೋಬರಾವ್
ಕಾರ್ಯದರ್ಶಿ
ಕರ್ನಾಟಕ ಗಾಂಧೀ ಸ್ಮಾರಕ ನಿಧಿ

೨೦-೩-೧೯೪೭
ಗಾಂಧೀಭವನ
ಬೆಂಗಳೂರು-೧

ಯಥಾದರ್ಶನ

ಪ್ರತಿ ವ್ಯಕ್ತಿಯ ಜೀವನದಲ್ಲಿಯೂ ಬಹಿರಂಗ ಮತ್ತು ಅಂತರಂಗ ಎಂಬ ಎರಡು ಮುಖಗಳಿರುತ್ತವೆ. ಹಿರಿಯ ವ್ಯಕ್ತಿಗಳು ಬರೆದ ಆತ್ಮಕಥೆಗಳಲ್ಲಿ ಕೆಲವು ಬಹಿರಂಗ ಪ್ರಧಾನವಾದವು. ಮತ್ತೆ ಕೆಲವು ಅಂತರಂಗ ಪ್ರಧಾನವಾದವು. ಇನ್ನೂ ಕೆಲವು ಅಂತರಂಗ ಬಹಿರಂಗಗಳೆರಡನ್ನೂ ಒಮ್ಮುಖವಾಗಿ ಬೆಸೆದಂಥವು. ಗಾಂಧೀಜಿಯ ಆತ್ಮಕಥೆ ಈ ಮೂರನೆಯ ವರ್ಗಕ್ಕೆ ಸೇರಿದುದು. ಗಾಂಧೀಜೀ ತಮ್ಮ ಆತ್ಮಕಥೆಗೆ ಕೊಟ್ಟಿರುವ 'ನನ್ನ ಸತ್ಯಾನ್ವೇಷಣೆ" ಎಂಬ ಹೆಸರು ಬಹಿರಂಗದಲ್ಲಿ ಅಂತರಂಗ ಸಾಧನೆಯ ದ್ಯೋತಕವಾಗಿದೆ.

ಗಾಂಧೀಜಿಯ ದೃಷ್ಟಿಯಲ್ಲಿ, ಜೀವನದಲ್ಲಿ ವ್ಯವಹಾರವಲ್ಲದ ಸತ್ಯ ನಮಗೆ ಪ್ರಯೋಜನವಿಲ್ಲದ ಗ್ರಾಂಥಿಕ ಸತ್ಯ. ಪ್ರಯೋಗವೇ ಸತ್ಯದ ಒರೆಗಲ್ಲು. ಈ ದೃಷ್ಟಿಯಿಂದ ಬರೆದುದು ಈ ಆತ್ಮಕಥೆ.

೧೯೨೫ ಡಿಸೆಂಬರ್ ೩ರ 'ಯಂಗ್ ಇಂಡಿಯಾ'ದಲ್ಲಿ ಆತ್ಮಕಥೆಯನ್ನು ಲೇಖನ ಮಾಲೆಯಾಗಿ ಬರೆಯಲು ಮೊದಲು ಮಾಡಿದರು ಗಾಂಧೀಜಿ. ಆದರ ಆರಂಭವನ್ನು ಕುರಿತು ಈ ರೀತಿ ಬರೆದಿದ್ದಾರೆ: "ಸತ್ಯಶೋಧನೆಗಾಗಿ ನಾನು ನಡೆಸಿದ ಅನೇಕ ಪ್ರಯೋಗಗಳನ್ನು ಹೇಳಬಯಸುತ್ತೇನೆ. ಈ ಪ್ರಯೋಗಗಳೇ ವಿನಾ ಮತ್ತೇನೂ ನನ್ನ ಜೀವನದಲ್ಲಿ ಇಲ್ಲ. ಆದುದರಿಂದ ಇದೇ ನನ್ನ ಆತ್ಮಕಥೆಯ ರೂಪವನ್ನು ತಾಳುವುದು ನಿಜ. ಅದರ ಪ್ರತಿಯೊಂದು ಪುಟವೂ ಈ ಸತ್ಯದ ಪ್ರಯೋಗವೇ ಆಗುವುದಾದರೆ ನನಗೆ ಚಿಂತೆಯಿಲ್ಲ. ನಾನು ಸಾಧಿಸಬೇಕೆಂದು ಬಯಸುತ್ತಿರುವುದು, ಹಂಬಲಿಸುತ್ತಿರುವುದು ಆತ್ಮಸಾಕ್ಷಾತ್ಕಾರ; ಎಂದರೆ ಈಶ್ವರನ ಪ್ರತ್ಯಕ್ಷ ದರ್ಶನ. ಈ ಗುರಿಯನ್ನು ಮುಟ್ಟುವುದರಲ್ಲಿಯೇ ನನ್ನ ಉಳಿವು, ನನ್ನ ಗತಿ, ನೆಲೆ. ನಾನು ನುಡಿಯುವುದರ, ಬರೆಯುವುದರ ಗುರಿಯೂ ರಾಜಕೀಯ ಕ್ಷೇತ್ರದಲ್ಲಿ ನನ್ನ ಉದ್ದೇಶಗಳೆಲ್ಲದರ ಗುರಿಯೂ ಇದೆ.

"ನನ್ನನ್ನು ಪರೀಕ್ಷಿಸಿಕೊಳ್ಳುವಾಗ ಸತ್ಯದಷ್ಟೇ ನಿಷ್ಠುರನಾಗಿರಲು ಇಚ್ಛಿಸುತ್ತೇನೆ. ಇತರರೂ ಹಾಗೆ ನಡೆದುಕೊಳ್ಳಲೆಂದು ಆಶಿಸುತ್ತೇನೆ".

ಈ ಆತ್ಮಕಥೆಯಲ್ಲಿ ಗಾಂಧೀಜಿಯ ಜೀವನ ಒಂದು ತೆರೆದಿಟ್ಟ ಪುಸ್ತಕದಂತೆ ಇದೆ. ಇದರಲ್ಲಿ ಮುಚ್ಚುಮರೆಯಿಲ್ಲ. ಒಲ್ಲದುದನ್ನು ಮುಸುಕಿನಲ್ಲಿ ಬಚ್ಚಿಡುವ ಪ್ರಯತ್ನವಿಲ್ಲ. ಇದ್ದುದನ್ನು ಇದ್ದಂತೆ ಚಿತ್ರಿಸಿ, ತಾನು ಜೀವನದಲ್ಲಿ ಎಡವಿದಾಗಲೆಲ್ಲ ದೋಷಗಳನ್ನು ತಾನೇ ಪ್ರಾಮಾಣಿಕವಾಗಿ ವಿಮರ್ಶೆಗೆ ಈಡುಮಾಡಿಕೊಳ್ಳುವ ಅಸಾಧಾರಣ ಕಠೋರ ಸತ್ಯನಿಷ್ಠೆ ಇಲ್ಲಿದೆ.

ಗಾಂಧೀಜಿಯ ಜೀವನ ಸಂತರ ಜಿವನ. "ನಾನು ರಾಜಕಾರಣಿಯಲ್ಲ, ಒಬ್ಬ ಮುಮುಕ್ಷು. ಈಶ್ವರನ ಸಾನ್ನಿಧ್ಯ" ವೆಂಬ ಈ ಮೋಕ್ಷವನ್ನು ಅರಸುವ ಪ್ರಯತ್ನದಲ್ಲಿ ರಾಜಕೀಯಕ್ಕೂ ಇಳಿಯಬೇಕಾಯಿತು ಎಂದು ಒಪ್ಪಿಕೊಂಡಿದ್ದಾರೆ. ಇವರ ಭಗವದ್ಭಕ್ತಿ ಭಾಗವತ ಪ್ರೇಮದಲ್ಲಿಯೂ, ಮತ್ತು ದೈವಭಕ್ತಿ ಮಾನವ ಪ್ರೀತಿಯಲ್ಲಿಯೂ ಪರ್ಯವಸಾನವಾದ ಕಥೆ ಈ ಆತ್ಮಕಥೆ.

ಗಾಂಧೀ ಜೀವನತತ್ತ್ವದ ಭಾಷ್ಯ ಅವರ ಆತ್ಮಕಥೆ. ಅವರ ಮತದಲ್ಲಿ ಮತಾಂಧತೆ ಇಲ್ಲ. ಮಾನವ ಪ್ರೇಮ ತುಂಬಿದೆ. ವೈಜ್ಞಾನಿಕರ ಮತ್ತು ದಾರ್ಶನಿಕರ ತತ್ತ್ವವಿವೇಚನೆ ಇದೆ. ಸಮಾಜ ಸುಧಾರಕನ ಆಶಾವಾದವಿದೆ. ಯೋಗಿಯ ಅಧ್ಯಾತ್ಮ ಸಾಧನೆ ಇದೆ. ಭಕ್ತನ ನಮ್ರತೆ ಇದೆ. ಜ್ಞಾನಿಯ ಸ್ಪಷ್ಟ ತಿಳುವಳಿಕೆ ಇದೆ.

ಈ ಆತ್ಮಕಥೆ ಆತ್ಮನಿವೇದನದ ಕಥೆ. ಗಾಂಧೀಜಿಯ ಶರಣಾಗತಿ ಗದ್ಯ ಇದು. ಓದುಗರು ಈ ಆತ್ಮಕಥೆಯನ್ನು ಈ ದೃಷ್ಟಿಯಿಂದ ಆಸ್ವಾದಿಸಬೇಕು.*

---

* ಇದು ನಮ್ಮ ಗ್ರಂಥಮಾಲೆಯ ಪ್ರಥಮ ಸಂಪುಟಕ್ಕೆ ಬರೆದಿರುವ 'ವಿಶೇಶದೃಷ್ಟಿ'ಯ ಸಾರಸಂಗ್ರಹ.

ಪರಿವಿಡಿ

ಭಾಗ ೨

ಭಾಗ ೩

ಪೀಠಿಕೆ

ನಾಲ್ಕು ಐದು ವರುಷಗಳ ಕೆಳಗೆ, ನನ್ನ ನಿಕಟವರ್ತಿಗಳಾದ ಸಹ ಕಾರ್ಯಕರ್ತರ ಸೂಚನೆಯಂತೆ, ನನ್ನ ಆತ್ಮಕಥೆಯನ್ನು ಬರೆಯಲು ಒಪ್ಪಿದೆನು. ನಾನು ಕೆಲಸವನ್ನು ಪ್ರಾರಂಭಿಸಿ ಮೊದಲನೆಯ ಹಾಳೆಯನ್ನು ಮುಗಿಸುವುದರೊಳಗಾಗಿ ಬೊಂಬಾಯಿನಲ್ಲಿ ಹೊಡೆದಾಟ ಪ್ರಾರಂಭವಾದುದರಿಂದ ಕೆಲಸ ಅಷ್ಟಕ್ಕೇ ನಿಂತುಹೋಯಿತು. ಅನಂತರ ಅನೇಕ ಸಂಗತಿಗಳು ನಡೆದು ಕೊನೆಗೆ ಯರವಡಾ ಸೆರೆಮನೆಯಲ್ಲಿ ನನ್ನ ಬಂಧನವಾಯಿತು. ಅಲ್ಲಿ ನನ್ನೊಂದಿಗೆ ಕೈದಿಯಾಗಿದ್ದ ಜಯರಾಮ್‌ದಾಸರು, ಉಳಿದುದನ್ನೆಲ್ಲ ಬಿಟ್ಟು ನನ್ನ ಆತ್ಮಕಥೆಯನ್ನು ನಾನು ಬರೆದು ಮುಗಿಸಬೇಕೆಂದು ಹೇಳಿದರು. ಇದಕ್ಕೆ ಉತ್ತರವಾಗಿ ನಾನು ಆಗಲೇ ಒಂದು ವ್ಯಾಸಂಗಕ್ರಮವನ್ನು ಏರ್ಪಡಿಸಿಕೊಂಡಿದ್ದೇನೆಂದೂ ಅದನ್ನು ಮುಗಿಸುವವರೆಗೆ ಮತ್ತಾವುದನ್ನೂ ಮಾಡಲು ಯೋಚಿಸುವುದು ಸಾಧ್ಯವಿಲ್ಲವೆಂದೂ ಹೇಳಿದೆನು. ಯರವಡಾದಲ್ಲಿ ನನ್ನ ಶಿಕ್ಷೆಯ ಪೂರ್ಣ ಅವಧಿಯನ್ನು ನಾನು ಮುಗಿಸಿದ್ದರೆ, ಅಲ್ಲಿ ನನ್ನ ಆತ್ಮಕಥೆಯನ್ನು ನಿಜವಾಗಿಯೂ ಮುಗಿಸಬಹುದಾಗಿದ್ದಿತು. ಏಕೆಂದರೆ ನನ್ನನ್ನು ಬಿಡುಗಡೆ ಮಾಡಿದಾಗ ನಾನು ಇನ್ನೂ ಒಂದು ವರ್ಷ, ಸೆರೆಮನೆಯಲ್ಲಿಯೇ ಇರಬೇಕಾಗಿದ್ದಿತು. ಸ್ವಾಮೀ ಆನಂದರು ಅದೇ ವಿಷಯವನ್ನು ಈಗ ಮತ್ತೆ ನನ್ನ ಮುಂದೆ ಇಟ್ಟಿದ್ದಾರೆ. ನಾನು ದಕ್ಷಿಣ ಆಫ್ರಿಕಾದ ಸತ್ಯಾಗ್ರಹ ಇತಿಹಾಸವನ್ನು ಬರೆದು ಮುಗಿಸಿರುವುದರಿಂದ, ನವಜೀವನಕ್ಕಾಗಿ ನನ್ನ ಆತ್ಮಕಥೆಯನ್ನು ಬರೆಯುವ ಮನಸ್ಸು ಉಂಟಾಗಿದೆ. ನನ್ನ ಆತ್ಮಕಥೆಯನ್ನು ಒಂದು ಪುಸ್ತಕ ರೂಪದಲ್ಲಿ ಪ್ರಕಟಿಸಲು ಅನುಕೂಲವಾಗುವಂತೆ ಬರೆಯಬೇಕೆಂದು ಸ್ವಾಮಿ ಆನಂದರು ಬಯಸಿದರು. ಆದರೆ ನನಗೆ ಸಮಯವಿಲ್ಲ. ನಾನು ವಾರಕ್ಕೆ ಒಂದು ಅಧ್ಯಾಯವನ್ನು ಮಾತ್ರ ಬರೆಯಬಲ್ಲೆ. ನವಜೀವನಕ್ಕಂತೂ ಪ್ರತಿ ವಾರವೂ ಏನನ್ನಾದರೂ ಬರೆಯಲೇಬೇಕು. ಅದು ಆತ್ಮಕಥೆಯೇ ಏಕೆ ಆಗಬಾರದು? ನನ್ನ ಸಲಹೆಗೆ ಸ್ವಾಮೀ ಒಪ್ಪಿದರು. ಇದೋ ನಾನು ಬರೆಯುವ ಕಾರ್ಯದಲ್ಲಿ ತೊಡಗಿದ್ದೇನೆ.

ಆದರೆ ದೈವಭೀರುವಾದ ಒಬ್ಬ ಮಿತ್ರರಿಗೆ ಇದರಲ್ಲಿ ಕೆಲವು ಸಂದೇಹ ಗಳುಂಟಾಗಿ, ನನ್ನ ಮೌನದ ದಿನ, ಅವರು ನನ್ನೊಂದಿಗೆ ಇದನ್ನು ಕುರಿತು ಚರ್ಚಿಸಿದರು. "ಈ ಸಾಹಸದಲ್ಲಿ ನೀವು ಏಕೆ ಕೈಹಾಕಿದಿರಿ ? ಆತ್ಮಕಥೆ ಯನ್ನು ಬರೆಯುವುದು ಪಾಶ್ಚಾತ್ಯ ದೇಶದವರಿಗೆ ವಿಶಿಷ್ಟವಾದ ಒಂದು ಪದ್ಧತಿ. ಪೌರ್ವಾತ್ಯರ ಪೈಕಿ ಪಾಶ್ಚಾತ್ಯರ ಪ್ರಭಾವಕ್ಕೆ ಒಳಗಾದವರನು ಬಿಟ್ಟು ಬೇರೆ ಯಾರೂ ಬರೆದುದನ್ನು ನಾನು ಕಾಣೆ. ಇನ್ನು ನೀವು ಬರೆಯು ವುದೇನನ್ನು ? ಇಂದು ಯಾವುದನ್ನು ನೀವು ಸಿದ್ಧಾಂತಗಳೆಂದು ಭಾವಿಸಿ ದ್ದೀರೋ, ಅವನ್ನು ನಾಳೆ ತಿರಸ್ಕರಿಸಬಹುದು, ಅಥವಾ ಇಂದಿನ ನಿಮ್ಮ ಯೋಜನೆಗಳನ್ನು ನಾಳೆ ನೀವೇ ಬದಲಾಯಿಸಬಹುದು. ಆಗ ನಿಮ್ಮ ಮಾತುಗಳ ಅಥವಾ ಬರವಣಿಗೆಯ ಆಧಾರದ ಮೇಲೆ ತಮ್ಮ ನಡತೆಯನ್ನು ರೂಪಿಸಿಕೊಳ್ಳುವವರು, ದಾರಿ ತಪ್ಪುವುದು ಸಾಧ್ಯವಿಲ್ಲವೆ ? ಆತ್ಮಕಥೆ ಯನ್ನು ಬರೆಯದೆ ಇರುವುದು ಅಥವಾ ಹೇಗಾದರೂ ಈಗಲೇ ಬರೆಯದೆ ಇರುವುದು ಉತ್ತಮವೆಂದು ನೀವು ಭಾವಿಸುವುದಿಲ್ಲವೆ ?" ಎಂದು ಕೇಳಿದರು.

ಈ ವಾದ ನನ್ನ ಮೇಲೆ ಸ್ವಲ್ಪ ಪರಿಣಾಮಮಾಡಿತು. ಆದರೆ ಒಂದು ಯಥಾವತ್ತಾದ ಆತ್ಮಕಥೆಯನ್ನು ಬರೆಯಲು ಪ್ರಯತ್ನಿಸುವುದು ನನ್ನ ಉದ್ದೇಶವಲ್ಲ. ನಾನು ಹೇಳಬಯಸುವುದು ಸತ್ಯಶೋಧನೆಯ ನನ್ನ ಅನೇಕ ಪ್ರಯೋಗಗಳ ಕಥೆಯನ್ನು ಮಾತ್ರ. ನನ್ನ ಜೀವನ, ಈ ಪ್ರಯೋಗಗಳ ಹೊರತು ಮತ್ತೇನೂ ಅಲ್ಲ. ಆದುದರಿಂದ ಈ ಕಥೆ, ಆತ್ಮಕಥೆಯ ರೂಪವನ್ನು ಹೊಂದುವುದೂ ಸತ್ಯ. ಇದರ ಪ್ರತಿಯೊಂದು ಪುಟದಲ್ಲಿಯೂ ನನ್ನ ಪ್ರಯೋಗಗಳ ವಿಷಯವನ್ನೇ ಹೇಳುವುದಾದರೂ ನನಗೆ ಚಿಂತೆಯಿಲ್ಲ. ಈ ಎಲ್ಲ ಪ್ರಯೋಗಗಳ ಒಟ್ಟು ಕಥೆ, ವಾಚಕರಿಗೆ ಲಾಭವಾಗದಿರದೆಂದು ನಾನು ನಂಬುತ್ತೇನೆ. ಈಗ, ರಾಜಕೀಯ ಕ್ಷೇತ್ರದ ನನ್ನ ಪ್ರಯೋಗಗಳು, ಭಾರತದಲ್ಲಿ ಮಾತ್ರವೇ ಅಲ್ಲದೆ "ನಾಗರಿಕ" ಪ್ರಪಂಚಕ್ಕೆಲ್ಲ ತಕ್ಕಮಟ್ಟಿಗೆ ಗೊತ್ತಾಗಿವೆ. ಅವು ನನಗೆ ಹೆಚ್ಚು ಬೆಲೆ ಯುಳ್ಳವಲ್ಲ. ಅವುಗಳಿಂದ ನನಗೆ ಬಂದಿರುವ "ಮಹಾತ್ಮಾ" ಎಂಬ ಬಿರುದು, ನನಗೆ ಇನ್ನೂ ಕಡಿಮೆ ಬೆಲೆಯುಳ್ಳದ್ದು. ಅನೇಕ ವೇಳೆ

ಈ ಬಿರುದು ನನಗೆ ನೋವನ್ನುಂಟುಮಾಡಿದೆ. ಇದರಿಂದ ಒಂದು ಕ್ಷಣ ವಾದರೂ ನಾನು ಉಬ್ಬಿಹೋದುದು ನನಗೆ ನೆನಪಿಲ್ಲ. ಆದರೆ ಆಧ್ಯಾತ್ಮ ಕ್ಷೇತ್ರದಲ್ಲಿ ನಾನು ನಡೆಸಿದ ಪ್ರಯೋಗಗಳನ್ನು ವಿವರಿಸುವುದು ನನಗೆ ನಿಜವಾಗಿಯೂ ಇಷ್ಟ. ಇವು ಗೊತ್ತಿರುವುದು ನನಗೆ ಮಾತ್ರ. ಈ ಪ್ರಯೋಗಗಳು ರಾಜಕೀಯ ಕ್ಷೇತ್ರದಲ್ಲಿ ಕೆಲಸಮಾಡಲು ನನಗೆ ಶಕ್ತಿ ಯನ್ನು ಕೊಟ್ಟಿವೆ. ಇವುಗಳಿಂದ ನನ್ನ ನಮ್ರತೆಯೇ ಹೆಚ್ಚಾಗಬಲ್ಲುದು ನಾನು ನನ್ನಲ್ಲೇ ಆಲೋಚನೆಮಾಡಿ ಹಿನ್ನೋಟ ಬೀರಿದಂತೆ ನನ್ನ ದೌರ್ಬಲ್ಯ ನನಗೆ ಹೆಚ್ಚು ಸ್ಪಷ್ಟವಾಗಿ ಅನುಭವವಾಗುತ್ತಿದೆ.

ನಾನು ಸಾಧಿಸಬೇಕೆಂದಿರುವುದು—ಈ ಮೂವತ್ತು ವರುಷಗಳಿಂದ ತೀವ್ರ ಬಯಸಿ ಸಾಧಿಸಲು ಪ್ರಯತ್ನಿಸುತ್ತಿರುವುದು—ಆತ್ಮಸಾಕ್ಷಾತ್ಕಾರ, ಈಶ್ವರನ ಪ್ರತ್ಯಕ್ಷ ದರ್ಶನ, ಅಥವಾ ಮೋಕ್ಷ*. ನನ್ನ ಬಾಳು, ಕ್ರಿಯೆ ಮತ್ತು ಇರವು ಎಲ್ಲವೂ ಈ ಗುರಿಯ ಸಾಧನೆಗಾಗಿಯೇ. ನನ್ನ ಮಾತು, ಬರೆಹ ಮತ್ತು ರಾಜಕೀಯ ಕ್ಷೇತ್ರದಲ್ಲಿ ಎಲ್ಲ ಪ್ರಯತ್ನಗಳ ಗುರಿ ಇದೇ ಆಗಿದೆ. ಒಬ್ಬರಿಗೆ ಯಾವುದು ಸಾಧ್ಯವೊ ಅದು ಎಲ್ಲರಿಗೂ ಸಾಧ್ಯವೆಂದು ನಾನು ಯಾವಾಗಲೂ ನಂಬಿರುವುದರಿಂದ, ನನ್ನ ಪ್ರಯೋಗಗಳು ರಹಸ್ಯ ದಲ್ಲಿ ನಡೆದಿಲ್ಲ; ಬಹಿರಂಗವಾಗಿ ನಡೆದಿವೆ. ಹೀಗೆ ಮಾಡುವುದರಿಂದ ಅವುಗಳ ಆಧ್ಯಾತ್ಮಿಕ ಬೆಲೆ ಕಡಿಮೆಯಾಗಿದೆಯೆಂದು ನಾನು ಭಾವಿಸುವುದಿಲ್ಲ. ವ್ಯಕ್ತಿಗೂ ಅವನ ಸೃಷ್ಟಿಕರ್ತನಿಗೂ ಮಾತ್ರವೇ ತಿಳಿದಿರುವ ಕೆಲವು ವಿಷಯಗಳಿವೆ. ಇವುಗಳನ್ನು ಒಬ್ಬರು ಮತ್ತೊಬ್ಬರಿಗೆ ತಿಳಿಸುವುದು ಸಾಧ್ಯವೇ ಇಲ್ಲ. ನಾನು ವಿವರಿಸುವ ಪ್ರಯೋಗಗಳು ಅಂತಹವುಗಳಲ್ಲ. ಆದರೆ ಅವು ಆಧ್ಯಾತ್ಮಿಕವಾದುವು ಅಥವಾ ನೈತಿಕವಾದುವು; ಏಕೆಂದರೆ ಧರ್ಮದ ತಿರುಳು ನೀತಿಯೇ ಆಗಿದೆ.

ವಯಸ್ಸಾದವರಿಗೆ ಹೇಗೋ ಹಾಗೆಯೇ ಮಕ್ಕಳಿಗೂ ಸಹ ಅರ್ಥ ವಾಗುವ ಧಾರ್ಮಿಕ ವಿಷಯಗಳು ಮಾತ್ರ ಈ ಕಥೆಯಲ್ಲಿ ಸೇರಿಸಲ್ಪಟ್ಟಿವೆ. ನಾನು ಇವುಗಳನ್ನು ನಿಷ್ಕಾಮವೂ ಮತ್ತು ನಮ್ರವೂ ಆದ ರೀತಿಯಲ್ಲಿ

---

* ಹುಟ್ಟುಸಾವುಗಳಿಂದ ಬಿಡುಗಡೆಯೇ ಮೋಕ್ಷ.

ಹೇಳಬಲ್ಲೆನಾದರೆ ಇತರ ಅನೇಕ ಪ್ರಯೋಗಾರ್ಥಿಗಳೂ ತಮ್ಮ ಮುಂದು ವರಿಕೆಗೆ ವಿಧಾನವನ್ನು ಕಂಡುಕೊಂಡಾರು. ಈ ಪ್ರಯೋಗಗಳು ಯಾವುದೇ ರೀತಿಯಲ್ಲಿ ಪೂರ್ಣವಾಗಿವೆಯೆಂದು ನಾನು ಎಂದಿಗೂ ಹೇಳಿ ಕೊಳ್ಳಲಾರೆ. ವಿಜ್ಞಾನಿಯೊಬ್ಬ ತನ್ನ ಪ್ರಯೋಗಗಳ ವಿಷಯದಲ್ಲಿ ಹೇಳುವುದಕ್ಕಿಂತ ಹೆಚ್ಚಾಗಿ ನಾನೂ ನನ್ನ ಈ ಪ್ರಯೋಗಗಳ ವಿಷಯ ದಲ್ಲಿ ಏನನ್ನೂ ಹೇಳಿಕೊಳ್ಳಲಾರೆ. ಅವನು ತನ್ನ ಪ್ರಯೋಗಗಳನ್ನು ಅತ್ಯಂತ ಎಚ್ಚರಿಕೆ, ಮುಂದಾಲೋಚನೆ ಮತ್ತು ಸೂಕ್ಷ್ಮವಿಧಾನದಿಂದ ನಡೆಸಿದರೂ, ತನ್ನ ತೀರ್ಮಾನಗಳೇ ಕೊನೆಯ ನಿರ್ಧಾರಗಳೆಂದು ಎಂದಿಗೂ ಹೇಳದೆ, ಅವುಗಳ ವಿಷಯದಲ್ಲಿ ತೆರೆದ ಮನಸ್ಸುಳ್ಳವನಾಗಿರುತ್ತಾನೆ. ನಾನು ತೀವ್ರವಾದ ಆತ್ಮ ಶೋಧನೆಯನ್ನು ಮಾಡಿಕೊಂಡಿದ್ದೇನೆ; ನನ್ನನ್ನು ಸಂಪೂರ್ಣವಾಗಿ ಪರೀಕ್ಷಿಸಿಕೊಂಡಿದ್ದೇನೆ; ಪ್ರತಿಯೊಂದು ಮಾನಸಿಕ ಪರಿಸ್ಥಿತಿಯನ್ನೂ ಪರೀಕ್ಷಿಸಿ ವಿಮರ್ಶೆಮಾಡಿದ್ದೇನೆ. ಆದರೂ ಸಹ ನನ್ನ ಪ್ರಯೋಗಗಳು, ಕೊನೆಯ ತೀರ್ಮಾನಗಳೆಂದಾಗಲೀ ನಿರ್ದೋಷವಾದು ವೆಂದಾಗಲೀ ನಾನು ಹೇಳುವುದಿಲ್ಲ. ಒಂದು ವಿಷಯವನ್ನು ಮಾತ್ರ ನಾನು ಹೇಳಿಕೊಳ್ಳುತ್ತೇನೆ. ನನ್ನ ಮಟ್ಟಿಗೆ ಅವು ಕೇವಲ ಸರಿಯೆಂದು ತೋರುತ್ತಿವೆ. ತಾತ್ಕಾಲಿಕವಾಗಿ ಅಂತ್ಯನಿರ್ಧಾರಗಳಾಗಿಯೂ ಕಾಣುತ್ತಿವೆ. ಅವು ಆ ರೀತಿ ಇರದಿದ್ದರೆ ಅವುಗಳ ಆಧಾರದ ಮೇಲೆ ನಾನು ಯಾವ ಕಾರ್ಯವನ್ನೂ ಮಾಡುತ್ತಿರಲಿಲ್ಲ. ಆದರೆ ಹೆಜ್ಜೆ ಹೆಜ್ಜೆಗೂ ಯಾವುದು ಗ್ರಾಹ್ಯ, ಯಾವುದು ತ್ಯಾಜ್ಯ ಎಂದು ಪರೀಕ್ಷೆ ಮಾಡಿ ಅದಕ್ಕನುಸಾರವಾಗಿ ನಡೆದಿದ್ದೇನೆ. ನನ್ನ ಕಾರ್ಯದಿಂದ ನನ್ನ ತರ್ಕಶಕ್ತಿ ಮತ್ತು ಹೃದಯಕ್ಕೆ ಸಮಾಧಾನವುಂಟಾಗುವವರೆಗೆ, ನಾನು ನನ್ನ ಮೂಲ ನಿರ್ಣಯಕ್ಕೆ ಬದ್ಧನಾಗಿ ನಡೆಯಲೇ ಬೇಕು.

ನಾನು ಬರಿಯ ತತ್ವಗಳನ್ನು ಮಾತ್ರವೇ ಚರ್ಚಿಸಬೇಕಾಗಿದ್ದರೆ ಖಂಡಿತವಾಗಿ ಆತ್ಮಕಥೆಯನ್ನು ಬರೆಯುವ ಪ್ರಯತ್ನವನ್ನು ಮಾಡಬೇಕಾ ಗಿರಲಿಲ್ಲ. ಆದರೆ ನನ್ನ ಉದ್ದೇಶ, ಈ ತತ್ವಗಳನ್ನು ವಿವಿಧ ವ್ಯವಹಾರಗಳಲ್ಲಿ ಹೇಗೆ ಪ್ರಯೋಗಿಸಿದೆನೆಂದು ತಿಳಿಸುವುದಾಗಿರುವುದರಿಂದ ನಾ ಬರೆಯಲಿ ರುವ ಈ ಕಥೆಗೆ ನಾನು "ನನ್ನ ಸತ್ಯ ಶೋಧನೆಯ ಕಥೆ" ಎಂದು ಹೆಸರಿಟ್ಟ

ದ್ದೇನೆ. ಇದರಲ್ಲಿ, ಸತ್ಯದಿಂದ ಬೇರೆಯೆಂದು ಭಾವಿಸಲ್ಪಟ್ಟಿರುವ ಅಹಿಂಸೆ, ಬ್ರಹ್ಮಚರ್ಯ ಮತ್ತು ಇತರ ನಿಯಮಗಳ ಪ್ರಯೋಗ ವಿವರವೂ ಸೇರಿಯೇ ಇದೆ. ಆದರೆ ನನಗೆ ಸತ್ಯವೇ ಸಾರ್ವಭೌಮ ತತ್ವ. ಉಳಿದ ಅಸಂಖ್ಯಾತ ತತ್ವಗಳೆಲ್ಲ ಅದರಲ್ಲಿಯೇ ಸೇರಿವೆ. ಈ ಸತ್ಯ ಬರಿಯ ವಾಕ್ ಸತ್ಯ ಮಾತ್ರ ವಲ್ಲ, ಇದು ಆಲೋಚನೆಯ ಸತ್ಯ ಸಹ. ಇದು ನಮಗೆ ತಿಳಿದಿರುವ ಸಾಪೇಕ್ಷ ಸತ್ಯ ಮಾತ್ರವಲ್ಲ, ಇದು ಸನಾತನ ಸತ್ಯ, ಅಂದರೆ ಪರಮಾತ್ಮ. ದೇವರ ಲಕ್ಷಣಗಳು ಅಸಂಖ್ಯಾತವಾಗಿವೆ. ಏಕೆಂದರೆ ಆತನ ವಿಭೂತಿಯೂ ಅಸಂಖ್ಯಾತ. ಅವುಗಳನ್ನು ಕಂಡು ನಾನು ಆಶ್ಚರ್ಯ ಮತ್ತು ಭಯಮುಗ್ಧ ನಾಗುತ್ತೇನೆ, ಒಂದು ಕ್ಷಣ ನಿಶ್ಚೇಷ್ಟಿತನಾಗುತ್ತೇನೆ. ಆದರೆ ನಾನು ದೇವರನ್ನು ಸತ್ಯವೆಂದೇ ಉಪಾಸನೆ ಮಾಡುತ್ತೇನೆ. ಆತ ನನಗೆ ಇನ್ನೂ ಸಿಕ್ಕಿಲ್ಲ. ಆದರೆ ಆತನನ್ನು ನಾನು ಹುಡುಕುತ್ತಿದ್ದೇನೆ. ಈ ಶೋಧನೆಯನ್ನು ಮುಂದು ವರಿಸುವುದರಲ್ಲಿ, ನನಗೆ ಅತ್ಯಂತ ಪ್ರಿಯವಾದ ಸಮಸ್ತ ವಸ್ತುಗಳನ್ನೂ ನಾನು ಬಲಿಕೊಡಲು ಸಿದ್ಧನಾಗಿದ್ದೇನೆ. ಆ ಬಲಿದಾನ, ನನ್ನ ಪ್ರಾಣವೇ ಆದರೂ ಅದನ್ನು ಕೊಡುವ ಶಕ್ತಿ ನನಗೆ ಉಂಟಾದೀತೆಂದು ಆಶಿಸುತ್ತೇನೆ. ಆದರೆ ಈ ಪರಮ ಸತ್ಯದ ಸಾಕ್ಷಾತ್ಕಾರ ನನಗೆ ಆಗುವವರೆಗೆ, ನಾನು ಅರಿತಿರುವ ಸಾಪೇಕ್ಷ ಸತ್ಯವನ್ನೇ ನಂಬಬೇಕು. ಅಲ್ಲಿಯವರೆಗೆ ಈ ಸಾಪೇಕ್ಷ ಸತ್ಯವೇ ನನ್ನ ದಾರಿದೀಪ, ಗುರಾಣಿ ಮತ್ತು ವಜ್ರಕವಚ. ಈ ದಾರಿ, ಕತ್ತಿಯ ಅಲಗಿನಂತೆ ಹರಿತವೂ ಇಕ್ಕಟ್ಟಾದುದೂ ನೇರವಾದುದೂ ಆಗಿದ್ದರೂ, ನನಗೆ ಅದೇ ಅತ್ಯಂತ ಶೀಘ್ರವೂ ಅತ್ಯಂತ ಸುಲಭವೂ ಆಗಿದೆ. ನಾನು ಈ ಮಾರ್ಗವನ್ನು ಚಾಚೂ ತಪ್ಪದೆ ಅನುಸರಿಸುತ್ತಿರುವುದ ರಿಂದ, ನನ್ನ ಹಿಮಾಲಯದಂತಹ ತಪ್ಪುಗಳೂ ಸಹ, ನನಗೆ ಅಲ್ಪ ವಾಗಿಯೇ ತೋರಿಬಂದಿವೆ. ಏಕೆಂದರೆ ಈ ದಾರಿ ನನ್ನನ್ನು ದುಃಖದಿಂದ ಪಾರುಮಾಡಿದೆ. ನನಗೆ ತೋರಿದ ಬೆಳಕಿಗನುಗುಣವಾಗಿ ನಾನು ಮುಂದು ವರಿದಿದ್ದೇನೆ. ಈ ಮಾರ್ಗಕ್ರಮಣದಲ್ಲಿ ಅನೇಕ ವೇಳೆ, ಪರಮಾತ್ಮನೆಂಬ ಆ ಪರಮ ಸತ್ಯದ ಕಿರುನೋಟ, ನನಗೆ ಲಭಿಸಿದೆ. ಅವನೊಬ್ಬನೇ ಶಾಶ್ವತ, ಉಳಿದುವೆಲ್ಲ ಅಶಾಶ್ವತ ಎಂಬ ನಂಬಿಕೆ ನನ್ನಲ್ಲಿ ದಿನದಿನಕ್ಕೆ ಹೆಚ್ಚುಹೆಚ್ಚಾಗಿ ಬೆಳೆಯುತ್ತಿದೆ. ಈ ನಂಬಿಕೆ ನನ್ನಲ್ಲಿ ಹೇಗೆ ಬಲಗೊಂಡಿತೆಂಬುದನ್ನು,

ಇಷ್ಟವುಳ್ಳವರು ಅರಿಯಲಿ. ಅವರು ನನ್ನ ಪ್ರಯೋಗಗಳಲ್ಲಿಯೂ ಸಾಧ್ಯವಾದರೆ ನನ್ನ ನಂಬಿಕೆಗಳಲ್ಲಿಯೂ ಭಾಗಿಗಳಾಗಲಿ, ನನಗೆ ಯಾವುದು ಸಾಧ್ಯವೋ ಅದು ಒಂದು ಸಣ್ಣ ಮಗುವಿಗೂ ಸಾಧ್ಯ ಎಂಬ ನಂಬಿಕೆಯೂ ನನ್ನಲ್ಲಿ ಬೆಳೆಯುತ್ತಿದೆ. ಹೀಗೆ ಹೇಳಲು ನನಗೆ ಸರಿಯಾದ ಕಾರಣಗಳಿವೆ. ಸತ್ಯಶೋಧನೆಯ ಸಾಧನಗಳು, ಎಷ್ಟು ಸರಳವೋ ಅಷ್ಟೇ ಕಠಿಣವೂ ಆಗಿವೆ. ಅವು ಅಹಂಕಾರಿಗೆ ಅಸಾಧ್ಯವಾಗಿ ತೋರಬಹುದು; ಏನೂ ಅರಿಯದ ಮಗುವಿಗೂ ಸುಲಭ ಸಾಧ್ಯವಾಗಬಹುದು. ಸತ್ಯಶೋಧಕ, ಧೂಳುಕಣಕ್ಕಿಂತ ಹೆಚ್ಚು ನಮ್ರನಾಗಿರಬೇಕು. ಲೋಕವು ಧೂಳಿನ ಕಣವನ್ನು ಕಾಲಕೆಳಗೆ ತುಳಿಯುತ್ತದೆ. ಆದರೆ ಸತ್ಯಶೋಧಕ, ಆ ಧೂಳಿನ ಕಣದಿಂದಲೂ ತುಳಿಸಿಕೊಳ್ಳುವಷ್ಟು ನಮ್ರನಾಗಬೇಕು. ಆಗ ಮಾತ್ರ—ಅಲ್ಲಿಯವರೆಗೆ ಅಲ್ಲ—ಅವರಿಗೆ ಸತ್ಯದ ಕಿರುನೋಟ ಲಭಿಸೀತು. ವಿಶ್ವಾಮಿತ್ರ ಮತ್ತು ವಸಿಷ್ಠರ ಸಂವಾದದಲ್ಲಿ ಇದು ಅತ್ಯಂತ ಸ್ಪಷ್ಟವಾಗಿದೆ. ಕ್ರಿಸ್ತ ಮತ್ತು ಇಸ್ಲಾಂ ಮತಗಳೂ ಇದನ್ನೇ ಸಾಕಷ್ಟು ಸಿದ್ಧಮಾಡಿ ತೋರಿಸುತ್ತವೆ.

ನಾನು ಈ ಪುಟಗಳಲ್ಲಿ ಬರೆದಿರುವುದರಲ್ಲಿ, ಯಾವುದಾದರೂ ಅಹಂಕಾರದಿಂದ ಬರೆದುದೆಂದು ವಾಚಕನಿಗೆ ತೋರಿದರೆ, ಆಗ ಆತ ನನ್ನ ಶೋಧನೆಯಲ್ಲಿ ಏನೋ ದೋಷವಿದೆ, ನಾನು ಕಂಡದ್ದು ಬಿಸಿಲು ಕುದುರೆಯಲ್ಲದೆ ಬೇರೆಯಲ್ಲ ಎಂದು ಭಾವಿಸಬೇಕು. ನನ್ನಂತಹ ನೂರಾರು ಜನ ನಾಶವಾಗಲಿ. ಆದರೆ ಸತ್ಯಮಾತ್ರ ನಿಲ್ಲಲಿ. ತಪ್ಪುಮಾಡಬಹುದಾದ ನನ್ನಂತಹ ಮರ್ತ್ಯರನ್ನು ಅಳೆಯುವಾಗ, ಸತ್ಯದ ಆದರ್ಶವನ್ನು ಕೂದಲೆಳೆಯಷ್ಟೂ ತಗ್ಗಿಸುವುದು ಬೇಡ.

ಈ ಅಧ್ಯಾಯಗಳಲ್ಲಿ ಅಲ್ಲಲ್ಲಿ ಬರುವ ಸಲಹೆಗಳನ್ನು ಪ್ರಮಾಣವೆಂದು ಯಾರೂ ಅಂಗೀಕರಿಸುವುದಿಲ್ಲವೆಂದು ನನ್ನ ನಂಬಿಕೆ, ನಾನು ವಿವರಿಸಿರುವ ಪ್ರಯೋಗಗಳನ್ನು ಉದಾಹರಣೆಗಳೆಂದು ಮಾತ್ರ ಎಣಿಸಬೇಕು. ಇವುಗಳ ಆಧಾರದ ಮೇಲೆ ಎಲ್ಲರೂ ಅವರವರ ಬುದ್ಧಿ ಮತ್ತು ಶಕ್ತಿಗೆ ಅನುಗುಣವಾಗಿ, ತಾವೂ ಪ್ರಯೋಗಗಳನ್ನು ನಡೆಸಬಹುದು. ಈ ಮಿತಿಗೆ ಒಳಪಟ್ಟಂತೆ, ನನ್ನ ಉದಾಹರಣೆಗಳು ನಿಜವಾಗಿಯೂ

ಸಹಾಯಕವಾಗುವುವೆಂದು ನಾನು ನಂಬುತ್ತೇನೆ. ಏಕೆಂದರೆ ನಾನು ಹೇಳಬೇಕಾದ ವಿಷಯಗಳಲ್ಲಿ ಯಾವುದನ್ನೂ ಮುಚ್ಚುವುದಾಗಲಿ ಅಥವಾ ದೋಷಗಳನ್ನು ಲಘುವಾಗಿ ಹೇಳುವುದಾಗಲೀ ಇಲ್ಲ. ನನ್ನ ಎಲ್ಲ ದೋಷಗಳನ್ನೂ ತಪ್ಪುಗಳನ್ನೂ ವಾಚಕರಿಗೆ ಪೂರ್ಣವಾಗಿ ಪರಿಚಯಮಾಡಿಕೊಡ ಬಯಸುತ್ತೇನೆ. ನನ್ನ ಉದ್ದೇಶವಾದರೂ ಸತ್ಯಾಗ್ರಹ ಶಾಸ್ತ್ರದಲ್ಲಿ ನನ್ನ ಪ್ರಯೋಗಗಳನ್ನು ವಿವರಿಸುವುದೇ ಹೊರತು ನಾನು ಎಷ್ಟು ಒಳ್ಳೆಯವನೆಂದು ಹೇಳುವುದಲ್ಲ. ನನ್ನನ್ನು ವಿಮರ್ಶೆಮಾಡಿಕೊಳ್ಳುವಾಗ ನಾನು ಸತ್ಯದಷ್ಟೇ ಕಠಿಣನಾಗಿರಲು ಪ್ರಯತ್ನಿಸುತ್ತೇನೆ. ಇತರರೂ ಹಾಗೆಯೇ ಇರಬೇಕೆಂಬುದು ನನ್ನ ಇಚ್ಛೆ. ಆ ಆದರ್ಶದಿಂದ ನನ್ನನ್ನು ಅಳೆದುಕೊಂಡು ನೋಡಿದರೆ, ಸೂರದಾಸರು ಹೇಳುವಂತೆ ನಾನು ಹೀಗೆ ಹೇಳಬೇಕಾಗುತ್ತದೆ.

"ನನ್ನಂತಹ ಪಾಪಿಯೂ ಕೆಟ್ಟವನೂ, ಅಸಹ್ಯನೂ ಆದವನು ಎಲ್ಲಾದರೂ, ಇದಾನೆಯೆ ? ನಾನು ಸೃಷ್ಟಿಕರ್ತನನ್ನೇ ತ್ಯಜಿಸಿದ್ದೇನೆ ; ಅಷ್ಟು ಕೃತಘ್ನನಾಗಿದ್ದೇನೆ."

ಏಕೆಂದರೆ, ನಾನು ಇನ್ನೂ ಅವನಿಂದ ಎಷ್ಟೋ ದೂರವಿರುವುದು, ಒಂದು ಅಖಂಡ ಹಿಂಸೆಯಾಗಿದೆ. ನನ್ನ ಜೀವರಕ್ಷಕ ಅವನೇ ಎಂಬುದನ್ನೂ ನಾನು ಅವನ ಸಂತಾನ ಎಂಬುದನ್ನೂ ಪೂರ್ಣವಾಗಿ ಬಲ್ಲೆ. ನನ್ನನ್ನು ಅವನಿಂದ ಎಷ್ಟೋ ದೂರದಲ್ಲಿಟ್ಟಿರುವುದು ನನ್ನಲ್ಲಿರುವ ದುಷ್ಟ ಮನೋವಿಕಾರಗಳೆಂಬುದೂ ನನಗೆ ಗೊತ್ತು. ಆದರೂ ನಾನು ಅವುಗಳಿಂದ ಮುಕ್ತನಾಗಲಾರೆನು.

ಆದರೆ, ಇನ್ನು ಇಲ್ಲಿಗೆ ನಿಲ್ಲಿಸಬೇಕು. ನಿಜವಾದ ಕಥೆಯನ್ನು ಪ್ರಾರಂಭಿಸುವುದು ಮುಂದಿನ ಅಧ್ಯಾಯದಲ್ಲಿ ಮಾತ್ರ ನನಗೆ ಸಾಧ್ಯ.

ಸಾಬರಮತಿ ಆಶ್ರಮ ಮೊ. ಕಾ. ಗಾಂಧಿ

೨೬ನೆಯ ನವೆಂಬರ್, ೧೯೨೫

ಆತ್ಮಕಥೆ

ಅಥವಾ

ನನ್ನ ಸತ್ಯಾನ್ವೇಷಣೆ

ಭಾಗ ೧

ಜನ್ಮ—ತಾಯಿತಂದೆಗಳು

ಗಾಂಧೀ ಮನೆತನದವರು ಬನಿಯಾ ಜಾತಿಯವರು. ಅವರು ಮೊದಲಿಗೆ ಕಿರಾಣಿ ಅಂಗಡಿ ವ್ಯಾಪಾರಿಗಳೆಂದು ಕಾಣುತ್ತದೆ. ಆದರೆ ನಮ್ಮ ತಾತನಿಂದ ಮೂರು ತಲೆಮಾರಿನವರು ಕಾಥೆವಾಡದ ಬೇರೆ ಬೇರೆ ಸಂಸ್ಥಾನಗಳಲ್ಲಿ ದಿವಾನ ರಾಗಿದ್ದರು. ನಮ್ಮ ತಾತ ಉತ್ತಮ ಚಂದ್ ಅಥವಾ ಓತಾ ಗಾಂಧೀ ನಿಯಮ ನಿಷ್ಠೆಯುಳ್ಳ ವ್ಯಕ್ತಿಯಾಗಿದ್ದಿರಬೇಕು. ಪೋರ್‌ಬಂದರಿನ ದಿವಾನನಾಗಿದ್ದ ಆತ, ಅಲ್ಲಿ ನಡೆದ ಆಸ್ಥಾನದ ಪಿತೂರಿಗಳಿಂದ ಆ ಸಂಸ್ಥಾನವನ್ನು ಬಿಟ್ಟು ಜುನಾಘಡದಲ್ಲಿ ಆಶ್ರಯವನ್ನು ಪಡೆಯಬೇಕಾಯಿತು. ಅಲ್ಲಿ ಆತ ನವಾಬನಿಗೆ ಎಡಗೈಯಿಂದ ಸಲಾಮು ಮಾಡಿದನು. ಇದನ್ನು ನೋಡಿದವರೊಬ್ಬರು ಈ ಅವಿನಯದ ಕಾರಣವನ್ನು ಕೇಳಿದರು. ಆತ "ಬಲಗೈ ಮೊದಲೇ ಪೋರ್‌ಬಂದರ್ ಸಂಸ್ಥಾನಕ್ಕೆ ಮೀಸಲಾಗಿದೆ" ಎಂದು ಉತ್ತರ ಕೊಟ್ಟನು.

ಮೊದಲನೆಯ ಹೆಂಡತಿ ತೀರಿಕೊಂಡಮೇಲೆ ಓತಾ ಗಾಂಧೀ ಎರಡನೆಯ ಮದುವೆ ಮಾಡಿಕೊಂಡನು. ಆತನಿಗೆ ಮೊದಲನೆಯ ಹೆಂಡತಿಯಲ್ಲಿ ನಾಲ್ವರು, ಎರಡನೆಯ ಹೆಂಡತಿಯಲ್ಲಿ ಇಬ್ಬರು ಗಂಡು ಮಕ್ಕಳುಗಳಾದರು. ಇವರು ಒಂದೇ ತಾಯಿಯ ಮಕ್ಕಳಲ್ಲವೆಂದು ನನಗೆ ಚಿಕ್ಕಂದಿನಲ್ಲಿ ತೋರಲೂ ಇಲ್ಲ, ಅನಿಸಲೂ ಇಲ್ಲ. ಈ ಆರು ಸಹೋದರರ ಪೈಕಿ, ಐದನೆಯವರು ಕರಮ್‌ಚಂದ್‌ಗಾಂಧೀ ಅಥವಾ ಕಬಾಗಾಂಧೀ. ಆರನೆಯವರು ತುಳಸೀದಾಸ್ ಗಾಂಧೀ. ಈ ಇಬ್ಬರು ಅಣ್ಣತಮ್ಮಂದಿರೂ ಪೋರ್‌ಬಂದರಿನಲ್ಲಿ ಒಬ್ಬರ ತರುವಾಯ ಮತ್ತೊಬ್ಬರು ದಿವಾನರಾಗಿದ್ದರು. ಕಬಾ ಗಾಂಧಿಯೇ ನಮ್ಮ ತಂದೆ. ಅವರು ರಾಜಸ್ಥಾನಿಕ ನ್ಯಾಯಾಲಯದ ಸದಸ್ಯರಾಗಿದ್ದರು. ಆ ಸಭೆ ಈಗ ಇಲ್ಲ. ಆದರೆ ಆ ಕಾಲದಲ್ಲಿ ಅದು ರಾಜರಿಗೂ ಅವರ ಮನೆತನದವರಿಗೂ ನಡುವಿನ ವ್ಯಾಜ್ಯವನ್ನು ಪರಿಹರಿಸುವ ಪ್ರಭಾವಶಾಲಿ ಸಂಸ್ಥೆಯಾಗಿತ್ತು. ಅನಂತರ ಕಬಾ ಗಾಂಧೀ ಕೆಲವು ಕಾಲ

ರಾಜಕೋಟೆಯಲ್ಲಿಯೂ ಅನಂತರ ಕೆಲವು ಕಾಲ ವಾಂಕನೀರ್‌ನಲ್ಲಿಯೂ ದಿವಾನರಾಗಿದ್ದರು. ಮೃತ್ಯುವಶರಾದಾಗ ಅವರಿಗೆ ರಾಜಕೋಟೆ ದರಬಾರಿನ ನಿವೃತ್ತಿವೇತನ ದೊರಕುತ್ತಿದ್ದಿತು.

ಕಬಾ ಗಾಂಧೀ, ಒಬ್ಬ ಹೆಂಡತಿ ತೀರಿಹೋದ ತರುವಾಯ ಮತ್ತೊಬ್ಬಳಂತೆ, ನಾಲ್ಕು ಸಲ ಮದುವೆಯಾದರು. ಅವರಿಗೆ ಮೊದಲನೆಯ ಇಬ್ಬರು ಪತ್ನಿಯರಲ್ಲಿ ಎರಡು ಹೆಣ್ಣುಮಕ್ಕಳಾದವು. ಅವರ ಕೊನೆಯ ಹೆಂಡತಿ ಪುತಲೀಬಾಯಿಯಲ್ಲಿ ಒಬ್ಬಳು ಮಗಳೂ ಮೂರು ಗಂಡು ಮಕ್ಕಳೂ ಆದರು. ಅವರಲ್ಲಿ ನಾನೇ ಕಡೆಯವನು.

ನಮ್ಮ ತಂದೆ ಕುಟುಂಬ ಪ್ರೇಮಿ, ಸತ್ಯಪ್ರಿಯ, ಶೂರ ಮತ್ತು ಉದಾರಿ, ಜತೆಗೆ ಕೋಪದ ಸ್ವಭಾವದವರು. ಸ್ವಲ್ಪ ಮಟ್ಟಿಗೆ ವಿಷಯಾಸಕ್ತರೆಂದೂ ನನ್ನ ಭಾವನೆ. ಅವರು ತಮಗೆ ನಲವತ್ತು ವರ್ಷಗಳಾದ ಮೇಲೆ ನಾಲ್ಕನೆಯ (ಕೊನೆಯ) ಮದುವೆಯನ್ನು ಮಾಡಿಕೊಂಡರು. ಅವರು ಲಂಚಕ್ಕೆ ವಶವಾದವರಲ್ಲ; ಕುಟುಂಬದಲ್ಲಿಯೂ ಹೊರಗಡೆಯೂ ನಿಷ್ಪಕ್ಷಪಾತ ಮನೋವೃತ್ತಿಗೆ ಪ್ರಸಿದ್ಧಿಯನ್ನು ಸಂಪಾದಿಸಿದ್ದರು. ಅವರ ರಾಜನಿಷ್ಠೆ ಎಲ್ಲರಿಗೂ ತಿಳಿದಿದ್ದಿತು. ಒಂದುಸಲ ಒಬ್ಬ ಅಸಿಸ್ಟೆಂಟ್ ಪೊಲಿಟಿಕಲ್ ಏಜೆಂಟರು ರಾಜಕೋಟೆ ಠಾಕೂರ್ ಸಾಹೇಬರಿಗೆ ಅವಮಾನ ಮಾಡಲು ಅವರು ಅವನನ್ನು ಎದುರಿಸಿದರು. ಇದರ ಫಲವಾಗಿ ಸಾಹೇಬನಿಗೆ ಕೋಪಬಂದು "ಕ್ಷಮೆಯಾಚಿಸು" ಎಂದು ಕಬಾ ಗಾಂಧೀಗೆ ಹೇಳಿದನು. ಕಬಾ ಗಾಂಧೀ ಕ್ಷಮೆ ಕೇಳಲು ತಿರಸ್ಕರಿಸಿದರು. ಸಾಹೇಬ ಅವರನ್ನು ಕೆಲವು ಗಂಟೆ ಕಾಲ ಸೆರೆಯಲ್ಲಿಟ್ಟನು. ಆದರೆ ಕಬಾ ಗಾಂಧೀ ವಜ್ರದಂತಹ ಮನಸ್ಸುಳ್ಳವರೆಂದು ಕಂಡುಕೊಂಡ ಏಜೆಂಟ್, ಅವರ ಬಿಡುಗಡೆಗೆ ಅಪ್ಪಣೆ ಮಾಡಿದನು.

ನಮ್ಮ ತಂದೆಗೆ ಧನಸಂಗ್ರಹದ ಲೋಭ ಎಂದೂ ಇರಲಿಲ್ಲ. ಆದುದರಿಂದ ಅವರು ನಮಗೆ ಅಲ್ಪಸ್ವಲ್ಪ ಆಸ್ತಿಯನ್ನು ಮಾತ್ರ ಬಿಟ್ಟು ಹೋದರು.

ನಮ್ಮ ತಂದೆಯವರ ಶಿಕ್ಷಣ, ಕೇವಲ ಅನುಭವದಿಂದ ದೊರೆತದ್ದು. ಇಂದು ನಾವು ಯಾವುದನ್ನು ಉಚ್ಚ ಪ್ರಾಥಮಿಕ ಶಿಕ್ಷಣ ಎನ್ನುತ್ತೇವೆಯೋ ಅಷ್ಟೇ ಅವರಿಗೆ ದೊರೆತಿದ್ದುದು. ಅವರಿಗೆ ಭೂಗೋಳ, ಇತಿಹಾಸದ ಜ್ಞಾನ

ಸ್ವಲ್ಪವೂ ಇರಲಿಲ್ಲ. ಆದರೆ ಅವರು ವ್ಯಾವಹಾರಿಕ ಜ್ಞಾನ ಸಂಪತ್ತಿನಿಂದ ಕೂಡಿದ್ದರು ; ಆದರ ಬಲದಿಂದ ಅತ್ಯಂತ ಕ್ಲಿಷ್ಟವಾದ ಸಮಸ್ಯೆಗಳನ್ನು ಸುಲಭವಾಗಿ ಬಿಡಿಸುತ್ತಿದ್ದರು. ನೂರಾರು ಜನರನ್ನು ಅಂಕೆಯಲ್ಲಿಟ್ಟು ಕೊಳ್ಳಬಲ್ಲವರಾಗಿದ್ದರು. ಅವರಿಗೆ ಧಾರ್ಮಿಕ ಶಿಕ್ಷಣವಿರಲಿಲ್ಲವೆಂಬುದೇನೋ ಸರಿ. ಆದರೆ ದೇವಸ್ಥಾನಕ್ಕೆ ಹೋಗುವುದರಿಂದಲೂ ಕಥೆ ಪುರಾಣಗಳನ್ನು ಕೇಳುವುದರಿಂದಲೂ ಅಸಂಖ್ಯ ಹಿಂದೂಗಳಿಗೆ ಸಹಜವಾಗಿ ಲಭಿಸುವ ಧರ್ಮ ಜ್ಞಾನವನ್ನು ಅವರು ಗಳಿಸಿಕೊಂಡಿದ್ದರು. ಅವರು ತಮ್ಮ ಬಾಳಿನ ಕೊನೆಗಾಲದಲ್ಲಿ, ನಮ್ಮ ಕುಟುಂಬದ ಮಿತ್ರರಾದ ಒಬ್ಬ ಬ್ರಾಹ್ಮಣ ಪಂಡಿತರ ಸಲಹೆಯಂತೆ ಗೀತಾಧ್ಯಯನವನ್ನು ಪ್ರಾರಂಭ ಮಾಡಿದರು. ಪೂಜೆಯ ಸಮಯದಲ್ಲಿ ನಿತ್ಯವೂ ಕೆಲವು ಶ್ಲೋಕಗಳನ್ನು ಗಟ್ಟಿಯಾಗಿ ಹೇಳುತ್ತಿದ್ದರು.

ನಮ್ಮ ತಾಯಿಯನ್ನು ಕುರಿತು ನನ್ನ ಮನಸ್ಸಿನಲ್ಲಿ ಬಹು ಮುಖ್ಯವಾಗಿ ನಿಂತಿರುವ ನೆನಪು, ಅವರು ಪರಮ ಸಾಧ್ವಿ ಎಂಬುದು. ಅವರು ಬಹಳ ಧಾರ್ಮಿಕ ಸ್ವಭಾವದವರು. ದಿನವೂ ಪ್ರಾರ್ಥನಾಕಾರ್ಯ ಮುಗಿಯುವ ವರೆಗೆ ಅವರು ಎಂದೂ ಊಟದ ಯೋಚನೆಯನ್ನು ಮಾಡುತ್ತಿರಲಿಲ್ಲ. ದಿನವೂ ವಿಷ್ಣು ದೇವಾಲಯಕ್ಕೆ ಹೋಗುವುದು ಅವರ ಕರ್ತವ್ಯವಾಗಿತ್ತು. ಚಾತುರ್ಮಾಸ್ಯದ ಆಚರಣೆಯನ್ನು ಅವರು ಒಂದು ಸಲವಾದರೂ ಬಿಟ್ಟುದು ನನಗೆ ಜ್ಞಾಪಕವಿಲ್ಲ. ಅವರು, ಅತ್ಯಂತ ಕಠಿಣವಾದ ವ್ರತಗಳನ್ನು ಆರಂಭಿಸಿ ಅವುಗಳನ್ನು ನಿರ್ವಿಘ್ನವಾಗಿ ಪೂರ್ತಿಗೊಳಿಸುತ್ತಿದ್ದರು. ಜೇನೆ ಬಿದ್ದರೂ ಹಿಡಿದ ವ್ರತವನ್ನು ಬಿಡುತ್ತಿರಲಿಲ್ಲ. ಒಂದು ಸಲ ಚಾಂದ್ರಾಯಣ ವ್ರತವನ್ನು ಹಿಡಿದಿದ್ದಾಗ, ಅವರು ರೋಗದಿಂದ ನರಳುತ್ತಿದ್ದರೂ ಬಿಡದೆ ಅದನ್ನು ಪೂರೈಸಿದುದು ನನಗೆ ನೆನಪಿದೆ. ಚಾತುರ್ಮಾಸ್ಯದಲ್ಲಿ ಒಪ್ಪೊತ್ತಿನ ಊಟ ಅವರಿಗೆ ಸಾಮಾನ್ಯ ರೂಢಿಯಾಗಿತ್ತು. ಅಷ್ಟರಿಂದ ತೃಪ್ತರಾಗದೆ ದಿನ ಬಿಟ್ಟು ದಿನ ಉಪವಾಸ ಮಾಡುತ್ತಿದ್ದರು. ಒಟ್ಟಿಗೆ ಎರಡು ಮೂರು ದಿನ ಉಪವಾಸಮಾಡುವುದು ಅವರಿಗೆ ದೊಡ್ಡ ವಿಷಯವಾಗಿರಲಿಲ್ಲ. ಒಂದು ಸಲ ಚಾತುರ್ಮಾಸ್ಯದಲ್ಲಿ ಸೂರ್ಯನಾರಾಯಣನ ದರ್ಶನ ಮಾಡದೆ ಊಟ ಮಾಡೆನೆಂಬ ನಿಯಮವನ್ನು ಹಿಡಿದರು. ಆಗ ಹುಡುಗರಾಗಿದ್ದ ನಾವು

ಸೂರ್ಯ ಕಾಣಿಸಿಕೊಂಡಾಗ ನಮ್ಮ ತಾಯಿಗೆ ತಿಳಿಸಲು ಆಕಾಶದ ಕಡೆ ನೋಡುತ್ತಾ ನಿಂತಿರುತ್ತಿದ್ದೆವು. ಮಳೆಗಾಲ ಅಧಿಕವಾದಾಗ ಸೂರ್ಯದರ್ಶನ ದುರ್ಲಭವೆಂಬುದು ಎಲ್ಲರಿಗೂ ಗೊತ್ತು. ಸೂರ್ಯ ಕಾಣಿಸಿಕೊಂಡಕೂಡಲೇ ಅದನ್ನು ಅವರಿಗೆ ತಿಳಿಸಲು ನಾವು ಧಾವಿಸುತ್ತಿದ್ದುದು ನನಗೆ ನೆನಪಿದೆ. ಅವರು ಸ್ವತಃ ದರ್ಶನ ಮಾಡಲು ಹೊರಗೆ ಓಡಿಬರುವಷ್ಟರಲ್ಲಿ ಸೂರ್ಯ ಕಣ್ಮರೆಯಾಗಿ ಹೋಗುತ್ತಿದ್ದನು. ಇದರಿಂದ ಅವರಿಗೆ ಊಟ ಇಲ್ಲವಾಗುತ್ತಿತ್ತು. ಆಗ ಅವರು ಹರ್ಷಚಿತ್ತರಾಗಿ, "ಏನೂ ಚಿಂತೆಯಿಲ್ಲ. ನಾನು ಈ ದಿನ ಊಟ ಮಾಡಬೇಕಾದುದು ದೇವರ ಚಿತ್ತದಲ್ಲಿಲ್ಲ" ಎನ್ನುತ್ತಿದ್ದರು. ಎಂದಿನಂತೆ ತಮ್ಮ ಕೆಲಸಕ್ಕೆ ಹಿಂದಿರುಗುತ್ತಿದ್ದರು.

ನಮ್ಮ ತಾಯಿ ವ್ಯವಹಾರ ಕುಶಲೆ, ದರಬಾರಿನ ಎಲ್ಲ ವಿಷಯವೂ ಅವರಿಗೆ ತಿಳಿದಿತ್ತು. ರಾಣಿವಾಸದವರು ಅವರ ಬುದ್ಧಿಕೌಶಲ್ಯವನ್ನು ಮೆಚ್ಚಿದ್ದರು. ನನ್ನ ಬಾಲ್ಯದಲ್ಲಿ ನಾನು ಅನೇಕ ವೇಳೆ ನಮ್ಮ ತಾಯಿಯ ಜತೆ ರಾಣೀವಾಸಕ್ಕೆ ಹೋಗುತ್ತಿದ್ದೆನು. ಅಲ್ಲಿ ನಮ್ಮ ತಾಯಿಗೂ ಠಾಕೂರ್ ಸಾಹೇಬರ ವಿಧವೆ ತಾಯಿಗೂ ನಡೆಯುತ್ತಿದ್ದ ಸಂವಾದಗಳು ನನಗೆ ಇನ್ನೂ ನೆನಪಿದೆ.

ಇಂಥ ತಂದೆತಾಯಿಗಳಲ್ಲಿ ೧೯೨೫ನೇ ಸಂವತ್ ಶಾಲಿವಾಹನ ಶಕ ೧೭೯೧ನೇ ಭಾದ್ರಪದ ಬಹುಳ ದ್ವಾದಶೀ ಎಂದರೆ, ೧೮೬೯ನೇ ಅಕ್ಟೋಬರ್ ೨ನೆಯ ತಾರೀಖು ಪೋರ್‌ಬಂದರ್ ಅಥವಾ ಸುಧಾಮಪುರಿಯಲ್ಲಿ ನಾನು ಜನಿಸಿದೆನು.

ನನ್ನ ಬಾಲ್ಯವನ್ನು ಪೋರ್‌ಬಂದರಿನಲ್ಲಿ ಕಳೆದೆನು. ಯಾವುದೋ ಪಾಠಶಾಲೆಗೆ ನನ್ನನ್ನು ಸೇರಿಸಿದುದರ ಜ್ಞಾಪಕವಿದೆ. ಮಗ್ಗಿಕೋಷ್ಟಕ ಕಲಿಯುವುದು ನನಗೆ ಸ್ವಲ್ಪ ಕಷ್ಟವಾಯಿತು. ಇತರ ಹುಡುಗರ ಸಹವಾಸದಿಂದ ಉಪಾಧ್ಯಾಯರನ್ನು ಬಯ್ಯಲು ಕಲಿತುಕೊಂಡೆನು. ಅಂದಿನ ದಿನಗಳ ಬಗೆಗೆ, ಇದರ ಹೊರತು ನನಗೆ ಮತ್ತೇನೂ ಜ್ಞಾಪಕವಿಲ್ಲ. ಇದರಿಂದ ನನ್ನ ಬುದ್ಧಿ ಮಂದವಾಗಿಯೂ ಜ್ಞಾಪಕಶಕ್ತಿ ಅಸಕ್ತವಾಗಿಯೂ ಇದ್ದಿರಬೇಕು, ಎಂದು ನನಗೆ ಭಾಸವಾಗುತ್ತದೆ.

೨

ಬಾಲ್ಯ

ನಮ್ಮ ತಂದೆ ಪೋರ್‌ಬಂದರನ್ನು ಬಿಟ್ಟು ರಾಜಕೋಟೆಯ ರಾಜಾಸ್ಥಾನಿಕ ನ್ಯಾಯಾಲಯದ ಸದಸ್ಯರಾಗಿ ಹೊರಟಾಗ, ನನಗೆ ಕೇವಲ ಏಳು ವರುಷಗಳು. ಅಲ್ಲಿ ನನ್ನನ್ನು ಪ್ರಾಥಮಿಕ ಶಾಲೆಗೆ ಸೇರಿಸಿದರು. ಆ ದಿನಗಳಲ್ಲಿ ನನಗೆ ಬೋಧಿಸಿದ ಉಪಾಧ್ಯಾಯರ ಹೆಸರುಗಳು, ಮೊದಲಾದ ವಿವರಗಳೆಲ್ಲ ನನಗೆ ಚೆನ್ನಾಗಿ ನೆನಪಿವೆ. ಪೋರ್‌ಬಂದರಿನಲ್ಲಿ ಇದ್ದಂತೆಯೇ ಇಲ್ಲಿಯೂ ನನ್ನ ವಿದ್ಯಾಭ್ಯಾಸದ ವಿಷಯದಲ್ಲಿ ಹೇಳಬೇಕಾದ ಹೆಚ್ಚಿನದೇನೂ ಇಲ್ಲ. ನಾನು ಸಾಮಾನ್ಯ ಯೋಗ್ಯತೆಯುಳ್ಳ ವಿದ್ಯಾರ್ಥಿಯಾಗಿದ್ದೆನು. ಆ ಪಾಠಶಾಲೆಗೆ ಸಮೀಪದಲ್ಲಿದ್ದ ಮತ್ತೊಂದು ಶಾಲೆ ಮುಗಿಸಿ ಮುಂದೆ ಪ್ರೌಢಶಾಲೆಯನ್ನು ಮುಟ್ಟುವ ವೇಳೆಗೆ ನನಗೆ ಹನ್ನೆರಡು ವರುಷ ತುಂಬಿತ್ತು. ಆ ಕಾಲದಲ್ಲಿ ನಾನು ಶಿಕ್ಷಕರಿಗಾಗಲಿ ಸ್ನೇಹಿತರಿಗಾಗಲಿ ಎಂದೂ ಸುಳ್ಳು ಹೇಳಿದ ನೆನಪಿಲ್ಲ. ನಾನು ಬಹಳ ನಾಚಿಕೆಯ ಸ್ವಭಾವದವನಾಗಿದ್ದೆನು. ಯಾರ ಜತೆಗೂ ಸೇರುತ್ತಿರಲಿಲ್ಲ. ನನ್ನ ಪುಸ್ತಕ, ಪಾಠಗಳು ಇವೇ ನನ್ನ ಮಿತ್ರರು. ಗಂಟೆ ಹೊಡೆಯುವ ಹೊತ್ತಿಗೆ ಶಾಲೆಗೆ ಹೋಗುವುದು ; ಶಾಲೆ ಮುಗಿಯುತ್ತಲೆ ಮನೆಗೆ ಓಡುವುದು ; ಇದು ನನ್ನ ದಿನ ನಿತ್ಯದ ಅಭ್ಯಾಸವಾಗಿತ್ತು. ನಾನು ನಿಜವಾಗಿಯೂ ಓಡಿಬಿಡುತ್ತಿದ್ದೆ. ಏಕೆಂದರೆ ನನಗೆ ಯಾರೊಂದಿಗೂ ಮಾತನಾಡುವ ಧೈರ್ಯ ಇರಲಿಲ್ಲ. ಯಾರಾದರೂ ನನ್ನನ್ನು ಕುಚೋದ್ಯ ಮಾಡುವರೋ ಎಂಬ ಭಯ ನನಗಿತ್ತು.

ಪ್ರೌಢಶಾಲೆಯ ಮೊದಲನೆಯ ವರುಷದ ಪರೀಕ್ಷೆಯ ವೇಳೆಯಲ್ಲಿ ನಡೆದ ಘಟನೆಯೊಂದನ್ನು ಹೇಳಬೇಕು. ಇನ್‌ಸ್ಪೆಕ್ಟರ್ ಮಿ. ಜೈಲ್ಸ್ ಪರಿಶೀಲನೆಗಾಗಿ ಶಾಲೆಗೆ ಬಂದಿದ್ದರು. ಅವರು ಮೊದಲನೆಯ ತರಗತಿಯ ವಿದ್ಯಾರ್ಥಿಗಳಿಗೆ ಐದು ಪದಗಳನ್ನು ಬರೆಯಲು ಕೊಟ್ಟರು. ಅವುಗಳ ಪೈಕಿ ಕೆಟಲ್ (Kettle) ಎಂಬ ಪದವೂ ಒಂದು. ನಾನು ಅದನ್ನು ತಪ್ಪಾಗಿ ಬರೆದೆನು. ನಮ್ಮ ಉಪಾಧ್ಯಾಯರು ತಮ್ಮ ಪಾದರಕ್ಷೆಯ ತುದಿಯಿಂದ ನನ್ನನ್ನು ಎಚ್ಚರಿಸಲು ಪ್ರಯತ್ನಿಸಿದರು. ನಾನು ಆ ಸೂಚನೆಯಂತೆ ನಡೆಯಲಿಲ್ಲ. ಮುಂದಿನ ಹುಡುಗನ ಸ್ಲೇಟನ್ನು ನೋಡಿಕೊಂಡು, ನನ್ನ ತಪ್ಪನ್ನು ತಿದ್ದಿಕೊಳ್ಳಬೇಕೆಂಬುದು ನಮ್ಮ ಉಪಾಧ್ಯಾಯರ ಉದ್ದೇಶ.

ಅದು ನನಗೆ ಒಪ್ಪಿಗೆಯಾಗಲಿಲ್ಲ. ಏಕೆಂದರೆ ನಾವು 'ಕಾಪಿ' ಮಾಡದಂತೆ ನೋಡಿಕೊಳ್ಳುವುದೇ ಉಪಾಧ್ಯಾಯರ ಕೆಲಸವೆಂದು ನಾನು ತಿಳಿದಿದ್ದೆನು. ಇದರ ಪರಿಣಾಮವಾಗಿ ನನ್ನನ್ನು ಹೊರತು ಉಳಿದ ಹುಡುಗರೆಲ್ಲ ಐದು ಪದಗಳನ್ನೂ ಸರಿಯಾಗಿ ಬರೆದಿದ್ದರು. ನಾನೊಬ್ಬನೇ ದಡ್ಡ. ಇದಾದ ಮೇಲೆ, ಉಪಾಧ್ಯಾಯರು ನನ್ನ ಮೂರ್ಖತನವನ್ನು ನನಗೆ ತೋರಿಸುವುದಕ್ಕೆ ಪ್ರಯತ್ನಪಟ್ಟರು. ಅದರಿಂದ ಅವರಿಗೆ ವೃಥಾ ಶ್ರಮವಾಯಿತೇ ಹೊರತು, 'ಕಾಪಿ ಮಾಡುವ' ಕಲೆ ನನಗೆ ಕೊನೆಗೂ ಬರಲೇ ಇಲ್ಲ.

ಇಷ್ಟಾದರೂ ಉಪಾಧ್ಯಾಯರಲ್ಲಿ ನನಗಿದ್ದ ಗೌರವ, ಕಿಂಚಿತ್ತೂ ಕಡಿಮೆಯಾಗಲಿಲ್ಲ. ಏಕೆಂದರೆ ಹಿರಿಯರ ದೋಷಗಳನ್ನು ಎಣಿಸದಿರುವುದು ನನ್ನ ಸ್ವಾಭಾವಿಕ ಗುಣವಾಗಿತ್ತು. ಅನಂತರ ಆ ಉಪಾಧ್ಯಾಯರ ಇತರ ದೋಷಗಳೂ ನನಗೆ ತಿಳಿದುಬಂದವು. ಆದರೆ ಅವರಲ್ಲಿ ನನ್ನ ಆದರ ಭಾವ ಕಡಿಮೆಯಾಗಲಿಲ್ಲ. ಹಿರಿಯರ ಆಣತಿಯನ್ನು ಪಾಲಿಸುವುದು ನಮ್ಮ ಕರ್ತವ್ಯ, ಅವರ ಕಾರ್ಯವನ್ನು ಪರೀಕ್ಷಿಸುವುದಲ್ಲ ಎಂಬುದನ್ನು ನಾನು ಅರಿತಿದ್ದೆನು.

ಇದೇ ಸಮಯದಲ್ಲಿ ನಡೆದ ಮತ್ತೆರಡು ಸಂಗತಿಗಳು ಯಾವಾಗಲೂ ನನ್ನ ನೆನಪಿನಲ್ಲಿ ಉಳಿದಿವೆ. ಪಠ್ಯಪುಸ್ತಕಗಳನ್ನು ಹೊರತು ಬೇರೆ ಏನನ್ನೂ ಓದುವುದು ಸಾಧಾರಣವಾಗಿ ನನಗೆ ಸೇರುತ್ತಿರಲಿಲ್ಲ. ನಿತ್ಯದ ಪಾಠಗಳನ್ನಂತೂ ಓದಲೇ ಬೇಕಾಗಿತ್ತು. ಉಪಾಧ್ಯಾಯರು ನನ್ನನ್ನು ಗದರಿಸುವುದು ನನಗೆ ಇಷ್ಟವಿರಲಿಲ್ಲ. ಅವರಿಗೆ ಮೋಸ ಮಾಡಲು ನನಗೆ ಇಷ್ಟವಿರಲಿಲ್ಲ. ಆದುದರಿಂದ ಪಾಠವನ್ನೇನೊ ಓದುತ್ತಿದ್ದೆನು. ಆದರೆ ಪಾಠದಲ್ಲಿ ಮನಸ್ಸು ಇರುತ್ತಿರಲಿಲ್ಲ. ಹೀಗೆ ಪಾಠಗಳನ್ನೇ ಸರಿಯಾಗಿ ಓದುತ್ತಿರಲಿಲ್ಲವೆಂದಮೇಲೆ, ಇನ್ನು ಇತರ ಹೆಚ್ಚಿನ ವ್ಯಾಸಂಗದ ಪ್ರಶ್ನೆ ಎಲ್ಲಿ ಬಂತು? ಆದರೆ ಹೇಗೋ ನಮ್ಮ ತಂದೆ ಕೊಂಡುಕೊಂಡು ಬಂದಿದ್ದ ಒಂದು ಪುಸ್ತಕ ನನ್ನ ಕಣ್ಣಿಗೆ ಬಿತ್ತು. ಅದರ ಹೆಸರು "ಶ್ರವಣ ಪಿತೃ ಭಕ್ತಿ ನಾಟಕ". ಅದನ್ನು ನಾನು ಅತ್ಯಂತ ಆಸಕ್ತಿಯಿಂದ ಓದಿದೆನು. ಅದೇ ಸಮಯದಲ್ಲಿ ಸಂಚಾರೀ ಬೊಂಬೆ ಪ್ರದರ್ಶಕರು ನಮ್ಮ ಊರಿಗೆ ಬಂದರು. ಅವರು ನನಗೆ ತೋರಿಸಿದ ಒಂದು ಚಿತ್ರ, ಶ್ರವಣ ತನ್ನ ಕುರುಡು ತಂದೆತಾಯಿಯರನ್ನು ಅಡ್ಡೆಯಲ್ಲಿ

ಕೂರಿಸಿಕೊಂಡು ಅದನ್ನು ಹೆಗಲಿನ ಮೇಲೆ ಹೊತ್ತುಕೊಂಡು ಯಾತ್ರೆಗಾಗಿ ಹೋಗುತ್ತಿದ್ದ ಚಿತ್ರ. ಆ ಪುಸ್ತಕ, ಆ ದೃಶ್ಯ ಎರಡೂ ನನ್ನ ಅಂತರಂಗದಲ್ಲಿ ಶಾಶ್ವತವಾಗಿ ಅಂಕಿತವಾದವು. "ಇಗೋ ಇಲ್ಲಿ ನಿನಗೊಂದು ಆದರ್ಶವಿದೆ. ಅದನ್ನು ಅನುಕರಿಸು" ಎಂದು ನನಗೆ ನಾನೇ ಹೇಳಿಕೊಂಡೆನು. ಶ್ರವಣ ಮರಣಹೊಂದಲು, ಅವನ ಮಾತಾಪಿತೃಗಳ ಆರ್ತವಿಲಾಪ ನನ್ನ ಕಿವಿಗೆ ಈಗಲೂ ಕೇಳುವಂತಿದೆ. ಆ ರಾಗ, ನನ್ನ ಹೃದಯುವನ್ನು ಕರಗಿಸಿತು. ನಮ್ಮ ತಂದೆ ಕೊಂಡುಕೊಟ್ಟಿದ್ದ ರಾಗಮಾಲಿಕೆಯಲ್ಲಿ ಅದನ್ನು ಬಾರಿಸಲು ಕಲಿತೆನು.

ಮತ್ತೊಂದು ನಾಟಕಕ್ಕೆ ಸಂಬಂಧಿಸಿದಂತೆ ಇದೇ ಬಗೆಯ ಪ್ರಸಂಗ ನಡೆಯಿತು. ಆ ಕಾಲದಲ್ಲಿ ಒಂದು ನಾಟಕ ಮಂಡಳಿಯವರು ಪ್ರದರ್ಶಿಸು ತ್ತಿದ್ದ ನಾಟಕವೊಂದನ್ನು ನೋಡಲು ನಮ್ಮ ತಂದೆಯವರು ನನಗೆ ಅನುಮತಿ ಕೊಟ್ಟಿದ್ದರು. ಆ ನಾಟಕ, ಹರಿಶ್ಚಂದ್ರ ನಾಟಕ. ಅದು ನನ್ನ ಮನಸ್ಸನ್ನು ಸೂರೆಗೊಂಡಿತು. ಅದನ್ನು ಎಷ್ಟು ನೋಡಿದರೂ ನನಗೆ ತೃಪ್ತಿಯೇ ಆಗಲಿಲ್ಲ. ಆದರೆ ಎಷ್ಟು ಸಲ ನೋಡಲು ಅನುಮತಿ ಕೊಟ್ಟಾರು ! ಅದರ ಹುಚ್ಚು ನನ್ನನ್ನು ಹಗಲು ರಾತ್ರಿ ಬಿಡಲೇ ಇಲ್ಲ. ಲೆಕ್ಕ ವಿಲ್ಲದಷ್ಟು ಸಲ ನಾನೇ ಹರಿಶ್ಚಂದ್ರನಾಗಿ ಆ ನಾಟಕವನ್ನು ಅಭಿನಯಿಸಿ ಕೊಂಡೆನು. "ಎಲ್ಲರೂ ಏಕೆ ಹರಿಶ್ಚಂದ್ರನಂತೆ ಸತ್ಯಸಂಧರಾಗಿರಬಾರದು ?" ಇದೇ ಹಗಲೂ ರಾತ್ರಿ ನನ್ನನ್ನು ನಾನೇ ಕೇಳಿಕೊಳ್ಳುತ್ತಿದ್ದ ಪ್ರಶ್ನೆ. ಸತ್ಯ ವನ್ನು ಅನುಸರಿಸಬೇಕು. ಹರಿಶ್ಚಂದ್ರ ಸತ್ಯಕ್ಕಾಗಿ ಪಟ್ಟ ಕ್ಲೇಶವನ್ನೆಲ್ಲ ಆಪತ್ತುಗಳನ್ನೆಲ್ಲ ನಾನೂ ಪಡಬೇಕು ; ಇದೊಂದೇ ನನ್ನ ಮನಸ್ಸಿನಲ್ಲಿ ಸ್ಫೂರ್ತಿಹೊಂದಿದ ಆದರ್ಶ. ಹರಿಶ್ಚಂದ್ರನ ಕಥೆಯನ್ನು ನಾನು ಅಕ್ಷರಶಃ ನಂಬಿದೆನು. ನೆನಪುಮಾಡಿಕೊಂಡು ಪದೇಪದೇ ಅಳುತ್ತಿದ್ದನು. ಹರಿಶ್ಚಂದ್ರ ಐತಿಹಾಸಿಕ ವ್ಯಕ್ತಿ ಆಗಿರಲಾರ ಎಂಬುದು, ಇಂದು ನನ್ನ ಬುದ್ಧಿಗೆ ಗೋಚ ರಿಸುತ್ತಿದೆ. ಆದರೆ ನನ್ನ ಮಟ್ಟಿಗೆ, ಹರಿಶ್ಚಂದ್ರ ಶ್ರವಣ ಇಬ್ಬರೂ ಜೀವಂತ ವ್ಯಕ್ತಿಗಳು. ಆ ನಾಟಕಗಳನ್ನು ಓದಿದರೆ ಮತ್ತೆ ಮೊದಲಿನಂತೆ ನಾನು ಕಣ್ಣೀರು ಹಾಕದೆ ಇರಲಾರೆನೆಂಬುದು ನನ್ನ ನಂಬಿಕೆ.

೩

ಬಾಲ್ಯ ವಿವಾಹ

ಈ ಅಧ್ಯಾಯವನ್ನು ಬರೆಯುವ ಸಂಭವವಿರದಿದ್ದರೆ ಒಳ್ಳೆಯದಾಗುತ್ತಿತ್ತೆಂದು ನನ್ನ ಹಾರೈಕೆ. ಆದರೆ ಈ ಆತ್ಮಕಥೆಯ ನಿರೂಪಣೆಯಲ್ಲಿ ಈ ಬಗೆಯ ಅನೇಕ ಕಹಿಗುಳಿಗೆಗಳನ್ನು ನುಂಗಬೇಕಾಗುವುದೆಂಬುದು ನನಗೆ ಗೊತ್ತು. ನಾನು ಸತ್ಯದ ಪೂಜಾರಿಯಾಗಿರುವುದಾದರೆ ಇದರ ಹೊರತು ಬೇರೆ ದಾರಿ ಇಲ್ಲ. ನನ್ನ ಮದುವೆ, ನನ್ನ ಹದಿಮೂರನೆಯ ವಯಸ್ಸಿನಲ್ಲಿ ನಡೆಯಿತೆಂಬುದನ್ನು ನಾನು ವ್ಯಥೆಯಿಂದ ಇಲ್ಲಿ ಬರೆಯಬೇಕಾಗಿದೆ. ನನ್ನ ರಕ್ಷಣೆಯಲ್ಲಿರುವ ಅದೇ ವಯಸ್ಸಿನ ಹುಡುಗರನ್ನು ನೋಡಿ, ನನ್ನ ಮದುವೆಯನ್ನು ಜ್ಞಾಪಿಸಿಕೊಂಡರೆ ನನ್ನಲ್ಲಿ ಕನಿಕರ ಉಂಟಾಗುತ್ತದೆ. ನನ್ನ ಅವಸ್ಥೆ ಅವರಿಗೆ ತಪ್ಪಿತಲ್ಲ ಎಂದು ಅವರನ್ನು ಅಭಿನಂದಿಸುವಂತೆ ಆಗುತ್ತದೆ. ಅಷ್ಟು ತೀರ ಚಿಕ್ಕ ವಯಸ್ಸಿನ ವಿವಾಹವನ್ನು ಸಮರ್ಥಿಸಲು ಯಾವ ನೈತಿಕ ಆಧಾರವೂ ನನ್ನ ಮುಂದೆ ಇಲ್ಲ.

ವಾಚಕರು ತಪ್ಪು ತಿಳಿದುಕೊಳ್ಳದಿರಲಿ. ನನಗೆ ಆದುದು ಮದುವೆಯೇ ಹೊರತು, ಮುಂದೆ ಮದುವೆಯಾಗುವ ಒಪ್ಪಂದವಲ್ಲ. ಕಾಥೇವಾಡದಲ್ಲಿ ಮದುವೆ ಮತ್ತು ಮದುವೆಯ ಒಪ್ಪಂದ ಎಂಬ ಎರಡು ಬೇರೆಬೇರೆಯಾದ ವಿವಾಹ ಸಂಸ್ಕಾರಗಳಿವೆ. ಒಪ್ಪಂದವೆಂಬುದು ಹೆಣ್ಣುಗಂಡುಗಳನ್ನು ವಿವಾಹಬಂಧನಕ್ಕೆ ಒಳಪಡಿಸುವುದಾಗಿ ತಂದೆ-ತಾಯಿಗಳು ಕೊಡುವ ಪೂರ್ವವಾಗ್ದಾನ. ಈ ವಾಗ್ದಾನವನ್ನು ಮುರಿಯಲೇ ಕೂಡದು ಎಂಬುದೇನೂ ಇಲ್ಲ. ಹುಡುಗ ಸತ್ತರೆ, ಕನ್ಯೆ ವಿಧವೆಯಾಗುವುದಿಲ್ಲ. ಅದು ಹೆಣ್ಣುಗಂಡುಗಳ ತಂದೆ-ತಾಯಿಯರ ಒಪ್ಪಂದ. ಹುಡುಗ ಹುಡುಗಿಗೆ ಅದರ ಸಂಬಂಧವಿಲ್ಲ. ಅನೇಕ ವೇಳೆ ಹುಡುಗ ಹುಡುಗಿಯರಿಗೆ ಆ ವಿಷಯವನ್ನು ಪೋಷಕರು ತಿಳಿಸುವುದೂ ಇಲ್ಲ. ನನ್ನ ವಿಷಯದಲ್ಲಿ ನನಗೆ ತಿಳಿಯದಂತೆಯೇ ಮೂರು ಸಲ ಒಪ್ಪಂದವಾಗಿತ್ತೆಂದು ನಾನು ತಿಳಿದಿದ್ದೇನೆ. ನನಗೆಂದು ಗೊತ್ತಾಗಿದ್ದ ಇಬ್ಬರು ಕನ್ಯೆಯರು ಒಬ್ಬರಾದ ಮೇಲೆ ಒಬ್ಬರು ಮೃತಹೊಂದಿದರೆಂದು, ನನಗೆ ತಿಳಿಯಿತು. ಆದುದರಿಂದ

ನನ್ನ ವಿಷಯದಲ್ಲಿ ಮೂರು ಸಲ ಒಪ್ಪಂದವಾಗಿರಬೇಕೆಂದು ಊಹಿಸುತ್ತೇನೆ. ಮೂರನೆಯ ಒಪ್ಪಂದವು ಏಳನೆಯ ವಯಸ್ಸಿನಲ್ಲಿ ಆಗಿರಬೇಕೆಂದು ಎಲ್ಲೋ ಸ್ವಲ್ಪ ಸ್ವಲ್ಪ ಜ್ಞಾಪಕ. ಆ ವಿಷಯವನ್ನೂ ನನಗೆ ತಿಳಿಸಿದಂತೆ ಜ್ಞಾಪಕವಿಲ್ಲ. ಈ ಅಧ್ಯಾಯದಲ್ಲಿ ನಾನು ಹೇಳುತ್ತಿರುವುದು ನನ್ನ ವಿವಾಹವನ್ನು ಕುರಿತು. ಅದು ನನಗೆ ಅತ್ಯಂತ ಸ್ಪಷ್ಟವಾಗಿ ನೆನಪಿದೆ.

ನಾವು ಮೂವರು ಸಹೋದರರೆಂಬುದು ವಾಚಕರಿಗೆ ನೆನಪಿರಬೇಕು. ಮೊದಲನೆಯವನ ಮದುವೆ ಆಗಲೇ ಆಗಿಹೋಗಿತ್ತು. ನನ್ನ ಎರಡನೆಯ ಅಣ್ಣ ನನಗಿಂತ ಎರಡು ಮೂರು ವರುಷ ಹಿರಿಯವನಾಗಿದ್ದನು. ಅವನಿಗೂ, ನನಗಿಂತ ಒಂದು ವರುಷ ದೊಡ್ಡವನಾಗಿದ್ದ ನನ್ನ ದಾಯಾದಿಯೊಬ್ಬನಿಗೂ, ನನಗೂ-ಹೀಗೆ ಮೂರು ಮದುವೆಗಳನ್ನೂ ಒಟ್ಟಿಗೇ ನಡೆಸಲು ನಮ್ಮ ತಂದೆ ನಿಶ್ಚಯಿಸಿದರು. ಇದರಿಂದ ನಮಗೆ ಕಲ್ಯಾಣವಾಗುವುದೇ ಅಥವಾ ಇದು ನಮಗೆ ಒಪ್ಪಿತವೇ ಎಂಬ ಮಾತು ಏನೂ ಇರಲಿಲ್ಲ. ಇದು, ತಂದೆತಾಯಿಗಳ ಇಚ್ಛೆ ಮತ್ತು ವೆಚ್ಚ ಕಡಿಮೆಯಾಗುವ ಪ್ರಶ್ನೆ ಮಾತ್ರವಾಗಿತ್ತು.

ಹಿಂದೂ ಸಂಸಾರಗಳಲ್ಲಿ ವಿವಾಹವೆಂಬುದು ಸುಲಭವಾದ ವಿಷಯವಲ್ಲ. ಕನ್ಯೆ ಮತ್ತು ವರನ ತಂದೆತಾಯಿಗಳು ವಿವಾಹದನಂತರ ಎಷ್ಟೋ ವೇಳೆ, ದಿವಾಳಿಯಾಗುತ್ತಾರೆ. ಹಣವೂ ನಾಶ, ಕಾಲವೂ ವ್ಯಯ, ವಸ್ತ್ರಗಳ ಸಿದ್ಧತೆ, ಒಡವೆಗಳ ಸಿದ್ಧತೆ, ಔತಣಗಳಿಗೆ ವೆಚ್ಚದ ಅಂದಾಜು, ಇವುಗಳಿಗೆ ಅನೇಕ ತಿಂಗಳುಗಳ ಹಿಂದಿನಿಂದಲೂ ಸಿದ್ಧತೆ ಪ್ರಾರಂಭವಾಗುತ್ತದೆ. ಹೆಣ್ಣು ಮತ್ತು ಗಂಡಿನ ಕಡೆಯವರು ಊಟ ತಿಂಡಿಗಳಲ್ಲಿ ಒಬ್ಬರನ್ನೊಬ್ಬರು ಮೀರಿಸಲು ಪ್ರಯತ್ನಿಸುತ್ತಾರೆ. ಇಂಪಾದ ದನಿ ಇರಲಿ ಬಿಡಲಿ, ಸ್ತ್ರೀಯರು ಗಂಟಲು ಕಟ್ಟುವವರೆಗೆ ಹಾಡುತ್ತಾರೆ. ತಾವೂ ಕಾಯಿಲೆ ಬೀಳುತ್ತಾರೆ. ನೆರೆಹೊರೆಯವರ ಶಾಂತಿಯನ್ನೂ ಸಹ, ಭಂಗಪಡಿಸುತ್ತಾರೆ. ನೆರೆಹೊರೆಯವರೂ ಸಹ ಈ ಗದ್ದಲವನ್ನೂ ಎಂಜಲು ಅಶುಚಿಯನ್ನೂ ಮಾತಿಲ್ಲದೆ ಸಹಿಸುತ್ತಾರೆ. ಏಕೆಂದರೆ ತಮ್ಮ ಮನೆಯ ಮದುವೆಯಾಗುವಾಗಲೂ ಹೀಗೆಯೇ ನಡೆಯುವುದೆಂಬುದು ಅವರಿಗೆ ಗೊತ್ತು.

ಪದೇ ಪದೇ ಮಾಡುವುದಕ್ಕಿಂತ ಈ ಎಲ್ಲ ಕಾಟವನ್ನೂ ಒಂದೇ ಸಲ ಮುಗಿಸಿಬಿಡುವುದು ಉತ್ತಮವೆಂದು ನಮ್ಮ ಹಿರಿಯರು ಯೋಚಿಸಿದರು. "ಖರ್ಚು ಕಡಿಮೆ ವಿಜೃಂಭಣೆ ಹೆಚ್ಚು", ಮೂರು ಬಾರಿ ಮಾಡುವುದಾದರೆ ಖರ್ಚನ್ನೂ ಧಾರಾಳವಾಗಿ ಮಾಡಬಹುದು. ತಂದೆಯೂ ದೊಡ್ಡಪ್ಪನೂ ಆಗಲೇ ವೃದ್ಧರಾಗಿದ್ದರು. ಅವರು ಮಾಡಬೇಕಾಗಿದ್ದ ಮದುವೆಗಳಲ್ಲಿ ನಮ್ಮದೇ ಕಡೆಯವು. ನಮ್ಮ ಮದುವೆಗಳ ಮೂಲಕ, ತಮ್ಮ ಬಾಳಿನ ಕೊನೆಯ ವೈಭವಗಳನ್ನು ಪೂರ್ತಿ ಅನುಭವಿಸಬೇಕೆಂದೂ ಅವರು ಯೋಚಿಸಿರ ಬಹುದು. ಈ ಎಲ್ಲ ಕಾರಣಗಳಿಂದ, ಮೂರು ವಿವಾಹಗಳೂ ಒಟ್ಟಿಗೆ ನಿಶ್ಚಿತವಾದುವು. ಅವುಗಳ ಸಾಮಗ್ರಿ ಸಿದ್ಧತೆಗಾಗಿ ಅನೇಕ ತಿಂಗಳು ಹಿಡಿಯಿತು.

ಈ ಸಿದ್ಧತೆಗಳಿಂದ ಮಾತ್ರ, ಮದುವೆ ನಡೆಯುವುದೆಂಬುದು ನನಗೆ ಗೊತ್ತಾಯಿತು. ಮದುವೆಯೆಂದರೆ ಧರಿಸಲು ಒಳ್ಳೆ ವಸ್ತ್ರಗಳು, ವಾದ್ಯ ಶ್ರವಣ, ಬಗೆಬಗೆಯ ಭೋಜನ, ಮಿಠಾಯಿ, ಒಬ್ಬ ಹೊಸ ಹುಡುಗಿ ಯೊಂದಿಗೆ ನಗು, ವಿನೋದ, ಆಟ ಇದರ ಹೊರತು ನನಗೆ ಬೇರೆ ಭಾವನೆ ಇರಲಿಲ್ಲ. ವಿಷಯಭೋಗದ ಭಾವನೆ ಅನಂತರ ಉತ್ಪತ್ತಿಯಾಯಿತು. ಅವಶ್ಯಕವಾಗಿ ಹೇಳಬೇಕಾದ ವಿಷಯಗಳನ್ನು ಹೊರತು ಉಳಿದ ನನ್ನ ಲಜ್ಜೆಯ ಪ್ರಕರಣದ ಮೇಲೆ ತೆರದೆ ಎಳೆಯುತ್ತೇನೆ. ಅದನ್ನು ಮುಂದೆ ಹೇಳುವೆನು. ಆದರೆ ಈಗ, ಈ ಕಥೆಯನ್ನು ಬರೆಯಲು ನಾನು ಯಾವುದನ್ನು ಮಧ್ಯಬಿಂದುವಾಗಿ ಇಟ್ಟುಕೊಂಡಿದ್ದೇನೆಯೋ ಅದಕ್ಕೆ ಈ ಸಂಗತಿಗಳು ಹೆಚ್ಚು ಸಂಗತವಾಗಲಾರವು.

ನನ್ನನ್ನೂ ನನ್ನ ಅಣ್ಣನನ್ನೂ ರಾಜಕೋಟೆಯಿಂದ ಪೋರ್‌ಬಂದರ್‌ಗೆ ಕರೆದುಕೊಂಡು ಹೋದರು. ವಿವಾಹಕ್ಕೆ ಪೂರ್ವ ಸಿದ್ಧತೆಯಾಗಿ ನಮ್ಮ ಮೈಗೆಲ್ಲ ಅರಿಸಿನ ಬಳಿಯುವುದೇ ಮುಂತಾದ ಕೆಲವು ವಿನೋದಗಳಿವೆ. ಆದರೆ ಅವುಗಳ ವರ್ಣನೆಯನ್ನು ನಾನು ಬಿಡುವುದೇ ಉತ್ತಮ.

ನಮ್ಮ ತಂದೆ ದಿವಾನರಾಗಿದ್ದರೂ ನೌಕರರೆ ತಾನೇ ಠಾಕೂರರಿಗೆ ಪ್ರಿಯರಾಗಿದ್ದುದರಿಂದ ಅವರ ತಾಪೆದಾರಿ ಇನ್ನೂ ಹೆಚ್ಚಾಯಿತು. ಠಾಕೂರ ಸಾಹೇಬರು ಕೊನೆಯ ಗಳಿಗೆಯವರೆಗೆ ಅವರನ್ನು ಹೊರಡಗೊಡಲಿಲ್ಲ.

ಕೊನೆಯಲ್ಲಿ ಬಿಟ್ಟಾಗ, ಪ್ರಯಾಣದಲ್ಲಿ ಎರಡು ದಿನಗಳು ಉಳಿತಾಯವಾಗುವಂತೆ ಪ್ರತ್ಯೇಕವಾದ ಕುದುರೆಗಾಡಿಗಳನ್ನು ಏರ್ಪಡಿಸಿದರು. ಆದರೆ ದೈವೇಚ್ಛೆ ಬೇರೆಯಾಗಿತ್ತು. ಪೋರ್‌ಬಂದರ್ ರಾಜಕೋಟೆಯಿಂದ ನೂರ ಇಪ್ಪತ್ತು ಮೈಲಿ ಇದೆ. ಐದು ದಿನಗಳ ಗಾಡಿ ಪ್ರಯಾಣ. ನಮ್ಮ ತಂದೆ ಮೂರು ದಿನಗಳಲ್ಲಿ ಈ ಪ್ರಯಾಣವನ್ನು ಮುಗಿಸಿದರು. ಆದರೆ ಮೂರನೆಯ ಮಜಲಿನಲ್ಲಿ ಗಾಡಿ ತಲೆಕೆಳಗಾಗಿ ಉರುಳಿ ಬಿದ್ದು ಅವರಿಗೆ ತುಂಬಾ ಗಾಯಗಳಾದುವು. ಅವರು ಕೈ, ಕಾಲು, ಮುಖಕ್ಕೆಲ್ಲ ಪಟ್ಟಿಗಳನ್ನು ಕಟ್ಟಿಕೊಂಡು ಗಾಡಿಯಿಂದ ಇಳಿದರು. ಇದರಿಂದ ಮದುವೆಯಲ್ಲಿ ನಮ್ಮ ಮತ್ತು ಅವರ ಆನಂದ ಅರ್ಧ ಕಡಿಮೆಯಾಯಿತು. ಆದರೆ ವಿವಾಹವನ್ನು ನಿಲ್ಲಿಸುವುದಕ್ಕಾಗಲೀ ಬಿಡುವುದಕ್ಕಾಗಲೀ ಆಗುತ್ತದೆಯೇ? ಲಗ್ನ ಮುಹೂರ್ತಗಳನ್ನು ಬದಲಾಯಿಸುವುದಕ್ಕಾಗುತ್ತದೆಯೇ? ನಾನಂತೂ ನನ್ನ ಹುಡುಗತನದ ವಿವಾಹ ಉಲ್ಲಾಸದಲ್ಲಿ ನಮ್ಮ ತಂದೆಯ ಗಾಯಗಳ ದುಃಖವನ್ನೂ ಮರೆತು ಬಿಟ್ಟೆನು.

ನಾನು ಮಾತಾಪಿತೃಸೇವೆಯಿಂದ ಕೂಡಿದ್ದೆನು. ಆದರೆ ನನ್ನ ವಿಷಯಾಸಕ್ತಿಯೂ ಭೋಗಲಾಲಸೆಯೂ ಕಡಿಮೆಯಾಗಿರಲಿಲ್ಲ. ಅವರನ್ನು ಶ್ರದ್ಧಾಪೂರ್ವಕವಾಗಿ ಸೇವಿಸಲು ನನ್ನ ಎಲ್ಲ ಸುಖಗಳನ್ನೂ ಬಿಡಬೇಕೆಂಬುದನ್ನು ನಾನು ಇನ್ನೂ ಕಲಿತಿರಲಿಲ್ಲ, ನನ್ನ ಭೋಗೇಚ್ಛೆಗಾಗಿ ನನ್ನನ್ನು ಶಿಕ್ಷಿಸುವುದಕ್ಕೋ ಎಂಬಂತೆ ನಡೆದ ಒಂದು ದುರ್ಘಟನೆ, ನನ್ನ ಜೀವಮಾನವೆಲ್ಲ ಮನಸ್ಸಲ್ಲಿ ಕೊರೆಯುತ್ತಿದೆ. ಆ ಸಂಗತಿಯನ್ನು ಮುಂದೆ ತಿಳಿಸುವೆನು, ನಿಷ್ಕುಲಾನಂದರು ಹೀಗೆ ಹಾಡುತ್ತಾರೆ.

ತ್ಯಾಗ ನ ಟಕೇ ರೇ ವೈರಾಗ ಬಿನಾ
ಕರಿಯೆ ಕೋಟಿ ಉಪಾಯ ಜೀ.

ಭೋಗವನ್ನು ಸವಿಯುವ ಆಸೆಯನ್ನು ಬಿಡದೆ ಭೋಗ ಸಾಮಗ್ರಿಯನ್ನು ಮಾತ್ರ ಬಿಟ್ಟರೆ ವೈರಾಗ್ಯ ಲಭಿಸುವುದಿಲ್ಲ. ತ್ಯಾಗವೆಂಬುದು ಒಂದು ಮನೋವೃತ್ತಿ. ಮನಸ್ಸು ಸ್ವಾಧೀನದಲ್ಲಿಲ್ಲದೆ ಬಾಹ್ಯವರ್ತನೆಯಿಂದ ಶಾಶ್ವತ ಫಲ ದೊರೆಯುವುದಿಲ್ಲ. ನನ್ನ ಪಾಡಿಗೆ ನಾನು ಈ ಹಾಡನ್ನು ಹಾಡಿಕೊಂಡಾಗಲಾಗಲೀ, ಇತರರು ಹಾಡಿದಾಗಲಾಗಲೀ ಆ ದುರ್ಘಟನೆ

ಮತ್ತು ಕಹಿಪ್ರಸಂಗ ನನಗೆ ಜ್ಞಾಪಕ ಬಂದು ನನಲ್ಲಿ ಲಜ್ಜೆಯನ್ನು ತುಂಬುತ್ತದೆ.

ಗಾಯಗೊಂಡರೂ ನಮ್ಮ ತಂದೆ ಗೆಲುವಾದ ಮುಖಭಾವದಿಂದಲೇ ವಿವಾಹದಲ್ಲಿ ಪೂರ್ಣವಾಗಿ ಭಾಗಿಯಾದರು. ಈಗಲೂ ಯೋಚಿಸಿಕೊಂಡರೆ ನಮ್ಮ ತಂದೆ, ವಿವಾಹಕಾಲದಲ್ಲಿ ಎಲ್ಲೆಲ್ಲಿ ಕುಳಿತರು, ಏನೇನು ಮಾಡಿದರು ಎಂಬುದೆಲ್ಲವನ್ನೂ ನನ್ನ ಸ್ಮೃತಿಗೆ ತಂದುಕೊಳ್ಳಬಲ್ಲೆ, ನಮ್ಮ ತಂದೆ ನನಗೆ ಬಾಲ್ಯ ವಿವಾಹವನ್ನು ಮಾಡಿದುದಕ್ಕಾಗಿ ಅವರನ್ನು ನಾನು ಮುಂದೆ ಟೀಕಿಸಬೇಕಾಗಬಹುದೆಂಬುದು ನನಗೆ ಸ್ವಪ್ನದಲ್ಲಿಯೂ ಆಗ ಹೊಳೆಯಲಿಲ್ಲ. ಆ ಸಮಯದಲ್ಲಿ ನನಗೆ ಎಲ್ಲವೂ ಯೋಗ್ಯವಾಗಿ, ಉಚಿತವಾಗಿ, ಇಷ್ಟವಾಗಿ ತೋರಿತು. ವಿವಾಹವಾಗಲು ನಾನೂ ತುಂಬ ಉತ್ಸುಕನಾಗಿದ್ದೆನು. ಆಗ ನಮ್ಮ ತಂದೆ ಮಾಡಿದುದೆಲ್ಲ ನನಗೆ ನಿರ್ದುಷ್ಟವಾಗಿ ತೋರಿದುದರಿಂದ, ನಡೆದ ಸಂಗತಿಗಳೆಲ್ಲ ನನಗೆ ಸ್ಪಷ್ಟವಾಗಿ ನೆನಪಿವೆ.

ಪಾಣಿಗ್ರಹಣವಾದುದು, ವಧೂವರರು ಒಟ್ಟಾಗಿ ಕುಳಿತುದು, ಸಿಹಿಯಾದ ಕಂಸಾರವನ್ನು ನಾವಿಬ್ಬರೂ ಒಬ್ಬರ ಬಾಯೊಳಗೆ ಒಬ್ಬರು ಇಟ್ಟುದು, ಸಪ್ತಪದಿ, ನಾವು ಒಟ್ಟಾಗಿ ಇರಲು ಪ್ರಾರಂಭಿಸಿದುದು, ಇದರ ಚಿತ್ರ ನನ್ನ ಮನಸ್ಸಿನ ಮುಂದೆ ಇಂದೂ ಸ್ಪಷ್ಟವಾಗಿ ನಿಂತಿದೆ. ಓ, ಆ ಪ್ರಥಮರಾತ್ರಿ! ಏನೂ ಅರಿಯದ ಇಬ್ಬರು ಮಕ್ಕಳು ಸಂಸಾರ ಸಾಗರದಲ್ಲಿ ದೂಡಲ್ಪಟ್ಟರು. ಮೊದಲ ರಾತ್ರಿ ಏನು ಏನು ಮಾಡಬೇಕೆಂಬುದನ್ನು ನಮ್ಮ ಅತ್ತಿಗೆ ನನಗೆ ಚೆನ್ನಾಗಿ ತಿಳಿಸಿದ್ದಳು. ನನ್ನ ಧರ್ಮ ಪತ್ನಿಗೆ ಯಾರು ಕಲಿಸಿದರೆಂದು ನಾನು ಕೇಳಿದ್ದ ಜ್ಞಾಪಕವಿಲ್ಲ. ಈಗಲೂ ಕೇಳಬಹುದು. ಆದರೆ ಆ ಇಚ್ಛೆಯಿಲ್ಲ. ನಮ್ಮಲ್ಲಿ ಪರಸ್ಪರ ಸ್ವಲ್ಪ ಭಯವೂ ಲಜ್ಜೆಯೂ ಇದ್ದಿತು. ಆವಳೊಂದಿಗೆ ಏನನ್ನು ಮಾತನಾಡುವುದು ? ಹೇಗೆ ಮಾತನಾಡುವುದು ? ಅತ್ತಿಗೆ ಹೇಳಿಕೊಟ್ಟುದು ಬಹು ದೂರ ಸಹಾಯಕವಾಗಲಿಲ್ಲ. ಆದರೆ ಅಂತಹ ವಿಷಯಗಳಲ್ಲಿ ಯಾರ ಬೋಧನೆಯೂ ಆವಶ್ಯಕವಿಲ್ಲ. ಪೂರ್ವ ಜನ್ಮ ಸಂಸ್ಕಾರದ ವಾಸನೆ ಪ್ರಬಲವಾಗಿರುವಾಗ ಈ ವಿಷಯದಲ್ಲಿ ಶಿಕ್ಷಣದ ಆವಶ್ಯಕತೆಯೇ ಇಲ್ಲ. ಕ್ರಮೇಣ ಒಬ್ಬರನ್ನೊಬ್ಬರು ಅರಿತುಕೊಂಡು ನಿರಾತಂಕದಿಂದ ಮಾತನಾಡತೊಡಗಿದೆವು. ನಾವಿಬ್ಬರೂ ಒಂದೇ ವಯಸ್ಸಿನ

ನೆರಾಗಿದ್ದೆವು. ಆದರೆ ನಾನು ಗಂಡನ ಅಧಿಕಾರವನ್ನು ವಹಿಸಿಕೊಳ್ಳಲು ತಡಮಾಡಲಿಲ್ಲ.

೪

ಪತಿಯ ಅಧಿಕಾರ

ನನ್ನ ಮದುವೆಯಾದ ಸಮಯದಲ್ಲಿ ದಾಂಪತ್ಯ ಪ್ರೇಮ, ಮಿತವ್ಯಯ, ಬಾಲ್ಯ ವಿವಾಹ ಇವೇ ಮುಂತಾದ ವಿಷಯಗಳನ್ನು ಕುರಿತ ಕಿರುಹೊತ್ತಿಗೆಗಳು ಅಚ್ಚಾಗಿ, ಕಾಸಿಗೊಂದರಂತೆಯೋ ಕಾಲಾಣೆಗೆ ಒಂದರಂತೆಯೋ (ಈಗ ಸರಿಯಾಗಿ ನೆನಪಿಲ್ಲ) ಮಾರಾಟವಾಗುತ್ತಿದ್ದವು. ಅವು ನನ್ನ ಕೈಗೆ ಸಿಕ್ಕಿದಾಗ ನಾನು ಅವುಗಳನ್ನು ಮೊದಲಿನಿಂದ ಕೊನೆಯವರೆಗೆ ಓದುತ್ತಿದ್ದೆನು. ನನಗೆ ಇಷ್ಟವಿಲ್ಲದುದನ್ನು ಮರೆಯುವುದು, ಒಪ್ಪಿಗೆಯಾದುದನ್ನು ಆಚರಿಸುವುದು ನನ್ನ ಸ್ವಭಾವವಾಗಿತ್ತು. ಏಕಪತ್ನೀವ್ರತ ಪತಿಯ ಧರ್ಮವೆಂದು ಅದರಲ್ಲಿ ಓದಿದೆನು. ಸರಿ, ಅದು ನನ್ನ ಹೃದಯದ ಮೇಲೆ ಅಚ್ಚಳಿಯದ ಪ್ರಭಾವ ಬೀರಿತು. ಸತ್ಯಪ್ರೇಮ ನನ್ನ ಸ್ವಭಾವದಲ್ಲಿಯೇ ಇತ್ತು. ಆದುದರಿಂದ ಪತ್ನಿಗೆ ದ್ರೋಹಮಾಡುವ ಪ್ರಶ್ನೆಯೇ ಇರಲಿಲ್ಲ. ಅಂತಹ ಬಾಲ್ಯದಲ್ಲಿ ಏಕ ಪತ್ನೀವ್ರತ ಭಂಗಕ್ಕೆ ಅವಕಾಶವೆಲ್ಲಿಯದು ?

ಆದರೆ ಈ ಒಳ್ಳೆಯ ವಿಚಾರದಿಂದಲೂ ಒಂದು ಕೆಟ್ಟ ಪರಿಣಾಮ ಉಂಟಾಯಿತು. ನಾನು ಏಕ ಪತ್ನೀವ್ರತ ಪಾಲನೆಯನ್ನು ಮಾಡಿದಮೇಲೆ ನನ್ನ ಹೆಂಡತಿಯೂ ಏಕಪತೀವ್ರತ ಪಾಲನೆಯನ್ನು ಮಾಡಬೇಕು. ಈ ವಿಚಾರ ಹೊಳೆದ ಕೂಡಲೇ ನಾನು ಈರ್ಷ್ಯೆ ಮತ್ತು ಅಸಹಿಷ್ಣುತೆಗೆ ಗುರಿಯಾದೆನು. ಅವಳು ಪತಿವ್ರತೆಯಾಗಿರಬೇಕು ಎಂಬುವರ ಬದಲು ಅವಳನ್ನು ಪತಿವ್ರತೆಯಾಗಿಟ್ಟಿರಬೇಕೆಂದು ನನಗೆ ತೋರಿತು. ಅದಕ್ಕಾಗಿ ನಾನು ಅವಳ ಮೇಲೆ ಕಾವಲುಗಾರನಾಗಿರಬೇಕೆಂದುಕೊಂಡೆ. ಹೆಂಡತಿಯ ಮೇಲೆ ಸಂದೇಹಕ್ಕೆ ನನಗೆ ಏನೂ ಕಾರಣವಿರಲಿಲ್ಲ. ಆದರೆ ಈರ್ಷ್ಯೆಗೆ ಕಾರಣ ಬೇಕಿಲ್ಲ. ಅವಳು ಎಲ್ಲೆಲ್ಲಿಗೆ ಹೋಗುತ್ತಾಳೆ ಅದು ನನಗೆ ತಿಳಿಯ ಬೇಕು ; ಅಂದರೆ, ನನ್ನ ಅಪ್ಪಣೆಯಿಲ್ಲದೆ ಆಕೆ ಎಲ್ಲಿಗೂ ಹೋಗಕೂಡದು.

ಈ ಭಾವನೆ ನಮ್ಮಿಬ್ಬರ ನಡುವೆ ದುಃಖಕ್ಕೆ ಮೂಲಕಾರಣವಾಯಿತು. ಅಪ್ಪಣೆಯಿಲ್ಲದೆ ಎಲ್ಲಿಗೂ ಹೋಗಕೂಡದೆಂಬುದು ಆಕೆಗೆ ಒಂದು ಬಗೆಯ ಬಂಧನವಾಯಿತು. ಆದರೆ ಕಸ್ತೂರಿಬಾ ಈ ಬಗೆಯ ಬಂಧನವನ್ನು ಸಹಿಸುವ ಹುಡುಗಿಯಾಗಿರಲಿಲ್ಲ. ಅವಳು ಇಷ್ಟ ಬಂದಾಗ ಇಷ್ಟ ಬಂದಲ್ಲಿಗೆ ಹೋಗಿಬಿಡುತ್ತಿದ್ದಳು ನನ್ನ ಹಠೋಟಿಯನ್ನು ನಾನು ಇನ್ನೂ ಹೆಚ್ಚು ಬಿಗಿಪಡಿಸಿದೆನು. ಆಕೆ ಮತ್ತೂ ಹೆಚ್ಚು ಸ್ವತಂತ್ರಳಾದಳು. ಇದರಿಂದ ನನ್ನ ಕೋಪ ಹೆಚ್ಚಿತು. ಒಬ್ಬರೊಂದಿಗೆ ಒಬ್ಬರು ಮಾತನಾಡದೇ ಇರುವುದೇ ಬಾಲದಂಪತಿಗಳಾದ ನಮ್ಮ ನಿತ್ಯ ನಿಯಮವಾಯಿತು. ಕಸ್ತೂರಿಬಾಯಿಯ ಸ್ವತಂತ್ರ ಪ್ರವೃತ್ತಿ ದೋಷರಹಿತವಾದುದೆಂದು ನನಗೆ ಈಗ ತೋರುತ್ತದೆ. ನಿರ್ದೋಷಿಯಾದ ಒಬ್ಬ ಹುಡುಗಿ, ದೇವಾಲಯಕ್ಕೆ ಹೋಗುವುದನ್ನಾಗಲೀ ಗೆಳತಿಯರ ಮನೆಗೆ ಹೋಗುವುದನ್ನಾಗಲೀ ಅಡ್ಡಿ ಪಡಿಸಿದರೆ ಹೇಗೆ ಸಹಿಸಿಯಾಳು ? ಅವಳನ್ನು ತಡೆಯಲು ನನಗೆ ಅಧಿಕಾರ ವಿದ್ದರೆ ನನ್ನನ್ನು ತಡೆಯಲು ಅವಳಿಗೆ ಏಕೆ ಅಧಿಕಾರವಿಲ್ಲ ? ಇದು ಈ ದಿನ ನನಗೆ ಸ್ಪಷ್ಟವಾಗಿದೆ. ಆದರೆ ಆಗ ನಾನು ಗಂಡನ ಅಧಿಕಾರವನ್ನು ನಡೆಸಬೇಕೆಂದಿದ್ದೆ.

ನಮ್ಮ ಗಾರ್ಹಸ್ಥ್ಯ ಜೀವನ, ಹೀಗೆ ಯಾವಾಗಲೂ ಕಹಿಯೇ ಆಗಿದ್ದಿ ತೆಂದು ವಾಚಕರು ಭಾವಿಸದಿರಲಿ. ನನ್ನ ನಿಷ್ಠುರತೆಗೆ ನನ್ನ ಪ್ರೇಮವೇ ಮೂಲ. ನನ್ನ ಪತ್ನಿಯನ್ನು ಆದರ್ಶ ಸ್ತ್ರೀಯಾಗಿ ಮಾಡಬೇಕೆಂಬುದು ನನ್ನ ಇಚ್ಛೆಯಾಗಿತ್ತು ನನ್ನ ಹೆಂಡತಿ ಶುದ್ಧ ಜೀವನ ನಡೆಸಬೇಕು. ನಾನು ಕಲಿಯುವುದನ್ನು ಅವಳೂ ಕಲಿಯಬೇಕು. ನಾನು ಓದುವುದನ್ನು ಅವಳೂ ಓದಬೇಕು ; ಅವಳ ಬಾಳು ಚಿಂತನೆ ನನ್ನದರೊಂದಿಗೆ ಐಕ್ಯವಾಗ ಬೇಕು, ಎಂಬುದೇ ನನ್ನ ತೀವ್ರ ಆಸೆಯಾಗಿತ್ತು.

ಕಸ್ತೂರಿಬಾಯಿಗೂ ಈ ವಿಧವಾದ ಭಾವನೆಗಳಿದ್ದುವೋ ಎಂಬುದು ನನಗೆ ತಿಳಿಯದು. ಆಕೆ ನಿರಕ್ಷರಳು. ಸ್ವತಂತ್ರ ಮತ್ತು ಸರಳ ಸ್ವಭಾವ ವುಳ್ಳವಳು. ಹಿಡಿದ ಕೆಲಸವನ್ನು ಸಾಧಿಸುವವಳು. ನನ್ನೊಂದಿಗಂತೂ ಮಿತಭಾಷಿ. ತನ್ನ ಅಜ್ಞಾನವನ್ನು ಕುರಿತು ಅವಳು ಎಂದೂ ಅಸಂತುಷ್ಟ ಗಳಾರಲಿಲ್ಲ. ನಾನು ಓದುತ್ತಿದ್ದುದನ್ನು ಕಂಡು ತಾನೂ ಓದಬೇಕೆಂಬ

ಸಾಹಸಮಾಡಲು ಅವಳಿಗೆ ಎಂದೂ ಉತ್ಸಾಹ ಬಂದುದು ನನಗೆ ಜ್ಞಾಪಕವಿಲ್ಲ. ಆದುದರಿಂದ ನನ್ನ ಈ ತೀವ್ರ ಆಸೆ ಏಕಪಕ್ಷೀಯವಾಗಿತ್ತೆಂದು ನಾನು ಭಾವಿಸುತ್ತೇನೆ. ನನ್ನ ವಿಷಯಸುಖ ಪೂರ್ಣವಾಗಿ ಒಬ್ಬ ಸ್ತ್ರೀಯಲ್ಲಿ ಕೇಂದ್ರಿತವಾಗಿತ್ತು. ಅದು ಪ್ರತಿಫಲಿತವಾಗಬೇಕೆಂಬುದು ನನ್ನ ಆಸೆಯಾಗಿತ್ತು. ಒಂದು ವೇಳೆ ಪ್ರತಿಫಲಿತವಾಗದಿದ್ದರೂ ಇಬ್ಬರ ಪೈಕಿ ಒಬ್ಬರಲ್ಲಿಯಾದರೂ ಪ್ರೇಮ ಜಾಗ್ರತಿಯಿದ್ದುದರಿಂದ ಅದು ಶಮನ ಹೊಂದದ ವ್ಯಸನವಾಗಿರಲಿಲ್ಲ.

ನನ್ನ ಹೆಂಡತಿಯಲ್ಲಿ ನಾನು ಅತಿ ವಿಷಯಾಸಕ್ತನಾಗಿದ್ದನೆಂದೇ ಹೇಳಬೇಕು. ಶಾಲೆಯಲ್ಲಿದ್ದಾಗಲೂ ಅವಳದೇ ಧ್ಯಾನ; ರಾತ್ರಿ ಯಾವಾಗ ಆದೀತು, ನಾವು ಯಾವಾಗ ಒಟ್ಟುಗೂಡುವೆವು ಎಂಬುವೇ ಯೋಚನೆ. ಒಬ್ಬರನ್ನೊಬ್ಬರು ಬಿಟ್ಟಿರುವುದು ಅಸಹನೀಯವಾಗಿತ್ತು. ಆಕೆಯೊಂದಿಗೆ ಸಲ್ಲಾಪ ಮಾಡುತ್ತಾ ರಾತ್ರಿ ಬಹಳ ಹೊತ್ತಿನವರೆಗೆ ಆಕೆಯನ್ನು ಎಚ್ಚರವಾಗಿಟ್ಟಿರುತ್ತಿದ್ದೆನು. ಈ ಆಸಕ್ತಿಯ ಜತೆಗೇ ನನ್ನಲ್ಲಿ, ಚೇತನಗೊಂಡ ಕರ್ತವ್ಯಜ್ಞಾನ ಇಲ್ಲದೆಹೋಗಿದ್ದರೆ, ನಾನು ರೋಗಿಯಾಗಿ ಅಕಾಲಮರಣಕ್ಕೆ ತುತ್ತಾಗಬೇಕಾಗುತ್ತಿದ್ದಿತು, ಅಥವಾ ಜಗತ್ತಿಗೆ ಭಾರವಾಗಿ ವ್ಯರ್ಥಜೀವನವನ್ನು ಕಳೆಯಬೇಕಾಗುತ್ತಿದ್ದಿತು. ಆದರೆ ಸೂರ್ಯೋದಯವಾದ ಕೂಡಲೇ ನಾನು ನಿಯಮಿತ ಕರ್ತವ್ಯಗಳನ್ನು ಮಾಡಬೇಕಾಗಿತ್ತು. ಯಾರಿಗೂ ಸುಳ್ಳನ್ನಂತೂ ಹೇಳುವ ಪ್ರಸಂಗವೇ ಇರಲಿಲ್ಲ. ಈ ಒಂದು ಅಂಶ ನನ್ನನ್ನು ಅನೇಕ ಅಪಾಯಗಳಿಂದ ಪಾರುಮಾಡಿತು.

ಕಸ್ತೂರಿಬಾ ನಿರಕ್ಷರಳೆಂದು ಮೇಲೆ ಹೇಳಿದೆನಷ್ಟೆ. ಆಕೆಗೆ ವಿದ್ಯೆಯನ್ನು ಹೇಳಿಕೊಡಬೇಕೆಂದು ನನಗೆ ಬಹಳ ಇಚ್ಛೆಯಿದ್ದರೂ, ನನ್ನ ವಿಷಯವಾಸನೆ ಅವಕ್ಕೆಲ್ಲಿ ಅವಕಾಶ ಕೊಟ್ಟೀತು? ನಾನು ಆಕೆಗೆ ಒತ್ತಾಯದಿಂದ ರಾತ್ರಿಯ ಹೊತ್ತು ಮಾತ್ರ ಪಾಠ ಹೇಳಿಕೊಡಬಹುದಾಗಿದ್ದಿತು. ತಾಯಿ ತಂದೆಯರ ಎದುರಿಗೆ ಪತ್ನಿಯೊಂದಿಗೆ ಮಾತನಾಡುವುದಿರಲಿ; ಆಕೆಯನ್ನು ಕಣ್ಣೆತ್ತಿ ನೋಡಲೂ ಸಹ ಸಾಧ್ಯವಿರಲಿಲ್ಲ. ಆ ಕಾಲದಲ್ಲಿ ಕಾಥೆವಾಡದಲ್ಲಿ ವಿಚಿತ್ರ ಅರ್ಥಹೀನ, ಅನಾಗರಿಕ ಘೋಷಾ ಪದ್ಧತಿಯಿದ್ದಿತು. ಈಗಲೂ ಬಹಳ ಮಟ್ಟಿಗೆ ಇದ್ದೇ ಇದೆ. ಈ ಕಾರಣಗಳಿಂದ ಹೆಂಡತಿಗೆ ಪಾಠ ಹೇಳಿ

ಕೊಡಲು ನನಗೆ ಬಹಳ ಅಡಚಣೆಗಳಿದ್ದವು. ಈ ಕಾರಣದಿಂದ ನನ್ನ ಯೌವ್ವನದ ಕಾಲದಲ್ಲಿ ಕಸ್ತೂರಿಬಾಯಿಗೆ ಪಾಠ ಹೇಳಿಕೊಡಲು ಮಾಡಿದ ಪ್ರಯತ್ನವೆಲ್ಲ ವ್ಯರ್ಥವಾಯಿತೆಂದೇ ಹೇಳಬೇಕು. ನಾನು ಇಂದ್ರಿಯೋಪಭೋಗದ ನಿದ್ರೆಯಿಂದ ಜಾಗೃತನಾಗುವ ವೇಳೆಗೆ ಸಾರ್ವಜನಿಕ ಜೀವನದಲ್ಲಿ ಪದಾರ್ಪಣೆ ಮಾಡಿದ್ದುದರಿಂದ ನನಗೆ ವಿರಾಮವೇ ದೊರಕಲಿಲ್ಲ. ಶಿಕ್ಷಕರಿಂದ ಆಕೆಗೆ ಪಾಠ ಹೇಳಿಸಲು ಮಾಡಿದ ಪ್ರಯತ್ನಗಳೂ ವಿಫಲವಾದುವು. ಇದರ ಫಲ ಕಸ್ತೂರಿಬಾಯಿಗೆ ಸಾಧಾರಣ ಗುಜರಾತಿ ಓದುವುದು ಬರೆಯುವುದರ ಹೊರತು, ಹೆಚ್ಚು ವಿದ್ಯೆ ಬರಲಿಲ್ಲ. ನನ್ನ ಪ್ರೇಮ, ವಿಷಯವಾಸನೆಯಿಂದ ಬಿಡುಗಡೆ ಹೊಂದಿದ್ದರೆ, ಇಂದು ಆಕೆ ವಿದ್ಯಾವಂತೆಯಾಗಿರುತ್ತಿದ್ದಳು. ಆಗ ಕಲಿಯುವುದರಲ್ಲಿ ಅವಳಿಗಿದ್ದ ಅನಾಸ್ಥೆಯನ್ನು ನಾನು ಜಯಿಸಿರುತ್ತಿದ್ದೆನು. ಈ ಜಗತ್ತಿನಲ್ಲಿ ಶುದ್ಧ ಪ್ರೇಮಕ್ಕೆ ಸಾಧ್ಯವಿಲ್ಲವಾದುದು ಯಾವುದೂ ಇಲ್ಲವೆಂಬುದು ನನಗೆ ಗೊತ್ತು.

ನಾನು ವಿಷಯಾಸಕ್ತನಾಗಿದ್ದರೂ, ಅದರ ದುಷ್ಪರಿಣಾಮದಿಂದ ಮುಕ್ತನಾದುದಕ್ಕೆ ಒಂದು ಕಾರಣವನ್ನು ಹಿಂದೆಯೇ ಸೂಚಿಸಿದೆನು. ಈ ಸಂಬಂಧದಲ್ಲಿ ಮತ್ತೊಂದು ಮಾತನ್ನೂ ಹೇಳತಕ್ಕುದು ಉಚಿತವಾಗಿದೆ. ಯಾರ ಉದ್ದೇಶಗಳು ನಿಷ್ಕಲ್ಮಷವಾಗಿರುತ್ತವೆಯೋ ಅವರನ್ನು ಕೊನೆಗೆ ಪರಮೇಶ್ವರನೇ ರಕ್ಷಿಸುತ್ತಾನೆಂಬುದು ಅನೇಕ ದೃಷ್ಟಾಂತಗಳಿಂದ ನನಗೆ ನಂಬಿಕೆಯಾಗಿದೆ. ಹಿಂದೂ ಸಮಾಜದಲ್ಲಿ ಬಾಲ್ಯವಿವಾಹದ ಕ್ರೂರ ಪದ್ಧತಿ ಇರುವಂತೆ, ಅದರ ಕೇಡನ್ನು ಕಡಿಮೆ ಮಾಡುವ ಮತ್ತೊಂದು ಪದ್ಧತಿಯೂ ಇದೆ. ನೂತನ ವಧೂವರರು ಹೆಚ್ಚು ಕಾಲ ಒಟ್ಟಿಗೆ ಇರಲು ತಂದೆ ತಾಯಿಗಳು ಅವಕಾಶ ಕೊಡುವುದಿಲ್ಲ. ಹೆಂಡತಿ ಅರ್ಧಕ್ಕಿಂತ ಹೆಚ್ಚು ಕಾಲವನ್ನು ತವರು ಮನೆಯಲ್ಲಿ ಕಳೆಯುತ್ತಾಳೆ. ನಮ್ಮ ವಿಷಯದಲ್ಲಿಯೂ ಹೀಗೆಯೇ ಆಯಿತು. ವಿವಾಹದ ತರುವಾಯ ಐದು ವರುಷಗಳಲ್ಲಿ (೧೩ ರಿಂದ ೧೮) ನಾವು ಜತೆಯಾಗಿದ್ದ ಕಾಲ ಒಟ್ಟಿನಲ್ಲಿ ಮೂರು ವರುಷಕ್ಕಿಂತ ಹೆಚ್ಚಲ್ಲ, ಆರೆಂಟು ತಿಂಗಳು ನಾವು ಜೊತೆಗೂಡಿ ಇರುವುದರೊಳಗೆ ಕಸ್ತೂರಿಬಾಯಿಗೆ ತವರು ಮನೆಯಿಂದ ಕರೆ ಬರುತ್ತಿತ್ತು. ಹೀಗೆ ಅವಳನ್ನು

ಕರೆದುಕೊಂಡು ಹೋಗುತ್ತಿದ್ದುದು, ಆಗ ನನಗೆ ಬಹಳ ಅಪ್ರಿಯವಾಗಿತ್ತು. ಆದರೆ ಅದರಿಂದ ನಾವಿಬ್ಬರೂ ಬದುಕಿಕೊಂಡೆವು. ನನ್ನ ಹದಿನೆಂಟನೆಯ ವಯಸ್ಸಿನಲ್ಲಿ ನಾನು ಇಂಗ್ಲೆಂಡಿಗೆ ಹೋದೆನು. ಅದರಿಂದ ನಮ್ಮಿಬ್ಬರಿಗೂ ಸತ್ಪರಿಣಾಮಕಾರಿಯಾದ ದೀರ್ಘ ವಿಯೋಗವುಂಟಾಯಿತು. ಇಂಗ್ಲೆಂಡಿನಿಂದ ಹಿಂದಿರುಗಿದ ಮೇಲೆಯೂ ನಾವು ಆರು ತಿಂಗಳುಗಳಿಗಿಂತ ಹೆಚ್ಚಾಗಿ ಒಟ್ಟಿಗೆ ಇರಲಿಲ್ಲ. ಏಕೆಂದರೆ ನಾನು ಬೊಂಬಾಯಿಗೂ ರಾಜಕೋಟೆಗೂ ಓಡಾಡುತ್ತಲೇ ಇರಬೇಕಾಗಿತ್ತು. ಇದಾದನಂತರ ದಕ್ಷಿಣ ಆಫ್ರಿಕದಿಂದ ನನಗೆ ಕರೆ ಬಂತು. ಆದರೆ ಆ ವೇಳೆಗೆ ವಿಷಯಾಸಕ್ತಿಯ ನಿದ್ರೆಯಿಂದ ನಾನು ಬಹಳ ಮಟ್ಟಿಗೆ ಎಚ್ಚತ್ತಿದ್ದೆನು.

※

ಪ್ರೌಢಶಾಲೆಯಲ್ಲಿ

ನನ್ನ ಮದುವೆಯಾದ ಕಾಲಕ್ಕೆ ನಾನು ಪ್ರೌಢಶಾಲೆಯಲ್ಲಿ ಓದುತ್ತಿದ್ದೆನೆಂದು ಹಿಂದೆಯೇ ಹೇಳಿದ್ದೇನೆ. ಆ ಕಾಲದಲ್ಲಿ ನಾನೂ ಮೂವರು ಸಹೋದರರೂ, ಒಂದೇ ಶಾಲೆಯಲ್ಲಿ ಓದುತ್ತಿದ್ದೆವು. ನಮ್ಮ ಹಿರಿಯಣ್ಣ ಬಹಳ ಮೇಲಿನ ತರಗತಿಯಲ್ಲಿದ್ದನು. ನನಗಿಂತ ಹಿರಿಯವನಾದ ನನ್ನ ಜತೆಯಲ್ಲಿಯೇ ಮದುವೆಯಾದ ಅಣ್ಣ, ಒಂದು ತರಗತಿ ಮಾತ್ರ ಮುಂದಿದ್ದನು. ವಿವಾಹದ ಪರಿಣಾಮವಾಗಿ ನಮ್ಮಿಬ್ಬರಿಗೂ ಶಾಲೆಯ ಒಂದು ವರ್ಷ ನಷ್ಟವಾಯಿತು. ನಮ್ಮಣ್ಣನಿಗೆ ಇದರ ಪರಿಣಾಮ ಇನ್ನೂ ಕೆಡಕಾಯಿತು. ವಿವಾಹದ ತರುವಾಯ ಶಾಲೆಯಲ್ಲಿರುವುದೇ ಅವನಿಗೆ ಸಾಧ್ಯವಾಗಲಿಲ್ಲ. ಎಷ್ಟು ಮಂದಿ ನವಯುವಕರು ಇಂತಹ ಅನಿಷ್ಟ ಪರಿಣಾಮವನ್ನು ಅನುಭವಿಸಬೇಕಾಗುವುದೋ ಪರಮಾತ್ಮನಿಗೇ ಗೊತ್ತು. ಹಿಂದೂ ಸಮಾಜದಲ್ಲಿ ಮಾತ್ರವೇ ಹೀಗೆ ವಿವಾಹವೂ ವಿದ್ಯಾಭ್ಯಾಸವೂ ಒಟ್ಟಿಗೆ ಸಾಗುತ್ತದೆ.

ನನ್ನ ವಿದ್ಯಾಭ್ಯಾಸ ಮುಂದುವರಿಯಿತು. ನಾನು ಪ್ರೌಢಶಾಲೆಯಲ್ಲಿ ದಡ್ಡನೆಂದು ಪರಿಗಣಿಸಲ್ಪಟ್ಟಿರಲಿಲ್ಲ. ನಾನು ಉಪಾಧ್ಯಾಯರ ಪ್ರೀತಿ

ಯನ್ನು ಯಾವಾಗಲೂ ಸಂಪಾದಿಸಿದ್ದೆನು. ವಿದ್ಯಾರ್ಥಿಗಳ ವ್ಯಾಸಂಗ ಮತ್ತು ನಡತೆಯನ್ನು ಕುರಿತ ಪ್ರಗತಿ ಪತ್ರಗಳನ್ನು ಪ್ರತಿ ವರ್ಷವೂ ಅವರ ತಂದೆತಾಯಿಗಳಿಗೆ ಕಳುಹಿಸಲಾಗುತ್ತಿತ್ತು. ಅವುಗಳಲ್ಲಿ, ನನ್ನ ವ್ಯಾಸಂಗ ಮತ್ತು ನಡತೆ ಸರಿಯಾಗಿರಲಿಲ್ಲವೆಂದು ನಾನು ಎಂದೂ ಹೇಳಿಸಿಕೊಳ್ಳಲಿಲ್ಲ. ಎರಡನೆಯ ತರಗತಿಯಲ್ಲಿ ತೇರ್ಗಡೆಯಾದ ಮೇಲೆ ನನಗೆ ಬಹುಮಾನ ಸಹ ಬಂದಿತು. ಐದು ಮತ್ತು ಆರನೆಯ ತರಗತಿಗಳಲ್ಲಿ ನನಗೆ ಕ್ರಮವಾಗಿ ನಾಲ್ಕು ಮತ್ತು ಹತ್ತು ರೂಪಾಯಿಗಳ ವಿದ್ಯಾರ್ಥಿ ವೇತನ ಸಹ ದೊರಕಿತು. ಇದಕ್ಕೆ ನನ್ನ ಯೋಗ್ಯತೆಗಿಂತ ಅದೃಷ್ಟವೇ ಹೆಚ್ಚು ಕಾರಣವೆಂದು ಹೇಳಬೇಕು. ಏಕೆಂದರೆ ಈ ವಿದ್ಯಾರ್ಥಿ ವೇತನವನ್ನು ಕಾಥೆವಾಡದ ಸೋರಠ್ ಜಿಲ್ಲೆಯ ಯೋಗ್ಯ ವಿದ್ಯಾರ್ಥಿಗಳಿಗೆ ಮಾತ್ರ ಕೊಡುತ್ತಿದ್ದರು. ನಲವತ್ತು ಐವತ್ತು ವಿದ್ಯಾರ್ಥಿಗಳಿದ್ದ ತರಗತಿಯಲ್ಲಿ ಸೋರಠ್ ಜಿಲ್ಲೆಯವರು ಎಷ್ಟು ಇದ್ದಿರಬಹುದು!

ನನ್ನ ಯೋಗ್ಯತೆಯ ವಿಷಯದಲ್ಲಿ ನನಗೇ ಉತ್ತಮ ಅಭಿಪ್ರಾಯ ವಿರಲಿಲ್ಲವೆಂದು ನನ್ನ ನೆನಪು. ಬಹುಮಾನವಾಗಲೀ ವಿದ್ಯಾರ್ಥಿ ವೇತನವಾಗಲೀ ದೊರೆತಾಗ, ನನಗೇ ಆಶ್ಚರ್ಯವಾಗುತ್ತಿತ್ತು. ಆದರೆ ನನ್ನ ನಡತೆಯನ್ನು ಮಾತ್ರ ನಾನು ಬಹು ಎಚ್ಚರಿಕೆಯಿಂದ ಕಾಯ್ದುಕೊಂಡಿದ್ದೆನು. ಸಣ್ಣ ಕಳಂಕವೂ ನನ್ನ ಕಣ್ಣಿನಲ್ಲಿ ನೀರು ತರುತ್ತಿತ್ತು. ಬಯ್ಯಿಸಿಕೊಂಡಾಗ ಅಥವಾ ಬೈಗಳಕ್ಕೆ ನಾನು ಅರ್ಹನೆಂದು ಉಪಾಧ್ಯಾಯರಿಗೆ ತೋರಿದಾಗ, ಅದನ್ನು ಸಹಿಸುವುದಕ್ಕೆ ನನಗೆ ಆಗುತ್ತಿರಲಿಲ್ಲ. ಒಂದು ಸಲ ಏಟು ತಿಂದುದೂ ನನಗೆ ಜ್ಞಾಪಕವಿದೆ. ಏಟು ಬಿದ್ದುದರಿಂದ ನನಗೆ ಅಷ್ಟು ದುಃಖವಾಗಲಿಲ್ಲ. ನಾನು ಏಟಿಗೆ ಅರ್ಹನೆಂದು ಭಾವಿಸಿದರಲ್ಲಾ ಎಂದು ನನಗೆ ಬಹಳ ವ್ಯಥೆಯಾಯಿತು. ನಾನು ಬಹಳವಾಗಿ ಅತ್ತೆನು. ಇದು ನಡೆದುದು ನಾನು ಮೊದಲನೆಯ ಅಥವಾ ಎರಡನೆಯ ತರಗತಿಯಲ್ಲಿದ್ದಾಗ. ನಾನು ಏಳನೆಯ ತರಗತಿಯಲ್ಲಿದ್ದಾಗ ಅಂತಹ ಮತ್ತೊಂದು ಘಟನೆ ನಡೆಯಿತು. ದೊರಾಬ್ಜೀ ಎದುಲ್‌ಜೀ ಜಿಮಿ, ಆಗ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದರು. ಅವರು ನಿಯಮಪಾಲಕರು ವಿಧಿಪೂರ್ವಕ ಕಾರ್ಯ ಮಾಡುವವರು ಉತ್ತಮ ಉಪಾಧ್ಯಾಯರು ಎಂದು ವಿದ್ಯಾರ್ಥಿಗಳಲ್ಲಿ

ಪ್ರೀತಿ ಗಳಿಸಿದ್ದರು. ಅವರು ಮೇಲಿನ ತರಗತಿಯ ವಿದ್ಯಾರ್ಥಿಗಳಿಗೆ, ವ್ಯಾಯಾಮವನ್ನೂ ಕ್ರಿಕೆಟನ್ನೂ ಕಡ್ಡಾಯವಮಾಡಿದ್ದರು. ನನಗೆ ಅವು ಎರಡೂ ಹಿಡಿಸುತ್ತಿರಲಿಲ್ಲ. ಕಡ್ಡಾಯಗೊಳಿಸುವುದಕ್ಕೆ ಮುಂಚೆ, ಕ್ರಿಕೆಟ್ ಅಥವಾ ಫುಟ್‌ಬಾಲ್ ಮುಂತಾದ ಯಾವ ವ್ಯಾಯಾಮದಲ್ಲಿಯೂ ನಾನು ಭಾಗವಹಿಸುತ್ತಿರಲಿಲ್ಲ. ಹೀಗೆ ನಾನು ಒಂಟಿಯಾಗಿರಲು ನನ್ನ ಸಂಕೋಚ ಸ್ವಭಾವವೂ ಒಂದು ಕಾರಣವಾಗಿತ್ತು. ಅದು ತಪ್ಪು ಎಂಬುದು ನನಗೆ ಈಗ ಗೊತ್ತಾಗಿದೆ. ವ್ಯಾಯಾಮಕ್ಕೂ, ಶಿಕ್ಷಣಕ್ಕೂ ಏನೂ ಸಂಬಂಧವಿಲ್ಲವೆಂದು ನಾನು ಆಗ ತಪ್ಪಾಗಿ ಭಾವಿಸಿದ್ದೆನು. ಪಾಠಕ್ರಮದಲ್ಲಿ, ವ್ಯಾಯಾಮ ಅಥವಾ ಶಾರೀರಕ ಶಿಕ್ಷಣಕ್ಕೂ ಸಹ ಬುದ್ಧಿಯ ವಿಕಾಸಕ್ಕೆ ಹೇಗೋ ಹಾಗೆ, ಪ್ರಾಶಸ್ತ್ಯವನ್ನು ಕೊಡಬೇಕೆಂಬುದು ಈಗ ನನಗೆ ತಿಳಿದಿದೆ.

ಆದರೂ ವ್ಯಾಯಾಮಕ್ಕೆ ಹೋಗದುದರಿಂದ ನನಗೇನೂ ನಷ್ಟವಾಗಲಿಲ್ಲವೆಂದು ನನ್ನ ಮತ. ಶುದ್ಧವಾದ ಗಾಳಿಯಲ್ಲಿ ಸಂಚಾರಮಾಡುವುದು ದೇಹಕ್ಕೆ ಒಳ್ಳೆಯದೆಂದು ಪುಸ್ತಕಗಳಲ್ಲಿ ಓದಿದ್ದುದರಿಂದ ಅದು ನನಗೆ ಒಪ್ಪಿಗೆಯಾಗಿ, ನಾನು ಗಾಳಿ ಸಂಚಾರ ಮಾಡತೊಡಗಿದ್ದುದೆ, ಇದಕ್ಕೆ ಕಾರಣ. ಈ ಅಭ್ಯಾಸ ನನ್ನಲ್ಲಿ ಈಗಲೂ ಇದೆ. ಈ ಸಂಚಾರಗಳಿಂದ ನನ್ನ ಶರೀರ ಸಾಕಷ್ಟು ಗಟ್ಟಿಯಾಯಿತು.

ನಾನು ತಂದೆಯವರ ಶುಶ್ರೂಷೆ ಮಾಡಲು ಪ್ರಬಲವಾದ ಇಚ್ಛೆ ಹೊಂದಿದ್ದುದು, ವ್ಯಾಯಾಮದಲ್ಲಿ ನನಗೆ ಇಚ್ಛೆ ಇಲ್ಲದಿದ್ದುದಕ್ಕೆ ಎರಡನೆಯ ಕಾರಣ. ವ್ಯಾಯಾಮ ಮತ್ತು ಕ್ರಿಕೆಟ್ ಕಡ್ಡಾಯವಾದ ಮೇಲೆ, ಈ ಸೇವೆಗೆ ವಿಘ್ನ ಒದಗಿತು. ತಂದೆಯವರ ಸೇವೆ ಮಾಡಲು ನನಗೆ ಅವಕಾಶವಾಗುವಂತೆ ವ್ಯಾಯಾಮದಿಂದ ನನಗೆ ವಿನಾಯಿತಿ ಕೊಡಬೇಕೆಂದು ನಾನು ಜಿಮಿಯವರನ್ನು ಬೇಡಿಕೊಂಡೆನು. ಆದರೆ ಜಿಮಿಯವರು ನನ್ನ ಮಾತನ್ನು ಅಂಗೀಕರಿಸಲಿಲ್ಲ. ಒಂದು ಶನಿವಾರ ನಮ್ಮ ಶಾಲೆ ಬೆಳಗ್ಗೆ ಇತ್ತು. ಮಧ್ಯಾಹ್ನ ನಾಲ್ಕು ಗಂಟೆಗೆ ಮನೆಯಿಂದ ಶಾಲೆಗೆ ವ್ಯಾಯಾಮಕ್ಕೆ ಹೋಗಬೇಕಾಗಿತ್ತು. ನನ್ನಲ್ಲಿ ಗಡಿಯಾರ ಇರಲಿಲ್ಲ. ಅಂತರಿಕ್ಷ ಮೋಡಗಳಿಂದ ಆಚ್ಛಾದಿತವಾಗಿತ್ತು. ನಾನು ಶಾಲೆ ಸೇರುವ ಹೊತ್ತಿಗೆ ವಿದ್ಯಾರ್ಥಿಗಳೆಲ್ಲ ಹೊರಟೇ ಹೋಗಿದ್ದರು. ಮರುದಿನ ಜಿಮಿಯವರು ಹಾಜರಿ ಪಟ್ಟಿಯನ್ನು

ನೋಡಿದಾಗ, ನನ್ನ ಗೈರುಹಾಜರಿ ಗೊತ್ತಾಯಿತು. ಗೈರುಹಾಜರಿಯ ಕಾರಣವನ್ನು ಕೇಳಿದರು. ನಾನು ನಡೆದ ಸಂಗತಿಯನ್ನು ಹೇಳಿದೆನು. ನನ್ನ ಮಾತನ್ನು ಅವರು ನಂಬದೆ ನನಗೆ ಒಂದು ಆಣೆಯೋ ಎರಡು ಆಣೆಯೋ (ಮರೆತುಹೋಗಿದೆ) ದಂಡ ಹಾಕಿದರು.

ಇದರಲ್ಲಿ ನನಗೆ ದುಃಖದ ಸಂಗತಿಯೆಂದರೆ ನಾನು ಸುಳ್ಳು ಹೇಳಿದೆನೆಂದು ನನಗೆ ಶಿಕ್ಷೆಯಾದುದು. ನಾನು ಸುಳ್ಳು ಹೇಳಿಲ್ಲವೆಂದು ಸಿದ್ಧಗೊಳಿಸುವುದೆಂತು ? ದಾರಿ ಇರಲಿಲ್ಲ. ನಾನು ಬಹಳ ಸಂಕಟದಿಂದ ಅತ್ತೆನು. ಸತ್ಯವನ್ನು ಹೇಳುವವನು, ಸತ್ಯವನ್ನು ಆಚರಿಸುವವನು ಬಹಳ ಎಚ್ಚರಿಕೆಯ ಮನುಷ್ಯನಾಗಿರಬೇಕೆಂಬುದನ್ನೂ ಅರಿತೆ. ನನ್ನ ವ್ಯಾಸಂಗ ಕಾಲದಲ್ಲಿ ನಾನು ಅಜಾಗರೂಕನಾಗಿದ್ದುದು ಅದೇ ಮೊದಲು ಅದೇ ಕೊನೆ. ನಾನು ತೆತ್ತ ದಂಡವನ್ನು ಹಿಂದಕ್ಕೆ ಪಡೆದೆನೆಂದು ನನಗೆ ಅಸ್ಪಷ್ಟವಾದ ನೆನಪಿದೆ.

ಕೊನೆಗೆ ವ್ಯಾಯಾಮದಿಂದ ವಿನಾಯಿತಿ ದೊರಕಿತು. ಶಾಲೆ ಮುಗಿದ ಮೇಲೆ ನಾನು ಮನೆಯಲ್ಲಿ ತಮ್ಮ ಶುಶ್ರೂಷೆಗಾಗಿ ಇರಬೇಕೆಂದು ನಮ್ಮ ತಂದೆ ಮುಖ್ಯೋಪಾಧ್ಯಾಯರಿಗೆ ಪತ್ರ ಬರೆದುದರಿಂದ ನನಗೆ ವ್ಯಾಯಾಮ ತರಗತಿಯಿಂದ ವಿನಾಯಿತಿ ದೊರೆಯಿತು. ವ್ಯಾಯಾಮವನ್ನು ಬಿಟ್ಟುದರಿಂದ ನನಗೇನೂ ನಷ್ಟವಾಗದಿದ್ದರೂ, ಮತ್ತೊಂದು ದುರ್ಲಕ್ಷ್ಯಕ್ಕಾಗಿ ನಾನು ಇಂದಿಗೂ ದಂಡ ತೆರುತ್ತಿದ್ದೇನೆ. ಅಂದವಾದ ಅಕ್ಷರ, ಒಳ್ಳೆಯ ಬರವಣಿಗೆ, ಶಿಕ್ಷಣದ ಆವಶ್ಯಕ ಅಂಶವಲ್ಲವೆಂಬ ಭಾವನೆ ನನಗೆ ಹೇಗೆ ಬಂತೋ ಕಾಣೆ. ಇಂಗ್ಲೆಂಡಿಗೆ ಹೋಗುವವರೆಗೆ ನನ್ನಲ್ಲಿ ಇದೇ ಭಾವನೆ ಇತ್ತು. ಅನಂತರ ದಕ್ಷಿಣ ಆಫ್ರಿಕಕ್ಕೆ ಹೋದ ಮೇಲೆ, ಅಲ್ಲಿ ಸುಶಿಕ್ಷಿತ ಯುವಕರ ಮತ್ತು ವಕೀಲರ ಮುತ್ತು ಪೋಣಿಸಿದಂತಿದ್ದ ಸುಂದರ ಬರವಣಿಗೆ ನೋಡಿ, ನನಗೆ ನಾಚಿಕೆಯೂ ಪಶ್ಚಾತ್ತಾಪವೂ ಉಂಟಾಯಿತು. ಕೆಟ್ಟ ಅಕ್ಷರದ ಬರವಣಿಗೆ ಅಪಕ್ವ ಮತ್ತು ಅಪೂರ್ಣ ಶಿಕ್ಷಣದ ಚಿಹ್ನೆ ಎಂದು ಭಾವಿಸಬೇಕೆಂದು ನಾನು ಅರಿತೆನು. ಈಚೆಗೆ ನನ್ನ ಬರಹವನ್ನು ತಿದ್ದಿಕೊಳ್ಳಬೇಕೆಂದು ಪ್ರಯತ್ನಿಸಿದನು. ಸುಟ್ಟ ಮಡಕೆಗೆ ಹಸಿಮಣ್ಣನ್ನು ಮೆತ್ತಲು ಸಾಧ್ಯವೆ ? ಆದರೆ ಆ ವೇಳೆಗೆ ಕಾಲ ಮೀರಿಹೋಗಿತ್ತು. ಚಿಕ್ಕ ವಯಸ್ಸಿನಲ್ಲಿ ಅಸಡ್ಡೆ ಮಾಡಿದುದನ್ನು, ಇಂದಿನವರೆಗೆ ತಿದ್ದಿಕೊಳ್ಳಲು

ಆಗಲಿಲ್ಲ. ನನ್ನ ಉದಾಹರಣೆಯಿಂದ, ಒಳ್ಳೆಯ ಬರವಣಿಗೆ ಉತ್ತಮ ಶಿಕ್ಷಣದ ಆವಶ್ಯಕವಾದ ಅಂಶನೆಂಬುದನ್ನು ಪ್ರತಿಯೊಬ್ಬ ಯುವಕನೂ ಯುವತಿಯೂ ತಿಳಿದುಕೊಳ್ಳಲಿ. ಅಕ್ಷರ ಬರೆಯುವುದನ್ನು ಕಲಿಸುವುದಕ್ಕೆ ಮುಂಚೆ ಮಕ್ಕಳಿಗೆ ಚಿತ್ರಕಲೆ ಅಭ್ಯಾಸ ಮಾಡಿಸಬೇಕೆಂಬುದು ನನ್ನ ಈಗಿನ ಅಭಿಪ್ರಾಯ. ಪಕ್ಷಿ, ಹೂವು ಮುಂತಾದುವನ್ನು ನೋಡಿ ತಿಳಿದುಕೊಳ್ಳು ವಂತೆ ಮಕ್ಕಳು ಅಕ್ಷರಗಳನ್ನೂ ನೋಡಿ ತಿಳಿದುಕೊಳ್ಳಲಿ. ವಸ್ತುಗಳ ಚಿತ್ರಗಳನ್ನು ಬರೆಯುವಂತೆ, ಅವುಗಳನ್ನು ಬರೆಯುವುದನ್ನು ಕಲಿತ ನಂತರವೇ ಅಕ್ಷರ ಬರೆಯುವುದನ್ನು ಕಲಿತುಕೊಳ್ಳಲಿ. ಆಗ ಅವರ ಬರಹ ಅಂದವಾಗಿ ಮುದ್ದಾಗುತ್ತದೆ.

ನನ್ನ ವಿದ್ಯಾರ್ಥಿ ಜೀವನದ ಮತ್ತೆರಡು ಸ್ಮೃತಿಗಳನ್ನು ಉಲ್ಲೇಖಿಸು ವುದು ಉಚಿತವಾಗಿದೆ. ವಿವಾಹದ ಕಾರಣದಿಂದ ನಾನು ಒಂದು ವರುಷ ವನ್ನು ಕಳೆದುಕೊಂಡಿದ್ದುದು ಸರಿಯಷ್ಟೆ. ಅದನ್ನು ಕೂಡಿಸಿಕೊಳ್ಳಲು ನಮ್ಮ ಉಪಾಧ್ಯಾಯರು ನಾನು ಒಂದೇ ವರುಷದಲ್ಲಿ ಎರಡು ತರಗತಿ ಯನ್ನು ದಾಟಬೇಕೆಂದು ಬಯಸಿದರು. ಸಾಧಾರಣವಾಗಿ ಈ ರಿಯಾಯಿತಿ ಹೆಚ್ಚು ಪರಿಶ್ರಮದಿಂದ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಮಾತ್ರ ದೊರಕುತ್ತಿದ್ದಿತು. ಇದರಿಂದ ನಾನು ಮೂರನೆಯ ತರಗತಿಯಲ್ಲಿ ಆರು ತಿಂಗಳು ಮಾತ್ರ ಇದ್ದು, ಬೇಸಿಗೆಕಾಲದ ಪ್ರಾರಂಭದ ಪರೀಕ್ಷೆಗೆ ಮುಂಚೆ ನಾಲ್ಕನೆಯ ತರಗತಿಗೆ ಮುಂದೊಡಲ್ಪಟ್ಟೆನು. ಈ ತರಗತಿಯಲ್ಲಿ ಬಹು ಮಟ್ಟಿಗೆ ಎಲ್ಲ ವಿಷಯಗಳನ್ನೂ ಇಂಗ್ಲೀಷಿನಲ್ಲಿ ಬೋಧಿಸುತ್ತಿದ್ದರು. ನನಗಂತೂ ಅದು ಸ್ವಲ್ಪವೂ ತಿಳಿಯುತ್ತಿರಲಿಲ್ಲ. ರೇಖಾಗಣಿತ ನಾಲ್ಕನೆಯ ತರಗತಿಯಲ್ಲಿಯೇ ಪ್ರಾರಂಭವಾಗುತ್ತಿದ್ದಿತು. ಮೊದಲೇ ಅದು ನನಗೆ ತಿಳಿಯುತ್ತಿರಲಿಲ್ಲ. ಇಂಗ್ಲೀಷ್ ಮಾಧ್ಯಮವಾದುದರಿಂದ ಇನ್ನೂ ಸ್ವಲ್ಪ ಕಷ್ಟವಾಯಿತು. ಉಪಾಧ್ಯಾಯರೇನೋ ವಿಷಯವನ್ನು ಬಹಳ ಚೆನ್ನಾಗಿ ಬೋಧಿಸುತ್ತಿದ್ದರು. ಆದರೆ ನನಗೆ ಮಾತ್ರ ತಿಳಿಯುತ್ತಿರಲಿಲ್ಲ. ಎಷ್ಟೋ ಸಲ ನನಗೆ ಪೂರ್ಣ ನಿರಾಶೆಯಾಗುತ್ತಿದ್ದಿತು. ಎರಡು ವರುಷಗಳ ಪಾಠ ವನ್ನು ಒಂದು ವರುಷದಲ್ಲಿ ಸಾಧಿಸುವುದು ನನ್ನ ಶಕ್ತಿಗೆ ಮೀರಿದ ಪ್ರಯತ್ನವೆಂದು ಭಾವಿಸಿ ಹಿಂದಕ್ಕೆ ಮೂರನೆಯ ತರಗತಿಗೇ ಹೋಗಿ

ಕುಳಿತುಕೊಳ್ಳಬೇಕೆಂದು ಅನೇಕ ವೇಳೆ ಯೋಚಿಸುತ್ತಿದ್ದೆ. ಹೀಗೆ ಮಾಡಿದರೆ ನನಗೆ ಅವಮಾನವಾಗುವುದಲ್ಲದೆ, ನನ್ನಲ್ಲಿ ವಿಶ್ವಾಸವನ್ನೂ ನಂಬಿಕೆಯನ್ನೂ ಇಟ್ಟು ಶಿಫಾರಸು ಮಾಡಿದ್ದ ಉಪಾಧ್ಯಾಯರಿಗೆ ಅವಮಾನವಾಗುವುದೆಂಬ ಅಂಜಿಕೆ, ನನ್ನನ್ನು ತರಗತಿಯಲ್ಲಿಯೇ ಇರಿಸಿತು. ಬಹಳ ಕಷ್ಟಪಟ್ಟು ನಾನು ಯೂಕ್ಲಿಡ್‌ನ ಹದಿಮೂರನೆಯ ಪ್ರಮೇಯಕ್ಕೆ ಬಂದಾಗ, ಅದು ಅತ್ಯಂತ ಸರಳ ವಿಷಯವೆನ್ನುವುದು ತಟ್ಟನೆ ನನ್ನ ಮನಸ್ಸಿಗೆ ಹೊಳೆಯಿತು. ವಿಚಾರಶಕ್ತಿಯನ್ನು ಶುದ್ಧವಾಗಿ, ಸರಳವಾಗಿ ಪ್ರಯೋಗಿಸಬೇಕಾಗಿರುವ ವಿಷಯವನ್ನು ತಿಳಿಯುವುದರಲ್ಲಿ ತೊಡಕೇನಿದೆ ? ಅಂದಿನಿಂದ ನನಗೆ ರೇಖಾಗಣಿತ ಸುಲಭವಾಯಿತಲ್ಲದೆ, ಇಷ್ಟವೂ ಆಗಿದೆ.

ಸಂಸ್ಕೃತ ನನಗೆ ರೇಖಾಗಣಿತಕ್ಕಿಂತ ಇನ್ನೂ ಹೆಚ್ಚಿನ ಕಷ್ಟವನ್ನು ಕೊಟ್ಟಿತು. ರೇಖಾಗಣಿತದಲ್ಲಿ ಕಂಠಪಾಠ ಮಾಡಬೇಕಾದುದು ಏನೂ ಇರಲಿಲ್ಲ. ಆದರೆ ಸಂಸ್ಕೃತದಲ್ಲಿ ಎಲ್ಲವನ್ನು ಕಂಠಪಾಠ ಮಾಡಬೇಕೆಂದೇ ನನಗೆ ತೋರಿತು. ಸಂಸ್ಕೃತವನ್ನೂ ನಾಲ್ಕನೆಯ ವರ್ಗದಿಂದಲೇ ಪ್ರಾರಂಭಿಸುತ್ತಿದ್ದರು. ಆರನೆಯ ವರ್ಗವನ್ನು ಮುಟ್ಟಿದ ಕೂಡಲೇ ನಾನು ಎದೆಗುಂದಿದೆ. ಉಪಾಧ್ಯಾಯರು ಚೆನ್ನಾಗಿ ಕೆಲಸ ತೆಗೆದುಕೊಳ್ಳುತ್ತಿದ್ದರು. ವಿದ್ಯಾರ್ಥಿಗಳಿಗೆ ಇಷ್ಟವಿರಲಿ ಬಿಡಲಿ, ಸಾಧ್ಯವಾದಷ್ಟು ಹೆಚ್ಚಾಗಿ ಕಲಿಸಬೇಕೆಂಬುದು ಅವರ ಇಷ್ಟವಾಗಿತ್ತು. ಪಾರಸೀ ಮತ್ತು ಸಂಸ್ಕೃತ ಗುರುಗಳ ನಡುವೆ ಪೈಪೋಟಿ ಇದ್ದಂತೆ ತೋರಿತು. ಪಾರಸೀ ಉಪಾಧ್ಯಾಯರು ಸ್ವಲ್ಪ ಸಲಿಗೆ ಕೊಟ್ಟಿದ್ದರು. ಪಾರಸೀ ಸುಲಭ ಭಾಷೆ. "ಪಾರಸೀ ಮೌಲ್ವಿ ಒಳ್ಳೆಯವರು, ವಿದ್ಯಾರ್ಥಿಗಳ ಬಗ್ಗೆ ದಯಾಪರರು" ಎಂದು ಹುಡುಗರು ತಮ್ಮ ತಮ್ಮಲ್ಲಿ ಮಾತನಾಡಿಕೊಳ್ಳುತ್ತಿದ್ದರು. ಈ "ಸೌಲಭ್ಯ" ನನ್ನನ್ನೂ ಎಳೆಯಿತು. ನಾನು ಒಂದು ದಿನ ಹೋಗಿ ಪಾರಸೀ ಭಾಷೆಯ ತರಗತಿಯಲ್ಲಿ ಕುಳಿತೆನು. ಸಂಸ್ಕೃತ ಉಪಾಧ್ಯಾಯರಿಗೆ ದುಃಖವುಂಟಾಯಿತು. ಅವರು ನನ್ನನ್ನು ಸಮೀಪಕ್ಕೆ ಕರೆದು, "ನಿಮ್ಮ ತಂದೆ ವೈಷ್ಣವರೆಂಬುದನ್ನು ನೀನು ಮರೆತುದು ಹೇಗೆ ? ನಿನ್ನ ಧರ್ಮಕ್ಕೆ ಸಂಬಂಧಿಸಿದ ಭಾಷೆಯನ್ನು ಕಲಿಯುವುದಿಲ್ಲವೆ ? ನಿನಗೆ ಕಠಿಣವಾದುದನ್ನು ನನ್ನ ಹತ್ತಿರ ಕೇಳು.

ವಿದ್ಯಾರ್ಥಿಗಳಿಗೆ ನನ್ನ ಶಕ್ತಿ ಮೀರಿ ಸಂಸ್ಕೃತ ಕಲಿಸಬೇಕೆಂಬುವೇ ನನ್ನ ಇಚ್ಛೆ. ಮುಂದೆ ಮುಂದೆ ಓದಿದಂತೆ ಅದರ ರಸ ನಿನಗೇ ಗೊತ್ತಾಗುತ್ತದೆ. ನೀನು ಹೀಗೆ ನಿರಶನಾಗಬಾರದು. ನೀನು ಮತ್ತೆ ಬಂದು ನನ್ನ ತರಗತಿಯಲ್ಲೇ ಕುಳಿತುಕೊ" ಎಂದು ಹೇಳಿದರು.

ಅವರ ಈ ದಯೆ, ನನಗೆ ನಾಚಿಕೆಯುಂಟುಮಾಡಿತು. ಉಪಾಧ್ಯಾಯರ ಪ್ರೇಮವನ್ನು ಅನಾದರಿಸಲು ನನಗೆ ಸಾಧ್ಯವಾಗಲಿಲ್ಲ. ಇಂದು ನಾನು ಕೃಷ್ಣ ಶಂಕರ್ ಪಾಂಡ್ಯರ ಉಪಕಾರವನ್ನು ಕೃತಜ್ಞತೆಯಿಂದ ನೆನೆಯುತ್ತೇನೆ. ಏಕೆಂದರೆ ನಾನು ತಿಳಿದುಕೊಂಡಿರುವಷ್ಟಾದರೂ ಸಂಸ್ಕೃತವನ್ನು ಆಗ ಕಲಿಯದೇ ಇದ್ದಿದ್ದರೆ, ನಮ್ಮ ಪವಿತ್ರ ಗ್ರಂಥಗಳಲ್ಲಿ ನನಗೆ ಆಸಕ್ತಿ ಹುಟ್ಟುವುದೇ ಕಷ್ಟವಾಗುತ್ತಿದ್ದಿತು. ನಾನು ಸಂಸ್ಕೃತವನ್ನು ಇನ್ನೂ ಹೆಚ್ಚಾಗಿ ಕಲಿಯಲಿಲ್ಲವಲ್ಲ ಎಂದು ನನಗೆ ತುಂಬ ಪಶ್ಚಾತ್ತಾಪವುಂಟಾಗಿದೆ. ಏಕೆಂದರೆ ಪ್ರತಿಯೊಬ್ಬ ಹಿಂದೂ ಬಾಲಕ ಬಾಲಕಿಯೂ ಸಂಸ್ಕೃತದ ಅಧ್ಯಯನವನ್ನು ಚೆನ್ನಾಗಿ ಮಾಡಬೇಕೆಂದು ನಾನು ಅರಿತುಕೊಂಡಿದ್ದೇನೆ.

ಭರತವರ್ಷದಲ್ಲಿ ಎಲ್ಲ ಉಚ್ಚ ಶಿಕ್ಷಣ ಕ್ರಮದಲ್ಲಿಯೂ, ಮಾತೃಭಾಷೆಯಲ್ಲದೆ ಹಿಂದೀ, ಸಂಸ್ಕೃತ, ಪಾರಸಿ, ಅರಬ್ಬೀ ಮತ್ತು ಇಂಗ್ಲಿಷ್ ಭಾಷೆಗಳಿಗೆ ಸ್ಥಾನ ಕೊಡಬೇಕೆಂಬುದು ನನ್ನ ಈಗಿನ ಅಭಿಪ್ರಾಯ. ಈ ದೊಡ್ಡ ಪಟ್ಟಿ ನೋಡಿ ಯಾರೂ ಹೆದರಬೇಕಾದುದಿಲ್ಲ. ನಮ್ಮ ಶಿಕ್ಷಣ ಕ್ರಮ ಹೆಚ್ಚು ವ್ಯವಸ್ಥಿತವಾಗಿದ್ದ ಪರಭಾಷೆಯ ಮೂಲಕ ಪಾಠವನ್ನು ಕಲಿಯುವ ಹೊರೆ ನಮ್ಮ ವಿದ್ಯಾರ್ಥಿಗಳಿಗೆ ತಪ್ಪುವುದಾದರೆ, ಈ ಎಲ್ಲ ಭಾಷೆಗಳನೂ ಕಲಿಯುವುದು ಸುಲಭವಾಗುವುದು ಮಾತ್ರವಲ್ಲದೆ, ಅದರಲ್ಲಿಯೇ ವಿದ್ಯಾರ್ಥಿಗಳಿಗೆ ಆನಂದವಾಗುವುದು. ಒಂದು ಭಾಷೆಯನ್ನು ಶಾಸ್ತ್ರರೀತಿಯಿಂದ ಅಧ್ಯಯನ ಮಾಡಿದರೆ, ಇತರ ಭಾಷೆಗಳ ಜ್ಞಾನ ಸುಗಮವಾಗುವುದು.

ಸರಿಯಾಗಿ ನೋಡಿದರೆ, ಹಿಂದೀ, ಗುಜರಾತಿ, ಸಂಸ್ಕೃತ ಇವು ಮೂರು ಒಂದೇ ಭಾಷೆ ಎಂದು ಎಣಿಸಬಹುದು. ಹಾಗೆಯೇ ಪಾರಸೀ ಮತ್ತೂ ಅರಬ್ಬೀ ಸಹ ಒಂದೇ ಭಾಷೆ. ಸಂಸ್ಕೃತ ಮತ್ತು ಪಾರಸೀ ಒಂದು ಗುಂಪು. ಅರಬ್ಬೀ, ಹೀಬ್ರೂ ಒಂದು ಗುಂಪು. ಆದರೆ ಈ ಎರಡು

ಪಾರಸೀ ಮತ್ತು ಅರಬ್ಬೀ ಭಾಷೆಗಳ ಬೆಳವಣಿಗೆಗೂ ಇಸ್ಲಾಂ ಧರ್ಮ ಪ್ರಚಾರ ಪ್ರಾದುರ್ಭಾವವೇ ಕಾರಣವಾದುದರಿಂದ ಎರಡಕ್ಕೂ ನಿಕಟ ಸಂಬಂಧವಿದೆಯೆನ್ನಬಹುದು. ನಾನು ಉರ್ದುವನ್ನು ಬೇರೆ ಭಾಷೆಯೆಂದು ಎಣಿಸುವುದಿಲ್ಲ. ಏಕೆಂದರೆ ಅದರ ವ್ಯಾಕರಣ ಹಿಂದಿಯ ವ್ಯಾಕರಣ, ಅದರ ಶಬ್ದಗಳು ಪಾರಸೀ ಮತ್ತು ಅರಬ್ಬೀ ಭಾಷೆಯವು. ಗುಜರಾತೀ, ಹಿಂದೀ, ಬಂಗಾಳಿ ಅಥವಾ ಮರಾಠಿಗಳನ್ನು ಚೆನ್ನಾಗಿ ಕಲಿಯಲು ಸಂಸ್ಕೃತ ಜ್ಞಾನ ಹೇಗೆ ಅವಶ್ಯಕವೋ ಹಾಗೆಯೇ, ಉರ್ದುವನ್ನು ಚೆನ್ನಾಗಿ ಕಲಿಯ ಬಯಸುವವನು, ಪಾರಸೀ ಮತ್ತು ಅರಬ್ಬೀ ಭಾಷೆಗಳನ್ನು ಚೆನ್ನಾಗಿ ಅಭ್ಯಾಸ ಮಾಡುವುದು ಅವಶ್ಯಕ.

೬

ದುಃಖ ಪ್ರಸಂಗ–(i)

ಪ್ರೌಢಶಾಲೆಯಲ್ಲಿ ನನಗೆ ಆಪ್ತ ಸ್ನೇಹಿತರು ಬಹಳ ಕಡಿಮೆಯಿದ್ದರು. ಅಲ್ಲಿ ಬೇರೆ ಬೇರೆ ಕಾಲದಲ್ಲಿ ನನಗೆ ಅತ್ಯಂತ ಆಪ್ತರಾದ ಸ್ನೇಹಿತರು ಇಬ್ಬರು ಮಾತ್ರ ಇದ್ದರು. ಒಬ್ಬನ ಮಿತ್ರತ್ವ ಬಹಳ ದಿನಗಳು ಉಳಿಯಲಿಲ್ಲ. ಅವನ ಸ್ನೇಹವನ್ನು ನಾನೇ ಬಿಡಲಿಲ್ಲ. ಆದರೆ ನಾನು ಇನ್ನೊಬ್ಬನ ಸ್ನೇಹ ವನ್ನು ಬೆಳಸಿದುದಕ್ಕಾಗಿ ಆತ ನನ್ನ ಸಂಗವನ್ನು ತ್ಯಜಿಸಿದನು. ಈ ಎರಡನೆಯವನ ಮಿತ್ರತ್ವ ನನ್ನ ಜೀವನದಲ್ಲಿ ಒಂದು ದುಃಖಕರ ಪ್ರಕರಣ. ಈ ಸ್ನೇಹ ಬಹು ದಿನಗಳವರೆಗೆ ಇದ್ದಿತು. ಒಬ್ಬ ಸುಧಾರಕನ ದೃಷ್ಟಿಯಿಂದ ನಾನು ಆ ಗೆಳೆತನವನ್ನು ಮಾಡಿದೆನು. ಆ ವ್ಯಕ್ತಿ, ಮೊದಲು ನನ್ನ ಅಣ್ಣನ ಸ್ನೇಹಿತನಾಗಿದ್ದನು. ಇಬ್ಬರೂ ಒಂದೇ ತರಗತಿ. ಅವನಲ್ಲಿದ್ದ ದೋಷ ಗಳೆಲ್ಲ ನನಗೆ ಗೊತ್ತಿದ್ದವು. ಆದರೆ ಅವನು ವಿಶ್ವಾಸಪಾತ್ರ ಗೆಳೆಯ ಎಂದು ನಾನು ತಿಳಿದಿದ್ದೆನು. ನನ್ನ ತಾಯಿ, ದೊಡ್ಡಣ್ಣ, ಹೆಂಡತಿ, ಮೂವರೂ ಇದು ಕೆಟ್ಟ ಸಹವಾಸವೆಂದು ನನ್ನನ್ನು ಎಚ್ಚರಿಸಿದ್ದರು. ಹೆಂಡತಿಯು ಕೊಟ್ಟ ಎಚ್ಚರಿಕೆಯನ್ನು ಲಕ್ಷ್ಯಮಾಡಲು ನಾನು ಬಹಳ ಅಹಂಭಾವದಿಂದ ಕೂಡಿದ್ದೆ. ಆದರೆ ತಾಯಿಯು ಮತ್ತು ದೊಡ್ಡಣ್ಣನ ಅಭಿಪ್ರಾಯಕ್ಕೆ ವಿರುದ್ಧವಾಗಿ ಹೋಗುವ ಧೈರ್ಯ ನನಗಿರಲಿಲ್ಲ. ಅವರನ್ನು ನಾನು ಹೀಗೆ

ಸಮಾಧಾನಪಡಿಸಿದೆನು ; "ನೀವು ಹೇಳುವ ದೋಷಗಳು ಅವನಲ್ಲಿರುವುದು ನನಗೆ ಗೊತ್ತು. ಆದರೆ ಅವನ ಗುಣಗಳನ್ನು ನೀವು ಅರಿಯಿರಿ. ನನ್ನನ್ನು ಅವನು ಕೆಟ್ಟಮಾರ್ಗಕ್ಕೆ ಎಳೆಯಲಾರ. ಏಕೆಂದರೆ ನಾನು ಅವನ ಸಹವಾಸ ಮಾಡಿರುವುದು ಅವನನ್ನು ಒಳ್ಳೆಯಮಾರ್ಗಕ್ಕೆ ತರುವುದಕ್ಕಾಗಿಯೇ. ಅವನು ಸುಧಾರಣೆ ಹೊಂದಿದರೆ ಅತ್ಯಂತ ಒಳ್ಳೆಯ ಮನುಷ್ಯನಾಗುವನೆಂಬುದು ನನ್ನ ನಂಬಿಕೆ. ನನ್ನ ವಿಷಯದಲ್ಲಿ ನೀವು ನಿಶ್ಶಂಕೆಯಿಂದ ಇರಿ." ನನ್ನ ಮಾತಿನಲ್ಲಿ ಅವರಿಗೆ ನಂಬಿಕೆಯುಂಟಾಯಿತೋ ಇಲ್ಲವೋ ಹೇಳಲಾರೆನು. ಆದರೆ ಅವರು ನನ್ನನ್ನು ನನ್ನ ದಾರಿಯಲ್ಲಿ ಹೋಗಲು ಬಿಟ್ಟರು.

ನಾನು ಆಗ ತಿಳಿದುಕೊಂಡಿದ್ದುದು ತಪ್ಪು ಎಂಬುದು ನನಗೆ ಅನಂತರ ಅನುಭವವಾಯಿತು. ಸುಧಾರಕ, ತಾನು ಯಾರನ್ನು ಸುಧಾರಣೆ ಮಾಡಬೇಕೆಂದು ಬಯಸುತ್ತಾನೆಯೋ ಅವನೊಂದಿಗೆ ಪೂರ್ಣ ಸಲಿಗೆಯಿಂದ ಇರಲಾಗುವುದಿಲ್ಲ. ಗೆಳೆತನದಲ್ಲಿ ಸುಧಾರಣೆ ಸಾಧ್ಯವಿಲ್ಲ. ನಿಜವಾದ ಮಿತ್ರತ್ವದಲ್ಲಿ ಅನನ್ಯ ಭಾವನೆ ಇರುತ್ತದೆ. ಇಂತಹ ಮೈತ್ರೀಭಾವ ಬಹಳ ಅಪರೂಪ. ಸಮಾನವಾದ ಗುಣಶೀಲಗಳುಳ್ಳವರಲ್ಲಿ ಮಾತ್ರ ಮಿತ್ರತ್ವ ಶೋಭಿಸುತ್ತದೆ, ಸಾಗುತ್ತದೆ. ಒಬ್ಬ ಮಿತ್ರನ ಪ್ರಭಾವ ಮತ್ತೊಬ್ಬನ ಮೇಲೆ ಬೀಳದಿರುವುದಿಲ್ಲ. ಇದರಿಂದ ಮಿತ್ರರಲ್ಲಿ ಒಬ್ಬನಿಂದ ಮತ್ತೊಬ್ಬನ ಸುಧಾರಣೆಯಾಗುವ ಅವಕಾಶ ಕಡಿಮೆ. ನನ್ನ ಅಭಿಪ್ರಾಯದಲ್ಲಿ ಅಭಿನ್ನ ಮೈತ್ರೀ ಅನಿಷ್ಟ. ಏಕೆಂದರೆ, ಮನುಷ್ಯ ದೋಷಗಳನ್ನು ಬಹು ಬೇಗ ಗ್ರಹಿಸುತ್ತಾನೆ. ಗುಣಗ್ರಹಣಕ್ಕೆ ಆವಶ್ಯಕವಾಗಿ, ಪ್ರಯತ್ನ ಬೇಕು. ಈಶ್ವರನ ಮೈತ್ರಿಯನ್ನು ಬಯಸುವವನು ಏಕಾಕಿಯಾಗಬೇಕು, ಅಥವಾ ಅವನು ಇಡೀ ಜಗತ್ತಿನೊಂದಿಗೆ ಮಿತ್ರತ್ವವನ್ನು ಬೆಳೆಸುವುದು ಉಚಿತವಾಗುವುದು. ನನ್ನ ವಿಚಾರ ಸರಿಯೋ ತಪ್ಪೋ, ನನ್ನ ಅಂತರಂಗ ಮೈತ್ರಿಯ ಪ್ರಯತ್ನ ನಿಷ್ಫಲವಾಯಿತು.

ಈ ಮಹಾಶಯನೊಂದಿಗೆ ನನ್ನ ಸಂಪರ್ಕವುಂಟಾದ ಕಾಲದಲ್ಲಿ ರಾಜಕೋಟೆಯಲ್ಲಿ ಸುಧಾರಕ ಪಂಥವೊಂದು ಪ್ರಬಲವಾಗಿದ್ದಿತು. ಈ ಸ್ನೇಹಿತ, ಹಿಂದೂ ಉಪಾಧ್ಯಾಯರಲ್ಲಿ ಬಹು ಮಂದಿ ಗುಟ್ಟಾಗಿ ಮದ್ಯ ಮಾಂಸ ಸೇವನೆ ಮಾಡುತ್ತಾರೆಂದು ನನಗೆ ಹೇಳಿದನು. ರಾಜಕೋಟೆಯಲ್ಲಿ

ಹಾಗೆ ಮಾಡುತ್ತಿದ್ದ ಇತರ ಪ್ರಸಿದ್ಧ ವ್ಯಕ್ತಿಗಳ ಹೆಸರನ್ನೂ ಹೇಳಿದನು. ಪ್ರೌಢಶಾಲೆಯ ಅನೇಕ ವಿದ್ಯಾರ್ಥಿಗಳ ಹೆಸರೂ ಅದರಲ್ಲಿ ಸೇರಿತ್ತು. ಅದನ್ನು ನೋಡಿ ನನಗೆ ತುಂಬ ಆಶ್ಚರ್ಯವುಂಟಾಯಿತು, ಜತೆಗೆ ದುಃಖವೂ ಆಯಿತು. ಇದರ ಕಾರಣವನ್ನು ವಿಚಾರಿಸಿದೆನು. "ನಾವು ಮಾಂಸ ಸೇವಿಸುವುದಿಲ್ಲ. ಅದರಿಂದ ದುರ್ಬಲರಾಗಿದ್ದೇವೆ. ಆಂಗ್ಲೇಯರು ನಮ್ಮ ಮೇಲೆ ಅಧಿಕಾರ ಮಾಡುತ್ತಿದ್ದಾರೆ. ಇದಕ್ಕೆ ಕಾರಣ ಅವರು ಮಾಂಸಾಹಾರಿಗಳಾದುದೇ. ನಾನು ಎಷ್ಟು ಗಟ್ಟಿಮುಟ್ಟಾಗಿದ್ದೇನೆ ? ಹೇಗೆ ಓಡುತ್ತೇನೊ ನಿನಗೆ ಗೊತ್ತೆ ? ಇದಕ್ಕೆ ಕಾರಣ ನಾನು ಮಾಂಸಾಹಾರಿಯಾಗಿರುವುದೇ. ಮಾಂಸಾಹಾರಿಗೆ ಕುರು, ಹುಣ್ಣು, ಬಾವು ಆಗುವುದಿಲ್ಲ. ಆದರೂ ಬೇಗ ವಾಸಿಯಾಗುತ್ತದೆ. ನೋಡು ನಮ್ಮ ಉಪಾಧ್ಯಾಯರೂ ಮಾಂಸವನ್ನು ಸೇವಿಸುತ್ತಾರೆ. ಇನ್ನೂ ಎಷ್ಟೋ ಮಂದಿ ದೊಡ್ಡ ದೊಡ್ಡ ಮನುಷ್ಯರು ಸೇವಿಸುತ್ತಾರೆ. ಸರಿಯಾಗಿ ಯೋಚನೆ ಮಾಡದೆ ಹೀಗೆ ಮಾಡಲು ಅವರೇನು ಮೂರ್ಖರೇ ? ನೀನೂ ಕೂಡ ಮಾಂಸವನ್ನು ತಿನ್ನಬೇಕು. ಒಮ್ಮೆ ತಿಂದು ನಿನ್ನ ದೇಹಕ್ಕೆ ಎಷ್ಟು ಬಲ ಬರುತ್ತದೆ ಎಂಬುದನ್ನು ನೋಡು" ಎಂದು ಹೇಳಿದನು.

ಈ ಬೋಧನೆಯೆಲ್ಲ ಒಂದೇ ದಿನ ಮಾಡಿದುದಲ್ಲ. ಅನೇಕ ಉದಾಹರಣೆಗಳೊಡನೆ ಎಷ್ಟೋ ಬಾರಿ ಹೇಳಿದುದರ ಸಾರಾಂಶವಿದು. ನಮ್ಮ ಅಣ್ಣ, ಆಗಲೇ ಜಾರಿಬಿದ್ದಿದ್ದುದರಿಂದ ಈ ವಾದವನ್ನು ಅವನೂ ಸಮರ್ಥಿಸಿದನು. ಈ ಸ್ನೇಹಿತ ಮತ್ತು ನಮ್ಮ ಅಣ್ಣ ಇವರೊಂದಿಗೆ ಹೋಲಿಸಿ ನೋಡಿದರೆ ನಾನು ಬಡ ಆಳು ಮತ್ತು ದುರ್ಬಲನಾಗಿದ್ದುದು ನಿಜ. ಅವರ ದೇಹ ಕಟ್ಟುಮಸ್ತಾಗಿತ್ತು. ಅವರಿಗೆ ಶಕ್ತಿಯೂ ಹೆಚ್ಚಾಗಿತ್ತು. ಅವರು ನಿರ್ಭೀತರೂ ಹೌದು. ಆ ಸ್ನೇಹಿತನ ಪರಾಕ್ರಮ ನನ್ನನ್ನು ಮುಗ್ಧನನ್ನಾಗಿ ಮಾಡಿತ್ತು. ಆತ ಬಹುದೂರ ಓಡುತ್ತಿದ್ದನು. ವೇಗವೂ ಹೆಚ್ಚಾಗಿತ್ತು. ದೂರಕ್ಕೆ ಹಾರುತ್ತಿದ್ದನು ; ಎತ್ತರಕ್ಕೆ ನೆಗೆಯುತ್ತಿದ್ದನು. ಎಷ್ಟು ಪೆಟ್ಟುಬಿದ್ದರೂ ಸಹಿಸಿಕೊಳ್ಳುತ್ತಿದ್ದನು. ಈ ಶಕ್ತಿಗಳನ್ನೆಲ್ಲ ಅವನು ಆಗಾಗ ನನ್ನ ಮುಂದೆ ಪ್ರದರ್ಶಿಸುತ್ತಿದ್ದನು. ತನ್ನಲ್ಲಿಲ್ಲದ ಸಾಮರ್ಥ್ಯವನ್ನು ಇತರರಲ್ಲಿ ನೋಡಿದರೆ ಮನುಷ್ಯ ಆಶ್ಚರ್ಯಗೊಳ್ಳು

ತ್ತಾನೆ. ನನಗೂ ಹಾಗೆಯೇ ಆಯಿತು. ಆಶ್ಚರ್ಯದಿಂದ ಮೋಹ ಹುಟ್ಟಿತು. ನನಗೆ ಓಡುವುದಕ್ಕಾಗಲೀ ಹಾರುವುದಕ್ಕಾಗಲೀ ಶಕ್ತಿ ಇರಲಿಲ್ಲ. ನಾನೂ ಈ ಮಿತ್ರನಂತೆ ಏಕೆ ಬಲಶಾಲಿಯಾಗಬಾರದು ? ಎಂದು ಮನಸ್ಸಿನೊಳಗೇ ಅಂದುಕೊಂಡೆನು.

ಇದಲ್ಲದೆ ನಾನು ಬಹಳ ಅಂಜುಬುರುಕನಾಗಿದ್ದೆನು. ಕಳ್ಳರು ಭೂತ, ಹಾವು ಎಂದರೆ ನನಗೆ ಯಾವಾಗಲೂ ಭಯ ; ರಾತ್ರಿ ಹೊತ್ತು ಒಬ್ಬನೇ ಹೊರಗೆ ಹೊರಡಲು ನನಗೆ ಯಾವಾಗಲೂ ಧೈರ್ಯವಿರುತ್ತಿರಲಿಲ್ಲ. ಕತ್ತಲೆಯನ್ನು ಕಂಡರೇ ಮೈನಡುಕ. ದೀಪವಿಲ್ಲದೆ ಮಲಗುವುದು ಪ್ರಾಯಶಃ ಸಾಧ್ಯವೇ ಇರಲಿಲ್ಲ. ಯಾವ ಕಡೆಯಿಂದ ಭೂತ, ಯಾವ ಕಡೆಯಿಂದ ಕಳ್ಳರು ಯಾವ ಕಡೆಯಿಂದ ಹಾವುಗಳು ಬರುವುವೋ ಎಂಬ ಭಯ. ಆದುದರಿಂದ ದೀಪವಿಲ್ಲದೆ ಮಲಗಲು ಸಾಧ್ಯವಿರಲಿಲ್ಲ. ಮಗ್ಗುಲಲ್ಲಿ ನಿದ್ರಿಸುತ್ತಿರುವ ಆಗ ತಾನೆ ತಾರುಣ್ಯವನ್ನು ಹೊಂದುತ್ತಿರುವ ನನ್ನ ಹೆಂಡತಿಗೆ ಈ ನನ್ನ ಭಯವನ್ನು ಹೇಳುವುದೆಂತು ? ಸಂಕೋಚ ವಾಗುತ್ತಿತ್ತು. ಏಕೆಂದರೆ ಆಕೆ ನನಗಿಂತ ಹೆಚ್ಚು ಧೈರ್ಯಶಾಲಿಯೆಂದು ನನಗೆ ಗೊತ್ತಿದ್ದಿತು. ಆದರಿಂದ ನನ್ನ ನಾಚಿಕೆ ಇನ್ನೂ ಅಧಿಕವಾಯಿತು. ಆಕೆಗೆ ಹಾವುಗಳ ಅಥವಾ ಪಿಶಾಚಿಗಳ ಅಂಜಿಕೆ ಇರಲಿಲ್ಲ. ಕತ್ತಲಲ್ಲಿ ಒಂಟಿಯಾಗಿ ಬೇಕಾದಲ್ಲಿಗೆ ಹೋಗುತ್ತಿದ್ದಳು. ನನ್ನ ಈ ದೌರ್ಬಲ್ಯಗಳೆಲ್ಲ ನನ್ನ ಮಿತ್ರನಿಗೆ ಗೊತ್ತಿದ್ದಿತು. ಅವನು “ಬದುಕಿರುವ ಹಾವುಗಳನ್ನು ಕೈಯಲ್ಲಿ ಹಿಡಿದುಕೊಳ್ಳುತ್ತೇನೆ. ಕಳ್ಳರಿಗೆ ಹೆದರುವುದಿಲ್ಲ. ಭೂತ ಪಿಶಾಚಿಗಳೆನ್ನುವುವು ಇಲ್ಲವೇ ಇಲ್ಲ” ಎನ್ನುತ್ತಿದ್ದನು. ಇದೆಲ್ಲ ಮಾಂಸಾ ಹಾರದ ಪ್ರತಾಪವೆಂದು ಅವನು ಹೇಳುತ್ತಿದ್ದನು.

ಆ ಕಾಲದಲ್ಲಿ ನರ್ಮದ ಕವಿಯ ಈ ಹಾಡು ಶಾಲೆಯಲ್ಲಿ ಪ್ರಚಾರ ದಲ್ಲಿತ್ತು :

ಅಂಗ್ರೇಜಿ ರಾಜ್ ಕರೆ ದೇಶೀ ರಹೆ ದಬಾಯಿ
ದೇಶೀ ರಹೆ ದಬಾಯಿ ಜೊ:ನೆ ಬೇನೀ ಶರೀರ ಭಾಯಿ
ಪೇಲೋ ಪಾಂಚ ಹಾಥಪೂರೋ ಪೂರೋ ಮಾಂಸಸೇವೆ

[ಆಂಗ್ಲೇಯ, ದುರ್ಬಲ ಶರೀರಗಳಾದ ದೇಶೀಯರನ್ನು ಹತೋಟಿಯಲ್ಲಿಟ್ಟುಕೊಂಡು ಆಳುತ್ತಾನೆ. ಇದಕ್ಕೆ ಕಾರಣ ಅವನು ಚೆನ್ನಾಗಿ ಮಾಂಸವನ್ನು ತಿಂದು ಐದು ಮೊಳ (ಏಳೂವರೆ ಅಡಿ) ಎತ್ತರವಾಗಿ ಧಾಂಡಿಗನಾಗಿರುವುದೇ.]

ಈ ಎಲ್ಲ ಮಾತುಗಳೂ ನನ್ನ ಮನಸ್ಸಿನಲ್ಲಿ ನಾಟಿದುವು. ನಾನು ಮಾಂಸವನ್ನು ಸೇವಿಸಲು ಒಪ್ಪಿದೆನು. "ಇದರಿಂದ ಬಲಶಾಲಿಯೂ ಭಯರಹಿತನೂ ಆಗುತ್ತೇನೆ. ದೇಶವೆಲ್ಲ ಮಾಂಸ ತಿನ್ನಲು ಪ್ರಾರಂಭಿಸಿದರೆ ಆಂಗ್ಲೇಯರನ್ನು ಓಡಿಸಬಹುದು" ಎಂದು ನನಗೆ ಭಾಸವಾಯಿತು.

ಮಾಂಸಾಹಾರ ಪ್ರಯೋಗಕ್ಕೆ ಒಂದು ದಿನ ಗೊತ್ತಾಯಿತು. ಈ ಪ್ರಯೋಗ ಯಾರಿಗೂ ತಿಳಿಯದಂತೆ ನಡೆಯಬೇಕಾಗಿತ್ತು. ಗಾಂಧೀ ಕುಟುಂಬದವರು ವೈಷ್ಣವ ಸಂಪ್ರದಾಯದವರು. ನನ್ನ ತಂದೆತಾಯಿ ಅತ್ಯಂತ ನಿಷ್ಠೆಯ ವೈಷ್ಣವರು. ಪ್ರತಿದಿನವೂ ಅವರು ದೇವಾಲಯಕ್ಕೆ (ಹವೇಲಿಗೆ) ಹೋಗುತ್ತಿದ್ದರು. ನಮ್ಮ ಸ್ವಂತ ದೇವಾಲಯಗಳೇ ಇದ್ದವು. ಗುಜರಾತಿನಲ್ಲಿ ಜೈನ ಸಂಪ್ರದಾಯ ಪ್ರಬಲವಾಗಿದೆ. ಅದರ ಪ್ರಭಾವ ಎಲ್ಲ ಕಾರ್ಯಗಳಲ್ಲಿಯೂ ಎಲ್ಲ ಸ್ಥಳಗಳಲ್ಲಿಯೂ ಕಾಣಬರುತ್ತಿದ್ದಿತು. ಈ ಕಾರಣದಿಂದ ಗುಜರಾತಿನ ವೈಷ್ಣವರಲ್ಲಿಯೂ ಮತ್ತು ಇತರರಲ್ಲಿಯೂ ಮಾಂಸಾಹಾರದ ವಿಷಯದಲ್ಲಿ ಇರುವ ತಿರಸ್ಕಾರ ಮತ್ತು ವಿರೋಧ ಭಾರತದಲ್ಲಿಯಾಗಲೀ ಜಗತ್ತಿನಲ್ಲಿಯೇ ಆಗಲಿ ಮತ್ತೆ ಎಲ್ಲೂ ಇರಲಿಲ್ಲ. ಇಂಥ ಸಂಪ್ರದಾಯದಲ್ಲಿ ನಾನು ಹುಟ್ಟಿ ಬೆಳೆದಿದ್ದೆ.

ಇದರ ಜತೆಗೆ ತಾಯಿತಂದೆಯಲ್ಲಿ, ನನ್ನ ಭಕ್ತಿ ವಿಶೇಷವಾಗಿತ್ತು. ನಾನು ಮಾಂಸಾಹಾರದ ದಾರಿ ಹಿಡಿದುದು ಅವರಿಗೆ ಗೊತ್ತಾದರೆ, ಅವರಿಗೆ ಪ್ರಾಣ ಹೋದಂತೆ ಆಗುತ್ತಿದ್ದಿತು. ಅರಿತೋ ಅರಿಯದೆಯೋ ನಾನಂತೂ ಸತ್ಯದ ಸೇವಕನಾಗಿದ್ದೆನು. ಮಾಂಸ ತಿನ್ನುವುದನ್ನು ಪ್ರಾರಂಭಮಾಡಿದರೆ, ತಂದೆ ತಾಯಿಗಳಿಗೆ ಸುಳ್ಳು ಹೇಳಬೇಕಾಗುತ್ತದೆ ಎಂಬ ಅರಿವು ನನಗೆ ಇರಲಿಲ್ಲವೆಂದು ಹೇಳಲಾರೆನು.

ಇಂತಹ ಪ್ರಸಂಗದಲ್ಲಿ, ನಾನು ಮಾಂಸವನ್ನು ತಿನ್ನಲು ನಿಶ್ಚಯ

ಮಾಡಿದುದು, ನನ್ನ ಮಟ್ಟಿಗೆ ಹೇಳುವುದಾದರೆ, ಬಹಳ ಗಂಭೀರವೂ ಭಯಂಕರವೂ ಆದ ಸಂಗತಿಯಾಗಿತ್ತು.

ಆದರೆ ನಾನು "ಸುಧಾರಣೆಯು" ಕಡೆಗೆ ಪೂರ್ಣವಾಗಿ ಒಲಿದಿದ್ದೆನು. ಮಾಂಸಾಹಾರ ಬಹಳ ರುಚಿ ಎಂಬ ಅಭಿಪ್ರಾಯದಿಂದ ನಾನು ಅದನ್ನು ತಿನ್ನಲು ಬಯಸಲಿಲ್ಲ. ರುಚಿ ನನ್ನನ್ನು ಆಕರ್ಷಿಸಲಿಲ್ಲ. "ನಾನು ಬಲಶಾಲಿಯಾಗಬೇಕು ಸಾಹಸಿಯಾಗಬೇಕು. ನಮ್ಮ ದೇಶದ ಇತರರೂ ಹಾಗೆಯೇ ಆಗಲು ಪ್ರೇರಿಸಬೇಕು. ಆಂಗ್ಲೇಯರನ್ನು ಸೋಲಿಸಿ ಭಾರತವನ್ನು ಸ್ವತಂತ್ರವಾಗಿ ಮಾಡಬೇಕು" ಎಂಬುದು ನನ್ನ ಆಸೆಯಾಗಿದ್ದಿತು. ಆ ವೇಳೆಗೆ ಸ್ವರಾಜ್ಯವೆಂಬ ಮಾತು ನನ್ನ ಕಿವಿಗೆ ಬಿದ್ದಿರಲಿಲ್ಲ. ಈ ಸುಧಾರಣೆಯ ಹೆಸರಿನಲ್ಲಿ ನಾನು ಎಚ್ಚರ ತಪ್ಪಿದೆನೆಂದೇ ಹೇಳಬೇಕು. ರಹಸ್ಯವನ್ನು ಕಾಯ್ದುಕೊಂಡು, ತಂದೆತಾಯಿಗಳಿಗೆ ವಿಷಯವನ್ನು ತಿಳಿಸದಿರುವುದು, ಸತ್ಯದ ಮಾರ್ಗವನ್ನು ಬಿಟ್ಟಂತೆ ಅಲ್ಲವೆಂದು ನನಗೆ ನಾನೇ ಸಮಾಧಾನ ಮಾಡಿಕೊಂಡೆನು.

೭

ದುಃಖ ಪ್ರಸಂಗ — (ii)

ಗೊತ್ತಾಗಿದ್ದ ದಿನ ಬಂತು. ನನ್ನ ಆಗಿನ ಸ್ಥಿತಿಯನ್ನು ವರ್ಣಿಸುವುದು ಕಷ್ಟ. ಒಂದು ಕಡೆ ಸುಧಾರಣೆಯ ಮಾರ್ಗದ ಉತ್ಸಾಹ. ಜೀವನದಲ್ಲಿ ಮಹತ್ವಪೂರ್ಣ ಬದಲಾವಣೆ ಮಾಡುವ ಒಂದು ನವೀನತೆ, ಮತ್ತೊಂದು ಕಡೆ ಕಳ್ಳನಂತೆ ಮುಚ್ಚುಮರೆಯಿಂದ ಕೆಲಸಮಾಡುವ ನಾಚಿಕೆ. ಇವುಗಳಲ್ಲಿ ಯಾವ ಭಾವ ಪ್ರಧಾನವಾಗಿತ್ತೆಂದು ಹೇಳುವುದು ಕಷ್ಟ. ಏಕಾಂತ ಸ್ಥಳವನ್ನು ಹುಡುಕಿಕೊಂಡು ನದಿಯ ತೀರಕ್ಕೆ ಹೋದೆವು. ಯಾರೂ ಕಾಣದ ದೂರವಾದ ಸ್ಥಳವನ್ನು ಹುಡುಕಿದೆವು. ಅಲ್ಲಿ ನನ್ನ ಬಾಳಿನಲ್ಲಿ ಮೊದಲಬಾರಿಗೆ ಬೇಯಿಸಿದ ಮಾಂಸವನ್ನು ನೋಡಿದೆನು. ಜತೆಗೆ ರೊಟ್ಟಿ ಅಂಗಡಿಯ ರೊಟ್ಟಿಯೂ ಇತ್ತು. ನನಗೆ ಒಂದೂ ರುಚಿಸಲಿಲ್ಲ. ಆಡಿನ ಮಾಂಸ ಚಕ್ಕಳದಂತೆ ಇತ್ತು. ತಿನ್ನುವಂತೆಯೇ ಇರಲಿಲ್ಲ. ನನಗೆ ಜುಗುಪ್ಸೆಯಾಯಿತು. ತಿನ್ನುವುದನ್ನು ಬಿಟ್ಟುಬಿಟ್ಟೆನು.

ಆ ರಾತ್ರಿಯನ್ನು ಕಳೆಯುವುದು ನನಗೆ ಬಹಳ ಕಷ್ಟವಾಯಿತು. ಏನು ಮಾಡಿದರೂ ನಿದ್ರೆ ಬರಲಿಲ್ಲ. ಒಂದು ಜೀವಂತ ಆಡು ನನ್ನ ಹೊಟ್ಟೆಯನ್ನು ಹೊಕ್ಕು ಕಿರುಚುತ್ತಿರುವುದು ನನಗೆ ಅನುಭವವಾಗುತ್ತಿತ್ತು; ತಕ್ಷಣ ಪಶ್ಚಾತ್ತಾಪದಿಂದ ಮೇಲೇಳುತ್ತಿದ್ದೆನು. ಕೂಡಲೇ ಮಾಂಸಾಹಾರ ಸೇವನೆ ಕರ್ತವ್ಯವೆಂದು ಧೈರ್ಯವನ್ನೂ ಸಮಾಧಾನವನ್ನೂ ತಂದುಕೊಳ್ಳುತ್ತಿದ್ದೆನು. ನನ್ನ ಸ್ನೇಹಿತ ಸುಲಭವಾಗಿ ಸೋಲುವವನಲ್ಲ. ಆಗ ಅವನು ಮಾಂಸವನ್ನು ವಿಧವಿಧವಾಗಿ ರುಚಿರುಚಿಯಾಗಿ ತಯಾರು ಮಾಡಿಸಲು ಪ್ರಾರಂಭಿಸಿದನು. ಅದನ್ನು ತಿನ್ನಲು ನದಿಯ ತೀರದ ಏಕಾಂತ ಸ್ಥಳಕ್ಕೆ ಹೋಗಬೇಕಾಗಿರಲಿಲ್ಲ. ಸರಕಾರಿ ಬಂಗಲೆಯ ಅಡಿಗೆಯವನೊಂದಿಗೆ ನನ್ನ ಸ್ನೇಹಿತ ಏರ್ಪಾಡು ಮಾಡಿದ್ದನು. ಸೊಗಸಾದ ಕುರ್ಚಿ ಮೇಜುಗಳ ಠೀವಿಯಿಂದ ನನ್ನನ್ನು ಆಕರ್ಷಿಸಿದನು. ಈ ಬಲೆ, ಸಾರ್ಥಕವಾಯಿತು. ನನಗೆ ಆಡಿನ ಮೇಲಿದ್ದ ಕರುಣೆ ನಾಶವಾಯಿತು. ಮಾಂಸವಲ್ಲದಿದ್ದರೂ ಮಾಂಸದಿಂದ ಮಾಡಿದ ತಿಂಡಿಗಳ ರುಚಿ ಹತ್ತಿತ್ತು. ಹೀಗೆ ಒಂದು ವರುಷ ಕಳೆಯುವುದರೊಳಗೆ ನಾನು ಐದಾರು ಸಲ ಮಾಂಸದ ತಿಂಡಿಗಳನ್ನು ತಿಂದೆನು. ಏಕೆಂದರೆ, ಸರಕಾರಿ ಬಂಗಲೆ ಯಾವಾಗಲೂ ಸಿಕ್ಕುತ್ತಿರಲಿಲ್ಲ, ಮತ್ತು ರುಚಿರುಚಿಯಾದ ಮಾಂಸದ ಪದಾರ್ಥಗಳನ್ನು ಪದೇ ಪದೆ ಮಾಡಿಸಲು ಸಾಧ್ಯವಿರುತ್ತಿರಲಿಲ್ಲ. ಈ ಸುಧಾರಣೆಗೆ ನನ್ನಲ್ಲಿ ಹಣವಿಲ್ಲದುದರಿಂದ, ವೆಚ್ಚವೆಲ್ಲ ಸ್ನೇಹಿತನ ಮೇಲೆಯೇ ಬೀಳುತ್ತಿತ್ತು. ಆತ, ಹೇಗೆ ಹಣ ಒದಗಿಸುತ್ತಿದ್ದನೊ ಇಂದಿಗೂ ನನಗೆ ತಿಳಿಯದು. ನನ್ನನ್ನು ಮಾಂಸಾಹಾರಿಯಾಗಿ ಮಾಡಬೇಕೆಂಬುದು ಅವನ ಹಠ. ಆದುದರಿಂದ ಅವನೇ ಖರ್ಚಿಗೆಲ್ಲ ಹಣ ಒದಗಿಸುವ ಭಾರವನ್ನ ವಹಿಸುತ್ತಿದ್ದನು. ಅವನೂ ಅಂತಹ ಧನಿಕನೇನೂ ಅಲ್ಲ. ಈ ಕಾರಣದಿಂದ ಈ ಭೋಜನ ಸಂದರ್ಭಗಳು ಆಗಾಗ ಮಾತ್ರ ನಡೆಯುತ್ತಿದ್ದವು.

ಈ ಕಳ್ಳತನದ ಊಟ ಮಾಡಿದ ದಿನ ನನಗೆ ಮನೆಯಲ್ಲಿ ಊಟ ಬೇಕಾಗುತ್ತಿರಲಿಲ್ಲ. ತಾಯಿ ಎಂದಿನಂತೆ ಊಟಕ್ಕೆ ಕರೆದಾಗ ಬೇಡ ಎನ್ನು ತ್ತಿದ್ದೆನು. ಆಕೆ ಕಾರಣವನ್ನು ಕೇಳಿದರೆ "ಹಸಿವಿಲ್ಲ, ತಿಂದ ಅನ್ನ ಜೀರ್ಣ ವಾಗಿಲ್ಲ" ಎನ್ನುತ್ತಿದ್ದೆನು. ಹೀಗೆ ಹೇಳುವಾಗಲೆಲ್ಲ ನನಗೆ ತುಂಬ ಸಂಕಟ

ವಾಗುತ್ತಿದ್ದಿತು. "ನಾನು ಸುಳ್ಳು ಹೇಳುತ್ತಿದ್ದೇನೆ; ನಮ್ಮ ತಾಯಿಗೆ ಸುಳ್ಳು ಹೇಳುತ್ತಿದ್ದೇನೆ" ಎಂಬುದು ನನಗೆ ತಿಳಿದಿದ್ದಿತು. ನಾನು ಮಾಂಸಾಹಾರಿ ಯಾಮುದು ನಮ್ಮ ತಂದೆತಾಯಿಗಳಿಗೆ ತಿಳಿದರೆ ಅವರು ಅತ್ಯಂತ ಸಂಕಟ ಪಡುವರೆಂದೂ ವಜ್ರಾಘಾತ ಹೊಂದುವರೆಂದೂ ನನಗೆ ಗೊತ್ತಿದ್ದಿತು. ಅದು ನನ್ನ ಮನಸ್ಸನ್ನು ಯಾವಾಗಲೂ ಕೊರೆಯುತ್ತಿದ್ದಿತು. ಆದುದರಿಂದ ನಾನು ಹೀಗೆ ಯೋಚಿಸಿದೆನು: "ಮಾಂಸವನ್ನು ತಿನ್ನುವುದು ಅವಶ್ಯಕ. ಇದನ್ನು ಪ್ರಚಾರಮಾಡಿ ಹಿಂದೂಸ್ಥಾನದಲ್ಲಿ ಈ ಸುಧಾರಣೆ ಮಾಡುವುದೂ ಆವಶ್ಯಕ. ಆದರೆ ತಂದೆತಾಯಿಗಳಿಗೆ ಮೋಸ ಮಾಡುವುದು, ಸುಳ್ಳು ಹೇಳುವುದು, ಮಾಂಸಾಹಾರವನ್ನು ಬಿಡುವುದಕ್ಕಿಂತ ಹೆಚ್ಚು ಅಪರಾಧ. ಆದುದರಿಂದ ಮಾತಾಪಿತೃಗಳು ಬದುಕಿರುವವರೆಗೆ ಮಾಂಸವನ್ನು ಮುಟ್ಟ ಬಾರದು. ಅವರು ಸತ್ತಮೇಲೆ ಸ್ವತಂತ್ರನಾದಾಗ, ನಾನು ಬಹಿರಂಗ ವಾಗಿಯೇ ಮಾಂಸ ತಿನ್ನುತ್ತೇನೆ. ಅಲ್ಲಿಯವರೆಗೆ ಮಾಂಸವನ್ನು ಮುಟ್ಟು ವುದಿಲ್ಲ." ನನ್ನ ಈ ನಿಶ್ಚಯವನ್ನು ನನ್ನ ಸ್ನೇಹಿತನಿಗೂ ತಿಳಿಸಿದೆನು. ಮತ್ತು ಅಂದಿನಿಂದಲೇ ಮಾಂಸಾಹಾರವನ್ನು ಸಂಪೂರ್ಣವಾಗಿ ಬಿಟ್ಟೆನು. ಅಂದಿನಿಂದ ಮತ್ತೆ ಮಾಂಸ ತಿನ್ನಲಿಲ್ಲ. ತಮ್ಮ ಮಕ್ಕಳಲ್ಲಿ ಇಬ್ಬರು ಮಾಂಸವನ್ನು ತಿಂದಿದ್ದರೆಂಬುದು ನಮ್ಮ ತಂದೆತಾಯಿಗಳಿಗೆ ಎಂದೂ ಗೊತ್ತಾಗಲೇ ಇಲ್ಲ.

ತಂದೆತಾಯಿಗಳಿಗೆ ಮೋಸ ಮಾಡದಿರಬೇಕೆಂದು ಮಾಂಸಾಹಾರವನ್ನು ಬಿಟ್ಟರೂ, ಆ ಮಿತ್ರನ ಗೆಳೆತನವನ್ನು ಬಿಡಲಿಲ್ಲ. ಅವನನ್ನು ಸುಧಾರಿಸ ಬೇಕೆಂಬ ಉತ್ಸಾಹದಲ್ಲಿ ನನಗೇ ಕೆಟ್ಟದಾಗಿತ್ತು. ಆದರೆ ಇದರ ಅರಿವೇ ನನಗೆ ಇರಲಿಲ್ಲ.

ಇದೇ ಮಿತ್ರನ ಸಹವಾಸವೇ ನನ್ನನ್ನು ವ್ಯಭಿಚಾರಕ್ಕೂ ಎಳೆಯು ವುದರಲ್ಲಿದ್ದಿತು. ಕೊನೆಯ ಗಳಿಗೆಯಲ್ಲಿ ಹೇಗೋ ತಪ್ಪಿಸಿಕೊಂಡೆನು. ಒಂದು ಸಲ ಈ ಮಹಾಶಯ ನನ್ನನ್ನು ವ್ಯಭಿಚಾರಕ್ಕೆ ಕರೆದುಕೊಂಡು ಹೋದನು. ಮಾಡಬೇಕಾದುದನ್ನೆಲ್ಲ ಹೇಳಿಕೊಟ್ಟು ಒಳಕ್ಕೆ ಕಳುಹಿಸಿ ದನು. ಮೊದಲೇ ಎಲ್ಲವೂ ಏರ್ಪಾಡಾಗಿದ್ದಿತು. ಹಣವನ್ನೂ ಕೊಟ್ಟಾ ಗಿತ್ತು. ನನ್ನ ಕೆಲಸ, ಪಾಪಕಾರ್ಯವನ್ನು ಮಾಡುವುದೊಂದೇ ಆಗಿದ್ದಿತು.

ನಾನು ಪಾಪದ ದವಡೆಗೇ ನುಗ್ಗಿದ್ದೆನು. ಆದರೆ ನಾನು ಜಾರಿ ಬೀಳಬೇಕೆಂದರೂ ಈಶ್ವರ ನನ್ನನ್ನು ಕಾಪಾಡಿದ. ಆ ಪಾಪಕೂಪದಲ್ಲಿ ನಾನು ದಿಗ್ಭ್ರಾಂತನಾಗಿ ಮೂಕನಾದೆನು. ನನ್ನ ಬಾಯಿಂದ ಮಾತೇ ಹೊರಡಲಿಲ್ಲ. ಲಜ್ಜೆಯಿಂದ ಸ್ತಬ್ಧನಾಗಿ ಆಕೆಯ ಬಳಿ ಮಂಚದ ಮೇಲೆ ಕುಳಿತುಬಿಟ್ಟೆನು. ಬಾಯಿಇಂದ ಒಂದು ಶಬ್ದವೂ ಹೊರಡಲಿಲ್ಲ. ಆಕೆಗೆ ಬಹಳ ಸಿಟ್ಟುಬಂದಿತು ; ನನ್ನನ್ನು ನಾಲ್ಕಾರು ಬೈಗುಳ ಬೈದು ಬಾಗಿಲು ತೋರಿಸಿದಳು.

ನನ್ನ ಗಂಡಸುತನಕ್ಕೆ ಅವಮಾನವಾದಂತೆ ತೋರಿತು. ಭೂಮಿ ಬಾಯಿ ಬಿಟ್ಟರೆ ಮಾಯವಾದೇನು ಎನಿಸಿತು. ಆದರೆ ಹಾಗೆ ನನ್ನನ್ನು ಉದ್ಧಾರ ಮಾಡಿದುದಕ್ಕೆ ಎಂದೆಂದಿಗೂ ದೇವರ ಉಪಕಾರವನ್ನು ಸ್ಮರಿಸುತ್ತೇನೆ. ನನ್ನ ಜೀವನದಲ್ಲಿ ಇಂತಹ ಇನ್ನೂ ಮೂರು ನಾಲ್ಕು ಪ್ರಸಂಗಗಳು ಜ್ಞಾಪಕವಿವೆ. ಇವುಗಳಲ್ಲೆಲ್ಲ ಬಹುಪಾಲು, ನನ್ನ ಪ್ರಯತ್ನಕ್ಕಿಂತ ಹೆಚ್ಚಾಗಿ ದೈವಕೃಪೆಯೇ ನನ್ನನ್ನು ಪಾಪದಿಂದ ಪಾರುಮಾಡಿತು. ಸರಿಯಾಗಿ ಸೂಕ್ಷ್ಮದೃಷ್ಟಿಯಿಂದ ನೋಡಿದರೆ, ನಾನು ನೀತಿಮಾರ್ಗ ಚ್ಯುತನಾದೆನೆಂದೇ ಹೇಳಬೇಕು. ಏಕೆಂದರೆ ನನ್ನಲ್ಲಿ ವಿಷಯೇಚ್ಛೆ ಇದ್ದುದರಿಂದ ನಾನು ವಿಷಯವನ್ನು ಭೋಗಿಸಿದಂತೆ ಆಯಿತು. ಆದರೆ ಲೌಕಿಕ ದೃಷ್ಟಿಯಿಂದ ನೋಡಿದರೆ ಇಚ್ಛೆಯಿದ್ದರೂ ಇಚ್ಛೆಗನುಸಾರವಾದ ಕೆಲಸ ಆಗದಿದ್ದರೆ ಆ ಮನುಷ್ಯ ಪ್ರತ್ಯಕ್ಷಕರ್ಮ ದೋಷವನ್ನು ಹೊಂದುವುದಿಲ್ಲ. ಈ ಅರ್ಥದಲ್ಲಿ ಮಾತ್ರ ನಾನು ದೋಷರಹಿತ. ಕೆಲವು ಕಾರ್ಯಗಳಿಂದ ತಪ್ಪಿಸಿಕೊಳ್ಳುವುದು ಪರಮಾತ್ಮನ ಅನುಗ್ರಹ. ಅದರಿಂದ ಅವನಿಗೂ ಅವನ ಸಂಪರ್ಕದಲ್ಲಿರುವ ವ್ಯಕ್ತಿಗಳಿಗೂ ಒಳ್ಳೆಯದು. ಅನಂತರ ಅವನಲ್ಲಿ ವಿಚಾರಶುದ್ಧಿಯುಂಟಾದಾಗ ಹೀಗೆ ತಾನು ತಪ್ಪಿಸಿಕೊಂಡುದು, ಈಶ್ವರನ ಅನುಗ್ರಹದಿಂದಲೇ ಎಂದು ಅವನು ತಿಳಿಯುತ್ತಾನೆ. ಎಷ್ಟೇ ಪ್ರಯತ್ನಪಟ್ಟರೂ, ಮನುಷ್ಯ, ಕೆಳಕ್ಕೆ ಬೀಳುವುದುಂಟು. ಹಾಗೆಯೇ ದುರ್ಮಾರ್ಗದಲ್ಲಿ ಹೋಗಬೇಕೆಂದು ಎಷ್ಟೇ ಇಚ್ಛೆ ಇದ್ದರೂ, ಅವನ ಪ್ರಯತ್ನವೇ ಇಲ್ಲದೇ ಅವನು ಉದ್ಧಾರವಾಗುವುದೂ ಅಸಂಭವ. ಇದರಲ್ಲಿ ಮನುಷ್ಯನ ಸ್ವಾತಂತ್ರ್ಯವೆಷ್ಟು ? ದೈವ ಅಥವಾ ಪರಿಸ್ಥಿತಿಯ ಪಾತ್ರವೇನು ?

ಯಾವುದಕ್ಕೆ ವಶನಾಗಿ ಮನುಷ್ಯ ಬೀಳುತ್ತಾನೆ ? ಅಥವಾ ಪಾರಾಗುತ್ತಾನೆ ? ಇವೆಲ್ಲ ಗೂಢವಾದ ಪ್ರಶ್ನೆಗಳು. ಇವಕ್ಕೆ ಈವರೆಗೆ ಸಮರ್ಪಕವಾದ ಉತ್ತರ ದೊರೆತಿಲ್ಲ. ಮುಂದೆಯೂ ದೊರೆಯುವುದಿಲ್ಲ. ನಮ್ಮ ಕಥೆಯನ್ನು ಮುಂದುವರಿಸೋಣ.

ಇಷ್ಟೆಲ್ಲ ಆದರೂ ಆ ಮಿತ್ರನ ಸ್ನೇಹ ಬಹಳ ಅನಿಷ್ಟವಾದುದೆಂಬ ಜ್ಞಾನ ನನಗೆ ಬರಲೇ ಇಲ್ಲ. ಕಲ್ಪನೆಗೂ ಹೊಳೆಯದ ಅವನ ಇನ್ನೂ ಕೆಲವು ದುಷ್ಕಾರ್ಯಗಳನ್ನು ನಾನು ಪ್ರತ್ಯಕ್ಷವಾಗಿ ನೋಡುವುದು ಬಾಕಿಯಿತ್ತು. ಆದರೆ ನಾನು ಈ ಅನುಭವಗಳನ್ನು ಸಮಯಾನುಕ್ರಮವಾಗಿ ವಿವರಿಸುತ್ತಿರುವುದರಿಂದ, ಅವನ್ನು ಮುಂದೆ ಹೇಳುತ್ತೇನೆ.

ಈ ಸಮಯಕ್ಕೆ ಸಂಬಂಧಪಟ್ಟ ಒಂದು ಸಂಗತಿಯನ್ನು ಹೇಳಬೇಕು. ಆ ವೇಳೆಯಲ್ಲಿ ನನಗೂ ನನ್ನ ಹೆಂಡತಿಗೂ ನಡುವೆ ಸ್ವಲ್ಪ ಮತ ಭೇದವಿತ್ತು. ಅದರ ಕಾರಣವೂ ನಿಸ್ಸಂದೇಹವಾಗಿ ಈ ಸ್ನೇಹವೇ. ನನಗೆ ಹೆಂಡತಿಯಲ್ಲಿ ತುಂಬ ಪ್ರೇಮ ಮತ್ತು ಅಷ್ಟೇ ಅನುಮಾನ ಸಹ ಎಂದು ನಾನು ಮೊದಲೇ ಹೇಳಿರುವೆನಷ್ಟೆ. ಈ ಸ್ನೇಹಿತ, ಆ ಅನುಮಾನದ ಬೆಂಕಿಗೆ ಗಾಳಿ ಬೀಸುತ್ತಿದ್ದನು. ಅವನ ಮಾತಿನಲ್ಲಿ ನನಗೆ ಎಂದಿಗೂ ಅಪನಂಬಿಕೆ ಇರಲಿಲ್ಲ. ಆ ಮಿತ್ರನ ಮಾತನ್ನು ಕೇಳಿಕೊಂಡು ನನ್ನ ಧರ್ಮಪತ್ನಿಗೆ ನಾನು ಬಹಳ ದುಃಖ ಕೊಟ್ಟೆನು. ಹೀಗೆ ಹಿಂಸೆ ಕೊಟ್ಟುದುದಕ್ಕಾಗಿ, ಎಷ್ಟು ಪಶ್ಚಾತ್ತಾಪ ಪಟ್ಟರೂ ನನಗೆ ಸಮಾಧಾನವಾಗಿಲ್ಲ. ಹಿಂದೂ ಸ್ತ್ರೀಯೊಬ್ಬಳು ಮಾತ್ರ ಇಂತಹ ಕಷ್ಟವನ್ನು ಸಹಿಸಬಲ್ಲಳು. ಆದುದರಿಂದಲೇ ಹೆಂಗಸರು ಸಹನಶೀಲಮೂರ್ತಿಯರೆಂದು ನಾನು ಯಾವಾಗಲೂ ಹೇಳುತ್ತೇನೆ. ಒಬ್ಬ ಆಳನ್ನು ನಿಷ್ಕಾರಣವಾಗಿ ಶಂಕಿಸಿದರೆ ಅವನು ಕೆಲಸ ಬಿಟ್ಟು ಹೋದಾನು. ಹಾಗೆಯೇ ಮಗನಲ್ಲಿ ಸಂಶಯ ಬಂದರೆ, ಅವನು ತಂದೆಯ ಮನೆಯನ್ನು ಬಿಟ್ಟು ಹೋಗಬಹುದು. ಮಿತ್ರರೊಳಗೆ ಸಂಶಯ ಬಂದರೆ ಮಿತ್ರತ್ವವನ್ನು ಕತ್ತರಿಸಿ ಹಾಕಬಹುದು. ಹೆಂಡತಿಗೆ ಗಂಡನಲ್ಲಿ ಸಂಶಯ ಬಂದರೂ, ಆ ಬಡಪಾಯಿ ತೆಪ್ಪಗಿರಬೇಕು. ಆದರೆ ಗಂಡನಿಗೆ ಹೆಂಡತಿಯ ಮೇಲೆ ಸಂಶಯ ಬಂದರೆ, ಅವಳ ಗತಿ ಮುಗಿಯಿತು. ಅವಳು ಹೋಗುವುದೆಲ್ಲಿಗೆ ? ಹಿಂದೂ ಸ್ತ್ರೀ, ನ್ಯಾಯಸ್ಥಾನಕ್ಕೆ ಹೋಗಿ ವಿವಾಹ ವಿಚ್ಛೇದ ಮಾಡಿಕೊಳ್ಳ

ಮಂತಿಲ್ಲ. ಅವಳಿಗೆ ಯಾವ ನ್ಯಾಯ ರೂಪದ ಪರಿಹಾರವೂ ಇಲ್ಲ. ನಾನು ಹೀಗೆ ನನ್ನ ಹೆಂಡತಿಯನ್ನು ಸಂಕಟಪಡಿಸಿದುದನ್ನು ಮರೆಯಲಾರೆನು. ಮತ್ತು ನನ್ನನ್ನು ಕ್ಷಮಿಸಿಕೊಳ್ಳಲಾರೆನು. ನನಗೆ ಅಹಿಂಸೆಯ ಸೂಕ್ಷ್ಮ ಜ್ಞಾನವುಂಟಾದಾಗಲೇ ಈ ಸಂಶಯ ಪೂರ್ತಿ ನಾಶವಾದುದು. ಆಗ ನನಗೆ ಬ್ರಹ್ಮಚರ್ಯದ ಮಹಿಮೆ ಗೊತ್ತಾಯಿತು. "ಹೆಂಡತಿ ಗಂಡನ ದಾಸಿಯಲ್ಲ. ಅವಳು ಸಹಚಾರಿಣಿ. ಇಬ್ಬರೂ ಪರಸ್ಪರ ಸುಖದುಃಖದಲ್ಲಿ ಸಮಾನರಾಗಿ ಭಾಗಿಗಳು. ಸ್ವತಂತ್ರವಾಗಿ ಕಾರ್ಯ ಮಾಡಲು ಗಂಡನಿಗೆ ಇರುವಂತೆ ಹೆಂಡತಿಗೂ ಸ್ವಾತಂತ್ರ್ಯವಿದೆ" ಎಂಬುದರ ಅರಿವಾಯಿತು. ಆ ಕಾಲದ ನೆನಪು ಬಂದಾಗಲೆಲ್ಲ ನನ್ನ ಮೂರ್ಖತೆ, ವಿಷಯಾಂಧತೆ ಮತ್ತು ನಿಷ್ಕರುಣೆಯ ಬಗ್ಗೆ ಕೋಪ ಬರುತ್ತದೆ. ಆ ಕುರುಡು ಮಿತ್ರತ್ವದ ಬಗ್ಗೆ, ಕನಿಕರ ಹುಟ್ಟುತ್ತದೆ.

೮

ಕಳ್ಳತನ ಮತ್ತು ಪ್ರಾಯಶ್ಚಿತ್ತ

ಮಾಂಸಾಹಾರ ಮಾಡುತ್ತಿದ್ದ ಕಾಲದ ಮತ್ತು ಅದಕ್ಕೆ ಹಿಂದಿನ ನನ್ನ ಕೆಲವು ದೋಷಗಳನ್ನು ಹೇಳಬೇಕಾದುದು ಇನ್ನೂ ಬಾಕಿಯಿದೆ. ಅವು ನನ್ನ ಮದುವೆಯಾದ ಮೇಲೋ ಅಥವಾ ಅದಕ್ಕೆ ಮುಂಚೆಯೋ ಸಂಭವಿಸಿದುವು.

ನಾನೂ ನಮ್ಮ ಒಬ್ಬ ನೆಂಟನೂ ಸಿಗರೇಟು ಸೇದುವುದರಲ್ಲಿ ತೊಡಗಿದೆವು. ನಮ್ಮ ಹತ್ತಿರ ದುಡ್ಡು ಇರಲಿಲ್ಲ. ಸಿಗರೇಟು ಸೇದುವುದರಲ್ಲಿ ಏನೋ ಲಾಭವಿದೆಯೆಂದು ನಾವು ಎಣಿಸಿರಲಿಲ್ಲ. ಅದರ ವಾಸನೆ ನಮ್ಮನ್ನು ಆಕರ್ಷಿಸಲಿಲ್ಲ. ಹೊಗೆ ಬಿಡುವುದರಲ್ಲಿ ಏನೋ ಒಂದು ಆನಂದವಿದೆ ಎಂಬುದನ್ನಂತೂ ತಿಳಿದಿದ್ದೆವು—ನಮ್ಮ ಚಿಕ್ಕಪ್ಪನಿಗೆ ಅದರ ರೂಢಿ ಇತ್ತು. ಆತನೂ ಉಳಿದವರೂ ಸೇದುವುದನ್ನು ನೋಡಿ ನಾವೂ ಹಾಗೆಯೇ ಮಾಡಬೇಕೆಂದು ಇಚ್ಛೆಯುಂಟಾಯಿತು. ನಮ್ಮ ಕೈಯಲ್ಲಿ ಕಾಸಂತೂ ಇರಲಿಲ್ಲ. ನಮ್ಮ ಚಿಕ್ಕಪ್ಪ ಸೇದಿ ಎಸೆದಿದ್ದ ತುಂಡುಗಳನ್ನು ಕದ್ದು ಸೇದತೊಡಗಿದೆವು.

ಆದರೆ ಆ ತುಂಡುಗಳು ಯಾವಾಗಲೂ ಸಿಗುತ್ತಿರಲಿಲ್ಲ. ಸಿಕ್ಕಿದರೂ ಅವುಗಳಿಂದ ತುಂಬ ಹೊಗೆಯು ಬರುತ್ತಿರಲಿಲ್ಲ. ಆದುದರಿಂದ ಮನೆಯ ನೌಕರನ ಜೇಬಿನಿಂದ ಒಂದೆರಡು ಬಿಲ್ಲೆಗಳನ್ನು ಕದ್ದು, ದೇಶೀ ಸಿಗರೇಟು ಗಳನ್ನು ಸೇದುತ್ತಿದ್ದೆವು. ಆದರೆ ಅವುಗಳನ್ನು ಎಲ್ಲಿ ಇಟ್ಟುಕೊಳ್ಳುವುದು ಎಂಬುದೇ ಸಮಸ್ಯೆಯಾಗಿದ್ದಿತು. ಹಿರಿಯರ ಎದುರಿಗೆ ಸೇದುವುದು ಸಾಧ್ಯ ವಿರಲಿಲ್ಲ. ನಾಲ್ಕಾರು ಬಿಲ್ಲೆಗಳನ್ನು ಕದ್ದು ಕೆಲವು ವಾರ, ಸಾಗಿಸಿದೆವು. ಇಷ್ಟರಲ್ಲಿ "ಒಂದು ಗಿಡವಿದೆ (ಅದರ ಹೆಸರು ಜ್ಞಾಪಕವಿಲ್ಲ) ಅದನ್ನು ಸಿಗರೇಟಿನ ಹಾಗೆ ಹಚ್ಚಿಕೊಂಡು ಸೇದಬಹುದೆಂದು" ತಿಳಿಯಿತು. ಅದನ್ನೇ ಹತ್ತಿಸಿ ಕೊಂಡು ಸೇದತೊಡಗಿದೆವು.

ಆದರೆ ನಮಗೆ ಅದರಿಂದ ಸಂತೋಷವಾಗಲಿಲ್ಲ. ನಮ್ಮ ಪರಾಧೀನತೆ, ನಮ್ಮನ್ನು ಚುಚ್ಚತೊಡಗಿತು, ದೊಡ್ಡವರ ಅಪ್ಪಣೆಯಿಲ್ಲದೆ ಏನೂ ಮಾಡುವ ಹಾಗಿಲ್ಲ, ಇದನ್ನು ಸಹಿಸಲು ಅಸಾಧ್ಯವಾಯಿತು, ಕೊನೆಗೆ ಬೇಸರಗೊಂಡು ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದೆವು.

ಆದರೆ ಆತ್ಮಹತ್ಯೆ ಮಾಡಿಕೊಳ್ಳುವುದು ಹೇಗೆ? ವಿಷವನ್ನು ಎಲ್ಲಿಂದ ತರುವುದು? ದತ್ತೂರದ ಬೀಜ ತಿಂದರೆ ಮನುಷ್ಯ ಸಾಯುವನೆಂದು ಕೇಳಿದ್ದೆವು. ಕಾಡಿನಲ್ಲಿ ಅಲೆದು ಬೀಜವನ್ನು ತಂದೆವು. ಮುಹೂರ್ತವನ್ನು ಒಂದು ದಿನ ಸಂಜೆಗೆ ಇಟ್ಟುಕೊಂಡೆವು. ಕೇದಾರಸ್ವಾಮಿ ದೇವಸ್ಥಾನಕ್ಕೆ ಹೋಗಿ ದೇವರ ದರ್ಶನಮಾಡಿ ದೀಪಕ್ಕೆ ತುಪ್ಪಹಾಕಿ, ಏಕಾಂತ ಸ್ಥಳಕ್ಕೆ ಹೋದೆವು. ಆದರೆ ವಿಷ ಕುಡಿಯಲು ಧೈರ್ಯವಾಗಲಿಲ್ಲ, ತತ್‌ಕ್ಷಣ ಪ್ರಾಣ ಹೋಗದಿದ್ದರೋ? ಕೊನೆಗೆ ಆತ್ಮಹತ್ಯದಿಂದ ಲಾಭವೇನು? ಪರಾಧೀನ ರಾಗಿದ್ದರೆ ತಾನೆ ಏನು? ಮುಂತಾದ ವಿಚಾರಗಳು ಮನಸ್ಸಿನಲ್ಲಿ ಬಂದವು. ಮೂರು ನಾಲ್ಕು ಬೀಜಗಳನ್ನು ತಿಂದೆವು. ಇನ್ನು ಹೆಚ್ಚಿಗೆ ತಿನ್ನಲು ಧೈರ್ಯ ಬರಲಿಲ್ಲ. ಇಬ್ಬರೂ ಸಾವಿಗೆ ಹೆದರಿದೆವು. ರಾಮದೇವರ ದೇವಸ್ಥಾನಕ್ಕೆ ಹೋಗಿ ದರ್ಶನ ಹೊಂದಿ ಶಾಂತರಾಗಿ ಆತ್ಮಹತ್ಯೆಯ ವಿಚಾರವನ್ನು ಮರೆಯ ಬೇಕೆಂದು ನಿಶ್ಚಯಿಸಿದೆವು.

ಆತ್ಮಹತ್ಯೆಯ ವಿಚಾರ ಮಾಡುವುದು ಸುಲಭ. ಆದರೆ ಆತ್ಮಹತ್ಯೆ ಮಾಡಿಕೊಳ್ಳುವುದು ಸುಲಭವಲ್ಲ, ಅಂದಿನಿಂದ ಯಾರಾದರೂ ಆತ್ಮಹತ್ಯೆ

ಮಾಡಿಕೊಳ್ಳುವೆವೆಂದು ಹೆದರಿಸಿದರೆ, ನಾನು ಅದನ್ನು ಲಕ್ಷಿಸುವುದಿಲ್ಲ.

ಆತ್ಮಹತ್ಯೆಯ ವಿಚಾರದಿಂದ ಒಂದು ಪರಿಣಾಮವಾಯಿತು. ನಾವಿಬ್ಬರೂ ಸಿಗರೇಟು ತುಂಡುಗಳನ್ನು ಸೇದುವುದನ್ನೂ ಆಳಿನ ಜೇಬಿನಿಂದ ಕಾಸು ಕದಿಯುವುದನ್ನೂ ಬಿಟ್ಟುಬಿಟ್ಟೆವು. ದೊಡ್ಡವನಾದ ಮೇಲೆ ಸಿಗರೇಟು ಸೇದುವ ಆಸೆ ನನಗೆ ಎಂದೂ ಉಂಟಾಗಿಲ್ಲ. ಈ ಅಭ್ಯಾಸ ಅಸಹ್ಯ, ಅಸಭ್ಯ, ಹಾನಿಕಾರಕ, ಎಂದು ನಾನು ತಿಳಿದಿದ್ದೇನೆ. ಜಗತ್ತಿನಲ್ಲಿ ಬೀಡಿ, ಸಿಗರೇಟು ಚಟ ಇಷ್ಟು ಏಕೆ ಎಂಬುದು ನನಗೆ ಅರ್ಥವಾಗಿಲ್ಲ. ರೈಲುಗಾಡಿಯ ತುಂಬ ಕುಳಿತ ಜನ ಸಿಗರೇಟು ಸೇದುತ್ತಿದ್ದರೆ, ಅಲ್ಲಿ ಕುಳಿತುಕೊಳ್ಳಲು ನನಗೆ ಕಷ್ಟವಾಗುತ್ತದೆ.

ಸಿಗರೇಟು ಚೂರುಗಳನ್ನು ಕದ್ದುದು, ಸಿಗರೇಟಿಗಾಗಿ ನೌಕರನ ಜೇಬಿನ ಕಾಸು ಕದ್ದುದು ಇವಕ್ಕಿಂತ ಮುಖ್ಯವಾದುದು ಇವುಗಳಾದ ಮೇಲೆ ನಾನು ಮಾಡಿದ ಕಳ್ಳತನ. ಸಿಗರೇಟಿಗಾಗಿ ಕಾಸು ಕದ್ದಾಗ ನನಗೆ ೧೨-೧೩ ಅಥವಾ ಇನ್ನೂ ಕಡಿಮೆ ವಯಸ್ಸು. ಮತ್ತೊಂದು ಕಳ್ಳತನ ಮಾಡಿದಾಗ ನನ್ನ ವಯಸ್ಸು ಹದಿನೈದು ಆಗಿದ್ದಿತು, ಆ ಕಳವು ನನ್ನ ಮಾಂಸಾಹಾರಿ ಅಣ್ಣನ ಚಿನ್ನದ ಬಳೆಯ ಚೂರು. ಆ ಅಣ್ಣ ಸುಮಾರು ಇಪ್ಪತ್ತೈದು ರೂಪಾಯಿ ಸಾಲ ಮಾಡಿದ್ದನು. ಈ ಸಾಲವನ್ನು ಹೇಗೆ ತೀರಿಸುವುದೆಂದು ನಾವಿಬ್ಬರೂ ಯೋಚಿಸಿದೆವು. ಅವನ ಕೈಯಲ್ಲಿ ಚಿನ್ನದ ಬಳೆಯಿತ್ತು. ಅದರಿಂದ ಒಂದು ಚೂರನ್ನು ಕತ್ತರಿಸಿಕೊಳ್ಳುವುದೇನೂ ಕಷ್ಟವಾಗಲಿಲ್ಲ.

ಕಡಗ ಕತ್ತರಿಸಿ ಸಾಲ ತೀರಿಸಿದುದಾಯಿತು. ಆದರೆ ನನಗೆ ಅದನ್ನು ಸಹಿಸಲಾಗಲಿಲ್ಲ, ಮುಂದೆಂದೂ ಕಳ್ಳತನ ಮಾಡುವುದಿಲ್ಲವೆಂದು ನಿಶ್ಚಯಿಸಿದೆನು. ತಂದೆಯಲ್ಲಿ ಹೋಗಿ ತಪ್ಪು ಒಪ್ಪಿಕೊಳ್ಳಬೇಕೆಂದು ಮನಸ್ಸಿಗೆ ಬಂದಿತು. ಆದರೆ ಅವರ ಮುಂದೆ ಬಾಯಿ ತೆರೆಯುವುದೇ ಕಷ್ಟವಾಯಿತು. ಅವರು ಹೊಡೆಯುವ ಭಯವೇನೂ ಇರಲಿಲ್ಲ. ಅವರು ನಮ್ಮನ್ನು ಯಾವಾಗಲೂ ಹೊಡೆದುದು ಜ್ಞಾಪಕವಿಲ್ಲ. ಅವರಿಗೆ ತುಂಬ ಸಂತಾಪವುಂಟಾಗಿ ತಮ್ಮ ತಲೆಯನ್ನೇ ಚಚ್ಚಿಕೊಳ್ಳಬಹುದೆಂಬ ಭಯ ನನಗಿದ್ದಿತು. ಕೊನೆಗೆ "ಏನೇ ಆಗಲಿ, ಎಲ್ಲವನ್ನೂ ಅವರಿಗೆ ಹೇಳಿಬಿಡಬೇಕು. ತಪ್ಪನ್ನು ಒಪ್ಪಿಕೊಳ್ಳದೆ ಆತ್ಮಶುದ್ಧಿಯಿಲ್ಲ" ಎನಿಸಿತು.

ಕೊನೆಗೆ ಕಾಗದವಲ್ಲಿ ಎಲ್ಲವನ್ನೂ ಬರೆದು ಕೊಟ್ಟು ಅವರ ಕ್ಷಮೆ ಬೇಡಬೇಕೆಂದು ನಿರ್ಧರಿಸಿದೆನು. ಕಾಗದವನ್ನು ಬರೆದುಕೊಂಡು ನಾನೇ ಅದನ್ನು ಅವರ ಕೈಗೆ ಕೊಟ್ಟೆನು. ಜತೆಗೆ ನನ್ನ ತಪ್ಪನ್ನು ಒಪ್ಪಿಕೊಂಡು ಶಿಕ್ಷೆ ವಿಧಿಸುವಂತೆ ಕೇಳಿ ತಾವು ದುಃಖಿಸಕೂಡದೆಂದೂ ಇನ್ನು ಮುಂದೆ ಇಂತಹ ಅಪರಾಧ ಮಾಡುವುದಿಲ್ಲವೆಂದೂ ಪ್ರತಿಜ್ಞೆ ಮಾಡಿದ್ದೆನು.

ತಂದೆಯವರಿಗೆ ಚೀಟಿಯನ್ನು ಕೊಟ್ಟಾಗ, ನನ್ನ ಕೈಕಾಲು ನಡುಗಿತು. ಆ ಸಮಯದಲ್ಲಿ ಅವರು ಭಗಂದರ ರೋಗದಿಂದ ನರಳುತ್ತಿದ್ದರು. ಹಾಸಿಗೆಯನ್ನು ಬಿಟ್ಟು ಬರಿಯ ಹಲಗೆಯ ಮೇಲೆ ಮಲಗಿದ್ದರು. ನಾನು ಹೋಗಿ ಕಾಗದವನ್ನು ಕೊಟ್ಟು ಅವರ ಮುಂದೆ ಕುಳಿತೆನು.

ಅವರು ಕಾಗದವನ್ನು ಓದಿದರು. ಮುತ್ತಿನಂತಹ ಕಣ್ಣೀರು ಕಾಗದದ ಮೇಲೆ ಬಿದ್ದು ಅದನ್ನು ತೋಯಿಸಿತು. ಸ್ವಲ್ಪ ಹೊತ್ತು ಕಣ್ಣು ಮುಚ್ಚಿಕೊಂಡಿದ್ದರು. ಅನಂತರ ಚೀಟಿಯನ್ನು ಹರಿದು ಹಾಕಿದರು. ಚೀಟಿಯನ್ನು ಓದುವುದಕ್ಕಾಗಿ ಎದ್ದು ಕುಳಿತಿದ್ದವರು ಮತ್ತೆ ಮಲಗಿ ಕೊಂಡರು.

ನಾನೂ ಅತ್ತೆನು. ನಮ್ಮ ತಂದೆಯ ದುಃಖ ಕಣ್ಣಿಗೇ ಕಾಣುತ್ತಿತ್ತು. ನಾನು ಚಿತ್ರಗಾರನಾಗಿದ್ದಿದ್ದರೆ ಅದನ್ನು ಚಿತ್ರಿಸುತ್ತಿದ್ದೆನು. ಆ ದೃಶ್ಯ ಈಗಲೂ ನನ್ನ ಮನೋನೇತ್ರದ ಎದುರಿಗೆ ಅಷ್ಟು ಸ್ಪಷ್ಟವಾಗಿದೆ.

ಆ ಕಣ್ಣೀರಿನ ಮುತ್ತಿನ ಹನಿಗಳ ಪ್ರೇಮಬಾಣ, ನನ್ನ ಕಲ್ಮಶವನ್ನು ಕೊಚ್ಚಿ ಹಾಕಿತು. ನಾನು ಶುದ್ಧನಾದೆನು. ಅನುಭವಿಸಿದವರಿಗೆ ಮಾತ್ರ ಆ ಪ್ರೇಮವೇನೆಂಬುದು ಗೊತ್ತು. ಒಂದು ಗೀತೆ ಹೇಳುವಂತೆ,

ರಾಮಬಾಣ ಹೊಕ್ಕವನು ಮಾತ್ರ ಅದರ ಶಕ್ತಿಯನ್ನು ಅರಿಯಬಲ್ಲ.

ಇದು ನನಗೆ ಅಹಿಂಸೆಯ ಪ್ರತ್ಯಕ್ಷ ಪಾಠವಾಯಿತು. ಆ ಸಮಯ ದಲ್ಲಿ ಇದರಲ್ಲಿ ಪಿತೃವಾತ್ಸಲ್ಯದ ಹೊರತು ನನಗೆ ಮತ್ತೇನೂ ಹೆಚ್ಚು ಕಾಣಲಿಲ್ಲ. ಆದರೆ ಇಂದು ಅದು ಶುದ್ಧ ಅಹಿಂಸೆಯೆಂದು ನನಗೆ ಗೊತ್ತು. ಅಹಿಂಸೆ, ವ್ಯಾಪಕವಾಗಿ ಹರಡಿದರೆ ಅದರ ಪ್ರಭಾವದಿಂದ ಯಾರೂ ದೂರ ನಾಗಲಾರರು. ಅದರ ಶಕ್ತಿಗೆ ಕೊನೆಯೇ ಇಲ್ಲ.

ಇಂತಹ ಶಾಂತಿಮಯ ಕ್ಷಮೆ ನಮ್ಮ ತಂದೆಯ ಸ್ವಭಾವವಾಗಿರಲಿಲ್ಲ. ಅವರು ಸಿಟ್ಟಾಗುತ್ತಾರೆ, ಬಯ್ಯುತ್ತಾರೆ. ತಮ್ಮ ತಲೆಯನ್ನು ಚಚ್ಚಿಕೊಳ್ಳ ಬಹುದು ಎಂದು ನಾನು ಭಾವಿಸಿದ್ದೆನು. ಆದರೆ ಅವರು ಅದ್ಭುತ ಶಾಂತಿಯ ರೂಪವೇ ಆಗಿದ್ದರು. ಇದು ನಾನು ಶುದ್ಧ ಹೃದಯದಿಂದ ನನ್ನ ತಪ್ಪನ್ನು ಒಪ್ಪಿಕೊಂಡುದರ ಪರಿಣಾಮವೆಂದು ಭಾವಿಸುತ್ತೇನೆ. ಕ್ಷಮಿಸುವ ಅಧಿಕಾರವುಳ್ಳವರ ಮುಂದೆ ನಮ್ಮ ತಪ್ಪನ್ನು ಒಪ್ಪಿಕೊಂಡು, ಇನ್ನು ಮುಂದೆ ಹಾಗೆ ಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡುವುದು ಅತ್ಯಂತ ಪರಿಶುದ್ಧ ಪ್ರಾಯಶ್ಚಿತ್ತ. ನಾನು ಹಾಗೆ ನಡೆದುದರಿಂದ ನಮ್ಮ ತಂದೆ, ನನ್ನ ವಿಷಯದಲ್ಲಿ ನಿಶ್ಚಿಂತರಾದರು. ಅವರಿಗೆ ನನ್ನಲ್ಲಿದ್ದ ಅಗಾಧ ಪ್ರೇಮ, ಇನ್ನೂ ಅಧಿಕವಾಯಿತು.

೯

ನಮ್ಮ ತಂದೆಯ ಮರಣ ಮತ್ತು ನನ್ನ ಇಮ್ಮಡಿ ಅವಮಾನ

ಈಗ ನಾನು ಹೇಳುತ್ತಿರುವುದು ನನ್ನ ಹದಿನಾರನೆಯ ವಯಸ್ಸಿಗೆ ಸಂಬಂಧಪಟ್ಟದು. ನಾನು ಮೊದಲೇ ಹೇಳಿರುವಂತೆ, ನಮ್ಮ ತಂದೆ ಭಗಂದರ ರೋಗದಿಂದ ನರಳುತ್ತಿದ್ದರು. ನಮ್ಮ ತಾಯಿ, ಒಬ್ಬ ಹಳೇ ಆಳು, ಮತ್ತು ನನ್ನ ಮೇಲೆಯೇ ಅವರ ಶುಶ್ರೂಷೆಯ ಅಧಿಕಾಂಶದ ಹೊರೆ ಬಿದ್ದಿದ್ದಿತು. ನಾನು, ದಾದಿಯಂತೆ ಸೇವೆ ಮಾಡುತ್ತಿದ್ದೆನು. ಗಾಯ ವನ್ನು ತೊಳೆದು ಬಟ್ಟೆಕಟ್ಟುವುದು, ಔಷಧಿ ಕೊಡುವುದು, ಮೂಲಿಕೆ ಗಳನ್ನು ಪುಡಿಮಾಡಿ ತಯಾರಿಸುವುದು, ಇವು ನನ್ನ ಮುಖ್ಯ ಕೆಲಸವಾಗಿ ದ್ದುವು. ರಾತ್ರಿ ಅವರ ಕಾಲುಗಳನ್ನು ಅದುಮುತ್ತಿದ್ದು ಮತ್ತೆ ಅವರಿಗೆ ನಿದ್ರೆ ಬಂದಾಗ ಅಥವಾ ಅವರು ಹೋಗು ಎಂದು ಹೇಳಿದಾಗ ನಾನು ಹೋಗಿ ಮಲಗಿಕೊಳ್ಳುತ್ತಿದ್ದೆನು. ಈ ಸೇವೆ ನನಗೆ ಬಹಳ ಪ್ರಿಯ ವಾಗಿದ್ದಿತು. ಈ ಸೇವೆಯನ್ನು ನಾನು ಎಂದೂ ಉದಾಸೀನ ಮಾಡಿದ ಜ್ಞಾಪಕವಿಲ್ಲ. ಅದು ನನ್ನ ಪ್ರೌಢಶಾಲೆಯ ದಿನಗಳು. ಆದುದರಿಂದ ನನ್ನ ನಿತ್ಯ ಕಾರ್ಯಗಳನ್ನು ಮಾಡಿಕೊಂಡು ಉಳಿದ ಕಾಲವನ್ನು ಶಾಲೆಗೂ ನಮ್ಮ ತಂದೆಯ ಸೇವೆಗೂ ವಿನಿಯೋಗಿಸುತ್ತಿದ್ದೆನು. ನಮ್ಮ ತಂದೆ

ಹೋಗೆಂದು ಹೇಳಿದಾಗ, ಅಥವಾ ಅವರ ಆರೋಗ್ಯ ತೃಪ್ತಿಕರವಾಗಿದ್ದಾಗ ಮಾತ್ರ, ನಾನು ಸಂಜೆ ತಿರುಗಾಡಲು ಹೋಗುತ್ತಿದ್ದೆನು. ಅದೇ ಸಮಯದಲ್ಲಿ ನನ್ನ ಹೆಂಡತಿ ಗರ್ಭವತಿಯಾಗಿದ್ದಳು. ಇಂದು ಯೋಚಿಸಿದರೆ, ಅದು ನನ್ನ ದ್ವಿಗುಣ ಅವಮಾನವಾಗಿ ತೋರುತ್ತದೆ. ನನ್ನ ವಿಷಯ ಸುಖಲಾಲಸೆ ಹಾಗಿದ್ದಿತು. ವಿದ್ಯಾರ್ಥಿಯಾದ ನನಗೆ, ಇನ್ನೂ ಹೆಚ್ಚು ಸಂಯಮ ಇರಬೇಕಾಗಿದ್ದಿತು. ನನ್ನ ವ್ಯಾಸಂಗ, ನನ್ನ ಮುಖ್ಯ ಕರ್ತವ್ಯವಾಗಿದ್ದಿತು. ನನ್ನ ಪಿತೃ ಸೇವೆ ಅದಕ್ಕಿಂತಲೂ ಮುಖ್ಯ ಕರ್ತವ್ಯವಾಗಿದ್ದಿತು. ನನ್ನ ವಿಷಯಸುಖದ ಆಸೆ, ಈ ಕರ್ತವ್ಯಗಳನ್ನೆಲ್ಲ ಮೀರಿಸಿತು. ಬಾಲ್ಯದಿಂದ, ಶ್ರವಣನು ನನ್ನ ಆದರ್ಶವಾದದ್ದು ವ್ಯರ್ಥವಾಯಿತು. ಪ್ರತಿ ರಾತ್ರಿಯೂ. ನನ್ನ ಕೈಗಳು ನಮ್ಮ ತಂದೆಯ ಕಾಲನ್ನು ಒತ್ತುತ್ತಿರುವಾಗ, ನನ್ನ ಮನಸ್ಸು ಶಯನಗೃಹದಲ್ಲಿ ವಿಹರಿಸುತ್ತಿದ್ದಿತು; ಅದರಲ್ಲಿಯೂ, ವೈದ್ಯಶಾಸ್ತ್ರವೂ ವ್ಯವಹಾರ ಶಾಸ್ತ್ರವೂ ಧರ್ಮಶಾಸ್ತ್ರ ಯಾವ ಸಮಯದಲ್ಲಿ ಸ್ತ್ರೀಸಂಗ ತ್ಯಾಜ್ಯವೆಂದು ಹೇಳುತ್ತದೋ ಆ ಸಮಯಲ್ಲಿ ತಂದೆಯ ಶುಶ್ರೂಷೆಯಿಂದ ನನಗೆ ಬಿಡುಗಡೆ ದೊರೆತ ಕೂಡಲೇ, ನಾನು ಅವರಿಗೆ ನಮಸ್ಕರಿಸಿ ನೆಟ್ಟಗೆ ಶಯನಗೃಹಕ್ಕೆ ಹೋಗುತ್ತಿದ್ದೆನು. ದಿನದಿನಕ್ಕೆ ನಮ್ಮ ತಂದೆಯ ಕಾಯಿಲೆ ಹೆಚ್ಚುತ್ತಾ ಹೋಗುತ್ತಿದ್ದಿತು. ದೇಶೀಯ ವೈದ್ಯರು ತಮ್ಮ ಲೇಪಗಳನ್ನು ಹಚ್ಚಿದರು. ಹಕೀಮರು ತಮ್ಮ ಪಟ್ಟಿಗಳನ್ನು ಹಚ್ಚಿದರು. ಸ್ಥಳದ ವೈದ್ಯರು ತಮ್ಮ ಔಷಧಿ ಕುಡಿಸಿದರು. ಇಂಗ್ಲಿಷ್ ಡಾಕ್ಟರ್ ತಮ್ಮ ಸಾಹಸ ತೋರಿಸಿದರು. ಶಸ್ತ್ರವೈದ್ಯರು ಶಸ್ತ್ರ ಚಿಕಿತ್ಸೆಯ ಹೊರತು ಬೇರೆ ದಾರಿ ಇಲ್ಲವೆಂದರು. ಆದರೆ ನಮ್ಮ ಕುಟುಂಬದ ವೈದ್ಯರು ಅದಕ್ಕೆ ಅಡ್ಡಿಯಾಗಿ, ಇಂಥ ಇಳಿವಯಸ್ಸಿನಲ್ಲಿ ಶಸ್ತ್ರ ಚಿಕಿತ್ಸೆ ಯೋಗ್ಯವಲ್ಲವೆಂದರು. ಅವರು ಹೆಸರುವಾಸಿಯಾದವರಾದುದರಿಂದ, ಅವರ ಮಾತೇ ನಡೆಯಿತು. ಶಸ್ತ್ರ ಚಿಕಿತ್ಸೆಗಾಗಿ ಕೊಂಡ ಅನೇಕ ಔಷಧಿಗಳು ವ್ಯರ್ಥವಾದುವು. ಶಸ್ತ್ರಚಿಕಿತ್ಸೆಗೆ ಅವಕಾಶ ಕೊಟ್ಟಿದ್ದರೆ, ರೋಗ ಗುಣವಾಗುತ್ತಿದ್ದಿತೆಂದು ನನ್ನ ನಂಬಿಕೆ. ಆಗುವುದಾಗಿದ್ದರೆ, ಶಸ್ತ್ರಚಿಕಿತ್ಸೆ ಬೊಂಬಾಯಿನ ಅಂದು ಹೆಸರುವಾಸಿಯಾಗಿದ್ದ ಒಬ್ಬ ವೈದ್ಯರಿಂದ ಆಗುವುದಿತ್ತು. ಆದರೆ ದೇವರ ಇಚ್ಛೆ ಬೇರೆಯಾಗಿದ್ದಿತು. ನಮ್ಮ ತಂದೆ ಅನುಪಯೋಗಿಯಾದ, ಶಸ್ತ್ರಚಿಕಿತ್ಸೆಗೆ ಸಂಬಂಧಪಟ್ಟ ಔಷಧ ಉಪಕರಣಗಳನ್ನು

ತೆಗೆದುಕೊಂಡು ಬೊಂಬಾಯಿನಿಂದ ಹಿಂದಿರುಗಿದರು. ಅವರು ಬದುಕುವ ಆಸೆಯನ್ನೇ ಬಿಟ್ಟರು. ದಿನ ಕಳೆದಂತೆ ಅವರ ಶಕ್ತಿ ಪೂರ್ಣವಾಗಿ ಕಡಿಮೆ ಯಾಯಿತು. ದೇಹಬಾಧೆಯನ್ನು ಹಾಸಿಗೆಯಲ್ಲಿಯೇ ತೀರಿಸಿಕೊಳ್ಳುವಂತೆ ನಾವು ಅವರನ್ನು ಬಲಾತ್ಕರಿಸಿದೆವು. ಆದರೆ ಅವರು ಇದಕ್ಕೆ ಏನಾದರೂ ಕಡೆಯವರೆಗೂ ಒಪ್ಪಲಿಲ್ಲ. ಪ್ರತಿಸಲ ಏಳುವಾಗಲೂ ತುಂಬ ಯಾತನೆ ಯಾದರೂ ಹಾಸಿಗೆಯಿಂದ ಎದ್ದು ಹೋಗುತ್ತಿದ್ದರು. ಬಾಹ್ಯ ಶುದ್ಧತೆಯ ವಿಷಯದಲ್ಲಿ ವೈಷ್ಣವ ಧರ್ಮನಿಯಮಗಳು ಬಹಳ ಕಠಿಣ. ಬಾಹ್ಯ ಶುದ್ಧಿ ಆವಶ್ಯಕ. ಪಾಶ್ಚಾತ್ಯ ವೈದ್ಯಪದ್ಧತಿಯಲ್ಲಿ, ಸ್ನಾನ, ದೇಹಬಾಧೆ ನಿವಾರಣೆ ಎಲ್ಲ ಹಾಸಿಗೆಯಲ್ಲಿಯೇ ಸಾಧ್ಯ, ಇದರಿಂದ ರೋಗಿಗೂ ಕಷ್ಟವಿಲ್ಲ. ಈ ಸ್ವಚ್ಛತೆ ವೈಷ್ಣವ ಧರ್ಮಕ್ಕೆ ಅನುಕೂಲವಾಗಿದೆ. ಆದರೆ ನಮ್ಮ ತಂದೆ ಸ್ನಾನಾದಿ ಗಳನ್ನು ಮಾಡಲು ಹಾಸಿಗೆಯಿಂದ ಏಳಲು ಹಠ ಹಿಡಿದು, ಅದರಂತೆ ನಡೆಸು ತ್ತಿದ್ದುದನ್ನು ನೋಡಿ ನನಗೆ ಆಶ್ಚರ್ಯವುಂಟಾಗುತ್ತಿದ್ದಿತು. ಮನಸ್ಸಿನಲ್ಲಿ ಅವರನ್ನು ಸ್ತುತಿಸಿದೆನು.

ಅವರ ಅವಸಾನದ ಘೋರ ರಾತ್ರಿ ಬಂದಿತು. ನಮ್ಮ ಚಿಕ್ಕಪ್ಪ, ಆಗ ರಾಜಕೋಟೆಯಲ್ಲಿದ್ದರು. ನಮ್ಮ ತಂದೆಯವರ ಕಾಯಿಲೆ ಹೆಚ್ಚಾದುದನ್ನು ಕೇಳಿ, ಅವರು ರಾಜಕೋಟೆಗೆ ಬಂದಿದ್ದರೆಂದು ನನ್ನ ನೆನಪು. ಆ ಅಣ್ಣತಮ್ಮಂದಿರಲ್ಲಿ ಗಾಢ ಪ್ರೇಮವಿದ್ದಿತು. ಚಿಕ್ಕಪ್ಪ, ಹಗಲೆಲ್ಲ ತಂದೆಯ ಹಾಸಿಗೆಯ ಬಳಿಯೇ ಕುಳಿತಿರುತ್ತಿದ್ದರು. ರಾತ್ರಿ, ನಮ್ಮನ್ನೆಲ್ಲ ಮಲಗಲು ಕಳುಹಿಸಿ, ತಾವು ತಂದೆಯ ಮಗ್ಗುಲಲ್ಲಿಯೇ ಮಲಗುತ್ತಿದ್ದರು. ಅಂದು ರಾತ್ರಿ ಸುಮಾರು ಹತ್ತುವರೆ, ಹನ್ನೊಂದು ಗಂಟೆ ಆಗಿದ್ದಿತು, ನಾನು ತಂದೆ ಯವರ ಕಾಲು ಒತ್ತುತ್ತಿದ್ದೆನು. ಚಿಕ್ಕಪ್ಪ, “ನೀನು ಹೋಗಿ ಮಲಗಿಕೊ. ನಾನು ಕುಳಿತಿರುತ್ತೇನೆ” ಎಂದು ಹೇಳಿದರು. ನಾನು ಸಂತೋಷದಿಂದ ಶಯನಗೃಹಕ್ಕೆ ಹೋದೆನು. ನನ್ನ ಹೆಂಡತಿ, ಪಾಪ, ಗಾಢನಿದ್ರೆಯಲ್ಲಿದ್ದಳು. ಆದರೆ ನಾನು ಮಲಗುವ ಅವಳನ್ನು ಬಿಡಬೇಕಲ್ಲ ? ಎಬ್ಬಿಸಿದೆನು. ಆರು ಏಳು ನಿಮಿಷ ಕಳೆದಿರಬಹುದು. ಅಷ್ಟರಲ್ಲಿ ನೌಕರ ಬಂದು ಬಾಗಿಲು ಬಡಿದ. ನಾನು ಗಾಬರಿಯಾದೆ. “ಏಳು, ತಂದೆಯ ಸ್ಥಿತಿ ತುಂಬ ಕೆಟ್ಟಿದೆ”

ಎಂದ. ತಂದೆಗೆ ಬಹಳ ಕಾಯಿಲೆ ಎಂಬುದು ನನಗೆ ಗೊತ್ತೇ ಇತ್ತು. ನಾನು ಕೂಡಲೇ ಆ ಮಾತಿನ ಅರ್ಥವನ್ನು ಗ್ರಹಿಸಿ ಹಾಸಿಗೆಯಿಂದ ಎದ್ದು "ನಿಜವಾಗಿ ಏನಾಗಿದೆ ಹೇಳು" ಎಂದೆನು

"ತಂದೆ ತೀರಿಕೊಂಡರು" ಎಂಬ ಉತ್ತರ ಬಂದಿತು.

ಅಂತೂ ಎಲ್ಲ ಮುಕ್ತಾಯವಾಯಿತು! ಕೈ ಹಿಸುಕಿಕೊಳ್ಳುವುದೊಂದೇ ನನಗೆ ಇನ್ನು ಉಳಿದುದು. ಇನ್ನು ಏತಕ್ಕಾಗಿ ಪಶ್ಚಾತ್ತಾಪ? ನಾನು ತುಂಬ ನಾಚಿಕೊಂಡೆ, ಖೇದಗೊಂಡೆ. ತಂದೆಯವರ ಕೊಠಡಿಗೆ ಆತುರದಿಂದ ಓಡಿದೆ. ನಾನು ವಿಷಯಾಂಧನಾಗಿಲ್ಲದಿದ್ದರೆ ಅಂತ್ಯಕಾಲದವರೆಗೆ ನಮ್ಮ ತಂದೆಯ ಕಾಲುಗಳನ್ನು ಒತ್ತುತ್ತಲೇ ಇರುತ್ತಿದ್ದೆ. ಅವರು ನನ್ನ ಹಸ್ತಗಳ ಮೇಲೆ ಅವಸಾನ ಹೊಂದುತ್ತಿದ್ದರು. ತಮ್ಮ ಬಗೆಗೆ ಗಾಢ ಭಕ್ತಿ ಹೊಂದಿದ್ದ ನನ್ನ ಚಿಕ್ಕಪ್ಪನವರಿಗೆ ಆ ಅಣ್ಣನ ಅಂತಿಮ ಸೇವೆಯ ಭಾಗ್ಯ ದೊರೆಯಿತು. ತಮ್ಮ ಅವಸಾನ ಕಾಲ ಸಮೀಪಿಸುತ್ತಿದ್ದುದು ನಮ್ಮ ತಂದೆಗೆ ಗೊತ್ತಾಗಿದ್ದಿತ್ತು. ಅವರು ಕಾಗದ ಲೇಖನಿ ತರಿಸಿ, "ಅಂತ್ಯಕ್ರಿಯೆಗೆ ಸಿದ್ಧಗೊಳಿಸಿ" ಎಂದು ಕಾಗದ ದಲ್ಲಿ ಬರೆದರು. ಅನಂತರ ಕೈಗೆ ಕಟ್ಟಿಕೊಂಡಿದ್ದ ಕಂಕಣ (ತಾಯಿತಿ) ವನ್ನೂ ಕತ್ತಿನಲ್ಲಿದ್ದ ಚಿನ್ನದ ತುಳಸಿ ಮಣಿ ಹಾರವನ್ನು ಕಿತ್ತೆಸೆದರು. ಮರುಗಳಿಗೆ ಯಲ್ಲಿಯೇ ಪ್ರಾಣ ಬಿಟ್ಟಿದ್ದರು.

ಹಿಂದಿನ ಅಧ್ಯಾಯದಲ್ಲಿ "ನನ್ನ ನಾಚಿಕೆಯ ಪ್ರಸಂಗ" ಎಂದು ನಾನು ಸೂಚಿಸಿದುದು ಇದನ್ನೇ. ಸೇವೆ ಮಾಡಬೇಕಾದ ಸಮಯದಲ್ಲಿ ನಾನು ವಿಷಯಾಸಕ್ತನಾಗಿದ್ದೆನು. ಈ ಕಳಂಕವನ್ನು ಉಳಿಸುವುದಕ್ಕೂ ಮರೆಯು ವುದಕ್ಕೂ ನನ್ನಿಂದ ಸಾಧ್ಯವಾಗಿಲ್ಲ. ನನ್ನ ತಂದೆತಾಯಿಗಳಲ್ಲಿ ನನ್ನ ಭಕ್ತಿ ಅಪಾರವಾಗಿದ್ದರೂ, ಅದಕ್ಕಾಗಿ ನಾನು ಏನನ್ನು ತ್ಯಜಿಸಲು ಸಿದ್ಧವಾಗಿದ್ದರೂ, ನಾನು ವಿಷಯಾಂಧನಾಗಿದ್ದುದರಿಂದ ನನ್ನ ಪಿತೃಭಕ್ತಿ ಅಕ್ಷಮ್ಯ ನ್ಯೂನತೆ ಯಿಂದ ಕೂಡಿದ್ದಿತು. ನಾನು ಏಕಪತ್ನೀವ್ರತಸ್ಥನಾಗಿದ್ದರೂ ಕಾಮಾಂಧ ನಾಗಿದ್ದೆ. ಈ ಕಾಮದಿಂದ ತಪ್ಪಿಸಿಕೊಳ್ಳಲು ನನಗೆ ಬಹಳ ಕಾಲ ಹಿಡಿಯಿತು. ನಾನು ಅನೇಕ ಧರ್ಮ ಪರೀಕ್ಷೆಗಳಿಗೆ ಒಳಗಾಗಬೇಕಾಯಿತು.

ನನ್ನ ಇಮ್ಮಡಿ ಅವಮಾನದ ಈ ಪ್ರಕರಣವನ್ನು ಮುಗಿಸುವುದಕ್ಕೆ ಮುಂಚೆ, ಇದನ್ನೂ ಹೇಳಬೇಕು ; ಈ ಸಂದರ್ಭದಲ್ಲಿ ನನ್ನ ಪತ್ನಿ ಜನ್ಮವಿತ್ತ ಶಿಶು ಮೂರು ನಾಲ್ಕು ದಿನಗಳಲ್ಲಿ ಸತ್ತುಹೋಯಿತು. ಬೇರೆ ಏನು ತಾನೇ ಫಲ ದೊರೆತೀತು? ನನ್ನ ಈ ಉದಾಹರಣೆಯಿಂದ ದಂಪತಿಗಳಾಗಿರುವವರು ಎಚ್ಚೆತ್ತುಕೊಳ್ಳಲಿ.

೧೦

ಧರ್ಮದ ಬೆಳಕು

ನನ್ನ ಆರು ಏಳನೆಯ ವಯಸ್ಸಿನಿಂದ ಹದಿನಾರನೆಯ ವಯಸ್ಸಿನವರೆಗೆ ಪಾಠಶಾಲೆಯಲ್ಲಿ ವಿದ್ಯೆಯನ್ನು ಕಲಿತೆನು. ಆದರೆ ಸ್ಕೂಲಿನಲ್ಲಿ ನನಗೆ ಯಾವ ಧಾರ್ಮಿಕ ಶಿಕ್ಷಣವೂ ದೊರಕಲಿಲ್ಲ. ಶಿಕ್ಷಕರಿಂದ ಯಾವುದು ನನಗೆ ಸುಲಭವಾಗಿ ದೊರೆಯಬಹುದಾಗಿದ್ದಿತೋ ಅದೂ ದೊರೆಯಲಿಲ್ಲ. ಆದರೂ ಸುತ್ತಲಿನ ವಾತಾವರಣದಿಂದಲೇ ನಾನು ಅಷ್ಟು ಇಷ್ಟು ಧರ್ಮ ಭಾವನೆಯನ್ನು ಹೊಂದಿದೆನೆಂದು ಹೇಳಬಹುದು. ಇಲ್ಲಿ ಧರ್ಮಕ್ಕೆ ವ್ಯಾಪಕ ಅರ್ಥವನ್ನು ಕೊಡಬೇಕು. ಧರ್ಮ ಎಂದರೆ ಆತ್ಮಸಾಕ್ಷಾತ್ಕಾರ, ಆತ್ಮಜ್ಞಾನ ಎಂದು ನನ್ನ ಅಭಿಪ್ರಾಯ.

ವೈಷ್ಣವ ಸಂಪ್ರದಾಯದಲ್ಲಿ ನಾನು ಜನ್ಮವೆತ್ತಿದುದರಿಂದ ಆಗಾಗ ದೇವಾಲಯಕ್ಕೆ ಹೋಗಬೇಕಾಗುತ್ತಿದ್ದಿತು. ಆದರೆ ನನಗೆ ಅದರಲ್ಲಿ ಶ್ರದ್ಧೆ ಉತ್ಪನ್ನವಾಗಿರಲಿಲ್ಲ. ದೇವಾಲಯದ ವೈಭವ, ನನಗೆ ಒಪ್ಪಿಗೆ ಆಗಲಿಲ್ಲ. ದೇವಾಲಯಕ್ಕೆ ಹೋಗಿ ಬರುತ್ತಿದ್ದವರ ಅನಾಚಾರಗಳನ್ನು ಕೇಳಿ ಕೇಳಿ, ನನಗೆ ಅವರಲ್ಲಿ ಉದಾಸೀನತೆ ಹುಟ್ಟಿತು. ಇದರಿಂದ ನನಗೆ ಸ್ವಲ್ಪವೂ ಧರ್ಮಭಾವನೆ ಜನಿಸಲಿಲ್ಲ.

ಆದರೆ ದೇವಾಲಯದಿಂದ ಕಲಿಯದುದನ್ನು, ನಮ್ಮ ಕುಟುಂಬದ ಬಹು ಕಾಲದ ನೌಕರಳಾದ ಸೇವಕಿಯಿಂದ ಅರಿತೆನು. ಅವಳಿಗೆ ನನ್ನಲ್ಲಿದ್ದ ಪ್ರೇಮವನ್ನು ಇಂದೂ ನೆನೆಸಿಕೊಳ್ಳುತ್ತೇನೆ. ಭೂತಪ್ರೇತಗಳೆಂದರೆ ನನಗೆ ಭಯವೆಂದು ಹಿಂದೆಯೇ ಹೇಳಿದ್ದೇನೆ. ಈ ಭಯಕ್ಕೆ ರಾಮನಾಮ

ಔಷಧಿಯೆಂದು ರಂಭೆ (ಸೇವಕಿಯ ಹೆಸರು) ನನಗೆ ಹೇಳಿಕೊಟ್ಟಳು. ರಾಮನಾಮಕ್ಕಿಂತ ಹೆಚ್ಚಾಗಿ, ನನಗೆ ರಂಭೆಯಲ್ಲಿಯೇ ಹೆಚ್ಚು ನಂಬಿಕೆ ಇತ್ತು. ಅದರಂತೆ ಭೂತಪ್ರೇತಗಳ ಭಯದಿಂದ ತಪ್ಪಿಸಿಕೊಳ್ಳಲು ನಾನು ಚಿಕ್ಕಂದಿನಿಂದಲೇ ರಾಮನಾಮ ಜಪವನ್ನು ಪ್ರಾರಂಭಿಸಿದೆನು. ಅದು ಬಹಳ ಕಾಲ ಮುಂದುವರಿಯದಿದ್ದರೂ ಬಾಲ್ಯದಲ್ಲಿ ಬಿತ್ತಿದ ಬೀಜ ವ್ಯರ್ಥವಾಗಲಿಲ್ಲ. ಇಂದು ರಾಮನಾಮ ನನಗೆ ಅಮೋಘ ಶಕ್ತಿಯಾಗಿರುವುದು ರಂಭೆ ಬಿತ್ತಿದ ಆ ಬೀಜದ ಪ್ರಭಾವವೇ.

ನಮ್ಮ ಚಿಕ್ಕಪ್ಪನ ಮಗ ರಾಮಾಯಣದ ಪ್ರೇಮಿಯಾಗಿದ್ದನು. ನಾನೂ ಮತ್ತು ನನ್ನ ಎರಡನೆಯ ಅಣ್ಣನೂ ರಾಮರಕ್ಷೆ ಕಲಿಯಲು ಆತನು ಏರ್ಪಾಡು ಮಾಡಿದನು. ನಾವು ಅದನ್ನು ಬಾಯಿಪಾಠ ಮಾಡಿಕೊಂಡು ಪ್ರತಿದಿನ ಸ್ನಾನ ಮುಗಿದ ಮೇಲೆ ಪಠಿಸುವ ನಿಯಮ ಮಾಡಿಕೊಂಡೆವು. ಪೋರ್‌ಬಂದರ್‌ನಲ್ಲಿರುವವರೆಗೆ, ಈ ಅಭ್ಯಾಸ ನಡೆಯಿತು. ರಾಜಕೋಟೆಯ ವಾತಾವರಣದಲ್ಲಿ ಈ ಅಭ್ಯಾಸ ಶಿಥಿಲವಾಯಿತು. ಅದರಲ್ಲಿಯೂ ನನ್ನ ಶ್ರದ್ಧೆ ಹೆಚ್ಚಾಗಿರಲಿಲ್ಲ. ಎರಡು ಕಾರಣಗಳಿಂದ ನಾನು ರಾಮರಕ್ಷೆ ಜಪಿಸುತ್ತಿದ್ದೆನು. ಮೊದಲನೆಯದು, ಕಲಿಸಿಕೊಟ್ಟವನಲ್ಲಿ ನನಗಿದ್ದ ಹೆಚ್ಚಾದ ಆದರ. ಎರಡನೆಯದು, ನಾನು ರಾಮರಕ್ಷೆಯನ್ನು ಶುದ್ಧವಾಗಿ ಉಚ್ಚಾರ ಮಾಡುತ್ತೇನೆಂಬ ಗರ್ವ.

ಆದರೆ ನನ್ನ ಹೃದಯದಲ್ಲಿ ಅಳಿಯದ ಉಳಿದ ಬೀಜ, ರಾಮಾಯಣ ಪಾರಾಯಣದ್ದು. ಕಾಯಿಲೆಯ ಹೆಚ್ಚು ಭಾಗವನ್ನು ನಮ್ಮ ತಂದೆ ಪೋರ್ ಬಂದರ್‌ನಲ್ಲಿ ಕಳೆದರು. ಅಲ್ಲಿ ಅವರು ಪ್ರತಿ ರಾತ್ರಿಯೂ ರಾಮಾಯಣವನ್ನು ಕೇಳುತ್ತಿದ್ದರು. ಅಲ್ಲಿ ರಾಮಾಯಣದ ಕಥೆಯನ್ನು ಮಾಡುತ್ತಿದ್ದವರು ರಾಮಚಂದ್ರನ ಪರಮ ಭಕ್ತರಾದ ಬಿಲೇಶ್ವರದ ಲಾಧಾ ಮಹಾರಾಜರೆಂಬುವವರು. ಅವರ ಸಂಬಂಧವಾಗಿ ಜನರು ಒಂದು ಕಥೆ ಹೇಳುತ್ತಿದ್ದರು. ಅವರಿಗೆ ಮೊದಲು ಕುಷ್ಠರೋಗ ಇದ್ದಿತಂತೆ. ಅವರು ಅದಕ್ಕೆ ಯಾವ ಔಷಧವನ್ನೂ ಮಾಡದೆ ಬಿಲೇಶ್ವರ ದೇವರಿಗೆ ಪೂಜೆಮಾಡಿದ ಬಿಲ್ವಪತ್ರೆಗಳನ್ನೇ ಗಾಯಗಳಿಗೆ ಕಟ್ಟಿ ರಾಮನಾಮೋಚ್ಚಾರಣೆ ಮಾಡುತ್ತಿದ್ದರಂತೆ. ಇದರಿಂದ ಅವರ ಕುಷ್ಠರೋಗ ಪೂರ್ತಿ ಗುಣವಾಯಿತಂತೆ. ಆ ಮಾತು

ನಿಜವಿದ್ದಿರಬಹುದು, ಇಲ್ಲದಿದ್ದಿರಬಹುದು. ನಾವಂತೂ ಅದು ನಿಜವೆಂದು ನಂಬಿದೆವು, ಹೌದು ನಿಜವೇ ಇರಬೇಕು. ಏಕೆಂದರೆ ಲಾಧಾ ಮಹಾರಾಜರು ಕಥೆಯನ್ನು ಪ್ರಾರಂಭಿಸಿದ ಕಾಲದಲ್ಲಿ ಅವರ ದೇಹ ಪೂರ್ಣ ನಿರೋಗಿಯಾಗಿತ್ತು. ಲಾಧಾ ಮಹಾರಾಜರ ಸ್ವರ ಮಧುರವಾಗಿತ್ತು. ಅವರು ದ್ವಿಪದಿ ಚೌಪದಿಗಳನ್ನು ಹಾಡಿ ಅವುಗಳಿಗೆ ಅರ್ಥ ಹೇಳುತ್ತಿದ್ದರು. ಅವರು ಅದರಲ್ಲಿ ತಲ್ಲೀನರಾಗುತ್ತಿದ್ದುದಲ್ಲದೆ ಶ್ರೋತೃಗಳನ್ನು ತಲ್ಲೀನಗೊಳಿಸುತ್ತಿದ್ದರು. ಆಗ ನನಗೆ ಹದಿಮೂರು ವಯಸ್ಸು ಮಾತ್ರವಾಗಿತ್ತು. ಆದರೂ ನನ್ನ ಮನಸ್ಸು ಅದರಲ್ಲಿ ಪೂರ್ಣವಾಗಿ ಲೀನವಾಗಿತ್ತು. ನನಗೆ ರಾಮಾಯಣದ ವಿಷಯದಲ್ಲಿರುವ ಅತ್ಯಂತ ಪ್ರೇಮದ ತಳಹದಿ, ಈ ಕಥಾ ಶ್ರವಣದಿಂದಲೇ ಆದುದು. ತುಲಸೀದಾಸನ ರಾಮಾಯಣ ಭಕ್ತಿಮಾರ್ಗದ ಸರ್ವೋತ್ತಮ ಗ್ರಂಥವೆಂದು ಈಗ ನಾನು ಭಾವಿಸುತ್ತೇನೆ.

ಅನಂತರ ಕೆಲವು ತಿಂಗಳಿಗೆ, ನಾವು ರಾಜಕೋಟೆಗೆ ಬಂದೆವು. ಅಲ್ಲಿ ರಾಮಾಯಣದ ರೀತಿಯಾದ ಕಥೆ ನಡೆಯುತ್ತಿರಲಿಲ್ಲ. ಆದರೆ ಪ್ರತಿ ಏಕಾದಶಿಯೂ ಅಲ್ಲಿ ಭಾಗವತ ಪಾರಾಯಣ ನಡೆಯುತ್ತಿದ್ದಿತು. ನಾನು ಆಗಾಗ್ಗೆ ಅಲ್ಲಿ ಹೋಗಿ ಕುಳಿತುಕೊಳ್ಳುತ್ತಿದ್ದೆನು. ಆದರೆ ಕಥಾಪಂಡಿತ ಅದನ್ನು ಆಕರ್ಷಣೀಯವಾಗಿ ಮಾಡಲು ಶಕ್ತನಾಗಲಿಲ್ಲ. ಪಠಣದಿಂದ ವಾಚಕನಲ್ಲಿ ಧರ್ಮ ಭಾವ ಹುಟ್ಟಿಸಬಲ್ಲ ಗ್ರಂಥ, ಭಾಗವತವೆಂದು ಇಂದು ನನಗೆ ಗೊತ್ತು. ಆದರೆ ಗುಜರಾತೀ ಅನುವಾದವನ್ನು ನಾನು ತುಂಬ ಉತ್ಸಾಹದಿಂದ ಓದಿದೆನು. ನನ್ನ ಉಪವಾಸ ಕಾಲದಲ್ಲಿ ಮೂಲ ಭಾಗವತದ ಕೆಲವು ಭಾಗಗಳನ್ನು ಭಾರತ ಭೂಷಣ ಪಂಡಿತ ಮದನ ಮೋಹನ ಮಾಳವೀಯರ ಶ್ರೀವಾಣಿಯಿಂದ ಕೇಳಿದೆನು. ನನ್ನ ಬಾಲ್ಯದಲ್ಲಿ ಇಂಥವರ ವಾಣಿಯಿಂದ ಭಾಗವತವನ್ನು ಕೇಳಿದ್ದರೆ, ಆಗಲೇ ನನಗೆ ಇದರಲ್ಲಿ ಗಾಢ ಪ್ರೀತಿ ಹುಟ್ಟುತ್ತಿದ್ದಿತು ಎನ್ನಿಸಿತು. ಚಿಕ್ಕವಯಸ್ಸಿನಲ್ಲಿ ಓದಿದ ಗ್ರಂಥಗಳ ಶುಭಾಶುಭ ಸಂಸ್ಕಾರ ನಮ್ಮ ಮನಸ್ಸಿನಲ್ಲಿ ಶಾಶ್ವತವಾಗಿ ನಿಲ್ಲುತ್ತದೆ. ಈ ಕಾರಣದಿಂದ ನನ್ನ ಬಾಲ್ಯದಲ್ಲಿ ಅಂತಹ ಸದ್ಗ್ರಂಥಗಳನ್ನು ಇನ್ನೂ ಹೆಚ್ಚಾಗಿ ಕೇಳಲು ಅವಕಾಶವಾಗಲಿಲ್ಲವಲ್ಲ ಎಂದು ನನಗೆ ಶಾಶ್ವತ ಪಶ್ಚಾತ್ತಾಪವುಂಟಾಗಿದೆ.

ಎಲ್ಲ ಸಂಪ್ರದಾಯಗಳನ್ನೂ ಸಮಾನತೆಯಿಂದ ಕಾಣುವ ಶಿಕ್ಷಣ, ನನಗೆ ರಾಜಕೋಟೆಯಲ್ಲಿ ಶ್ರಮವಿಲ್ಲದೆ ದೊರಕಿತು. ಹಿಂದೂ ಧರ್ಮದ ಬೇರೆ ಬೇರೆ ಸಂಪ್ರದಾಯಗಳಲ್ಲಿ ಆದರವಿಡುವುದನ್ನು ನಾನು ಕಲಿತೆನು. ಏಕೆಂದರೆ ನಮ್ಮ ತಂದೆತಾಯಿಗಳು ವಿಷ್ಣು ದೇವಾಲಯಕ್ಕಲ್ಲದೆ ರಾಮ ಮಂದಿರ ಮತ್ತೂ ಈಶ್ವರ ದೇವಾಲಯಗಳಿಗೂ ಹೋಗುತ್ತಿದ್ದರು. ಜತೆಯಲ್ಲಿ ನಮ್ಮನ್ನೂ ಕರೆದು ಕೊಂಡು ಹೋಗುತ್ತಿದ್ದರು. ನಾವೇ ಹೋಗಲೂ ಅವಕಾಶವನ್ನು ಕೊಡು ತ್ತಿದ್ದರು.

ಅಲ್ಲದೆ ನಮ್ಮ ತಂದೆಯ ಬಳಿ ಯಾರಾದರೂ ಜೈನ ಸನ್ಯಾಸಿಗಳು ಯಾವಾಗಲೂ ಇರುತ್ತಲೇ ಇದ್ದರು. ತಂದೆ ಅವರಿಗೆ ಭಿಕ್ಷವನ್ನು ಕೊಡು ತ್ತಿದ್ದುದಲ್ಲದೆ, ಅವರನ್ನು ಆದರದಿಂದ ಸತ್ಕರಿಸುತ್ತಿದ್ದರು. ಅವರು ತಂದೆ ಯೊಂದಿಗೆ ಧಾರ್ಮಿಕ ಮತ್ತು ವ್ಯಾವಹಾರಿಕ ಚರ್ಚೆಯನ್ನೂ ಮಾಡುತ್ತಿದ್ದರು. ಇದಲ್ಲದೆ ನಮ್ಮ ತಂದೆಯವರಿಗೆ ಮುಸಲ್ಮಾನ್ ಮತ್ತು ಪಾರಸೀ ಮಿತ್ರರು ಸಹ ಇದ್ದರು. ಅವರು ತಮ್ಮ ತಮ್ಮ ಧರ್ಮಗಳ ವಿಷಯವಾಗಿ ನಮ್ಮ ತಂದೆಗೆ ಹೇಳುತ್ತಿದ್ದರು. ಈ ಮಾತುಗಳನ್ನು ನಮ್ಮ ತಂದೆ ಆದರದಿಂದಲೂ ಪ್ರೇಮಭಾವದಿಂದಲೂ ಕೇಳುತ್ತಿದ್ದರು. ನಾನು ನಮ್ಮ ತಂದೆಯವರ ಶುಶ್ರೂಷೆಯಲ್ಲಿರುತ್ತಿದ್ದುದರಿಂದ, ಬಹು ಸಮಯ ಅಲ್ಲಿಯೇ ಕುಳಿತಿರು ತ್ತಿದ್ದೆನು. ಈ ಎಲ್ಲ ವಿಷಯಗಳ ಪರಿಣಾಮವಾಗಿ ನನ್ನ ಮನಸ್ಸಿನಲ್ಲಿ ಇತರ ಧರ್ಮಗಳ ವಿಷಯದಲ್ಲಿಯೂ ಸಮಾನ ಭಾವ ಉಂಟಾಯಿತು.

ಆದರೆ ಈಸಾಯಿ ಧರ್ಮ, ಇದಕ್ಕೆ ಒಂದು ಅಪವಾದವಾಗಿದ್ದಿತು. ಅದಕ್ಕೆ ಕಾರಣವೂ ಇದ್ದಿತು. ಆ ಕಾಲದಲ್ಲಿ ಪ್ರೌಢಶಾಲೆಯ ಮೂಲೆ ಯೊಂದರಲ್ಲಿ, ಒಬ್ಬ ಈಸಾಯಿ ಧರ್ಮ ಪ್ರಚಾರಕರು ವ್ಯಾಖ್ಯಾನ ಮಾಡು ತ್ತಿದ್ದರು. ಅವರು ಹಿಂದೂ ದೇವತೆಗಳನ್ನೂ ಹಿಂದೂ ಧರ್ಮವನ್ನೂ ನಿಂದಿಸುತ್ತಿದ್ದರು. ಅದು ನನಗೆ ಸಹಿಸಲಿಲ್ಲ. ಆ ವ್ಯಾಖ್ಯಾನವನ್ನು ಕೇಳಲು ನಾನು ಒಂದು ಎರಡು ಸಲ ಹೋದೆನು. ಆದರೆ ಮತ್ತೆ ಹೋಗಲು ಮನಸ್ಸಾಗಲಿಲ್ಲ. ಅದೇ ಸಮಯದಲ್ಲಿ ಒಬ್ಬ ಪ್ರಸಿದ್ಧ ಹಿಂದೂ ಈಸಾಯಿ ಆದನೆಂದು ಕೇಳಿದೆನು. ಈಸಾಯಿ ಆದ ಕೂಡಲೇ ಅವನು ಗೋಮಾಂಸ

ವನ್ನು ತಿನ್ನಬೇಕಾಯಿತೆಂದೂ ಶರಾಬನ್ನು ಕುಡಿಯಬೇಕಾಯಿತೆಂದೂ ಗ್ರಾಮದಲ್ಲಿ ಹೇಳುತ್ತಿದ್ದರು. ಈಸಾಯಿ ಆದನಂತರ ಅವನ ಉಡುಪೂ ಬದಲಾಯಿಸಿತು. ಕೋಟು ಷರಾಯಿ ಹ್ಯಾಟು ಅವನ ಉಡುಪಾಯಿತು. "ಇದೆಂಥ ಧರ್ಮ" ಎಂಬ ವಿಚಾರ ನನ್ನ ಮನಸ್ಸಿನಲ್ಲಿ ಸುಳಿಯಿತು. ಯಾವುದಕ್ಕಾಗಿ ಗೋಮಾಂಸವನ್ನು ತಿನ್ನಬೇಕೋ ಮದ್ಯವನ್ನು ಸೇವಿಸಬೇಕೋ ಉಡುಪನ್ನು ಬದಲಾಯಿಸಬೇಕೋ ಅದನ್ನು ಧರ್ಮವೆಂದು ಕರೆಯುವುದು ಹೇಗೆ ಎಂಬ ಪ್ರಶ್ನೆ ನನ್ನ ಮನಸ್ಸನ್ನು ಬಾಧಿಸಿತು. ಸಾಲದುದಕ್ಕೆ ಆ ಮಹಾಶಯನು, ತನ್ನ ಪೂರ್ವಜರ ಧರ್ಮವನ್ನೂ ರೀತಿ ನೀತಿಗಳನ್ನೂ ಯಥೇಚ್ಛವಾಗಿ ನಿಂದಿಸುತ್ತಿದ್ದನೆಂದೂ ಕೇಳಿದೆನು. ಈ ಎಲ್ಲ ಸಂಗತಿಗಳಿಂದ ಈಸಾಯಿ ಧರ್ಮದ ವಿಷಯದಲ್ಲಿ ನನ್ನ ಮನಸ್ಸಿನಲ್ಲಿ ಅಸಹ್ಯವುಂಟಾಯಿತು.

ನಾನು ಇತರ ಧರ್ಮಗಳನ್ನು ಹೀಗೆ ಸಮಭಾವದಿಂದ ಕಾಣುತ್ತಿದ್ದುದರಿಂದ, ನನಗೆ ಈಶ್ವರನಲ್ಲಿ ನಿಜವಾದ ಶ್ರದ್ಧಾಭಕ್ತಿ ಇದ್ದಿತೆಂದು ಭಾವಿಸಕೂಡದು. ಆ ಸಮಯದಲ್ಲಿ ನನ್ನ ತಂದೆಯ ಪುಸ್ತಕ ಸಂಗ್ರಹದಲ್ಲಿದ್ದ ಮನುಸ್ಮೃತಿಯ ಭಾಷಾಂತರದ ಒಂದು ಪ್ರತಿ ನನಗೆ ಸಿಕ್ಕಿತು. ಅದರಲ್ಲಿ ಸೃಷ್ಟಿಯ ಉತ್ಪತ್ತಿ ಮೊದಲಾದ ವರ್ಣನೆಯನ್ನು ಓದಿದೆನು. ನನಗೆ ಅದರಲ್ಲಿ ಶ್ರದ್ಧೆಯುಂಟಾಗಲಿಲ್ಲ. ಅದರ ಬದಲು ಸ್ವಲ್ಪ ನಾಸ್ತಿಕತೆ ಉಂಟಾಯಿತು. ನಮ್ಮ ಇನ್ನೊಬ್ಬ ಚಿಕ್ಕಪ್ಪನ ಮಗನ (ಇನ್ನೂ ಜೀವಿಸಿದ್ದಾನೆ) ಬುದ್ಧಿತೀಕ್ಷ್ಣತೆಯಲ್ಲಿ ನನಗೆ ನಂಬಿಕೆ ಇತ್ತು. ಅವನ ಮುಂದೆ ನನ್ನ ಸಂಶಯಗಳನ್ನು ತಿಳಿಸಿದೆನು. ಆದರೆ ಅವನಿಂದಲೂ ನನಗೆ ಸಮಾಧಾನ ದೊರಕಲಿಲ್ಲ. ಅತ, ಹೀಗೆ ಹೇಳಿದ: "ದೊಡ್ಡವನಾದ ಮೇಲೆ ನಿನ್ನ ಬುದ್ಧಿಗೆ ಇದು ತಾನಾಗಿಯೇ ತಿಳಿಯುತ್ತದೆ. ಹುಡುಗರು ಇಂತಹ ಪ್ರಶ್ನೆಗಳನ್ನು ಕೇಳಬಾರದು". ನಾನೇನೋ ತೆಪ್ಪಗಾದೆನು. ಆದರೆ ಮನಸ್ಸಿಗೆ ಶಾಂತಿ ಲಭಿಸಲಿಲ್ಲ. ಮನುಸ್ಮೃತಿಯ ಖಾದ್ಯಾಖಾದ್ಯ ಪ್ರಕರಣದಲ್ಲಿಯೂ ಬರುವ ವಿಷಯ ಪ್ರಚಲಿತ ಪದ್ಧತಿಗಳಿಗೆ ವಿರೋಧವಾಗಿ ಇರುವಂತೆ ತೋರಿತು. ಆ ಅನುಮಾನಕ್ಕೆ ದೊರೆತ ಉತ್ತರವೂ ಬಹುಮಟ್ಟಿಗೆ ಹಿಂದಿನ ಉತ್ತರದಂತೆಯೇ. "ಬುದ್ಧಿ ವಿಕಾಸವಾದಾಗ ಈ

ವಿಷಯಗಳನ್ನು ಇನ್ನೂ ಚೆನ್ನಾಗಿ ಓದಿ ಮನನ ಮಾಡೋಣ" ಎಂದು ಸಮಾಧಾನ ಮಾಡಿಕೊಂಡೆನು.

ಆಗ ನಾನು ಮನುಸ್ಮೃತಿಯನ್ನು ಓದಿ ಅಹಿಂಸೆಗೆ ಪ್ರೇರಣೆಯನ್ನಂತೂ ಕಲಿಯಲಿಲ್ಲ. ಮಾಂಸಾಹಾರದ ಕಥೆಯನ್ನು ಹಿಂದೆಯೇ ಹೇಳಿದ್ದೇನೆ. ಅದಕ್ಕೆ ಮನಸ್ಮೃತಿಯಲ್ಲಿ ಸಮರ್ಥನೆ ದೊರಕಿತು. ಹಾವು ತಿಗಣೆ ಮುಂತಾದುವನ್ನು ಕೊಲ್ಲುವುದು ನೀತಿ ಎಂದು ತಿಳಿದಿದ್ದೆನು. ಆ ಸಮಯದಲ್ಲಿ ನಾನು ಧರ್ಮವೆಂದು ತಿಳಿದು ತಿಗಣೆ ಮುಂತಾದುವನ್ನು ಕೊಂದುದು ಜ್ಞಾಪಕವಿದೆ.

ಆದರೆ ಒಂದು ವಿಷಯ, ಈ ಸೃಷ್ಟಿ ನೀತಿಯ ತಳಹದಿಯ ಮೇಲೆ ನಿಂತಿದೆಯೆಂದೂ ನೀತಿಯ ಸಮಾವೇಶವು ಸತ್ಯದಲ್ಲಿ ಆಗುತ್ತದೆಂದೂ— ನನ್ನ ಮನಸ್ಸಿನ ಮೇಲೆ ಚೆನ್ನಾಗಿ ಅಚ್ಚು ಒತ್ತಿತು. ಸತ್ಯೋಪಾಸನೆಯೇ ನನ್ನ ಮುಖ್ಯ ಗುರಿಯಾಯಿತು. ಸತ್ಯದ ಮಹಿಮೆ ದಿನದಿನಕ್ಕೂ ನನ್ನ ದೃಷ್ಟಿಯಲ್ಲಿ ಹೆಚ್ಚಾಗುತ್ತಾ ಹೋಯಿತು. ಅದರ ವಿಷಯದ ನನ್ನ ವ್ಯಾಖ್ಯೆ ಸಹ ವಿಸ್ತಾರವಾಗುತ್ತ ನಡೆದಿದೆ.

ಇವರ ಜತೆಯಲ್ಲಿಯೇ, ಒಂದು ಗುಜರಾತೀ ನೀತಿ ಪದ್ಯ ನನ್ನ ಹೃದಯದಲ್ಲಿ ಅಂಕಿತವಾಗಿದ್ದಿತು. ಅಪಕಾರಕ್ಕೆ ಪ್ರತಿಯಾಗಿ ಮಾಡುವುದು ಅಪಕಾರವನ್ನಲ್ಲ, ಆದರೆ ಉಪಕಾರವನ್ನು ಎಂಬುದು ಅದು. ಈ ತತ್ವ ನನ್ನ ಮೇಲೆ ತನ್ನ ಪ್ರಭಾವವನ್ನು ಬೀರಿತು. ಅಪಕಾರಕ್ಕೆ ಪ್ರತಿಯಾಗಿ ಉಪಕಾರ ಮಾಡುವುದು ನನ್ನ ಮನವೊಪ್ಪಿದ ವಿಷಯವಾಯಿತು. ನಾನು ಈ ತತ್ವದ ಅಸಂಖ್ಯಾತ ಪ್ರಯೋಗಗಳನ್ನು ಮಾಡಿದೆನು. ಆ ಅದ್ಭುತ ಪದ್ಯವಿದು.

ಪಾನಿ ಆಪನೆ ಪಾಯ ಬಲು ಭೋಜನ ತೋ ದೇಜಿ
ಆಪೀ ನಮಾನೆ ಶೀಷ ದಂಡವತ್ ಕೋಡೆಕೀಜೆ
ಆಪಣೋ ಘಾಸೆ ದಾಮ್ ಕಾಮ್ ಮಹೋರಿ ನು ಕರೀಯ
ಆಪ ಉಗರೆ ಪ್ರಾಣ ತೆ ತಣ ದುಃಖ ಮಾಂ ಮರಿಯೆ
ಗುಣ ಪೀಡೆ ತೊ ಗುಣ ದಶ ಗಣೋ : ಮನವಾಚಾ ಕರ್ಮೆ ಕರೀ
ಅಪಗುಣ ಪೀಡೆ ಜೆ ಗುಣಕರೆ ತೇ ಜಗಮಾಂ ಜೋತ್ಯೋ ಸಹಿ

"ಒಂದು ಲೋಟ ನೀರುಕೊಟ್ಟವರಿಗೆ ಊಟವಿಕ್ಕು. ಒಳ್ಳೆಯ ಮಾತನಾಡಿದವರಿಗೆ ದಂಡವತ್ ಪ್ರಣಾಮಮಾಡು. ಒಂದು ಕಾಸು ಕೊಟ್ಟವರಿಗೆ ಚಿನ್ನದ ಮೊಹರು ಕೊಡು. ನಿನ್ನ ಪ್ರಾಣವುಳಿಸಿದವರಿಗೆ ನಿನ್ನ ಜೀವವನ್ನೇ ಕೊಡಲು ಸಿದ್ಧನಾಗು. ಉಪಕಾರಕ್ಕೆ ಪ್ರತಿಯಾಗಿ ಮನೋವಾಕ್ಕಾಯಗಳಿಂದ ಹತ್ತು ಪಟ್ಟು ಪ್ರತ್ಯುಪಕಾರಮಾಡು, ಆದರೆ ನಿಜವಾದ ಜ್ಞಾನಿಗಳು ಎಲ್ಲರನ್ನೂ ಒಂದೇ ಸಮನಾಗಿ ನೋಡುತ್ತಾರೆ. ಅಪಕಾರ ಮಾಡಿದವರಿಗೂ, ಸಂತೋಷದಿಂದ ಉಪಕಾರ ಮಾಡುತ್ತಾರೆ."

೧೧

ವಿಲಾಯಿತಿಗೆ ಪ್ರಯಾಣ ಸಿದ್ಧತೆ

೧೮೮೭ನೇ ಇಸವಿಯಲ್ಲಿ ನಾನು ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಯಾದೆನು. ಮೆಟ್ರಿಕ್ ಪರೀಕ್ಷೆಗೆ ಬೊಂಬಾಯಿ ಮತ್ತು ಅಹಮದಾಬಾದ್ ಎರಡೂ ಕೇಂದ್ರಗಳಾಗಿದ್ದವು. ದೇಶದ ದಾರಿದ್ರ್ಯ ಮತ್ತು ತಮ್ಮ ಸ್ವಂತ ಆರ್ಥಿಕ ಪರಿಸ್ಥಿತಿಯ ಕಾರಣದಿಂದ, ಕಾಥೇವಾಡದ ವಿದ್ಯಾರ್ಥಿಗಳು, ಅಹಮದಾಬಾದ್ ಕೇಂದ್ರವನ್ನೇ ಆರಿಸಿಕೊಳ್ಳುತ್ತಿದ್ದರು. ನನ್ನ ಸ್ಥಿತಿಯೂ ಇವರಂತೆಯೇ ಇದ್ದುದರಿಂದ, ನಾನು ಹತ್ತಿರದ ಅಹಮದಾಬಾದನ್ನೇ ಸ್ವಾಭಾವಿಕವಾಗಿ ಆರಿಸಿಕೊಂಡೆನು. ಆ ಮೊದಲನೇ ಬಾರಿ ರಾಜಕೋಟೆಯಿಂದ ಅಹಮ್ಮದಾಬಾದಿಗೆ ನಾನು ಒಬ್ಬನೇ ಪ್ರಯಾಣ ಮಾಡಿದೆನು.

ಮುಂದೆ ನಾನು ಕಾಲೇಜಿನಲ್ಲಿ ವ್ಯಾಸಂಗವನ್ನು ಮುಂದುವರಿಸಬೇಕೆಂಬುದು, ಮನೆಯ ಹಿರಿಯರ ಇಚ್ಛೆಯಾಗಿದ್ದಿತು. ಬೊಂಬಾಯಿ ಮತ್ತು ಭಾವನಗರಗಳಲ್ಲಿ ಕಾಲೇಜುಗಳಿದ್ದವು. ಭಾವನಗರದಲ್ಲಿ ವೆಚ್ಚ ಕಡಿಮೆ ಬೀಳುತ್ತಿದ್ದಿತು. ಆದುದರಿಂದ ಅಲ್ಲಿಯ ಶಾಮಲದಾಸ್ ಕಾಲೇಜಿನಲ್ಲಿ ನಾನು ವ್ಯಾಸಂಗ ಮಾಡಬೇಕೆಂದು ನಿಶ್ಚಯವಾಯಿತು. ನಾನು ಅಲ್ಲಿಗೆ ಹೋದೆನು. ನನಗೆ ಬಹಳ ಕಷ್ಟವಾಯಿತು. ಅಧ್ಯಾಪಕರ ವ್ಯಾಖ್ಯಾನಗಳಲ್ಲಿ ನನ್ನ ಮನಸ್ಸು ನಿಲ್ಲಲಿಲ್ಲ. ಅವು ನನಗೆ ತಿಳಿಯುತ್ತಲೂ ಇರಲಿಲ್ಲ. ಅದರಲ್ಲಿ ಅಧ್ಯಾಪಕರದೇನೂ ತಪ್ಪು ಇರಲಿಲ್ಲ. ನನ್ನ ವ್ಯಾಸಾಂಗವೇ ಸರಿಯಾಗಿರಲಿಲ್ಲ. ಶಾಮಲದಾಸ್ ಕಾಲೇಜಿನ ಅಧ್ಯಾಪಕರು, ಪ್ರಥಮ ದರ್ಜೆಯ ಅಧ್ಯಾಪಕ

ರೆಂದು ಗಣಿಸಲ್ಪಟ್ಟಿದ್ದರು. ನನ್ನ ಬುದ್ಧಿ ಸರಿಯಾಗಿ ಕುದುರಿರಲಿಲ್ಲ. ಮೊದಲ ನೆಯ ವರುಷವನ್ನು ಮುಗಿಸಿ, ಬಿಡುವಿನಲ್ಲಿ ಮನೆಗೆ ಬಂದೆನು.

ವ್ಯವಹಾರ ಕುಶಲರಾದ ವಿದ್ವಾಂಸರೂ ನಮಗೆ ಸಲಹೆಗಾರರೂ ಆಗಿದ್ದ ಮಾವಜೀ ದವೆ ಎಂಬ ಬ್ರಾಹ್ಮಣರು, ಹಿಂದಿನಿಂದ ನಮ್ಮ ಸಂಸಾರದ ಮಿತ್ರರಾಗಿದ್ದರು. ನಮ್ಮ ತಂದೆ ಸ್ವರ್ಗಸ್ಥರಾದ ಮೇಲೆ ಸಹ, ಅವರು ನಮ್ಮ ಸಂಸಾರದೊಂದಿಗೆ ಸಂಬಂಧವನ್ನು ಬಿಡದೆ ಇಟ್ಟುಕೊಂಡಿದ್ದರು. ನನ್ನ ರಜಾ ಕಾಲದಲ್ಲಿ ಅವರು ಒಮ್ಮೆ ಮನೆಗೆ ಬಂದರು. ನಮ್ಮ ತಾಯಿ ಮತ್ತು ದೊಡ್ಡ ಅಣ್ಣನೊಡನೆ ನಡೆದ ಚರ್ಚೆಯಲ್ಲಿ ನನ್ನ ವ್ಯಾಸಂಗದ ಮಾತು ಬಂದಿತು. ಶಾಮಲದಾಸ್ ಕಾಲೇಜಿನಲ್ಲಿ ನಾನು ಓದುತ್ತಿದ್ದ ವಿಷಯ ಕೇಳಿ ಅವರು, "ಈಗ ಕಾಲ ಬದಲಾಯಿಸುತ್ತಿದೆ. ಸರಿಯಾದ ವಿದ್ಯಾಭ್ಯಾಸವಿಲ್ಲದೆ ನಿಮ್ಮಲ್ಲಿ ಯಾರೂ ಕಬಾ ಗಾಂಧಿಯ ಗಾದಿಗೆ ಏರು ವುದು ಸಾಧ್ಯವಿಲ್ಲ. ಈ ಹುಡುಗ ಇನ್ನೂ ಓದುತ್ತಿರುವುದರಿಂದ ನಿಮ್ಮ ಮನೆತನಕ್ಕೆ ಶಾಶ್ವತವಾಗಿ ಗಾದಿಯನ್ನುಳಿಸುವ ಭಾರ ಇವನ ಮೇಲೆ ಬೀಳುವುದಾಗುತ್ತದೆ. ಇವನಿಗೆ ಬಿ. ಎ. ಆಗಬೇಕಾದರೆ ಇನ್ನೂ ೪-೫ ವರುಷ ಬೇಕು. ಅಷ್ಟು ಓದಿದರೂ ೫೦-೬೦ ರೂಪಾಯಿನ ಕೆಲಸವೇ ಹೊರತು ದಿವಾನ್‌ಗಿರಿ ದೊರೆಯುವುದಿಲ್ಲ. ಅಥವಾ ನನ್ನ ಮಗನಂತೆ ಇವನೂ ವಕೀಲಿ ಪರೀಕ್ಷೆಗೆ ಹೋಗುವುದಾದರೆ ಇನ್ನೂ ಹೆಚ್ಚು ಕಾಲ ಹಿಡಿಯುತ್ತದೆ. ಅಷ್ಟು ಹೊತ್ತಿಗೆ ದಿವಾನಗಿರಿಗಾಗಿ ಸಿದ್ಧರಾಗುವ ವಕೀಲರು ಎಷ್ಟು ಜನರೋ ? ಇದೆಲ್ಲಕ್ಕಿಂತ ಇವನನ್ನು ನೀವು ವಿಲಾಯಿತಿಗೆ ಕಳುಹಿಸುವುದು ಉತ್ತಮವೆಂದು ನನಗೆ ತೋರುತ್ತದೆ. ಕೇವಲ ರಾಮನು (ಮಾವಜೀ ದವೆಯವರ ಮಗ)" ಅಲ್ಲಿ ವ್ಯಾಸಂಗ ಸುಲಭವಾಗಿ ಮೂರು ವರುಷ ಓದುವುದರೊಳಗೆ ಬ್ಯಾರಿಸ್ಟರ್ ಆಗಿ ಹಿಂದಿರುಗಬಹುದು ಎಂದು ಹೇಳುತ್ತಾನೆ. ಖರ್ಚು ೪-೫ ಸಾವಿರಕ್ಕಿಂತ ಹೆಚ್ಚು ಆಗುವುದಿಲ್ಲ. ಹೊಸದಾಗಿ ಬಂದಿರುವ ಬ್ಯಾರಿಸ್ಟರನ್ನು ನೋಡಿ. ಅವನ ಠೀವಿ ಏನು? ಅವನು ಕೇಳಿದರೆ ಈಗಲೇ ದಿವಾನಗಿರಿ ಸಿಕ್ಕುತ್ತದೆ. ಈ ವರುಷವೇ ನೀವು ಮೋಹನದಾಸನನ್ನು ವಿಲಾಯಿತಿಗೆ ಕಳುಹಿಸಬೇಕೆಂಬುದು ನನ್ನ ಸಲಹೆ. ವಿಲಾಯತಿಯಲ್ಲಿ ಕೇವಲರಾಮನ ಅನೇಕ ಮಿತ್ರರಿದ್ದಾರೆ.

ಅವನು ಅವರಿಗೆ ಪರಿಚಯ ಮಾಡಿಕೊಡುತ್ತಾನೆ. ಮೋಹನದಾಸನಿಗೆ ಅಲ್ಲಿ ಏನೂ ಕಷ್ಟವಾಗುವುದಿಲ್ಲ" ಎಂದು ಹೇಳಿದರು.

ಜೋಷಿಯವರು (ಮಾವಜೀ ದವೆಯವರನ್ನು ನಾವು ಹಾಗೆ ಕರೆಯು ತ್ತಿದ್ದೆವು) ನನ್ನ ಕಡೆ ತಿರುಗಿ, "ನಿನಗೆ ಇಲ್ಲಿ ಓದುವುದಕ್ಕಿಂತ ವಿಲಾಯಿತಿಗೆ ಹೋಗಿ ಓದುವುದು ಹೆಚ್ಚು ಇಷ್ಟವಲ್ಲವೆ?" ಎಂದು ಕೇಳಿದರು. ನನ್ನ ಉತ್ತರವೇನೆಂಬುದು ಅವರಿಗೆ ಖಚಿತವಾಗಿ ಗೊತ್ತಾಗಿದ್ದಂತೆ ತೋರಿತು.

ನನಗೆ ಅದಕ್ಕಿಂತ ಹೆಚ್ಚು ಪ್ರಿಯವಾದ ಸಲಹೆಯನ್ನು ಕೊಡುವುದು ಅವರಿಗೆ ಶಕ್ಯವಿರಲಿಲ್ಲ. ಕಾಲೇಜು ವ್ಯಾಸಂಗದ ಕಾಠಿಣ್ಯಕ್ಕೆ ನಾನು ಹೆದರಿ ದ್ದೆನು. ಆದುದರಿಂದ ನಾನು ಅವರ ಸೂಚನೆಗೆ ಒಡನೆಯೇ ಒಡಂಬಟ್ಟು "ಎಷ್ಟು ಬೇಗ ನನ್ನನ್ನು ವಿಲಾಯಿತಿಗೆ ಕಳುಹಿಸಿದರೆ ಅಷ್ಟು ಉತ್ತಮ. ಪರೀಕ್ಷೆ ಯಲ್ಲಿ ತೇರ್ಗಡೆಹೊಂದುವುದು ಸುಲಭವಾದ ಮಾತಲ್ಲ. ನನ್ನನ್ನು ವೈದ್ಯಕೀಯ ವ್ಯಾಸಂಗಕ್ಕೆ ಏಕೆ ಕಳುಹಿಸಬಾರದು?" ಎಂದು ಕೇಳಿದೆನು.

ನಮ್ಮಣ್ಣ, ನನ್ನ ಮಾತಿಗೆ ಅಡ್ಡಬಂದು, "ನಮ್ಮ ತಂದೆ ಇದನ್ನು ಎಂದಿಗೂ ಒಪ್ಪಿರಲಿಲ್ಲ. ವೈಷ್ಣವರಾದ ನಾವು, ಹೆಣಗಳನ್ನು ಕುಯ್ಯುವ ಗೋಜಿಗೆ ಹೋಗಬಾರದೆಂದು ಅವರು ಹೇಳಿದಾಗ ಅವರ ಮನಸ್ಸಿನಲ್ಲಿದ್ದುದು ನೀನೇ. ನೀನು ವಕೀಲನಾಗಬೇಕೆಂಬುದು ತಂದೆಯ ಉದ್ದೇಶವಾಗಿತ್ತು" ಎಂದರು.

ಜೋಷಿ ತಮ್ಮ ಧ್ವನಿಗೂಡಿಸಿ ಹೇಳಿದರು "ಗಾಂಧೀಯವರಿಗಿದ್ದಂತೆ (ನಮ್ಮ ತಂದೆಗೆ) ವೈದ್ಯವೃತ್ತಿಗೆ ವಿರೋಧವಾಗಿ ನನಗೆ ಯಾವ ಅಭಿಪ್ರಾ ಯವೂ ಇಲ್ಲ. ನಮ್ಮ ಶಾಸ್ತ್ರಗಳು ಇದನ್ನು ತಿರಸ್ಕರಿಸುವುದಿಲ್ಲ. ಆದರೆ ವೈದ್ಯಕೀಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವುದರಿಂದ ನೀನು ದಿವಾನನಾ ಗಲು ಶಕ್ಯವಿಲ್ಲ. ನಿನ್ನನ್ನು ದಿವಾನನನ್ನಾಗಿ ಮತ್ತು ಅದಕ್ಕಿಂತಲೂ ದೊಡ್ಡವನಾಗಿ ನೋಡಬೇಕೆಂಬುದು ನನ್ನ ಇಷ್ಟ. ಆಗಮಾತ್ರ ನಿನ್ನ ದೊಡ್ಡ ಸಂಸಾರದ ನಿರ್ವಹಣೆ ಸಾಧ್ಯ. ಕಾಲ ದಿನದಿನಕ್ಕೆ ಬದಲಾಯಿಸು ತ್ತಿದೆ. ಮತ್ತು ಕಷ್ಟವೂ ಆಗುತ್ತಿದೆ. ಇದರಿಂದ ಬ್ಯಾರಿಸ್ಟರ್ ಆಗುವುದೇ ಬುದ್ಧಿವಂತಿಕೆ."

ನಮ್ಮ ತಾಯಿಯ ಕಡೆ ತಿರುಗಿ ಹೇಳಿದರು : "ಈಗ ನಾನು ಹೊರಟೆ. ನನ್ನ ಮಾತನ್ನು ಕುರಿತು ಆಲೋಚಿಸಿ—ನಾನು ಮತ್ತೆ ಬಂದಾಗ, ಇವನು ವಿಲಾಯತಿಗೆ ಹೋಗುವ ಸಿದ್ಧತೆಯ ಸಮಾಚಾರವನ್ನು ಕೇಳುತ್ತೇನೆಂದು ಆಶಿಸುತ್ತೇನೆ. ನನ್ನಿಂದ ಏನಾದರೂ ಸಹಾಯವಾಗುವುದಾದರೆ ಖಂಡಿತ ಹೇಳಿ."

ಜೋಷಿ ಹೊರಟು ಹೋದರು. ನಾನು ಗಾಳಿಗೋಪುರ ಕಟ್ಟ ತೊಡಗಿದೆನು.

ಹಿರಿಯಣ್ಣ, ಆಲೋಚನೆಯಲ್ಲಿ ಮುಳುಗಿದರು ; ಹಣಕ್ಕೆ ಏನು ಮಾಡಲಿ ? ಈ ಚಿಕ್ಕ ವಯಸ್ಸಿನವನನ್ನು ಒಬ್ಬಂಟಿಗನಾಗಿ ಹೊರದೇಶಕ್ಕೆ ಕಳುಹಿಸುವುದು ಹೇಗೆ—ಎಂದು.

ನಮ್ಮ ತಾಯಿಯೂ ದೊಡ್ಡ ಗೊಂದಲದಲ್ಲಿ ಬಿದ್ದರು. ದೂರ ದೇಶಕ್ಕೆ ನನ್ನನ್ನು ಕಳುಹಿಸುವುದು ಅವರಿಗೆ ಇಷ್ಟವಿರಲಿಲ್ಲ. ಆಕೆ ಹೇಳಿ ದರು, "ಈಗ ನಮ್ಮ ಚಿಕ್ಕಪ್ಪನೇ ನಮ್ಮ ಸಂಸಾರದಲ್ಲಿ ಹಿರಿಯ, ಮೊದಲು ಅವರ ಸಲಹೆಯನ್ನು ಪಡೆಯಬೇಕು. ಅವರು ಒಪ್ಪಿದರೆ ಅನಂತರ ಯೋಚಿಸೋಣ" ಎಂದು ಆಕೆ ನನ್ನ ಪ್ರಯಾಣವನ್ನು ಸದ್ಯಕ್ಕಾದರೂ ಮುಂದಕ್ಕೆ ಹಾಕಿದರು.

ನಮ್ಮ ಹಿರಿಯಣ್ಣನಿಗೆ ಮತ್ತೊಂದು ಅಭಿಪ್ರಾಯವೂ ಇದ್ದಿತು. ಆತ, ನನಗೆ ಹೇಳಿದ. "ಪೋರ್‌ಬಂದರ್ ರಾಜ್ಯದ ಮೇಲೆ ನಮ್ಮ ಹಕ್ಕು ಇದೆ. ಲೇಲಿ ಸಾಹೇಬರು ಅಲ್ಲಿಯ ಅಡ್ಮಿನಿಸ್ಟ್ರೇಟರ್ ಆಗಿದ್ದಾರೆ. ನಮ್ಮ ಕುಟುಂಬದ ವಿಷಯದಲ್ಲಿ ಅವರಿಗೆ ಒಳ್ಳೆಯ ಅಭಿಪ್ರಾಯವಿದೆ. ಚಿಕ್ಕಪ್ಪ ನವರಲ್ಲಿ ಅವರಿಗೆ ವಿಶೇಷ ಆದರವಿದೆ. ಆತ ನಿನ್ನ ವಿದೇಶ ವ್ಯಾಸಂಗಕ್ಕಾಗಿ ಸಂಸ್ಥಾನದ ಕಡೆಯಿಂದ ಸಹಾಯ ಮಾಡಬಹುದು."

ನನಗೆ ಇದೆಲ್ಲ ಒಪ್ಪಿಗೆಯಾಯಿತು ನಾನು ಪೋರ್‌ಬಂದರ್‌ಗೆ ಹೊರಡಲು ಸಿದ್ಧನಾದೆನು. ಆ ಕಾಲದಲ್ಲಿ ರೈಲು ಇರಲಿಲ್ಲ. ಐದು ದಿನಗಳ ಎತ್ತಿನ ಗಾಡಿ ಪ್ರಯಾಣ. ನಾನು ಅಂಜುಬುರುಕನಾಗಿದ್ದೆನೆಂದು ಆಗಲೇ ಹೇಳಿದ್ದೇನೆ. ಆದರೆ ಆ ಗಳಿಗೆಯಲ್ಲಿ ಇಂಗ್ಲೆಂಡಿಗೆ ಹೋಗುವ ಉತ್ಕಟ ಇಚ್ಛೆಯಲ್ಲಿ ನನ್ನ ಅಂಜುಬುರುಕುತನ ಮಾಯವಾಯಿತು. ನಾನು ಧೋರಾಜಿ

ವರೆಗೆ ಎತ್ತಿನ ಗಾಡಿಯನ್ನು ಬಾಡಿಗೆಗೆ ತೆಗೆದುಕೊಂಡೆನು. ಪೋರ್‌ಬಂದರ್‌ಗೆ ಒಂದು ದಿನ ಮುಂಚಿತವಾಗಿ ಹೋಗಬಹುದೆಂದು ಧೋರಾಜಿಯಿಂದ ಒಂಟೆಯ ಮೇಲೆ ಪ್ರಯಾಣಮಾಡಿದೆನು. ಅದು ನನ್ನ ಮೊದಲನೆಯ ಒಂಟೆ ಸವಾರಿ ಅನುಭವ.

ಪೋರ್‌ಬಂದರ್ ಸೇರಿ ನಮ್ಮ ಚಿಕ್ಕಪ್ಪನವರನ್ನು ಕಂಡು ವಂದಿಸಿ ಎಲ್ಲ ವಿಷಯಗಳನ್ನೂ ಅವರಿಗೆ ಹೇಳಿದೆನು. ಅವರು ಯೋಚನೆ ಮಾಡಿ ಹೀಗೆ ಹೇಳಿದರು : "ವಿಲಾಯತಿಗೆ ಹೋಗಿ ನಮ್ಮ ಧರ್ಮವನ್ನು ರಕ್ಷಿಸಿಕೊಳ್ಳುವುದು ಸಾಧ್ಯವೋ ಇಲ್ಲವೋ ಹೇಳಲಾರೆನು. ದೊಡ್ಡ ದೊಡ್ಡ ಬ್ಯಾರಿಸ್ಟರ್‌ಗಳನ್ನು ನೋಡಿದಾಗ ಅವರಿಗೂ ಐರೋಪ್ಯರಿಗೂ, ನನಗೆ ವ್ಯತ್ಯಾಸ ಕಾಣುವುದಿಲ್ಲ. ಆಹಾರದ ವಿಷಯದಲ್ಲಿ ಅವರಿಗೆ ಯಾವ ನಿಯಮವೂ ಇಲ್ಲ. ಅವರ ಬಾಯಲ್ಲಿ ಚುಟ್ಟ ಇಲ್ಲದ ಕಾಲವೇ ಇಲ್ಲ. ಅವರ ಉಡುಪನ್ನು ನೋಡಿದರೆ, ನಾಚಿಕೆ ಕೇಡು. ಇದೆಲ್ಲ ನಮ್ಮ ಸಂಸಾರಕ್ಕೆ ಕೀರ್ತಿ ತರುವುದಲ್ಲ. ನಾನು ಕೆಲವು ದಿನಗಳಲ್ಲಿಯೇ ತೀರ್ಥಯಾತ್ರೆ ಹೋಗುತ್ತೇನೆ. ನನ್ನ ಆಯುಸ್ಸು ಇನ್ನು ಹೆಚ್ಚು ಕಾಲ ಇಲ್ಲ. ಮೃತ್ಯುವಿನ ದಡಕ್ಕೆ ಬಂದಿರುವ ನಾನು, ವಿಲಾಯತಿಗೆ ಹೋಗುವುದಕ್ಕೂ ಸಮುದ್ರವನ್ನು ದಾಟುವುದಕ್ಕೂ ನಿನಗೆ ಹೇಗೆ ಅನುಮತಿ ಕೊಡಲಿ ? ಆದರೆ ನಾನು ನಿನ್ನನ್ನು ಅಡ್ಡಿಪಡಿಸುವುದಿಲ್ಲ. ನಿನಗೆ ನಿಜವಾಗಿ ಬೇಕಾಗಿರುವುದು ನಿಮ್ಮ ತಾಯಿಯ ಅಪ್ಪಣೆ. ಅವಳು ಒಪ್ಪಿದರೆ ಸಂತೋಷದಿಂದ ಹೋಗಬಹುದು. ನಾನು ಅಡ್ಡಿಪಡಿಸುವುದಿಲ್ಲವೆಂದು ಅವಳಿಗೆ ಹೇಳು ನನ್ನ ಆಶೀರ್ವಾದ ನಿನಗೆ ಇದ್ದೇ ಇದೆ."

"ಇದಕ್ಕಿಂತ ಇನ್ನೇನನ್ನೂ ಹೆಚ್ಚಾಗಿ ನಿಮ್ಮಿಂದ ನಾನು ಕೇಳುವುದಿಲ್ಲ. ಇನ್ನು ತಾಯಿಯನ್ನು ಒಲಿಸಿಕೊಳ್ಳಲು ಪ್ರಯತ್ನಿಸುತ್ತೇನೆ. ಆದರೆ ನನ್ನನ್ನು ಲೇಲಿಸಾಹೇಬರಿಗೆ ನೀವು ಶಿಫಾರಸು ಮಾಡುವುದಿಲ್ಲವೆ ?" ಎಂದು ನಾನು ಹೇಳಿದೆನು.

"ಅದು ಹೇಗೆ ಸಾಧ್ಯ ? ಆದರೆ ಆತ ಒಳ್ಳೆಯವನು, ನಮ್ಮ ಕುಟುಂಬದ ವಿಷಯ ತಿಳಿಸಿ ಅವರಿಗೆ ನೀನು ಒಂದು ಪತ್ರ ಬರೆ. ಅವರು ಖಂಡಿತ ನಿನಗೆ ಸಂದರ್ಶನ ಕೊಡುವರು. ಸಹಾಯವನ್ನೂ ಮಾಡಬಹುದು."

ನಮ್ಮ ಚಿಕ್ಕಪ್ಪ ನನಗೆ ಶಿಫಾರಸು ಕಾಗದವನ್ನು ಏಕೆ ಕೊಡಲಿಲ್ಲವೋ ನಾನು ಹೇಳಲಾರೆನು. ವಿಲಾಯಿತಿಗೆ ನಾನು ಹೋಗುವುದು ಅವರ ಅಭಿಪ್ರಾಯದಲ್ಲಿ ಧರ್ಮ ವಿರುದ್ಧ ಕಾರ್ಯವಾದುದರಿಂದ, ನನಗೆ ಅದರಲ್ಲಿ ಪ್ರತ್ಯಕ್ಷ ಸಹಾಯ ಮಾಡಲು ಅವರು ಸಂಕೋಚಪಟ್ಟರೆಂದು ನನ್ನ ಭಾವನೆ.

ನಾನು ಶ್ರೀ ಲೇಲಿ ಸಾಹೇಬರಿಗೆ ಪತ್ರ ಬರೆದೆನು. ಅವರು ತಮ್ಮ ನಿವಾಸದಲ್ಲಿ ನನ್ನನ್ನು ಸಂದರ್ಶಿಸಲು ಕರೆದರು. ನನ್ನನ್ನು ನೋಡಿದಾಗ ಅವರು ಮಹಡಿ ಮೆಟ್ಟಿಲುಗಳನ್ನು ಏರುತ್ತಿದ್ದವರು, ಬಿ.ಎ. ಪರೀಕ್ಷೆಯಲ್ಲಿ ಮೊದಲು ತೇರ್ಗಡೆ ಹೊಂದು. ಈಗ ನಿನಗೆ ಯಾವ ಸಹಾಯವೂ ಸಿಗದು" ಎಂದು ಖಂಡಿತವಾಗಿ ಹೇಳಿ, ಮಹಡಿ ಮೆಟ್ಟಿಲುಗಳನ್ನು ಬೇಗ ಏರಿ ಹೊರಟು ಹೋದರು. ಅವರನ್ನು ಸಂದರ್ಶಿಸಲು ನಾನು ವಿಶೇಷ ಸಿದ್ಧತೆಯನ್ನು ಮಾಡಿಕೊಂಡಿದ್ದೆನು. ನಾನು ಎಚ್ಚರಿಕೆಯಿಂದ ಕೆಲವು ವಾಕ್ಯಗಳನ್ನು ಬಾಯಿಪಾಠ ಮಾಡಿದ್ದೆನು. ಆದರೆ ಎಲ್ಲ ವ್ಯರ್ಥ.

ಅನಂತರ ನನ್ನ ದೃಷ್ಟಿ, ನನ್ನ ಹೆಂಡತಿಯ ಒಡವೆಗಳ ಮೇಲೆ ಹೋಯಿತು. ನನ್ನ ಹಿರಿಯಣ್ಣನೊಡನೆ ಯೋಚಿಸಿದೆನು. ಅವನಲ್ಲಿ ನನ್ನ ಭರವಸೆ ಅಪಾರವಾಗಿದ್ದಿತು. ನನ್ನ ವಿಷಯದಲ್ಲಿ ಔದಾರ್ಯಕ್ಕೆ ಎಲ್ಲೆಯೇ ಇರಲಿಲ್ಲ. ಅವನು ನನ್ನನ್ನು ಮಗನಂತೆ ಪ್ರೀತಿಸುತ್ತಿದ್ದನು.

ನಾನು ಪೋರ್‌ಬಂದರ್‌ನಿಂದ ರಾಜಕೋಟೆಗೆ ಹಿಂದಿರುಗಿ ಬಂದು ನಡೆದ ಸಂಗತಿಗಳನ್ನೆಲ್ಲ ತಿಳಿಸಿದೆನು. ನಾನು ಜೋಷಿಯವರ ಸಲಹೆ ಕೇಳಿದೆನು. "ಆವಶ್ಯಕವಾದರೆ ಸಾಲವನ್ನಾದರೂ ಮಾಡು" ಎಂದು ಅವರು ಸೂಚಿಸಿದರು. ನನ್ನ ಹೆಂಡತಿಯ ಒಡವೆಗಳನ್ನು ಮಾರೋಣವೆಂದು ನಾನು ಸೂಚಿಸಿದೆನು. ಅದರಿಂದ ೨-೩ ಸಾವಿರ ಬರುತ್ತಿದ್ದಿತು. ಆದರೆ ನಮ್ಮಣ್ಣ "ಹೇಗೋ ಹಣ ಒದಗಿಸುತ್ತೇನೆ" ಎಂದು ಆಶ್ವಾಸನವಿತ್ತನು. ಆದರೂ ನಮ್ಮ ತಾಯಿಗೆ ಇನ್ನೂ ಸಮ್ಮತಿಯಿರಲಿಲ್ಲ. ಅವಳು ವಿಲಾಯಿತಿಯ ಜೀವನದ ವಿಷಯದಲ್ಲಿ ಎಲ್ಲವನ್ನೂ ಕೂಲಂಕಷವಾಗಿ ವಿಚಾರಿಸ ತೊಡಗಿದ್ದಳು. ಇಂಗ್ಲೆಂಡಿಗೆ ಹೋಗುವ ನವ ಯುವಕರು

ಕೆಟ್ಟುಹೋಗುವರೆಂದು ಅವರಿಗೆ ಯಾರೋ ಹೇಳಿದ್ದರು ; ಮಾಂಸಾಹಾರಿಗಳಾಗುತ್ತಾರೆಂದು ಮತ್ತೊಬ್ಬರು ಹೇಳಿದ್ದರು. ಅಲ್ಲಿಗೆ ಹೋದವರು ಮದ್ಯಪಾನವಿಲ್ಲದೆ ಜೀವಿಸಲಾರರೆಂದು ಹೇಳಿದ್ದರು ಬೇರೊಬ್ಬರು. ಅವರು ನನ್ನನ್ನು "ಇದಕ್ಕೆಲ್ಲ ಏನು ಹೇಳುತ್ತೀ" ಎಂದು ಕೇಳಿದರು. ನಾನು ಹೀಗೆ ಹೇಳಿದೆ : "ನನ್ನಲ್ಲಿ ನಿಮಗೆ ನಂಬಿಕೆಯಿಲ್ಲವೇ ? ನಾನು ನಿಮ್ಮೊಂದಿಗೆ ಸುಳ್ಳು ಹೇಳುವುದಿಲ್ಲ, ಅವುಗಳಲ್ಲಿ ಯಾವುದನ್ನೂ ನಾನು ಮುಟ್ಟುವುದಿಲ್ಲವೆಂದು ಪ್ರಮಾಣ ಮಾಡುತ್ತೇನೆ. ಅಲ್ಲಿ ಅಂತಹ ಅಪಾಯವಿದ್ದರೆ ಜೋಷಿ ನನ್ನನ್ನು ಹೋಗಗೊಡುತ್ತಿದ್ದರೆ ?"

ಆಕೆ ಹೇಳಿದರು : "ನಾನು ನಿನ್ನನ್ನು ನಂಬುತ್ತೇನೆ. ಆದರೆ ದೂರ ದೇಶದಲ್ಲಿರುವಾಗ ನಿನ್ನನ್ನು ನಂಬುವುದು ಹೇಗೆ ? ನನಗೆ ದಿಕ್ಕು ತೋಚದಂತೆ ಆಗಿದೆ. ನಾನು ಬೇಚರಜೀ ಸ್ವಾಮಿಯನ್ನು ಕೇಳುತ್ತೇನೆ.'

ಬೇಚರಜೀ ಸ್ವಾಮಿಯವರು ಮೊದಲು ಮೋದ್‌ಬನಿಯ ಆಗಿದ್ದು, ಅನಂತರ ಜೈನ ಸಾಧುವಾದವರು. ಅವರೂ ಸಹ ಜೋಷಿಜಿಯವರಂತೆ ನಮ್ಮ ಸಂಸಾರದ ಸಲಹೆಗಾರರಾಗಿದ್ದರು. ಅವರು ನನಗೆ ನೇರವಾಗಿ "ನಾನು ಈ ಮೂರು ವಿಷಯಗಳಲ್ಲಿಯೂ ಇವನಿಂದ ಪವಿತ್ರ ಪ್ರತಿಜ್ಞೆ ಮಾಡಿಸುತ್ತೇನೆ. ಅನಂತರ ಅವನನ್ನು ಸೀಮೆಗೆ ಕಳುಹಿಸಬಹುದು" ಎಂದು ಹೇಳಿದರು. ಅವರು ನನ್ನಿಂದ ಪ್ರತಿಜ್ಞೆಯನ್ನು ಮಾಡಿಸಿದರು. ನಾನು ಮದ್ಯ, ಮಾಂಸ, ಸ್ತ್ರೀ ಈ ಮೂರನ್ನೂ ಮುಟ್ಟುವುದಿಲ್ಲವೆಂದು ಪ್ರತಿಜ್ಞೆ ಮಾಡಿದೆ. ಇದಾದ ಮೇಲೆ ನಮ್ಮ ತಾಯಿ ನನಗೆ ಅನುಮತಿ ಕೊಟ್ಟರು.

ಪ್ರೌಢಶಾಲೆಯವರು ನನ್ನ ಗೌರವಾರ್ಥವಾಗಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದರು. ರಾಜಕೋಟೆಯ ಯುವಕ ವಿಲಾಯಿತಿಗೆ ಹೋಗುವ ವಿಚಾರ ಎಲ್ಲರಿಗೂ ಆಶ್ಚರ್ಯವಾಗಿದ್ದಿತು. ನಾನು ಕೃತಜ್ಞತೆಯನ್ನು ಸೂಚಿಸಲು ಪ್ರತ್ಯುತ್ತರವಾಗಿ ಕೆಲವು ವಾಕ್ಯಗಳನ್ನು ಬರೆದುಕೊಂಡು ಹೋಗಿದ್ದೆನು. ಆದರೆ ನನ್ನ ಬಾಯಿಂದ ಮಾತೇ ಹೊರಡಲಿಲ್ಲ. ಓದುವುದಕ್ಕೆ ನಿಂತಕೂಡಲೇ ನನ್ನ ತಲೆ ತಿರುಗಿದುದೂ, ದೇಹವೆಲ್ಲ ನಡುಗಿದುದೂ ನನಗೆ ಚೆನ್ನಾಗಿ ಜ್ಞಾಪಕವಿದೆ.

ಹಿರಿಯರ ಆಶೀರ್ವಾದ ಪಡೆದು ನಾನು ಬೊಂಬಾಯಿಗೆ ಹೊರಟೆನು. ರಾಜಕೋಟೆಯಿಂದ ಬೊಂಬಾಯಿಗೆ ಅದೇ ನನ್ನ ಮೊದಲ ಪ್ರಯಾಣ ವಾಗಿದ್ದಿತು. ನನ್ನ ಅಣ್ಣನೂ ನನ್ನ ಜತೆಗೆ ಬಂದರು. ಆದರೆ ಎಷ್ಟೋ ವೇಳೆ ಕೈಗೆ ಬಂದ ತುತ್ತು ಬಾಯಿಗೆ ಬರುವುದಿಲ್ಲ. ಬೊಂಬಾಯಿನಲ್ಲಿ ನಾನು ಕಷ್ಟಗಳನ್ನು ಎದುರಿಸಬೇಕಾಗಿದ್ದಿತು.

೧೨

ಜಾತಿ ಬಹಿಷ್ಕಾರ

ತಾಯಿಯ ಅನುಮತಿ ಮತ್ತು ಆಶೀರ್ವಾದವನ್ನು ಪಡೆದು ಕೆಲವು ತಿಂಗಳ ಮಗುವನ್ನೂ ಹೆಂಡತಿಯನ್ನೂ ಬಿಟ್ಟು, ನಾನು ಉತ್ಸಾಹದಿಂದ ಬೊಂಬಾಯಿಗೆ ಹೊರಟೆನು. ತಲಪಿದುದಂತೂ ಆಯಿತು. ಆದರೆ ಅಲ್ಲಿಯ ಮಿತ್ರರು, ಹಿಂದೂ ಸಾಗರದಲ್ಲಿ ಜೂನ್ ಜುಲೈನಲ್ಲಿ ಬಿರುಗಾಳಿ ಹೆಚ್ಚೆಂದೂ ನಾನು ಮೊದಲ ಬಾರಿಗೆ ಸಮುದ್ರ ಪ್ರಯಾಣ ಮಾಡುತ್ತಿರುವುದರಿಂದ ದೀಪಾವಳಿಯಾದ ಮೇಲೆ ನವೆಂಬರ್‌ನಲ್ಲಿ ಕಳುಹಿಸಬೇಕೆಂದೂ ನಮ್ಮ ಅಣ್ಣನಿಗೆ ಹೇಳಿದರು. ಅಷ್ಟರಲ್ಲಿಯೇ ಯಾರೋ ಒಬ್ಬರು, ಒಂದು ಜಹಜು ಬಿರುಗಾಳಿಯಿಂದ ಮುಳುಗಿಹೋದ ಮಾತನ್ನೂ ಹೇಳಿದರು. ಇದರಿಂದ ನಮ್ಮ ಅಣ್ಣ ಚಿಂತೆಗೊಳಗಾದರು. ಇದೇ ಕಾರಣದಿಂದ ಆತ ನನ್ನನ್ನು ಕೂಡಲೇ ಪ್ರಯಾಣಮಾಡಲು ಸಮ್ಮತಿಸದೆ, ನನ್ನನ್ನು ಬೊಂಬಾಯಿಯಲ್ಲಿ ತಮ್ಮ ಒಬ್ಬ ಸ್ನೇಹಿತರ ಮನೆಯಲ್ಲಿ ಬಿಟ್ಟು, ತಮ್ಮ ಕೆಲಸ ನೋಡಲು ರಾಜಕೋಟೆಗೆ ಹೋದರು. ಅವರು ನನ್ನ ಪ್ರಯಾಣ ವೆಚ್ಚದ ಹಣವನ್ನು ಭಾವನ ಕೈಯಲ್ಲಿ ಕೊಟ್ಟು ಬೇರೆ ಕೆಲವು ಸ್ನೇಹಿತರಿಗೆ ನನಗೆ ಆವಶ್ಯಕವಾದ ಸಹಾಯವನ್ನು ಮಾಡುವಂತೆ ಹೇಳಿ ಹೋದರು.

ಬೊಂಬಾಯಿಯಲ್ಲಿ ನನಗೆ ಕಾಲ ಕಳೆಯುವುದು ಕಷ್ಟವಾಯಿತು. ನನಗೆ ಹಗಲು ರಾತ್ರಿ ವಿಲಾಯತಿಯ ಕನಸೇ ಬೀಳುತ್ತಿದ್ದಿತು. ನಡುವೆ ನಮ್ಮ ಜಾತಿಯ ಜನರು ನನ್ನ ವಿದೇಶ ಪ್ರಯಾಣವನ್ನು ಕುರಿತು ಗೊಂದಲವನ್ನು ಎಬ್ಬಿಸಿದರು. ಅಲ್ಲಿಯವರೆಗೆ ಮೋಢ್ ಬನಿಯರ ಪೈಕಿ ಯಾರೂ ವಿಲಾಯತಿಗೆ ಹೋಗಿರಲಿಲ್ಲ. ನಾನು ಈ ಸಾಹಸವನ್ನು ಮಾಡುವುದಾದರೆ ನನಗೆ

ತಕ್ಕ ಶಿಕ್ಷೆಯಾದೀತೆಂದು ನುಡಿದರು. ಜಾತಿಯವರ ಪಂಚಾಯಿತಿ ಸಭೆಯಲ್ಲಿ ನಾನು ಹಾಜರಾಗಬೇಕೆಂದು ನನಗೆ ಅಪ್ಪಣೆ ಬಂದಿತು. ನಾನು ಹಾಜರಾದೆನು. ನನಗೆ ಆ ಧೈರ್ಯ ಇದ್ದಕ್ಕಿದ್ದಂತೆ ಹೇಗೆ ಬಂದಿತೆಂಬುದು ಈಶ್ವರನಿಗೇ ಗೊತ್ತು. ಅಲ್ಲಿಗೆ ಹೋಗಲು ನನಗೆ ಅಧೈರ್ಯವೇ ಇರಲಿಲ್ಲ. ಶಂಕೆಯೂ ಆಗಲಿಲ್ಲ. ಜಾತಿಯ ಮುಖಂಡ ನನ್ನ ದೂರದ ಬಂಧುವೂ ಆಗಿದ್ದರು. ನಮ್ಮ ತಂದೆಯವರೊಂದಿಗೆ ಅವರ ಸಂಬಂಧ ಚೆನ್ನಾಗಿದ್ದಿತು. ಅವರು ನನಗೆ ಹೇಳಿದರು: "ನೀನು ವಿಲಾಯತಿಗೆ ಹೋಗುವ ವಿಚಾರ ಸರಿಯಾದುದಲ್ಲವೆಂಬುದು ಪಂಚಾಯಿತರ ಅಭಿಪ್ರಾಯ. ನಮ್ಮ ಧರ್ಮ ಪಾಲನೆ ಸಾಧ್ಯವಿಲ್ಲ. ಅಲ್ಲಿ ಆಂಗ್ಲೇಯರ ಜತೆ ಆಹಾರ ಪಾನೀಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ."

ನಾನು ಹೀಗೆ ಪ್ರತ್ಯುತ್ತರವಿತ್ತೆನು: "ವಿಲಾಯತಿಗೆ ಹೋಗುವುದು ಯಾವ ರೀತಿಯಲ್ಲಿಯೂ ಅಧರ್ಮವಲ್ಲವೆಂದು ನಾನು ತಿಳಿದಿದ್ದೇನೆ. ನಾನು ಅಲ್ಲಿಗೆ ಹೋಗುವುದು ಬರಿಯ ವಿದ್ಯಾಧ್ಯಯನಕ್ಕಾಗಿಯೇ. ಯಾವ ವಿಷಯಗಳಲ್ಲಿ ನಿಮಗೆ ಭಯವಿದೆಯೋ ಅವುಗಳಿಂದ ದೂರವಿರುವುದಾಗಿ ತಾಯಿಗೆ ಪ್ರತಿಜ್ಞಾವಚನ ಕೊಟ್ಟಿದ್ದೇನೆ. ನಾನು ಅವುಗಳಿಂದ ದೂರ ವಿರಬಲ್ಲೆನು."

"ಆದರೆ ನಾವು ನಿನಗೆ ಹೇಳುತ್ತೇವೆ. ಅಲ್ಲಿ ನಮ್ಮ ಧರ್ಮಪಾಲನೆ ಸಾಧ್ಯವಿಲ್ಲ. ನಿಮ್ಮ ತಂದೆಗೂ ನನಗೂ ಎಂತಹ ಸಂಬಂಧವಿದ್ದಿತೆಂಬುದು ನಿನಗೂ ಗೊತ್ತು. ನಾನು ಹೇಳಿದುದನ್ನು ನೀನು ಆದರಿಸಲೇಬೇಕು" ಎಂದು ಜಾತಿಯ ಮುಖ್ಯಸ್ಥ ಹೇಳಿದರು.

"ಹೌದು, ನಿಮ್ಮ ಮತ್ತು ನಮ್ಮ ತಂದೆಯ ಸಂಬಂಧ ನನಗೆ ಜ್ಞಾಪಕವಿದೆ. ನೀವು ನಮ್ಮ ತಂದೆಯ ಸಮಾನರು. ಆದರೆ ಈ ವಿಷಯದಲ್ಲಿ ನಾನು ನಿರುಪಾಯ. ವಿಲಾಯತಿಗೆ ಹೋಗುವ ನನ್ನ ನಿಶ್ಚಯವನ್ನು ನಾನು ಬದಲಾಯಿಸಲಾರೆನು. ನಮ್ಮ ತಂದೆಯ ಮಿತ್ರರೂ ಸಲಹೆಗಾರರೂ ಆದ ವಿದ್ವಾಂಸ ಬ್ರಾಹ್ಮಣರೊಬ್ಬರು, ನಾನು ವಿಲಾಯತಿಗೆ ಹೋಗುವುದು ತಪ್ಪಿಲ್ಲವೆಂದು ಭಾವಿಸಿದ್ದಾರೆ. ತಾಯಿಯೂ, ಅಣ್ಣನೂ ನನಗೆ ಅನುಮತಿ

ಕೊಟ್ಟಿದ್ದಾರೆ" ಎಂದು ನಾನು ಉತ್ತರವಿತ್ತೆನು. "ಹಾಗಾದರೆ ನೀನು ಪಂಚಾಯಿತಿಯ ಅಪ್ಪಣೆಯನ್ನು ನಡೆಸುವುದಿಲ್ಲವೆ ?"

"ನಾನು ನಿರುಪಾಯ. ಈ ವಿಷಯದಲ್ಲಿ ಪಂಚಾಯಿತಿಯವರು ಪ್ರವೇಶಿಸುವುದು ಅವಶ್ಯಕವಿಲ್ಲವೆಂದು ನಾನು ಭಾವಿಸುತ್ತೇನೆ."

ನನ್ನ ಈ ಪ್ರತ್ಯುತ್ತರದಿಂದ ಆ ಮುಖಂಡರಿಗೆ ಕೋಪ ಬಂದಿತು. ನನ್ನನ್ನು ಕುರಿತು ನಾಲ್ಕಾರು ಕೆಟ್ಟ ಮಾತನ್ನು ಆಡಿದರು. ನಾನು ಸುಮ್ಮನೆ ಕುಳಿತೆನು. ಸೇಠರು ತಮ್ಮ ತೀರ್ಮಾನವನ್ನು ಹೇಳಿದರು. "ಇಂದಿನಿಂದ ಈ ಹುಡುಗನನ್ನು ಜಾತಿ ಬಾಹಿರನೆಂದು ಪರಿಗಣಿಸಿ. ಇವನಿಗೆ ಸಹಾಯ ಮಾಡುವವರು, ಇವನನ್ನು ಕಳುಹಿಸಲು ಬಂದರಿಗೆ ಹೋಗಿ ಬರುವವರು, ಜಾತಿಗೆ ಅಪರಾಧಿಗಳು. ಅಂತಹವರಿಗೆ ಒಂದೂಕಾಲು ರೂಪಾಯಿ ಜುಲ್ಮಾನೆ ವಿಧಿಸಲ್ಪಡುತ್ತದೆ."

ಈ ಘಟನೆಯಿಂದ ನನ್ನ ಮೇಲೆ ಏನೂ ಪರಿಣಾಮವಾಗಲಿಲ್ಲ. ನಾನು ಸೇಠರ ಅಪ್ಪಣೆ ಪಡೆದು ಹಿಂದಿರುಗಿದೆನು. ಈ ನಿರ್ಣಯದ ಪರಿಣಾಮ ನಮ್ಮಣ್ಣನ ಮೇಲೆ ಏನಾಗುವುದೋ ಎಂದು ನಾನು ಚಿಂತಿಸಿ ದೆನು. ಅವನಿಗೇನಾದರೂ ಭಯವಾಗುವುದೋ ಎಂದು ಯೋಚಿಸಿದೆನು. ಭಾಗ್ಯವಶದಿಂದ, ಅವರು ವಿಚಲಿತರಾಗಲಿಲ್ಲ. "ಜಾತಿಯವರ ತೀರ್ಮಾನ ಹೇಗಿದ್ದರೂ ನೀನು ವಿಲಾಯತಿಗೆ ಹೋಗುವುದನ್ನು ನಾನು ತಡೆಯುವು ವುದಿಲ್ಲ"ವೆಂದು ಬರೆದರು. ಈ ಘಟನೆಯ ನಂತರ ನಾನು ಹೆಚ್ಚು ಆತಂಕ ದಿಂದ ಕೂಡಿದೆನು. ಜಾತಿಯವರು ಈ ವಿಷಯದಲ್ಲಿ ನನ್ನ ಅಣ್ಣನನ್ನು ಬಲಾತ್ಕರಿಸಿದರೋ ? ಅಥವಾ ಬೇರೆ ಯಾವುದಾದರೂ ವಿಘ್ನಗಳುಂಟಾ ದವೋ ? ಈ ರೀತಿ ನಾನು ಚಿಂತೆಯಲ್ಲಿ ದಿನಗಳನ್ನು ಕಳೆಯುತ್ತಿರುವಾಗ, ಸೆಪ್ಟೆಂಬರ್ ನಾಲ್ಕರಂದು ವಿಲಾಯತಿಗೆ ಹೋಗುವ ಹಡಗಿನಲ್ಲಿ ಜುನಾ ಗಡದ ವಕೀಲರೊಬ್ಬರು ಬ್ಯಾರಿಸ್ಟರ್ ಆಗಲು ಹೋಗುವರೆಂದು ಗೊತ್ತಾ ಯಿತು. ನಾನು ನನ್ನ ಕ್ಷೇಮವನ್ನು ನೋಡಿಕೊಳ್ಳಲು ನಮ್ಮಣ್ಣ ಹೇಳಿದ್ದ ಮಿತ್ರರನ್ನು ಹೋಗಿ ನೋಡಿದೆನು. ಅವರೂ "ಈ ಜತೆಯನ್ನು ಬಿಡಬೇಡ" ಎಂದು ಸಲಹೆ ಮಾಡಿದರು. ಕಾಲ, ಬಹಳ ಕಡಿಮೆಯಿತ್ತು. ಅಣ್ಣನಿಂದ ತಂತಿ ಮೂಲಕ ಅನುಮತಿ ಕೇಳಿದೆನು. ಅವರು ಅನುಮತಿ

ಕೊಟ್ಟರು. ನಾನು ಭಾವನನ್ನು ಹಣ ಕೇಳಿದೆನು. ಅವನು ಪಂಚಾಯಿತರ ತೀರ್ಪಿನತ್ತ ನನ್ನ ದೃಷ್ಟಿ ಸೆಳೆದು "ಜಾತಿ ಬಾಹಿರನಾಗಲು ನನ್ನಿಂದ ಸಾಧ್ಯವಿಲ್ಲ" ಎಂದು ಹೇಳಿದರು. ಆಗ ನಮ್ಮ ಕುಟುಂಬದ ಒಬ್ಬ ಮಿತ್ರರಲ್ಲಿ ಹೋಗಿ ನನಗೆ ಪ್ರಯಾಣದ ವೆಚ್ಚವನ್ನು ಕೊಡುವಂತೆ ಕೇಳಿ ನಮ್ಮಣ್ಣನಿಂದ ಅದನ್ನು ಹಿಂತೆಗೆದುಕೊಳ್ಳಲು ಹೇಳಿದೆ. ಅವರು ನನ್ನ ಮಾತನ್ನು ಒಪ್ಪಿದ್ದು ಮಾತ್ರವಲ್ಲದೆ ನನಗೆ ಪ್ರೋತ್ಸಾಹವನ್ನೂ ಸಹ ಕೊಟ್ಟರು. ಅವನ್ನು ವಂದಿಸಿ ಹಣ ಪಡೆದು ಹೋಗಿ ಟಿಕೆಟ್ ಕೊಂಡುಕೊಂಡೆನು. ವಿಲಾಯತಿ ಯಾತ್ರೆಯ ಸರ್ವ ಸಿದ್ಧತೆಯನ್ನೂ ಮಾಡಿಕೊಳ್ಳಬೇಕಾಗಿದ್ದಿತು. ಈ ವಿಷಯದಲ್ಲಿ ಅನುಭವಶಾಲಿಯಾದ ಒಬ್ಬ ಮಿತ್ರ, ಬೇಕಾದ ಉಡುಪು ಮತ್ತು ಇತರ ವಸ್ತುಗಳನ್ನು ಒದಗಿಸಿಕೊಟ್ಟನು. ನನಗೆ ಅದೆಲ್ಲ ವಿಚಿತ್ರ ವಾಗಿ ಕಂಡಿತು. ಕೆಲವು ನನಗೆ ಪ್ರಿಯವಾದುವು. ಕೆಲವು ಆಗಲಿಲ್ಲ. ನೆಕ್‌ಟೈಯಂತೂ ಸುತಾರಾಂ ಚೆನ್ನಾಗಿ ಕಾಣಲಿಲ್ಲ. ಆದರೆ ಮುಂದೆ ಅದನ್ನೇ ಧರಿಸುವುದರಲ್ಲಿ ನನಗೆ ಆನಂದವಾಗುತ್ತಿದ್ದಿತು. ಷಾರ್ಟ್ ಜಾಕೆಟ್ ನನಗೆ ನಾಚಿಕೆಕೇಡು ಆಗಿ ಕಾಣುತ್ತಿದ್ದಿತು. ಆದರೆ ವಿಲಾಯತಿಗೆ ಹೊರಡುವ ಆಸೆಯಲ್ಲಿ ಅದನ್ನು ನಾನು ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. ಜತೆಯಲ್ಲಿ ತಿನ್ನುವ ಪದಾರ್ಥಗಳನ್ನೂ ಬೇಕಾದಷ್ಟು ಕಟ್ಟಿಕೊಂಡಿದ್ದೆನು. ನನಗಾಗಿ, ತ್ರ್ಯಂಬಕ್‌ರಾಯ್ ಮಜುಂದಾರ್ (ಜುನಾಗಡದ ವಕೀಲ)ರ ಕೊಠಡಿ (ಕ್ಯಾಬಿನ್) ನಲ್ಲಿ ಜಾಗವನ್ನು ಕಾದಿರಿಸಿದರು. ನನ್ನ ವಿಷಯ ಅವರಿಗೆ ಹೇಳಿದರು. ಅವರು ಪ್ರಾಯವನ್ನು ದಾಟದ್ದ ಅನುಭವಶಾಲಿ ಗೃಹಸ್ಥ ರಾಗಿದ್ದರು. ನಾನು ೧೮ ವರುಷದ, ಪ್ರಪಂಚದ ಅನುಭವವಿಲ್ಲದ ನವ ಯುವಕ. ಮಜುಂದಾರರು ನನ್ನ ಮಿತ್ರರಿಗೆ "ಇವನ ವಿಷಯದಲ್ಲಿ ನೀವು ನಿಶ್ಚಿಂತೆಯಾಗಿರಿ" ಎಂದು ಆಶ್ವಾಸನವಿತ್ತರು.

ಹೀಗೆ ಸೆಪ್ಟೆಂಬರ್ ನಾಲ್ಕರಂದು (೧೮೮೮) ನಾನು ಬೊಂಬಾಯಿ ಬಂದರನ್ನು ಬಿಟ್ಟು ವಿಲಾಯತಿಗೆ ಹೊರಟೆನು.

೧೩

ವಿಲಾಯತಿ ತಲುಪಿದ್ದು

ಜಹಜಿನಲ್ಲಿ, ನನಗೆ ಸಮುದ್ರ ಪ್ರಯಾಣದ ಯಾವ ತೊಂದರೆಯೂ ಆಗಲಿಲ್ಲ. ದಿನಗಳು ಕಳೆದಂತೆಲ್ಲ ನನ್ನ ಮನಸ್ಸು ಸಂಗಿಗ ಪರಿಸ್ಥಿತಿಗೆ ಬೀಳತೊಡಗಿದ್ದಿತು. ಹಡಗಿನ ಉಗ್ರಾಣಾಧಿಕಾರಿಯೊಂದಿಗೆ ಮಾತನಾಡುವುದಕ್ಕೆ ಸಹ ನನಗೆ ನಾಚಿಕೆಯಾಗುತ್ತಿದ್ದಿತು. ಇಂಗ್ಲೀಷಿನಲ್ಲಿ ಮಾತನಾಡುವುದು ನನಗೆ ಅಭ್ಯಾಸವಿರಲಿಲ್ಲ. ಮಜುಂದಾರರ ಹೊರತು, ಹಡಗಿನ ಎರಡನೆಯ ತರಗತಿಯ ಪ್ರಯಾಣಿಕರೆಲ್ಲ ಆಂಗ್ಲರೇ ಆಗಿದ್ದರು. ನನಗೆ ಅವರ ಮುಂದೆ ಮಾತನಾಡುವ ಪ್ರಯತ್ನ ಮಾಡಿದಾಗ ನನಗೆ ಅವರ ಮಾತು ತಿಳಿಯುತ್ತಿರಲಿಲ್ಲ. ತಿಳಿದರೂ ಏನು ಉತ್ತರ ಕೊಡಬೇಕೆಂಬುದು ಹೊಳೆಯುತ್ತಿರಲಿಲ್ಲ. ಪ್ರತಿಯೊಂದು ವಾಕ್ಯವನ್ನೂ ಹೇಳುವುದಕ್ಕೆ ಮುಂಚೆ, ಮನಸ್ಸಿನಲ್ಲಿ ಸಿದ್ಧತೆ ನಡೆಯಬೇಕಾಗಿದ್ದಿತು. ಚಾಕು ಮತ್ತು ಮುಳ್ಳು ಚಮಚವನ್ನು ಉಪಯೋಗಿಸಿ ಊಟಮಾಡುವುದು ನನಗೆ ಬರುತ್ತಿರಲಿಲ್ಲ. ನನಗೆ ಆಹಾರದ ವಿಷಯವೂ ತಿಳಿದಿರಲಿಲ್ಲ. ಯಾವ ಯಾವ ಆಹಾರದಲ್ಲಿ ಮಾಂಸವಿದೆ, ಇಲ್ಲ ಎಂಬುದನ್ನು ವಿಚಾರಿಸುವ ಧೈರ್ಯವೂ ಇರಲಿಲ್ಲ. ಈ ಕಾರಣದಿಂದ ನಾನು ಭೋಜನದ ಮೇಜಿನ ಬಳಿಗೆ ಯಾವಾಗಲೂ ಹೋಗಲೇ ಇಲ್ಲ. ಕ್ಯಾಬಿನ್‌ನಲ್ಲಿಯೇ ಊಟಮಾಡುತ್ತಿದ್ದೆನು. ನನ್ನ ಬಳಿ ಮಿಠಾಯಿ ಮುಂತಾದುವನ್ನು ಇಟ್ಟುಕೊಂಡಿದ್ದೆನು. ನಾನು ಬಹುಭಾಗ, ಅವುಗಳನ್ನೇ ಅವಲಂಬಿಸಿದ್ದೆನು. ಮಜುಂದಾರರಿಗೆ ಯಾವ ವಿಧವಾದ ಸಂಕೋಚವೂ ಇರಲಿಲ್ಲ. ಅವರು ಎಲ್ಲರೊಂದಿಗೂ ಬೆರೆಯುತ್ತಿದ್ದರು. ಡೆಕ್‌ನಲ್ಲಿ ಇಷ್ಟಬಂದಂತೆ ತಿರುಗುತ್ತಿದ್ದರು. ನಾನು ದಿನವೆಲ್ಲ ಕ್ಯಾಬಿನ್‌ನಲ್ಲಿಯೇ ಅವಿತುಕೊಂಡಿರುತ್ತಿದ್ದೆನು. ಹಡಗಿನ ಮೇಲ್ಭಾಗದಲ್ಲಿ ಜನ ಸಂದಣಿ ಕಡಿಮೆಯಾದ ಸಮಯ ನೋಡಿ ಅಲ್ಲಿ ಹೋಗಿ ಕುಳಿತಿರುತ್ತಿದ್ದೆನು. ಮಜುಂದಾರರು "ಎಲ್ಲರೊಂದಿಗೂ ಸೇರು" ಎಂದು ನನಗೆ ಹೇಳುತ್ತಿದ್ದರು. ವಕೀಲನಿಗೆ ಬಾಯಿ ಜೋರಾಗಿರಬೇಕೆಂದೂ ಹೇಳುತ್ತಿದ್ದರು; ತಮ್ಮ ವಕೀಲಿಯ ಅನುಭವಗಳನ್ನೆಲ್ಲ ಹೇಳುತ್ತಿದ್ದರು. "ಇಂಗ್ಲೀಷು ನಮ್ಮ

ಮಾತೃಭಾಷೆಯಲ್ಲ. ಆದ್ದರಿಂದ ಮಾತನಾಡುವಾಗ ತಪ್ಪು ಆಗುವುದು ಸ್ವಾಭಾವಿಕ. ಆದರೂ ಮಾತನಾಡಲು ಎಲ್ಲ ಅವಕಾಶವನ್ನೂ ಉಪಯೋಗಿಸಿಕೊಳ್ಳಬೇಕು" ಎಂದೆಲ್ಲ ಹೇಳುತ್ತಿದ್ದರು. ಆದರೆ ಯಾವುದರಿಂದಲೂ ನನ್ನ ಸಂಕೋಚ ಮರೆಯಾಗಲಿಲ್ಲ. ನನ್ನಲ್ಲಿ ಕನಿಕರದಿಂದ ಒಬ್ಬ ಒಳ್ಳೆಯ ಆಂಗ್ಲೇಯ ಗೃಹಸ್ಥರು ನನ್ನೊಂದಿಗೆ ಮಾತನಾಡಲು ಪ್ರಾರಂಭಿಸಿದರು. ಅವರು ನನಗಿಂತಲೂ ದೊಡ್ಡವರಾಗಿದ್ದರು. ನಾನು ಏನು ತಿನ್ನುತ್ತೇನೆ? ನನ್ನ ವಿಷಯವೇನು? ಹೋಗುವುದೆಲ್ಲಿಗೆ? ಏಕೆ ಯಾರೊಂದಿಗೂ ಮಾತು ಕತೆಯಾಡುವುದಿಲ್ಲ? ಎಂದೆಲ್ಲ ಕೇಳಿದರು. ನಾನು ಊಟಕ್ಕೆ, ಮೇಜಿನ ಹತ್ತಿರಕ್ಕೆ ಹೋಗುವಂತೆ ಪ್ರೇರಿಸಿದರು. ಮಾಂಸ ತಿನ್ನುವುದಿಲ್ಲವೆಂಬ ನನ್ನ ನಿರ್ಧಾರದ ನುಡಿಯನ್ನು ಕೇಳಿ ಅವರು ಒಂದು ದಿನ ನಕ್ಕು, ದಯಾಪರರಾಗಿ ಹೇಳಿದರು: "ಇಲ್ಲಿಯವರೆಗೆ (ಪೋರ್ಟ್ ಸೆಡ್ ಮುಟ್ಟುವವರೆಗೆ) ಎಲ್ಲ ಸರಿಹೋಗುತ್ತೆ. ಆದರೆ ಬಿಸ್ಕೆ ಕೊಲ್ಲಿಯನ್ನು ಮುಟ್ಟಿದ ನಂತರ, ನಿನ್ನ ನಿರ್ಧಾರವನ್ನು ಬದಲಾಯಿಸಬೇಕಾಗುತ್ತದೆ. ಇಂಗ್ಲೆಂಡಿನಲ್ಲಿ ಎಷ್ಟು ಚಳಿಯೆಂದರೆ ಮಾಂಸವಿಲ್ಲದೆ ಜೀವಿಸುವುದು ಕಷ್ಟ." ಆದಕ್ಕೆ ನಾನು ಹೀಗೆ ಹೇಳಿದೆ: "ಅಲ್ಲಿ ಮಾಂಸಾಹಾರವಿಲ್ಲದೆ ಜನ ಬದುಕಬಲ್ಲರೆಂದು ಕೇಳಿದ್ದೇನೆ."

"ಅದು ಸುಳ್ಳು, ನನಗೆ ಪರಿಚಯವಿರುವವರಲ್ಲಿ. ಮಾಂಸವನ್ನು ತಿನ್ನದವರು ಯಾರೂ ಇಲ್ಲ. ಮದ್ಯಪಾನ ಮಾಡು ಎಂದು ನಾನು ಹೇಳುವುದಿಲ್ಲ. ಆದರೆ ನೀನು ಆವಶ್ಯಕವಾಗಿ ಮಾಂಸವನ್ನು ತಿನ್ನಲೇಬೇಕೆಂದು ನನ್ನ ಅಭಿಪ್ರಾಯ" ಎಂದು ಹೇಳಿದರು.

ನಾನು ಹೇಳಿದೆನು. "ನಿಮ್ಮ ಸಲಹೆಗಾಗಿ ನಿಮಗೆ ವಂದನೆ. ಆದರೆ ನಾನು ಮಾಂಸ ತಿನ್ನುವುದಿಲ್ಲವೆಂದು ನಮ್ಮ ತಾಯಿಗೆ ವಚನ ಕೊಟ್ಟಿದ್ದೇನೆ. ಮಾಂಸವಿಲ್ಲದೆ ಇರುವುದು ಸಾಧ್ಯವಾಗದಿದ್ದರೆ ನಾನು ಹಿಂದೂಸ್ಥಾನಕ್ಕೆ ಹಿಂದಿರುಗುತ್ತೇನೆ. ಆದರೆ ಮಾಂಸವನ್ನು ಎಂದಿಗೂ ತಿನ್ನುವುದಿಲ್ಲ."

ಬಿಸ್ಕೆ ಕೊಲ್ಲಿಗೆ ಬಂದೆವು. ಅಲ್ಲಿಯೂ ನನಗೆ ಮಾಂಸದ ಆವಶ್ಯಕತೆಯಾಗಲೀ ಮದ್ಯದ ಆವಶ್ಯಕತೆಯಾಗಲೀ ಕಾಣಲಿಲ್ಲ. ನಮ್ಮ ಮನೆಯವರು ನಾನು ಮಾಂಸಾಹಾರ ತಿನ್ನುವುದಿಲ್ಲವೆಂಬುದಕ್ಕೆ ಸಾಕ್ಷಿಪತ್ರ

ಗಳನ್ನು ಸಂಗ್ರಹಿಸಿಕೊಂಡು ಬರಬೇಕೆಂದು ಹೇಳಿದ್ದರು. ಆದುದರಿಂದ ನಾನು ಈ ಆಂಗ್ಲೇಯ ಮಿತ್ರರಿಂದ ಸಾಕ್ಷಿಪತ್ರವನ್ನು ಕೇಳಿದೆನು. ಅವರು ಸಂತೋಷದಿಂದ ಅದನ್ನು ಬರೆದು ಕೊಟ್ಟರು. ಬಹಳ ಕಾಲದವರೆಗೆ ಅದನ್ನು ಹಣದೋಸಾದಿಯಲ್ಲಿ ರಕ್ಷಿಸಿ ಇಟ್ಟಿದ್ದೆನು. ಆಮೇಲೆ, ನನಗೆ ತಿಳಿಯಿತು. "ಮಾಂಸ ತಿಂದರೂ ಇಂತಹ ಪ್ರಮಾಣ ಪತ್ರಗಳನ್ನು ಸಂಗ್ರಹಿಸಬಹುದೆಂದು." ನನಗೆ ಆದರ ಮೋಹವು ನಾಶವಾಯಿತು. ನನ್ನ ಮಾತನ್ನು ನಂಬದೇ ಹೋದರೆ ಇನ್ನು ಆ ಪ್ರಮಾಣ ಪತ್ರದಿಂದ ತಾನೇ ಪ್ರಯೋಜನವೇನು ?

ಸುಖದುಃಖಗಳನ್ನು ಕಳೆದು, ಅಂತೂ ನಾವು ಸೌತ್ ಹ್ಯಾಂಪ್ಟನ್ನು ತಲಪಿದೆವು. ಯಾತ್ರೆ ಮುಗಿಯಿತು. ಅಂದು ಶನಿವಾರವೆಂದು ನನ್ನ ಜ್ಞಾಪಕ. ಹಡಗಿನಲ್ಲಿರುವಾಗ ನಾನು ಕರಿಯ ಕೋಟು, ಷರಾಯಿ ಧರಿಸಿದ್ದೆನು. ನಮ್ಮ ಸ್ನೇಹಿತರು ಹೊಲಿಸಿ ಸಿದ್ಧಮಾಡಿಕೊಟ್ಟಿದ್ದ ಬಿಳಿಯ ಫ್ಲಾನಲ್ ಉಡುಪನ್ನು, ಇಂಗ್ಲೆಂಡಿನಲ್ಲಿ ಹಡಗಿನಿಂದ ಇಳಿದಾಗ ಧರಿಸಲು ಇರಲೆಂದು ಇಟ್ಟುಕೊಂಡಿದ್ದೆನು. ಬಿಳಿ ಬಟ್ಟೆ ಹೆಚ್ಚು ಒಪ್ಪುತ್ತೆ ಎಂದು ಭಾವಿಸಿ ಬಿಳಿ ಬಟ್ಟೆಗಳನ್ನು ಧರಿಸಿ ಹಡಗಿನಿಂದ ಇಳಿದೆನು. ಸೆಪ್ಟೆಂಬರಿನ ಕೊನೆಯ ದಿನ. ಅಂದು ಅಂತಹ ಉಡುಪು ಧರಿಸಿದ್ದವನು ನಾನೊಬ್ಬನೇ. ನನ್ನ ಎಲ್ಲ ಸಾಮಾನು ಪೆಟ್ಟಿಗೆ ಮತ್ತು ಆದರ ಬೀಗದಕೈ ಸಹ ಗ್ರಿಂಡ್‌ಲಿ ಕಂಪನಿ ಗುಮಾಸ್ತರ ವಶದಲ್ಲಿದ್ದಿತು. ಇತರರೂ ಹಾಗೆ ಮಾಡಿದ್ದುದರಿಂದ ನಾನೂ ಬೀಗದಕೈಯನ್ನು ಅವರ ಕೈಯಲ್ಲಿಯೇ ಕೊಟ್ಟಿದ್ದೆನು.

ನನ್ನ ಹತ್ತಿರ ನಾಲ್ಕು ಪರಿಚಯ ಪತ್ರಗಳಿದ್ದವು. ಒಂದನೆಯದು ಡಾಕ್ಟರ್ ಪ್ರಾಣಜೀವನ ಮೆಹತಾರವರಿಗೆ, ಎರಡನೆಯದು ದಳಪತರಾಮ್ ಶುಕ್ಲರಿಗೆ. ಮೂರನೆಯದು ಪ್ರಿನ್ಸ್ ರಣಜಿತ್ ಸಿಂಗರ ಹೆಸರಿಗೆ, ನಾಲ್ಕನೆಯದು ದಾದಾಭಾಯಿ ನವರೋಜಿಯವರಿಗೆ.

ನಾನು ಸೌತ್ ಹ್ಯಾಂಪ್ಟನ್‌ನಿಂದ ಡಾಕ್ಟರ್ ಮೆಹತಾರವರಿಗೆ ತಂತಿ ಕಳುಹಿಸಿದ್ದೆನು. ವಿಕ್ಟೋರಿಯ ಹೋಟೆಲಿನಲ್ಲಿ ಇಳಿದುಕೊಳ್ಳುವುದು ಒಳ್ಳೆಯದೆಂದು ಹಡಗಿನಲ್ಲಿ ಒಬ್ಬರು ಸಲಹೆ ಮಾಡಿದ್ದರು. ಆದುದರಿಂದ ನಾನೂ ಮುಜುಂದಾರರೂ ಅಲ್ಲಿಗೆ ಹೋದೆವು. ನಾನು ಒಬ್ಬನೇ ಬಿಳಿಯ

ಉಡುಪನ್ನು ಧರಿಸಿದ್ದುದರಿಂದ ತುಂಬಾ ನಾಚಿಕೆಗೊಂಡಿದ್ದೆನು. ಹೋಟಲಿಗೆ ಹೋದಮೇಲೆ ಮರುದಿನ ಭಾನುವಾರವಾದುದರಿಂದ, ಸೋಮವಾರದವರೆಗೆ ಗ್ರಿಂಡ್ಲೆ ಕಂಪೆನಿಯಿಂದ ನಮ್ಮ ಸಾಮಗ್ರಿಗಳು ಸಿಗುವುದಿಲ್ಲವೆಂದು ತಿಳಿದು ನನ್ನ ಪ್ರಾಣವೇ ಹೋದಂತೆ ಆಯಿತು.

ನನ್ನ ತಾರು ತಲುಪಿ, ಡಾಕ್ಟರ್ ಮೆಹತಾ, ಆ ಸಂಧ್ಯಾಕಾಲ ನನ್ನನ್ನು ನೋಡಲು ಬಂದರು. ನನ್ನ ಬಿಳಿಯ ಪ್ಲಾನಲ್ ನೋಡಿ ಅವರಿಗೆ ನಗು ಬಂದಿತು. ನಾನು ಅಜಾಗರೂಕತೆಯಿಂದ ಅವರ ರೇಶ್ಮೆ ಹ್ಯಾಟಿನ ಮೇಲೆ ತಿರುಗುಮುರುಗಾಗಿ ಕೈಯಾಡಿಸಿದೆ. ಟೋಪಿಯ ರೇಶ್ಮೆ ಅಂದಗೆಟ್ಟಿತು. ಡಾಕ್ಟರ್ ಮೆಹತಾ ಅದನ್ನು ನೋಡಿದರು. ನನ್ನನ್ನು ತತ್‌ಕ್ಷಣ ತಡೆದರು. ಆದರೆ ನನ್ನಿಂದ ತಪ್ಪು ನಡೆದುಹೋಗಿತ್ತು. ಆ ವಿಷಯ, ಮುಂದಕ್ಕೆ ಎಚ್ಚರಿಕೆ ಆಯಿತು.

ಅಲ್ಲಿಂದಲೇ ಐರೋಪ್ಯರ ರೀತಿನೀತಿಗಳ ಮೊದಲ ಪಾಠ ನನಗೆ ಪ್ರಾರಂಭವಾಯಿತು. ಡಾಕ್ಟರ್ ಮೆಹತಾ ಅದರ ವಿಷಯ ನನಗೆ ನಗು ನಗುತ್ತಲೇ ಹೇಳುತ್ತಿದ್ದರು. "ಯಾರ ಪದಾರ್ಥಗಳನ್ನೂ ಮುಟ್ಟ ಬಾರದು. ಹಿಂದೂ ದೇಶದಲ್ಲಿ ಪರಿಚಿತರನ್ನು ಕೇಳುವಂತೆ ಇಲ್ಲಿ ಪ್ರಶ್ನೆ ಗಳನ್ನು ಕೇಳಬಾರದು. ಗಟ್ಟಿಯಾಗಿ ಮಾತನಾಡಬಾರದು. ಹಿಂದೂಸ್ಥಾನ ದಲ್ಲಿ ಆಂಗ್ಲರೊಂದಿಗೆ ಮಾತನಾಡುವಾಗ ಸರ್ ಎಂದು ಹೇಳುವಂತೆ ಇಲ್ಲಿ ಹೇಳಬೇಕಾದ ಆವಶ್ಯಕವಿಲ್ಲ. ನೌಕರರು ಸರ್ ಎಂದು ಮಾಲಿಕನಿಗೆ ಅಥವಾ ಮೇಲಿನ ಅಧಿಕಾರಿಗಳಿಗೆ ಹೇಳುತ್ತಾರೆ. ಮುಂದುವರಿಸಿ ಹೀಗೆ ಹೇಳಿದರು : "ಹೋಟಲಿನಲ್ಲಿ ವೆಚ್ಚ ಹೆಚ್ಚು ಬೀಳುತ್ತದೆ. ಯಾವುದಾದರೂ ಸಂಸಾರದೊಂದಿಗೆ ಇರುವುದು ಉತ್ತಮ." ಆ ವಿಚಾರದ ನಿರ್ಣಯವನ್ನು ಸೋಮವಾರಕ್ಕೆ ಮುಂದುವರಿಸಿದೆವು. ಇನ್ನೂ ಅನೇಕ ಮಾತುಗಳನ್ನಾಡಿ ಡಾಕ್ಟರ್ ಮೆಹತಾ ಹೊರಟರು.

ನನಗೂ ಮಜುಂದಾರರಿಗೂ ಹೋಟಲು ಒಗ್ಗಲಿಲ್ಲ. ಖರ್ಚು ಸಹ ಬಹಳ ಬೀಳುತ್ತಿದ್ದಿತು. ಮಾಲ್ಟಾದಿಂದ ಒಬ್ಬ ಸಿಂಧೀ ಪ್ರವಾಸಿ ನಮ್ಮೊಂದಿಗೆ ಬಂದಿದ್ದನು. ಅವನ ಪರಿಚಯ ಮಜುಂದಾರರಿಗೆ ಚೆನ್ನಾಗಿ ಆಯಿತು. ಅವನು ಲಂಡನ್ನಿಗೆ ಹೊಸಬನಲ್ಲವಾದುದರಿಂದ ನಮಗೆ ಎರಡು ಬಾಡಿಗೆ

ಕೊಠಡಿಗಳನ್ನು ಗೊತ್ತುಮಾಡಿಕೊಡುವ ಜವಾಬ್ದಾರಿಯನ್ನು ಒಪ್ಪಿಕೊಂಡನು. ನಾವೂ ಒಪ್ಪಿದೆವು. ಸೋಮವಾರ ನಮ್ಮ ಸಾಮಾನು ಸಿಕ್ಕಿದ ಕೂಡಲೇ ಹೋಟಲ್ ಲೆಕ್ಕವನ್ನು ಕೊಟ್ಟು ಆತ ಗೊತ್ತುಮಾಡಿದ ಕೊಠಡಿಗಳನ್ನು ಹೋಗಿ ಸೇರಿಕೊಂಡೆವು. ಹೋಟಲಿನ ನನ್ನ ಭಾಗದ ಖರ್ಚು ಮೂರು ಪೌಂಡು ಆಗಿದ್ದಿತೆಂದು ನನಗೆ ಜ್ಞಾಪಕ. ಅದನ್ನು ನೋಡಿ ನನಗೆ ಗಾಬರಿಯಾಯಿತು. ಅಷ್ಟು ದೊಡ್ಡ ಹಣ ಕೊಟ್ಟದ್ದರೂ ನನ್ನ ಹಸಿವು ಅಡಗಿರಲಿಲ್ಲ. ನನಗೆ ಅಲ್ಲಿನ ಯಾವ ಆಹಾರವೂ ಸೇರುತ್ತಿರಲಿಲ್ಲ. ಒಂದು ಆಹಾರ ಒಪ್ಪಿಗೆಯಾಗಿಲ್ಲವೆಂದು ಮತ್ತೊಂದನ್ನು ತರಿಸುತ್ತಿದ್ದೆನು. ಆದರೆ ಎರಡಕ್ಕೂ ಹಣ ಕೊಡಬೇಕಾಗಿದ್ದಿತು. ನಾನು ಬೊಂಬಾಯಿನಿಂದ ಹೊರಟು ಇಲ್ಲಿಯವರೆಗೆ ಅಲ್ಲಿಂದ ತಂದಿದ್ದ ಆಹಾರ ಪದಾರ್ಥಗಳನ್ನೇ ಬಹುಮಟ್ಟಿಗೆ ಅವಲಂಬಿಸಿದ್ದೆನು.

ಹೊಸ ಕೊಠಡಿಗಳಲ್ಲಿ ಸಹ ನನಗೆ ಶಾಂತಿ ದೊರಕಲಿಲ್ಲ. ನಾನು ಯಾವಾಗಲೂ ನನ್ನ ಮನೆ ಮತ್ತು ದೇಶವನ್ನೇ ಕುರಿತು ಯೋಚಿಸುತ್ತಿದ್ದೆನು. ತಾಯಿಯ ಪ್ರೇಮ ನನ್ನ ಕಣ್ಣಿಗೆ ಕಟ್ಟಿದಂತೆ ಇರುತ್ತಿದ್ದಿತು. ರಾತ್ರಿಯಾದ ಕೂಡಲೇ ಅಶ್ರು ಸುರಿಯುತ್ತಿದ್ದಿತು. ಮನೆಯ ವಿಧವಿಧದ ಆಲೋಚನೆಗಳು ಬರುತ್ತಿದ್ದವು. ಆ ಬಿರುಗಾಳಿಯಲ್ಲಿ ನಿದ್ರೆ ಹೇಗೆ ತಾನೆ ಬರುತ್ತಿದ್ದಿತು ? ಆ ದುಃಖದ ಮಾತುಗಳನ್ನು ಯಾರೊಂದಿಗೂ ಹೇಳಿಕೊಳ್ಳುವಂತೆ ಇರಲಿಲ್ಲ. ಹೇಳಿತಾನೆ ಏನು ಪ್ರಯೋಜನ ? ನನಗೆ ಬೇಕಾಗಿದ್ದುದು ಏನು ಎಂಬುದು ನನಗೇ ಗೊತ್ತಿರಲಿಲ್ಲ. ಜನರು, ಅವರ ಮಾರ್ಗ, ಅವರ ಮನೆಗಳು ಎಲ್ಲವೂ ನನಗೆ ವಿಚಿತ್ರವಾಗಿ ತೋರುತ್ತಿದ್ದವು. ಆಂಗ್ಲರ ನಡುವೆ ಹೇಗೆ ನಡೆದುಕೊಳ್ಳಬೇಕೆಂಬುದರಲ್ಲಿ ನಾನು ತೀರ ಹೊಸಬನಾಗಿದ್ದೆನು. ಆದುದರಿಂದ ನಾನು ಯಾವಾಗಲೂ ಎಚ್ಚರಿಕೆಯಿಂದಲೇ ಇರಬೇಕಾಗಿದ್ದಿತು. ಜತೆಗೆ, ಆಹಾರ ಪಾನೀಯಗಳ ನನ್ನ ನಿಯಮ ಬೇರೆ. ನಾನು ತಿನ್ನಬಹುದಾಗಿದ್ದ ಪದಾರ್ಥಗಳೂ ಸಹ ನೀರಸವಾಗಿ ರುಚಿರಹಿತವಾಗಿದ್ದವು. ಈ ಕಾರಣದಿಂದ ನನ್ನ ಪಾಡು ಎರಡು ಕಡೆಯೂ ಹತ್ತಿ ಉರಿಯುವ ಕೊಳ್ಳಿಯಂತೆ ಆಗಿದ್ದಿತು. ಇಂಗ್ಲೆಂಡಿನಲ್ಲಿರುವುದು ನನಗೆ ಹಿತವಾಗಿ ಕಾಣಲಿಲ್ಲ. ಸ್ವದೇಶಕ್ಕೆ ಹಿಂದಿರುಗುವುದೂ

ಸಾಧ್ಯವಿರಲಿಲ್ಲ. ವಿಲಾಯತಿಗೆ ಬಂದುಬಿಟ್ಟದ್ದರಿಂದ ಮೂರು ವರುಷಗಳನ್ನೂ ಹೇಗಾದರೂ ಕಳೆಯಲೇಬೇಕೆಂದು ಅಂತರ್ವಾಣಿ ಹೇಳಿತು.

೧೪

ನನ್ನ ಆಯ್ಕೆ

ಡಾಕ್ಟರ್ ಮೆಹತಾ ನನ್ನನ್ನು ನೋಡಲು ಸೋಮವಾರ ವಿಕ್ಟೋರಿಯ ಹೋಟಲಿಗೆ ಹೋದರು. ಅಲ್ಲಿ ಅವರಿಗೆ ನಮ್ಮ ಹೊಸ ಮನೆಯ ವಿಳಾಸ ದೊರಕಿತು. ಅಲ್ಲಿಗೆ ಬಂದರು. ನನ್ನ ದಡ್ಡತನದಿಂದಲೇ ನನಗೆ ಹಡಗಿನಲ್ಲಿ ಹುಳುಕಡ್ಡಿ ಬಂದಿದ್ದಿತು. ಹಡಗಿನಲ್ಲಿ ಸ್ನಾನಕ್ಕೂ ಬಟ್ಟೆ ಒಗೆಯುವುದಕ್ಕೂ ಸಮುದ್ರದ ನೀರನ್ನೇ ಉಪಯೋಗಿಸಬೇಕಾಗಿದ್ದಿತು. ಅದರಲ್ಲಿ ಸಾಬೂನು ಕರಗುತ್ತಿರಲಿಲ್ಲ. ಸಾಬೂನಿನ ಉಪಯೋಗ ನಾಗರಿಕತೆಯ ಲಕ್ಷಣವೆಂದರಿತು ನಾನು ಸ್ನಾನಕ್ಕೆ ಅದನ್ನು ಉಪಯೋಗಿಸಿದ್ದೆನು. ಇದರಿಂದ ಶರೀರ ಶುದ್ಧವಾಗುವ ಬದಲು ಅಂಟಾಗಿ ಹುಳುಕಡ್ಡಿ ಬಂದಿತು. ಅದನ್ನು ನೋಡಿ ಡಾ. ಮೆಹತಾ, ಅಸಟಿಕ್ ಆಸಿಡ್ ಹಚ್ಚಬೇಕೆಂದು ಹೇಳಿದರು. ಅದರಿಂದ ನನಗೆ ನೋವುಂಟಾಗಿ ನಾನು ಅತ್ತೆನು. ಡಾ. ಮೆಹತಾ ನಮ್ಮ ಕೊಠಡಿ ವಗೈರೆ ನೋಡಿ ಅತೃಪ್ತಿಯಿಂದ ಕತ್ತು ಅಲ್ಲಾಡಿಸಿದರು. "ಈ ಕೊಠಡಿ ಪ್ರಯೋಜನವಿಲ್ಲ. ನಾವು ಇಲ್ಲಿ ಬರುವುದು ಪುಸ್ತಕಗಳನ್ನು ಓದುವುದಕ್ಕಿಂತ ಹೆಚ್ಚಾಗಿ ಆಂಗ್ಲೇಯರ ಜೀವನದ ರೀತಿನೀತಿಗಳನ್ನು, ಅನುಭವವನ್ನು ಸಂಪಾದಿಸುವುದಕ್ಕೆ. ಆದುದರಿಂದ, ನೀವು ಯಾವುದಾದರೂ ಒಂದು ಸಂಸಾರದೊಂದಿಗೆ ಇರುವುದು ಆವಶ್ಯಕ. ಹಾಗೆ ಮಾಡುವುದಕ್ಕೆ ಮುಂಚಿತವಾಗಿ ನೀನು—ಸಂಗಡ ಸ್ವಲ್ಪ ಕಾಲ ಇದ್ದು ಇವನ್ನು ಕಲಿತು ಕೊಳ್ಳುವುದು ಉತ್ತಮವೆಂದು ನನಗೆ ತೋರುತ್ತದೆ. ಅವರಲ್ಲಿಗೆ ನಿನ್ನನ್ನು ಕರೆದುಕೊಂಡು ಹೋಗುತ್ತೇನೆ" ಎಂದು ಹೇಳಿದರು.

ಅವರ ಸೂಚನೆಯನ್ನು ನಾನು ಕೃತಜ್ಞತೆಯಿಂದ ಒಪ್ಪಿದೆನು. ಆ ಮಿತ್ರನ ಮನೆಗೆ ಹೋದೆವು. ಅವರು ನನ್ನ ವಿಷಯದಲ್ಲಿ ತುಂಬ ಕರುಣೆ ಮತ್ತು ಆದರವುಳ್ಳವರಾಗಿದ್ದರು. ನನ್ನನ್ನು ಅವರು ತಮ್ಮ ಸ್ವಂತ

ತಮ್ಮನಂತೆಯೇ ಕಂಡರು. ಇಂಗ್ಲಿಷ್ ಶಬ್ದಪ್ರಯೋಗ ರೀತಿಗಳನ್ನು ನನಗೆ ಕಲಿಸಿದರು. ಆ ಭಾಷೆಯನ್ನು ಮಾತನಾಡುವ ಅಭ್ಯಾಸವನ್ನೂ ಮಾಡಿಸಿದರು. ಆದರೆ ನನ್ನ ಆಹಾರದ ಪ್ರಶ್ನೆ ಒಂದು ಕಠಿಣ ಸಮಸ್ಯೆಯೇ ಆಯಿತು. ಬೇಯಿಸಿದ ತರಕಾರಿ, ಉಪ್ಪು ಮತ್ತು ಮಸಾಲೆ ಇಲ್ಲದುದು— ನನಗೆ ರುಚಿಯಾಗಲಿಲ್ಲ. ನನಗೆ ಯಾವ ಊಟವನ್ನು ಸಿದ್ಧಮಾಡಬೇಕೆಂದು ಮನೆಯ ಯಜಮಾನಿಗೆ ತಿಳಿಯಲಿಲ್ಲ. ಬೆಳಗಿನ ಊಟಕ್ಕೆ ಓಟ್ ಗೋಧಿಯ ಅಂಬಲಿ ಮಾಡುತ್ತಿದ್ದರು. ಆದರಿಂದ ತಕ್ಕ ಮಟ್ಟಿಗೆ ಹೊಟ್ಟೆ ತುಂಬುತ್ತಿದ್ದಿತು. ಆದರೆ ಮಧ್ಯಾಹ್ನ ಮತ್ತು ಸಾಯಂಕಾಲದ ಊಟ, ಹೊಟ್ಟೆ ತುಂಬುತ್ತಲೇ ಇರಲಿಲ್ಲ. ಆ ಮಿತ್ರರು, ನಾನು ಮಾಂಸಾಹಾರ ತಿನ್ನಬೇಕೆಂದು ನಿತ್ಯ ಬಲಾತ್ಕರಿಸುತ್ತಲೇ ಇದ್ದರು. ಆದರೆ ನಾನು ನನ್ನ ಪ್ರತಿಜ್ಞೆಯನ್ನು ಜ್ಞಾಪಿಸುತ್ತ ಮೌನವಾಗಿರುತ್ತಿದ್ದೆನು. ಮಧ್ಯಾಹ್ನದ ಊಟ ಒರಿಯ ರೊಟ್ಟಿ ಸಾಗು ಮತ್ತು ಮುರಬ್ಬದಿಂದ ನಡೆಯುತ್ತಿದ್ದಿತು. ಸಾಯಂಕಾಲವೂ ಅದೇ. ನಾನು ಒಳ್ಳೆಯ ಊಟಗಾರ, ಹೊಟ್ಟೆಯೂ ದೊಡ್ಡದು. ಆದರೆ ಎರಡು-ಮೂರು ಚೂರು ರೊಟ್ಟಿಗಿಂತ ಹೆಚ್ಚಾಗಿ ಕೇಳಲು ನನಗೆ ನಾಚಿಕೆಯಾಗುತ್ತಿದ್ದಿತು. ಜತೆಗೆ ಮಾಧ್ಯಾಹ್ನದ ಊಟಕ್ಕಾಗಲೀ ಸಾಯಂಕಾಲದ ಊಟಕ್ಕಾಗಲೀ ಹಾಲು ಇರಲಿಲ್ಲ. ಆ ಮಿತ್ರರಿಗೆ ಈ ಪರಿಸ್ಥಿತಿಯಿಂದ ಜುಗುಪ್ಸೆಯುಂಟಾಗಿ ಹೀಗೆ ಹೇಳಿದರು. "ನೀನು ನನ್ನ ತಮ್ಮನೇ ಆಗಿದ್ದರೂ ನಿನ್ನನ್ನು ಗಂಟುಮೂಟೆ ಕಟ್ಟಿ ಹಿಂದಕ್ಕೆ ಕಳುಹಿಸುತ್ತಿದ್ದೆನು. ಇಲ್ಲಿಯ ಪರಿಸ್ಥಿತಿಯನ್ನು ತಿಳಿಯದೆ, ಅವಿದ್ಯಾವಂತಳಾದ ತಾಯಿಯ ಮುಂದೆ ಮಾಡಿದ ಪ್ರತಿಜ್ಞೆಗೆ ಏನು ಬೆಲೆ? ಅದು ಪ್ರತಿಜ್ಞೆಯೇ ಅಲ್ಲ. ಕಾನೂನಿನ ಪ್ರಕಾರ ಅದು ಪ್ರತಿಜ್ಞೆಯೇ ಅಲ್ಲ. ಅಂತಹ ವಾಗ್ದಾನಕ್ಕೆ ಅಂಟಿಕೊಳ್ಳುವುದು ಬರಿಯ ಮೂಢ ನಂಬಿಕೆ. ಅಂಧ ವಿಶ್ವಾಸ. ಈ ಹಟಮಾರಿತನದಿಂದ ನಿನಗೆ ಈ ದೇಶದಲ್ಲಿ ಏನೂ ಪ್ರಯೋಜನವಾಗುವುದಿಲ್ಲವೆಂದು ನಿನಗೆ ಹೇಳಬಲ್ಲೆನು. ನೀನು ಮಾಂಸವನ್ನು ತಿಂದು ಅದರ ರುಚಿಯನ್ನು ಅನುಭವಿಸಿರುವುದಾಗಿ ಹೇಳುತ್ತಿ. ಎಲ್ಲಿ ಅನವಶ್ಯಕವಾಗಿತ್ತೋ ಅಲ್ಲಿ ಅದನ್ನು ತಿಂದೆ. ಎಲ್ಲಿ ಅದು ಅತ್ಯಂತ ಆವಶ್ಯಕವೋ ಅಲ್ಲಿ ತಿನ್ನುವುದಿಲ್ಲವೆನ್ನುತ್ತಿ, ಎಂತಹ ವಿಚಿತ್ರ!"

ನನ್ನ ಮನೋ ನಿಶ್ಚಯ ಕದಲಲಿಲ್ಲ.

ಮಿತ್ರರು ಹಗಲು ರಾತ್ರಿ ನನ್ನ ಜತೆ ವಾದಿಸುತ್ತಲೇ ಇದ್ದರು. ನನ್ನದು ಯಾವಾಗಲೂ ಒಂದೇ ಉತ್ತರ; ಬೇಡ ಎಂದು. ಅವರು ಹೆಚ್ಚು ಹೆಚ್ಚಾಗಿ ವಾದಿಸಿದಂತೆ ನಾನೂ ಹೆಚ್ಚು ಹೆಚ್ಚು ದೃಢವಾಗುತ್ತಿದ್ದೆನು. ಪರಮಾತ್ಮ ರಕ್ಷಿಸು ಎಂದು ನಿತ್ಯ ಪ್ರಾರ್ಥಿಸುತ್ತಿದ್ದೆನು. ಆತ ರಕ್ಷಿಸುತ್ತಿದ್ದನು. ದೇವರು ಎಂದರೆ ಏನು ಎಂಬುದು ನನಗೆ ಗೊತ್ತಿರಲಿಲ್ಲ ನಿಜ. ನನ್ನಲ್ಲಿ ಕೆಲಸ ಮಾಡುತ್ತಿದ್ದುದು ಬರಿಯ ನಂಬಿಕೆ ಮಾತ್ರ-ಪುಣ್ಯಜೀವಿ, ದಾದಿ ರಂಭಾ ನನ್ನ ಮನಸ್ಸಿನಲ್ಲಿ ಬಿತ್ತಿದ್ದ ನಂಬಿಕೆ.

ಒಂದು ದಿನ ಈ ಮಿತ್ರರು ನನ್ನ ಹತ್ತಿರ ಬೆಂಥಮ್ ಬರೆದ "ಉಪಯುಕ್ತತೆ ವಾದ" ಎಂಬ ಪುಸ್ತಕವನ್ನು ಓದತೊಡಗಿದರು. ನನ್ನ ಬುದ್ಧಿ ಮಂಕು ಆಯಿತು. ಭಾಷೆ ಕಠಿಣವಾಗಿದ್ದುದರಿಂದ ನಾನು ಅರ್ಥಮಾಡಿಕೊಳ್ಳಲಾಗಲಿಲ್ಲ. ಅವರು ಅದರ ವಿವರಣೆಗೆ ತೊಡಗಿದರು, ನಾನು ಹೀಗೆ ಹೇಳಿದೆ: "ದಯವಿಟ್ಟು ನನ್ನನ್ನು ಮನ್ನಿಸಿ. ಈ ಗಹನ ವಿಷಯಗಳು ನನ್ನ ಬುದ್ಧಿಗೆ ಮೀರಿದುವು. ಮಾಂಸಾಹಾರವನ್ನು ತಿನ್ನುವುದು ಆವಶ್ಯಕ ಎಂದು ನಾನು ಒಪ್ಪುತ್ತೇನೆ. ಆದರೆ ನನ್ನ ಪ್ರತಿಜ್ಞೆಯನ್ನು ನಾನು ಭಂಗಗೊಳಿಸಲಾರೆ. ಅದರ ಬಗ್ಗೆ ಚರ್ಚೆಯನ್ನೂ ಮಾಡಲಾರೆ. ವಾದದಲ್ಲಿ ನಿಮ್ಮನ್ನು ನಾನು ಎದುರಿಸಲಾರೆ. ನಾನೊಬ್ಬ ಮೂರ್ಖ, ಹಠವಾದಿ ಎಂದು ನನ್ನನ್ನು ದಯವಿಟ್ಟು ಬಿಟ್ಟುಬಿಡಿ. ನಿಮಗೆ ನನ್ನಲ್ಲಿರುವ ಪ್ರೀತಿ ನನಗೆ ಚೆನ್ನಾಗಿ ಗೊತ್ತು. ನೀವು ನನ್ನ ಹಿತೈಷಿ ಎಂಬುದೂ ಗೊತ್ತು. ನನ್ನ ವಿಷಯದಲ್ಲಿ ನಿಮಗೆ ಕನಿಕರವಾಗುತ್ತಿರುವುದರಿಂದಲೇ ನೀವು ಪದೇ ಪದೆ ನನಗೆ ಹೇಳುತ್ತಿರುವಿರಿ ಎಂಬುದನ್ನೂ ಬಲ್ಲೆ. ಇದಕ್ಕೆ ಉಪಾಯವಿಲ್ಲ. ಪ್ರತಿಜ್ಞೆ, ಪ್ರತಿಜ್ಞೆಯೆ. ಅದನ್ನು ಮುರಿಯಲಾಗದು."

ಮಿತ್ರರಿಗೆ ಆಶ್ಚರ್ಯವಾಯಿತು. ಪುಸ್ತಕ ಮುಚ್ಚಿ "ಹಾಗೆಯೇ ಆಗಲಿ. ಇನ್ನು ನಾನು ವಾದಿಸುವುದಿಲ್ಲ" ಎಂದರು ನನಗೆ ಸಂತೋಷವಾಯಿತು. ಅವರು ಮತ್ತೆ ಆ ವಿಷಯ ಎತ್ತಲಿಲ್ಲ. ಆದರೆ ನನ್ನ ಹಿತವನ್ನು ಕುರಿತು ಯೋಚಿಸುವುದನ್ನು ಅವರು ಬಿಡಲಿಲ್ಲ. ಅವರು ಕುಡಿಯುತ್ತಿದ್ದರು.

ಹೊಗೆಬತ್ತಿ ಸೇದುತ್ತಿದ್ದರು. ಆದರೆ ನಾನೂ ಹಾಗೆ ಮಾಡಬೇಕೆಂದು ಅವರು ಎಂದೂ ಹೇಳಲಿಲ್ಲ. ವಾಸ್ತವವಾಗಿ, ಅವೆರಡನ್ನೂ ನಿನ್ನ ಹತ್ತಿರ ಬರಗೊಡ ಬೇಡ ಎಂದು ಅವರು ಹೇಳಿದರು. ಅವರಿಗಿದ್ದದ್ದು ಒಂದೇ ಯೋಚನೆ—ಮಾಂಸವಿಲ್ಲದಿದ್ದರೆ ನಾನು ನಿಶ್ಶಕ್ತನಾಗಿ, ಹಾಯಾಗಿ ಇಂಗ್ಲೆಂಡಿನಲ್ಲಿ ಇರಲಾರೆನಲ್ಲ ಎಂಬುದು.

ನಾನು ಒಂದು ತಿಂಗಳು ಕಾಲ ಹೀಗೆ ಅನುಭವವನ್ನು ಪಡೆದೆನು. ಈ ಸ್ನೇಹಿತರ ಮನೆ ಇದ್ದುದು ರಿಚ್ಮಂಡ್‌ನಲ್ಲಿ. ಅಲ್ಲಿಂದ ವಾರಕ್ಕೆ ಒಂದು ಎರಡು ಸಲಕ್ಕಿಂತ ಹೆಚ್ಚಾಗಿ ಲಂಡನ್ನಿಗೆ ಹೋಗಿ ಬರಲು ಆಗುತ್ತಿರಲಿಲ್ಲ. ಡಾಕ್ಟರ್ ಮೆಹತಾ ಮತ್ತು ದಲಪತ್‌ರಾಯರು ನಾನು ಯಾವುದಾದರೂ ಸಂಸಾರದಲ್ಲಿರಬೇಕೆಂದು ನಿರ್ಣಯಿಸಿದರು. ಶ್ರೀ ಶುಕ್ಲರವರು, ವೆಸ್ಟ್ ಕೆನ್ಸಿಂಗ್ಟನ್‌ನಲ್ಲಿದ್ದ ಒಬ್ಬ ಆಂಗ್ಲೋ ಇಂಡಿಯನರ ಮನೆಯನ್ನು ಗೊತ್ತು ಹಚ್ಚಿ ನನ್ನನ್ನು ಅಲ್ಲಿ ಬಿಟ್ಟರು. ಆ ಮನೆಯ ಯಜಮಾನಿ ಒಬ್ಬ ವಿಧವೆ. ನಾನು ಆಕೆಗೆ ನನ್ನ ಪ್ರತಿಜ್ಞೆಯ ವಿಷಯ ಹೇಳಿದೆನು. ಆ ವೃದ್ಧೆ, ನನ್ನನ್ನು ಸರಿಯಾಗಿ ನೋಡಿಕೊಳ್ಳುವುದಾಗಿ ಹೇಳಿದಳು. ಅಲ್ಲಿಯೂ ನಾನು ಹಸಿದು ಕೊಂಡೇ ಇರಬೇಕಾಯಿತು. ಮಿಠಾಯಿ ಮತ್ತು ಇತರ ತಿನಸುಗಳಿಗಾಗಿ ನಾನು ಭಾರತದ, ನಮ್ಮ ಮನೆಗೆ ಬರೆದಿದ್ದೆನು. ಅದಕ್ಕೆ ಯಾವುದೂ ಉತ್ತರ ಇನ್ನೂ ಬಂದಿರಲಿಲ್ಲ. ಪದಾರ್ಥಗಳೆಲ್ಲ ನೀರಸ, ಸಪ್ಪೆ. ಪ್ರತಿದಿನವೂ ಆ ವೃದ್ಧೆ "ಊಟ ಚೆನ್ನಾಗಿದೆಯೆ ?" ಎಂದು ಕೇಳುತ್ತಿದ್ದಳು. ಪಾಪ, ಆಕೆಯಾದರೂ ಏನು ಮಾಡಿಯಾಳು? ನನ್ನ ಸಂಕೋಚ ಮೊದಲಿನಂತೆಯೇ ಇದ್ದಿತು. ನನ್ನ ತಟ್ಟೆಯಲ್ಲಿ ಆಕೆ ಹಾಕಿ ಇಡುತ್ತಿದ್ದುದಕ್ಕಿಂತ, ಹೆಚ್ಚು ಆಹಾರ ಕೇಳಲು ನನಗೆ ಧೈರ್ಯವಿರಲಿಲ್ಲ. ಮನೆಯ ಯಜಮಾನನಿಗೆ ಇಬ್ಬರು ಹೆಣ್ಣುಮಕ್ಕಳಿದ್ದರು. ನಾನು ಇನ್ನೂ ಒಂದು ಅಥವಾ ಎರಡು ತುಣುಕು ರೊಟ್ಟಿ, ಹೆಚ್ಚಾಗಿ ತಿನ್ನಬೇಕೆಂದು ಅವರು ಬಲಾತ್ಕರಿಸುತ್ತಿದ್ದರು. ಆದರೆ ಪಾಪ, ಒಂದು ಪೂರ್ತಿ ರೊಟ್ಟಿಗಿಂತ, ಕಡಿಮೆಯಾದರೆ ನನ್ನ ಹೊಟ್ಟೆ ತುಂಬುತ್ತಲೇ ಇರಲಿಲ್ಲ ವೆಂಬುದು ಅವರಿಗೆ ತಿಳಿಯಲೇ ಇಲ್ಲ.

ಆ ವೇಳೆಗೆ ನನ್ನ ರೆಕ್ಕೆ ಬಲಿತುಕೊಂಡಿತು. ನನ್ನ ವ್ಯಾಸಂಗವನ್ನು ಇನ್ನೂ ಕ್ರಮವಾಗಿ ಪ್ರಾರಂಭಿಸಿರಲಿಲ್ಲ. ಶ್ರೀ ಶುಕ್ಲರವರ ಪ್ರೇರಣೆಯಿಂದ

ನಾನು ಆಗತಾನೆ ವರ್ತಮಾನ ಪತ್ರಗಳನ್ನು ಓದಲು ಮೊದಲು ಮಾಡಿದ್ದೆನು. ಭಾರತದಲ್ಲಿದ್ದಾಗ ನಾನು ಒಂದಾದರೂ ವರ್ತಮಾನ ಪತ್ರಿಕೆಯನ್ನು ಓದಿರಲಿಲ್ಲ. ಆದರೆ ಇಂಗ್ಲೆಂಡಿನಲ್ಲಿ ಅವುಗಳನ್ನು ಕ್ರಮವಾಗಿ ಓದುತ್ತಾ ನನಗೆ ಅವುಗಳಲ್ಲಿ ಅಭಿರುಚಿಯುಂಟಾಯಿತು. ಡೈಲಿ ನ್ಯೂಸ್, ಡೈಲಿ ಟೆಲಿಗ್ರಾಫ್, ಪಾಲ್ ಮಾಲ್ ಗೆಜೆಟ್ ಇವುಗಳನ್ನು ನಿತ್ಯ ಮಗುಚುತ್ತಿದ್ದೆನು. ಈ ಕಾರ್ಯಕ್ಕೆ ನನಗೆ ಒಂದು ಗಂಟೆಯೂ ಬೇಕಾಗುತ್ತಿರಲಿಲ್ಲ. ನಾನು ಒಂದು ಅಗ್ಗವಾದ ಶಾಕಾಹಾರಿ ಫಲಾಹಾರ ಮಂದಿರ ಹುಡುಕಿಕೊಂಡು ಹೊರಟೆನು. ಲಂಡನ್ ನಗರದಲ್ಲಿ ಅಂತಹ ಸ್ಥಳಗಳು ಇವೆ ಎಂದು ಯಜಮಾನಿ ಹೇಳಿದ್ದಳು. ನಾನು ಪ್ರತಿದಿನವೂ ೧೦–೧೨ ಮೈಲಿ ನಡೆದು ಹೋಗಿ ಒಂದು ಅಗ್ಗವಾದ ಶಾಕಾಹಾರ ಗೃಹದಲ್ಲಿ ಹೊಟ್ಟೆ ತುಂಬ ರೊಟ್ಟಿಯನ್ನು ತಿನ್ನುತ್ತಿದ್ದೆನು. ಆದರೂ ನನಗೆ ತೃಪ್ತಿಯುಂಟಾಗುತ್ತಿರಲಿಲ್ಲ. ನನ್ನ ತಿರುಗಾಟದ ನಡುವೆ ಫ್ಯಾರಿಂಗ್ಡನ್‌ನಲ್ಲಿ ಒಂದು ಶಾಕಾಹಾರ ಗೃಹ ನನ್ನ ಕಣ್ಣಿಗೆ ಬಿದ್ದಿತು. ತನಗೆ ಬೇಕಾದ ವಸ್ತು ಸಿಕ್ಕಿದಾಗ ಮಗುವಿಗೆ ಆಗುವ ಆನಂದ, ಆ ಸ್ಥಳವನ್ನು ನೋಡಿ ನನಗೆ ಉಂಟಾಯಿತು. ಅದರೊಳಕ್ಕೆ ಪ್ರವೇಶಿಸುವುದಕ್ಕೆ ಮುಂಚೆ, ಬಾಗಿಲು ಬಳಿಯ ಕನ್ನಡಿ ಕಿಟಕಿಯಲ್ಲಿ, ಮಾರಾಟಕ್ಕಾಗಿ ಇಟ್ಟಿದ್ದ ಕೆಲವು ಪುಸ್ತಕಗಳನ್ನು ನೋಡಿದೆನು. ಅವುಗಳ ಮಧ್ಯೆ ಸಾಲ್ಟ್‌ರವರು ಬರೆದ "ಶಾಕಾಹಾರ—ಒಂದು ವಿನಂತಿ" ಎಂಬ ಪುಸ್ತಕವನ್ನು ನೋಡಿದೆನು. ಆ ಪುಸ್ತಕವನ್ನು ಒಂದು ಷಿಲ್ಲಿಂಗಿಗೆ ಕೊಂಡುಕೊಂಡು, ನಾನು ನೇರವಾಗಿ ಊಟದ ಮನೆಗೆ ಹೋದೆನು. ಇಂಗ್ಲೆಂಡಿಗೆ ಹೋದಮೇಲೆ ನಾನು ಹೊಟ್ಟೆ ತುಂಬ ಊಟ ಮಾಡಿದುದು ಅದೇ ಮೊದಲು. ನನ್ನ ನೆರವಿಗೆ ದೇವರು ಬಂದನು.

ಸಾಲ್ಟರ ಪುಸ್ತಕವನ್ನು ಮೊದಲಿನಿಂದ ಕೊನೆಯುವರೆಗೆ ಓದಿದೆನು. ಅದು ನನ್ನ ಮನಸ್ಸಿಗೆ ತುಂಬ ಹಿಡಿಸಿತು. ಆ ಪುಸ್ತಕವನ್ನು ಓದಿದಂದಿನಿಂದಲೇ ನಾನು ಮನಃಪೂರ್ವಕವಾಗಿ ಸ್ವಂತ ಇಚ್ಛೆಯಿಂದ ಶಾಕಾಹಾರಿಯಾದೆನೆಂದು ಹೇಳಬಹುದು. ತಾಯಿಯ ಮುಂದೆ ಪ್ರತಿಜ್ಞೆ ಕೊಟ್ಟದಿನವನ್ನು ನಾನು ಹರಸಿದೆನು. ಅಲ್ಲಿಯವರೆಗೆ ನಾನು ಸತ್ಯಕ್ಕಾಗಿಯೂ ನಮ್ಮ ತಾಯಿಗೆ ಕೊಟ್ಟ ಭಾಷೆಗಾಗಿಯೂ ಶಾಕಾಹಾರಿಯಾಗಿದ್ದೆನು. ಆದರೆ ಜತೆಯಲ್ಲಿಯೇ ಇತರ ಭಾರತೀಯರೆಲ್ಲ ಮಾಂಸಹಾರಿಗಳೇ ಆಗಬೇಕೆಂದೂ

ಬಯಸುತ್ತಿದ್ದೆನು. ಯಾವತ್ತಾದರೂ ಒಂದು ದಿನ ನಾನೂ ನಿರ್ಭಯದಿಂದ ಮಾಂಸಾಹಾರಿಯಾಗಬೇಕು, ಇತರರಲ್ಲಿಯೂ ಅದನ್ನು ಪ್ರಚಾರಮಾಡಬೇಕು ಎಂಬುದು ನನ್ನ ಆಸೆಯಾಗಿದ್ದಿತು. ಆದರೆ ಅಂದಿನಿಂದ ನಾನು ಮನಃಪೂರ್ವಕವಾಗಿ ಶಾಕಾಹಾರಿಯಾದೆ. ಅದಕ್ಕಾಗಿ ಪ್ರಚಾರಮಾಡುವುದೇ ನನ್ನ ಜೀವನದ ಉದ್ದೇಶವಾಯಿತು.

೧೫

ಆಂಗ್ಲ ಸಭ್ಯನಾಗುವ ಪ್ರಯತ್ನ

ಶಾಕಾಹಾರದಲ್ಲಿ ದಿನದಿನಕ್ಕೂ ನನ್ನ ನಂಬಿಕೆ ಹೆಚ್ಚುತ್ತಲೇ ಹೋಯಿತು. ಸಾಲ್ಟನ ಗ್ರಂಥ ವ್ಯಾಸಂಗದಿಂದ, ಆಹಾರದ ವಿಷಯಕ್ಕೆ ಸಂಬಂಧಿಸಿದ ಗ್ರಂಥಗಳನ್ನು ಅಭ್ಯಾಸಮಾಡಲು ನನಗೆ ಉತ್ಕಟ ಇಚ್ಛೆಯುಂಟಾಯಿತು. ಶಾಕಾಹಾರದ ಮೇಲೆ ದೊರೆತ ಎಲ್ಲ ಗ್ರಂಥಗಳನ್ನೂ ಕೊಂಡು ನಾನು ವ್ಯಾಸಂಗ ಮಾಡಿದೆನು. ಅವುಗಳ ಪೈಕಿ ಒಂದಾದ ಹವರ್ಡ್ ವಿಲಿಯಂಸ್‌ನ 'ಆಹಾರ ನೀತಿ' ಎಂಬ ಪುಸ್ತಕ, ಪ್ರಾಚೀನ ಕಾಲದಿಂದ ಇಂದಿನವರೆಗಿನ ಮಾನವನ ಆಹಾರದ ಇತಿಹಾಸವೇ ಆಗಿದ್ದಿತು. ಪೈಥಾಗರಸ್‌ನಿಂದ ಮೊದಲುಗೊಂಡು ಏಸು ಕ್ರಿಸ್ತನವರೆಗೆ ಎಲ್ಲ ದಾರ್ಶನಿಕರೂ ದ್ರಷ್ಟಾರರೂ ಶಾಖಾಹಾರಿಗಳೇ ಆಗಿದ್ದರೆಂದು ಸ್ಥಾಪಿಸಲು ಆ ಗ್ರಂಥದಲ್ಲಿ ಪ್ರಯತ್ನ ನಡೆದಿದ್ದಿತು. ಡಾಕ್ಟರ್ ಆನಾ ಕೆಂಗ್ಸ್‌ಫರ್ಡ್ ಎಂಬಾಕೆ ಬರೆದಿದ್ದ 'ಆಹಾರದ ಅತ್ಯುತ್ತಮ ಮಾರ್ಗ" ಎಂಬುದೂ ಸಹ ಬಹು ಆಕರ್ಷಣೀಯ ಗ್ರಂಥವಾಗಿದ್ದಿತು. ಡಾಕ್ಟರ್ ಆಲಿಸನ್‌ರು ಬರೆದ "ಆಹಾರ ನೈರ್ಮಲ್ಯ" ಎಂಬ ಗ್ರಂಥದಿಂದಲೂ ನನಗೆ ಬಹಳ ಉಪಕಾರವಾಯಿತು. ರೋಗಿಗಳ ಈ ಆಹಾರವನ್ನು ನಿಯಮಿತ ಗೊಳಿಸುವುದರಿಂದಲೇ, ಅವರ ರೋಗ ಗುಣವಾಗುವ ಒಂದು ವಿಧಾನವನ್ನು ಅವರು ತಮ್ಮ ಗ್ರಂಥದಲ್ಲಿ ಪ್ರತಿಪಾದಿಸಿದ್ದರು. ತಾವೇ ಶಾಕಾಹಾರಿಗಳಾದ ಅವರು, ತಮ್ಮಲ್ಲಿ ಬರುತ್ತಿದ್ದ ರೋಗಿಗಳಿಗೂ ಕಟ್ಟುನಿಟ್ಟಾಗಿ ಶಾಕಾಹಾರವನ್ನೇ ನಿಯಮಿಸಿದ್ದರು. ಈ ಎಲ್ಲ ಸಾಹಿತ್ಯವನ್ನೂ ವ್ಯಾಸಂಗಮಾಡಿದುದರ ಫಲವಾಗಿ, ಆಹಾರದ

ವಿಷಯದಲ್ಲಿ ಪ್ರಯೋಗಗಳನ್ನು ನಡೆಸುವುದಕ್ಕೆ, ನನ್ನ ಜೀವನದಲ್ಲಿ ಒಂದು ಪ್ರಮುಖ ಅವಕಾಶವುಂಟಾಯಿತು. ಆರೋಗ್ಯವನ್ನು ರಕ್ಷಿಸಿಕೊಳ್ಳುವುದೇ ಪ್ರಾರಂಭದಲ್ಲಿ ಈ ಪ್ರಯೋಗಗಳ ಮುಖ್ಯ ಗುರಿಯಾಗಿತ್ತು. ಆದರೆ ಅನಂತರ ಧಾರ್ಮಿಕ ದೃಷ್ಟಿಯೇ ಸರ್ವ ಪ್ರಧಾನವಾಯಿತು.

ಈ ಮಧ್ಯೆ ನನ್ನ ಮಿತ್ರರಿಗೆ ನನ್ನ ವಿಷಯದ ಚಿಂತೆ ಬಿಡಲಿಲ್ಲ. ನನ್ನಲ್ಲಿ ಅವರು ಇಟ್ಟಿದ್ದ ಪ್ರೇಮದ ದೆಸೆಯಿಂದ ಅವರು, ನಾನು ಮಾಂಸಾಹಾರ ವಿರೋಧವನ್ನೇ ಮುಂದುವರಿಸಿದರೆ, ನನ್ನ ದೇಹ ದುರ್ಬಲ ವಾಗುವುದಲ್ಲದೆ, ಇಂಗ್ಲೀಷ್ ಸಮಾಜದಲ್ಲಿ ಸ್ವಾಭಾವಿಕವಾಗಿ ಜೀವಿಸಲಾಗದ ಅಪ್ರಯೋಜಕನಾದೇನೆಂದು ಅವರು ಚಿಂತಿಸಿದರು. ನನಗೆ ಶಾಕಾಹಾರ ವಿಷಯಕ್ಕೆ ಸಂಬಂಧಿಸಿದ ಗ್ರಂಥಗಳಲ್ಲಿ ಶ್ರದ್ಧೆ ಇರುವುದನ್ನು ತಿಳಿದು, ಆ ವ್ಯಾಸಂಗ ನನ್ನ ತಲೆ ಕೆಡಿಸಬಹುದೆಂದು ಅವರು ಹೆದರಿದರು. ನನ್ನ ಕಾರ್ಯವನ್ನು ನಾನು ಮರೆತು ಪ್ರಯೋಗಗಳಲ್ಲಿ ತೊಡಗಿ, ಹುಚ್ಚನಾಗಿ ಬಾಳನ್ನು ವ್ಯರ್ಥಮಾಡಿಕೊಳ್ಳಬಹುದೆಂದು ಅವರು ಹೆದರಿದರು. ಆದುದ ರಿಂದ ನನ್ನನ್ನು ತಿದ್ದಲು ಅವರು ಒಂದು ಕಡೆಯ ಪ್ರಯತ್ನವನ್ನು ಮಾಡಿ ದರು. ಒಂದು ದಿನ ಅವರು ನನ್ನನ್ನು ನಾಟಕ ಶಾಲೆಗೆ ಕರೆದುಕೊಂಡು ಹೋದರು. ನಾಟಕ ಪ್ರಾರಂಭವಾಗುವುದಕ್ಕೆ ಮುಂಚೆ ನಾವು, ಹಾಲ್ ಬರ್ ಹೋಟೆಲಿನಲ್ಲಿ ಊಟ ಮಾಡಬೇಕಾಗಿದ್ದಿತು. ಅದು ಅರಮನೆಯಂತೆ ನನಗೆ ಕಂಡಿತು. ವಿಕ್ಟೋರಿಯ ಹೋಟಲನ್ನು ಬಿಟ್ಟಮೇಲೆ, ನಾನು ಅಂತಹ ದೊಡ್ಡ ಹೋಟಲಿಗೆ ಹೋಗಿರಲಿಲ್ಲ. ವಿಕ್ಟೋರಿಯ ಹೋಟಲಿನಲ್ಲಿ ಸಹ, ನನಗೆ ವಸತಿ ಸುಖಕರವಾಗಿರಲಿಲ್ಲ. ನನ್ನ ಬುದ್ಧಿ ಎಲ್ಲಿಯೋ ಅಲೆಯುತ್ತಿದ್ದಿತು. ನಾಚಿಕೆಯಿಂದಲಾದರೂ ನಾನು ಯಾವ ಪ್ರಶ್ನೆಗಳನ್ನೂ ಕೇಳುವುದಿಲ್ಲವೆಂದು ಭಾವಿಸಿ ನನ್ನ ಮಿತ್ರರು ನನ್ನನ್ನು ಅಲ್ಲಿಗೆ ಕರತಂದಿ ದ್ದರು. ಅಲ್ಲಿ ಊಟಮಾಡುತ್ತಿದ್ದವರ ಸಂಖ್ಯೆ ಬಹು ದೊಡ್ಡದಾಗಿದ್ದಿತು. ಅವರ ಮಧ್ಯದಲ್ಲಿ ನಾನೂ ನನ್ನ ಮಿತ್ರರೂ ಒಂದು ಮೇಜಿನ ಮುಂದೆ ಕುಳಿತೆವು. ಮೊದಲು ಬಂದುದು ಸೂಪ್ (ಒಂದು ತರಹ ಸಾರು) ಅದು ಯಾವುದರ ಸಾರು ಎಂಬ ಯೋಚನೆ ನನಗೆ ಬಂದಿತು. ಆದರೆ ಮಿತ್ರರನ್ನು ಕೇಳುವ ಧೈರ್ಯವಾಗಲಿಲ್ಲ. ಸೇವಕನನ್ನು ಕರೆದೆನು.

ಇದನ್ನು ನೋಡಿ ಮಿತ್ರರು ಕೋಪದಿಂದ "ಏನು ಸಮಾಚಾರ ?" ಎಂದು ಕೇಳಿದರು. ನಾನು ಸಂಕೋಚದಿಂದ 'ಇದರಲ್ಲಿ ಮಾಂಸವೇನಾದರೂ ಇದೆಯೇ ?' ಎಂದು ವಿಚಾರಿಸೋಣವೆಂದು ಕರೆದೆ" ಎಂದೆನು.

"ಈ ಅಸಭ್ಯತೆ ಈ ಭೋಜನಾಲಯದಲ್ಲಿ ನಡೆಯದು. ನಿನಗೆ ಸರಿಯಾಗಿ ನಡೆದುಕೊಳ್ಳಲು ಬಾರದಿದ್ದರೆ ಹೋಗಿ ಬೇರೆ ಎಲ್ಲಾದರೂ ಊಟ ಮುಗಿಸಿ, ಹೊರಗೆ ನನಗಾಗಿ ಕಾದಿರು" ಎಂದರು.

ಈ ಮಾತಿನಿಂದ ನನಗೆ ಸಂತೋಷವಾಯಿತು. ನಾನು ಹೊರಗೆ ಹೋಗಿ, ಬೇರೆ ಭೋಜನಾಲಯವನ್ನು ಹುಡುಕಿದನು. ಸಮೀಪದಲ್ಲಿಯೇ ಒಂದು ಶಾಕಾಹಾರಿ ಭೋಜನಾಲಯವಿದ್ದಿತು. ಆದರೆ ಅದು ಮುಚ್ಚಿತ್ತು. ಏನು ಮಾಡುವುದೆಂದು ನನಗೆ ತಿಳಿಯಲಿಲ್ಲ. ಕೊನೆಗೆ, ಆ ರಾತ್ರಿ ಉಪವಾಸವಿದ್ದೆನು. ನಾವು ನಾಟಕವನ್ನು ನೋಡಲು ಹೋದೆವು. ನನ್ನ ಮಿತ್ರರು ನಾನು ಮಾಡಿದ ಗೊಂದಲವನ್ನು ಕುರಿತು ನನ್ನೊಂದಿಗೆ ಒಂದು ಮಾತನ್ನೂ ಆಡಲಿಲ್ಲ. ನಾನಂತೂ ಹೇಳಬೇಕಾದುದೇನೂ ಇರಲೇ ಇಲ್ಲ.

ಅದೇ ನಮ್ಮಿಬ್ಬರ ಕೊನೆಯ ಜಗಳ. ಇದರಿಂದ ನಮ್ಮ ಸಂಬಂಧಕ್ಕೆ ಎಳ್ಳಷ್ಟೂ ಚ್ಯುತಿ ಬರಲಿಲ್ಲ. ಅವರ ಈ ಎಲ್ಲ ಪ್ರಯತ್ನಗಳಿಗೂ ನನ್ನ ಮೇಲಿದ್ದ ಅವರ ಪ್ರೇಮವೇ ಮೂಲವೆಂದು ಅರಿತ್ತಿದ್ದೆ. ಅವರ ಮತ್ತು ನನ್ನ ಆಚಾರಗಳಲ್ಲಿ ಭಿನ್ನತೆಯಿದ್ದರೂ ಅವರಲ್ಲಿ ನನ್ನ ಆದರ ಕಡಿಮೆಯಾಗಲಿಲ್ಲ. ಹೆಚ್ಚೇ ಆಯಿತು.

ಅವರ ಚಿಂತೆಯನ್ನು ದೂರಮಾಡಬೇಕೆಂದು ನಾನು ನಿಶ್ಚಯಿಸಿದೆನು. ಇನ್ನು ಮುಂದೆ ಅನಾಗರಿಕತೆಯನ್ನು ಬಿಟ್ಟು, ಸಭ್ಯನಾಗಲು ಪ್ರಯತ್ನಿಸಿ, ಇತರ ಮಾರ್ಗಗಳಿಂದ ಸಮಾಜದಲ್ಲಿ ಬೆರೆಯಲು ಯೋಗ್ಯನಾಗಿ, ನನ್ನ ಶಾಕಾಹಾರದಿಂದ ನನಗೆ ಉಂಟಾಗಿರುವ ವಿಚಿತ್ರಸ್ಥಿತಿಯನ್ನು ಮರೆಸುವೆನೆಂದು, ಅವರಿಗೆ ಭರವಸೆ ಕೊಡಲು ನಿಶ್ಚಯಿಸಿದೆನು. ಅದಕ್ಕಾಗಿ ಆಂಗ್ಲ ಸಭ್ಯನಾಗುವ ಕಷ್ಟವಾದ ಕಾರ್ಯಕ್ಕೆ ಕೈ ಹಾಕಿದೆನು.

ಬೊಂಬಾಯಿಯಲ್ಲಿ ಹೊಲಿಸಿದ್ದ ಉಡುಪುಗಳು ಆಂಗ್ಲ ಸಮಾಜಕ್ಕೆ ತಕ್ಕವಲ್ಲವೆಂದು, ಆರ್ಮಿ ಅಂಡ್ ನೇವಿ ಸ್ಟೋರ್ಸ್‌ನಲ್ಲಿ ಬೇರೆ ಉಡುಪುಗಳನ್ನು ಹೊಲಿಸಿದೆನು. ಹತ್ತೊಂಬತ್ತು ಷಿಲಿಂಗಿಗೆ (ಆಗ ಇದು ಬಹಳ

ಹೆಚ್ಚು ಬೆಲೆ) ಒಂದು ಚಿಮ್ನಿಪಾಟ್ ಹ್ಯಾಟ್(ಟೋಪಿ) ಕೊಂಡುಕೊಂಡೆನು ಇಷ್ಟರಿಂದ ನಾನು ಸಂತುಷ್ಟನಾಗಲಿಲ್ಲ. ಸೊಗಸುಗಾರರ ಕ್ಷೇತ್ರವಾದ ಬಾಂಡ್‌ಸ್ಟ್ರೀಟ್‌ಗೆ ಹೋಗಿ ಹತ್ತು ಪೌಂಡು ಕೊಟ್ಟು ಒಂದು ಈವಿನಿಂಗ್ ಸೂಟ್ ಕೊಂಡುಕೊಂಡೆನು. ಉದಾರಿಯಾದ ಸರಳ ಮನಸ್ಸಿನ ನಮ್ಮಣ್ಣನಿಗೆ ಬರೆದು, ಜೇಬುಗಳಲ್ಲಿ ಇಳಿ ಬಿಡುವ ಗಡಿಯಾರದ ಬಂಗಾರದ ಎರಡೆಳೆ ಸರಪಣಿಯನ್ನು ತರಿಸಿದೆನು. ಸಿದ್ಧವಾದ ಕಂಠಬಂಧವನ್ನು ಧರಿಸುವುದು ಸರಿಯಲ್ಲ. ಆದುದರಿಂದ ಅದನ್ನು ಕಟ್ಟಿಕೊಳ್ಳುವ ಕಲೆಯನ್ನು ಕಲಿತೆನು. ಭಾರತದಲ್ಲಿ ನಾನು ಕನ್ನಡಿ ನೋಡುತ್ತಿದ್ದುದು ಕ್ಷೌರಮಾಡಿಕೊಳ್ಳುತ್ತಿದ್ದಾಗ ಮಾತ್ರ. ಇಲ್ಲಿ ಪ್ರತಿದಿನವೂ ಒಂದು ದೊಡ್ಡ ಕನ್ನಡಿಯ ಮುಂದೆ ನಿಂತು, ಕಂಠಬಂಧ ಕಟ್ಟಿಕೊಳ್ಳುತ್ತಾ ತಲೆಗೂದಲನ್ನು ಬಾಚಿಕೊಳ್ಳುತ್ತಾ, ನಿತ್ಯವೂ ಹತ್ತು ನಿಮಿಷ ವ್ಯರ್ಥಮಾಡುತ್ತಿದ್ದೆನು. ಇನ್ನು ನನ್ನ ಕೂದಲು ಮೃದುವಲ್ಲ. ಅದನ್ನು ಸರಿಮಾಡಲು ಬ್ರಷ್‌ನೊಡನೆ ನಿತ್ಯಯುದ್ಧ. ಟೋಪಿಯನ್ನು ಹಾಕಿಕೊಳ್ಳುವಾಗ ಮತ್ತು ತೆಗೆಯುವಾಗ, ಕೂದಲನ್ನು ಸರಿಮಾಡಲು ಕೈತಾನಾಗಿಯೇ ತಲೆಯ ಮೇಲೆ ಹೋಗುತ್ತಿದ್ದಿತು. ನಾಲ್ಕು ಜನರೊಡನೆ ಕುಳಿತಿರುವಾಗ ಪದೇ ಪದೇ ಕೂದಲನ್ನು ಸರಿಮಾಡಿಕೊಳ್ಳಲು ಕೈ ಹೋಗುವ ಸಭ್ಯತೆ ಬೇರೆ.

ಆದರೆ ಇಷ್ಟೆಲ್ಲ ಸಂಭ್ರಮ ಸಾಕಾಗಲಿಲ್ಲ. ಬರಿಯ ನಾಗರಿಕ ಉಡುಪನ್ನು ಧರಿಸುವುದರಿಂದ ಮಾತ್ರ ನಾಗರಿಕನಾಗುವೆನೇ ? ಆದುದರಿಂದ ನಾಗರಿಕನಾಗಲು ಬೇಕಾದ ಇತರ ವಿಷಯಗಳ ಕಡೆ ಮನಸ್ಸನ್ನು ತಿರುಗಿಸಿದೆನು. ಅದರಂತೆ ನಡೆಯಬೇಕಲ್ಲ. ಸಭ್ಯ ಪುರುಷನಿಗೆ ನರ್ತನಮಾಡುವುದು, ಫ್ರೆಂಚ್ ಭಾಷೆಯಲ್ಲಿ ಸಂಭಾಷಣೆ ಇವು ಇರಬೇಕೆಂದು ಹೇಳಿದರು. ಏಕೆಂದರೆ ಫ್ರೆಂಚ್, ನೆರೆ ರಾಷ್ಟ್ರದ ಭಾಷೆ ಮಾತ್ರವಲ್ಲ. ಅದು ಸಮಗ್ರ ಯೂರೋಪಿನ ಸಾರ್ವತ್ರಿಕ ಭಾಷೆಯೂ ಸಹ. ಯೂರೋಪಿನಲ್ಲಿ ಸಂಚರಿಸಲು ನನಗೆ ಇಚ್ಛೆಯೂ ಇದ್ದಿತು. ಸಭ್ಯ ಪುರುಷನಾಗಲು ಕಲೆಗಳಲ್ಲಿಯೂ ನಿಪುಣನಾಗಬೇಕಾಗಿದ್ದಿತು. ನರ್ತನ ಮಾಡುವುದನ್ನು ಕಲಿಯಬೇಕೆಂದು ನಾನು ನಿಶ್ಚಯಿಸಿದೆನು. ಒಂದು ನರ್ತನ ಶಾಲೆಯನ್ನು ಸೇರಿದೆನು. ಒಂದು ಅವಧಿಗಾಗಿ ಮೂರು ಪೌಂಡ್ ಶುಲ್ಕವನ್ನೂ ಕೊಟ್ಟುದಾಯಿತು. ಮೂರು

ವಾರಗಳಲ್ಲಿ ನಾನು ಐದು ಅಥವಾ ಆರು ಪಾಠಗಳಿಗೆ ಹೋಗಿದ್ದಿರಬಹುದು. ತಾಳಕ್ಕೆ ಸರಿಯಾಗಿ ಹೆಜ್ಜೆ ಹಾಕಲು ನನಗೆ ಬರಲಿಲ್ಲ. ಪಿಯಾನೋವನ್ನೇನೋ ಬಾರಿಸುತ್ತಿದ್ದರು. ಆದರೆ ಏನನ್ನು ಬಾರಿಸುತ್ತಿದ್ದರೆಂಬುದು ನನಗೆ ತಿಳಿಯಲಿಲ್ಲ.

ಇನ್ನು ಮಾಡುವುದೇನು? ಬೈರಾಗಿ ಮತ್ತು ಲಂಗೋಟಿಯ ಕಥೆಯಾಯಿತಲ್ಲ! ಅವನು ಲಂಗೋಟಿಯನ್ನು ರಕ್ಷಿಸಲು ಬೆಕ್ಕನ್ನು ಸಾಕಿದ. ಬೆಕ್ಕಿನ ಹಾಲಿಗಾಗಿ ಹಸು; ಹಸುವನ್ನು ಕಾಪಾಡಲು ಆಳು. ಹೀಗೆ ಬೆಳೆಯಿತು ಬೈರಾಗಿಯ ಸಂಸಾರ. ಪಿಟೀಲು ಬಾರಿಸುವುದನ್ನು ಕಲಿತರೆ ತಾಳ ಮತ್ತು ಸ್ವರಜ್ಞಾನ ಉಂಟಾಗುವುದೆಂದು ಯೋಚಿಸಿದೆನು. ಪಿಟೀಲನ್ನು ಕೊಂಡುಕೊಳ್ಳಲು ಮೂರು ಪೌಂಡು. ಅದನ್ನು ಕಲಿಯಲು ಕೆಲವು ಹಣ, ವೆಚ್ಚಮಾಡಿದೆನು. ಭಾಷಣ ಕಲೆಯನ್ನು ಕಲಿಯುವುದಕ್ಕಾಗಿ ಮತ್ತೊಬ್ಬ ಶಿಕ್ಷಕನನ್ನು ಹುಡುಕಿದೆನು. ಅವರಿಗೂ ಅದಕ್ಕಾಗಿ ಒಂದು ಗಿನಿ ಕೊಡಬೇಕಾಯಿತು. ಅವನ ಪ್ರೇರಣೆಯಂತೆ "ಬೆಲ್ಸ್ ಸ್ಟಾಂಡರ್ಡ್ ಎಲೊಕ್ಯೂಷನಿಸ್ಟ್" ಎಂಬ ಪುಸ್ತಕವನ್ನು ಕೊಂಡುಕೊಂಡು ಪಿಟ್ಟನ ಭಾಷಣವೊಂದರಿಂದ ಪ್ರಾರಂಭಿಸಿದೆನು.

ಆದರೆ ಬೆಲ್ ಸಾಹೇಬ, ನನ್ನ ಕಿವಿಯಲ್ಲಿ ಎಚ್ಚರಿಕೆಯ ಗಂಟೆ ಬಾರಿಸಿದನು. ನಾನು ಎಚ್ಚತ್ತೆನು.

"ನನ್ನ ಪೂರ್ಣ ಆಯುಸ್ಸನ್ನು ನಾನು ಇಂಗ್ಲೆಂಡಿನಲ್ಲಿ ಕಳೆಯಬೇಕಾದುದಿಲ್ಲ. ಭಾಷಣ ಕಲೆಯನ್ನು ಕಲಿತು ಮಾಡಬೇಕಾದುದೇನು? ಕುಣಿಯುವುದನ್ನು ಕಲಿತರೆ ಸಭ್ಯನಾಗುತ್ತೇನೆಯೇ? ಪಿಟೀಲನ್ನು ನಮ್ಮ ದೇಶದಲ್ಲಿಯೇ ಕಲಿಯಬಹುದು. ಇನ್ನೂ ನಾನು ವಿದ್ಯಾರ್ಥಿ. ವಿದ್ಯಾರ್ಜನೆ ಮಾಡುವುದು ನನ್ನ ಕೆಲಸ. ನನ್ನ ವಕೀಲ ವ್ಯಾಸಂಗಕ್ಕೆ ಆವಶ್ಯಕವಾದ ಸಿದ್ಧತೆಯನ್ನು ನಾನು ಮಾಡಿಕೊಳ್ಳಬೇಕು. ನನ್ನ ಸದಾಚಾರದಿಂದ ನಾನು ಸಭ್ಯನೆನಿಸಿಕೊಂಡರೆ ಸಾಕು. ಇಲ್ಲದಿದ್ದರೆ ಆ ಆಸೆಯನ್ನು ಬಿಡಬೇಕು" ಎಂದುಕೊಂಡೆನು.

ಈ ವಿಚಾರದ ಕಾವಿನಲ್ಲಿಯೇ ನನ್ನ ಭಾಷಣ ಶಿಕ್ಷಕನಿಗೆ ಒಂದು ಪತ್ರವನ್ನು ಬರೆದೆನು. ಅವನಿಂದ ಎರಡು ಮೂರು ಪಾಠಗಳನ್ನು ಕಲಿತಿದ್ದೆನು.

ನೃತ್ಯ ಶಿಕ್ಷಕನಿಗೂ ಅಂಥದೇ ಒಂದು ಪತ್ರ ಬರೆದೆನು. ಪಿಟೀಲು ಶಿಕ್ಷಕಿಯ ಬಳಿಗೆ ಪಿಟೀಲನ್ನು ತೆಗೆದುಕೊಂಡು ಹೋಗಿ, ಬಂದ ಹಣಕ್ಕೆ ಅದನ್ನು ಮಾರು ವಂತೆ ಹೇಳಿದೆನು. ಆಕೆಯೊಂದಿಗೆ ಸ್ವಲ್ಪ ಮಿತ್ರತ್ವವುಂಟಾಗಿದ್ದಿತು. ನಾನು ಹಿಡಿದುದು ತಪ್ಪುದಾರಿ ಎಂದು ಆಕೆಗೆ ಹೇಳಿದೆನು.

ನನ್ನ ಸಂಪೂರ್ಣ ಪರಿವರ್ತನೆಯ ನಿಶ್ಚಯಕ್ಕೆ ಆಕೆಯೂ ಬೆಂಬಲ ಕೊಟ್ಟಳು.

ನಾಗರಿಕನಾಗಬೇಕೆಂಬ ಹುಚ್ಚು ನನಗೆ ಸುಮಾರು ಮೂರು ತಿಂಗಳು ಇದ್ದಿತು. ಆದರೆ ಠೀವಿಯ ಬಟ್ಟೆಗಳ ಹುಚ್ಚು ಇನ್ನೂ ಅನೇಕ ವರುಷಗಳು ಇದ್ದವು. ಅಂದಿನಿಂದ ನಾನು ವಿದ್ಯಾರ್ಥಿಯಾದೆನು.

೧೬

ಪರಿವರ್ತನೆ

ನಾಟ್ಯವೇ ಮುಂತಾದುವುಗಳಲ್ಲಿ ನಾನು ನಡೆಸಿದ ನೃತ್ಯ ಇತ್ಯಾದಿ ಪ್ರಯೋಗಗಳಿಂದ ನಾನು ಉಚ್ಛೃಂಖಲ ಪ್ರವೃತ್ತಿಯುಳ್ಳವನಾಗಿದ್ದೆನೆಂದು ಯಾರೂ ತಿಳಿಯಬಾರದು. ಅದರಲ್ಲಿಯೂ ವಿವೇಕದ ಅಂಶ ಇದ್ದಿತೆಂಬುದು ವಾಚಕರಿಗೆ ಗೊತ್ತಾಗುತ್ತದೆ. ಆ ಮೋಹದ ಕಾಲದಲ್ಲಿಯೂ ನಾನು, ಕೆಲವಂಶ ವಿಮೋಚನಾಪರನಾಗಿಯೇ ಇದ್ದೆನು. ಕಾಸು ಕಾಸಿಗೂ ಲೆಕ್ಕ ವನ್ನು ಇಡುತ್ತಿದ್ದೆನು. ವೆಚ್ಚದ ಅಂದಾಜನ್ನೂ ಮಾಡುತ್ತಿದ್ದೆನು. ನಾನು ತಿಂಗಳಿಗೆ ಹದಿನಾಲ್ಕು ಪೌಂಡುಗಳಿಗಿಂತ ಹೆಚ್ಚು ಖರ್ಚು ಮಾಡಕೂಡ ದೆಂದು ನಿಶ್ಚಯಿಸಿದೆನು. ಬಸ್ ಪ್ರಯಾಣ ಮತ್ತು ಅಂಚೆಯ ವೆಚ್ಚ, ವೃತ್ತ ಪತ್ರಿಕೆ ಕೊಂಡ ಖರ್ಚು ಎಲ್ಲವನ್ನೂ ಅಂದಂದೇ ಬರೆದು ಮಲಗು ವುದಕ್ಕೆ ಮುಂಚಿತವಾಗಿ ಜಮಾ ಖರ್ಚನ್ನು ನೋಡುತ್ತಿದ್ದೆನು. ಆ ಅಭ್ಯಾಸ ಇಂದಿನವರೆಗೆ ನಡೆದು ಬಂದಿದೆ. ಈ ಅಭ್ಯಾಸದಿಂದ ನನ್ನ ಅನೇಕ ಸಾರ್ವ ಜನಿಕ ಕಾರ್ಯಗಳಲ್ಲಿ ಲಕ್ಷಾಂತರ ರೂಪಾಯಿಗಳು ಖರ್ಚು ಆದರೂ, ಮಿತವ್ಯಯವನ್ನು ಅನುಸರಿಸಿದ್ದೇನೆ. ಪ್ರತಿಯೊಂದು ಸಾರ್ವಜನಿಕ ಕಾರ್ಯ

ಬಲ್ಲಿಯೂ ಸಾಲ ಮಾಡುವ ಬದಲು ತಪ್ಪದೆ ಹಣವನ್ನು ಉಳಿಸಿದ್ದೇನು. ಪ್ರತಿಯೊಬ್ಬ ಯುವಕನೂ ನನ್ನ ಅನುಭವದಿಂದ ಲಾಭ ಹೊಂದಿ ತನ್ನ ಜಮಾ ಮತ್ತು ಖರ್ಚಿನ ಲೆಕ್ಕವನ್ನು ಸರಿಯಾಗಿಡಲಿ. ಅವನಿಗೂ ಕೊನೆಯಲ್ಲಿ ನನಗಾದಂತೆ ಲಾಭವಾಗುವುದು.

ನನ್ನ ಖರ್ಚನ್ನು ಕಣ್ಣಿನಲ್ಲಿ ಕಣ್ಣಿಟ್ಟು ನೋಡಿದೆನು. ಮಿತವ್ಯಯವನ್ನು ಮಾಡುವುದು ಆವಶ್ಯಕವೆಂದು ತೋರಿತು. ನನ್ನ ವೆಚ್ಚವನ್ನು ಅರ್ಧಕ್ಕೆ ಇಳಿಸಬೇಕೆಂದು ತೀರ್ಮಾನಿಸಿದೆನು. ನನ್ನ ಜಮಾ-ಖರ್ಚನ್ನು ನೋಡಿದೆನು. ಗಾಡಿ ಬಾಡಿಗೆಗಾಗಿಯೇ ಅನೇಕ ಸಲ ನಾನು ವೆಚ್ಚ ಮಾಡಿರುವುದು ನನಗೆ ಗೊತ್ತಾಯಿತು. ನಾನು ಒಂದು ಕುಟುಂಬದೊಳಗೆ ವಾಸಿಸುತ್ತಿದ್ದುದರಿಂದ ಪ್ರತಿವಾರವೂ ಕಡ್ಡಾಯವಾಗಿ ವಾರದ ಹಣವನ್ನು ಕೊಡಲೇ ಬೇಕಾಗಿದ್ದಿತು. ಕುಟುಂಬದ ಜನರನ್ನು ಸಭ್ಯತೆಯ ಕುರುಹಾಗಿ ಬೇರೆ ಕಡೆಗೆ ಊಟಕ್ಕೆ ಕರೆದುಕೊಂಡು ಹೋಗುತ್ತಿದ್ದ ವೆಚ್ಚವೂ ಅವರ ಜತೆ ಕೂಟಗಳಿಗೆ ಹೋಗುತ್ತಿದ್ದ ವೆಚ್ಚವೂ ಇವರಲ್ಲಿ ಸೇರಿದ್ದಿತು. ಇವೆಲ್ಲವುಗಳಿಂದ ನಾನು ವಾಹನಗಳಿಗಾಗಿ ಕೊಡುತ್ತಿದ್ದ ವೆಚ್ಚವೇ ಬಹಳ ಹೆಚ್ಚಾಗುತ್ತಿದ್ದಿತು. ಆದರಲ್ಲಿಯೂ, ಜತೆಗೆ ಬರುವವಳು ಮಹಿಳೆಯಾದರೆ, ವಾಹನದ ಬಾಡಿಗೆಯನ್ನೆಲ್ಲ ಗಂಡಸೇ ಕೊಡಬೇಕಾಗಿದ್ದಿತು. ಅಲ್ಲದೆ ಹೊರಗೆ ಊಟ ಮಾಡಿದರೆ ಹೆಚ್ಚಿಗೆ ವೆಚ್ಚ. ಮನೆಯಲ್ಲಿ ಊಟ ಮಾಡದಿದ್ದರೂ ಅದಕ್ಕೆ ಉಳಿತಾಯವಿಲ್ಲ. ಈ ವೆಚ್ಚಗಳನ್ನೆಲ್ಲ ಉಳಿಸಬಹುದು. ಜತೆಗೆ ವಿವೇಚನೆ ಇಲ್ಲದೆ ಅನುಸರಿಸುತ್ತಿದ್ದ ಇಂಗ್ಲೆಂಡ್ ದೇಶದ ವಾಡಿಕೆಗಳನ್ನು ನಿಲ್ಲಿಸುವುದರಿಂದಲೂ ಖರ್ಚು ಕಡಿಮೆ ಮಾಡಬಹುದು ಎಂದು ಯೋಚಿಸಿದೆನು.

ಇನ್ನು ಒಂದು ಕುಟುಂಬದ ಜತೆ ವಾಸಿಸುವುದಕ್ಕೆ ಬದಲಾಗಿ ನನಗಾಗಿಯೇ ಬೇರೆ ಕೊಠಡಿಯಲ್ಲಿ ಗೊತ್ತು ಮಾಡಿಕೊಳ್ಳಬೇಕೆಂದು ನಿಶ್ಚಯಿಸಿದೆನು. ನನ್ನ ಕೆಲಸಕ್ಕೆ ಅನುಕೂಲವಾಗಿಯೂ ಮತ್ತು ಅನುಭವವನು ಸಂಪಾದಿಸುವುದಕ್ಕಾಗಿಯೂ ಕೊಠಡಿಗಳನ್ನು ಬದಲಾಯಿಸುವುದನ್ನೂ ನಿಶ್ಚಯಿಸಿದೆನು. ನನ್ನ ಕೆಲಸದ ಸ್ಥಳಕ್ಕೆ ಅರ್ಧಗಂಟೆಯೊಳಗೆ ನಡೆದುಕೊಂಡು ಹೋಗುವಷ್ಟು ದೂರದಲ್ಲಿ ಕೊಠಡಿಗಳನ್ನು ಗೊತ್ತುಮಾಡಿಕೊಳ್ಳುತ್ತಿದ್ದೆನು. ಇದರಿಂದ ಗಾಡಿ ಬಾಡಿಗೆ ಉಳಿತಾಯವಾಯಿತು. ಅದಕ್ಕೆ

ಮುಂಚಿನ ಕಾಲದಲ್ಲಿ, ನಾನು ಎಲ್ಲಿಗೆ ಹೋಗಬೇಕಾದರೂ ಗಾಡಿಯನ್ನು ಬಾಡಿಗೆಗೆ ತೆಗೆದುಕೊಳ್ಳುತ್ತಿದ್ದೆನು. ಇದರಿಂದ ಸಂಚಾರಕ್ಕಾಗಿ ಬೇರೆ ವೇಳೆಯನ್ನು ಗೊತ್ತುಮಾಡಿಕೊಳ್ಳಬೇಕಾಗಿದ್ದಿತು. ಹೊಸ ಏರ್ಪಾಡಿನಲ್ಲಿ ಮಿತವ್ಯಯ ಮತ್ತೂ ಸಂಚಾರ ಎರಡೂ ಸೇರಿತ್ತು. ದಿವಸಕ್ಕೆ ಎಂಟು ಹತ್ತು ಮೈಲಿ ಸಂಚಾರ ; ಗಾಡಿ ಬಾಡಿಗೆ ಉಳಿತಾಯ. ಈ ಅಭ್ಯಾಸ, ನಾನು ವಿಲಾಯತಿಯಲ್ಲಿರುವವರೆಗೆ ನನ್ನನ್ನು ರೋಗರಹಿತನನ್ನಾಗಿಯೂ ದೃಢಕಾಯನನ್ನಾಗಿಯೂ ಇಟ್ಟದ್ದಿತು — ನಾನು ಒಂದು ಸಂಸಾರದವರೊಂದಿಗೆ ಇರುವುದನ್ನು ಬಿಟ್ಟು ಎರಡು ಕೊಠಡಿಗಳನ್ನು ಬಾಡಿಗೆಗೆ ತೆಗೆದುಕೊಂಡೆನು. ಮಲಗುವುದಕ್ಕೆ ಒಂದು, ಕುಳಿತುಕೊಳ್ಳಲು ಒಂದು. (ಬೈಠಕ್ ಖಾನೆ) ಇದು ನನ್ನ ಪರಿವರ್ತನೆಯ ಎರಡನೆಯ ಯುಗವೆಂದು ಹೇಳಬಹುದು. ಮೂರನೆಯ ಯುಗ ಇನ್ನೂ ಮುಂದೆ ಬರುವುದಾಗಿದ್ದಿತು.

ಹೀಗೆ ಅರ್ಥ ಖರ್ಚು ಉಳಿಯಿತು. ಆದರೆ ಕಾಲವನ್ನು ಕಳೆಯುವುದು ಹೇಗೆ ? ಬ್ಯಾರಿಸ್ಟರ್ ಪರೀಕ್ಷೆಗೆ ಹೆಚ್ಚು ವ್ಯಾಸಂಗ ಆವಶ್ಯಕವಿಲ್ಲವೆಂದು ನನಗೆ ತಿಳಿದಿದ್ದಿತು. ಆದುದರಿಂದ ನನಗೆ ಆ ಯೋಚನೆ ಇರಲಿಲ್ಲ. ನನ್ನ ಅರ್ಧಮರ್ಧ ಇಂಗ್ಲೀಷಿನದೇ ನನಗೆ ಯೋಚನೆಯಾಗಿದ್ದಿತು. ಲೇಲಿ ಸಾಹೇಬರು ಹೇಳಿದ್ದ "ಬಿ.ಎ. ಮುಗಿಸಿ ನನ್ನಲ್ಲಿಗೆ ಬಾ" ಎಂಬ ಮಾತು ನನ್ನ ಕಿವಿಯಲ್ಲಿ ಆಡುತ್ತಿದ್ದಿತು. ಬ್ಯಾರಿಸ್ಟರ್ ಆದರೆ ಸಾಲದು. ಇನ್ನಾವುದಾದರೂ ಅಧ್ಯಯನ ಮಾಡಿ ಪದವಿ (ಡಿಗ್ರಿ) ವಿಷಯ ಸಂಪಾದಿಸಬೇಕೆನಿಸಿತು. ಆಕ್ಸ್ ಫರ್ಡ್, ಕೇಂಬ್ರಿಡ್ಜ್ ಬಗ್ಗೆ ವಿಚಾರಿಸಿದೆನು. ಮಿತ್ರರನ್ನು ಕೇಳಿದೆನು. ಅಲ್ಲಿ ಹೋದರೆ ಖರ್ಚು ಹೆಚ್ಚಾಗಿ ಬೀಳುತ್ತದೆ. ಕಾಲವು ಹೆಚ್ಚು ಬೇಕಾಗುತ್ತದೆ ಎಂದು ತಿಳಿಯಿತು. ನಾನು ಮೂರು ವರುಷಗಳಿಗಿಂತ ಹೆಚ್ಚಾಗಿ ಇಂಗ್ಲೆಂಡಿನಲ್ಲಿರಲು ಸಾಧ್ಯವಿರಲಿಲ್ಲ. ಒಬ್ಬ ಮಿತ್ರರು "ನಿನಗೆ ನಿಜವಾಗಿ ಒಂದು ಕಠಿಣವಾದ ಪರೀಕ್ಷೆಯಲ್ಲಿ ಉತ್ತೀರ್ಣನಾಗಬೇಕೆಂದು ಇಷ್ಟವಿದ್ದರೆ, ಮೆಟ್ರಿಕುಲೇಷನ್ ಪರೀಕ್ಷೆಗೆ ಕುಳಿತುಕೊ, ಆದಕ್ಕೆ ಹೆಚ್ಚು ಕಷ್ಟಪಟ್ಟು ವ್ಯಾಸಂಗ ಮಾಡಬೇಕು. ಜತೆಗೆ ನಿನ್ನ ಸಾಮಾನ್ಯ ಜ್ಞಾನವೂ ಹೆಚ್ಚುತ್ತದೆ, ಖರ್ಚು ಕಡಿಮೆ" ಎಂದು ಹೇಳಿದರು. ಆ ಮಾತು ನನಗೆ ಒಪ್ಪಿಗೆಯಾಯಿತು. ಆದರೆ ಪರೀಕ್ಷಾ ವಿಷಯಗಳನ್ನು ನೋಡಿ ನಾನು ಹೆದರಿದೆನು. ಲ್ಯಾಟಿನ್

ಮತ್ತು ಇನ್ನೂ ಒಂದೆರಡು ಆಧುನಿಕ ಭಾಷೆಗಳನ್ನು ತೆಗೆದುಕೊಳ್ಳಲೇ ಬೇಕಾಗಿದ್ದಿತು. ಲ್ಯಾಟಿನ್ ಕಲಿಯುವುದು ಹೇಗೆ? ವಕೀಲರಿಗೆ ಲ್ಯಾಟಿನ್ ಭಾಷೆಯಿಂದ ತುಂಬ ಲಾಭವಿದೆ. ಲ್ಯಾಟಿನ್ ತಿಳಿದವರಿಗೆ ಕಾನೂನನ್ನು ಅರ್ಥಮಾಡಿಕೊಳ್ಳಲು ಸುಲಭ. ರೋಮನ್ ಕಾನೂನಿಗೆ ಸಂಬಂಧಿಸಿದ ಪ್ರಶ್ನೆ ಪತ್ರಿಕೆ ಲ್ಯಾಟಿನ್ ಭಾಷೆಯಲ್ಲಿರುತ್ತದೆ, ಮತ್ತು ಲ್ಯಾಟಿನ್ ತಿಳಿದಿದ್ದರೆ ಇಂಗ್ಲಿಷ್ ಭಾಷೆಯ ಮೇಲೆ ಒಳ್ಳೆ ಪ್ರಭುತ್ವವುಂಟಾಗುತ್ತದೆ" ಎಂದು ಹೇಳಿದರು. ಆ ಮಾತು ನನ್ನ ಮನಸ್ಸಿಗೆ ಹಿಡಿಸಿತು. ಎಷ್ಟೇ ಕಷ್ಟವಾದರೂ ಲ್ಯಾಟಿನ್ ಕಲಿಯಬೇಕೆಂದು ನಿಶ್ಚಯಿಸಿದೆನು. ಫ್ರೆಂಚನ್ನು ಕಲಿಯಲು ಆಗಲೇ ಪ್ರಾರಂಭಿಸಿದ್ದುದರಿಂದ ಅದೇ ಆಧುನಿಕ ಭಾಷೆಯಾಯಿತೆಂದು ನಿಶ್ಚಯಿಸಿದೆನು. ವಿದ್ಯಾರ್ಥಿಗಳನ್ನು ತಯಾರುಮಾಡುತ್ತಿದ್ದ ಒಂದು ಮೆಟ್ರಿಕುಲೇಷನ್ ತರಗತಿಯನ್ನು ಸೇರಿದೆನು. ಆ ಪರೀಕ್ಷೆ, ಆರು ತಿಂಗಳಿಗೊಮ್ಮೆ ನಡೆಯುತ್ತಿದ್ದಿತು. ನನ್ನ ಮುಂದೆ ಇದ್ದುದು ಐದೇ ತಿಂಗಳು. ಆ ಕೆಲಸ ನನ್ನ ಶಕ್ತಿಗೆ ಮೀರಿದುದಾಗಿದ್ದಿತೆನ್ನಬಹುದು. ಪರಿಣಾಮವಾಗಿ ಇಂಗ್ಲಿಷ್ ನಾಗರಿಕನಾಗಬೇಕೆಂದು ಹೊರಟಿದ್ದ ನಾನು, ಅತ್ಯಂತ ಉದ್ಯಮ ಶೀಲನಾದ ವಿದ್ಯಾರ್ಥಿಯಾದೆನು. ಒಂದು ಗಳಿಗೆಯೂ ಪೋಲಾಗದಂತೆ ವೇಳಾಪಟ್ಟಿಯನ್ನು ನಿರ್ಮಿಸಿಕೊಂಡೆನು. ಆದರೆ ಉಳಿದಿದ್ದ ಕಾಲದಲ್ಲಿ ಫ್ರೆಂಚ್ ಮತ್ತು ಲ್ಯಾಟಿನ್ ಭಾಷೆಗಳನ್ನೂ ಉಳಿದ ವಿಷಯಗಳನ್ನೂ ಕಲಿಯುವಷ್ಟು ನನ್ನ ಬುದ್ಧಿಯಾಗಲೀ ಸ್ಮರಣಶಕ್ತಿಯಾಗಲೀ ಚುರುಕಾಗಿರಲಿಲ್ಲ, ಪರೀಕ್ಷೆಗೆ ಕುಳಿತೆನು. ಲ್ಯಾಟಿನ್‌ನಲ್ಲಿ ತೇರ್ಗಡೆಯಾಗಲಿಲ್ಲ. ಇದರಿಂದ ನನಗೆ ದುಃಖವಾದರೂ ನಾನು ಧೈರ್ಯಗುಂದಲಿಲ್ಲ. ಲ್ಯಾಟಿನ್‌ನಲ್ಲಿ ರುಚಿ ಹುಟ್ಟಿತು. ಮತ್ತೊಂದು ಸಲ ಪ್ರಯತ್ನಮಾಡಿದರೆ ಫ್ರೆಂಚ್ ಭಾಷೆಯ ಜ್ಞಾನ ಇನ್ನೂ ಉತ್ತಮವಾಗುವುದೆಂದು ಭಾವಿಸಿದೆನು. ವಿಜ್ಞಾನದಲ್ಲಿ ಒಂದು ಹೊಸ ವಿಷಯ ತೆಗೆದುಕೊಳ್ಳುವ ನಿಶ್ಚಯಮಾಡಿದೆನು. ರಸಾಯನ ಶಾಸ್ತ್ರ, ಅಭಿರುಚಿ ಹುಟ್ಟಿಸುವ ಶಾಸ್ತ್ರ, ಆದರೆ ಪ್ರಯೋಗಗಳ ಅಭಾವದಿಂದ ನನಗೆ ಹಿಡಿಸಲಿಲ್ಲ. ಭಾರತದಲ್ಲಿ ರಸಾಯನ ಶಾಸ್ತ್ರ, ಎಲ್ಲ ವಿದ್ಯಾರ್ಥಿಗಳಿಗೂ ಕಡ್ಡಾಯ ವಿಷಯ. ಆದುದರಿಂದ ನಾನು ಅದನ್ನು ಮೊದಲ ಸಲ ಲಂಡನ್ ಮೆಟ್ರಿಕುಲೇಷನ್‌ಗೆ ಆರಿಸಿಕೊಂಡಿದ್ದೆನು. ಈ ಸಲ ಬೆಳಕು ಮತ್ತು ಶಾಖ ಎಂಬ ವಿಷಯಗಳನ್ನು ತೆಗೆದು

ಕೊಂಡೆನು. ಅದು ಸುಲಭ ಎಂದು ಹೇಳಿದರು. ನನಗೂ ಹಾಗೆಯೇ ತೋರಿತು.

ಇನ್ನೊಮ್ಮೆ ಪರೀಕ್ಷೆಗೆ ಕೂಡುವ ಸಿದ್ಧತೆಯ ಜತೆಯಲ್ಲಿಯೇ, ಜೀವನವನ್ನು ಇನ್ನೂ ಸರಳವಾಗಿ ಮಾಡಲು ಪ್ರಯತ್ನಿಸಿದೆನು. ನಮ್ಮ ಮನೆಯವರ ಬಡತನಕ್ಕೆ ಅನುಸಾರವಾದ ರೀತಿಯಲ್ಲಿ ನಾನು ಜೀವಿಸುತ್ತಿಲ್ಲ ಎಂದು ನನಗೆ ತೋರಿತು. ನಮ್ಮಣ್ಣ, ಕಷ್ಟಪಟ್ಟು ನಾನು ಕೇಳಿದಾಗಲೆಲ್ಲ ಉದಾರವಾಗಿ ಹಣ ಕಳುಹಿಸುತ್ತಿದ್ದುದನ್ನು ಚಿಂತಿಸಿ, ನನಗೆ ದುಃಖವಾಗುತ್ತಿದ್ದಿತು. ತಿಂಗಳಿಗೆ ಎಂಟರಿಂದ ಹದಿನೈದು ಪೌಂಡುಗಳವರೆಗೆ ಖರ್ಚುಮಾಡುತ್ತಿದ್ದ ಅನೇಕ ವಿದ್ಯಾರ್ಥಿಗಳಿಗೆ, ವಿದ್ಯಾರ್ಥಿ ವೇತನ ದೊರಕುತ್ತಿದ್ದಿತು. ನನಗಿಂತ ಹೆಚ್ಚು ಸರಳವಾಗಿ ಜೀವಿಸುತ್ತಿದ್ದವರನ್ನೂ ನಾನು ನೋಡಿದೆನು. ಒಬ್ಬ ವಿದ್ಯಾರ್ಥಿ, ಲಂಡನ್ನಿನ ಬಡವರ ಬೀದಿಯಲ್ಲಿ ವಾರಕ್ಕೆ ಎರಡು ಷಿಲಿಂಗ್ ಬಾಡಿಗೆ ಕೊಠಡಿ ತೆಗೆದುಕೊಂಡಿದ್ದ. ಲಾಕ್‌ಹಾರ್ಟ್ ಎಂಬಾತನ ಅಗ್ಗದ ಅಂಗಡಿಯಲ್ಲಿ ಒಂದು ಹೊತ್ತಿನ ಎರಡು ಪೆನ್ನಿಯ ರೊಟ್ಟಿ, ಕೋಕೋ ತೆಗೆದುಕೊಂಡು ಜೀವನ ಸಾಗಿಸುತ್ತಿದ್ದ. ಹಾಗೆ ಇರಬೇಕೆಂದು ನಾನೇನೂ ಯೋಚಿಸಲಿಲ್ಲ. ಆದರೆ "ನನಗೆ ಎರಡು ಕೊಠಡಿಗಳು ಬೇಕಿಲ್ಲ. ನನ್ನ ಊಟದಲ್ಲಿ ಅರ್ಧ ಅಡಿಗೆ ನಾನೇ ಮಾಡಿಕೊಳ್ಳಬಹುದು." ಎಂದು ಯೋಚಿಸಿದೆನು. ಇದರಿಂದ ತಿಂಗಳಿಗೆ ನಾಲ್ಕು, ಐದು ಪೌಂಡು ಉಳಿತಾಯವಾಗುತ್ತಿದ್ದಿತು. ಸರಳ ಜೀವನಕ್ಕೆ ಸಂಬಂಧಿಸಿದ ಕೆಲವು ಪುಸ್ತಕಗಳನ್ನೂ ಓದಿದೆನು. ಎರಡು ಕೊಠಡಿಯನ್ನು ಬಿಟ್ಟು, ವಾರಕ್ಕೆ ಎಂಟು ಷಿಲಿಂಗ್ ಬಾಡಿಗೆಗೆ ಒಂದು ಕೊಠಡಿಯನ್ನು ಗೊತ್ತು ಮಾಡಿಕೊಂಡೆನು. ಒಂದು ಸ್ಟೌವ್ ಕೊಂಡುಕೊಂಡು ಬೆಳಗಿನ ಅಡಿಗೆ ನಾನೇ ಮಾಡಿಕೊಳ್ಳಲು ಪ್ರಾರಂಭಿಸಿದೆನು. ಅಡಿಗೆಗೆ ಇಪ್ಪತ್ತು ನಿಮಿಷಕ್ಕಿಂತ ಹೆಚ್ಚಿಗೆ ಹಿಡಿಯುತ್ತಿರಲಿಲ್ಲ. ಗೋಧಿ ಹಿಟ್ಟಿನ ಅಂಬಲಿ ಮತ್ತು ಕೋಕೋ; ಇವಕ್ಕೆ ಇನ್ನೆಷ್ಟು ಹೊತ್ತು ಬೇಕು? ಮಧ್ಯಾಹ್ನದ ಊಟವನ್ನು ಹೋಟೆಲಿನಲ್ಲಿ ಮಾಡುತ್ತಿದ್ದೆನು. ಸಂಜೆ ಕೊಠಡಿಯಲ್ಲಿ ರೊಟ್ಟಿ ತಿಂದು ಕೋಕೋ ಕುಡಿಯುತ್ತಿದ್ದೆನು. ಈ ರೀತಿ ಒಂದು ದಿನದ ಊಟ ಒಂದೂಕಾಲು ಷಿಲಿಂಗ್‌ನಲ್ಲಿ ಮುಗಿಯುತ್ತಿದ್ದಿತು. ಆ ಸಮಯದಲ್ಲಿ ನಾನು ವಿಶೇಷವಾಗಿ ವ್ಯಾಸಂಗ ಮಾಡಿದೆನು. ಜೀವನ, ಸರಳವಾದುದರಿಂದ, ನನಗೆ

ಸಮಯ ಬೇಕಾದಷ್ಟು ದೊರೆಯಿತು. ಎರಡನೆ ಸಲ ಪರೀಕ್ಷೆಯಲ್ಲಿ ತೇರ್ಗಡೆಯಾದೆನು.

ಈ ಬಗೆಯ ಸರಳತೆಯಿಂದ ನನ್ನ ಜೀವನ ನೀರಸವಾಯಿತೆಂದು ಪಾಠಕರು ಭಾವಿಸದಿರಲಿ. ಅದರ ಬದಲು ಈ ಪರಿವರ್ತನೆಯಿಂದ ನನ್ನ ಆಂತರಿಕ ಮತ್ತು ಬಾಹ್ಯ ಜೀವನದ ಸ್ಥಿತಿಗಳಲ್ಲಿ ಏಕತೆಯುಂಟಾಯಿತು. ನನ್ನ ಆ ಜೀವನ, ನಮ್ಮ ಕುಟುಂಬದ ಸ್ಥಿತಿಗತಿಯೊಂದಿಗೆ ಸಹ ಏಕತೆಯನ್ನು ಪಡೆಯಿತು. ನನ್ನ ಜೀವನ ಅಧಿಕ ಸತ್ಯಮಯವಾಯಿತು. ನನ್ನ ಆತ್ಮಾನಂದ ಮೇರೆ ಇಲ್ಲದುದಾಯಿತು.

೧೭

ಆಹಾರ ವಿಷಯದಲ್ಲಿ ಪ್ರಯೋಗಗಳು

ನಾನು ನನ್ನನ್ನು ಆಳವಾಗಿ ಪರಿಶೋಧಿಸಿಕೊಂಡಂತೆಲ್ಲ, ನನ್ನ ಆಂತರಿಕ ಮತ್ತು ಬಾಹ್ಯ ವಿಷಯಗಳಲ್ಲಿ ಬದಲಾವಣೆ ಮಾಡಿಕೊಳ್ಳುವ ಆವಶ್ಯಕತೆ ನನಗೆ ತೋರಿತು. ನನ್ನ ವೆಚ್ಚದಲ್ಲಿಯೂ ಜೀವನ ಕ್ರಮದಲ್ಲಿಯೂ ನಾನು ಬದಲಾವಣೆಯನ್ನು ಮಾಡಿಕೊಂಡ ಕೂಡಲೇ—ಅದಕ್ಕಿಂತ ಇನ್ನೂ ಮುಂಚಿತವಾಗಿ ಸಹ—ನನ್ನ ಆಹಾರದಲ್ಲಿ ಬದಲಾವಣೆ ಮಾಡಲು ಪ್ರಾರಂಭಿಸಿದೆನು. ಶಾಕಾಹಾರದ ಮೇಲೆ ಗ್ರಂಥಗಳನ್ನು ರಚಿಸಿದ್ದ ಲೇಖಕರು, ಆ ಪ್ರಶ್ನೆಯನ್ನು ಅತ್ಯಂತ ಸೂಕ್ಷ್ಮವಾಗಿ ಧಾರ್ಮಿಕ, ವೈಜ್ಞಾನಿಕ, ವ್ಯಾವಹಾರಿಕ ಮತ್ತು ವೈದ್ಯಕೀಯ ದೃಷ್ಟಿಯಿಂದ ವಿಚಾರ ಮಾಡಿರುವುದು ನನಗೆ ಕಂಡಿತು ಅವರು ನೈತಿಕವಾಗಿ ಈ ತೀರ್ಮಾನಕ್ಕೆ ಬಂದಿದ್ದರು; "ಪ್ರಾಣಿಗಳ ಮೇಲೆ ಮನುಷ್ಯನ ಅಧಿಕಾರದ ಅಥವಾ ಆಧಿಪತ್ಯದ ಸ್ಥಾಪನೆ ಎಂದರೆ ಪ್ರಾಣಿಗಳನ್ನು ಕೊಂದು ತಿನ್ನುವುದಲ್ಲ; ಶಕ್ತರು ಅಶಕ್ತರನ್ನು ಕಾಪಾಡಬೇಕು, ಮನುಷ್ಯರು ಒಬ್ಬರನ್ನೊಬ್ಬರು ಕಾಪಾಡುವಂತೆ, ಮನುಷ್ಯರಿಗೂ ಪ್ರಾಣಿಗಳಿಗೂ ಅನ್ಯೋನ್ಯ ಸಹಾಯ ಇರಬೇಕು" ಎಂದು. ಮನುಷ್ಯನು ಆಹಾರವನ್ನು ಸೇವಿಸುವುದು ಭೋಗ

ಕ್ಕಾಗಿ ಅಲ್ಲ; ಪ್ರಾಣವನ್ನು ಉಳಿಸಿಕೊಂಡಿರುವುದಕ್ಕಾಗಿ ಎಂಬ ಸತ್ಯವನ್ನೂ ಅವರು ಸ್ಥಾಪಿಸಿದ್ದರು. ಅದರಂತೆ ಅವರಲ್ಲಿ ಕೆಲವರು, ಮಾಂಸವನ್ನು ಮಾತ್ರವೇ ಅಲ್ಲ, ಮೊಟ್ಟೆ, ಹಾಲನ್ನೂ ಸಹ ತ್ಯಜಿಸಬೇಕೆಂದು ಸೂಚಿಸಿ ತಾವೂ ಅದರಂತೆ ಆಚರಿಸುತ್ತಿದ್ದರು. ಕೆಲವರು ವೈಜ್ಞಾನಿಕವಾಗಿ ಪರೀಕ್ಷೆ ನಡೆಸಿ, "ಮನುಷ್ಯ ತನ್ನ ಆಹಾರವನ್ನು ಬೇಯಿಸಿಕೊಂಡು ತಿನ್ನಲು ಅವನ ಶರೀರದ ರಚನೆಯಾಗಿಲ್ಲ. ಕಳಿತ ಹಣ್ಣುಗಳನ್ನು ಸೇವಿಸಲು ತಕ್ಕಂತೆ ಅವನ ದೇಹದ ಸೃಷ್ಟಿಯಾಗಿದೆ. ಹಾಲು ಕುಡಿಯಬೇಕಾದರೆ ತಾಯಿಯ ಹಾಲು ಮಾತ್ರ, ಹಲ್ಲು ಬಂದ ಕೂಡಲೇ ಅಗಿಯುವ ಆಹಾರವನ್ನು ಸೇವಿಸಲು ಪ್ರಾರಂಭಿಸಬೇಕು" ಎಂಬ ತೀರ್ಮಾನಕ್ಕೆ ಬಂದಿದ್ದರು. ವೈದ್ಯಕೀಯ ದೃಷ್ಟಿಯಿಂದ ಮಸಾಲೆಗಳನ್ನೆಲ್ಲ ತ್ಯಜಿಸಬೇಕೆಂದು ಅವರು ಸೂಚಿಸಿದ್ದರು. ವ್ಯಾವಹಾರಿಕ ಮತ್ತು ಆರ್ಥಿಕ ದೃಷ್ಟಿಯಿಂದ, ಶಾಕಾಹಾರ ಅತ್ಯಂತ ಕಡಿಮೆ ವೆಚ್ಚದ ಆಹಾರವೆಂದು ಅವರು ಸಿದ್ಧಮಾಡಿ ತೋರಿಸಿದ್ದರು. ಈ ವಿಚಾರಗಳೆಲ್ಲ ನನ್ನ ಮೇಲೆ ಪರಿಣಾಮ ಉಂಟುಮಾಡಿದವು. ಶಾಕಾಹಾರದ ಹೋಟಲುಗಳಲ್ಲಿ ಈ ಎಲ್ಲ ಬಗೆಯ ಶಾಕಾಹಾರಿಗಳೂ ನನಗೆ ಸಿಕ್ಕುತ್ತಿದ್ದರು. ಇಂಗ್ಲೆಂಡಿನಲ್ಲಿ ಒಂದು ಶಾಕಾಹಾರಿ ಸಂಸ್ಥೆ ಇದ್ದಿತು. ಅವರು ತಮ್ಮದೇ ಆದ ಒಂದು ವಾರಪತ್ರಿಕೆಯನ್ನು ನಡೆಸುತ್ತಿದ್ದರು. ಆ ಪತ್ರಿಕೆಗೆ ನಾನು ಚಂದಾದಾರನಾದೆನು. ಸಂಘಕ್ಕೂ ಸದಸ್ಯನಾದೆನು. ಸ್ವಲ್ಪ ಕಾಲದೊಳಗಾಗಿ ಅದರ ಕಾರ್ಯಕಾರೀ ಸಮಿತಿ ಸದಸ್ಯನೂ ಆದೆನು. ಅಲ್ಲಿ ಶಾಕಾಹಾರ ವಾದದ ಪ್ರಮುಖರೆನ್ನಿಸಿಕೊಂಡಿದ್ದವರ ಪರಿಚಯ ನನಗೆ ಉಂಟಾಯಿತು. ನಾನೂ ಶಾಕಾಹಾರದ ಮೇಲೆ ನನ್ನ ಸ್ವಂತ ಪ್ರಯೋಗಗಳನ್ನು ಪ್ರಾರಂಭಿಸಿದೆನು.

ನಾನು ಮನೆಯಿಂದ (ಭಾರತದಲ್ಲಿ) ತರಿಸಿದ್ದ ಮಿಠಾಯಿ, ಮಸಾಲೆ ಮುಂತಾದುವುಗಳನ್ನು ತಿನ್ನುವುದನ್ನು ನಿಲ್ಲಿಸಿದೆನು. ಮನಸ್ಸು ಬೇರೆ ಕಡೆ ತಿರುಗಿದುದರಿಂದ ಮಸಾಲೆಯ ಆಸೆ ತಪ್ಪಿಹೋಯಿತು. ಮಸಾಲೆ ಇಲ್ಲದೆ ಬೇಯಿಸಿದ ಸಪ್ಪೆಯಾದ ರಿಚಮಂಡ್ ಬಸಲೆ ಸೊಪ್ಪು, ನನಗೆ ರುಚಿಸಿತು. ಅಂತಹ ಅನೇಕ ಪ್ರಯೋಗಗಳಿಂದ, ರುಚಿಯು ನಿಜವಾದ ಮೂಲ ನಾಲಗೆಯಲ್ಲ, ಮನಸ್ಸು ಎಂಬ ಪಾಠವನ್ನು ನಾನು ಕಲಿತೆನು.

ಆರ್ಥಿಕ ದೃಷ್ಟಿಯಂತೂ ಯಾವಾಗಲೂ ನನ್ನ ಎದುರಿಗೆ ಇದ್ದೇ ಇದ್ದಿತು. ಆ ಕಾಲದಲ್ಲಿ ಚಹಾ ಮತ್ತು ಕಾಫಿ ಹಾನಿಕರವೆಂದೂ, ಕೋಕೋ ಉತ್ತಮವೆಂದೂ ಸಮರ್ಥಿಸುವ ಒಂದು ಅಭಿಪ್ರಾಯದವರು ಇದ್ದರು. ಶರೀರ ವ್ಯಾಪಾರಕ್ಕೆ ಆವಶ್ಯಕವಾದ ಆಹಾರವನ್ನು ಮಾತ್ರ ತಿನ್ನಬೇಕೆಂಬುದು ನನಗೆ ಮನವರಿಕೆಯಾಗಿದ್ದುದರಿಂದ, ನಾನು ಕಾಫಿ, ಟೀಗಳನ್ನು ಪೂರ್ಣವಾಗಿ ತ್ಯಜಿಸಿ, ಅದರ ಸ್ಥಾನಕ್ಕೆ ಕೋಕೋವನ್ನು ಇಟ್ಟುಕೊಂಡೆನು.

ನಾನು ಹೋಗುತ್ತಿದ್ದ ಹೋಟಲಿನಲ್ಲಿ ಎರಡು ಭಾಗಗಳು ಇದ್ದವು. ಒಂದರಲ್ಲಿ ಬೇಕಾದ ಖಾದ್ಯ ಪದಾರ್ಥಗಳನ್ನು ತೆಗೆದುಕೊಂಡು ಅವುಗಳಿಗೆ ಬೇರೆ ಬೇರೆ ಹಣವನ್ನು ಕೊಡಬಹುದಾಗಿದ್ದಿತು. ಅಲ್ಲಿ ಒಂದು ಊಟಕ್ಕೆ ಒಂದು ಷಿಲಿಂಗ್, ಎರಡು ಷಿಲಿಂಗ್ ವೆಚ್ಚ ಬೀಳುತ್ತಿದ್ದಿತು. ಉತ್ತಮ ಸ್ಥಿತಿಯಲ್ಲಿದ್ದವರು ಮಾತ್ರ ಅಲ್ಲಿಗೆ ಹೋಗುತ್ತಿದ್ದರು. ಮತ್ತೊಂದು ಭಾಗದಲ್ಲಿ, ಮೂರು ಪದಾರ್ಥಗಳು, ಒಂದು ಚೂರು ರೊಟ್ಟಿ, ಇವುಗಳ ಊಟವನ್ನು ಆರು ಪೆನ್ನಿಗೆ ಕೊಡುತ್ತಿದ್ದರು. ನಾನು ತುಂಬ ಮಿತವ್ಯಯವನ್ನು ಅನುಸರಿಸುತ್ತಿದ್ದ ಕಾಲದಲ್ಲಿ, ಆ ಎರಡನೆಯ ಭಾಗದಲ್ಲಿ ಊಟ ಮಾಡುತ್ತಿದ್ದೆನು.

ಮುಖ್ಯವಾದ ಪ್ರಯೋಗದ ಜತೆಯಲ್ಲಿ ನಾನು ಅನೇಕ ಚಿಲ್ಲರೆ ಪ್ರಯೋಗಗಳನ್ನೂ ಜತೆಯಲ್ಲಿಯೇ ನಡೆಸುತ್ತಿದ್ದೆನು. ಉದಾಹರಣೆಗೆ, ಒಂದು ಸಮಯದಲ್ಲಿ ಪಿಷ್ಟ ಪದಾರ್ಥವನ್ನು ಬಿಡುವುದು ; ಮತ್ತೊಂದು ಸಂದರ್ಭದಲ್ಲಿ ಬರಿಯ ರೊಟ್ಟಿ ಮತ್ತು ಹಣ್ಣುಗಳಿಂದಲೇ ಜೀವಿಸುವುದು ; ಮತ್ತೊಂದು ವೇಳೆ ಕೆನೆ (Cheese) ಹಾಲು ಮತ್ತು ಮೊಟ್ಟೆಗಳನ್ನು ಮಾತ್ರ ಸೇವಿಸುವುದು ; ಇವುಗಳಲ್ಲಿ ಕೊನೆಯ ಪ್ರಯೋಗ ಉಲ್ಲೇಖಾರ್ಹವಾಗಿದೆ. ಪಿಷ್ಟರಹಿತ ಆಹಾರವನ್ನು ಸೇವಿಸಬೇಕೆಂದು ಪ್ರಚಾರ ಮಾಡಿದ ಸುಧಾರಕ, ಮೊಟ್ಟೆಯು ಉತ್ತಮವಾದ ಆಹಾರವೆಂದು ಹೇಳುತ್ತಿದ್ದುದಲ್ಲದೆ, ಅದು ಮಾಂಸವೇ ಅಲ್ಲವೆಂದು ಸಾಧಿಸುತ್ತಿದ್ದನು. ಮೊಟ್ಟೆಗಳನ್ನು ತಿನ್ನುವುದರಿಂದ ಯಾವ ಪ್ರಾಣಿಗೂ ಹಿಂಸೆ ಇಲ್ಲವೆಂಬ ಮಾತು ಸ್ವತಃಸಿದ್ಧವಾಗಿದ್ದಿತು. ಈ ಸಮರ್ಥನೆಗೆ ಸೋತು, ನನ್ನ ತಾಯಿಗೆ ಕೊಟ್ಟಿದ್ದ ಮಾತಿಗೆ ವಿರುದ್ಧವಾಗಿ ನಾನು ಮೊಟ್ಟೆಗಳನ್ನು ತಿಂದೆನು. ಆದರೆ ನಾನು ಹಾಗೆ

ಪ್ರಜ್ಞೆ ತಪ್ಪಿದುದು ತಾತ್ಕಾಲಿಕವಾಗಿದ್ದಿತು. ನಾನು ತಾಯಿಗೆ ಕೊಟ್ಟಿದ್ದ ಪ್ರತಿಜ್ಞೆಗೆ, ನನಗೆ ಇಷ್ಟಬಂದಂತೆ ಈ ಹೊಸ ಅರ್ಥವನ್ನು ಹಾಕಲು, ನನಗೆ ಅಧಿಕಾರವಿರಲಿಲ್ಲ. ನನ್ನಿಂದ ಪ್ರತಿಜ್ಞೆಮಾಡಿಸಿದಾಗ, ನಮ್ಮ ತಾಯಿ ಅದಕ್ಕೆ ಕೊಟ್ಟ ಅರ್ಥ ನನಗೆ ತಿಳಿದಿದ್ದಿತು. ಆಕೆಯ ಅರ್ಥದಂತೆ ಮಾಂಸವೆಂದರೆ ಮೊಟ್ಟೆ ಸಹ. ಹೀಗೆ ಆ ಪ್ರತಿಜ್ಞೆಯ ರಹಸ್ಯ ನನ್ನ ಮನಸ್ಸಿಗೆ ಬಂದ ಕೂಡಲೇ, ನಾನು ಮೊಟ್ಟೆಗಳನ್ನು ತ್ಯಜಿಸಿದೆನು. ಅದಕ್ಕೆ ಸಂಬಂಧಿಸಿದಂತೆ ಪ್ರಯೋಗಗಳನ್ನೂ ತ್ಯಜಿಸಿದೆನು.

ಈ ಚರ್ಚೆಯೊಳಗೆ ಅಡಗಿರುವ ಒಂದು ವಿಷಯ ಸೂಕ್ಷ್ಮವೂ ವಿಚಾರಯೋಗ್ಯವೂ ಆಗಿದೆ. ಇಂಗ್ಲೆಂಡಿನಲ್ಲಿ ಮಾಂಸದ ಮೂರು ಬಗೆಯ ಪ್ರಕಾರಗಳಿರುವುದು ನನ್ನ ಲಕ್ಷ್ಯಕ್ಕೆ ಬಂದಿತು. ಮೊದಲನೆಯದು ಮಾಂಸವೆಂದರೆ ಪಶುಪಕ್ಷಿಗಳ ಮಾಂಸ. ಆ ಪ್ರಕಾರವನ್ನು ಮಾನ್ಯ ಮಾಡಿದ ಶಾಕಾಹಾರಿಗಳು ಮಾಂಸಾಹಾರಗಳನ್ನು ತ್ಯಜಿಸಿದರು. ಆದರೆ ಅವರು, ಮೊಟ್ಟೆ ಮಾತ್ರವೇ ಅಲ್ಲ, ಮೀನುಗಳನ್ನೂ ತಿನ್ನುತ್ತಿದ್ದರು. ಮಾಂಸದ ಎರಡನೆಯ ಪ್ರಕಾರದಂತೆ, ಮಾಂಸವೆಂದರೆ ಜೀವವಿರುವ ಎಲ್ಲ ಪ್ರಾಣಿಗಳ ಮಾಂಸವೂ ಎಂದು ಅರ್ಥವಾಗುತ್ತಿದ್ದಿತು. ಆದುದರಿಂದ ಆ ಪ್ರಕಾರಕ್ಕನುಸಾರವಾಗಿ, ಮೀನನ್ನು ತಿನ್ನಬಾರದು, ಮೊಟ್ಟೆಯನ್ನು ತಿನ್ನಬಹುದು. ಮೂರನೆಯ ಪ್ರಕಾರದಂತೆ ಮಾಂಸವೆಂದರೆ ಪ್ರಾಣವಿರುವ ಎಲ್ಲ ಪ್ರಾಣಿಗಳು ಮತ್ತು ಅವುಗಳಿಂದ ಆಗತಕ್ಕ ಪದಾರ್ಥಗಳೂ ಸಹ. ಅಂದರೆ ಮೊಟ್ಟೆ ಹಾಲು ಸಹ ಮಾಂಸವೇ. ಮೊದಲನೆಯ ಪ್ರಕಾರವನ್ನು ನಾನು ಅಂಗೀಕರಿಸಿದರೆ ಎಲ್ಲ ಪ್ರಾಣಿಗಳ ಮಾಂಸವನ್ನೂ ಹಾಲು, ಮೊಟ್ಟೆ ಮುಂತಾದ ಅವುಗಳ ಉತ್ಪನ್ನಗಳನ್ನೂ ತೆಗೆದುಕೊಳ್ಳಬಹುದಾಗಿದ್ದಿತು. ಆದರೆ ನಮ್ಮ ತಾಯಿ ಪ್ರತಿಜ್ಞೆ ಮಾಡಿಸುವಾಗ, ಯಾವ ಅರ್ಥದಲ್ಲಿ ಮಾಡಿಸಿದ್ದಳೋ ನನಗೆ ಅದೇ ನ್ಯಾಯವಾದ ಅರ್ಥವೆಂದು, ದೃಢವಾಗಿ ಮನವರಿಕೆಯಾಗಿದ್ದಿತು. ಆದುದರಿಂದ ಮೊಟ್ಟೆಗಳನ್ನು ಬಿಡಬೇಕಾಯಿತು. ನಾನು ಹಾಗೆಯೇ ಮಾಡಿದೆನು. ಇದು ಬಹಳ ಕಠಿಣವಾಯಿತು. ಏಕೆಂದರೆ ಶಾಕಾಹಾರ ಭೋಜನಾಲಯಗಳಲ್ಲಿಯೂ, ಅನೇಕ ಫಲಹಾರಗಳಿಗೆ ಮೊಟ್ಟೆಗಳನ್ನು ಉಪಯೋಗಿಸುತ್ತಿದ್ದ

ರೆಂಬುದು ನನಗೆ ಗೊತ್ತಾಯಿತು. ಅಂದರೆ ಯಾವ ಫಲಾಹಾರದಲ್ಲಿ ಯಾವ ಯಾವ ವಸ್ತುಗಳಿವೆ ಎಂದು ನನಗೆ ತಿಳಿದಿರಬೇಕಾಗಿದ್ದಿತು ಇಲ್ಲವಾದರೆ ನಾನು ಹೋದೆಡೆಗಳಲ್ಲೆಲ್ಲ ಫಲಾಹಾರದಲ್ಲಿ ಯಾವ ಯಾವ ಪದಾರ್ಥ ಸೇರಿದೆ ಎಂದು ಸಂಕೋಚದಿಂದ ವಿಚಾರಿಸುತ್ತಲೇ ಇರಬೇಕಾಗುತ್ತಿದ್ದಿತು. ಏಕೆಂದರೆ ಅನೇಕ ಬಗೆಯ ಕಡಬು, ದೋಸೆ (Cake) ಗಳಲ್ಲಿ ಮೊಟ್ಟೆಗಳು ಸೇರಿರುತ್ತಿದ್ದವು, ನನ್ನ ಕರ್ತವ್ಯಜ್ಞಾನ ಜಾಗ್ರತವಾಗಿದ್ದುದರಿಂದ ನನಗೆ ಈ ತೊಂದರೆಯುಂಟಾದರೂ, ಇದರಿಂದ ನನ್ನ ಆಹಾರ ಸರಳವಾಯಿತು. ಹೀಗೆ ಆಹಾರವನ್ನು ಸರಳವಾಗಿ ಮಾಡಿಕೊಂಡುದರಿಂದ, ಅಭ್ಯಾಸವಾಗಿದ್ದ ಅನೇಕ ತಿಂಡಿಗಳನ್ನು ಬಿಡಬೇಕಾಗಿ ಬಂದು ನನಗೆ ಮನಃಕ್ಲೇಶವುಂಟಾಯಿತು. ಆದರೆ ಆ ಕಷ್ಟ ಕ್ಷಣಿಕವಾಗಿದ್ದಿತು. ಪ್ರತಿಜ್ಞಾಪಾಲನೆಯ ಸೂಕ್ಷ್ಮವಾದ, ಸ್ಥಿರವಾದ, ಸ್ವಚ್ಛವಾದ ಸವಿ, ನನಗೆ ಉಂಟಾದ ಕ್ಷಣಿಕ ಕಷ್ಟಕ್ಕಿಂತ ಅಧಿಕ ಪ್ರಿಯವಾಗಿದ್ದಿತು.

ಆದರೆ ನಿಜವಾದ ಪರೀಕ್ಷೆ ಮುಂದೆ ಬರುವುದಾಗಿದ್ದಿತು. ಅದು ಎರಡನೆಯ ವ್ರತಕ್ಕೆ ಸಂಬಂಧಿಸಿದುದಾಗಿತ್ತು. ಆದರೆ ದೇವರು ರಕ್ಷಿಸುವವರಿಗೆ ಯಾರು ಕೆಡಕು ಮಾಡಬಲ್ಲರು!

ವ್ರತ ಅಥವಾ ಪ್ರತಿಜ್ಞೆಗಳನ್ನು ಕುರಿತು ಕೆಲವು ವಿಚಾರಗಳನ್ನು ಇಲ್ಲಿ ಹೇಳುವುದು ಅಪ್ರಕೃತವಾಗಲಾರದು. ವ್ರತ ಅಥವಾ ಪ್ರತಿಜ್ಞೆಯ ಅರ್ಥವೇನು ಎಂಬುದರ ಚರ್ಚೆಯಿಂದ ಜಗತ್ತಿನಲ್ಲಿ ಬೇಕಾದಂತೆ ವಾಗ್ವಾದ ನಡೆಯುತ್ತಿದೆ. ಪ್ರತಿಜ್ಞೆ ಎಷ್ಟೇ ಸ್ಪಷ್ಟವಾಗಿರಲಿ, ಜನರು ತಮ್ಮ ಉದ್ದೇಶಕ್ಕೆ ಅನುಕೂಲವಾಗುವಂತೆ ಅದನ್ನು ತಿರುಗಿಸಿಕೊಳ್ಳುತ್ತಾರೆ. ಈ ಬಗೆಯ ಜನ, ಸಮಾಜದ ಎಲ್ಲ ವರ್ಗದಲ್ಲಿಯೂ ಇದ್ದಾರೆ; ಧನಿಕರಲ್ಲಿ, ಬಡವರಲ್ಲಿ, ರಾಜರಲ್ಲಿ, ರೈತರಲ್ಲಿ ಎಲ್ಲೆಲ್ಲಿಯೂ ಇದ್ದಾರೆ. ಸ್ವಾರ್ಥ ಅವರ ಕಣ್ಣು ಮುಚ್ಚಿದೆ. ಪ್ರತಿಜ್ಞೆಯ ನಾನಾರ್ಥದ ಮಧ್ಯಮಾರ್ಗವನ್ನು ಉಪಯೋಗಿಸಿಕೊಂಡು, ಅವರು ತಮ್ಮನ್ನೂ ಜಗತ್ತನ್ನೂ ದೇವರನ್ನೂ ಮೋಸಗೊಳಿಸುತ್ತಾರೆ. ನಾವು ಅಂಗೀಕರಿಸಬೇಕಾದ ಸುವರ್ಣ ನಿಯಮ ಒಂದೇ; ನಮ್ಮಿಂದ ಪ್ರತಿಜ್ಞೆ ಮಾಡಿಸಿದವನು, ಆ ಪ್ರತಿಜ್ಞೆಗೆ ಪ್ರಾಮಾಣಿಕವಾಗಿ ಯಾವ ಅರ್ಥವನ್ನು

ಇಟ್ಟಿದ್ದರೋ, ಆ ಅರ್ಥವನ್ನು ಅಂಗೀಕರಿಸುವುದು. ಎಡನೆಯದು ಎರಡು ಅರ್ಥವಾಗುವ ಅವಕಾಶವಿದ್ದಲ್ಲಿ, ದುರ್ಬಲ ಪಕ್ಷದವರ ವಾದವನ್ನೇ ಒಪ್ಪುವುದು. ಈ ಎರಡು ಉತ್ತಮ ನಿಯಮಗಳನ್ನೂ ತಿರಸ್ಕರಿಸಿ ನಡೆಯುವುದರಿಂದ ಅನ್ಯಾಯವಲ್ಲದೆ ಹೋರಾಟ, ಅಸತ್ಯ ಸಂಭವಿಸುತ್ತವೆ. ಸತ್ಯವನ್ನೇ ಅನ್ವೇಷಣೆ ಮಾಡುವವನು ಸುಲಭವಾಗಿ ಸುವರ್ಣ ನಿಯಮವನ್ನು ಅನುಸರಿಸುತ್ತಾನೆ. ತನ್ನ ಅರ್ಥದಂತೆ ನಡೆಯಲು ಅವನಿಗೆ ವಿದ್ವಾಂಸರ ಸಲಹೆ ಆವಶ್ಯಕವಿಲ್ಲ. ಸುವರ್ಣ ನಿಯಮಕ್ಕೆ ಅನುಗುಣವಾಗಿ, ಪ್ರತಿಜ್ಞೆಗೆ ನಮ್ಮ ತಾಯಿ ಕೊಟ್ಟ ಅರ್ಥವೇ ನನಗೆ ನಿಜವಾದ ಅರ್ಥವಾಗಿದ್ದಿತೇ ಹೊರತು, ನನ್ನ ವಿಶಾಲ ಅನುಭವ, ನಾನು ಹೆಚ್ಚು ವಿದ್ಯಾವಂತನೆಂಬ ಹೆಮ್ಮೆಯಿಂದ ಮಾಡಿಕೊಂಡ ಅರ್ಥವಲ್ಲ ಅದು.

ಇಂಗ್ಲೆಂಡಿನಲ್ಲಿ ಆವರೆಗೆ ನಾನು ಅನುಸರಿಸಿದ ಪ್ರಯೋಗಗಳು, ಮಿತವ್ಯಯ ಮತ್ತು ಆರೋಗ್ಯ ದೃಷ್ಟಿಯಿಂದ ನಡೆಸಿದುವಾಗಿದ್ದವು. ನಾನು ದಕ್ಷಿಣ ಆಫ್ರಿಕಾಕ್ಕೆ ಹೋಗುವವರೆಗೆ, ಧಾರ್ಮಿಕ ದೃಷ್ಟಿಯಿಂದ ಅವನ್ನು ರೂಪಿಸಿರಲಿಲ್ಲ. ದಕ್ಷಿಣ ಆಫ್ರಿಕಾದಲ್ಲಿ ನನ್ನ ಪ್ರಯೋಗಗಳು ಇನ್ನೂ ಕಠಿಣವಾದುವು. ಅವುಗಳ ವಿಚಾರ ಮುಂದೆ. ಆದರೆ ಆ ಎಲ್ಲ ಪ್ರಯೋಗಗಳ ಬೀಜಾಂಕುರ, ಇಂಗ್ಲೆಂಡಿನಲ್ಲಿರುವಾಗಲೇ ಆಯಿತು.

ಮತಾಂತರ ಹೊಂದಿದವನಿಗೆ, ತನ್ನ ಹೊಸಧರ್ಮದಲ್ಲಿ ಅದೇ ಧರ್ಮದಲ್ಲಿ ಜನಿಸಿದವನಿಗಿಂತ ಹೆಚ್ಚು ಉತ್ಸಾಹವಿರುತ್ತದೆ. ಶಾಕಾಹಾರ ಪದ್ಧತಿ, ಇಂಗ್ಲೆಂಡಿನಲ್ಲಿ ಹೊಸ ಪದ್ಧತಿಯಾಗಿದ್ದಿತು. ಅದು ನನಗೂ ಹೊಸದೇ ಆಗಿದ್ದಿತು. ಏಕೆಂದರೆ ಈಗಾಗಲೇ ತಿಳಿಸಿರುವಂತೆ ಇಂಗ್ಲೆಂಡಿಗೆ ಹೋಗುವ ವೇಳೆಗೆ ನಾನು ಮಾಂಸಾಹಾರಕ್ಕೆ ಮನವೊಲಿದವನಾಗಿದ್ದೆನು. ಅನಂತರ ಶಾಕಾಹಾರ ಉತ್ತಮವಾದುದೆಂಬುದು ನನ್ನ ಬುದ್ಧಿಗೆ ಒಪ್ಪಿಗೆಯಾಯಿತು. ಮತಾಂತರಗೊಂಡವನ ಹೊಸ ಉತ್ಸಾಹದಿಂದ, ನಾನು ವಾಸವಾಗಿದ್ದ ಬೇಸ್‌ವಾಟರ್ ಎಂಬ ಭಾಗದಲ್ಲಿ ಒಂದು ಶಾಕಾಹಾರಿ ಮಂಡಲವನ್ನು ಸ್ಥಾಪಿಸಲು ನಾನು ನಿಶ್ಚಯಿಸಿದೆನು. ಅಲ್ಲಿ ವಾಸಿಸುತ್ತಿದ್ದ ಸರ್ ಎಡ್ವಿನ್ ಆರ್ನಾಲ್ಡರನ್ನು ಅದರ ಉಪಾಧ್ಯಕ್ಷರಾಗಿರಲು ನಾನು ಆಹ್ವಾನಿಸಿದೆನು. ಶಾಕಾಹಾರಿ ಎಂಬ ಪತ್ರಿಕೆಯ ಸಂಪಾದಕರಾಗಿದ್ದ ಡಾಕ್ಟರ್

ಓಲ್ಡ್‌ಫಿಲ್ಡ್‌ರು (Old Field) ಮಂಡಳದ ಅಧ್ಯಕ್ಷರಾದರು. ನಾನೇ ಕಾರ್ಯದರ್ಶಿಯಾದೆನು. ಮಂಡಲಿ ಕೆಲವು ಕಾಲ ಚೆನ್ನಾಗಿ ನಡೆಯಿತು. ಆದರೆ ಕೆಲವು ತಿಂಗಳುಗಳೊಳಗಾಗಿ ಅದರ ಚಟುವಟಿಕೆಗಳು ಮುಕ್ತಾಯ ವಾದುವು. ಕ್ಲಿಷ್ಟ ಕಾಲದಲ್ಲಿ ಸ್ಥಳದಿಂದ ಸ್ಥಳಕ್ಕೆ ಬದಲಾಯಿಸುವ ನನ್ನ ನಿಯಮದಂತೆ ನಾನು ಆ ಭಾಗವನ್ನು ಬಿಟ್ಟು ಬೇರೆ ಕಡೆಗೆ ಬದಲಾಯಿಸಿ ದುದೇ ಇದಕ್ಕೆ ಕಾರಣ. ಆದರೆ ಈ ಅಲ್ಪಕಾಲದ ಮತ್ತು ಮಿತವಾದ ಅನುಭವ, ಸಂಸ್ಥೆಗಳನ್ನು ಕಟ್ಟುವುದರಲ್ಲಿಯೂ ಅವುಗಳನ್ನು ನಡೆಸುವುದ ರಲ್ಲಿಯೂ, ನನಗೆ ಸ್ವಲ್ಪ ತಯಾರಿ ಕೊಟ್ಟಿತು.

೧೮

ಲಜ್ಜೆಯೇ ನನ್ನ ರಕ್ಷಕ

ನಾನು ಶಾಕಾಹಾರಿ ಮಂಡಲಿಯ ಕಾರ್ಯಕಾರೀ ಸಮಿತಿಯ ಸದಸ್ಯನಾಗಿ ಆರಿಸಲ್ಪಟ್ಟೆನು. ಅದರ ಪ್ರತಿಯೊಂದು ಸಭೆಗೂ ನಾನು ತಪ್ಪದೆ ಹಾಜ ರಾಗುತ್ತಿದ್ದೆನು. ಆದರೆ ಸಭೆಯಲ್ಲಿ ನನ್ನ ಬಾಯಿನಿಂದ ಮಾತುಗಳೇ ಹೊರಡುತ್ತಿರಲಿಲ್ಲ. ಒಮ್ಮೆ ಓಲ್ಡ್‌ಫೀಲ್ಡ್‌ರು ನನಗೆ ಹೀಗೆ ಹೇಳಿದರು : “ನೀನು ನನ್ನೊಂದಿಗೆ ಚೆನ್ನಾಗಿ ಮಾತಾಡುತ್ತಿ, ಆದರೆ ಸಮಿತಿಯ ಸಭೆ ಗಳಲ್ಲಿ ನೀನು ತುಟಿಯನ್ನೇ ಬಿಚ್ಚುವುದಿಲ್ಲ ; ಯಾಕೆ ? ನೀನೊಂದು ಗಂಡು ಜೇನು !” ಎಂದು. ಅವರ ವಿನೋದಭಾವ ನನಗೆ ಅರ್ಥವಾಯಿತು. ಜೇನು ಹುಳುಗಳು ಯಾವಾಗಲೂ ಚಟುವಟಿಕೆಯುಳ್ಳವುಗಳಾಗಿರುತ್ತವೆ. ಆದರೆ ಗಂಡು ಜೇನು ಶುದ್ಧ ಸೋಮಾರಿ. ಸಮಿತಿಯ ಸಭೆಗಳಲ್ಲಿ ಎಲ್ಲರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿರುವಾಗ, ನಾನೊ ಬ್ಬನೇ ಬಾಯಿ ಮುಚ್ಚಿಕೊಂಡು ಕುಳಿತುಕೊಂಡಿರುವುದು ವಿಚಿತ್ರವಾಗಿತ್ತು. ನನಗೆ ಮಾತನಾಡುವ ಚಾಪಲ್ಯ ಉಂಟಾಗಲಿಲ್ಲವೆಂದಲ್ಲ. ನನ್ನ ಅಭಿಪ್ರಾಯ ಗಳನ್ನು ವ್ಯಕ್ತಪಡಿಸುವ ಮಾತುಗಳು ನನ್ನಲ್ಲಿ ಇರುತ್ತಿರಲಿಲ್ಲ. ಉಳಿದ ಸದಸ್ಯರೆಲ್ಲ ನನಗಿಂತ ಹೆಚ್ಚು ತಿಳಿದವರಾಗಿ ನನಗೆ ತೋರಿದರು. ಅನೇಕ ವೇಳೆ ಹೀಗೂ ಆಗುತ್ತಿದ್ದಿತು ; ಒಂದು ವಿಷಯದ ಮೇಲೆ ಮಾತನಾಡೋಣ

ಎಂದು ನಾನು ಧೈರ್ಯಮಾಡಿ ಬಾಯಿ ತೆರೆಯುವುದರೊಳಗಾಗಿ, ಮುಂದಿನ ವಿಷಯ ಪ್ರಾರಂಭವಾಗಿ ಬಿಡುತ್ತಿದ್ದಿತು. ಬಹು ಕಾಲ ಹೀಗೆ ನಡೆಯಿತು.

ಈ ಮಧ್ಯೆ ಒಂದು ಗಂಭೀರ ವಿಷಯ ಸಮಿತಿಯಲ್ಲಿ ಚರ್ಚೆಗೆ ಬಂದಿತು. "ಈ ದಿನ ಸಭೆಗೆ ಹೋಗದಿರುವುದು ತಪ್ಪು, ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸದಿರುವುದು ಹೇಡಿತನ" ಎಂದು ನನಗೆ ತೋರಿತು. ಚರ್ಚೆ ಪ್ರಾರಂಭವಾದುದು ಹೀಗೆ; ಆ ಮಂಡಲಿಯ ಅಧ್ಯಕ್ಷರು ಮಿ. ಹಿಲ್ಸ್ (Hills) ಎಂಬುವವರು. ಅವರು ಥೇಮ್ಸ್‌ಗೆ ಕಬ್ಬಿಣದ ಕಾರ್ಖಾನೆಯ ಒಡೆಯರಾಗಿದ್ದರು. ಅವರು ನಿಷ್ಠುರ ನೀತಿವಾದಿಗಳಾಗಿದ್ದರು. ಆ ಶಾಕಾಹಾರಿ ಮಂಡಲ ನಡೆಯುತ್ತಿದ್ದುದು ಪೂರ್ಣವಾಗಿ ಅವರ ಆರ್ಥಿಕ ಸಹಾಯದಿಂದಲೇ ಎಂದು ಹೇಳಬಹುದು. ಸಮಿತಿಯ ಅನೇಕ ಸದಸ್ಯರು ಬಹುಮಟ್ಟಿಗೆ ಅವರ ಪೋಷಣೆಗೆ ಒಳಪಟ್ಟವರೇ ಆಗಿದ್ದರು. ಶಾಕಾಹಾರಕ್ಕಾಗಿ ಪ್ರಸಿದ್ಧರಾಗಿರುವ ಡಾಕ್ಟರ್ ಆಲಿಸನ್‌ರೂ ಸಹ ಸಮಿತಿಯ ಸದಸ್ಯರಾಗಿದ್ದರು. ಅವರು ಆಗತಾನೇ ಹೊಸದಾಗಿ ಪ್ರಾರಂಭವಾಗಿದ್ದ, ಕೃತಕಸಂತಾನ ನಿರೋಧ ಚಳುವಳಿಯನ್ನು ಒಪ್ಪಿ, ಆ ವಿಧಾನಗಳನ್ನು ಕೂಲಿಗಾರರಿಗೆ ಬೋಧಿಸುತ್ತಿದ್ದರು. ಸಂತಾನ ನಿರೋಧ ಕೃತಕೋಪಾಯಗಳು, ಜನರ ನೀತಿಯನ್ನು ಮೂಲೋತ್ಪಟನ ಮಾಡುವುವೆಂದು ಮಿ. ಹಿಲ್ಸ್‌ರು ಭಾವಿಸಿದ್ದರು. "ಶಾಕಾಹಾರಿ ಮಂಡಲಿಯ ಕಾರ್ಯ, ಬರಿಯ ಆಹಾರದ ವಿಷಯ ಮಾತ್ರವಲ್ಲ, ಮನುಷ್ಯನ ನೈತಿಕ ಸುಧಾರಣೆಯೂ ಅದರ ಉದ್ದೇಶ" ಎಂಬುದು ಮಿ. ಹಿಲ್ಸ್‌ರ ಅಭಿಪ್ರಾಯವಾಗಿದ್ದಿತು. ಡಾಕ್ಟರ್ ಆಲಿಸನ್‌ರನ್ನು ಮಂಡಲದ ಸದಸ್ಯತ್ವದಿಂದ ತೆಗೆದು ಹಾಕಬೇಕೆಂಬ ಒಂದು ಸೂಚನೆ ಸಮಿತಿಯ ಮುಂದೆ ಬಂದಿತು. ಈ ಪ್ರಶ್ನೆಯಲ್ಲಿ ನನಗೂ ತುಂಬ ಅಭಿರುಚಿಯೂ ಕುತೂಹಲವೂ ಇದ್ದಿತು. ಕೃತಕ ಗರ್ಭನಿರೋಧಕ ಕ್ರಮಗಳನ್ನು ಕುರಿತ ಡಾಕ್ಟರ್ ಆಲಿಸನ್‌ರ ಅಭಿಪ್ರಾಯಗಳು, ಅಪಾಯಕರವೆಂದು ನಾನು ಭಾವಿಸಿದ್ದೆನು. ನಿಷ್ಠುರ ನೀತಿ ಪ್ರಚಾರಕರಾದ ಮಿ. ಹಿಲ್ಸ್‌ರವರು ಆಲಿಸನ್‌ರ ಅಭಿಪ್ರಾಯಗಳನ್ನು ವಿರೋಧಿಸಿದುದು ಸರಿ ಎಂಬುದು ನನ್ನ ಮತವಾಗಿದ್ದಿತು. ಮಿ. ಹಿಲ್ಸ್‌ರಲ್ಲಿಯೂ ಅವರ ದಾತೃತ್ವದಲ್ಲಿಯೂ ನನಗೆ ತುಂಬ ಗೌರವವಿದ್ದಿತು. ಅವರ ನಿಷ್ಠುರವಾದ ನೀತಿಪ್ರಚಾರ, ಶಾಕಾ

ಹಾರಿ ಮಂಡಲಿಯ ಉದ್ದೇಶಗಳಲ್ಲಿ ಒಂದಲ್ಲ ಎಂಬ ಅಭಿಪ್ರಾಯವನ್ನು ಹೊಂದಿದ್ದ ಮಾತ್ರಕ್ಕೇ, ಅವರನ್ನು ಶಾಕಾಹಾರಿ ಮಂಡಲಿಯ ಸದಸ್ಯತ್ವ ದಿಂದ ತೆಗೆದುಹಾಕುವುದು ನ್ಯಾಯವಲ್ಲವೆಂಬುದು ನನ್ನ ಅಭಿಪ್ರಾಯ ವಾಗಿದ್ದಿತು. ನೀತಿ ಪ್ರತಿಪಾದಕರಲ್ಲದವರನ್ನು ಶಾಕಾಹಾರಿ ಸಂಘದ ಸದಸ್ಯತ್ವ ದಿಂದ ತೆಗೆದುಹಾಕಬೇಕೆಂಬ ಅಭಿಪ್ರಾಯ ಮಿ. ಹಿಲ್ಸರಿಗೆ ಇದ್ದರೂ, ಅದು ಅವರ ಸ್ವಂತ ಅಭಿಪ್ರಾಯವಾಗಿದ್ದಿತೇ ಹೊರತು ಅದಕ್ಕೂ ಶಾಕಾಹಾರಿ ಮಂಡಲಿಯ ಪ್ರಕಟಿತ ಉದ್ದೇಶಗಳಿಗೂ ಯಾವ ಸಂಬಂಧವೂ ಇರಲಿಲ್ಲ. ಶಾಕಾಹಾರಿ ಮಂಡಲಿಯ ಧ್ಯೇಯ, ಶಾಕಾಹಾರವನ್ನು ಪ್ರಚಾರ ಮಾಡು ವುದಾಗಿದ್ದಿತೇ ಹೊರತು, ಯಾವ ನೈತಿಕ ಕ್ರಮವನ್ನೂ ಬೋಧಿಸುವುದಾಗಿ ರಲಿಲ್ಲ. ಆದುದರಿಂದ ನನ್ನ ಅಭಿಪ್ರಾಯ ಹೀಗಿದ್ದಿತು ; ಯಾವ ಶಾಕಾಹಾರಿ ಯಾದರೂ ಸರಿಯೆ ಇತರ ನೀತಿಗಳನ್ನು ಕುರಿತು ಅವನ ಅಭಿಪ್ರಾಯ ಏನೇ ಇರಲಿ, ಶಾಕಾಹಾರಿ ಮಂಡಲಿಯ ಸದಸ್ಯನಾಗಿರಬಹುದು.

ಸಮಿತಿಯಲ್ಲಿ ನನ್ನ ಅಭಿಪ್ರಾಯವನ್ನು ಒಪ್ಪಿದ ಇತರ ಸದಸ್ಯರೂ ಇದ್ದರು. ಆದರೆ ನನ್ನ ಸ್ವಂತ ಅಭಿಪ್ರಾಯವನ್ನು ನಾನೇ ವ್ಯಕ್ತಪಡಿಸುವುದು ಸರಿ ಎಂದು ನನಗೆ ತೋರಿತು. ವ್ಯಕ್ತಪಡಿಸುವುದು ಹೇಗೆ ?—ಎಂಬುದು ಪ್ರಶ್ನೆಯಾಯಿತು. ಸಭೆಯಲ್ಲಿ ಮಾತನಾಡಲು ನನಗೆ ಧೈರ್ಯವಿರಲಿಲ್ಲ. ಆದುದರಿಂದ ನಾನು ನನ್ನ ಭಾಷಣವನ್ನು ಬರೆದು ಇಟ್ಟುಕೊಂಡೆನು. ಜೇಬಿನಲ್ಲಿ ಆ ಕಾಗದವನ್ನು ಇಟ್ಟುಕೊಂಡು ನಾನು ಸಭೆಗೆ ಹೋದೆನು. ನನಗೆ ಜ್ಞಾಪಕವಿರುವ ಮಟ್ಟಿಗೆ ಅದನ್ನು ಓದುವುದಕ್ಕೆ ಸಹ ನನಗೆ ಧೈರ್ಯ ವಾಗಲಿಲ್ಲ. ಅಧ್ಯಕ್ಷರು ಅದನ್ನು ಯಾರಿಂದಲೊ ಓದಿಸಿದರು. ಡಾಕ್ಟರ್ ಆಲಿಸನ್‌ರಿಗೆ ಸೋಲಾಯಿತು. ಹೀಗೆ ನನ್ನ ಮೊದಲನೆಯ ಹೋರಾಟ ದಲ್ಲಿಯೇ, ನಾನು ಸೋಲುವ ಪಕ್ಷಕ್ಕೆ ಸೇರುವವನಾದೆನು. ನಾನು ನ್ಯಾಯ ಪಕ್ಷಕ್ಕೆ ಹೋರಾಡಿದೆ—ಎಂಬ ಭಾವನೆಯಿಂದ ನನಗೆ ಸ್ವಲ್ಪ ಸಮಾಧಾನ ವಾಯಿತು. ಈ ಸಂಗತಿ ನಡೆದ ನಂತರ, ನಾನು ಸಮಿತಿಗೆ ರಾಜಿನಾಮೆ ಕೊಟ್ಟೆನೆಂದು ಅಲ್ಪ ಸ್ವಲ್ಪ ನೆನಪಿದೆ.

ಈ ಮುಖಹೇಡಿತನ, ನಾನು ಇಂಗ್ಲೆಂಡಿನಲ್ಲಿರುವವರೆಗೂ ಇದ್ದೇ

ಇದ್ದಿತು. ಯಾರನ್ನಾದರೂ ಸ್ವಾಭಾವಿಕವಾಗಿ ನೋಡುವುದಕ್ಕೆ ಹೋದಾಗ, ಅಲ್ಲಿ ನಾಲ್ಕಾರು ಜನರಿದ್ದರೆ ನನ್ನ ಬಾಯಿನಿಂದ ಮಾತೇ ಹೊರಡುತ್ತಿರಲಿಲ್ಲ.

ನಾನು ಒಂದು ಸಲ, ಶ್ರೀ ಮಜುಂದಾರರೊಡನೆ ವೆಂಟನಾರ್ ಎಂಬಲ್ಲಿಗೆ ಹೋದೆನು. ಅಲ್ಲಿ ನಾವು ಒಂದು ಶಾಕಾಹಾರಿ ಕುಟುಂಬದಲ್ಲಿ ಇಳಿದು ಕೊಂಡೆವು. ಎಥಿಕ್ಸ್ ಆಫ್ ಡಯಟ್ (ಆಹಾರ ನೀತಿ) ಎಂಬ ಪುಸ್ತಕವನ್ನು ಬರೆದ ಹೋವರ್ಡ್ (Howard) ಸಹ ಈ ಜಲಕ್ಷೇತ್ರದಲ್ಲಿ ಇದ್ದರು. ಅವರನ್ನು ನಾವು ಭೇಟಿಯಾದೆವು. ಶಾಕಾಹಾರ ಪ್ರಚಾರದ ಒಂದು ಸಭೆಯಲ್ಲಿ ನಾವು ಭಾಷಣ ಮಾಡಬೇಕೆಂದು ಅವರು ಆಹ್ವಾನಿಸಿದರು. ಭಾಷಣವನ್ನು ಬರೆದುಕೊಂಡು ಹೋಗಿ ಓದುವುದು ತಪ್ಪಲ್ಲ ಎಂದು ನಾನು ವಿಚಾರಿಸಿ ತಿಳಿದು ಕೊಂಡಿದ್ದೆನು. ಅನೇಕ ಭಾಷಣಕಾರರು ತಮ್ಮ ಭಾಷಣ ಸುಸಂಗತ ವಾಗಿಯೂ ಸೂಕ್ಷ್ಮವಾಗಿಯೂ ಇರುವುದಕ್ಕಾಗಿ, ಹಾಗೆ ಮಾಡುತ್ತಿದ್ದ ರೆಂಬುದು ನನಗೆ ಗೊತ್ತಿದ್ದಿತು. ಆಶುಭಾಷಣ ಮಾಡುವುದಂತೂ ನನ್ನಿಂದ ಸಾಧ್ಯವೇ ಇರಲಿಲ್ಲ. ಆದುದರಿಂದ ನಾನು ನನ್ನ ಭಾಷಣವನ್ನು ಬರೆದು ಕೊಂಡಿದ್ದೆನು. ಅದನ್ನು ಓದಬೇಕೆಂದು ನಾನು ಸಭೆಯಲ್ಲಿ ಎದ್ದು ನಿಂತೆನು. ಆದರೆ ಓದಲಾರದೆ ಹೋದೆನು. ನನ್ನ ಭಾಷಣ ಒಂದು ಪೂರ್ತಿ ಪುಟದಷ್ಟು ಮಾತ್ರ ಇದ್ದಿತು. ಆದರೂ ನನ್ನ ಕಣ್ಣು ಮಂಜಾಯಿತು. ನನಗೆ ನಡುಕ ಬಂದಿತು. ಶ್ರೀ ಮಜುಂದಾರರು ನನಗಾಗಿ ಅದನ್ನು ತಾವೇ ಓದಬೇಕಾಯಿತು. ಅವರ ಸ್ವಂತ ಭಾಷಣ ಸೊಗಸಾಗಿತ್ತು. ಅದನ್ನು ಕೇಳಿ ಶ್ರೋತೃಗಳು ಕರತಾಡನ ಮಾಡಿದರು. ನನಗೆ ನಾಚಿಕೆಯಾಯಿತು. ನನ್ನ ಅಶಕ್ತಿಗಾಗಿ ನನ್ನ ಹೃದಯ ದುಃಖದಿಂದ ತುಂಬಿತು.

ನಾನು ಕೊನೆಯ ಸಲ ಇಂಗ್ಲೆಂಡಿನಲ್ಲಿ ಬಹಿರಂಗ ಭಾಷಣ ಮಾಡಲು ಪ್ರಯತ್ನಿಸಿದುದು, ಆ ದೇಶವನ್ನು ಬಿಟ್ಟು ಭಾರತಕ್ಕೆ ಹೊರಟಾಗ. ಆ ಪ್ರಯತ್ನವೂ ಸಹ ಹಾಸ್ಯಾಸ್ಪದವಾಗಿ ನನ್ನ ಅವಮಾನದಲ್ಲಿಯೇ ಕೊನೆ ಗೊಂಡಿತು. ನಾನು, ಈ ಹಿಂದೆಯೇ ಹೇಳಿರುವ ಹಾಲ್‌ಬಾರ್ನ್ ಹೋಟಲಿಗೆ, ನನ್ನ ಶಾಕಾಹಾರಿ ಮಿತ್ರರನ್ನು ಭೋಜನಕ್ಕೆ ಆಹ್ವಾನಿಸಿದ್ದೆನು. ನಾನು ಹೀಗೆ ಯೋಚಿಸಿದೆನು; "ಶಾಕಾಹಾರಿ ಫಲಾಹಾರ ಮಂದಿರದಲ್ಲಂತೂ

ಶಾಕಾಹಾರ ಭೋಜನ ದೊರಕಿಯೇ ದೊರಕುತ್ತದೆ. ಆದರೆ ಮಾಂಸಾಹಾರ ಭೋಜನ ಶಾಲೆಯಲ್ಲಿ ಸಹ ಏಕೆ ಶಾಕಾಹಾರದ ಊಟ ದೊರಕಬಾರದು ? ಹಾಲ್‌ಬಾರ್ನ್ ಫಲಾಹಾರ ಮಂದಿರದ ವ್ಯವಸ್ಥಾಪಕರಿಗೆ, ಶುದ್ಧ ಶಾಕಾಹಾರ ಭೋಜನವನ್ನೇ ಒದಗಿಸಬೇಕೆಂದು ಗೊತ್ತು ಮಾಡಿದ್ದೆನು. ಶಾಕಾಹಾರಿಗಳು ಈ ಹೊಸ ಪ್ರಯೋಗವನ್ನು ಆನಂದದಿಂದ ಸ್ವಾಗತಿಸಿದರು. ಎಲ್ಲ ಊಟಗಳ ಏರ್ಪಾಡುಗಳೂ ಭೋಗ ಮತ್ತು ಸಂತೋಷ ಕೂಟವೇ. ಆದರೆ ಪಾಶ್ಚಾತ್ಯರು ಅದನ್ನೇ ಒಂದು ಕಲೆಯನ್ನಾಗಿ ಬೆಳೆಸಿದ್ದಾರೆ. ಅವು ಸಂಭ್ರಮದಿಂದಲೂ ಅಟ್ಟಹಾಸದಿಂದಲೂ ಆಚರಿಸಲ್ಪಡುತ್ತವೆ. ಅಲ್ಲಿ ಭಾಷಣಗಳೂ ಆಗುತ್ತವೆ. ನಾನು ಮಿತ್ರರಿಗಾಗಿ ಏರ್ಪಡಿಸಿದ್ದ ಆ ಸಣ್ಣ ಭೋಜನ ಕೂಟದಲ್ಲಿಯೂ, ಈ ಆಡಂಬರಗಳೆಲ್ಲ ಇದ್ದವು. ಭಾಷಣಗಳೂ ಆದವು. ಭಾಷಣ ಮಾಡಲು ನನ್ನ ಸರದಿ ಬಂದಾಗ ನಾನು ಎದ್ದು ನಿಂತುಕೊಂಡೆನು. ನಾಲ್ಕಾರು ವಾಕ್ಯಗಳ ಒಂದು ಭಾಷಣವನ್ನು ನಾನು ಬಹಳ ಎಚ್ಚರಿಕೆಯಿಂದ ಯೋಚಿಸಿ ಸಿದ್ಧಮಾಡಿಟ್ಟುಕೊಂಡಿದ್ದೆನು. ಆದರೆ ಮೊದಲನೆಯ ವಾಕ್ಯವನ್ನು ಉಚ್ಚರಿಸಿದ ಮೇಲೆ ಮುಂದಕ್ಕೆ ಮಾತು ಹೊರಡಲೇ ಇಲ್ಲ. ಕಾಮನ್ಸ್ ಸಭೆಯಲ್ಲಿ ಅಡಿಸನ್ನನು ಮಾಡಿದ ಪ್ರಥಮ ಭಾಷಣದ ಕಥೆಯನ್ನು ಕೇಳಿದ್ದೆನು. ಅಡಿಸನ್ನನು ಭಾಷಣವನ್ನು ಪ್ರಾರಂಭಿಸಿ ಮೂರು ಸಲ "ನನಗೆ ತೋರುವುದೇನೆಂದರೆ, (I conceive) ನನಗೆ ತೋರುವುದೇನೆಂದರೆ, ನನಗೆ ತೋರುವುದೇನೆಂದರೆ" ಎಂದು ಹೇಳಿ ಮುಂದೆ ಮಾತು ಹೊರಡದೆ ನಿಲ್ಲಿಸಿಬಿಟ್ಟನು. (ಇಂಗ್ಲಿಷ್‌ನಲ್ಲಿ ಕನ್‌ಸೀವ್ (conceive) ಎಂಬ ಪದಕ್ಕೆ 'ತೋರು' ಎಂದೂ 'ಗರ್ಭಧಾರಣೆ' ಮಾಡು ಎಂದೂ ಅರ್ಥವಾಗುತ್ತದೆ). ಆಗ ಒಬ್ಬ ವಿನೋದಗಾರ ಎದ್ದು ನಿಂತು "ಈ ಗೃಹಸ್ಥ ಮೂರು ಸಲ ಗರ್ಭಧಾರಣೆ ಮಾಡಿದ. ಆದರೆ ಏನನ್ನೂ ಹೆರಲಿಲ್ಲ" ಎಂದು ಹೇಳಿದನು. ಈ ಸಂಗತಿಯನ್ನೇ ಆಧಾರವಾಗಿಟ್ಟುಕೊಂಡು ನಾನು ಒಂದು ವಿನೋದವಾದ ಭಾಷಣವನ್ನು ಮಾಡಬೇಕೆಂದು ಯೋಚಿಸಿಕೊಂಡಿದ್ದೆನು. ಆದುದರಿಂದ ನಾನು ನನ್ನ ಭಾಷಣವನ್ನು ಅದರಿಂದಲೇ ಪ್ರಾರಂಭಿಸಿದೆನು. ಆದರೆ ನನ್ನ ಮಾತು ಅಲ್ಲಿಗೆ ನಿಂತಿತು. ನನ್ನ ಜ್ಞಾಪಕಶಕ್ತಿ ಪೂರ್ಣವಾಗಿ ಮರೆಯಾಯಿತು. ವಿನೋದದ ಭಾಷಣವನ್ನು ಮಾಡ್ರ

ಪ್ರಸಕ್ತಿ ಹೋಗಿ ನಾನೇ ಹಾಸ್ಯಕ್ರೀಡಾದೆನು. ನಾನು ಇದ್ದಕ್ಕಿದ್ದಂತೆ "ಮಿತ್ರರೇ, ನೀವು ನನ್ನ ಆಹ್ವಾನವನ್ನು ಅಂಗೀಕರಿಸಿ ಬಂದುದಕ್ಕಾಗಿ ನಿಮ್ಮನ್ನು ವಂದಿಸುತ್ತೇನೆ" ಎಂದು ಹೇಳಿ ತೆಪ್ಪನೆ ಕುಳಿತುಬಿಟ್ಟೆನು.

ನಾನು ದಕ್ಷಿಣ ಆಫ್ರಿಕಕ್ಕೆ ಹೋದಮೇಲೆಯೇ, ಈ ಮುಖ ಹೇಡಿತನ ದೂರವಾಯಿತು. ಆದರೂ ನಾನು ಅದನ್ನು ಪೂರ್ಣವಾಗಿ ಜಯಿಸಲಿಲ್ಲ. ಆಶುಭಾಷಣ ಮಾಡುವುದು ನನ್ನಿಂದ ಸಾಧ್ಯವೇ ಇರಲಿಲ್ಲ. ಅಪರಿಚಿತರ ಎದುರಿಗೆ ಭಾಷಣ ಮಾಡಲು ನಾನು ಹಿಂದೆಗೆಯುತ್ತಿದ್ದೆನು. ಸಾಧ್ಯ ವಾದೆಡೆಗಳಲ್ಲೆಲ್ಲ ಭಾಷಣ ಮಾಡುವುದನ್ನೇ ತಪ್ಪಿಸಿಕೊಳ್ಳುತ್ತಿದ್ದೆನು. ಇಂದೂ ಸಹ ಸ್ನೇಹಿತರೊಂದಿಗೆ ಸುಮ್ಮನೆ ಮಾತುಕತೆಯಾಡುತ್ತಾ ಕಾಲ ಕಳೆಯಲು ನನಗೆ ಇಷ್ಟವಿಲ್ಲ. ಹಾಗೆ ಮಾಡಲು ನನ್ನಿಂದ ಸಾಧ್ಯವೂ ಇಲ್ಲ.

ಆಗಾಗ್ಗೆ ನನ್ನನ್ನು ಅಪಹಾಸ್ಯಕ್ಕೆ ಈಡುಮಾಡುವುದರ ಹೊರತು, ನನ್ನ ಈ ಸ್ವಾಭಾವಿಕ ಲಜ್ಜೆಯಿಂದ ನನಗೆ ಮತ್ತಾವ ಹಾನಿಯೂ ಆಗಲಿಲ್ಲ ವೆಂದು ಹೇಳಬೇಕು. ಅದರ ಬದಲು ಅದರಿಂದ ನನಗೆ ಬಹಳ ಲಾಭವೇ ಆಗಿದೆ. ಮಾತನಾಡುವುದರಲ್ಲಿ ನನ್ನ ಸಂಕೋಚ ಪ್ರಕೃತಿ ಪ್ರಾರಂಭದಲ್ಲಿ ನನಗೆ ಸ್ವಲ್ಪ ದುಃಖವನ್ನು ಉಂಟುಮಾಡಿದರೂ, ಈಗ ಅದೇ ಸಂತೋಷ ವಾಗಿದೆ. ಅದರ ಅತ್ಯಂತ ದೊಡ್ಡ ಲಾಭ, ಅದು ನನಗೆ, ಮಾತಿನಲ್ಲಿ ಮಿತಿಯನ್ನು ಕಲಿಸಿರುವುದು. ನನ್ನ ವಿಚಾರಗಳನ್ನು ಹತೋಟಿಯಲ್ಲಿಡುವ ಅಭ್ಯಾಸ ನನಗೆ ಸ್ವಾಭಾವಿಕವಾಗಿಯೇ ಉಂಟಾಗಿದೆ. ನಾನು ಚೆನ್ನಾಗಿ ಆಲೋಚನೆ ಮಾಡದೆ ಒಂದು ಮಾತನ್ನೂ ಆಡಲಿಲ್ಲ, ಬರೆಯಲಿಲ್ಲ ಎಂಬ ಪ್ರಶಸ್ತಿ ಪತ್ರವನ್ನು ನನಗೆ ನಾನೇ ಈಗ ಕೊಟ್ಟುಕೊಳ್ಳಬಲ್ಲೆನು. ನಾನು ಹೇಳಿದುದು ಬರೆದುದು ಇದಾವುದಕ್ಕಾಗಿಯೂ ನಾನು ಪಶ್ಚಾತ್ತಾಪ ಪಡಬೇಕಾದ ಕಾರಣ ಎಂದೂ ಉಂಟಾದುದು ನನಗೆ ಜ್ಞಾಪಕವಿಲ್ಲ. ಇದರಿಂದ ನನಗೆ ಅನೇಕ ಅನಿಷ್ಟಗಳು ತಪ್ಪಿದುವಲ್ಲದೆ ಕಾಲವೂ ಉಳಿಯಿತು.

ಸತ್ಯದ ಪೂಜಾರಿ, ಮೌನವನ್ನು ಅವಲಂಬಿಸುವುದು ಆವಶ್ಯಕ ವೆಂಬುದು ನನ್ನ ಅನುಭವ. ಅತಿಶಯೋಕ್ತಿ, ಸತ್ಯವನ್ನು ಮುಚ್ಚಿಡುವುದು, ಬದಲಾಯಿಸುವುದು, ಇವುಗಳನ್ನು ತಿಳಿದೋ ತಿಳಿಯದೆಯೋ ಮಾಡು

ಪ್ರಸು ಮನುಷ್ಯನ ಸ್ವಭಾವ. ಇದನ್ನು ಜಯಿಸಬೇಕಾದರೆ ಮೌನ ಆವಶ್ಯಕ. ಮಿತಭಾಷಿ, ಯಾವಾಗಲೂ ತನ್ನ ಮಾತಿನಲ್ಲಿ ಎಚ್ಚರಿಕೆಯುಳ್ಳವನಾಗಿರುತ್ತಾನೆ. ಅವನು ತನ್ನ ಪ್ರತಿಯೊಂದು ಮಾತನ್ನೂ ತೂಕಮಾಡಿ ಆಡುತ್ತಾನೆ. ಮಾತನಾಡಲು ಜನರು ತುಂಬ ಉತ್ಸುಕರಾಗಿರುವುದು ನಮ್ಮ ಕಣ್ಣಿಗೆ ಬೀಳುತ್ತಿದೆ. ಯಾವ ಸಭೆಯ ಅಧ್ಯಕ್ಷನನ್ನೂ ಮಾತನಾಡಲು ನಮಗೆ ಸ್ವಲ್ಪ ಅವಕಾಶ ಕೊಡಿ, ಎಂದು ಪೀಡಿಸುವ ಚೀಟಿಗಳು ಮುತ್ತುತ್ತವೆ. ಹಾಗೆ ಅವಕಾಶ ಸಿಕ್ಕಿದ ಕೂಡಲೇ, ಭಾಷಣಕಾರ ತನಗೆ ದೊರೆತ ಕಾಲವನ್ನು ಮೀರಿ ಇನ್ನಷ್ಟು ಕಾಲವನ್ನು ಬೇಡುತ್ತಾನೆ; ಅಪ್ಪಣೆಯೇ ಇಲ್ಲದೆ ಮಾತುಗಳನ್ನು ಮುಂದುವರಿಸುತ್ತಲೇ ಇರುತ್ತಾನೆ. ಭಾಷಣಗಳಿಂದೆಲ್ಲ ಯಾರಿಗೂ ಏನೂ ಪ್ರಯೋಜನವಿಲ್ಲ. ಇದು ಸುಮ್ಮನೆ ಕಾಲಹರಣ. ನಿಜವಾಗಿ ನನ್ನ ಲಜ್ಜೆ, ನನ್ನ ಗುರಾಣಿಯಾಗಿ ನನ್ನನ್ನು ರಕ್ಷಿಸಿದೆ. ಆದರಿಂದ ನನ್ನ ವಿಚಾರಗಳು ಪರಿಪಕ್ವವಾಗಿ ನನ್ನ ಸತ್ಯದ ಆರಾಧನೆಗೆ ಸಹಾಯಕವಾಗಿದೆ.

೧೯

ಅಸತ್ಯವೆಂಬ ವ್ರಣ

ನಲವತ್ತು ವರುಷಗಳ ಕೆಳಗೆ ಇಂಗ್ಲೆಂಡಿನಲ್ಲಿ ಭಾರತೀಯ ವಿದ್ಯಾರ್ಥಿಗಳ ಸಂಖ್ಯೆ ಈಗ ಇರುವುದಕ್ಕಿಂತ ಬಹಳ ಕಡಿಮೆಯಾಗಿದ್ದಿತು. ತಾವು ಮದುವೆಯಾದವರಾಗಿದ್ದರೂ, ಬ್ರಹ್ಮಚಾರಿಗಳೆಂದು ನಟಿಸುವುದು ಅವರ ರೀತಿಯಾಗಿದ್ದಿತು. ಇಂಗ್ಲೆಂಡಿನಲ್ಲಿ ಸ್ಕೂಲಿಗೆ ಹೋಗುವ ಮತ್ತು ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳೆಲ್ಲ ಬ್ರಹ್ಮಚಾರಿಗಳೆ. ವೈವಾಹಿಕ ಜೀವನಕ್ಕೂ ವ್ಯಾಸಂಗಕ್ಕೂ ಹೊಂದಾಣಿಕೆಯಿಲ್ಲವೆಂಬುದು ಅವರ ಮತ. ಪ್ರಾಚೀನ ಕಾಲದಲ್ಲಿ, ನಮ್ಮಲ್ಲಿ ಆ ಸಂಪ್ರದಾಯವಿದ್ದಿತು. ಆಗ ವಿದ್ಯಾರ್ಥಿಗೆ ಬ್ರಹ್ಮಚಾರಿ (ಪೂರ್ಣಸಂಯಮಿ) ಎಂಬುದೇ ಸಾಮಾನ್ಯವಾದ ಹೆಸರಾಗಿದ್ದಿತು. ಆದರೆ ಈಗ ನಮ್ಮಲ್ಲಿ ಮಕ್ಕಳಿಗೆ ವಿವಾಹಮಾಡುತ್ತೇವೆ. ಇಂಗ್ಲೆಂಡಿನಲ್ಲಿ ಕನಸಿನಲ್ಲಿಯೂ ಈ ಪದ್ಧತಿ ಇಲ್ಲ. ಆದುದರಿಂದ ಇಂಗ್ಲೆಂಡಿನಲ್ಲಿದ್ದ ಭಾರತದ ವಿದ್ಯಾರ್ಥಿಗಳಿಗೆ ತಾವು ವಿವಾಹಿತರೆಂದು ಹೇಳಿಕೊಳ್ಳಲು

ನಾಚಿಕೆಯಾಗುತ್ತಿದ್ದಿತು. ಅವರು ಹೀಗೆ ಮರೆಮಾಚಲು ಮತ್ತೊಂದು ಕಾರಣವೂ ಇದ್ದಿತು. ಅವರಿಗೆ ಮದುವೆಯಾಗಿರುವುದು ಇಂಗ್ಲಿಷರಿಗೆ ಗೊತ್ತಾದರೆ ಈ ಯುವಕರು, ತಾವು ಇಳಿದುಕೊಂಡಿದ್ದ ಮನೆಯ ಹೆಣ್ಣು ಮಕ್ಕಳುಗಳೊಂದಿಗೆ ಚಕ್ಕಂದವಾಡಲು ಅಥವಾ ಅವರ ಜತೆ ತಿರುಗಾಟಕ್ಕೆ ಹೋಗಲು ಅಸಾಧ್ಯವಾಗುತ್ತಿದ್ದಿತು. ಆ ಆಮೋದ ಪ್ರಮೋದಗಳೇನೋ ಬಹುಮಟ್ಟಿಗೆ ನಿರ್ದೋಷವಾಗಿರುತ್ತಿದ್ದವು. ಹುಡುಗಿಯರ ತಂದೆತಾಯಿಯರೇ ಅದನ್ನು ಪ್ರೋತ್ಸಾಹಿಸುತ್ತಲೂ ಇದ್ದರು. ಇಂಗ್ಲೆಂಡಿನಲ್ಲಿ ಪ್ರತಿಯೊಬ್ಬ ಯುವಕನೂ ತನ್ನ ಜೀವನದ ಸಂಗಾತಿಯನ್ನು ತಾನೇ ಆರಿಸಿಕೊಳ್ಳಬೇಕಾಗಿರುವುದರಿಂದ, ಹೆಣ್ಣು ಗಂಡುಗಳ ಈ ಬಗೆಯ ಗೆಳೆತನದ ಮಿಲನ ಅಲ್ಲಿ ಆವಶ್ಯಕವೂ ಇರಬಹುದು. ಭಾರತದ ಯುವಕರು ಇಂಗ್ಲೆಂಡಿಗೆ ಬಂದಕೂಡಲೇ, ಬ್ರಿಟಿಷ್ ಯುವಕರಿಗೆ ಸ್ವಾಭಾವಿಕವಾಗಿರುವ ಇಂತಹ ಸಂಪರ್ಕಗಳಲ್ಲಿ ತೊಡಗಿದರೆ, ಅದರ ಪರಿಣಾಮ, ದೊಡ್ಡ ಅಪಘಾತವಾಗುತ್ತದೆ. ಅದು ಅನುಭವಕ್ಕೂ ಬಂದಿದೆ. ನಮ್ಮ ಯುವಕರು ಈ ಮೋಹಪಾಶಕ್ಕೆ ಸಿಕ್ಕಿಬಿದ್ದು, ಇಂಗ್ಲಿಷ್ ಯುವಕರಿಗೆ ಅದು ನಿರ್ದೋಷವಾಗಿದ್ದರೂ ತಮಗೆ ಅನಿಷ್ಟವಾದ ಅಸತ್ಯ ಜೀವನವನ್ನು ನಡೆಸುತ್ತಿದ್ದುದನ್ನು ನಾನು ನೋಡಿದ್ದೇನೆ. ಈ ಸಾಂಕ್ರಾಮಿಕ ನನಗೂ ಹರಡಿತು. ನನಗೆ ಮದುವೆಯಾಗಿ ಒಂದು ಮಗುವಿದ್ದರೂ ಸಹ, ನಾನೂ ಬ್ರಹ್ಮಚಾರಿ ಎಂದು ಹೇಳಿಕೊಳ್ಳಲು ಹಿಂದೆಗೆಯಲಿಲ್ಲ. ಆದರೆ ಹೀಗೆ ಮರೆಮಾಚಿದುದರಿಂದ ನನಗೆ ಸುಖವೇನೂ ಉಂಟಾಗಲಿಲ್ಲ. ನನ್ನ ಮುಖ ಹೇಡಿತನವೂ ಮೌನಸ್ವಭಾವವೂ ನನ್ನನ್ನು ಹೆಚ್ಚು ಅಪಾಯಗಳಿಂದ ರಕ್ಷಿಸಿದವು. ನಾನು ಸರಿಯಾಗಿ ಮಾತುಕತೆಯಾಡದಿದ್ದರೆ, ನನ್ನೊಂದಿಗೆ ಸಂಭಾಷಣೆ ನಡೆಸುವ ಅಥವಾ ನನ್ನ ಜತೆಗೆ ತಿರುಗಾಡಲು ಯೋಗ್ಯವೆಂದು ಯಾವ ಹುಡುಗಿಯೂ ಭಾವಿಸಲಾರಳು.

ನನ್ನ ಹೇಡಿತನ ನನ್ನ ಸಂಕೋಚ ಸ್ವಭಾವಕ್ಕೆ ಸಮಾನವಾಗಿದ್ದಿತು. ನಾನು ಉಳಿದುಕೊಂಡಿದ್ದ ವೆಂಟ್‌ನಾರ್ ಭಾಗದ ಕುಟುಂಬಗಳಲ್ಲಿ, ಯಜಮಾನಿಯ ಮಗಳು, ಅತಿಥಿಯನ್ನು ಸಂಚಾರಕ್ಕೆ ಕರೆದುಕೊಂಡು ಹೋಗುವುದು ವಾಡಿಕೆಯಾಗಿದ್ದಿತು. ಒಂದು ದಿನ ನನ್ನ ಯಜಮಾನಿಯ

ಮಗಳು ನನ್ನನ್ನು ವೆಂಟ್‌ನಾರ್ ಸುತ್ತಲಿನ ಸುಂದರವಾದ ಗುಡ್ಡಗಳಿಗೆ ಕರೆದುಕೊಂಡು ಹೊರಟಳು. ನನ್ನ ನಡಿಗೆ ನಿಧಾನವಲ್ಲವಾದರೂ, ಆಕೆ ಇನ್ನೂ ವೇಗವಾಗಿ ನಡೆಯುತ್ತಾ ದಾರಿಯುದ್ದಕ್ಕೂ ಮಾತನಾಡುತ್ತ ನನ್ನನ್ನು ಎಳೆದುಕೊಂಡು ಹೋದಳು. ನಾನು ಅವಳ ಮಾತುಗಳಿಗೆ ಒಂದೊಂದು ಸಲ ಮೆತ್ತಗೆ "ಹೌದು" ಎಂಬುದಾಗಿ ಅಥವಾ "ಇಲ್ಲ" ಎಂಬುದಾಗಿ ಉತ್ತರ ಕೊಡುತ್ತಿದ್ದೆನು. ನಾನು ಅತಿ ಹೆಚ್ಚಾಗಿ ಮಾತನಾಡುತ್ತಿದ್ದುದು ಎಂದರೆ "ಹೌದು, ಎಷ್ಟು ಸೊಗಸಾಗಿದೆ" ಎಂದು. ಆಕೆ ಹಕ್ಕಿಯಂತೆ ಹಾರಿಹೋಗುತ್ತಿದ್ದಳು. ನಾನಾದರೋ ಯಾವಾಗ ಮನೆಯನ್ನು ಹಿಂದಕ್ಕೆ ಸೇರುತ್ತೇನೋ ಎಂದು ಚಿಂತಿಸುತ್ತಾ ನಡೆಯುತ್ತಿದ್ದೆನು. ನಾವು ಗುಡ್ಡದ ತುದಿ ಮುಟ್ಟಿದೆವು. ಅಲ್ಲಿಂದ ಕೆಳಗಿಳಿಯುವುದು ಹೇಗೆ ? ಎತ್ತರವಾದ ಬೂಟ್ಸುಗಳನ್ನು ಧರಿಸಿದ್ದರೂ ಆ ಇಪ್ಪತ್ತೈದು ವರುಷದ ತರುಣಿ, ಗುಡ್ಡದಿಂದ ಕೆಳಗಡೆಗೆ ಅಂಬಿನ ವೇಗದಿಂದ ಹೊರಟಳು. ನಾನೂ ಇನ್ನೂ ಕೆಳಗಿಳಿಯಲು ಒದ್ದಾಡುತ್ತಿದ್ದೆನು.. ನನಗೆ ನಾಚಿಕೆಯಾಗಿದ್ದಿತು. ಅವಳು ಗುಡ್ಡದ ಬುಡದಲ್ಲಿ ನಗುತ್ತಾ ನಿಂತುಕೊಂಡು ನನಗೆ ಧೈರ್ಯ ಕೊಡುತ್ತಿದ್ದಳು. ಮೇಲಕ್ಕೆ ಬಂದು ಕೈಹಿಡಿದುಕೊಂಡು ನಿಮ್ಮನ್ನು ಕೆಳಕ್ಕೆ ಇಳಿಸಲೇ" ಎನ್ನುತ್ತಿದ್ದಳು. ನಾನು ಹೇಗೆ ಅಂತಹ ಹೇಡಿಯಾದೆನು ? ಹಾಗೂ ಹೀಗೂ ಇಳಿದೆ. ಮಧ್ಯೆ ಮಧ್ಯೆ ತೆವಳುತ್ತಲೂ ಅಂತೂ ಕೊನೆಗೆ ನೆಲವನ್ನು ಮುಟ್ಟಿದೆನು. ಅವಳು "ಶಹಭಾಸ್" ಎಂದು ಗಟ್ಟಿಯಾಗಿ ನಕ್ಕು ನನ್ನ ಲಜ್ಜೆಯನ್ನು ಇನ್ನೂ ಅಧಿಕಗೊಳಿಸಿದಳು. ಅವಳಿಗೆ ಆ ಅಧಿಕಾರವಿತ್ತು.

ಆದರೆ ನಾನು ಹಾಗೆ ಎಲ್ಲೆಡೆಗಳಲ್ಲಿಯೂ ಕಳಂಕವಿಲ್ಲದೆ ತಪ್ಪಿಸಿಕೊಳ್ಳುವುದು ಸಾಧ್ಯವಾಗಲಿಲ್ಲ. ನಾನು ಅಸತ್ಯರೂಪದ ವ್ರಣದಿಂದ ಪಾರಾಗಬೇಕೆಂಬುದು ದೇವರ ಇಷ್ಟವಾಗಿದ್ದಿತು. ವೆಂಟನಾರ್ ಹಾಗೆಯೇ ಇದ್ದ ಬ್ರಿಟನ್ ಎಂಬ ಮತ್ತೊಂದು, ಒಳ್ಳೆಯ ವಾಯುಗುಣವಿದ್ದ ಸಮುದ್ರ ತೀರ ಪ್ರದೇಶಕ್ಕೆ ನಾನು ಹೋದೆನು. ಇದು ನಾನು ವೆಂಟನಾರ್‌ಗೆ ಹೋಗುವುದಕ್ಕಿಂತ ಮುಂಚಿತವಾಗಿ. ಅಲ್ಲಿನ ಹೋಟಲಿನಲ್ಲಿ ತಕ್ಕಮಟ್ಟಿಗೆ ಅನುಕೂಲ ಸ್ಥಿತಿಯಲ್ಲಿದ್ದ ಒಬ್ಬ ವೃದ್ಧ ವಿಧವೆಯ ಪರಿಚಯ, ನನಗೆ ಆಯಿತು.

ಅದು ನಾನು ಇಂಗ್ಲೆಂಡಿಗೆ ಹೋದ ಮೊದಲ ವರುಷ. ಹೋಟಲಿನಲ್ಲಿ ದೊರೆಯುವ ಆಹಾರ ಪದಾರ್ಥಗಳ ಪಟ್ಟಿ ಫ್ರೆಂಚ್ ಭಾಷೆಯಲ್ಲಿದ್ದಿತು. ಅದು ನನಗೆ ಅರ್ಥವಾಗಲಿಲ್ಲ. ವೃದ್ಧ ಸ್ತ್ರೀ ಕುಳಿತಿದ್ದ ಮೇಜಿನ ಮುಂದೆಯೇ ನಾನೂ ಕುಳಿತೆನು. ನಾನು ಹೊಸಬ. ಸ್ವಲ್ಪ ಗಾಬರಿಗೊಂಡಿದ್ದೇನೆಂಬುದು ಆಕೆಗೆ ಗೊತ್ತಾಗಿ ಕೂಡಲೇ ಆಕೆ ನನ್ನ ಸಹಾಯಕ್ಕೆ ಬಂದಳು. ಕನಿಕರದಿಂದ "ನೀವು ಇಲ್ಲಿಗೆ ಹೊಸಬರಾಗಿ ಕಾಣುತ್ತೀರಿ. ನೀವು ಏಕೆ ಇನ್ನೂ ಯಾವ ತಿಂಡಿಯನ್ನೂ ತರಿಸಿಲ್ಲ" ಎಂದು ಕೇಳಿದಳು. ನಾನು ತಿಂಡಿಯ ಪಟ್ಟಿಯನ್ನು ಸಿಧಾನವಾಗಿ ಓದಿಕೊಳ್ಳುತ್ತಾ ಯಾವ ಯಾವ ತಿಂಡಿಯಲ್ಲಿ ಯಾವ ಯಾವ ಪದಾರ್ಥ ಸೇರಿದೆ ಎಂಬುದನ್ನು ಸೇವಕನಿಂದ ವಿಚಾರಿಸುವ ಪ್ರಯತ್ನದಲ್ಲಿದ್ದಾಗಲೇ ಆ ಸದ್ಗೃಹಿಣಿ ಮೇಲಿನಂತೆ ನನ್ನನ್ನು ವಿಚಾರಿಸಿದಳು. ನಾನು ಆಕೆಗೆ ಧನ್ಯವಾದವನ್ನು ಅರ್ಪಿಸಿ "ನಾನು ಶಾಕಾಹಾರಿ. ಫ್ರೆಂಚ್ ಭಾಷೆ ನನಗೆ ಅರ್ಥವಾಗಲಿಲ್ಲ. ಯಾವ ತಿಂಡಿ ನನಗೆ ಸರಿ ಎಂಬುದನ್ನು ಕುರಿತು ವಿಚಾರಿಸುವುದರಲ್ಲಿದ್ದೆ" ಎಂದೆನು.

ಆಕೆ "ನಾನು ನಿಮಗೆ ಸಹಾಯಮಾಡುತ್ತೇನೆ. ಪಟ್ಟಿಯನ್ನು ನಿಮಗೆ ವಿವರಿಸಿ ನೀವು ಏನನ್ನು ತಿನ್ನಬಹುದೆಂಬುದನ್ನು ಹೇಳುತ್ತೇನೆ" ಎಂದಳು. ನಾನು ಆಕೆಯ ಸಹಾಯವನ್ನು ಕೃತಜ್ಞತೆಯಿಂದ ಸ್ವೀಕರಿಸಿದೆನು. ಹೀಗೆ ನಮ್ಮ ಸ್ನೇಹ ಪ್ರಾರಂಭವಾಯಿತು. ನನ್ನ ಮತ್ತು ಆಕೆಯ ಈ ಸ್ನೇಹ, ನಾನು ಇಂಗ್ಲೆಂಡಿನಲ್ಲಿರುವವರೆಗೇ ಅಲ್ಲದೆ ಅನಂತರ ಬಹುಕಾಲ ಉಳಿದುಕೊಂಡಿತು. ಆಕೆ ನನಗೆ ತನ್ನ ಲಂಡನ್ ನಿವಾಸದ ವಿಳಾಸವನ್ನು ಕೊಟ್ಟು, ಪ್ರತಿ ಭಾನುವಾರವೂ ನನ್ನನ್ನು ತನ್ನ ಮನೆಗೆ ಭೋಜನಕ್ಕೆ ಆಹ್ವಾನಿಸಿದಳು. ಅಲ್ಲದೆ ವಿಶೇಷ ಸಂದರ್ಭಗಳು ಒದಗಿದಾಗಲೆಲ್ಲ, ಆಕೆ ನನ್ನನ್ನು ಆಹ್ವಾನಿಸುತ್ತಿದ್ದಳು. ತರುಣ ಸ್ತ್ರೀಯರಿಗೆ ನನ್ನ ಪರಿಚಯ ಮಾಡಿಸಿ ನಾನು ಅವರೊಂದಿಗೆ ಮಾತುಕತೆಯಾಡಲು ಅವಕಾಶ ಕಲ್ಪಿಸಿಕೊಟ್ಟು ನನ್ನ ನಾಚಿಕೆ ಇಲ್ಲದಂತಾಗಲು ಸಹಾಯ ಮಾಡಿದಳು. ಆಕೆ ತನ್ನೊಡನೆ ವಾಸಿಸುತ್ತಿದ್ದ ಯುವತಿಯೊಬ್ಬಳನ್ನು ಇತರರಿಗಿಂತ ಹೆಚ್ಚಾಗಿ ನನ್ನೊಂದಿಗೆ ಮಾತುಕತೆಗೆ ಸೇರುವಂತೆ ಯೋಜಿಸಿದ್ದಳು. ಅನೇಕ ವೇಳೆ ನಮ್ಮಿಬ್ಬರನ್ನೇ ಬಿಟ್ಟು ಹೊರಟು ಹೋಗುತ್ತಿದ್ದಳು.

ನನಗೆ ಇದೆಲ್ಲ ಮೊದಲು ಬಹಳ ಕಷ್ಟವಾಗಿ ತೋರಿತು. ಸಂಭಾಷಣೆಯನ್ನು ಮೊದಲು ಪ್ರಾರಂಭಿಸುವುದಕ್ಕಾಗಲೀ ಸರಸವಿನೋದಗಳಲ್ಲಿ ತೊಡಗುವುದಕ್ಕಾಗಲೀ ನನಗೆ ಸಾಧ್ಯವಾಗುತ್ತಿರಲಿಲ್ಲ. ಆದರೆ ಅವಳೇ ನನಗೆ ದಾರಿ ತೋರಿಸಿದಳು. ಕಾಲಕ್ರಮದಲ್ಲಿ ಅವುಗಳನ್ನು ನಾನು ಕಲಿತೆ. ಅಲ್ಲಿಂದ ಮುಂದೆ ಭಾನುವಾರ ಯಾವಾಗ ಬಂದೀತೆಂದು ಇದಿರು ನೋಡುವುದನ್ನು ಮೊದಲು ಮಾಡಿದೆನು. ಆ ಯುವತಿಯೊಡನೆ ಮಾತು ಕತೆಗಳಲ್ಲಿಯೂ ನನಗೆ ಉತ್ಸುಕತೆಯುಂಟಾಯಿತು.

ಆ ವೃದ್ಧಳು ದಿನದಿನಕ್ಕೆ ತನ್ನ ಬಲೆಯನ್ನು ವಿಶಾಲವಾಗಿ ಬೀಸ ತೊಡಗಿದಳು. ನಾವಿಬ್ಬರೂ ಸೇರುವುದು ಆಕೆಗೆ ಇಷ್ಟವಾಗಿದ್ದಿತು. ನಮ್ಮಿಬ್ಬರ ವಿಷಯದಲ್ಲಿ ಆಕೆ, ಯಾವುದಾದರೂ ಯೋಜನೆಯನ್ನು ಮಾಡಿಕೊಂಡಿದ್ದಳೋ ಏನೋ ?

ನಾನು ಒಳ್ಳೆಯ ಗೊಂದಲಕ್ಕೆ ಸಿಕ್ಕಿಕೊಂಡಿದ್ದೆ. "ನನಗೆ ಮದುವೆಯಾಗಿದೆ" ಎಂದು ಈ ಸದ್ಗೃಹಿಣಿಗೆ ನಾನು ಮೊದಲೇ ಹೇಳಿಬಿಟ್ಟಿದ್ದರೆ ಎಷ್ಟು ಚೆನ್ನಾಗಿದ್ದಿತು. ಆಗ ಈಕೆ ನಮ್ಮಿಬ್ಬರ ವಿವಾಹವನ್ನೂ ಕುರಿತು ಯೋಚಿಸುತ್ತಲೇ ಇರಲಿಲ್ಲ. ಆದರೂ ತಿದ್ದಿಕೊಳ್ಳುವುದಕ್ಕೆ ಈಗಲೂ ಕಾಲ ಮೀರಿಹೋಗಿಲ್ಲ. ಸತ್ಯವನ್ನು ಹೇಳಿಬಿಟ್ಟರೆ ಇನ್ನೂ ಹೆಚ್ಚು ಸಂಕಟದಿಂದ ನಾನು ಪಾರಾಗಬಹುದು" ಎಂದುಕೊಂಡೆನು. ಹೀಗೆ ಯೋಚಿಸಿ ಈ ಮುಂದಿನ ಅಭಿಪ್ರಾಯ ಬರುವಂತಹ ಒಂದು ಪತ್ರವನ್ನು ಆಕೆಗೆ ಬರೆದೆನು.

"ಬ್ರಿಟನ್ನಿನಲ್ಲಿ ನಮ್ಮಿಬ್ಬರ ಪರಿಚಯವಾದಂದಿನಿಂದ ನೀವು ನನ್ನಲ್ಲಿ ಅಂತಃಕರಣವಿಟ್ಟಿದ್ದೀರಿ. ತಾಯಿ, ಮಗನನ್ನು ರಕ್ಷಿಸುವಂತೆ ನೀವು ನನ್ನನ್ನು ಕಂಡಿದ್ದೀರಿ. ನನ್ನ ಮದುವೆಯಾಗಬೇಕು ಎಂದೂ ನಿಮಗೆ ಯೋಚನೆ. ಈ ಉದ್ದೇಶದಿಂದ ನೀವು ನನಗೆ ಯುವತಿಯರ ಪರಿಚಯ ಮಾಡಿಸುತ್ತಿದ್ದೀರಿ. ಇದು ಮುಂದುವರೆಯುವುದಕ್ಕೆ ಮುಂಚೆ, ನಿಮ್ಮ ಈ ಪ್ರೇಮಕ್ಕೆ ನಾನು ಅನರ್ಹನಾಗಿದ್ದೇನೆಂದು ಹೇಳಿಕೊಳ್ಳಬೇಕು. ನಿಮ್ಮಲ್ಲಿ ಬಂದು ಹೋಗುವುದನ್ನು ನಾನು ಪ್ರಾರಂಭಿಸಿದಾಗಲೇ, "ನನಗೆ ಮದುವೆಯಾಗಿದೆ" ಎಂಬುದನ್ನು ನಾನು ನಿಮಗೆ ತಿಳಿಸಬೇಕಾಗಿದ್ದಿತು. ಇಂಗ್ಲೆಂಡಿಗೆ ಬರುವ

ಭಾರತದ ವಿದ್ಯಾರ್ಥಿಗಳು, ತಮಗೆ ವಿವಾಹವಾಗಿರುವ ವಿಷಯವನ್ನು ಮುಚ್ಚಿಡುವರೆಂಬುದು ನನಗೆ ಗೊತ್ತು. ನಾನೂ ಹಾಗೆಯೇ ಮಾಡಿದೆನು. ಹಾಗೆ ನಾನು ಮಾಡಬಾರದಾಗಿತ್ತು ಎಂಬುದು ಈಗ ಗೊತ್ತಾಗುತ್ತಿದೆ. ನಾನು ಇನ್ನೂ ಹುಡುಗನಾಗಿರುವಾಗಲೇ ನನ್ನ ಮದುವೆಯಾಯಿತು; ಈಗ ನಾನು ಒಬ್ಬ ಮಗುವಿನ ತಂದೆ ಎಂಬುದನ್ನೂ ಹೇಳಬೇಕಾಗಿದೆ. ಈ ವಿಷಯವನ್ನು ಇಷ್ಟು ದಿನವೂ ನಿಮಗೆ ತಿಳಿಸದೆ ಇದ್ದುದಕ್ಕೆ ನನಗೆ ಬಹಳ ಪಶ್ಚಾತ್ತಾಪವಾಗಿದೆ. ಆದರೆ ಈಗ ಸತ್ಯವನ್ನು ಹೇಳುವ ಧೈರ್ಯವನ್ನು ದೇವರು ನನಗೆ ಕೊಟ್ಟುದಕ್ಕೆ ನನಗೆ ಆನಂದವಾಗಿದೆ. ನೀವು ನನ್ನನ್ನು ಕ್ಷಮಿಸುವಿರಾ ? ನೀವು ನನಗೆ ಪರಿಚಯ ಮಾಡಿಸಿಕೊಟ್ಟ ಆ ಯುವತಿಯೊಂದಿಗೆ ನಾನು ಯಾವ ಅನುಚಿತ ವ್ಯವಹಾರವನ್ನೂ ಮಾಡಿಲ್ಲವೆಂದು ನಿಮಗೆ ಆಶ್ವಾಸನೆ ಕೊಡುತ್ತೇನೆ. ನನ್ನ ಮಿತಿ ನನಗೆ ಗೊತ್ತಿದ್ದಿತು. ಆದರೆ ನನಗೆ ಮದುವೆಯಾಗಿದ್ದುದು ನಿಮಗೆ ತಿಳಿಯದಿದ್ದುದರಿಂದ, ನಾವಿಬ್ಬರೂ ವಿವಾಹವಾಗಬೇಕೆಂದು ನೀವು ಸ್ವಾಭಾವಿಕವಾಗಿ ಬಯಸಿದಿರಿ. ಈ ಬಗೆಯ ಸಂಬಂಧ ಇದಕ್ಕಿಂತ ಮುಂದೆ ಹೋಗದಿರುವುದಕ್ಕಾಗಿ, ನಾನು ನಿಮ್ಮೊಂದಿಗೆ ಸತ್ಯವನ್ನು ಹೇಳಬೇಕಾಗಿದೆ.

"ಈ ಪತ್ರ ನಿಮಗೆ ತಲಪಿದನಂತರ, ನಾನು ನಿಮ್ಮಲ್ಲಿ ಇನ್ನು ಒಂದು ಹೋಗುವುದಕ್ಕೆ ಯೋಗ್ಯನಲ್ಲವೆಂದು ನೀವು ಭಾವಿಸಿದರೆ, ನಾನು ಅದನ್ನು ತಪ್ಪು ತಿಳಿದುಕೊಳ್ಳುವುದಿಲ್ಲ. ನಿಮ್ಮ ಮಮತೆ ಮತ್ತು ಆದರದಿಂದ ನನ್ನನ್ನು ಸರ್ವಕಾಲವೂ ನಿಮಗೆ ಋಣಿಯನ್ನಾಗಿ ಮಾಡಿದ್ದೀರಿ. ಇಷ್ಟಾದಮೇಲೂ ಸಹ ನೀವು ನನ್ನನ್ನು ನಿಮ್ಮಿಂದ ದೂರಮಾಡದೆ, ನಿಮ್ಮಲ್ಲಿ ಬಂದು ಸೇರಲು ಯೋಗ್ಯನೆಂದು ಭಾವಿಸುವುದಾದರೆ, ಅದು ನಿಮ್ಮ ವಾತ್ಸಲ್ಯದ ಇನ್ನೂ ಹೆಚ್ಚಿನ ಕುರುಹು ಎಂದು ಸುಖಿಯಾಗುವೆನಲ್ಲದೆ, ಅದಕ್ಕೆ ಅರ್ಹನಾಗಲು ಎಲ್ಲ ಪ್ರಯತ್ನಗಳನ್ನೂ ಮಾಡುತ್ತೇನೆ."

ಇಂತಹ ಪತ್ರವನ್ನು ಒಂದೇ ಏಟಿಗೆ ನಾನು ಬರೆದುಬಿಟ್ಟೆನೆಂದು ವಾಚಕರು ಭಾವಿಸದಿರಲಿ. ಆ ಯೋಗ್ಯತೆ ನನಗೆ ಇರಲಿಲ್ಲ. ನಾನು ಅವನ್ನು ಬರೆದು ಬರೆದು ಅನೇಕ ಸಲ ತಿದ್ದಿರಬೇಕು. ಅದು ನನ್ನನ್ನು ಮುಸುಗಿದ್ದ ಒಂದು ದೊಡ್ಡ ಹೊರೆ ಕಡಿಮೆಯಾಗುವಂತೆ ಮಾಡಿತು.

ಮುಂದಿನ ಟಪಾಲಿನಲ್ಲಿಯೇ ಆಕೆಯ ಉತ್ತರ ಬಂದಿತು. ಅದು ಈ ಕೆಳಗಿನ ಅಭಿಪ್ರಾಯವನ್ನು ಒಳಗೊಂಡಿತ್ತು.

"ನಿಮ್ಮ ಹೃದಯವನ್ನು ಬಿಚ್ಚಿ ಬರೆದ ಪತ್ರ ಬಂದಿದೆ. ನಮ್ಮಿಬ್ಬರಿಗೂ ಸಂತೋಷವಾಯಿತು. ಚೆನ್ನಾಗಿ ನಕ್ಕೆವು. ನೀವು ಹೇಳಿದಿರಿ ಎನ್ನುವ ಅಸತ್ಯ ಕ್ಷಮಾರ್ಹವಾದುದು. ಆದರೆ ವಸ್ತುಸ್ಥಿತಿಯನ್ನು ನೀವು ನಮಗೆ ತಿಳಿಯಪಡಿಸಿದುದೇನೋ ಒಳ್ಳೆಯದೆ ಆಯಿತು. ನಮ್ಮ ಆಹ್ವಾನವಂತೂ ನಿಮಗೆ ಇದ್ದೇ ಇದೆ. ಬರುವ ಭಾನುವಾರ ನಿಮ್ಮನ್ನು ತಪ್ಪದೇ ನಿರೀಕ್ಷಿಸು ತ್ತೇವೆ. ಮತ್ತು ನಿಮ್ಮ ಬಾಲ್ಯ ವಿವಾಹದ ಕಥೆಯನ್ನು ಕೇಳುವ ವಿನೋದ ವನ್ನು ಎದುರು ನೋಡುತ್ತೇವೆ. ಈ ಘಟನೆಯಿಂದ ನಮ್ಮ ನಿಮ್ಮ ಮೈತ್ರಿಗೆ ಸ್ವಲ್ಪವೂ ಕುಂದುಂಟಾಗಿಲ್ಲವೆಂದು ಹೇಳುತ್ತೇನೆ."

ನನ್ನ ಅಂತರಂಗದಲ್ಲಿದ್ದ ಅಸತ್ಯವೆಂಬ ವ್ರಣದಿಂದ ನಾನು ಹೀಗೆ ಮುಕ್ತನಾದೆನು. ಅಲ್ಲಿಂದ ಮುಂದೆ ಅವಶ್ಯಕವಾದೆಡೆಗಳಲ್ಲೆಲ್ಲ ನನ್ನ ವಿವಾಹ ಮುಂತಾದ ವಿಷಯಗಳನ್ನು ಕುರಿತು ನಿಸ್ಸಂಕೋಚವಾಗಿ ಮಾತನಾಡಲು ನಾನು ಎಂದಿಗೂ ಹಿಂದೆಗೆಯುತ್ತಿರಲಿಲ್ಲ.

೨೦

ಮತಗಳ ಪರಿಚಯ

ನಾನು ಇಂಗ್ಲೆಂಡಿಗೆ ಹೋದ ಎರಡನೆಯ ವರುಷದ ಕೊನೆಯಲ್ಲಿ ನನಗೆ ಇಬ್ಬರು ಥಿಯಾಸಫಿಸ್ಟರ ಪರಿಚಯವಾಯಿತು. ಇವರಿಬ್ಬರೂ ಅಣ್ಣ ತಮ್ಮಂದಿರು ಮತ್ತು ಅವಿವಾಹಿತರು. ಅವರು ನನ್ನೊಂದಿಗೆ ಭಗವದ್ಗೀತೆ ಯನ್ನು ಕುರಿತು ಮಾತನಾಡಿದರು. ಅವರು ಸರ್ ಎಡ್ವಿನ್ ಆರ್ನಾಲ್ಡರ ಭಗವದ್ಗೀತೆಯ ಅನುವಾದವನ್ನು (Song celestial) ಓದುತ್ತಿದ್ದರು. ನನ್ನನ್ನೂ ತಮ್ಮೊಂದಿಗೆ ಭಗವದ್ಗೀತೆಯ ಮೂಲವನ್ನು ವ್ಯಾಸಂಗಮಾಡಲು ಅವರು ಆಹ್ವಾನಿಸಿದರು. ನಾನು ಭಗವದ್ಗೀತೆಯನ್ನು ಸಂಸ್ಕೃತದಲ್ಲಾಗಲಿ ಗುಜರಾತಿಯಲ್ಲಾಗಲಿ ಓದಿರಲಿಲ್ಲ. ನನಗೆ ನಾಚಿಕೆಯಾಯಿತು. ನಾನು ಅವರಿಗೆ ಹೀಗೆ ಹೇಳಿದೆನು; "ನಾನು ಭಗವದ್ಗೀತೆಯನ್ನು ಓದಿಲ್ಲ. ನನ್ನ ಸಂಸ್ಕೃತ ಜ್ಞಾನ ಅಷ್ಟೇನೂ ಹೆಚ್ಚು ಇಲ್ಲದಿದ್ದರೂ, ಮೂಲಕ್ಕೂ ಅನುವಾ

ದಕ್ಕೂ ವ್ಯತ್ಯಾಸ ಎಲ್ಲಿದೆ ಎಂಬುದನ್ನು ಹೇಳಬಲ್ಲೆ." ನಾನು ಗೀತೆಯನ್ನು ಅವರ ಜತೆಯಲ್ಲಿ ಓದಲು ಪ್ರಾರಂಭಿಸಿದೆನು. ಎರಡನೆಯ ಅಧ್ಯಾಯದಲ್ಲಿರುವ;

> ಧ್ಯಾಯತೋ ವಿಷಯಾನ್ ಪುಂಸಃ ಸಂಗಸ್ತೇಷೂಪಜಾಯತೆ
> ಸಂಗಾತ್ ಸಂಜಾಯತೇ ಕಾಮಃ ಕಾಮಾತ್ ಕ್ರೋಧೋಽಭಿಜಾಯತೆ
> ಕ್ರೋಧಾದ್ಭವತಿ ಸಂಮೋಹಃ ಸಂಮೋಹಾತ್ ಸ್ಮೃತಿವಿಭ್ರಮಃ
> ಸ್ಮೃತಿಭ್ರಂಶಾದ್ಬುದ್ಧಿ ನಾಶೋ ಬುದ್ಧಿ ನಾಶಾತ್ ಪ್ರಣಶ್ಯತಿ

ಮನುಷ್ಯ, ವಿಷಯುಗಳ ಚಿಂತನೆ ಮಾಡುತ್ತಿದ್ದರೆ ಅವುಗಳಲ್ಲಿ ಅವನಿಗೆ ಆಸಕ್ತಿ ಹುಟ್ಟುತ್ತದೆ. ಆಸಕ್ತಿಯಿಂದ ಕಾಮ, ಕಾಮದಿಂದ ಕ್ರೋಧ ಉತ್ಪನ್ನವಾಗುತ್ತದೆ. (ಕಾಮವುಳ್ಳವನಿಗೆ ಕ್ರೋಧ ಅನಿವಾರ್ಯ. ಏಕೆಂದರೆ, ಕಾಮಕ್ಕೆ ತೃಪ್ತಿಯೆಂಬುದೇ ಇಲ್ಲ). ಕ್ರೋಧದಿಂದ ಸಂಮೋಹ ಅಥವಾ ವಿವೇಕರಾಹಿತ್ಯವುಂಟಾಗುತ್ತದೆ. ಸಂಮೋಹದಿಂದ ಸ್ಮೃತಿಭ್ರಮಣೆಯೂ, ಸ್ಮೃತಿಭ್ರಮಣೆಯಿಂದ ಬುದ್ಧಿನಾಶವೂ ಉಂಟಾಗುತ್ತದೆ. ಬುದ್ಧಿ ಎಂದರೆ ಜ್ಞಾನ. ಬುದ್ಧಿ ನಷ್ಟವಾದ ಮೇಲೆ ಮನುಷ್ಯನು ಪೂರ್ತಿನಾಶವಾದಂತೆಯೇ. ಈ ಶ್ಲೋಕಗಳು ನನ್ನ ಹೃದಯವನ್ನು ಮುಟ್ಟಿದವು. ಅವು ಈಗಲೂ ನನ್ನ ಕಿವಿಯಲ್ಲಿ ಧ್ವನಿಸುತ್ತಿವೆ. ಭಗವದ್ಗೀತೆ ಅಮೂಲ್ಯ ಗ್ರಂಥವೆಂದು ನನಗೆ ಆಗ ತೋರಿತು. ಆ ಭಾವನೆ ನನ್ನ ಮನಸ್ಸಿನಲ್ಲಿ ಒಂದೇ ಸಮನೆ ಬೆಳೆಯುತ್ತಲೇ ಬಂದಿದೆ. ಸತ್ಯದ ಜ್ಞಾನ ಸಂಪಾದನೆಗೆ, ಆ ಗ್ರಂಥ ಸರ್ವೋತ್ಕೃಷ್ಟವಾದುದೆಂದು ನಾನು ಇಂದು ಭಾವಿಸುತ್ತೇನೆ. ನನ್ನ ನಿರಾಶೆಯ ಸಂದರ್ಭಗಳಲ್ಲೆಲ್ಲ ಈ ಗ್ರಂಥ ನನಗೆ ಅಮೂಲ್ಯವಾದ ಸಹಾಯವನ್ನು ಮಾಡಿದೆ. ಭಗವದ್ಗೀತೆಯ ಎಲ್ಲ ಇಂಗ್ಲೀಷ್ ಅನುವಾದಗಳನ್ನೂ ನಾನು ಓದಿದ್ದೇನೆ. ಸರ್ ಎಡ್ವಿನ್ ಆರ್ನಾಲ್ಡ್‌ರ ಅನುವಾದ ಅತ್ಯುತ್ತಮವಾದುದೆಂದು ನನ್ನ ಅಭಿಪ್ರಾಯ. ಆತ, ಮೂಲಗ್ರಂಥದ ಭಾವಗಳನ್ನು ತನ್ನ ಭಾಷಾಂತರದಲ್ಲಿ ಪೂರ್ಣವಾಗಿ ತಂದಿದ್ದಾನೆ. ಅದು ಅನುವಾದದಂತೆ ತೋರುವುದೇ ಇಲ್ಲ. ಆ ಸ್ನೇಹಿತರ ಜತೆಯಲ್ಲಿ ನಾನು ಆಗ ಭಗವದ್ಗೀತೆಯನ್ನು ಓದಿದರೂ, ಆಗ ಅದನ್ನು ನಾನು ಅಧ್ಯಯನ ಮಾಡಿದೆನೆಂದು ಹೇಳಲಾರೆನು.

ಆದಾದ ಅನೇಕ ವರುಷಗಳ ನಂತರವೇ ಅದು ನನಗೆ ನಿತ್ಯದ ಅಧ್ಯಯನ ಗ್ರಂಥವಾದುದು.

ಆ ಸಹೋದರರು, ಎಡ್ವಿನ್ ಆರ್ನಾಲ್ಡ್‌ರ ಲೈಫ್ ಆಫ್ ಏಷ್ಯಾ, ಬುದ್ಧಚರಿತ್ರೆ ಗ್ರಂಥವನ್ನು ನಾನು ಓದಬೇಕೆಂದು ಸೂಚಿಸಿದರು. ಅಲ್ಲಿಯ ವರೆಗೆ ನನಗೆ ಎಡ್ವಿನ್ ಆರ್ನಾಲ್ಡರು ಭಗವದ್ಗೀತೆಯ ಅನುವಾದಕರೆಂದು ಮಾತ್ರ ಗೊತ್ತಾಗಿದ್ದಿತು. ಭಗವದ್ಗೀತೆಯನ್ನು ಓದಿದುದಕ್ಕಿಂತ ಹೆಚ್ಚು ಉತ್ಸಾಹದಿಂದ ಅದನ್ನು ಓದತೊಡಗಿದೆನು. ಓದುವುದಕ್ಕೆ ಪ್ರಾರಂಭಿಸಿದ ಮೇಲೆ ಅದನ್ನು ಬಿಡುವುದಕ್ಕೆ ಮನಸ್ಸು ಬರಲಿಲ್ಲ. ಆ ಮಿತ್ರರು ನನ್ನನ್ನು ಒಂದು ಸಲ ಬ್ಲಾವಾಟ್ಸ್ಕಿ ಲಾಡ್ಜ್‌ಗೆ ಕರೆದುಕೊಂಡು ಹೋದರು. ನನಗೆ ಶ್ರೀಮತಿ ಬ್ಲಾವಾಟ್ಸ್ಕಿ ಮತ್ತು ಶ್ರೀಮತಿ ಆನಿ ಬೆಸಂಟರ ಪರಿಚಯ ವಾಯಿತು. ಶ್ರೀಮತಿ ಬೆಸಂಟರು ಆಗ ತಾನೆ ಥಿಯಸಾಫಿಕಲ್ ಸೊಸೈಟಿಗೆ ಸೇರಿದ್ದರು. ಅವರ ಮತಾಂತರವನ್ನು ಕುರಿತು ಪತ್ರಿಕೆಗಳಲ್ಲಿ ಬರುತ್ತಿದ್ದ ಚರ್ಚೆಯನ್ನು ನಾನು ತುಂಬ ಉತ್ಸಾಹದಿಂದ ಓದುತ್ತಿದ್ದೆನು.. ಆ ಮಿತ್ರರು ನಾನೂ ಥಿಯಸಾಫಿಕಲ್ ಸೊಸೈಟಿಗೆ ಸೇರಬೇಕೆಂದು ಉಪದೇಶಿಸಿದರು. ನಾನು ನಮ್ರನಾಗಿ ಅವರ ಸಲಹೆಯನ್ನು ತಿರಸ್ಕರಿಸಿದೆನು. "ನನಗೆ ನನ್ನ ಧರ್ಮದ ವಿಚಾರವೇ ಏನೇನೂ ತಿಳಿಯದು. ಆದುದರಿಂದ ನಾನು ಯಾವ ಧಾರ್ಮಿಕ ಸಂಸ್ಥೆಗೂ ಸೇರಲು ಇಚ್ಛೆ ಪಡುವುದಿಲ್ಲ" ಎಂದು ಹೇಳಿದೆನು. ಆ ಭ್ರಾತೃಗಳ ಸಲಹೆಯಂತೆ ನಾನು, ಮ್ಯಾಡಾಂ ಬ್ಲಾವಾಟ್ಸ್ಕಿಯವರ ಥಿಯಾಸಫಿಯ ಕೀಲಿಕೈ (Key to Thesophy) ಎಂಬ ಗ್ರಂಥವನ್ನು ಓದಿದ ಜ್ಞಾಪಕವಿದೆ. ಆ ಪುಸ್ತಕ, ಹಿಂದೂ ಧರ್ಮವನ್ನು ಕುರಿತ ಗ್ರಂಥಗಳನ್ನು ಓದುವ ಆಸೆಯನ್ನು ನನ್ನಲ್ಲಿ ಕುದುರಿಸಿತು. ಹಿಂದೂ ಧರ್ಮ, ಬರಿ ಮೂಢನಂಬಿಕೆಗಳ ತವರು ಎಂಬುದಾಗಿ ಕ್ರಿಸ್ತಪಾದರಿಗಳು ಪ್ರಚಾರಮಾಡಿದ್ದ ಭಾವನೆ ಅದನ್ನು ಓದಿ ನನ್ನ ಮನಸ್ಸಿನಿಂದ ದೂರ ವಾಯಿತು.

ಅದೇ ಕಾಲದಲ್ಲಿ ನಾನು, ಒಂದು ಶಾಕಾಹಾರಿ ಭೋಜನ ಮಂದಿರ ದಲ್ಲಿ ಮ್ಯಾಂಚೆಸ್ಟರಿನ ಒಬ್ಬ ಉತ್ತಮ ಕ್ರೈಸ್ತನನ್ನು ಸಂಧಿಸಿದೆನು. ಆತ, ನನ್ನೊಂದಿಗೆ ಕ್ರೈಸ್ತಮತವನ್ನು ಕುರಿತು ಮಾತನಾಡಿದನು. ರಾಜಕೋಟೆ

ಯಲ್ಲಿಯು ನನ್ನ ಅನುಭವಗಳನ್ನು ಅವನಿಗೆ ಹೇಳಿದೆನು. ಅದನ್ನು ಕೇಳಿ
ಅವನಿಗೆ ದುಃಖವಾಯಿತು. ಆತ ಹೀಗೆ ಹೇಳಿದನು : "ನಾನು ಶಾಕಾಹಾರಿ.
ಮದ್ಯಪಾನ ಮಾಡುವುದಿಲ್ಲ. ಅನೇಕ ಕ್ರೈಸ್ತರು ಮಾಂಸವನ್ನೂ ತಿನ್ನುತ್ತಾರೆ,
ಮದ್ಯವನ್ನೂ ಕುಡಿಯುತ್ತಾರೆ ಎಂಬುದು ನಿಜ. ಆದರೆ ಈ ಎರಡರಲ್ಲಿ
ಯಾವುದನ್ನಾದರೂ ತೆಗೆದುಕೊಳ್ಳಬೇಕೆಂದು ನಮ್ಮ ಧರ್ಮಗ್ರಂಥ ಕಟ್ಟಪ್ಪಣೆ
ಮಾಡಿಲ್ಲ. ದಯವಿಟ್ಟು ಬೈಬಲ್ ಓದಿ." ನಾನು ಆತನ ಸಲಹೆಯನ್ನು
ಅಂಗೀಕರಿಸಿದೆನು. ಆತನೇ ನನಗೆ ಬೈಬಲಿನ ಒಂದು ಪ್ರತಿ ತಂದುಕೊಟ್ಟ.
ಆತನೇ ಬೈಬಲಿನ ಪ್ರತಿಗಳನ್ನು ಮಾರುತ್ತಿದ್ದನೆಂದೂ ಆತನಿಂದ ನಾನು ನಕಾಶೆ
ಅನುಕ್ರಮಣಿಕೆ ಮುಂತಾದುವುಗಳಿಂದ ಒಡಗೂಡಿದ ಒಂದು ಪ್ರತಿಯನ್ನು
ಕೊಂಡುಕೊಂಡೆನೆಂದೂ ಅಲ್ಪಸ್ವಲ್ಪ ಜ್ಞಾಪಕ. ನಾನು ಅದರ ವ್ಯಾಸಂಗ
ವನ್ನು ಪ್ರಾರಂಭಿಸಿದೆನು. ಆದರೆ ಓಲ್ಡ್ ಟೆಸ್ಟ್‌ಮೆಂಟ್ (ಪೂರ್ವಾರ್ಧದ)
ಕಥೆಯನ್ನು ಕಡೆಯವರೆಗೆ ಓದುವುದಕ್ಕೇ ನನ್ನಿಂದ ಸಾಧ್ಯವಾಗಲಿಲ್ಲ.
ಜೆನಿಸಸ್ (ಸೃಷ್ಟಿಕ್ರಮ) ಅನ್ನು ಓದಿದೆನು. ಅದರ ಮುಂದಿನ ಅಧ್ಯಾಯ
ಗಳನ್ನು ಓದುವಾಗ ನನಗೆ ತಪ್ಪದೆ ನಿದ್ರೆ ಬರುತ್ತಿದ್ದಿತು. ಆದರೆ "ನಾನೂ
ಓದಿದ್ದೇನೆ" ಎಂದು ಹೇಳುವುದಕ್ಕಾಗಿ ನಾನು ಇತರ ಭಾಗಗಳನ್ನು ಅತಿ
ಕಷ್ಟದಿಂದಲೂ ನಿರುತ್ಸಾಹದಿಂದಲೂ ಅರ್ಥವನ್ನೇ ಮಾಡಿಕೊಳ್ಳದೆ ಓದಿದೆನು.
ಸಂಖ್ಯಾಧ್ಯಾಯವೆಂಬುದನ್ನು (Numbers) ಓದಲು ನನಗೆ ಬಹಳ ಬೇಸರಿಕೆ
ಯಾಯಿತು.

ಆದರೆ ಹೊಸ ಒಡಂಬಡಿಕೆಯು ನನ್ನ ಮೇಲೆ ಬೇರೆ ಪರಿಣಾಮ
ವನ್ನುಂಟುಮಾಡಿತು. ಅದರಲ್ಲಿಯೂ ಬೆಟ್ಟದ ಮೇಲಿನ ಪ್ರವಚನ
(Sermon on the Mount) ನೇರವಾಗಿ ನನ್ನ ಹೃದಯವನ್ನೇ
ಮುಟ್ಟಿತು. ನಾನು ಅದನ್ನು ಭಗವದ್ಗೀತೆಯ ಶ್ಲೋಕಗಳೊಂದಿಗೆ ಹೋಲಿಸಿ
ದೆನು. "ನಾನು ನಿಮಗೆ ಹೇಳುವುದೇನೆಂದರೆ, ಕೆಡಕಿಗೆ ಪ್ರತಿಯಾಗಿ ಕೆಡಕು
ಮಾಡಬೇಡಿ, ನಿಮ್ಮ ಬಲಗೆನ್ನೆಗೆ ಯಾರಾದರೂ ಹೊಡೆದರೆ ಎಡಗೆನ್ನೆ
ಯನ್ನೂ ತೋರಿಸಿ. ನಿಮ್ಮ ಅಂಗಿಯನ್ನು ಯಾರಾದರೂ ಕಿತ್ತುಕೊಂಡರೆ,
ಅವನಿಗೆ ನಿಮ್ಮ ನಿಲುವಂಗಿಯನ್ನೂ ಸಹ ಕೊಡಿ"—ಇವು ನನಗೆ ಅಮಿತ

ವಾದ ಆನಂದವನ್ನುಂಟುಮಾಡಿದುದಲ್ಲದೆ ಶಾಮಲಭಟ್ಟನ "ಒಂದು ಬಟ್ಟಲು ನೀರು ಕೊಟ್ಟವರಿಗೆ ಊಟವಿಕ್ಕು" ಎಂಬ ವಾಕ್ಯವನ್ನು ನೆನಪಿಗೆ ತಂದವು. ನನ್ನ ಎಳೆಮನಸ್ಸು ಭಗವದ್ಗೀತೆ, ಬುದ್ಧಚರಿತೆ ಬೆಟ್ಟದ ಮೇಲಿನ ಪ್ರವಚನ ಇವೆಲ್ಲವುಗಳ ಬೋಧನೆಗಳಲ್ಲಿ ಏಕಭಾವವನ್ನು ಕಾಣಲು ಪ್ರಯತ್ನಿಸಿತು. ತ್ಯಾಗವೇ ಅತ್ಯುತ್ತಮವಾದ ಧರ್ಮವೆಂಬುದು ನನ್ನ ಮನಸ್ಸಿಗೆ ಬಹಳ ಹಿಡಿಸಿತು.

ಈ ವ್ಯಾಸಂಗದಿಂದ, ಇತರ ಧರ್ಮ ಪ್ರವರ್ತಕರ ಕೃತಿಗಳನ್ನು ಓದುವ ನನ್ನ ಆಸೆ ತೀವ್ರವಾಯಿತು. ಒಬ್ಬ ಮಿತ್ರರು ಕಾರ್ಲೈಲನ 'ವಿಭೂತಿ ಪುರುಷರು ಮತ್ತು ಅವರ ಪೂಜೆ' (Heroes & Hero Worship) ಎಂಬ ಗ್ರಂಥವನ್ನು ಓದಬೇಕೆಂದು ಹೇಳಿದರು. ಅದರಲ್ಲಿ ಮೊಹಮ್ಮದ್ ಪೈಗಂಬರರ ವಿಷಯವನ್ನು ಓದಿದೆನು. ಅವರ ಮಹತ್ವ, ಧೀರತನ, ತಪಸ್ಸು ಇವೆಲ್ಲವುಗಳ ಪರಿಚಯ ನನಗೆ ಆಯಿತು.

ಇದಕ್ಕಿಂತ ಹೆಚ್ಚಾಗಿ ಧರ್ಮದ ವಿಷಯಗಳನ್ನು ತಿಳಿದುಕೊಳ್ಳಲು ನನಗೆ ಸಾಧ್ಯವಾಗಲಿಲ್ಲ. ನನ್ನ ಪರೀಕ್ಷೆಗೆ ನಾನು ಓದಬೇಕಾಗಿದ್ದುದರಿಂದ ಬೇರೆ ವಿಷಯಗಳಿಗೆ ನನಗೆ ಸ್ವಲ್ಪವೂ ಕಾಲವೇ ಸಿಕ್ಕುತ್ತಿರಲಿಲ್ಲ. ಆದರೆ 'ನಾನು ಇನ್ನೂ ಹೆಚ್ಚು ಧಾರ್ಮಿಕ ಗ್ರಂಥಗಳನ್ನು ಓದಬೇಕು, ಜಗತ್ತಿನ ಎಲ್ಲ ಮುಖ್ಯ ಮತಗಳ ಪರಿಚಯವನ್ನೂ ಮಾಡಿಕೊಳ್ಳಬೇಕು" ಎಂಬುದಾಗಿ ನಾನು ದೃಢ ನಿಶ್ಚಯ ಮಾಡಿಕೊಂಡೆನು.

ಇದರ ಜತೆಯಲ್ಲಿ, ನಾಸ್ತಿಕತೆಯ ಪರಿಚಯವೂ ಅಲ್ಪಸ್ವಲ್ಪ ಆಗದಿರಲು ಹೇಗೆ ಸಾಧ್ಯ? ಬ್ರಾಡ್ಲಾರವರ ಹೆಸರೂ ಅವರ ನಾಸ್ತಿಕವಾದವೆಂಬುದೂ ಎಲ್ಲ ಭಾರತೀಯರಿಗೂ ತಿಳಿದ ಅಂಶ. ನಾನು ಆ ವಿಷಯದ ಮೇಲೆ ಕೆಲವು ಪುಸ್ತಕಗಳನ್ನು ಓದಿದೆನು. ಈಗ ಅವುಗಳ ಹೆಸರುಗಳು ಜ್ಞಾಪಕವಿಲ್ಲ. ಅದರಿಂದ ನನ್ನ ಮೇಲೆ ಏನೂ ಪರಿಣಾಮವಾಗಲಿಲ್ಲ. ಏಕೆಂದರೆ ನಾನು ಆಗಲೇ ನಾಸ್ತಿಕವಾದದ ಮರಳುಗಾಡನ್ನು ದಾಟಿದ್ದೆನು. ಆಗ ಅತ್ಯಂತ ಪ್ರಸಿದ್ಧರಾಗಿದ್ದ ಶ್ರೀಮತಿ ಬೆಸೆಂಟರು, ನಾಸ್ತಿಕವಾದದಿಂದ ಆಸ್ತಿಕವಾದಕ್ಕೆ ಪರಿವರ್ತಿತರಾಗಿದ್ದರು. ಆ ಸಂಗತಿಯಿಂದ ಸಹ ನಾಸ್ತಿಕವಾದಕ್ಕೆ ನನ್ನ

ಔದಾಸೀನ್ಯ ಇನ್ನೂ ಹೆಚ್ಚಾಯಿತು. "ನಾನು ಥಿಯಾಸಫಿಸ್ಟ್ ಆದುದು ಹೇಗೆ?" ಎಂದು ಆಕೆ ಬರೆದಿದ್ದ ಪುಸ್ತಕವನ್ನೂ ನಾನು ಓದಿದ್ದೆನು.

ಸುಮಾರು ಅದೇ ಕಾಲದಲ್ಲಿ ಬ್ರಾಡ್ಲಾ ಸ್ವರ್ಗಸ್ಥರಾದರು. ಓಕಿಂಗ್ ಸ್ಮಶಾನದಲ್ಲಿ ಅವರನ್ನು ಸಮಾಧಿ ಮಾಡಿದರು. ನಾನು ಅಲ್ಲಿಗೆ ಹೋಗಿದ್ದೆನು. ಲಂಡನ್ನಿನಲ್ಲಿದ್ದ ಎಲ್ಲ ಭಾರತೀಯರೂ ಅಲ್ಲಿಗೆ ಬಂದಿದ್ದರೆಂದೇ ನನ್ನ ನಂಬಿಕೆ. ಮೃತರಿಗೆ ಅಂತ್ಯ ಮರ್ಯಾದೆಯನ್ನು ಸಲ್ಲಿಸಲು ಕೆಲವು ಪಾದರಿಗಳೂ ಅಲ್ಲಿ ಬಂದಿದ್ದರು. ಅಂತ್ಯಕ್ರಿಯೆಯನ್ನು ಮುಗಿಸಿಕೊಂಡು ಹಿಂದಿರುಗಿ ಹೊರಡುವಾಗ, ಒಂದು ರೈಲ್ವೆ ನಿಲ್ದಾಣದಲ್ಲಿ ನಾವು ರೈಲಿಗೆ ಕಾಯಬೇಕಾಯಿತು. ಗುಂಪಿನಲ್ಲಿದ್ದ ಒಬ್ಬ ಪ್ರಚಂಡ ನಾಸ್ತಿಕವಾದಿ ಒಬ್ಬ ಪಾದರಿಯನ್ನು ಕಾಡತೊಡಗಿದ:

"ಸರಿ ಸ್ವಾಮಿ. ದೇವರು ಇದ್ದಾನೆಂದು ನೀವು ನಂಬುತ್ತೀರಿ, ಅಲ್ಲವೇ" ಆ ಸದ್ಗೃಹಸ್ಥ ಪಾದರಿ ಮೇಲು ಧ್ವನಿಯಲ್ಲಿ "ಹೌದು" ಎಂದು ಉತ್ತರವಿತ್ತರು.

ನಾಸ್ತಿಕ, ಆತ್ಮ ವಿಶ್ವಾಸದ ಮುಗುಳು ನಗೆಯೊಂದಿಗೆ "ಭೂಮಿಯ ಸುತ್ತಳತೆ ೨೮೦೦೦ ಮೈಲಿ ಎಂದೂ ನೀವು ನಂಬುತ್ತೀರಿ ಅಲ್ಲವೆ?" ಎಂದು ಕೇಳಿದನು.

"ಹೌದು."

"ಹಾಗಾದರೆ ಹೇಳಿ ನಿಮ್ಮ ದೇವರ ಅಳತೆ ಎಷ್ಟು? ಅವನೆಲ್ಲಿದ್ದಾನೆ?"

"ನಾವು ಗ್ರಹಿಸುವುದು ಮಾತ್ರ ಆದರೆ, ಆತ ನಮ್ಮಿಬ್ಬರ ಹೃದಯದಲ್ಲಿಯೂ ಇದ್ದಾನೆ."

ಪ್ರಚಂಡ ನಾಸ್ತಿಕವಾದಿ, ಗೆಲುವಿನ ದೃಷ್ಟಿಯಿಂದ ನಮ್ಮ ಕಡೆ ನೋಡಿ ನನ್ನನ್ನು ಎಳೆಯ ಮಗುವೆಂದು ತಿಳಿಯಬೇಡಿ!" ಎಂದನು.

ಪಾದರಿ ವಿನಯದಿಂದ ಮೌನವಾದನು. ಈ ಸಂವಾದ, ನಾಸ್ತಿಕವಾದದಲ್ಲಿ ನನಗಿದ್ದ ವಿರೋಧವನ್ನು ಇನ್ನೂ ಹೆಚ್ಚಿಸಿತು.

೨೧

ನಿರ್ಬಲರಿಗೆ ಬಲ ರಾಮ

ನಾನು ಹಿಂದೂ ಧರ್ಮದ ಮತ್ತು ಜಗತ್ತಿನ ಇತರ ಧರ್ಮಗಳ ಸ್ಥೂಲ ಪರಿಚಯವನ್ನು ಸಂಪಾದಿಸಿಕೊಂಡಿದ್ದರೂ, ಆಪತ್ತುಗಳಿಂದ ನನ್ನನ್ನು ಪಾರು ಮಾಡಲು ಅಷ್ಟೇ ಜ್ಞಾನ ಸಾಕಾಗುವುದಿಲ್ಲವೆಂಬುದು ನನಗೆ ತಿಳಿದಿರಬೇಕಾಗಿದ್ದಿತು. ತನಗೆ ಕಷ್ಟ ಪ್ರಾಪ್ತವಾದಾಗ, ತನ್ನನ್ನು ರಕ್ಷಿಸುವುದು ಯಾವುದು ಎಂಬುದರ ಸುಳಿವೂ ಜ್ಞಾನವೂ ಮನುಷ್ಯನಿಗೆ, ಆ ವೇಳೆಯಲ್ಲಿ ಇರುವುದಿಲ್ಲ. ಆ ಮನುಷ್ಯ ನಾಸ್ತಿಕನಾದರೆ, ತಾನು ಸುರಕ್ಷಿತವಾಗಿ ಪಾರಾದುದು ಒಂದು ಆಕಸ್ಮಿಕ ಎಂದು ಭಾವಿಸುತ್ತಾನೆ. ಆಸ್ತಿಕನಾದರೆ ಅವನು "ದೇವರು ನನ್ನನ್ನು ಕಾಪಾಡಿದ" ಎನ್ನುತ್ತಾನೆ. ಈ ದೈವಭಕ್ತಿಯ ಮೂಲದಲ್ಲಿ ತನ್ನ ಧಾರ್ಮಿಕ ವ್ಯಾಸಂಗ ಅಥವಾ ಆಧ್ಯಾತ್ಮ ಶಿಸ್ತು ಇದ್ದಿತೆಂದು ಅವನು ತನ್ನ ಬುದ್ಧಿಗೆ ಹೊಳೆದಂತೆ ನಿರ್ಣಯ ಮಾಡಿಕೊಳ್ಳುತ್ತಾನೆ. ಆದರೆ ತಾನು ರಕ್ಷಿತನಾದ ಆ ಗಳಿಗೆಯಲ್ಲಿ, ತನ್ನನ್ನು ಕಾಪಾಡಿದುದು ತನ್ನ ಆಧ್ಯಾತ್ಮ ಶಿಸ್ತೇ ಅಥವಾ ಬೇರೆ ಇನ್ನಾವುದಾದರೂ ಶಕ್ತಿಯೆ ಎಂಬುದು ಅವನಿಗೆ ತಿಳಿಯುವುದಿಲ್ಲ. ತನ್ನ ಆಧ್ಯಾತ್ಮ ಶಕ್ತಿಯ ಹೆಮ್ಮೆಯನ್ನು ಹೇಳಿಕೊಳ್ಳುವ ಯಾರಿಗೆ ತಾನೇ, ಆ ಶಕ್ತಿ, ದೀನವಾಗಿ ಧೂಳಿನಲ್ಲಿ ಬಿದ್ದು ಹೊರಳುವುದು ಕಣ್ಣಿಗೆ ಕಂಡಿಲ್ಲ? ಅನುಭವವಿಲ್ಲದೆ ಸುಮ್ಮನೆ ಧರ್ಮದ ಜ್ಞಾನವನ್ನು ಮಾತ್ರ ಹೊಂದಿರುವುದು, ಅಂತಹ ಕಠಿಣ ಸಮಯಗಳಲ್ಲಿ ಬರಿಯ ಹೊಟ್ಟಿನಂತೆ (ಧಾನ್ಯವಲ್ಲ) ಆಗುತ್ತದೆ.

ಧರ್ಮದ ಬರಿಯ ತಿಳಿವಳಿಕೆ ನಿರುಪಯೋಗ, ಎಂಬುದು ಇಂಗ್ಲೆಂಡಿನಲ್ಲಿ ನನಗೆ ಮೊದಲು ಗೊತ್ತಾಯಿತು. ಅದಕ್ಕೆ ಮುಂಚೆ ಅಂತಹ ಸಂಕಟಗಳಿಂದ ನಾನು ರಕ್ಷಿತನಾದುದು ಹೇಗೆ ಎಂದು ಹೇಳಲಾರೆನು. ಆಗ ನಾನು ಇನ್ನೂ ಸಣ್ಣವನಾಗಿದ್ದೆನು. ಆದರೆ ಈ ವೇಳೆಗೆ ನನ್ನ ವಯಸ್ಸು ಇಪ್ಪತ್ತಾಗಿತ್ತು; ಪತಿಯಾಗಿ, ತಂದೆಯಾಗಿ ನನಗೆ ಸ್ವಲ್ಪ ಅನುಭವವೂ ಉಂಟಾಗಿತ್ತು.

ನನಗೆ ಜ್ಞಾಪಕವಿರುವ ಮಟ್ಟಿಗೆ, ನಾನು ಇಂಗ್ಲೆಂಡಿನಲ್ಲಿದ್ದ ಕೊನೆಯ ವರ್ಷದಲ್ಲಿ (೧೮೯೦) ಪೋರ್ಟ್ಸ್‌ಮತ್‌ನಲ್ಲಿ ಒಂದು ಶಾಕಾಹಾರಿ ಸಮ್ಮೇಳನ

ನಡೆಯಿತು. ಅಲ್ಲಿಗೆ ಹೋಗಲು ನನಗೂ ಭಾರತದ ಮತ್ತೊಬ್ಬ ಮಿತ್ರರಿಗೂ ಆಹ್ವಾನ ಬಂದಿತ್ತು. ನಾವು ಅಲ್ಲಿಗೆ ಹೋದೆವು. ಪೋರ್ಟ್ಸ್‌ಮತ್, ದೊಡ್ಡ ರೇವುಪಟ್ಟಣ. ಅಲ್ಲಿ ನಾವಿಕರ ಜನಸಂಖ್ಯೆ ಹೆಚ್ಚು. ಅನೀತಿಯುತ ರಾದ ಅನೇಕ ಸ್ತ್ರೀಯರ ಮನೆಗಳು ಅಲ್ಲಿ ಇವೆ. ಆ ಸ್ತ್ರೀಯರು ಜಾರೆಯರಲ್ಲ, ಗರತಿಯರೂ ಅಲ್ಲ. ಸ್ವಾಗತ ಸಮಿತಿಯವರಿಗೆ ಅದೊಂದೂ ಗೊತ್ತಿರಲಿಲ್ಲವೆಂದು ಹೇಳಬೇಕಾದುದೇ ಇಲ್ಲ. ಒಂದೆರಡು ದಿನ ಇದ್ದು ಹೋಗುವ ನಮ್ಮಂತಹ ಪ್ರಯಾಣಿಕರಿಗಾಗಿ, ಪೋರ್ಟ್ಸ್‌ಮತ್‌ನಂತಹ ದೊಡ್ಡ ನಗರದಲ್ಲಿ ಯೋಗ್ಯ ವಾದ ವಸತಿ ಯಾವುದು, ಯಾವುದು ಯೋಗ್ಯವಲ್ಲ ಎಂಬುದನ್ನು ಗೊತ್ತು ಪಡಿಸುವುದು ಕಷ್ಟವಾಗುತ್ತಿದ್ದಿತು.

ನಾವು ಸಮ್ಮೇಳನದಿಂದ ಸಂಜೆಗೆ ನಮ್ಮ ಬಿಡಾರಕ್ಕೆ ಹಿಂದಿರುಗಿದೆವು. ಊಟವಾದ ಮೇಲೆ ನಾವು ಇಸ್ಪೀಟ್ ಆಡಲು ಕುಳಿತೆವು. ನಮ್ಮ ಜತೆಗೆ ಮನೆಯ ಯಜಮಾನತಿ ಸಹ ಸೇರಿಕೊಂಡಳು. ಇಂಗ್ಲೆಂಡಿನಲ್ಲಿ ಸದ್ಗೃಹಸ್ಥರ ಮನೆಯ ಮಹಿಳೆಯರೂ ಸಹ, ಹೀಗೆ ಗಂಡಸರೊಂದಿಗೆ ಆಟದಲ್ಲಿ ಸೇರುವುದು ಪದ್ಧತಿ. ಎಲ್ಲ ಆಟಗಾರರೂ ಸ್ವಾಭಾವಿಕವಾಗಿ ವಿನೋದದ ಮಾತುಗಳನ್ನಾಡುತ್ತಾರೆ. ಆದರೆ ಇಲ್ಲಿ ನನ್ನ ಮಿತ್ರರೂ ಮನೆಯ ಯಜಮಾನಿಯೂ ಅಶ್ಲೀಲವಾದ ವಿನೋದವನ್ನು ಪ್ರಾರಂಭಿಸಿದರು. ನನ್ನ ಮಿತ್ರ, ಈ ವಿದ್ಯೆಯಲ್ಲಿ ಪ್ರವೀಣ ಎಂಬುದು ನನಗೆ ತಿಳಿದಿರಲಿಲ್ಲ. ನನಗೂ ಅದರಲ್ಲಿ ರುಚಿ ತೋರಿ ನಾನೂ ಆ ವಿನೋದದಲ್ಲಿ ಸೇರಿಕೊಂಡೆನು. ನಾನು ಮಿತಿಯನ್ನು ದಾಟಿ ಇಸ್ಪೀಟನ್ನು ಅವರಿಗೇ ಬಿಟ್ಟು ದುಶ್ಚೇಷ್ಟೆಯನ್ನು ಇನ್ನೇನು ಪ್ರಾರಂಭಿಸಬೇಕು ಎನ್ನುವಷ್ಟರಲ್ಲಿ ದೇವರು, ಆ ಸನ್ಮಿತ್ರನ ಬಾಯಿಂದ ಈ ಪವಿತ್ರವಾದ ಎಚ್ಚರಿಕೆಯನ್ನು ಹೊರಡಿಸಿದನು. "ಈ ಪಿಶಾಚಿ ನಿನ್ನ ಮನಸ್ಸನ್ನು ಏಕೆ ಹೊಕ್ಕಿತು! ಇಲ್ಲಿಂದ ನಡೆ. ಓಡು" ಎಂದು.

ನನಗೆ ನಾಚಿಕೆಯಾಯಿತು. ಎಚ್ಚರಗೊಂಡೆನು. ಮನಸ್ಸಿನೊಳಗೇ ಆ ಮಿತ್ರನಿಗೆ ಕೃತಜ್ಞತೆಯನ್ನು ಅರ್ಪಿಸಿದೆನು. ನಮ್ಮ ತಾಯಿಯ ಎದುರಿಗೆ ತೆಗೆದುಕೊಂಡಿದ್ದ ಪ್ರತಿಜ್ಞೆ ಜ್ಞಾಪಕಕ್ಕೆ ಬಂದು ಸ್ಥಳವನ್ನು

ಬಿಟ್ಟು ಓಡಿದೆನು. ನಾನು ನಡುಗುತ್ತಿದ್ದೆನು. ಎದೆ ಡವಡವನೆ ಬಡಿದು ಕೊಳ್ಳುತ್ತಿದ್ದಿತು. ಬೇಟೆಗಾರನ ಕೈಯಿಂದ ತಪ್ಪಿಸಿಕೊಂಡ ಪ್ರಾಣಿಯಂತೆ ಓಡಿದೆನು.

ನನ್ನ ಹೆಂಡತಿಯ ಹೊರತಾಗಿ, ಬೇರೊಬ್ಬ ಸ್ತ್ರೀಯಿಂದ ನಾನು ವಿಕಾರಕ್ಕೆ ವಶನಾದುದು ಅದೇ ಮೊದಲು. ಆ ರಾತ್ರಿ ನನಗೆ ನಿದ್ರೆಬರಲಿಲ್ಲ. ಬಗೆಬಗೆಯ ಯೋಚನೆಗಳು ಮನಸ್ಸನ್ನು ಕಾಡುತ್ತಿದ್ದವು. ಮನೆಯನ್ನು ಬಿಟ್ಟು ಹೋಗಲೆ ? ಊರನ್ನೇ ಬಿಟ್ಟು ಓಡಲಿ ? ನಾನು ಎಲ್ಲಿದ್ದೇನೆ ? ನನ್ನ ಬುದ್ಧಿ ನನ್ನ ಸ್ವಾಧೀನದಲ್ಲಿಲ್ಲದಿದ್ದಲ್ಲಿ ಏನೇನು ಆಗಿ ಹೋಗಬಹುದಾಗಿದ್ದಿತು ? ಅಲ್ಲಿಂದ ಮುಂದೆ ನಾನು ಬಹಳ ಎಚ್ಚರದಿಂದ ಇರಬೇಕೆಂದು ನಿಶ್ಚಯಿಸಿದೆನು. ಮನೆಬಿಟ್ಟು ಹೊರಕ್ಕೆ ಹೋಗಬಾರದು ; ಆದರೆ ಪೋರ್ಟ್ಸ್‌ಮತ್ ನಗರವನ್ನೇ ಬಿಡಬೇಕು. ಶಾಕಾಹಾರಿ ಸಮ್ಮೇಳನ ಎರಡು ದಿನಗಳಿಗಿಂತ ಹೆಚ್ಚು ಕಾಲ ನಡೆಯುವುದಾಗಿರಲಿಲ್ಲ. ಮರುದಿವಸ ಸಂಜೆ ನಾನು ಪೋರ್ಟ್ಸ್‌ಮತ್‌ನಿಂದ ಹೊರಟೆನೆಂದೂ, ನನ್ನ ಮಿತ್ರರು ಇನ್ನೂ ಕೆಲವು ದಿನಗಳ ಮಟ್ಟಿಗೆ ಅಲ್ಲಿಯೇ ಉಳಿದರೆಂದೂ ನನ್ನ ನೆನಪು.

ಆಗ ನನಗೆ ಧರ್ಮವೆಂದರೇನು ? ಈಶ್ವರ ಹೇಗಿದ್ದಾನೆ ? ಆತ ನಮ್ಮ ಅಂತರಂಗದಲ್ಲಿ ಹೇಗೆ ಕೆಲಸ ಮಾಡುತ್ತಾನೆ ? ಇದಾವುದೂ ತಿಳಿದಿರಲಿಲ್ಲ. ಈಗ ದೇವರು ನನ್ನನ್ನು ರಕ್ಷಿಸಿದನೆಂದು ಮಾತ್ರ ನಾನು ಅಸ್ಪಷ್ಟವಾಗಿ ತಿಳಿದು ಕೊಂಡೆನು. ಎಲ್ಲ ಸಂಕಟ ಸಮಯಗಳಲ್ಲಿಯೂ ಆತ ನನ್ನನ್ನು ರಕ್ಷಿಸಿದ್ದಾನೆ. "ದೇವರು ನನ್ನನ್ನು ರಕ್ಷಿಸಿದನು" ಎಂಬ ವಾಕ್ಯದಲ್ಲಿ ಇಂದು ಮೊದಲಿಗಿಂತ ನನಗೆ ಹೆಚ್ಚು ಅರ್ಥ ಕಾಣುತ್ತಿದೆಯೆಂಬುದು ನಿಶ್ಚಯ. ಆದರೂ ಅದರ ಪೂರ್ಣ ಅರ್ಥವನ್ನು ನಾನು ಇನ್ನೂ ಗ್ರಹಿಸಿಲ್ಲವೆಂದೇ ನನ್ನ ಭಾವನೆ. ಹೆಚ್ಚಾದ ಅನುಭವಗಳಿಂದ ಮಾತ್ರವೇ ಈ ವಿಚಾರದಲ್ಲಿ ಇನ್ನೂ ಹೆಚ್ಚು ಜ್ಞಾನ ಸಾಧ್ಯ. ಆದರೆ ನನ್ನ ಎಲ್ಲ ಆಧ್ಯಾತ್ಮಿಕ ಆಪತ್ತುಗಳಲ್ಲಿಯೂ—ವಕೀಲಿ ಕಾರ್ಯದಲ್ಲಿ, ಸಂಸ್ಥೆಗಳನ್ನು ನಡೆಸುವುದರಲ್ಲಿ, ರಾಜಕೀಯದಲ್ಲಿ—ದೇವರು ನನ್ನನ್ನು ಪಾರುಮಾಡಿದನೆಂದು ಹೇಳಬಲ್ಲೆನು. ಪೂರ್ಣ ನಿರಾಸೆಯಾಗಿ "ಸಹಾಯವಿಲ್ಲ, ಸುಖವಿಲ್ಲ" ಎಂಬಂತೆ ನಾನು ಕೈಕಟ್ಟಿಕೊಂಡು ಕುಳಿತಿದ್ದಾಗ

ಎಲ್ಲಿಂದಲೋ ಹೇಗೋ ಸಹಾಯ ಬಂದು ಒದಗುವುದೆಂಬುದು ನನ್ನ ಅನುಭವ. ಪರಮಾತ್ಮನ ಸ್ತುತಿ, ಪ್ರಾರ್ಥನೆ, ಉಪಾಸನೆ ಬರಿಯ ಅಂಧವಿಶ್ವಾಸವಲ್ಲ; ಅವು ನಮ್ಮ ಆಹಾರ, ಪಾನೀಯ, ಕುಳಿತಿರುವುದು, ನಡೆದಾಡುವುದು, ಈ ಎಲ್ಲ ಕಾರ್ಯಗಳಿಗಿಂತ ಹೆಚ್ಚು ವಾಸ್ತವ. ಅವೇ ಸತ್ಯ; ಉಳಿದುವುಗಳೆಲ್ಲ ಅಸತ್ಯ ಎಂದು ಹೇಳುವುದೂ ಅತಿಶಯೋಕ್ತಿಯಲ್ಲ.

ಇಂತಹ ಉಪಾಸನೆಯೂ ಪ್ರಾರ್ಥನೆಯೂ ಬರಿಯ ವಚನ ವೈಭವವಲ್ಲ. ಅದರ ಮೂಲ, ಕಂಠವಲ್ಲ, ಹೃದಯ. ಆದುದರಿಂದ ನಾನು ಪ್ರೇಮದ ಹೊರತು ಮತ್ತೇನೂ ಇಲ್ಲದಿರುವ ಹೃದಯ ಪಾರಿಶುದ್ಧತೆಯನ್ನು ಸಂಪಾದಿಸಿ ಕೊಂಡರೆ, ಹೃದಯ ತಂತಿಗಳನ್ನೆಲ್ಲ ಸುಸಂಘಟಿತವಾಗಿ ಇಟ್ಟುಕೊಂಡರೆ, ಆಗ ಹೃದಯದಿಂದ ಹೊರಡುವ ಸ್ವರ ಗಗನಗಾಮಿಯಾಗುವುದು. ಪ್ರಾರ್ಥನೆಗೆ ನಾಲಿಗೆಯ ಆವಶ್ಯಕತೆ ಇಲ್ಲ. ಅದು ಸ್ವಭಾವದಿಂದಲೇ ಅದ್ಭುತ ವಸ್ತು; ಇಂದ್ರಿಯ ವ್ಯಾಪಾರಕ್ಕೆ ಒಳಪಟ್ಟುದಲ್ಲ. ಹೃದಯವನ್ನು ವಿಕಾರರೂಪದ ಕಶ್ಮಲದಿಂದ ಶುದ್ಧಿಗೊಳಿಸಬೇಕಾದರೆ, ಉಪಾಸನೆಯೇ ಜೀವನ ಝರಿ ಎಂಬು ದರಲ್ಲಿ ನನಗೆ ಸ್ವಲ್ಪವೂ ಸಂಶಯವಿಲ್ಲ. ಆದರೆ ಇದರೊಡನೆ ಪೂರ್ಣವಾದ ನಮ್ರತೆ ಬೆರೆಯಬೇಕು.

೨೨

ನಾರಾಯಣ ಹೇಮಚಂದ್ರ

ಸುಮಾರು ಇದೇ ಸಮಯಕ್ಕೆ ನಾರಾಯಣ ಹೇಮಚಂದ್ರ ಇಂಗ್ಲೆಂಡಿಗೆ ಬಂದನು. ನಾನು ಆತನೊಬ್ಬ ಗ್ರಂಥಕರ್ತನೆಂದು ಕೇಳಿದ್ದೆನು. ಭಾರತೀಯ ರಾಷ್ಟ್ರೀಯ ಸಂಘದ (National Indian Association) ಶ್ರೀಮತಿ ಮ್ಯಾನಿಂಗ್ ಎಂಬಾಕೆಯ ಮನೆಯಲ್ಲಿ ನಾವು ಸಂಧಿಸಿದೆವು. ನಾನು ಎಲ್ಲರೊಂದಿಗೂ ಸರಳನಾಗಿ ಮಿಳನವಾಗದ ವ್ಯಕ್ತಿ ಎಂಬುದು ಶ್ರೀಮತಿ ಮ್ಯಾನಿಂಗ್‌ಗೆ ತಿಳಿದಿದ್ದಿತು. ನಾನು ಅವಳ ಮನೆಗೆ ಹೋದಾಗಲೆಲ್ಲ ಬಾಯಿಗೆ ಬೀಗ ಹಾಕಿಕೊಂಡು ಕುಳಿತಿರುತ್ತಿದ್ದೆನು. ಯಾರಾದರೂ ನನ್ನನ್ನು ಮಾತನಾಡಿಸಿದರೆ ಮಾತ್ರ ಮಾತನಾಡುತ್ತಿದ್ದೆನು. ಇಲ್ಲದಿದ್ದರೆ ಅದೂ ಇಲ್ಲ. ಆಕೆ ನನ್ನನ್ನು ನಾರಾಯಣ ಹೇಮಚಂದ್ರನಿಗೆ ಪರಿಚಯ ಮಾಡಿಸಿ

ಕೊಟ್ಟಳು. ಆತನಿಗೆ ಇಂಗ್ಲೀಷು ಬರುತ್ತಿರಲಿಲ್ಲ. ಆತನ ಉಡುಪು ವಿಚಿತ್ರವಾಗಿದ್ದಿತು ; ಒಡ್ಡೊಡ್ಡಾದ ಒಂದು ಷರಾಯಿ, ಸುಕ್ಕಾದ ಮಾಸಿದ ಪಾರಸೀ ಮಾದರಿಯ ಒಂದು ಕಂದು ಬಣ್ಣದ ಕೋಟು. ನೆಕ್‌ಟೈ ಕಾಲರ್ ಇಲ್ಲ ; ಉಣ್ಣೆಯ, ಕುಚ್ಚು ಇರುವ ಕುಲಾವಿ. ಆತ ಉದ್ದವಾದ ಗಡ್ಡವನ್ನು ಬೆಳೆಸಿದ್ದನು.

ಆತನದು ಸಾಧಾರಣ ಆಕೃತಿ, ಕಡಿಮೆ ಎತ್ತರ. ಅವನ ದುಂಡಾದ ಮುಖದಲ್ಲಿ ಸಿಡುಬಿನ ಕಲೆಗಳಿದ್ದವು. ಮೂಗು ಚೂಪಾಗಿಯೂ ಇರಲಿಲ್ಲ, ಮೊಂಡಾಗಿಯೂ ಇರಲಿಲ್ಲ. ಅವನು ಯಾವಾಗಲೂ ಕೈಯಿಂದ ಗಡ್ಡವನ್ನು ನೀವಿಕೊಳ್ಳುತ್ತಿದ್ದನು.

ನಾಗರಿಕ ಉಡುಪನ್ನು ಧರಿಸಿದ ಸಭ್ಯ ಸಮಾಜದ ನಡುವೆ ಹೀಗೆ ವಿಚಿತ್ರವಾದ ಉಡುಪು ಧರಿಸುವ ವ್ಯಕ್ತಿಯ ಕಡೆಗೆ ಎಲ್ಲರ ದೃಷ್ಟಿಯೂ ಹರಿಯುವುದು ಸ್ವಾಭಾವಿಕವೇ ಆಗಿದ್ದಿತು.

ನಾನು ಆತನಿಗೆ ಹೀಗೆ ಹೇಳಿದೆನು. "ನಿಮ್ಮ ವಿಷಯ, ನಾನು ಬಹಳ ಕೇಳಿದ್ದೇನೆ. ನಿಮ್ಮ ಬರವಣಿಗೆಗಳಲ್ಲಿ ಕೆಲವನ್ನೂ ಓದಿದ್ದೇನೆ. ನೀವು ದಯುವಿಟ್ಟು ನನ್ನಲ್ಲಿಗೆ ಬಂದರೆ ನನಗೆ ಬಹಳ ಸಂತೋಷ."

"ಆಗಲಿ. ನೀವು ಇರುವುದು ಎಲ್ಲಿ ?"

"ಸ್ಟೋರ್ ಸ್ಟ್ರೀಟ್ ಎಂಬಲ್ಲಿ—"

"ಹಾಗಾದರೆ ನಾವು ನೀವೂ ನೆರೆಹೊರೆಯವರು. ನಾನು ಇಂಗ್ಲೀಷನ್ನು ಕಲಿಯಬೇಕೆಂದಿದ್ದೇನೆ. ನೀವು ಹೇಳಿಕೊಡುವಿರಾ ?"

"ನನ್ನ ಕೈಲಾದಷ್ಟನ್ನು ನಿಮಗೆ ಹೇಳಿಕೊಡಲು ನನಗೆ ಸಂತೋಷ, ನನ್ನ ಎಲ್ಲ ಪ್ರಯತ್ನಗಳನ್ನೂ ಮಾಡುತ್ತೇನೆ. ಬೇಕಾದರೆ ನಾನೇ ನೀವಿರುವಲ್ಲಿಗೆ ಬರುತ್ತೇನೆ."

"ಬೇಡಿ, ನಾನೇ ನೀವಿರುವಲ್ಲಿಗೆ ಬರುತ್ತೇನೆ. ಜತೆಯಲ್ಲಿ ಒಂದು ಭಾಷಾಂತರದ ಅಭ್ಯಾಸದ ಪುಸ್ತಕವನ್ನೂ ತರುತ್ತೇನೆ."

ನಾವು ಒಬ್ಬರನ್ನೊಬ್ಬರು ಭೇಟಿಯಾಗುವುದನ್ನು ಗೊತ್ತುಮಾಡಿಕೊಂಡೆವು. ಜಾಗ್ರತೆಯಾಗಿಯೇ ನಾವು ಆಪ್ತ ಗೆಳೆಯರಾದೆವು.

ನಾರಾಯಣ ಹೇಮಚಂದ್ರನಿಗೆ ವ್ಯಾಕರಣ ಏನೂ ಗೊತ್ತಿರಲಿಲ್ಲ.

ಅವನಿಗೆ "ಕುದುರೆ" ಕ್ರಿಯಾಪದ. "ಓಡು" ಎಂಬುದು ನಾಮಪದ. ಅಂತಹ ಇನ್ನೂ ಅನೇಕ ವಿನೋದ ಸಂಗತಿಗಳು ನನಗೆ ಜ್ಞಾಪಕವಿವೆ. ಆದರೆ ಆತ ತನ್ನ ಅಜ್ಞಾನಕ್ಕೆ ಹೆದರುವ ಮನುಷ್ಯನಾಗಿರಲಿಲ್ಲ. ವ್ಯಾಕರಣದ ತನ್ನ ಅಲ್ಪಜ್ಞಾನ, ಆತನ ಮೇಲೆ ಯಾವ ಪರಿಣಾಮವನ್ನೂ ಮಾಡಲಾರದು ಹಾಯಿತು. ತನ್ನ ವ್ಯಾಕರಣದ ಅಜ್ಞಾನ ತನ್ನ ನಾಚಿಕೆಯ ಪ್ರಸಂಗವೆಂದು ಅವನು ಎಂದಿಗೂ ಭಾವಿಸಿರಲಿಲ್ಲ.

ಆತ, ಪೂರ್ಣ ಔದಾಸೀನ್ಯದಿಂದ ನನಗೆ ಹೀಗೆ ಹೇಳಿದನು : "ನಾನು ನಿನ್ನ ಹಾಗೆ ಎಂದೂ ಶಾಲೆಗೆ ಹೋದವನಲ್ಲ. ನನ್ನ ವಿಚಾರಗಳನ್ನು ವ್ಯಕ್ತ ಪಡಿಸಲು ವ್ಯಾಕರಣದ ಆವಶ್ಯಕತೆ ನನಗೆ ಎಂದೂ ಉಂಟಾಗಿಲ್ಲ. "ಅದಿರಲಿ, ನಿನಗೆ ವಂಗಭಾಷೆ ಗೊತ್ತಿದೆಯೆ?" ಎಂದೆ. "ನನಗೆ ಗೊತ್ತಿದೆ. ನಾನು ವಂಗದೇಶ ದಲ್ಲಿ ತಿರುಗಾಡಿದ್ದೇನೆ. ಮಹರ್ಷಿ ದೇವೇಂದ್ರನಾಥರ ಕೃತಿಗಳನ್ನು ಗುಜರಾತಿ ಮಾತನಾಡುವವರಿಗಾಗಿ ಅನುವಾದ ಮಾಡಿಕೊಟ್ಟಿರುವವನು ನಾನು. ಇತರ ಅನೇಕ ಭಾಷೆಗಳಲ್ಲಿರುವ ಕೃತಿರತ್ನಗಳನ್ನು ಗುಜರಾತಿಗೆ ಅನುವಾದಿಸಬೇಕೆಂಬುದು ನನ್ನ ಆಸೆ. ನನ್ನ ಅನುವಾದ ಬರಿಯ ಶಬ್ದಕ್ಕೆ ಶಬ್ದವಲ್ಲವೆಂಬುದು ನಿನಗೆ ಗೊತ್ತಿದೆ. ಮೂಲದ ತಿರುಳನ್ನು ಅನುವಾದ ದಲ್ಲಿ ತಿಳಿಸಿದರೆ ನನಗೆ ಅಷ್ಟು ಸಾಕು. ಹೆಚ್ಚು ಜ್ಞಾನವಿರುವ ಇತರರು ಮುಂದೆ ಇದಕ್ಕಿಂತ ಉತ್ತಮವಾಗಿ ಮಾಡಬಹುದು. ಆದರೆ ವ್ಯಾಕರಣದ ಸಹಾಯವಿಲ್ಲದೆ ನಾನು ಮಾಡಿರುವಷ್ಟರಿಂದ, ನನಗೆ ಸಮಾಧಾನವಾಗಿದೆ. ನನಗೆ ಮರಾಠಿ, ಹಿಂದೀ, ಬಂಗಾಳೀ ಇವು ಗೊತ್ತು. ಈಗ ಇಂಗ್ಲಿಷನ್ನು ಕಲಿಯಲು ಪ್ರಾರಂಭಿಸಿದ್ದೇನೆ. ನನಗೆ ಬೇಕಾದುದು ಶಬ್ದಸಂಪತ್ತು. ನನ್ನ ಆಸೆ, ಇಷ್ಟಕ್ಕೆ ಕೊನೆ ಎಂದು ಭಾವಿಸಬೇಡ ಫ್ರಾನ್ಸಿಗೆ ಹೋಗಿ ಫ್ರೆಂಚ್ ಭಾಷೆಯನ್ನು ಕಲಿಯಬೇಕೆಂದಿದ್ದೇನೆ. ಆ ಭಾಷೆಗೆ ದೊಡ್ಡ ಸಾಹಿತ್ಯಭಂಡಾರವಿದೆಯೆಂದು ಕೇಳಿದ್ದೇನೆ. ಸಾಧ್ಯವಾದರೆ ಜರ್ಮನಿಗೂ ಹೋಗಿ ಅಲ್ಲಿ ಜರ್ಮನ್ ಭಾಷೆಯನ್ನು ಕಲಿಯುತ್ತೇನೆ." ಹೀಗೆ ಆತ ನಿಲುಗಡೆಯೇ ಇಲ್ಲದಂತೆ ಮಾತನಾಡುತ್ತಿದ್ದನು. ಪರಭಾಷೆಗಳನ್ನು ಕಲಿಯುವುದಕ್ಕೂ ದೇಶಸಂಚಾರಕ್ಕೂ ಆತನಿಗೆ ಅಮಿತವಾದ ಉತ್ಸಾಹ ವಿದ್ದಿತು.

"ಹಾಗಾದರೆ ನೀವು ಅಮೇರಿಕಕ್ಕೂ ಹೋಗುವಿರಿ ?" "ನಿಜವಾಗಿಯೂ, ನವೀನ ಜಗತ್ತನ್ನು ನೋಡದೆ ಹಿಂದೂಸ್ಥಾನಕ್ಕೆ ಹಿಂದಿರುಗುವುದು ಹೇಗೆ ಸಾಧ್ಯ ?"

"ಸರಿ. ಆದರೆ ಇದಕ್ಕೆಲ್ಲ ಹಣವನ್ನು ಎಲ್ಲಿ ತರುತ್ತೀರಿ ?

"ನನಗೆ ಹಣ ಏಕೆ ಬೇಕು ? ನಾನು ನಿನ್ನಂತೆ ಸೊಗಸುಗಾರನಲ್ಲ. ಅಲ್ಪ ಆಹಾರ, ಅಲ್ಪವಸ್ತ್ರ, ಇವು ನನಗೆ ಸಾಕು. ಅದಕ್ಕೆ, ನನ್ನ ಪುಸ್ತಕಗಳಿಂದ ಬರುವ ಹಣವೂ ನನ್ನ ಸ್ನೇಹಿತರು ಕೊಡುವ ಹಣವೂ ಸಾಕಾಗುತ್ತದೆ. ನಾನು ಯಾವಾಗಲೂ ಮೂರನೆಯ ತರಗತಿಯಲ್ಲಿ ಪ್ರಯಾಣ ಮಾಡುತ್ತೇನೆ. ಅಮೇರಿಕಾಕ್ಕೆ ಹೋಗುವಾಗ ಡೆಕ್‌ನಲ್ಲಿ ಪ್ರಯಾಣ ಮಾಡುತ್ತೇನೆ."

ನಾರಾಯಣ ಹೇಮಚಂದ್ರನ ಸರಳತೆ ಅವನಿಗೇ ವಿಶಿಷ್ಟವಾಗಿದ್ದಿತು. ಅವನ ನಿಷ್ಕಾಪಟ್ಯವೂ ಅದಕ್ಕೆ ಸಮಾನವಾದುದಾಗಿದ್ದಿತು. ತಾನೊಬ್ಬ ದೊಡ್ಡ ಬರಹಗಾರ ಎಂಬ ಹೆಮ್ಮೆ ಅವನಿಗೆ ಸ್ವಲ್ಪ ಇದ್ದಿತು. ಅದರ ಹೊರತು ಅವನಿಗೆ ಸ್ವಲ್ಪವೂ ಗರ್ವವಿರಲಿಲ್ಲ.

ನಾವು ನಿತ್ಯ ಸಂಧಿಸುತ್ತಿದ್ದೆವು. ನಮ್ಮಿಬ್ಬರ ವಿಚಾರ ಮತ್ತು ಕಾರ್ಯಗಳಲ್ಲಿ ಬಹುಮಟ್ಟಿನ ಸಮಾನತೆಯಿದ್ದಿತು. ನಾವಿಬ್ಬರೂ ಶಾಕಾಹಾರಿಗಳಾಗಿದ್ದೆವು. ನಾವಿಬ್ಬರೂ ಅನೇಕ ವೇಳೆ ಒಟ್ಟಿಗೇ ಊಟಮಾಡುತ್ತಿದ್ದೆವು. ವಾರಕ್ಕೆ ೧೭ ಷಿಲಿಂಗ್ ವೆಚ್ಚದಲ್ಲಿ ನನ್ನ ಅಡಿಗೆಯನ್ನು ನಾನೇ ಮಾಡಿಕೊಳ್ಳುತ್ತಿದ್ದ ಕಾಲ ಅದು. ಕೆಲವು ವೇಳೆ ನಾನು ಆತನ ಕೊಠಡಿಗೆ ಹೋಗುತ್ತಿದ್ದೆನು. ಇನ್ನು ಕೆಲವು ವೇಳೆ ಆತ ನನ್ನ ಕೊಠಡಿಗೆ ಬರುತ್ತಿದ್ದನು. ನಾನು ಇಂಗ್ಲಿಷರ ಪದ್ಧತಿಯಲ್ಲಿ ಅಡಿಗೆ ಮಾಡುತ್ತಿದ್ದೆನು. ಭಾರತೀಯ ಅಡಿಗೆಯ ಹೊರತು ಮತ್ತಾವುದೂ ಆತನಿಗೆ ರುಚಿಸುತ್ತಿರಲಿಲ್ಲ. ಬೇಳೆಸಾರು ಇಲ್ಲದಿದ್ದರೆ ಆತನಿಗೆ ಆಗುತ್ತಲೇ ಇರಲಿಲ್ಲ. ನಾನು ಯಾವಾಗಲಾದರೂ ಕೆಂಪು ಮೂಲಂಗಿಯ ಹುಳಿಯನ್ನು ಮಾಡುತ್ತಿದ್ದೆನು. ಅದನ್ನು ನೋಡಿ ಆತ "ಇದೇ ಏನು ನಿನ್ನ ರುಚಿ ?" ಎಂದು ಕನಿಕರ ಪಡುತ್ತಿದ್ದನು. ಒಂದು ಸಲ ಎಲ್ಲಿಂದಲೋ ಕಷ್ಟಪಟ್ಟು ಅಲಸಂದೆಯನ್ನು ಸಂಪಾದಿಸಿ ಅಡಿಗೆ ಮಾಡಿ ನನಗೆ ತಂದುಕೊಟ್ಟನು. ನಾನು ಅದನ್ನು

ಸಂತೋಷದಿಂದ ತಿಂದೆನು. ಅಲ್ಲಿಂದ ಮುಂದೆ ನಾವು ಒಬ್ಬರಿಗೊಬ್ಬರು ತಿಂಡಿ ಪದಾರ್ಥಗಳನ್ನು ಕೊಟ್ಟು ತೆಗೆದುಕೊಳ್ಳುವುದು ಒಂದು ಪದ್ಧತಿಯೇ ಆಯಿತು. ನಾನು ಮಾಡಿದ ರುಚಿ ತಿಂಡಿಗಳನ್ನು ತೆಗೆದುಕೊಂಡು ಹೋಗಿ ಆತನಿಗೆ ಕೊಡುತ್ತಿದ್ದೆನು. ಆತನು ಮಾಡಿದುದನ್ನು ನನಗೆ ತಂದುಕೊಡುತ್ತಿದ್ದನು.

ಆಗ ಕಾರ್ಡಿನಲ್ ಮ್ಯಾನಿಂಗ್‌ರ ಹೆಸರು ಎಲ್ಲರ ಬಾಯಿಯಲ್ಲಿಯೂ ಇದ್ದಿತು. ಜಾನ್‌ಬರ್ನ್ಸ್ ಮತ್ತು ಕಾರ್ಡಿನಲ್ ಮ್ಯಾನಿಂಗ್‌ರ ಪ್ರಯತ್ನದಿಂದ, ಬಂದರಿನ ಕೂಲಿಗಳ ಮುಷ್ಕರ ಬಹು ಬೇಗ ಮುಕ್ತಾಯಗೊಂಡಿದ್ದಿತು. ಕಾರ್ಡಿನಲ್ ಮ್ಯಾನಿಂಗ್‌ರ ಸರಳತೆಯನ್ನು ಕುರಿತು ಡಿಸ್ರೇಲಿಯ ಹೊಗಳಿಕೆಯ ಮಾತುಗಳನ್ನು ನಾನು ನಾರಾಯಣ ಹೇಮಚಂದ್ರನಿಗೆ ಹೇಳಿದೆ. ಅವನು "ಹಾಗಾದರೆ ನಾನು ಆ ಪ್ರಾಜ್ಞರನ್ನು ನೋಡಬೇಕು" ಎಂದನು.

"ಅವರು ದೊಡ್ಡ ಮನುಷ್ಯರು. ಅವರನ್ನು ನೋಡುವುದು ನಿನಗೆ ಹೇಗೆ ಸಾಧ್ಯ ?"

"ನನಗೆ ಎಲ್ಲ ಗೊತ್ತು. ನನ್ನ ಹೆಸರಿನಲ್ಲಿ ನೀನು ಅವರಿಗೆ ಪತ್ರಬರೆ. ನಾನು ಒಬ್ಬ ಲೇಖಕ. ಅವರು ಮಾಡಿರುವ ಜನಹಿತ ಕಾರ್ಯಗಳಿಗಾಗಿ ಅವರನ್ನು ನಾನು ಪ್ರತ್ಯಕ್ಷವಾಗಿ ವಂದಿಸಲು ಅಪೇಕ್ಷಿಸುವೆನೆಂದೂ ತಿಳಿಸು. ನನಗೆ ಇಂಗ್ಲಿಷ್ ಬರದುದರಿಂದ ನಿನ್ನನ್ನು ನನ್ನ ದ್ವಿಭಾಷಿಯಾಗಿ ಕರೆದುಕೊಂಡು ಬರುವೆನೆಂದೂ ತಿಳಿಸು."

ಆ ಅಭಿಪ್ರಾಯದ ಪತ್ರವನ್ನು ನಾನು ಬರೆದೆನು. ಎರಡು ಮೂರು ದಿನಗಳಲ್ಲಿ ನಮಗೆ ಭೇಟಿಯನ್ನು ಕೊಡಲು ಒಪ್ಪಿ ಕಾರ್ಡಿನಲ್ ಮ್ಯಾನಿಂಗ್‌ರ ಪತ್ರ ಬಂದಿತು. ಹೀಗೆ ನಾವಿಬ್ಬರೂ ಕಾರ್ಡಿನಲ್‌ರನ್ನು ನೋಡಲು ಹೋದೆವು. ನಾನು ನನ್ನ ನಿಯಮಿತವಾದ ಉಡುಪನ್ನು ಧರಿಸಿಕೊಂಡೆನು. ನಾರಾಯಣ ಹೇಮಚಂದ್ರ, ತನ್ನ ಎಂದಿನಂತಿನ ಉಡುಪುಗಳನ್ನು ಧರಿಸಿದ್ದನು. ಅದೇ ಕೋಟು, ಅದೇ ಪರಾಯಿ, ನಾನು ಅವನ ಉಡುಪುಗಳನ್ನು ಹಾಸ್ಯಮಾಡಲು ಪ್ರಯತ್ನಿಸಿದೆನು. ಆದರೆ ಆತ ನನ್ನನ್ನೇ ಹಾಸ್ಯಮಾಡಿದನು. "ನಾಗರಿಕರೆನ್ನಿಸಿಕೊಳ್ಳುವ ನೀವೆಲ್ಲ ಶುದ್ಧ ಹೇಡಿಗಳು.

ಪ್ರಾಜ್ಞರಾದವರು ಜನರ ಬಾಹ್ಯ ವೇಷವನ್ನು ನೋಡುವುದಿಲ್ಲ. ಅವರು ಹೃದಯವನ್ನು ಪರಿಶೀಲಿಸುತ್ತಾರೆ” ಎಂದೆನು.

ನಾವು ಕಾರ್ಡಿನಲ್‌ರ ಭವನವನ್ನು ಪ್ರವೇಶಿಸಿದೆವು. ಕುಳಿತುಕೊಂಡ ಸ್ವಲ್ಪ ಹೊತ್ತಿನಲ್ಲಿಯೇ ತೆಳ್ಳಗೆ ಎತ್ತರವಾಗಿದ್ದ ಒಬ್ಬ ವೃದ್ಧ ಗೃಹಸ್ಥ ಪ್ರವೇಶಿಸಿ ನಮಗೆ ಹಸ್ತಲಾಘವನ್ನಿತ್ತನು. ನಾರಾಯಣ ಹೇಮಚಂದ್ರನು ಅವರನ್ನು ಹೀಗೆ ಸಂಬೋಧಿಸಿದನು.

“ನಿಮ್ಮ ಕಾಲವನ್ನು ಹೆಚ್ಚಾಗಿ ತೆಗೆದುಕೊಳ್ಳಲು ನನಗೆ ಇಷ್ಟವಿಲ್ಲ. ನಿಮ್ಮ ಪ್ರಸಿದ್ಧಿಯನ್ನು ಬಹಳ ಕೇಳಿದ್ದೆ. ನಿಮ್ಮನ್ನು ನೋಡಬೇಕು ಎನ್ನಿಸಿತು. ನೀವು ಮುಷ್ಕರಕಾರರಿಗಾಗಿ ಮಾಡಿದ ಸತ್ಕಾರಕ್ಕೆ ನಿಮ್ಮನ್ನು ವಂದಿಸುತ್ತೇನೆ. ಜಗತ್ತಿನ ಪ್ರಾಜ್ಞರನ್ನು ಸಂದರ್ಶಿಸುವುದು ನನ್ನ ಪದ್ಧತಿ. ಆದುದರಿಂದಲೇ ನಿಮಗೆ ಈ ತೊಂದರೆಯನ್ನು ಕೊಡಬೇಕಾಯಿತು.”

ಅವನು ಗುಜರಾತಿನಲ್ಲಿ ಮಾತನಾಡಿದುದನ್ನು ನಾನು ಭಾಷಾಂತರಿಸಿದೆನು.

“ನೀವು ಬಂದುದು ಸಂತೋಷ. ಲಂಡನ್‌ನಲ್ಲಿ ನಿಮ್ಮ ವಾಸ ಸುಖಕರ ವಾಗಲಿ. ಇಲ್ಲಿಯ ಜನರ ಪರಿಚಯ ನಿಮಗೆ ಆಗಲಿ ಎಂಬುದು ನನ್ನ ಹಾರೈಕೆ. ದೇವರು ನಿಮಗೆ ಶುಭವುಂಟುಮಾಡಲಿ.”

ಇಷ್ಟು ಹೇಳಿ ಕಾರ್ಡಿನಲ್‌ರು ಎದ್ದು ನಿಂತು ನಮ್ಮನ್ನು ಬೀಳ್ಕೊಟ್ಟರು.

ಒಂದು ಸಲ, ನಾರಾಯಣ ಹೇಮಚಂದ್ರ, ಧೋತ್ರವನ್ನೂ ಷರಟನ್ನೂ ಧರಿಸಿಕೊಂಡು ನನ್ನ ಕೊಠಡಿಗೆ ಬಂದನು. ಆ ಸಭ್ಯ ಮನೆಯ ಯಜಮಾನಿತಿ ಬಾಗಿಲನ್ನು ತೆರೆದಳು. ಆಕೆ ನಾರಾಯಣ ಹೇಮಚಂದ್ರನನ್ನು ಮೊದಲು ನೋಡದಿದ್ದ ಹೊಸ ಯಜಮಾನಿತಿ. ಗಾಬರಿಯಿಂದ ಓಡುತ್ತಾ ಒಳಕ್ಕೆ ಬಂದು “ಒಬ್ಬ ಹುಚ್ಚ ನಿಮ್ಮನ್ನು ನೋಡಲು ಬಂದಿದ್ದಾನೆ” ಎಂದು ಹೇಳಿದಳು. ನಾನು ಬಾಗಿಲನ್ನು ತೆರೆದೆ. ನಾರಾಯಣ ಹೇಮಚಂದ್ರನನ್ನು ನೋಡಿ ಆಶ್ಚರ್ಯವಾಯಿತು. ನಾನು ದಿಗ್ಭ್ರಾಂತನಾದೆನು. ಅವನ ಮುಖದಲ್ಲಿ ಎಂದಿನ ನಗೆಯ ಹೊರತು ಮತ್ತೇನೂ ಇರಲಿಲ್ಲ.

“ಬೀದಿಯಲ್ಲಿ ಹುಡುಗರು ನಿಮ್ಮನ್ನು ಕೀಟಲೆ ಮಾಡಲಿಲ್ಲವೆ ?”

"ಅವರು ನನ್ನ ಹಿಂದೆ ಓಡೋಡಿ ಬಂದರು. ನಾನು ಅವರನ್ನು ಲಕ್ಷ್ಯಮಾಡಲಿಲ್ಲ. ಅವರ ಪಾಡಿಗೆ ಅವರು ಹೋದರು."

ಲಂಡನ್ನಿನಲ್ಲಿ ಕೆಲವು ತಿಂಗಳು ಇದ್ದ ನಂತರ ನಾರಾಯಣ ಹೇಮಚಂದ್ರ ಪ್ಯಾರಿಸ್ಸಿಗೆ ಹೋದನು. ಅವನು ಫ್ರೆಂಚ್ ಭಾಷೆಯನ್ನು ಕಲಿತು, ಫ್ರೆಂಚ್ ಗ್ರಂಥಗಳನ್ನು ಭಾಷಾಂತರಿಸಲು ಮೊದಲು ಮಾಡಿದನು. ಅವನು ಮಾಡಿದ ಭಾಷಾಂತರವನ್ನು ತಿದ್ದುವಷ್ಟು ಫ್ರೆಂಚ್ ಭಾಷೆಯಲ್ಲಿ ನನಗೆ ಜ್ಞಾನವಿದ್ದಿತು. ಅವನು ಓದಬೇಕೆಂದು ಪುಸ್ತಕಗಳನ್ನು ನನಗೆ ಕೊಟ್ಟನು. ಅವನು ಮಾಡಿದ್ದುದು ಭಾಷಾಂತರವಲ್ಲ. ಅದು ಕೇವಲ ಭಾವಾರ್ಥವಾಗಿದ್ದಿತು.

ಕೊನೆಯಲ್ಲಿ ಅವನು ಅಮೇರಿಕಕ್ಕೆ ಹೋಗುವ ತನ್ನ ನಿರ್ಧಾರವನ್ನು ಕಾರ್ಯಗತ ಮಾಡಿದನು. ಬಹಳ ಕಷ್ಟಪಟ್ಟು ಅವನು ಡೆಕ್ ಪ್ರಯಾಣದ ಟಿಕೆಟ್ಟನ್ನು ಸಂಪಾದಿಸಿಕೊಂಡನು. ಅಮೆರಿಕದಲ್ಲಿರುವಾಗ ಒಂದು ಸಲ ಅವನು ಧೋತ್ರ ಮತ್ತು ಷರಟು ಧರಿಸಿಕೊಂಡು ಹೋದುದರಿಂದ ಅಸಭ್ಯ ಉಡುಗೆಯನ್ನು ಹಾಕಿಕೊಂಡುದಕ್ಕಾಗಿ ಅವನ ಮೇಲೆ ಕಟ್ಲೆ ನಡೆಯಿತು. ನಿರಪರಾಧಿಯೆಂದು ಬಿಡುಗಡೆಯಾಯಿತೆಂದು ನನ್ನ ನೆನಪು.

೨೩

ಮಹಾ ವಸ್ತು ಪ್ರದರ್ಶನ

೧೮೯೦ರಲ್ಲಿ ಪ್ಯಾರಿಸ್ ನಗರದಲ್ಲಿ ಒಂದು ಮಹಾ ವಸ್ತು ಪ್ರದರ್ಶನ ನಡೆಯಿತು. ಅದಕ್ಕಾಗಿ ಅಗಾಧ ಸಿದ್ಧತೆಗಳಾಗುತ್ತಿದ್ದುದನ್ನು ನಾನು ಪತ್ರಿಕೆಗಳಲ್ಲಿ ಓದಿದ್ದೆನು. ಜತೆಗೆ ಪ್ಯಾರಿಸ್ಸನ್ನು ನೋಡುವ ಕುತೂಹಲವೂ ನನ್ನಲ್ಲಿ ತೀವ್ರವಾಗಿದ್ದಿತು. ಆದುದರಿಂದ ನಾನು ಎರಡೂ ಗುರಿಗಳನ್ನೂ ಸಾಧಿಸಲು ಪ್ರದರ್ಶನದ ಸಂದರ್ಭದಲ್ಲಿ ಅಲ್ಲಿ ಹೋಗುವುದು ಉತ್ತಮವೆಂದು ಯೋಚಿಸಿದೆನು. ಪ್ರದರ್ಶನದ ಒಂದು ವಿಶೇಷ ಆಕರ್ಷಣೆ ಪೂರ್ತಿ ಕಬ್ಬಿಣದಿಂದಲೇ ಮಾಡಿದ್ದ ಸಾವಿರ ಅಡಿ ಎತ್ತರದ ಈಫೆಲ್ ಟವರ್ (ಗೋಪುರ) ಎಂಬುದು. ಅದರ ಜತೆಗೆ, ನೋಡಬೇಕಾದ ಇನ್ನೂ ಅನೇಕ ಅತಿಶಯಗಳಿದ್ದವು. ಆದರೆ ಎಲ್ಲಕ್ಕಿಂತ ಮುಖ್ಯವಾಗಿದ್ದುದು, ಗೋಪುರ.

ಏಕೆಂದರೆ ಅಷ್ಟು ಎತ್ತರದ ಗೋಪುರ ಸುರಕ್ಷಿತವಾಗಿ ನಿಲ್ಲುವುದು ಸಾಧ್ಯವಿಲ್ಲವೆಂದು ಅಲ್ಲಿಯವರೆಗೆ ಭಾವಿಸಿದ್ದರು.

ಪ್ಯಾರಿಸ್ಸಿನಲ್ಲಿ ಒಂದು ಶಾಕಾಹಾರ ಭೋಜನಗೃಹವಿದೆಯೆಂದು ನಾನು ಕೇಳಿದ್ದೆನು. ನಾನು ಅದರಲ್ಲಿ ಕೊಠಡಿಯನ್ನು ಗೊತ್ತುಮಾಡಿಕೊಂಡು, ಅಲ್ಲಿ ಏಳು ದಿನಗಳು ಇನ್ದೆನು. ಪ್ಯಾರಿಸ್ಸಿಗೆ ಪ್ರಯಾಣ, ಅಲ್ಲಿನ ನೋಟಗಳು ಇವುಗಳನ್ನೆಲ್ಲ ನಾನು ಬಹಳ ಮಿತವ್ಯಯದಲ್ಲಿಯೇ ನಡೆಸಿದೆನು. ಪ್ಯಾರಿಸ್ಸಿನ ಒಂದು ನಕ್ಷೆ. ಮಹಾಪ್ರದರ್ಶನದ ಒಂದು ನಕ್ಷೆ ಇವುಗಳ ಸಹಾಯದಿಂದ ಎಲ್ಲೆಲ್ಲಿಯೂ ಕಾಲು ನಡಿಗೆಯಿಂದಲೇ ತಿರುಗಿ ನಾನು ಮಿತವ್ಯಯವನ್ನು ಸಾಧಿಸಿದೆನು. ಆ ನಕ್ಷೆಗಳು ಮುಖ್ಯ ರಸ್ತೆಗಳಿಗೂ ಮುಖ್ಯವಾದ ಪ್ರೇಕ್ಷಣೀಯ ಸ್ಥಳಗಳಿಗೂ ಸಾಕಾದ ಮಾರ್ಗದರ್ಶಕಗಳಾಗಿದ್ದವು.

ಮಹಾ ಪ್ರದರ್ಶನದ ಬೃಹದಾಕಾರ ಮತ್ತು ವೈವಿಧ್ಯದ ಹೊರತು ಅದರ ವಿಷಯದಲ್ಲಿ ನನಗೆ ಮತ್ತೇನೂ ಜ್ಞಾಪಕವಿಲ್ಲ. ಈಫೆಲ್ ಗೋಪುರದ ನೆನಪು ನನಗೆ ತಕ್ಕಮಟ್ಟಿಗೆ ಇದೆ. ನಾನು ಅದರ ಮೇಲಕ್ಕೆ ಎರಡು ಸಲ ಅಥವಾ ಮೂರು ಸಲ ಹತ್ತಿ ಹೋಗಿದ್ದೆನು. ಮೊದಲನೆಯ ಹಂತದಲ್ಲಿ ಒಂದು ಫಲಾಹಾರ ಮಂದಿರವಿದ್ದಿತು. "ಅಷ್ಟು ಎತ್ತರದಲ್ಲಿ ಕುಳಿತು ಊಟ ಮಾಡಿದೆ" ಎಂದು ಹೇಳಿಕೊಳ್ಳುವ ತೃಪ್ತಿಗಾಗಿ ನಾನು ಅಲ್ಲಿ ಏಳು ಷಿಲಿಂಗನ್ನು ವ್ಯರ್ಥ ಮಾಡಿ ಊಟ ಮಾಡಿದೆನು.

ಪ್ಯಾರಿಸ್ಸಿನ ಪ್ರಾಚೀನ ಚರ್ಚುಗಳು ಇನ್ನೂ ನನ್ನ ನೆನಪಿನಲ್ಲಿವೆ, ಅವುಗಳ ವೈಭವವನ್ನೂ ಅವುಗಳಲ್ಲಿ ನೆಲೆಸಿರುವ ಶಾಂತಿಯನ್ನೂ ಎಂದಿಗೂ ಮರೆಯಲು ಸಾಧ್ಯವಿಲ್ಲ. ನಾಟ್ರೆಡಾಮ್ ಚರ್ಚಿನ ಅದ್ಭುತ ರಚನೆ, ಒಳಗಿನ ವಿಸ್ತಾರವಾದ ಅಲಂಕಾರಗಳಿಂದ ಕೂಡಿದ ಸುಂದರ ಶಿಲ್ಪ, ಇವುಗಳನ್ನು ಮರೆಯುವಂತೆ ಇಲ್ಲ. ಇಂತಹ ದೈವಿಕ ಚರ್ಚುಗಳನ್ನು ಕಟ್ಟಲು ಕೋಟಿ ಸಂಖ್ಯೆಯಲ್ಲಿ ಹಣವನ್ನು ವೆಚ್ಚಮಾಡಿದವರ ಹೃದಯ, ದೈವಭಕ್ತಿಯಿಂದ ಪೂರ್ಣವಾಗಿದ್ದಿರಬೇಕೆಂದು ನಾನು ಆಗ ಭಾವಿಸಿದ್ದೆನು.

ಪ್ಯಾರಿಸ್ಸಿನ ಬೆಡಗು, ಭೋಗವಿಲಾಸ ಇವನ್ನು ಕುರಿತು ನಾನು ಬೇಕಾದಷ್ಟು ಓದಿದ್ದೆನು. ಪ್ರತಿ ಬೀದಿಯಲ್ಲಿಯೂ ಅದಕ್ಕೆ ಸಾಕ್ಷಿ ಕಾಣುತ್ತಿದ್ದಿತು. ಆದರೆ ಚರ್ಚುಗಳು ಅವುಗಳ ಸಂಪರ್ಕದಿಂದ ಪೂರ್ತಿ ದೂರವಾಗಿದ್ದವು.

ಇಂತಹ ಚರ್ಚಿನ ಒಳಕ್ಕೆ ಪ್ರವೇಶಿಸಿದ ಕೂಡಲೇ, ಮನುಷ್ಯನಿಗೆ ಹೊರಗಡೆಯ ಸದ್ದೂ ಗಡಿಬಿಡಿಯುೂ ಮರೆತು ಹೋಗುತ್ತಿದ್ದಿತು. ಅವನ ಆಚರಣೆ ಬದಲಾಯಿಸುತ್ತಿದ್ದಿತು. ಪವಿತ್ರ ಕನ್ಯೆಯ ಮುಂದೆ ಯಾರಾದರೂ ಮಂಡಿ ಯೂರಿ ನಮಸ್ಕರಿಸುತ್ತಿರುವುದು ಅವನ ಕಣ್ಣಿಗೆ ಕಂಡಕೂಡಲೇ ಅವನು ಗಾಂಭೀರ್ಯದಿಂದಲೂ ಭಕ್ತಿಯಿಂದಲೂ ನಡೆದುಕೊಳ್ಳುತ್ತಿದ್ದನು. ಈ ನಮಸ್ಕಾರ ಪ್ರಾರ್ಥನೆ ಇವೆಲ್ಲ ಬರಿಯ ಮೂಢ ನಂಬಿಕೆಯಲ್ಲ ಎಂಬ ಭಾವ ನನ್ನಲ್ಲಿ ಆಗ ಉಂಟಾಗಿದ್ದುದು ಇನ್ನೂ ಬೆಳೆಯುತ್ತಲೇ ಇದೆ. ಪವಿತ್ರ ಕನ್ಯೆಯ ಎದುರಿಗೆ ಮಂಡಿಯೂರಿ ಪೂಜಿಸುತ್ತಿದ್ದ ಆ ಭಕ್ತರೆಲ್ಲ ಬರಿಯ ಅಮೃತ ಶಿಲೆಯನ್ನು ಪೂಜಿಸುತ್ತಿದ್ದರೆ? ಅವರಲ್ಲಿ ನಿಜವಾದ ಭಕ್ತಿ, ಚೇತನ ಗೊಂಡಿತ್ತು. ಅವರು ಪೂಜಿಸುತ್ತಿದ್ದುದು ಬರಿಯ ಕಲ್ಲು ಅಲ್ಲ. ಅದರಲ್ಲಿ ರೂಪುಗೊಂಡಿದ್ದ ದೈವವನ್ನು. ತಮ್ಮ ಈ ಪೂಜೆಯಿಂದ ಅವರು ದೇವರ ಮಹಿಮೆಯನ್ನು ಕಡಿಮೆ ಮಾಡುತ್ತಿರಲಿಲ್ಲ, ಹೆಚ್ಚು ಮಾಡುತ್ತಿದ್ದರು ಎಂದು ನನ್ನ ಮನಸ್ಸಿಗೆ ಆಗ ಹೊಳೆಯಿತೆಂದು ನನಗೆ ಜ್ಞಾಪಕ.

ಈಫೆಲ್ ಗೋಪುರದ ವಿಚಾರವಾಗಿ ನಾನು ಒಂದೆರಡು ಮಾತನ್ನು ಹೇಳಬೇಕು. ಆ ಗೋಪುರವನ್ನು ಹೇಗೆ ಉಪಯೋಗಿಸುತ್ತಿದ್ದಾರೆಯೋ ನನಗೆ ತಿಳಿಯದು. ಆದರೆ ಆಗ ಅದನ್ನು ಅತಿಯಾಗಿ ಪ್ರಶಂಸಿದುದನ್ನೂ ನಾನು ಕೇಳಿದ್ದೆನು; ಅತಿಯಾಗಿ ತೆಗಳಿದುದನ್ನೂ ಕೇಳಿದ್ದೆನು. ಅದನ್ನು ತಿರಸ್ಕರಿಸಿದವರಲ್ಲಿ ಟಾಲ್‌ಸ್ಟಾಯ್ ಮುಖ್ಯರಾಗಿದ್ದರೆಂದು ನನಗೆ ನೆನಪು. ಅವರು ಹೀಗೆ ಹೇಳಿದ್ದರು: "ಈಫೆಲ್ ಗೋಪುರ ಮನುಷ್ಯನ ಅವಿವೇಕದ ಸ್ಮಾರಕವೇ ಹೊರತು ವಿವೇಕದ ಗುರುತಲ್ಲ." ಹೊಗೆಸೊಪ್ಪು, ಮಾದಕ ವಸ್ತುಗಳಲ್ಲೆಲ್ಲ ಅತ್ಯಂತ ಕೆಟ್ಟದ್ದು. ಏಕೆಂದರೆ ಅದರ ಪ್ರಭಾವಕ್ಕೆ ಒಳಗಾದವನು, ಮದ್ಯಪಾಯಿ ಎಂದಿಗೂ ಮಾಡಲು ಧೈರ್ಯಗೊಳ್ಳದ ದುಷ್ಕೃತ್ಯಗಳನ್ನು ಎಸಗುತ್ತಾನೆ. ಮದ್ಯ, ಮನುಷ್ಯನಿಗೆ ಹುಚ್ಚು ಹಿಡಿಸುತ್ತದೆ. ಆದರೆ ಹೊಗೆಸೊಪ್ಪು ಮನುಷ್ಯನ ಬುದ್ಧಿಯನ್ನು ಮಂಕುಗೊಳಿಸಿ, ಅವನು ಗಾಳಿಗೋಪುರ ಕಟ್ಟುವಂತೆ ಮಾಡುತ್ತದೆ. ಇಂತಹ ಪ್ರಭಾವಕ್ಕೆ ಒಳಗಾದವನೊಬ್ಬನ ಒಂದು ಸೃಷ್ಟಿ ಈಫೆಲ್ ಗೋಪುರ. ಆ ಗೋಪುರದಲ್ಲಿ ಯಾವ ಕಲೆಯೂ ಇಲ್ಲ. ಪ್ರದರ್ಶನದ ಸೌಂದರ್ಯವನ್ನು ಯಾವ ರೀತಿ

ಯಿಂದಲೂ ಈಫೆಲ್ ಗೋಪುರ ಹೆಚ್ಚಿಸಲಿಲ್ಲ. ಅದು ಅದ್ವಿತೀಯ ಆಕಾರದ ನೂತನ ವಸ್ತುವಾದುದರಿಂದ ಜನ ಅದನ್ನು ನೋಡುವುದಕ್ಕೂ ಹತ್ತುವುದಕ್ಕೂ ಗುಂಪುಗುಂಪಾಗಿ ಬರುತ್ತಿದ್ದರು. ಅದೇ ಪ್ರದರ್ಶನದ ಬೊಂಬೆ ಆಗಿದ್ದಿತು. ನಾವು ಎಲ್ಲಿಯವರೆಗೆ ಮಕ್ಕಳೇ ಆಗಿ ಇರುತ್ತೇವೆಯೋ ಅಲ್ಲಿಯವರೆಗೆ ಬೊಂಬೆಗಳು ನಮ್ಮನ್ನು ಆಕರ್ಷಿಸುತ್ತವೆ. ನಾವು ಬೊಂಬೆಗಳಿಂದ ಆಕರ್ಷಿತರಾದ ಮಕ್ಕಳು ಎಂಬುದನ್ನು ಸ್ಥಿರಗೊಳಿಸಲು ಈಫೆಲ್ ಗೋಪುರ ಒಳ್ಳೆಯ ನಿದರ್ಶನವಾಗಿದ್ದಿತು. ಈಫೆಲ್ ಗೋಪುರ ಸಾಧಿಸಿದ ಉದ್ದೇಶ ಅದೇ ಎಂದು ಹೇಳಬಹುದು.

೨೪

ಬ್ಯಾರಿಸ್ಟರ್ ಏನೊ ಆದೆ–ಆದರೆ ಆಮೇಲೆ ?

ನಾನು ಇಂಗ್ಲೆಂಡಿಗೆ ಹೋದ ಉದ್ದೇಶವನ್ನು–ಬ್ಯಾರಿಸ್ಟರ್–ಆಗುವುವನ್ನು ಕುರಿತು ನಾನು ಇದುವರೆಗೆ ಏನನ್ನೂ ಹೇಳಲಿಲ್ಲ. ಆ ವಿಚಾರವಾಗಿ ಕೆಲವು ಮಾತುಗಳನ್ನು ಸಂಕ್ಷೇಪವಾಗಿ ಹೇಳಲು ಈಗ ಕಾಲವೊದಗಿದೆ.

ಒಬ್ಬ ವಿದ್ಯಾರ್ಥಿಯು ಬ್ಯಾರಿಸ್ಟರ್ ಆಗಬೇಕಾದರೆ ಎರಡು ಷರತ್ತುಗಳನ್ನು ಪಾಲಿಸಬೇಕಾಗಿದ್ದಿತು: "ಟರ್ಮುಗಳನ್ನು ಉಳಿಸುವುದು", ಒಬ್ಬ ವಿದ್ಯಾರ್ಥಿ ಹನ್ನೆರಡು ಟರ್ಮುಗಳು ಎಂದರೆ ಮೂರು ವರುಷಗಳನ್ನು ಕಾಲೇಜಿನಲ್ಲಿ ಕಳೆಯುವುದು, ಮತ್ತು ಪರೀಕ್ಷೆಯಲ್ಲಿ ತೇರ್ಗಡೆಯಾಗುವುದು. ಟರ್ಮುಗಳನ್ನು ಉಳಿಸುವುದು ಎಂದರೆ ಟರ್ಮುಗಳಲ್ಲಿ ಅವಧಿಯಲ್ಲಿ ತಿನ್ನುವುದು ಎಂದು ಅರ್ಥ. ಏಕೆಂದರೆ ಒಂದು ಟರ್ಮಿನ ಇಪ್ಪತ್ತನಾಲ್ಕು ಭೋಜನ ಕೂಟಗಳ ಪೈಕಿ, ವಿದ್ಯಾರ್ಥಿ ಆರು ಕೂಟಗಳಲ್ಲಿಯಾದರೂ ಹೋಗಿ ಊಟ ಮಾಡಬೇಕಾಗಿದ್ದಿತು. ತಿನ್ನುವುದು ಎಂದರೆ ತಿನ್ನಲೇ ಬೇಕೆಂದು ಅರ್ಥವಲ್ಲ. ಆದರೆ ಊಟಕ್ಕೆ ಬಂದಿದ್ದೇನೆ ಎಂಬುದನ್ನು ಸಕಾಲದಲ್ಲಿ ಪ್ರಕಟಿಸಿ ಊಟ ಮುಗಿಯುವವರೆಗೆ ಅಲ್ಲಿಯೇ ಇರಬೇಕಾಗಿದ್ದಿತು. ದೊರೆಯುತ್ತಿದ್ದ ಒಳ್ಳೆಯ ಭೋಜನ ಮತ್ತು ಉತ್ತಮವಾದ ಮದ್ಯವನ್ನು ಎಲ್ಲರೂ ಸಾಧಾರಣವಾಗಿ ತಿನ್ನುತ್ತಿದ್ದರು ಮತ್ತು ಕುಡಿಯುತ್ತಿದ್ದರು. ಒಂದು ಊಟಕ್ಕೆ ಎರಡೂವರೆ

ಷಿಲಿಂಗಿನಿಂದ ಮೂರುವರೆ ಷಿಲಿಂಗ್‌ವರೆಗೆ ಖರ್ಚು ಬೀಳುತ್ತಿದ್ದಿತು. ಅಂದರೆ ಎರಡರಿಂದ ಮೂರು ರೂಪಾಯಿ. ಈ ಬೆಲೆ ಅಷ್ಟೇನೂ ಹೆಚ್ಚಲ್ಲವೆಂದು ಜನ ಭಾವಿಸಿದ್ದರು. ಏಕೆಂದರೆ ಒಂದು ಭೋಜನ ಗೃಹಕ್ಕೆ ಹೋದರೆ ಬರಿಯ ಮದ್ಯಕ್ಕೆ ಮಾತ್ರವೇ ಅಷ್ಟು ಹಣವನ್ನು ಕೊಡಬೇಕಾಗುತ್ತಿದ್ದಿತು. ಭಾರತದಲ್ಲಿರುವ ನಮಗೆ ನಾವು "ನಾಗರಿಕರಾಗದಿದ್ದಲ್ಲಿ" ಆಹಾರಕ್ಕಿಂತ ಕುಡಿತಕ್ಕೆ ಬೆಲೆ ಹೆಚ್ಚಾದರೆ ಆಶ್ಚರ್ಯವಾಗುತ್ತದೆ. ಈ ವಿಷಯ ನನಗೆ ಮೊದಲು ತಿಳಿದಾಗ ನಾನು ಬೆಚ್ಚಿಬಿದ್ದೆನು. ಹೀಗೆ ಹಣವನ್ನು ಕುಡಿತಕ್ಕಾಗಿ ಪೋಲು ಮಾಡಲು ಜನರಿಗೆ ಹೇಗೆ ಮನಸ್ಸು ಬರುತ್ತದೆ ಎಂದು ನನಗೆ ಆಶ್ಚರ್ಯವಾಯಿತು. ಅನಂತರ ನನಗೆ ವಿಷಯಗಳು ತಿಳಿದವು. ಬ್ಯಾರಿಸ್ಟರ್‌ಗೆ ಆವಶ್ಯಕವಾದ ಭೋಜನ-ಊಟಗಳಲ್ಲಿ ನಾನು ಸಾಧಾರಣವಾಗಿ ಏನನ್ನೂ ತಿನ್ನುತ್ತಲೇ ಇರಲಿಲ್ಲ. ಏಕೆಂದರೆ ನನಗೆ ಬೇಕಾಗಿದ್ದುದು ರೊಟ್ಟಿ, ಬೇಯಿಸಿದ ಆಲುಗೆಡ್ಡೆ, ಕೋಸುಗೆಡ್ಡೆ ಇವು. ಅವು ನನಗೆ ರುಚಿಸಲಿಲ್ಲವಾಗಿ ಮೊದಮೊದಲು ನಾನು ಅವನ್ನು ತಿನ್ನುತ್ತಿರಲಿಲ್ಲ. ಆದರೆ ನಾನು ಅವುಗಳ ರುಚಿಯನ್ನು ಹಿಡಿದು ತಿನ್ನಲು ಪ್ರಾರಂಭಿಸಿದ ಮೇಲೆ ಇತರ ಪದಾರ್ಥಗಳನ್ನು ಕೇಳಿ ತರಿಸಲು ನನಗೆ ಧೈರ್ಯವುಂಟಾಯಿತು.

ವಿದ್ಯಾರ್ಥಿಗಳ ಊಟಕ್ಕಿಂತ "ಬೆಂಚರ್"ಗಳ (ವಿದ್ಯಾಮಂದಿರದ ಮಂಡಳಿಯ ಸದಸ್ಯರು) ಊಟ ಹೆಚ್ಚು ಉತ್ತಮವಾಗಿರುತ್ತಿದ್ದಿತು. ಶಾಕಾಹಾರಿಯಾಗಿದ್ದ ಒಬ್ಬ ಪಾರಸೀ ವಿದ್ಯಾರ್ಥಿಯೂ ನಾನೂ, ಶಾಕಾಹಾರಿ ತತ್ವದ ಹಿತದೃಷ್ಟಿಯಿಂದ, ಬೆಂಚರುಗಳ ಜತೆ ನಮಗೂ ಶಾಕಾಹಾರಿ ತಿಂಡಿಗಳನ್ನು ಒದಗಿಸಬೇಕೆಂದು ಕೋರಿದೆವು. ನಮ್ಮ ಪ್ರಾರ್ಥನೆಗೆ ಮನ್ನಣೆ ದೊರೆಯಿತು. ನಾವು ಬೆಂಚರ್‌ಗಳ ಅಡಿಗೆ ಮನೆಯಿಂದ ಹಣ್ಣುಗಳನ್ನೂ ಇತರ ತರಕಾರಿಗಳನ್ನೂ ತರಿಸಿ ತಿನ್ನತೊಡಗಿದೆವು.

ನಾಲ್ಕು ಜನರ ಒಂದು ಗುಂಪಿಗೆ ಎರಡು ಸೀಸೆ ದ್ರಾಕ್ಷಾರಸವನ್ನು ಕೊಡುತ್ತಿದ್ದರು. ನಾನು ಅದನ್ನು ಮುಟ್ಟುತ್ತಿರಲಿಲ್ಲ. ನಾಲ್ವರ ಗುಂಪಿನ ಒಬ್ಬ ಸದಸ್ಯನಾಗಬೇಕೆಂದು ನನಗೆ ಯಾವಾಗಲೂ ಒತ್ತಾಯವಿರುತ್ತಿದ್ದಿತು. ಏಕೆಂದರೆ ಆಗ ಆ ಮೂರು ಮಂದಿ, ಎರಡು ಸೀಸೆ ದ್ರಾಕ್ಷಾರಸವನ್ನೂ ಕುಡಿಯಲು ಅವಕಾಶವಾಗುತ್ತಿದ್ದಿತು. ಪ್ರತಿ ಟರ್ಮಿನಲ್ಲಿಯೂ ಒಂದು

"ವಿಶೇಷ ರಾತ್ರಿ" ಬೇರೆ ಇರುತ್ತಿದ್ದಿತು. ಆ ದಿವಸ ಪೋರ್ಟ್, ಶೆರ್ರಿ ಮುಂತಾದ ಸಾಮಾನ್ಯ ಮದ್ಯಗಳನ್ನಲ್ಲದೆ ಷಾಮ್‌ಪೈನನ್ನೂ ಸಹ ಕೊಡುತ್ತಿದ್ದರು. ಆದುದರಿಂದ ಮಿತ್ರರು ನಾನು ಹೋಗಲೇಬೇಕೆಂದು ಪ್ರಾರ್ಥಿಸುತ್ತಿದ್ದರು. ವಿಶೇಷ ರಾತ್ರಿಯಂದು ನಾನ ಎಲ್ಲರಿಗೂ ಬೇಕಾದವನಾಗಿರುತ್ತಿದ್ದೆನು.

ಈ ಊಟಗಳಿಂದ ವಿದ್ಯಾರ್ಥಿಗಳಿಗೆ ಬ್ಯಾರಿಸ್ಟರ್ ಆಗಲು ಹೇಗೆ ಹೆಚ್ಚು ಯೋಗ್ಯತೆಯುಂಟಾಯಿತು ಎಂಬುದು ಆಗ ನನಗೆ ಅರ್ಥವಾಗಿರಲಿಲ್ಲ; ಈಗಲೂ ಆಗಿಲ್ಲ. ಒಂದು ಕಾಲದಲ್ಲಿ, ಕಡಿಮೆ ಸಂಖ್ಯೆಯ ವಿದ್ಯಾರ್ಥಿಗಳು ಇಂತಹ ಊಟಗಳಿಗೆ ಬರುತ್ತಿದ್ದರು. ಈ ಸಂದರ್ಭಗಳಲ್ಲಿ ಅವರಿಗೂ "ಬೆಂಚರು"ಗಳಿಗೂ ಮಾತುಕತೆಯಾಡಲು, ಒಂದೊಂದು ವೇಳೆ ಭಾಷಣಗಳನ್ನೂ ಸಹ ಮಾಡಲು ಅವಕಾಶವುಂಟಾಗುತ್ತಿದ್ದಿತು. ಆದರೆ ನಾನು ಅಲ್ಲಿದ್ದ ಕಾಲದಲ್ಲಿ ಅದಾವುದೂ ಸಾಧ್ಯವಿರಲಿಲ್ಲ. "ಬೆಂಚರ್"ಗಳಿಗಾಗಿಯೇ ಬೇರೆ ಭೋಜನದ ಮೇಜನ್ನು ಒದಗಿಸಿದ್ದರು. ಆ ಪದ್ಧತಿಯಲ್ಲಿ ಮೊದಲು ಇದ್ದ ಅರ್ಥ ಇಲ್ಲವಾಗಿದ್ದಿತು. ಆದರೆ ಸಂಪ್ರದಾಯಬದ್ಧವಾದ ಇಂಗ್ಲೆಂಡು ಇನ್ನೂ ಆ ಪದ್ಧತಿಯನ್ನು ಉಳಿಸಿಕೊಂಡಿದ್ದಿತು.

ಬ್ಯಾರಿಸ್ಟರ್ ಪರೀಕ್ಷೆಯ ಪಾಠಕ್ರಮ, ಸುಲಭವಾಗಿದ್ದಿತು. ಬ್ಯಾರಿಸ್ಟರ್‌ಗಳನ್ನು ವಿನೋದವಾಗಿ "ಊಟದ ಬ್ಯಾರಿಸ್ಟರ್"ಗಳು ಎಂದೇ ಕರೆಯುತ್ತಿದ್ದರು. ಆ ಪರೀಕ್ಷೆಗಳಿಗೆ ಬೆಲೆ ಇಲ್ಲವೆಂದು ಎಲ್ಲರಿಗೂ ಗೊತ್ತಿದ್ದಿತು. ನಾನು ಹೋದ ಕಾಲದಲ್ಲಿ ಎರಡು ಪರೀಕ್ಷೆಗಳಿದ್ದವು. ಒಂದು ರೋಮನ್ ಕಾನೂನಿನಲ್ಲಿ; ಮತ್ತೊಂದು ಸಾಮಾನ್ಯ ಕಾನೂನಿನಲ್ಲಿ. ಈ ಪರೀಕ್ಷೆಗಳಿಗೆ ಗೊತ್ತಾದ ಪಠ್ಯಪುಸ್ತಕಗಳಿದ್ದವು. ಪರೀಕ್ಷೆಗಳಿಗೆ ಭಾಗಶಃ ಕುಳಿತುಕೊಳ್ಳಲು ಅವಕಾಶವಿದ್ದಿತು. ಆದರೆ ಪಠ್ಯಪುಸ್ತಕಗಳನ್ನು ಯಾರೂ ಓದುತ್ತಿರಲಿಲ್ಲ. ರೋಮನ್ ಕಾನೂನನ್ನು ಕುರಿತ ಪಠ್ಯಪುಸ್ತಕವನ್ನೇ ಓದಿದರೆ ಎರಡು ಮೂರು ವಾರಗಳಲ್ಲಿ ಟಿಪ್ಪಣಿ (ನೋಟ್ಸ್) ಓದಿ ತೇರ್ಗಡೆಯಾದ ಅನೇಕರು ನನಗೆ ಗೊತ್ತು. ಹಾಗೆಯೇ ಎರಡು ಮೂರು ತಿಂಗಳಲ್ಲಿ ಕಾಮನ್ ಲಾ ನೋಟ್ಸ್ ಓದಿ ತೇರ್ಗಡೆಯಾದವರೂ ನನಗೆ ಗೊತ್ತು. ಪ್ರಶ್ನೆ ಪತ್ರಿಕೆಗಳು ಸುಲಭವಾಗಿರುತ್ತಿದ್ದವು. ಪರೀಕ್ಷಕರು ಉದಾರಿಗಳಾಗಿದ್ದರು. ರೋಮನ್

ಕಾನೂನಿನಲ್ಲಿ ತೇರ್ಗಡೆ ಹೊಂದುತ್ತಿದ್ದವರ ಸಂಖ್ಯೆ ಶೇಕಡ ೯೫ರಿಂದ ೯೯ರ ವರೆಗೆ ಇರುತ್ತಿದ್ದಿತು. ಕಡೆಯ ಪರೀಕ್ಷೆಯಲ್ಲಿ ಶೇಕಡ ೭೫ಕ್ಕಿಂತ ಹೆಚ್ಚು ಮಂದಿ ತೇರ್ಗಡೆಯಾಗುತ್ತಿದ್ದರು. ಹೀಗೆ ಪರೀಕ್ಷೆಯಲ್ಲಿ ಅನುತ್ತೀರ್ಣರಾಗುವ ಭಯವೇ ಇರಲಿಲ್ಲ. ವರುಷಕ್ಕೆ ನಾಲ್ಕು ಸಲ, ಪರೀಕ್ಷೆಗಳು ನಡೆಯುತ್ತಿದ್ದವು. ಅವು ಕಷ್ಟವಾಗಿ ತೋರುತ್ತಲೇ ಇರಲಿಲ್ಲ.

ಆದರೆ ಅದನ್ನೇ ಕಷ್ಟವಾಗಿ ಮಾಡಿಕೊಳ್ಳುವುದರಲ್ಲಿ ನಾನು ಜಯಶಾಲಿಯಾದೆನು. ಎಲ್ಲ ಪಠ್ಯಪುಸ್ತಕಗಳನ್ನೂ ಓದಬೇಕೆಂದು ನಾನು ಯೋಚಿಸಿದೆನು. ಪಠ್ಯಪುಸ್ತಕಗಳನ್ನು ಓದದಿರುವುದು ಒಂದು ಮೋಸ ಎಂದು ನಾನು ಭಾವಿಸಿದೆನು. ಅವುಗಳನ್ನು ಕೊಳ್ಳಲು ನಾನು ಹೆಚ್ಚು ಹಣ ವೆಚ್ಚಮಾಡಿದೆನು. ರೋಮನ್ ಕಾನೂನನ್ನು ನಾನು ಲ್ಯಾಟಿನ್ ಭಾಷೆಯಲ್ಲಿಯೇ ಓದಬೇಕೆಂದು ನಿಶ್ಚಯಿಸಿದೆನು. ನಾನು ಲಂಡನ್ ಮೆಟ್ರಿಕ್ಯುಲೇಷನ್ ಪರೀಕ್ಷೆಗಾಗಿ ಕಲಿತಿದ್ದ ಲ್ಯಾಟಿನ್ ಈಗ ನನ್ನ ಉಪಯೋಗಕ್ಕೆ ಒದಗಿತು. ನಾನು ಹಾಗೆ ಓದಿದುದೆಲ್ಲ ನನ್ನ ಮುಂದಿನ ಬಾಳಿನಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಏನೂ ಬೆಲೆಯೇ ಇಲ್ಲದುದಾಗಲಿಲ್ಲ. ದಕ್ಷಿಣ ಆಫ್ರಿಕಾದಲ್ಲಿ ರೋಮನ್-ಡಚ್ ಕಾನೂನು ಎಂಬುದೇ ಪ್ರಚಾರದಲ್ಲಿರುವ ಕಾನೂನು. ಆದುದರಿಂದ ನಾನು ಜಸ್ಟಿನಿಯನ್ (ರೋಮನ್ ಕಾನೂನು ಬರೆದವನು) ಬರೆದ ಗ್ರಂಥವನ್ನು ವ್ಯಾಸಂಗ ಮಾಡಿದುದು ದಕ್ಷಿಣ ಆಫ್ರಿಕಾದ ಕಾನೂನನ್ನು ತಿಳಿದುಕೊಳ್ಳುವುದರಲ್ಲಿ ತುಂಬ ಸಹಕಾರಿಯಾಯಿತು.

ಇಂಗ್ಲೆಂಡಿನ ಸಾಮಾನ್ಯ ಕಾನೂನನ್ನು ಓದಲು ಒಂಭತ್ತು ತಿಂಗಳ ಕಠಿಣ ಅಭ್ಯಾಸ ಮಾಡಬೇಕಾಯಿತು. ಏಕೆಂದರೆ, ಬ್ರೂಮ್ ಬರೆದ ಕಾಮನ್ ಲಾ (ದೊಡ್ಡದಾಗಿದ್ದರೂ ಆಕರ್ಷಣೀಯವಾದ ಪುಸ್ತಕ)ವನ್ನು ವ್ಯಾಸಂಗ ಮಾಡಲು ನನಗೆ ಹೆಚ್ಚು ಕಾಲವೇ ಬೇಕಾಯಿತು. ಸ್ನೆಲ್ (Snell) ಎಂಬುವರು ಬರೆದಿರುವ ಈಕ್ವಿಟಿ (Equity) ಎಂಬ ಗ್ರಂಥ ಮನೋರಂಜಕವಾಗಿದ್ದರೂ ತಿಳಿದುಕೊಳ್ಳಲು ಕಷ್ಟವಾಗಿದ್ದಿತು. ವೈಟ್ ಮತ್ತು ಟ್ಯೂಡರ್ ಎಂಬುವರು ಬರೆದ "ಕೆಲವು ಮುಖ್ಯ ಮೊಕದ್ದಮೆಗಳು" ಎಂಬ ಪುಸ್ತಕ (ಇದರಲ್ಲಿ ಕೆಲವು ಮೊಕದ್ದಮೆಗಳನ್ನು ಪರೀಕ್ಷೆಗೆ ಇಟ್ಟಿದ್ದರು) ಸೊಗಸಾಗಿಯೂ ಬೋಧಪ್ರದವಾಗಿಯೂ ಇದ್ದಿತು. ನಾನು ವಿಲಿಯಂ ಮತ್ತು

ಎಡ್ವರ್ಡರು ಸ್ತ್ರೀಸ್ವತ್ತಿನ ಮೇಲೆ ಬರೆದ ಪುಸ್ತಕವನ್ನೂ ಗೂಡೀವ್‌ನರವರು ಚರಸ್ವತ್ತಿನ ಮೇಲೆ ಬರೆದ ಪುಸ್ತಕವನ್ನೂ ಉತ್ಸಾಹದಿಂದ ಓದಿದೆನು. ವಿಲಿಯಮ್ಸ್‌ರ ಪುಸ್ತಕ, ಕಾದಂಬರಿಯಂತೆ ರಂಜಕವಾಗಿದ್ದಿತು. ಭಾರತಕ್ಕೆ ಹಿಂದಿರುಗಿದ ಮೇಲೂ ಮೊದಲಿನಷ್ಟೇ ಅದಮ್ಯ ಉತ್ಸಾಹದಿಂದ ನಾನು ಓದಿದ ಒಂದು ಪುಸ್ತಕ ಎಂದರೆ ಮೇನ್ (Maine) ಬರೆದ "ಹಿಂದೂ ಕಾನೂನು" ಎಂಬುದು. ಆದರೆ ಭಾರತದ ಕಾನೂನು ಗ್ರಂಥಗಳನ್ನು ಕುರಿತು ಹೇಳಲು ಇದು ಸ್ಥಳವಲ್ಲ.

೧೮೯೧ನೇ ಇಸವಿ ಜೂನ್ ೧೦ನೆಯ ತಾರೀಖಿನಂದು ನಾನು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದೆನು. ಬ್ಯಾರಿಸ್ಟರ್ ಆದೆನು. ಹನ್ನೊಂದನೆಯ ತಾರೀಖು ಇಂಗ್ಲೆಂಡಿನ ಹೈಕೋರ್ಟಿನಲ್ಲಿ ವಕೀಲನಾಗಿ ದಾಖಲೆ ಹೊಂದಿ, ಹನ್ನೆರಡನೆಯ ತಾರೀಕಿಗೆ ಭಾರತಕ್ಕೆ ಹಡಗಿನಲ್ಲಿ ಪ್ರಯಾಣ ಹೊರಟೆನು.

ಆದರೆ ನಾನು ಅಷ್ಟು ವ್ಯಾಸಂಗಮಾಡಿದ್ದರೂ ನನ್ನ ನಿಸ್ಸಹಾಯಕತೆಗೂ ಭಯಕ್ಕೂ ಕೊನೆ ಇರಲಿಲ್ಲ. ವಕೀಲಿ ಉದ್ಯೋಗವನ್ನು ನಡೆಸುವ ಯೋಗ್ಯತೆ ನನಗೆ ಇದೆಯೆಂದು ಧೈರ್ಯವುಂಟಾಗಲಿಲ್ಲ.

ನನ್ನ ಈ ನಿಸ್ಸಹಾಯಕತೆಯನ್ನು ವಿವರಿಸಲು ಬೇರೆ ಅಧ್ಯಾಯವೇ ಆವಶ್ಯಕ.

೨೫

ನನ್ನ ನಿಸ್ಸಹಾಯಕತೆ

ಬ್ಯಾರಿಸ್ಟರ್ ಎನ್ನಿಸಿಕೊಳ್ಳುವುದು ಸುಲಭವಾಗಿದ್ದಿತು. ಆದರೆ ವಕೀಲಿಯ ವೃತ್ತಿಯನ್ನು ನಡೆಸುವುದು ಕಷ್ಟವಾಗಿದ್ದಿತು. ನಾನು ಕಾನೂನುಗಳನ್ನೇನೋ ವ್ಯಾಸಂಗಮಾಡಿದ್ದೆನು. ಅವುಗಳನ್ನು ಕಾರ್ಯರೂಪದಲ್ಲಿ ತರಲು ಕಲಿತಿರಲಿಲ್ಲ. ನಾನು ವ್ಯವಹಾರ ಸೂತ್ರಗಳನ್ನು (Legal maxims) ಉತ್ಸಾಹದಿಂದ ಓದಿದ್ದೆನಾದರೂ ನನ್ನ ಉದ್ಯೋಗಕ್ಕೆ ಅವನ್ನು ಅನ್ವಯಿಸುವುದು ನನಗೆ ತಿಳಿದಿರಲಿಲ್ಲ. ಆ ಸೂತ್ರಗಳ ಪೈಕಿ ಒಂದು "ಇತರರ ಆಸ್ತಿಗೆ ನಷ್ಟವುಂಟಾಗದಂತೆ ನಿನ್ನದನ್ನು ಉಪಯೋಗಿಸು" ಎಂಬುದು. ಆದರೆ ವಕೀಲನು, ತನ್ನ ಕಕ್ಷಿಗಾರನ ಲಾಭಕ್ಕಾಗಿ ಈ ಸೂತ್ರವನ್ನು ಉಪಯೋಗಿಸು

ವುದು ಹೇಗೆ ಎಂಬುದು ನನಗೆ ತಿಳಿದಿರಲಿಲ್ಲ. ಈ ಸೂತ್ರಕ್ಕೆ ಸಂಬಂಧಪಟ್ಟ ಎಲ್ಲ ಮುಖ್ಯ ಮೊಕದ್ದಮೆಗಳನ್ನೂ ನಾನು ಓದಿದ್ದರೂ ಈ ಸೂತ್ರವನ್ನು ಕಾನೂನು ವ್ಯವಹಾರದಲ್ಲಿ ಉಪಯೋಗಿಸುವ ಧೈರ್ಯ ನನಗೆ ಉಂಟಾಗಲಿಲ್ಲ.

ಇದರ ಜತೆಗೆ, ನನಗೆ ಇಂಡಿಯನ್ ಲಾ ವಿಷಯ ಏನೂ ತಿಳಿದೇ ಇರಲಿಲ್ಲ. ಹಿಂದೂ ಲಾ ಮತ್ತು ಮುಹಮ್ಮಡನ್ ಲಾ ಇವುಗಳ ಗಂಧವೇ ನನಗೆ ಇರಲಿಲ್ಲ. ದಾವಾ ಅರ್ಜಿ ಬರೆಯುವುದನ್ನೂ ನಾನು ಕಲಿತಿರಲಿಲ್ಲ. ಇವುಗಳ ಬಗ್ಗೆ ನನಗೆ ಏನೂ ಗೊತ್ತಿರಲಿಲ್ಲ. ಸರ್ ಫಿರೋಜ್‌ಷಾ ಮೆಹತಾ ರವರ ಹೆಸರನ್ನು ನಾನು ಕೇಳಿದ್ದೆನು. ಅವರು ನ್ಯಾಯಸ್ಥಾನದಲ್ಲಿ ಸಿಂಹ ದಂತೆ ಘರ್ಜಿಸುತ್ತಿದ್ದರೆಂದು ಕೇಳಿದ್ದೆನು. ಅವರು ಇಂಗ್ಲೆಂಡಿನಲ್ಲಿ. ಈ ಕಲೆಯನ್ನು ಹೇಗೆ ಕಲಿತರು ಎಂದು ನನಗೆ ಆಶ್ಚರ್ಯವಾಯಿತು. ವಕೀಲಿ ಯಲ್ಲಿ ಅವರಿಗಿದ್ದ ಪ್ರಾವೀಣ್ಯವನ್ನು ಸಂಪಾದಿಸುವುದಂತೂ ನನಗೆ ಕನಸಿನ ಮಾತು ಆಯಿತು. ಆದರೆ ಅದರಿಂದ ನನ್ನ ಜೀವನ ನಿರ್ವಹಣಕ್ಕೆ ಆಗುವಷ್ಟ ನ್ನಾದರೂ ಸಂಪಾದಿಸಲು ನನ್ನಿಂದ ಸಾಧ್ಯವಾದೀತೆ? ಎಂಬುದು ಕೂಡ ನನಗೆ ಸಂದೇಹವಾಗಿದ್ದಿತು.

ನಾನು ಕಾನೂನನ್ನು ವ್ಯಾಸಂಗ ಮಾಡುತ್ತಿದ್ದ ಕಾಲದಲ್ಲಿಯೇ ಈ ಸಂದೇಹ, ಕಾತರತೆಗಳು ನನ್ನನ್ನು ತಲ್ಲಣಗೊಳಿಸತೊಡಗಿದ್ದವು. ನನ್ನ ಈ ಕಷ್ಟವನ್ನು ನಾನು ಕೆಲವು ಆಪ್ತಮಿತ್ರರಲ್ಲಿ ಹೇಳಿಕೊಂಡೆನು. ದಾದಾ ಭಾಯಿ ನವರೋಜಿಯವರ ಸಲಹೆಯನ್ನು ಕೇಳಿ ಎಂದು ಆ ಮಿತ್ರರು ಸೂಚಿಸಿದರು. ನಾನು ಇಂಗ್ಲೆಂಡಿಗೆ ಹೋದಾಗ ನನ್ನ ಬಳಿ, ದಾದಾಭಾಯಿ ನವರೋಜಿಯವರಿಗೆ ಒಂದು ಪರಿಚಯ ಕಾಗದವಿದ್ದಿತೆಂದು, ಈ ಹಿಂದೆಯೇ ಹೇಳಿದ್ದೇನೆ. ಆ ಅವಕಾಶವನ್ನು ನಾನು ಉಪಯೋಗಿಸಿಕೊಂಡುದ ಎಷ್ಟೋ ಕಾಲದ ಅನಂತರ. ಮಹನೀಯರನ್ನು ಹೋಗಿ ನೋಡಿ ಅವರಿಗೆ ತೊಂದರೆ ಕೊಡಲು ನನಗೆ ಅಧಿಕಾರವಿಲ್ಲವೆಂದು ನಾನು ಭಾವಿಸಿ ದ್ದೆನು. ಅವರ ಭಾಷಣವಾಗುತ್ತದೆ ಎಂದು ಪ್ರಕಟವಾದಾಗಲೆಲ್ಲ ನಾನು ಹೋಗಿ ಸಭಾ ಭವನದ ಒಂದು ಮೂಲೆಯಲ್ಲಿ ಕುಳಿತು ಅವರ ಭಾಷಣ ವನ್ನು ಕಿವಿ ತುಂಬ ಕೇಳಿ ಅವರನ್ನು ಕಣ್ಣು ತುಂಬ ನೋಡಿಕೊಂಡು

ಹೊರಟುಹೋಗುತ್ತಿದ್ದೆನು. ವಿದ್ಯಾರ್ಥಿಗಳೊಂದಿಗೆ ನಿಕಟ ಸಂಪರ್ಕವನ್ನಿಟ್ಟುಕೊಳ್ಳುವುದಕ್ಕಾಗಿ ಅವರು ಒಂದು ಸಂಘವನ್ನು ಸ್ಥಾಪಿಸಿದ್ದರು. ನಾನು ಅದರ ಸಭೆಗಳಿಗೂ ಹೋಗುತ್ತಿದ್ದೆನು. ವಿದ್ಯಾರ್ಥಿಗಳ ಹಿತದಲ್ಲಿ ಅವರಿಗಿದ್ದ ಆಸಕ್ತಿ, ಅವರಲ್ಲಿ ವಿದ್ಯಾರ್ಥಿಗಳಿಗಿದ್ದ ಗೌರವ ಇವುಗಳನ್ನು ನೋಡಿ ನನಗೆ ಸಂತೋಷವಾಗುತ್ತಿದ್ದಿತು. ಕೊನೆಗೆ ಒಂದು ಸಲ ಧೈರ್ಯ ಮಾಡಿ ಅವರಲ್ಲಿ ಹೋಗಿ, ಪರಿಚಯ ಕಾಗದವನ್ನು ಕೊಟ್ಟೆನು. ಅವರು "ನಿನಗೆ ಬೇಕಾದಾಗ ನನ್ನಲ್ಲಿಗೆ ಬಂದು ನನ್ನ ಸಲಹೆಯನ್ನು ಕೇಳಬಹುದು" ಎಂದು ನನಗೆ ಹೇಳಿದ್ದರು. ಆ ಆಹ್ವಾನವನ್ನು ನಾನು ಉಪಯೋಗಿಸಿಕೊಳ್ಳಲೇ ಇಲ್ಲ. ಬಹಳ ತೀವ್ರವಾದ ಆವಶ್ಯಕತೆಯಿದ್ದ ಹೊರತು ಅವರಿಗೆ ತೊಂದರೆ ಕೊಡುವುದು ಸರಿಯಲ್ಲವೆಂದು ನಾನು ಭಾವಿಸಿದೆನು. ಆದುದರಿಂದ "ನಿನ್ನ ಕಷ್ಟಗಳನ್ನು ದಾದಾಭಾಯಿಯವರಿಗೆ ಹೇಳು" ಎಂದು ನನ್ನ ಮಿತ್ರರು ಕೊಟ್ಟ ಸಲಹೆಯಂತೆ ನಡೆಯಲು ನಾನು ಧೈರ್ಯ ಮಾಡಲಿಲ್ಲ. ನಾನು ಮಿ. ಫ್ರೆಡರಿಕ್ ಪಿನ್‌ಕಟ್‌ರನ್ನು ಸಂಧಿಸಬೇಕೆಂದು — ಇದೇ ಮಿತ್ರರೋ ಅಥವಾ ಬೇರೊಬ್ಬ ಮಿತ್ರರೋ; ಸೂಚಿಸಿದವರು ಯಾರು ಎಂಬುದು ನನಗೆ ಜ್ಞಾಪಕವಿಲ್ಲ — ಪಿನ್‌ಕಟರು ಕನ್‌ಸರ್‌ವೆಟೀವ್ (ಸಂಪ್ರದಾಯವಾದಿ) ಆಗಿದ್ದರು. ಆದರೆ ಭಾರತದ ವಿದ್ಯಾರ್ಥಿಗಳಲ್ಲಿ ಅವರ ಪ್ರೇಮ, ಶುದ್ಧವೂ ನಿಸ್ವಾರ್ಥವೂ ಆಗಿದ್ದಿತು. ಅನೇಕ ವಿದ್ಯಾರ್ಥಿಗಳು ಅವರ ಸಲಹೆಯನ್ನು ಕೇಳುತ್ತಿದ್ದರು. ನಾನು ಭೇಟಿಯನ್ನು ಕೇಳಿ ಅವರಿಗೆ ಪತ್ರ ಬರೆದೆನು; ಅವರು ಭೇಟಿಯನ್ನು ಕೊಟ್ಟರು. ಆ ಭೇಟಿಯನ್ನು ನಾನು ಎಂದಿಗೂ ಮರೆಯುವಂತಿಲ್ಲ. ಅವರು ನನ್ನನ್ನು ಒಬ್ಬ ಮಿತ್ರನಂತೆ ಸಂಬೋಧಿಸಿದರು. ನನ್ನ ನಿರಾಶೆಯನ್ನು ತಮ್ಮ ನಗೆಯಿಂದಲೇ ಓಡಿಸಿಬಿಟ್ಟರು. "ಪ್ರತಿಯೊಬ್ಬರೂ ಫಿರೋಜ್‌ಷಾ ಮೆಹತಾ ಆಗಬೇಕೆಂಬುದು ನಿನ್ನ ಅಭಿಪ್ರಾಯವೆ? ಫಿರೋಜ್ ಮೆಹತಾ, ಬದರುದ್ದೀನ್‌ರಂಥವರು ಅಪರೂಪ. ಸಾಧಾರಣ ವಕೀಲನಾಗಲು ಅಸಾಧಾರಣವಾದ ಬುದ್ಧಿಶಕ್ತಿ ಬೇಕಿಲ್ಲ. ಪ್ರಾಮಾಣಿಕತೆ, ಕಾರ್ಯಾಸಕ್ತಿ ಇವು ಇದ್ದರೆ ಜೀವನವನ್ನು ಸಂಪಾದಿಸಿಕೊಳ್ಳಬಹುದು. ಎಲ್ಲ ಮೊಕದ್ದಮೆಗಳೂ ತೊಡಕಿನವುಗಳಾಗಿರುವುದಿಲ್ಲ. ಅದಿರಲಿ, ಸಾಧಾರಣ ಜ್ಞಾನ ಸಂಪಾದನೆ

ಗಾಗಿ ನೀನು ಯಾವ ಯಾವ ಗ್ರಂಥಗಳನ್ನು ಓದಿದ್ದೀಯೆ ಹೇಳು" ಎಂದು ಕೇಳಿದರು.

ನನ್ನ ಜ್ಞಾನ ಬಹು ಸ್ವಲ್ಪವಾಗಿದ್ದುದನ್ನು ಅವರು ಅರಿತುಕೊಂಡರು ಅವರಿಗೆ ಆಶಾಭಂಗವಾಯಿತೆಂಬುದು ನನಗೂ ಕಂಡಿತು. ಆದರೆ ಅದು ಒಂದು ಕ್ಷಣ ಮಾತ್ರ. ಮುಂದಿನ ಗಳಿಗೆಯಲ್ಲಿಯೇ ಅವರ ಮುಖದಲ್ಲಿ ಹಿತವಾದ ನಗು ಹೊಳೆಯಿತು. "ನಿನ್ನ ಕಷ್ಟ ನನಗೆ ಅರ್ಥವಾಗಿದೆ. ಸಾಮಾನ್ಯ ಜ್ಞಾನಾರ್ಜನೆಗಾಗಿ ನೀನು ವ್ಯಾಸಂಗವಮಾಡಿರುವುದು ಬಹಳ ಕಡಿಮೆ. ನಿನ್ನಲ್ಲಿ ವಕೀಲನಿಗೆ ಇರಬೇಕಾದಷ್ಟು ವ್ಯವಹಾರಜ್ಞಾನವಿಲ್ಲ. ಭಾರತದ ಇತಿಹಾಸವನ್ನು ಸಹ ನೀನು ಓದಿಲ್ಲ. ವಕೀಲನಾಗುವವನಿಗೆ ಮನುಷ್ಯ ಸ್ವಭಾವ ತಿಳಿದಿರಬೇಕು. ಮನುಷ್ಯನ ಮುಖಚಹರೆಯನ್ನು ನೋಡಿ, ಆತನ ಸ್ವಭಾವವನ್ನು ತಿಳಿಯುವ ಶಕ್ತಿಯುಳ್ಳವನಾಗಿರಬೇಕು. ಪ್ರತಿಯೊಬ್ಬ ಭಾರತೀಯನೂ ಭಾರತದ ಇತಿಹಾಸವನ್ನು ತಿಳಿಯುವುದು ಅವನ ಕರ್ತವ್ಯ. ಇದಕ್ಕೂ ವಕೀಲ ವೃತ್ತಿಗೂ ಸಂಬಂಧವಿಲ್ಲ. ಆದರೆ ನಿನಗೆ ಆ ಜ್ಞಾನ ತಿಳಿದಿರಬೇಕು. ನೀನು ಕೆ ಮತ್ತು ಮಾಲಿಸನ್ ಬರೆದ "ಭಾರತದ ೧೮೫೭ರ ದಂಗೆಯ ಇತಿಹಾಸವನ್ನು ಸಹ ಓದಿಲ್ಲ. ಕೂಡಲೇ ಆ ಪುಸ್ತಕ ತೆಗೆದುಕೊಂಡು ಓದು. ಜತೆಗೆ ಮನುಷ್ಯ ಸ್ವಭಾವವನ್ನು ತಿಳಿಯಬೇಕಾದರೆ ಇನ್ನೂ ಎರಡು ಪುಸ್ತಕಗಳನ್ನು ಓದು" ಎಂದು ಹೇಳಿದರು. ಲ್ಯಾವೇಟರ್ ಮತ್ತು ಷೆಮ್ಮೆಲ್‌ಪೆನಿಕ್ ಎಂಬುವವರು ಮುಖ ಸಾಮುದ್ರಿಕಾ ಶಾಸ್ತ್ರವನ್ನು ಕುರಿತು ಬರೆದ ಪುಸ್ತಕಗಳೇ ಅವುಗಳಾಗಿದ್ದವು.

ಆ ಪೂಜ್ಯ ಮಿತ್ರರ ಉಪಕಾರವನ್ನು ನಾನು ತುಂಬ ಕೃತಜ್ಞತೆಯಿಂದ ಸ್ಮರಿಸಿದೆನು. ಅವರ ಎದುರಿಗೆ ನಾನು ಇದ್ದಾಗ ನನ್ನ ಭಯ ಪೂರ್ಣವಾಗಿ ಮಾಯವಾಗಿತ್ತು. ಆದರೆ ಅವರನ್ನು ಬಿಟ್ಟು ಬಂದ ಕೂಡಲೇ ನನ್ನ ಕಳವಳ ಮತ್ತೆ ಪ್ರಾರಂಭವಾಯಿತು. "ಮುಖ ನೋಡಿ ಮನುಷ್ಯನ ಸ್ವಭಾವವನ್ನು ಅರಿಯುವುದು" ಈ ಮಾತುಗಳು ನನ್ನ ಮನಸ್ಸನ್ನು ಬಿಟ್ಟು ಹೋಗಲೇ ಇಲ್ಲ. ಮರುದಿವಸ ನಾನು ಲ್ಯಾವೇಟರ್‌ರ ಪುಸ್ತಕವನ್ನು ಕೊಂಡುಕೊಂಡೆನು. ಷೆಮ್ಮೆಲ್‌ಪೆನಿಕ್‌ರ ಪುಸ್ತಕ ಅಂಗಡಿಯಲ್ಲಿ ದೊರಕಲಿಲ್ಲ. ನಾನು ಲ್ಯಾವೇಟರ್‌ರ ಪುಸ್ತಕವನ್ನು ಓದಿದೆ,

ಅದು ಸ್ನೆಲ್‌ರವರು ಬರೆದ ಈಕ್ವಿಟಿ ಎಂಬ ಪುಸ್ತಕಕ್ಕಿಂತ ಹೆಚ್ಚು ಕ್ಲಿಷ್ಟ ವಾಗಿದ್ದಿತು. ಸ್ವಲ್ಪವೂ ಉತ್ಸಾಹಕರವಾಗಿರಲಿಲ್ಲ. ಷೇಕ್ಸ್‌ಪಿಯರ್‌ನ ಮುಖಚಹರೆಯನ್ನು ಕುರಿತು ಓದಿದೆನು. ಆದರೆ ಲಂಡನ್ ನಗರದಲ್ಲಿ, ಬಸ್ತೆಯಲ್ಲಿ ಮೇಲಕ್ಕೂ ಕೆಳಕ್ಕೂ ತಿರುಗಾಡುತ್ತಿದ್ದ ಷೇಕ್ಸ್‌ಪಿಯರ್‌ಗಳನ್ನು ಗುರುತಿಸುವ ಶಕ್ತಿ ನನಗೆ ಉಂಟಾಗಲಿಲ್ಲ.

ಲ್ಯಾವೇಟರ್‌ರ ಗ್ರಂಥದಿಂದ ನನ್ನ ಜ್ಞಾನ ಹೆಚ್ಚಲಿಲ್ಲ. ಪಿನ್‌ಕಟ್‌ರ ಸಲಹೆ ನನಗೆ ಪ್ರತ್ಯಕ್ಷವಾಗಿ ಯಾವ ಸಹಾಯವನ್ನೂ ಮಾಡಲಿಲ್ಲ. ಆದರೆ ನನ್ನಲ್ಲಿದ್ದ ಅವರ ಕರುಣೆ ನನಗೆ ಒಳ್ಳೆಯ ಬೆಂಬಲವಾಯಿತು. ನನ್ನ ಮನಸ್ಸಿನ ಮುಂದೆ ಅವರ ನಗು ಮುಖ ಯಾವಾಗಲೂ ಇರುತ್ತಿದ್ದಿತು. ಅವರು ಹೇಳಿದ “ವಕೀಲಿ ವೃತ್ತಿಯಲ್ಲಿ ಜಯಶಾಲಿಯಾಗಬೇಕಾದರೆ ಫಿರೋಜ್‌ಷಾ ಮೆಹತಾರವರ ನೈಪುಣ್ಯ, ಸ್ಮರಣಶಕ್ತಿ, ಯೋಗ್ಯತೆ ಇವು ಇದ್ದರೆ ಸಾಕು” ಎಂಬ ಮಾತುಗಳಲ್ಲಿ ನನಗೆ ನಂಬಿಕೆಯುಂಟಾಯಿತು. ಕೊನೆಯ ಎರಡು ಗುಣಗಳೂ ನನ್ನಲ್ಲಿ ತಕ್ಕ ಪ್ರಮಾಣದಲ್ಲಿ ಇದ್ದುದರಿಂದ ನನಗೆ ಬಹುಮಟ್ಟಿಗೆ ಧೈರ್ಯವುಂಟಾಯಿತು.

ಇಂಗ್ಲೆಂಡಿನಲ್ಲಿದ್ದಾಗ ಕೆ ಮತ್ತು ಮಾಲಿಸನ್‌ರು ಬರೆದ “ದಂಗೆ”ಯ ಇತಿಹಾಸವನ್ನು ಓದಲು ನನಗೆ ಸಾಧ್ಯವಾಗಲಿಲ್ಲ. ಆ ಗ್ರಂಥವನ್ನು ಅವಕಾಶ ದೊರೆತ ಕೂಡಲೇ ಓದಬೇಕೆಂದು ನಿಶ್ಚಯ ಮಾಡಿಕೊಂಡಿದ್ದೆನು. ದಕ್ಷಿಣ ಆಫ್ರಿಕಾಕ್ಕೆ ಹೋದ ಕೂಡಲೇ ಆದನ್ನು ಓದಿದೆನು.

ಹೀಗೆ ನಿರಾಸೆಯ ಜತೆಗೆ ಸ್ವಲ್ಪ ಆಶಾಕಿರಣದೊಂದಿಗೆ, ನಾನು ಎಸ್. ಎಸ್. ಅಸ್ಸಾಂ ಎಂಬ ಹಡಗಿನಲ್ಲಿ ಬೊಂಬಾಯಿಯನ್ನು ಬಂದು ತಲುಪಿದೆನು. ಬಿರುಗಾಳಿಯಿಂದ ಬಂದರಿನಲ್ಲಿ ಅಲ್ಲೋಲ ಕಲ್ಲೋಲವಾಗಿ ದ್ದಿತು. ದೋಣಿಯಲ್ಲಿ ಕುಳಿತು ತೀರವನ್ನು ಸೇರಬೇಕಾಯಿತು.

ಆತ್ಮಕಥೆ

ಅಥವಾ

ನನ್ನ ಸತ್ಯಾನ್ವೇಷಣೆ

ಭಾಗ ೨

೧

ರಾಯಚಂದ ಭಾಯೀ

ಹಿಂದಿನ ಅಧ್ಯಾಯದಲ್ಲಿ ನಾನು, ಬೊಂಬಾಯಿನ ಬಂದರಿನಲ್ಲಿ ಸಮುದ್ರ ಪ್ರಕ್ಷುಬ್ಧವಾಗಿದ್ದಿತೆಂದು ಹೇಳಿದೆ. ಅರಬ್ಬೀ ಸಮುದ್ರದಲ್ಲಿ ಜೂನ್, ಜುಲೈ ತಿಂಗಳುಗಳಲ್ಲಿ ಇದೇನೂ ಅಪೂರ್ವವಾದ ವಿಷಯವಲ್ಲ. ಏಡನ್ನಿನಿಂದ ದಾರಿಯುದ್ದಕ್ಕೂ ಸಮುದ್ರದಲ್ಲಿ ಅಲೆಗಳ ಪ್ರಕೋಪವಿದ್ದಿತು. ಹೆಚ್ಚು ಕಡಿಮೆ ಎಲ್ಲ ಪ್ರಯಾಣಿಕರೂ ಕಾಯಿಲೆ ಬಿದ್ದರು. ನಾನೊಬ್ಬ ಮಾತ್ರ ಪೂರ್ಣ ಆರೋಗ್ಯಸ್ಥಿತಿಯಲ್ಲಿದ್ದೆನು. ಹಡಗಿನ ಮೇಲ್ಭಾಗದಲ್ಲಿ ಇದ್ದು ಬಿರುಗಾಳಿ ಅಲೆಗಳ ಎರಚಾಟವನ್ನು ಆನಂದದಿಂದ ಅನುಭವಿಸುತ್ತಿದ್ದೆನು. ಬೆಳಗಿನ ಊಟದ ವೇಳೆ, ನನ್ನೊಂದಿಗೆ ಒಬ್ಬಿಬ್ಬರು ಮಾತ್ರ ಇರುತ್ತಿದ್ದರು. ನಾವು ಅಂಬಲಿಯ ತಟ್ಟೆಯನ್ನು ತೊಡೆಯ ಮೇಲೆ ಇಟ್ಟುಕೊಂಡು ನಿಧಾನವಾಗಿ ತಿನ್ನುತ್ತಿದ್ದೆವು. ಸ್ವಲ್ಪ ಎಚ್ಚರ ತಪ್ಪಿದರೂ ಸರಿ, ತಟ್ಟೆಯ ಬದಲು ಅಂಬಲಿಯೇ ನಮ್ಮ ತೊಡೆಯ ಮೇಲೆ ಇರುತ್ತಿದ್ದಿತು !

ನನ್ನ ಮಟ್ಟಿಗೆ, ಹೊರಗಿನ ಬಿರುಗಾಳಿ, ನನ್ನ ಮನಸ್ಸಿನಲ್ಲಿ ಏಳುತ್ತಿದ್ದ ಬಿರುಗಾಳಿಯ ಸಂಕೇತವಾಗಿದ್ದಿತು. ಹೊರಗಿನ ಬಿರುಗಾಳಿಯಿಂದ ನಾನು ವಿಚಲಿತನಾಗದೆ ಶಾಂತವಾಗಿದ್ದಂತೆ, ಅಂತರಂಗದ ಬಿರುಗಾಳಿಯಿಂದಲೂ ಶಾಂತನಾಗಿಯೇ ಇದ್ದೆನೆಂದು ಹೇಳಬಲ್ಲೆನು. ನಮ್ಮ ಜಾತಿಬಂಧುಗಳಿಂದ ಉಂಟಾಗುವ ತಂಟೆಯಂತೂ ನನ್ನೆದುರಿಗೆ ಇದ್ದೇ ಇದ್ದಿತು. ವಕೀಲಿ ಕೆಲಸವನ್ನು ಪ್ರಾರಂಭಿಸುವುದರಲ್ಲಿ ನನ್ನ ನಿಸ್ಸಹಾಯಕತೆಯನ್ನು ಮೊದಲೇ ಹೇಳಿದ್ದೇನೆ. ನಾನು ಸುಧಾರಕನಾದುದರಿಂದ, ಕೆಲವು ಸುಧಾರಣೆಗಳನ್ನು ಪ್ರಾರಂಭಮಾಡುವುದು ಹೇಗೆಂದೂ ಯೋಚಿಸುತ್ತಿದ್ದೆನು. ಆದರೆ ಇವೆಲ್ಲವುಗಳಿಗಿಂತಲೂ ಇನ್ನೂ ಹೆಚ್ಚು ಕಷ್ಟ ನನ್ನನ್ನು ಕಾಡಿದ್ದಿತು.

ನನ್ನನ್ನು ಸಂಧಿಸಲು ನನ್ನ ಹಿರಿಯಣ್ಣ, ಬಂದರಿಗೆ ಬಂದಿದ್ದರು. ಅವರು ಆಗಲೇ ಡಾಕ್ಟರ್ ಮೆಹತಾರನ್ನೂ ಅವರ ಹಿರಿಯ ಅಣ್ಣಂದಿರನ್ನೂ ಪರಿಚಯ ಮಾಡಿಕೊಂಡಿದ್ದರು. ಡಾಕ್ಟರ್ ಮೆಹತಾ, ನಾನು ಅವರ

ಮನೆಯಲ್ಲಿಯೇ ಇರಬೇಕೆಂದು ನನ್ನನ್ನು ಬಲಾತ್ಕರಿಸುತ್ತಿದ್ದುದರಿಂದ ನಾವು ಅವರ ಮನೆಗೇ ಹೋದೆವು. ಹೀಗೆ ಇಂಗ್ಲೆಂಡಿನಲ್ಲಿ ಪ್ರಾರಂಭವಾದ ಪರಿಚಯ ವೃದ್ಧಿ ಹೊಂದಿ ನಮ್ಮ ಎರಡೂ ಕುಟುಂಬಗಳ ನಡುವೆ ಶಾಶ್ವತ ಸ್ನೇಹ ನೆಲೆಸಿತು.

ತಾಯಿಯನ್ನು ನೋಡಲು ನಾನು ಬಹಳ ಕಾತರನಾಗಿದ್ದೆನು. ನನ್ನನ್ನು ಆದರಿಸಿ ಎದೆಗಪ್ಪಿಕೊಳ್ಳಲು, ಆಕೆ ಜೀವಂತಳಾಗಿರಲಿಲ್ಲವೆಂಬುದು ಆಗ ನನಗೆ ತಿಳಿದಿರಲಿಲ್ಲ. ಈಗ ಈ ದುಃಖ ಸಮಾಚಾರವನ್ನು ನನಗೆ ಹೇಳಿದರು. ಪದ್ಧತಿಯ ಪ್ರಕಾರ ಮೃತಸ್ನಾನಾದಿಗಳನ್ನಾಚರಿಸಿದೆನು. ನಾನು ಇಂಗ್ಲೆಂಡಿನಲ್ಲಿರುವಾಗ, ನಮ್ಮ ತಾಯಿ ಸ್ವರ್ಗಸ್ಥರಾದರು. ಪರದೇಶದಲ್ಲಿರುವಾಗ ನನಗೆ ದುಃಖವುಂಟುಮಾಡಬಾರದೆಂದು ನನ್ನ ಅಣ್ಣ ವಿಷಯವನ್ನು ನನಗೆ ತಿಳಿಸಲಿಲ್ಲ. ಸಾವಕಾಶವಾದ ಮೇಲೆ ಸುದ್ದಿ ತಿಳಿದರೂ, ದುಃಖದ ಆಘಾತ ಕಡಿಮೆಯಾಗಲಿಲ್ಲ. ಅದರ ವಿಷಯ ಹೆಚ್ಚು ಹೇಳಬಾರದು. ತಂದೆಯ ಸಾವಿನಿಂದ ಆದುದಕ್ಕಿಂತ ಈ ದುಃಖ ಹೆಚ್ಚಾಗಿದ್ದಿತು. ನಾನು ಕಟ್ಟಿದ್ದ ಕನಸಿನ ಗೋಪುರ ಒಡೆದು ಪುಡಿಪುಡಿಯಾಯಿತು. ಆದರೆ ನಾನು ಅತಿಯಾಗಿ ಅತ್ತು ಕರೆದು ಗೋಳಾಡಲಿಲ್ಲವೆಂದು ಜ್ಞಾಪಕ. ಕಣ್ಣೀರನ್ನು ಕೂಡ ತಡೆದುಕೊಂಡು, ನಮ್ಮ ತಾಯಿಯ ಮರಣ ಸಂಭವಿಸದಿದ್ದರೆ ಹೇಗೋ ಹಾಗೆ ನನ್ನ ನಿತ್ಯದ ಕಾರ್ಯದಲ್ಲಿ ತೊಡಗಿದೆನು.

ಡಾಕ್ಟರ್ ಮೆಹತಾ, ನನಗೆ ಅನೇಕ ಸ್ನೇಹಿತರ ಪರಿಚಯ ಮಾಡಿಸಿದರು. ಅವರ ಪೈಕಿ, ಮೆಹತಾರವರ ಸಹೋದರರಾದ ಶ್ರೀ ರೇವಾಶಂಕರ್ ಜಗಜೀವನ್ ಒಬ್ಬರು. ಅವರಿಗೂ ನನಗೂ ಬೆಳೆದ ಪ್ರೀತಿ ಜೀವಮಾನ ಪೂರ್ತಿ ನೆಲೆಸಿತು. ಆದರೆ ನಾನು ಮುಖ್ಯವಾಗಿ ಗಮನಕ್ಕೆ ತೆಗೆದುಕೊಳ್ಳಬೇಕಾದ ಪರಿಚಯವೆಂದರೆ ಕವಿ ರಾಯಚಂದ್ ಅಥವಾ ರಾಜೇಂದ್ರ ಎಂಬುವನದು. ಆತ, ಡಾಕ್ಟರ್ ಮೆಹತಾರವರ ಒಬ್ಬ ಹಿರಿಯಣ್ಣನ ಅಳಿಯ, ಮತ್ತು ರೇವಾಶಂಕರ್ ಜಗಜೀವನರ ಹೆಸರಿನಲ್ಲಿ ನಡೆಯುತ್ತಿದ್ದ ರತ್ನಪಡಿ ವ್ಯಾಪಾರದ ಪಾಲುಗಾರನಾಗಿದ್ದನು. ನನಗೂ ಅವನಿಗೂ ಪರಿಚಯವಾದಾಗ ಅವನ ವಯಸ್ಸು ೨೫ಕ್ಕೆ ಹೆಚ್ಚಿರಲಿಲ್ಲ. ಆದರೆ ಆತನನ್ನು ಮೊದಲಬಾರಿ ನೋಡಿದಾಗಲೇ ನನಗೆ ಆತ ಸಚ್ಚಾರಿತ್ರ್ಯವುಳ್ಳ

ವನು ಮತ್ತು ಜ್ಞಾನಿ ಎಂದು ಮನದಟ್ಟಾಯಿತು. ಆತ, ಶತಾವಧಾನಿ (ನೂರಾರು ವಿಷಯಗಳನ್ನು ಏಕಕಾಲದಲ್ಲಿ ಜ್ಞಾಪಕವಿಟ್ಟುಕೊಳ್ಳುವವ, ಮಾಡುವವ) ಎಂದೂ ಹೆಸರು ಪಡೆದಿದ್ದನು. ಡಾಕ್ಟರ್ ಮೆಹತಾರವರು ನಾನು ರಾಯಚಂದನ ಶತಾವಧಾನದ (ಬುದ್ಧಿಶಕ್ತಿಯ) ಕೆಲವು ನಿದರ್ಶನಗಳನ್ನು ನೋಡಬೇಕೆಂದು ಸೂಚಿಸಿದರು. ನಾನು ನನಗೆ ಗೊತ್ತಿದ್ದ ಯೂರೋಪ್ ಭಾಷೆಗಳ ಎಲ್ಲ ಶಬ್ದಭಂಡಾರವನ್ನೂ ಆತನ ಎದುರಿಗೆ ಉಚ್ಚರಿಸಿ, ಅವನ್ನೆಲ್ಲ ಮತ್ತೆ ಹೇಳುವಂತೆ ಕೇಳಿದೆನು. ಆತ ನಾನು ಯಾವ ಕ್ರಮದಲ್ಲಿ ಹೇಳಿದ್ದೆನೋ ಅದೇ ಕ್ರಮದಲ್ಲಿ ಒಂದನ್ನೂ ತಪ್ಪದೆ ಹೇಳಿದನು. ಅವನ ಆ ಸಾಮರ್ಥ್ಯವನ್ನು ನೋಡಿ ನಾನು ಹರ್ಷಗೊಂಡೆನಾದರೂ ಮುಗ್ಧನಾಗಲಿಲ್ಲ. ನಿಜವಾಗಿ ನನ್ನನ್ನು ಮುಗ್ಧಗೊಳಿಸಿದ ವಿಷಯ ಆಮೇಲೆ ಬಂದಿತು. ಅದು ಆತನ ವಿಶಾಲ ಶಾಸ್ತ್ರಜ್ಞಾನ, ನಿರ್ಮಲ ಚಾರಿತ್ರ್ಯ, ಮತ್ತು ಆತ್ಮದರ್ಶನವನ್ನು ಮಾಡಬೇಕೆಂಬ ಆತನ ಉತ್ಕಟತೆ. ಆತ, ಆತ್ಮದರ್ಶನವನ್ನು ಪಡೆಯುವುದಕ್ಕಾಗಿಯೇ ಬಾಳುತ್ತಿದ್ದನೆಂಬುದು ನನಗೆ ಅನಂತರ ಅನುಭವಕ್ಕೆ ಬಂದಿತು. ಮುಕ್ತಾನಂದರ ಈ ಕೆಳಗಿನ ವಚನಗಳು ಯಾವಾಗಲೂ ಆತನ ನಾಲಿಗೆಯ ಮೇಲೆ ಇರುತ್ತಿದ್ದವು; ಹೃದಯದಲ್ಲಿಯೂ ಅಂಕಿತವಾಗಿದ್ದವು.

"ನನ್ನ ಪ್ರತಿಯೊಂದು ಕಾರ್ಯದಲ್ಲಿಯೂ ದೇವರನ್ನು ನೋಡಿದಾಗಲೇ ನಾನು ಧನ್ಯ ಮುಕ್ತಾನಂದನ ಜೀವಸೂತ್ರಕ್ಕೆ ಆಸರೆ ಶ್ರೀ ಕೃಷ್ಣ ಪರಮಾತ್ಮನೇ."

ರಾಯಚಂದ ಭಾಯಿ ಲಕ್ಷಾಂತರ ರೂಪಾಯಿಗಳ ವ್ಯವಹಾರವುಳ್ಳ ವ್ಯಾಪಾರಿ; ಅವನು ರತ್ನ ಮತ್ತು ಮುತ್ತುಗಳ ಪರೀಕ್ಷೆಯಲ್ಲಿ ನಿಪುಣ. ಅವನಿಗೆ ತೊಡಕಾಗಿದ್ದ ವ್ಯಾಪಾರದ ಪ್ರಶ್ನೆಗಳೇ ಯಾವುವೂ ಇರಲಿಲ್ಲ. ಆದರೆ ವ್ಯಾಪಾರ ಅವನ ಪುರುಷಾರ್ಥವಾಗಿರಲಿಲ್ಲ. ಅವನ ಪುರುಷಾರ್ಥ, ಆತ್ಮಸಾಕ್ಷಾತ್ಕಾರ—ಹರಿದರ್ಶನ. ಅವನ ಅಂಗಡಿಯ ಮೇಜಿನ ಮೇಲೆ—ಉಳಿದ ವಸ್ತುಗಳು ಇರಲಿ ಬಿಡಲಿ—ಯಾವುದಾದರೂ ಧಾರ್ಮಿಕ ಗ್ರಂಥ ಮತ್ತು ದಿನಚರಿಯ ಪುಸ್ತಕ ಇದ್ದೇ ಇರುತ್ತಿದ್ದಿತು. ವ್ಯಾಪಾರ ಮುಗಿದ ಕೂಡಲೇ, ಆತ ತನ್ನ ದಿನಚರಿಯ ಪುಸ್ತಕವನ್ನು ತೆರೆಯುತ್ತಿದ್ದನು.

ಅವನು ಪ್ರಕಟಿಸಿರುವ ಕೃತಿಗಳ ಬಹುಭಾಗ ಈ ದಿನಚರಿಯಿಂದ ತೆಗೆದು ಕೊಂಡವು. ದೊಡ್ಡ ದೊಡ್ಡ ವ್ಯಾಪಾರದ ಪ್ರಶ್ನೆಗಳನ್ನು ಮುಗಿಸಿ, ಕೂಡಲೇ ಧಾರ್ಮಿಕ ಗ್ರಂಥವನ್ನು ತೆರೆಯುವ ಮನುಷ್ಯ, ಬರಿಯ ವ್ಯಾಪಾರಿಯಲ್ಲ; ಆತ್ಮಜ್ಞಾನಿ. ವ್ಯಾಪಾರದ ಮಧ್ಯೆ ಧಾರ್ಮಿಕ ವಿಚಾರದಲ್ಲಿ ಅವನು ಆಸಕ್ತನಾಗಿದ್ದುದನ್ನು ನಾನು ಅನೇಕ ಬಾರಿ ನೋಡಿದ್ದೇನು. ಅವನು ತನ್ನ ಶಾಂತಿಯನ್ನೂ ಸಮತೆಯನ್ನೂ ಕಳೆದುಕೊಂಡುದನ್ನು ನಾನು ಎಂದೂ ನೋಡಲಿಲ್ಲ. ನನಗೂ ಅವನಿಗೂ ವ್ಯಾಪಾರದ ಸಂಬಂಧವಾಗಲೀ ಸ್ವಾರ್ಥತೆಯ ಸಂಬಂಧವಾಗಲೀ ಯಾವುದೂ ಇರಲಿಲ್ಲ. ಆದರೆ ನನ್ನ ಅವನ ಬಾಂಧವ್ಯ, ಬಹಳ ನಿಕಟವಾಗಿದ್ದಿತು. ನಾನು ಕೆಲಸವಿಲ್ಲದ ಬ್ಯಾರಿಸ್ಟರ್ ಆಗಿದ್ದೆನು. ಆದರೂ ನಾನು ಅವನ ಅಂಡಿಗೆ ಹೋದಾಗಲೆಲ್ಲ ಅವನು ನನ್ನೊಂದಿಗೆ ಧರ್ಮದ ಸಂಬಂಧವಾದ ಗಂಭೀರ ಮಾತುಕತೆಗಳಲ್ಲಿ ತೊಡಗುತ್ತಿದ್ದನು. ನನ್ನ ಜೀವನ ಮಾರ್ಗದಲ್ಲಿ ನಾನು ಇನ್ನೂ ತಡಕಾಡುತ್ತಲೇ ಇದ್ದೆನು. ಧರ್ಮದ ವಿಷಯವಾಗಿ ನನಗೆ ಯಾವ ಶ್ರದ್ಧೆಯೂ ಇದ್ದಿತೆಂದು ಹೇಳಲಾರೆ. ಆದರೂ ಅವನ ಧಾರ್ಮಿಕ ಸಂಭಾಷಣೆ ನನ್ನ ಮನಸ್ಸನ್ನು ಪೂರ್ಣವಾಗಿ ಹಿಡಿಯುತ್ತಿದ್ದಿತು. ಈಚೆಗೆ ನನಗೆ ಅನೇಕ ಧಾರ್ಮಿಕ ಆಚಾರ್ಯರ ಸಂಪರ್ಕ ದೊರೆತಿದೆ. ಬೇರೆ ಬೇರೆ ಧರ್ಮಗಳ ಆಚಾರ್ಯರನ್ನೂ ನಾನು ಸಂಧಿಸಲು ಪ್ರಯತ್ನಿಸಿದ್ದೇನೆ. ಆದರೆ ರಾಯಚಂದಭಾಯಿ ನನ್ನ ಮನಸ್ಸಿನ ಮೇಲೆ ಮಾಡಿದ ಪರಿಣಾಮವನ್ನು ಮತ್ತಾರೂ ಮಾಡಲಿಲ್ಲವೆಂದು ಹೇಳಬೇಕು. ಅವನ ಮಾತುಗಳು ನೇರವಾಗಿ ನನ್ನ ಹೃದಯವನ್ನೇ ಪ್ರವೇಶಿಸಿದವು. ಅವನ ನೀತಿ ಶ್ರದ್ಧೆಯಲ್ಲಿ ಹೇಗೋ ಹಾಗೆ ಅವನ ಬುದ್ಧಿಯಲ್ಲಿಯೂ ನನಗೆ ಗೌರವವುಂಟಾಯಿತು. "ಇವನು ನನ್ನನ್ನು ಎಂದಿಗೂ ದುರ್ಮಾರ್ಗದಲ್ಲಿ ಕರೆದುಕೊಂಡು ಹೋಗುವುದಿಲ್ಲ. ತನ್ನ ಅತ್ಯಂತ ಅಂತರಂಗದ ಆಲೋಚನೆಗಳನ್ನು ಸಹ ನನಗೆ ತಿಳಿಸುತ್ತಾನೆ" ಎಂಬುದು ನನ್ನ ಹಾರ್ದಿಕ ನಂಬಿಕೆಯಾಗಿದ್ದಿತು. ಆದುದರಿಂದ ನಾನು ಆಧ್ಯಾತ್ಮಿಕ ಕ್ಲೇಶ ಪ್ರಸಂಗಗಳಲ್ಲೆಲ್ಲ ಅವನ ಸಹಾಯವನ್ನು ಪಡೆಯುತ್ತಿದ್ದೆನು.

ರಾಯಚಂದ ಭಾಯಿಯಲ್ಲಿ ನನಗೆ ಇಷ್ಟೊಂದು ಆದರ ಭಾವವಿದ್ದರೂ ನಾನು ಅವನನ್ನು ನನ್ನ ದರ್ಮ ಗುರುವೆಂದು ಮನಸಾ ಅಂಗೀಕರಿಸ

ಲಾರದೆ ಹೋದೆನು. ಧರ್ಮ ಗುರುವಿಗಾಗಿ ನನ್ನ ಹೃದಯಸಿಂಹಾಸನ ಇನ್ನೂ ತೆರೆದೇ ಇದೆ.

ಹಿಂದೂ ಧರ್ಮದಲ್ಲಿ ಗುರುವಿಗೆ ಕೊಟ್ಟಿರುವ ಮಹತ್ವಸ್ಥಾನ ದಲ್ಲಿಯೂ ಧಾರ್ಮಿಕ ಸಾಕ್ಷಾತ್ಕಾರಕ್ಕೆ ಅದರ ಪ್ರಮುಖತೆಯಲ್ಲಿಯೂ ನನಗೆ ನಂಬಿಕೆ. ಗುರುವಿನ ಸಹಾಯವಿಲ್ಲದೆ ಜ್ಞಾನ ಸಾಧ್ಯವಿಲ್ಲವೆಂಬ ವಾಕ್ಯ ಸತ್ಯ. ಸಾಮಾನ್ಯ ವ್ಯಾವಹಾರಿಕ ವಿಷಯಗಳಲ್ಲಿ, ಅಪೂರ್ಣನಾದ ಶಿಕ್ಷಕನಿದ್ದರೂ ಕೆಲಸವಾಗುತ್ತದೆ. ಆದರೆ ಆತ್ಮದರ್ಶನ ಮಾಡಿಸಬೇಕಾದರೆ ಅಪೂರ್ಣನಾದ ಗುರುವಿನಿಂದ ಎಂದಿಗೂ ಸಾಧ್ಯವಿಲ್ಲ. ಗುರುಪೀಠದಲ್ಲಿ ಪ್ರತಿಷ್ಠಿತನಾಗಲು ಜ್ಞಾನಿಯೊಬ್ಬನಿಗೇ ಅರ್ಹತೆ. ಆದುದರಿಂದ ಪೂರ್ಣತೆ ಪಡೆಯಲು, ಅವಿಶ್ರಾಂತ ಸಾಧನೆ ಆವಶ್ಯಕ. ನಮ್ಮ ಅರ್ಹತೆಗೆ ಯೋಗ್ಯನಾದ ಗುರು ನಮಗೆ ದೊರೆಯು ತ್ತಾನೆ. ತಾನು ಪರಿಪೂರ್ಣನಾಗಲು ಅವ್ಯಾಹತವಾಗಿ ಸಾಧನೆ ಮಾಡುವುದು ಸಾಧಕನ ಕರ್ತವ್ಯ. ಸಾಧನೆಯ ಪ್ರತಿಫಲ, ಸಾಧನೆಯೇ. ಉಳಿದುದು ಈಶ್ವರಾಧೀನ.

ಹೀಗೆ ರಾಯಚಂದ ಭಾಯಿಯನ್ನು ಗುರುವಾಗಿ ನನ್ನ ಹೃದಯದಲ್ಲಿ ಸ್ಥಾಪಿಸಲು ನನ್ನಿಂದ ಸಾಧ್ಯವಾಗಲಿಲ್ಲ. ಆದರೂ ಅವನು ಅನೇಕ ಸಂದರ್ಭ ಗಳಲ್ಲಿ ನನಗೆ ಹೇಗೆ ಸಹಾಯಕನೂ ಮಾರ್ಗದರ್ಶಕನೂ ಆದನೆಂಬುದು ಮುಂದೆ ಗೊತ್ತಾಗುತ್ತದೆ. ಮೂವರು ಅರ್ವಾಚೀನ ಮಹನೀಯರು ನನ್ನ ಜೀವನದ ಮೇಲೆ ಆಳವಾದ ಪ್ರಭಾವವನ್ನುಂಟುಮಾಡಿ ನನ್ನನ್ನು ಆಕರ್ಷಿಸಿ ದ್ದಾರೆ. ಜೀವನ ಸಂಸರ್ಗದಿಂದ ರಾಯಚಂದಭಾಯಿ; "ದೇವರ ಸಾಮ್ರಾಜ್ಯ ನಿಮ್ಮ ಹೃದಯದಲ್ಲಿದೆ" ಎಂಬ ಪುಸ್ತಕದಿಂದ ಟಾಲಸ್ಟಾಯ್, "ಸರ್ವೋದಯ" ಎಂಬ ಪುಸ್ತಕದಿಂದ ರಸ್ಕಿನ್; ಇವರೇ ಆ ಮೂವರು. ಆದರೆ ಅವರುಗಳ ವಿಷಯವನ್ನು ಮುಂದೆ ಆಯಾ ಸ್ಥಳಗಳಲ್ಲಿ ತಿಳಿಸುತ್ತೇನೆ.

೨

ಸಂಸಾರ ಪ್ರವೇಶ

ನನ್ನ ಹಿರಿಯಣ್ಣ, ನನ್ನ ಮೇಲೆ ಆಶೆಯ ಗೋಪುರವನ್ನೇ ಕಟ್ಟಿ ಕೊಂಡಿದ್ದರು. ಧನ, ಕೀರ್ತಿ ಪದವಿ ಇವುಗಳ ಆಸೆ ಆತನಿಗೆ ಅಧಿಕವಾಗಿ ದ್ದಿತು. ಆತನನು ವಿಶಾಲ ಹೃದಯ ಮತ್ತು ಉದಾರ ಸ್ವಭಾವ. ಆತ ತುಂಬ ಸರಳ ಹೃದಯಿ. ಇವೆಲ್ಲವುಗಳಿಂದ ಅವನಿಗೆ ಅನೇಕ ಜನ ಸ್ನೇಹಿತ ರಾಗಿದ್ದರು. ಆ ಸ್ನೇಹಿತರ ಮೂಲಕ, ಅನೇಕ ಮೊಕದ್ದಮೆಗಳು ನನಗೆ ಬರುವುದೆಂಬುದು ಆತನ ನಿರೀಕ್ಷೆಯಾಗಿದ್ದಿತು. ವಕೀಲಿ ವೃತ್ತಿಯಿಂದ ನನ್ನ ಸಂಪಾದನೆ ಹೆಚ್ಚುವುದೆಂದು ನಿರ್ಣಯಿಸಿ, ಆತ ಸಂಸಾರದ ವೆಚ್ಚವ ನ್ನೆಲ್ಲ ಹೆಚ್ಚಿಸಿ ಬಿಟ್ಟಿದ್ದನು. ನನ್ನ ವೃತ್ತಿಗೆ ಕ್ಷೇತ್ರವನ್ನು ಸಿದ್ಧಗೊಳಿಸು ವುದಕ್ಕೂ ಆತನು ಬಹಳ ಶ್ರಮಪಟ್ಟಿದ್ದನು.

ನನ್ನ ವಿದೇಶಯಾತ್ರೆ ಕುರಿತು ನನ್ನ ಜಾತಿಯಲ್ಲಿ ಎದ್ದಿದ್ದ ಬಿರುಗಾಳಿ ಇನ್ನೂ ಇದ್ದಿತು. ಈಗ ನಮ್ಮ ಜಾತಿಯವರಲ್ಲಿಯೇ ಎರಡು ಪಂಗಡ ಗಳಾಗಿದ್ದವು. ಒಂದು ಪಂಗಡ ನನ್ನನ್ನು ಜಾತಿಗೆ ಸೇರಿಸಿಕೊಂಡಿತು. ನನ್ನನ್ನು ಹೊರಗೇ ಇಟ್ಟಿರಬೇಕೆಂಬುದು ಮತ್ತೊಂದು ಪಂಗಡದ ಉದ್ದೇಶವಾಗಿದ್ದಿತು. ನಮ್ಮಣ್ಣ ನನ್ನನ್ನು ನಾಸಿಕಕ್ಕೆ ಕರೆದುಕೊಂಡು ಹೋಗಿ ಅಲ್ಲಿ ನದಿಯಲ್ಲಿ ಪವಿತ್ರ ಸ್ನಾನ ಮಾಡಿಸಿದನು. ರಾಜಕೋಟೆಗೆ ಹಿಂದಿರುಗಿ, ಜಾತಿಯವರಿಗೆ ಒಂದು ಊಟವನ್ನು ಕೊಟ್ಟನು. ನನಗೆ ಇದಾವುದೂ ಇಷ್ಟವಿರಲಿಲ್ಲ. ಆದರೆ ನನ್ನಲ್ಲಿ ನಮ್ಮಣ್ಣನ ಪ್ರೀತಿ ಅಮಿತವಾಗಿದ್ದಿತು. ಅವನಲ್ಲಿ ನನ್ನ ಭಕ್ತಿಯೂ ಹಾಗೆಯೇ ಇದ್ದಿತು. ಆದುದರಿಂದ ನಾನು ಅವನ ಇಚ್ಛೆಯನ್ನೇ ಆಜ್ಞೆಯಂತೆ ಭಾವಿಸಿ ಯಂತ್ರದಂತೆ ನೆರವೇರಿಸಿದೆನು. ಹೀಗೆ, ಜಾತಿಯವರಲ್ಲಿ ಮತ್ತೆ ಸೇರಿಕೊಳ್ಳುವುದು ಸುಲಭವಾಯಿತು.

ನನ್ನನ್ನು ಬಹಿಷ್ಕರಿಸಿದ್ದ ನಮ್ಮ ಜಾತಿಯವರ ಪಂಗಡವನ್ನು ಪ್ರವೇಶಿಸಲು ನಾನು ಮತ್ತೆ ಎಂದೂ ಪ್ರಯತ್ನಮಾಡಲಿಲ್ಲ. ಅಷ್ಟೇ ಅಲ್ಲ, ಆ ಪಂಗಡದ ಮುಖಂಡರಲ್ಲಿ ನನ್ನ ಮನಸ್ಸಿನಲ್ಲಿ ಸಹ ಎಂದೂ ಕ್ರೋಧ ಉಂಟಾಗಲಿಲ್ಲ. ಕೆಲವರಿಗೆ ನನ್ನಲ್ಲಿ ತಿರಸ್ಕಾರ ದೃಷ್ಟಿ ಸಹ ಇದ್ದಿತು. ಆದರೆ

ನಾನು ಅವರ ಮನಸ್ಸಿಗೆ ನೋವಾಗುವಂತೆ ಎಂದೂ ನಡೆಯಲಿಲ್ಲ. ನಾನು ಬಹಿಷ್ಕಾರದ ನಿಯಮಗಳನ್ನು ಪೂರ್ಣವಾಗಿ ಪಾಲಿಸುತ್ತಿದ್ದೆನು. ಆ ನಿಯಮಕ್ಕೆ ಅನುಗುಣವಾಗಿ ನನ್ನ ಅತ್ತೆ ಮಾವಂದಿರು, ನನ್ನ ಸಹೋದರಿಯರು ಭಾವ ಮುಂತಾದ ಯಾವ ಬಂಧುಗಳೂ ನನ್ನೊಂದಿಗೆ ಯಾವ ಸಂಪರ್ಕವನ್ನೂ ಇಟ್ಟುಕೊಳ್ಳುವಂತೆ ಇರಲಿಲ್ಲ. ನನಗೆ ತಮ್ಮ ಮನೆಗಳಲ್ಲಿ ಆತಿಥ್ಯಮಾಡುವಂತೆ ಇರಲಿಲ್ಲ. ನಾನು ಅವರ ಪೈಕಿ ಯಾರ ಮನೆಯಲ್ಲಿಯೂ ನೀರನ್ನು ಕೂಡ ಕುಡಿಯುತ್ತಿರಲಿಲ್ಲ. ಅವರು ರಹಸ್ಯದಲ್ಲಿ, ಬಹಿಷ್ಕಾರ ನಿಯಮವನ್ನು ಉಲ್ಲಂಘಿಸಲು ಸಿದ್ಧರಾಗಿದ್ದರು. ಆದರೆ ಅದು ನನ್ನ ಸ್ವಭಾವಕ್ಕೆ ವಿರೋಧವಾಗಿದ್ದಿತು. ಯಾವ ಕಾರ್ಯವನ್ನು ನಾಲ್ಕು ಜನರ ಎದುರಿಗೆ ಮಾಡುವುದಿಲ್ಲವೋ ಅದನ್ನು ರಹಸ್ಯದಲ್ಲಿ ಮಾಡಲು ನನಗೆ ಇಷ್ಟವಿರಲಿಲ್ಲ.

ನನ್ನ ಈ ಪ್ರಾಮಾಣಿಕ ನಡತೆಯ ಪರಿಣಾಮವಾಗಿ, ಜಾತಿಯವರಿಂದ ನನಗೆ ಯಾವಾಗಲೂ ಉಪದ್ರವವಾಗುವ ಸಂದರ್ಭವೇ ಉಂಟಾಗಲಿಲ್ಲ. ಅಷ್ಟೇ ಅಲ್ಲ; ನಾನು ಬಹಿಷ್ಕೃತ ಎಂದು ತಿಳಿದ ಜಾತಿ ಬಂಧುಗಳೂ ಸಹ, ನನ್ನಲ್ಲಿ ಪ್ರೇಮ ಔದಾರ್ಯಗಳನ್ನು ಪೂರ್ಣವಾಗಿ ಇಟ್ಟಿದ್ದಾರೆ. ನಾನು ಜಾತಿಗಾಗಿ ಏನನ್ನು ಮಾಡಬೇಕೆಂದೂ ಸಹ ನಿರೀಕ್ಷಿಸದೆ ಅವರು ನನ್ನ ಕಾರ್ಯದಲ್ಲಿ ನನಗೆ ಸಹಾಯ ಮಾಡಿದ್ದಾರೆ. ಇದಕ್ಕೆಲ್ಲ ಕಾರಣ ನನ್ನ ಪ್ರತೀಕಾರ ರಹಿತ ಬುದ್ಧಿ ಎಂದು ನನ್ನ ನಂಬಿಕೆ. ಜಾತಿಗೆ ಮತ್ತೆ ನನ್ನನ್ನು ಸೇರಿಸಬೇಕೆಂದು ನಾನು ಹೋರಾಡಿದ್ದರೆ, ಅಥವಾ ಜಾತಿಯನ್ನು ಒಡೆದು ಇನ್ನೂ ಹೆಚ್ಚು ಗುಂಪುಗಳನ್ನು ಮಾಡಿದ್ದರೆ ಅಥವಾ ಜಾತಿಯ ಮುಖಂಡರನ್ನು ನಾನು ಎದುರಿಸಿ ರೇಗಿಸಿದ್ದರೆ ಇಂಗ್ಲೆಂಡಿನಿಂದ ಹಿಂದಿರುಗಿದ ಮೇಲೆ ನಾನು ಅಶಾಂತಿಯ ಬಿರುಗಾಳಿಯಲ್ಲಿ ಸಿಕ್ಕಿಕೊಳ್ಳುತ್ತಿದ್ದೆನು. ಮತ್ತು ಪ್ರಾಯಶಃ ಮಿಥ್ಯಾಚಾರಿ ಸಹ ಆಗುತ್ತಿದ್ದೆನು.

ನನ್ನ ಪತ್ನಿಯೊಂದಿಗೆ ನನ್ನ ಸಂಬಂಧ ಹೇಗಿರಬೇಕೆಂಬುದು ನನ್ನ ಇಷ್ಟವಾಗಿದ್ದಿತೋ, ಅದು ಇನ್ನೂ ಹಾಗೆ ಆಗಿರಲಿಲ್ಲ. ಇಂಗ್ಲೆಂಡಿಗೆ ಹೋಗಿ ಬಂದಿದ್ದರೂ ಸಹ ಆಕೆಯ ವಿಷಯದಲ್ಲಿ ನನ್ನ ಅಸೂಯಾ ಬುದ್ಧಿ ಹೋಗಿರಲಿಲ್ಲ. ಯಾವ ಸಣ್ಣ ವಿಷಯದಲ್ಲಿಯೂ ನನ್ನ ಸಂದೇಹ ಮತ್ತು ಗೊಣಗಾಟದ ಬುದ್ಧಿ ಮರೆಯಾಗಿರಲೇ ಇಲ್ಲ. ಇದರಿಂದ ನನ್ನ ಪ್ರಿಯವಾದ

ಮನೋಭಾವಗಳಾವುವೂ ಈಡೇರಲೇ ಇಲ್ಲ. "ನನ್ನ ಹೆಂಡತಿ, ಬರೆಯುವುದನ್ನೂ ಓದುವುದನ್ನೂ ಕಲಿಯಬೇಕು ; ನಾನು ಅವಳಿಗೆ ಪಾಠ ಹೇಳಿಕೊಡಬೇಕು" ಎಂದು ನಾನು ನಿಶ್ಚಯ ಮಾಡಿಕೊಂಡಿದ್ದೆನು. ಆದರೆ ನನ್ನ ವಿಷಯಾಸಕ್ತಿಯಿಂದ ಅದಾವುದೂ ಸಾಧ್ಯವಾಗಲಿಲ್ಲ. ನನ್ನ ಈ ದೋಷದ ಫಲವನ್ನು ನನ್ನ ಹೆಂಡತಿ, ಅನುಭವಿಸಬೇಕಾಯಿತು. ಇದು ಎಲ್ಲಿಯವರೆಗೆ ಹೋಯಿತೆಂದರೆ, ಒಂದು ಸಲ ನಾನು ಆಕೆಯನ್ನು ಅವಳ ತಂದೆಯ ಮನೆಗೆ ಕಳುಹಿಸಿ ಅಲ್ಲಿ ಆಕೆ ತುಂಬ ಕಷ್ಟ ಮತ್ತು ದುಃಖಪಟ್ಟಮೇಲೆಯೇ, ಹಿಂದಕ್ಕೆ ಬಂದು ನನ್ನೊಂದಿಗೆ ವಾಸಿಸಲು ಅವಕಾಶ ಕೊಟ್ಟೆನು. ಇದೆಲ್ಲ ನನ್ನ ಅವಿವೇಕ ಎಂಬುದು ಈಚೆಗೆ ನನಗೆ ಗೊತ್ತಾಗಿದೆ.

ಮಕ್ಕಳ ಶಿಕ್ಷಣದ ವಿಷಯದಲ್ಲಿಯೂ ಕೆಲವು ಸುಧಾರಣೆಗಳನ್ನು ಮಾಡಬೇಕೆಂದು ನಾನು ಯೋಚಿಸಿದ್ದೆನು. ನಮ್ಮಣ್ಣನಿಗೆ ಮಕ್ಕಳಿದ್ದರು. ಇಂಗ್ಲೆಂಡಿಗೆ ಹೋದಾಗ ನಾನು ಬಿಟ್ಟು ಹೋಗಿದ್ದ ನನ್ನ ಮಗನಿಗೆ ಈಗ ನಾಲ್ಕು ವರುಷ ವಯಸ್ಸಾಗಿದ್ದಿತು. ಅವರನ್ನು ನನ್ನ ಕಣ್ಣೆದುರಿಗೆ ಇಟ್ಟುಕೊಂಡು ತಿದ್ದಿ, ವ್ಯಾಯಾಮ ಮಾಡಿಸಿ, ದೃಢಕಾಯರನ್ನಾಗಿ ಮಾಡಬೇಕು ಎಂಬುದು ನನ್ನ ಇಷ್ಟವಾಗಿದ್ದಿತು. ನಮ್ಮಣ್ಣನೂ ಇದನ್ನು ಒಪ್ಪಿದನು. ಈ ಪ್ರಯತ್ನದಲ್ಲಿ ನಾನು ಸ್ವಲ್ಪ ಹೆಚ್ಚು ಕಡಿಮೆ ಜಯಶಾಲಿಯಾದೆನು. ಮಕ್ಕಳ ಜತೆಗೆ ಇರುವುದು ನನಗೆ ಪ್ರಿಯವಾಗಿದ್ದಿತು. ಅವರ ಸಹವಾಸ, ಅವರೊಡನೆ ಹಾಸ್ಯ, ಮಾತುಕತೆ ಇವು ಇಂದಿಗೂ ನನ್ನ ಸ್ವಭಾವವಾಗಿದೆ. ಅಂದಿನಿಂದ ಮಕ್ಕಳಿಗೆ ನಾನು ಒಳ್ಳೆಯ ಶಿಕ್ಷಕನಾಗಬಲ್ಲೆ ಎಂಬುದು ನನ್ನ ಭಾವನೆಯಾಗಿದೆ.

ಊಟ ತಿಂಡಿಯಲ್ಲಿ ಸುಧಾರಣೆ ಮಾಡುವುದು ಅವಶ್ಯಕವಾಗಿದ್ದಿತು. ಕಾಫಿ ಮತ್ತು ಟೀ ನಮ್ಮ ಮನೆಯಲ್ಲಿ ಆಗಲೇ ಪ್ರವೇಶ ಮಾಡಿದ್ದವು. ನಾನು ಇಂಗ್ಲೆಂಡಿನಿಂದ ಹಿಂದಿರುಗುವ ವೇಳೆಗೆ, ಸ್ವಲ್ಪ ಇಂಗ್ಲೀಷ್ ವಾತಾವರಣ ನಮ್ಮ ಮನೆಯಲ್ಲಿರುವುದು ಯೋಗ್ಯವೆಂದು ನಮ್ಮಣ್ಣ ಭಾವಿಸಿದ್ದನು. ಈ ಕಾರಣದಿಂದ, ವಿಶೇಷ ಸಂದರ್ಭಗಳಲ್ಲಿ ಮಾತ್ರ ಉಪಯೋಗಿಸುತ್ತಿದ್ದ ಚೀನಾ ಪಾತ್ರೆಗಳು ಸಾಧಾರಣವಾಗಿಯೇ ಬಳಕೆಗೆ ಬಂದವು. ನನ್ನ ಸುಧಾರಣೆಗಳು ಈ ಬದಲಾವಣೆಗಳನ್ನು ಪೂರ್ತಿಮಾಡಿದವು. ಜತೆ ಗೋಧಿಯ

ಗಂಜಿಯನ್ನು ನಾನು ಪ್ರಾರಂಭಿಸಿದೆನು. ಕಾಫೀ ಟೀಗಳಿಗೆ ಬದಲಾಗಿ ಕೋ ಕೋ ಪ್ರಾರಂಭಿಸಿದೆನು. ನಿಜವಾಗಿ ಕೋ ಕೋ, ಕಾಫೀ, ಟೀಗಳ ಜತೆ ಸೇರಿತು. ಬೂಟ್ಸುಗಳೂ ಮೋಜಾಗಳೂ ಆಗಲೇ ಮನೆಯುಲಿದ್ದವು. ನಾನು ಯೂರೋಪಿನವರ ಉಡುಪನ್ನು ಧರಿಸಿ ಮನೆಯ ಆಂಗ್ಲ ವಾತಾವರಣ ವನ್ನು ಪೂರ್ಣಗೊಳಿಸಿದೆನು.

ಹೀಗೆ ವೆಚ್ಚ ಹೆಚ್ಚುತ್ತಾ ಹೋಯಿತು. ದಿನದಿನವೂ ಹೊಸ ಹೊಸ ಪದಾರ್ಥಗಳು ಮನೆಗೆ ಬರತೊಡಗಿದವು. ನಮ್ಮ ಮನೆಯ ಬಾಗಿಲಿಗೆ ನಾವು ಬಿಳಿಯ ಆನೆಯನ್ನು ಕಟ್ಟಿಹಾಕಿಕೊಂಡುದಾಯಿತು. ಆದರೆ ಅದಕ್ಕೆ ಬೇಕಾದ ಹಣವನ್ನು ಎಲ್ಲಿಂದ ತರುವುದು ? ರಾಜಕೋಟೆಯಲ್ಲಿ ವಕೀಲಿ ವೃತ್ತಿಯನ್ನು ಪ್ರಾರಂಭಿಸುವುದೆಂದರೆ ಹಾಸ್ಯಾಸ್ಪದವಾಗುತ್ತಿದ್ದಿತು. ನನಗೆ ಅಲ್ಲಿನ ವಕೀಲ ರಿಗಿದ್ದಷ್ಟು ತಿಳುವಳಿಕೆಯೂ ಜ್ಞಾನವೂ ಇರಲಿಲ್ಲ. ಆದರೆ ಅವರಿಗೆ ಕೊಡು ತ್ತಿದ್ದುದರ ಹತ್ತರಷ್ಟು ಶುಲ್ಕವನ್ನು ನಾನು ನಿರೀಕ್ಷಿಸುತ್ತಿದ್ದೆನು. ನನ್ನನ್ನು ನಿಯಮಿಸಿಕೊಳ್ಳುವಷ್ಟು ಮೂರ್ಖರಾದ ಕಕ್ಷಿಗಾರರು ಯಾರೂ ಇರಲಿಲ್ಲ. ಒಂದು ವೇಳೆ ಅಂತಹ ದಡ್ಡ ಕಕ್ಷಿಗಾರರು ನನ್ನಲ್ಲಿ ಬಂದರೂ ನನ್ನ ಅಜ್ಞಾನದ ಜತೆಗೆ ಉದ್ಧಟತನವನ್ನು ಮೋಸವನ್ನೂ ಬೆರಸಿ, ಜಗತ್ತಿಗೆ ನನ್ನ ಋಣವನ್ನು ಇನ್ನೂ ಹೆಚ್ಚಿಸಿಕೊಳ್ಳುವುದೆ ?

ಸ್ನೇಹಿತರು, "ಬೊಂಬಾಯಿಗೆ ಹೋಗಿ ಕೆಲವು ಕಾಲ ಇರಿ, ಹೈಕೋರ್ಟಿನ ಅನುಭವವನ್ನು ಪಡೆಯಿರಿ. ಹಿಂದೂ ಕಾನೂನನ್ನು ಅಧ್ಯಯನ ಮಾಡಿ, ದೊರೆತಷ್ಟು ಮೊಕದ್ದಮೆಗಳನ್ನು ಪಡೆಯಲು ಪ್ರಯತ್ನಿಸಿ" ಎಂದು ಹೇಳಿದರು. ಅವರ ಸಲಹೆಯನ್ನು ಅಂಗೀಕರಿಸಿ ನಾನು ಬೊಂಬಾಯಿಗೆ ಹೋದೆನು.

ನಾನು ಬೊಂಬಾಯಿನಲ್ಲಿ ಒಂದು ಮನೆ ಮಾಡಿ ಒಬ್ಬ ಅಡಿಗೆಯವ ನನ್ನು ಗೊತ್ತು ಮಾಡಿಕೊಂಡೆನು. ನನ್ನ ಕೆಲಸದಲ್ಲಿ ನಾನು ಅಶಕ್ತನಾಗಿ ದ್ದಂತೆ ಅವನ ಕೆಲಸದಲ್ಲಿ ಅವನೂ ಅಶಕ್ತನಾಗಿದ್ದನು. ಆತ ಬ್ರಾಹ್ಮಣ ಆತನನ್ನು ನೌಕರನೆಂದು ಭಾವಿಸದೆ ಕುಟುಂಬಕ್ಕೆ ಸೇರಿದ ಒಬ್ಬನನ್ನಾಗಿ ನಾನು ಭಾವಿಸಿದೆನು. ಆತ ಮೈ ಮೇಲೆ ನೀರು ಸುರಿದುಕೊಳ್ಳುತ್ತಿದ್ದ. ಆದರೆ ಪ್ರೈತಿಕ್ಕೆ ಸ್ನಾನ ಮಾಡುತ್ತಿರಲಿಲ್ಲ. ಆತನ ವಸ್ತ್ರ ಕೊಳಕಾಗಿದ್ದಿತು; ಜನಿ

ವಾರವೂ ಅಷ್ಟೆ. ಶಾಸ್ತ್ರಗಳ ವಿಷಯ ಅವನಿಗೆ ಏನೇನೂ ತಿಳಿದಿರಲಿಲ್ಲ. ಆದರೆ ಅವನಿಗಿಂತ ಉತ್ತಮನಾದ ಅಡಿಗೆಯವನು ನನಗೆ ಎಲ್ಲಿಂದ ಸಿಕ್ಕಬೇಕು ?

ನಾನು ಅವನನ್ನು ಹೀಗೆ ಕೇಳುತ್ತಿದ್ದೆನು. "ರವಿಶಂಕರ್, ನಿನಗೆ ಅಡಿಗೆ ಮಾಡಲು ಬರದೆ ಇರಬಹುದು. ಆದರೆ ನಿನಗೆ ಸಂಧ್ಯಾವಂದನೆ ಚೆನ್ನಾಗಿ ಬರುತ್ತಿರಬೇಕಲ್ಲವೆ ?" ಆತನ ಉತ್ತರ ಹೀಗಿರುತ್ತಿತ್ತು. "ಸಂಧ್ಯಾವಂದನೆ! ಸ್ವಾಮಿ ನೇಗಿಲೇ ನಮ್ಮ ಸಂಧ್ಯಾವಂದನೆ. ಗುದ್ದಲಿಯೇ ನಮ್ಮ ಧರ್ಮಾನುಷ್ಠಾನ. ನಾವು ಅಂತಹ ಬ್ರಾಹ್ಮಣರು. ನಾನು ನಿಮ್ಮ ಕೃಪೆಯಿಂದಲೇ ಬದುಕಬೇಕಾಗಿದೆ. ಹಾಗಾಗದಿದ್ದಲ್ಲಿ ನನ್ನ ವ್ಯವಸಾಯದ ಕಸಬು ನನಗೆ ಇದ್ದೇ ಇದೆ."

ಆದುದರಿಂದ ನಾನು ರವಿಶಂಕರನ ಉಪಾಧ್ಯಾಯನಾಗಬೇಕಾಯಿತು. ನನಗೆ ಅದಕ್ಕೆ ಬೇಕಾದ ವಿರಾಮವೂ ಇದ್ದಿತು. ಅಡಿಗೆಯ ಅರ್ಧ ಭಾಗವನ್ನು ನಾನು ವಹಿಸಿಕೊಂಡು ಶಾಕಾಹಾರ ತಯಾರಿಕೆಯಲ್ಲಿ ಇಂಗ್ಲಿಷ್ ಅಡಿಗೆಯ ಪ್ರಯೋಗವನ್ನು ಪ್ರಾರಂಭಿಸಿದೆನು. ಒಂದು (ಸ್ಟೌವ್) ಎಣ್ಣೆ ಒಲೆಯನ್ನು ಕೊಂಡುಕೊಂಡು ನಾನೇ ಅಡಿಗೆ ಮನೆಯ ಪಾರುಪತ್ಯವನ್ನು ವಹಿಸಿಕೊಂಡೆನು. ರವಿಶಂಕರನ ಸಹಪಂಕ್ತಿಯಲ್ಲಿ ಕುಳಿತು ಊಟ ಮಾಡಲು ನನಗೆ ಆಕ್ಷೇಪವಿರಲಿಲ್ಲ. ರವಿಶಂಕರನಿಗೂ ಇದ್ದಂತೆ ಕಾಣಲಿಲ್ಲ. ಆದುದರಿಂದ ನಾವಿಬ್ಬರೂ ಸುಖವಾಗಿ ಜೀವಿಸತೊಡಗಿದೆವು. ಒಂದು ಅಡಚಣೆ ಮಾತ್ರ ಇದ್ದಿತು. ಅವನು ಕೊಳಕುತನವನ್ನು ಬಿಡುವುದಿಲ್ಲವೆಂದೂ, ಅಡಿಗೆಯನ್ನು ಶುಚಿಯಾಗಿ ಇಡುವುದಿಲ್ಲವೆಂದೂ ಪ್ರತಿಜ್ಞೆ ಮಾಡಿದ್ದಂತೆ ಕಂಡುಬಂದಿತು.

ಆದರೆ ಬೊಂಬಾಯಿಯಲ್ಲಿ, ನನ್ನ ಏರುತ್ತಿದ್ದ ವೆಚ್ಚಕ್ಕೆ ಅನುಗುಣವಾದ ಉತ್ಪನ್ನವಿಲ್ಲದುದರಿಂದ ನಾಲ್ಕು, ಐದು ತಿಂಗಳುಗಳಿಗಿಂತ ಹೆಚ್ಚಾಗಿ ಅಲ್ಲಿ ನಿಲ್ಲಲು ನನ್ನಿಂದ ಸಾಧ್ಯವಾಗಲಿಲ್ಲ.

ನನ್ನ ಬಾಳನ್ನು ನಾನು ಆರಂಭ ಮಾಡಿದುದು ಹೀಗೆ. ಬ್ಯಾರಿಸ್ಟರ್ ಉದ್ಯೋಗ ನನಗೆ ಕಠಿಣವಾಗಿ ಕಂಡಿತು; ಆಡಂಬರ ಹೆಚ್ಚು, ತಿಳಿವು ಕಡಿಮೆ. ನನ್ನ ಜವಾಬ್ದಾರಿ ನಾನು ಹೊರಲಾರದಷ್ಟು ಭಾರವಾಗಿ ತೋರಿತು.

೩

ಮೊದಲನೆಯ ಮೊಕದ್ದಮೆ

ಬೊಂಬಾಯಿಯಲ್ಲಿರುತ್ತಾ, ನಾನು ಒಂದು ಕಡೆ ಹಿಂದೂಸ್ಥಾನದ ಕಾಯಿದೆ ಕುರಿತು ನನ್ನ ಅಭ್ಯಾಸವನ್ನೂ ಮತ್ತೊಂದು ಕಡೆ ಆಹಾರದ ವಿಷಯದಲ್ಲಿ ನನ್ನ ಪ್ರಯೋಗಗಳನ್ನೂ ಪ್ರಾರಂಭಿಸಿದೆನು. ಈ ಪ್ರಯೋಗಗಳಲ್ಲಿ ನನ್ನೊಂದಿಗೆ ನನ್ನ ಮಿತ್ರನಾದ ವೀರಚಂದ್ ಗಾಂಧೀ ಸಹ ಸೇರಿಕೊಂಡನು. ನಮ್ಮಣ್ಣ ನನಗೆ ಮೊಕದ್ದಮೆಗಳನ್ನು ಸಂಪಾದಿಸಿಕೊಡಲು ತಮ್ಮ ಕೈಯಲ್ಲಾದ ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿದ್ದರು.

ಹಿಂದೂಸ್ಥಾನದ ಕಾನೂನುಗಳನ್ನು ವ್ಯಾಸಂಗಮಾಡುವುದು ಬಹಳ ಬೇಸರದ ಕೆಲಸವಾಗಿದ್ದಿತು. ಸಿವಿಲ್ ಪ್ರೊಸೀಜರ್ ಕೋಡ್, ಅಂತೂ ನನ್ನ ತಲೆಗೆ ಹತ್ತಲೇ ಇಲ್ಲ. ಆದರೆ ಎವಿಡೆನ್ಸ್ ಆಕ್ಟ್ (ಸಾಕ್ಷ್ಯಕ್ಕೆ ಸಂಬಂಧಿಸಿದ ಕಾನೂನು) ಹಾಗೆ ಇರಲಿಲ್ಲ. ವೀರಚಂದ್ ಗಾಂಧೀ ಸಾಲಿಸಿಟರ್ ಪರೀಕ್ಷೆಗೆ ಓದುತ್ತಿದ್ದನು. ಆತ ನನಗೆ, ಬ್ಯಾರಿಸ್ಟರ್‌ಗಳು ವಕೀಲರು ಇವರನ್ನು ಕುರಿತು ಅನೇಕ ಬಗೆಯ ಕಥೆಗಳನ್ನು ಹೇಳುತ್ತಿದ್ದನು. ಆತ ಹೀಗೆ ಹೇಳುತ್ತಿದ್ದನು : "ಸರ್ ಫಿರೋಜ್‌ರವರ ಶಕ್ತಿ ಅಡಗಿರುವುದು ಅವರ ಅಗಾಧ ಕಾನೂನಿನ ಜ್ಞಾನದಲ್ಲಿ, ಎವಿಡೆನ್ಸ್ ಆಕ್ಟ್, ಅವರಿಗೆ ಹೃದ್ಗತವಾಗಿದೆ. ಮೂವತ್ತೆರಡನೆಯ ವಿಧಿಗೆ ಸಂಬಂಧಪಟ್ಟ ಪ್ರತಿಯೊಂದು ಮೊಕದ್ದಮೆಯೂ ಅವರಿಗೆ ಗೊತ್ತು. ಬದ್ರುದ್ದಿನ್ ತ್ಯೆಯಬ್ಜೀಯವರ ಅದ್ಭುತವಾದ ಶಕ್ತಿ ಜಡ್ಜಿಗಳಿಂದ ಸಹ ಅವರಿಗೆ ಗೌರವವನ್ನು ಸಂಪಾದಿಸಿಕೊಡುತ್ತದೆ."

ಇಂತಹ ಅತಿರಥ ಮಹಾರಥರ ಕಥೆಗಳನ್ನು ಕೇಳಿದಾಗಲೆಲ್ಲ ನನ್ನ ಧೈರ್ಯ ಉಡುಗಿ ಹೋಗುತ್ತಿದ್ದಿತು.

ವೀರಚಂದ್ ಗಾಂಧೀ ಹೀಗೂ ಹೇಳುತ್ತಿದ್ದನು : "ಐದು ವರುಷ ಏಳು ವರುಷ ಕೆಲಸವೇ ಇಲ್ಲದೆ ಕೋರ್ಟುಗಳಲ್ಲಿ ಕುಳಿತು ಕಾಲ ಕಳೆಯುವುದು ಬ್ಯಾರಿಸ್ಟರಿಗೆ ಏನೂ ಅಪರೂಪವಲ್ಲ. ಆದುದರಿಂದಲೇ ನಾನು ಸಾಲಿಸಿಟರ್ ಪದವೀಧರನಾಗಲು ನಿರ್ಧರಿಸಿರುವುದು. ಮೂರು ವರುಷ

ಕಾಲದೊಳಗೆ ನಿನ್ನ ಜೀವನದ ವೆಚ್ಚವನ್ನು ಹುಟ್ಟಿಸಿಕೊಳ್ಳಲು ನಿನಗೆ ಸಾಧ್ಯವಾಗುವುದಾದರೆ ನೀನು ಅದೃಷ್ಟಶಾಲಿಯೆಂದು ಭಾವಿಸಬೇಕು."

ನನ್ನ ವೆಚ್ಚ, ತಿಂಗಳು ತಿಂಗಳಿಗೂ ಏರುತ್ತಿದ್ದಿತು. ಒಳಗಡೆ ಬ್ಯಾರಿಸ್ಟರ್ ಕಸಬಿಗೆ ಸಿದ್ಧವಾಗುತ್ತಾ, ಹೊರಗಡೆ ಬ್ಯಾರಿಸ್ಟರ್ ಎಂಬ ವಿಳಾಸದ ಹಲಗೆಯನ್ನು ತಗಲುಹಾಕಿಕೊಳ್ಳಲು ನನ್ನ ಮನಸ್ಸು ಒಪ್ಪಲಿಲ್ಲ. ಆದುದರಿಂದ ನಾನು ನನ್ನ ವ್ಯಾಸಂಗಕ್ಕೆ ಪೂರ್ಣ ಗಮನವನ್ನು ಕೊಡಲು ಸಾಧ್ಯವಾಗಲಿಲ್ಲ. ನನಗೆ ಎವಿಡೆನ್ಸ್ ಆಕ್ಟ್ ಇಷ್ಟವಾಯಿತು. ಮೇಯಿನ್ ಅವರ ಹಿಂದೂ ಲಾ ಎಂಬ ಗ್ರಂಥವನ್ನು ನಾನು ತುಂಬ ಉತ್ಸಾಹದಿಂದ ಓದಿದೆನು. ಆದರೆ ಒಂದು ಮೊಕದ್ದಮೆಯನ್ನೂ ನಡೆಸಲು ನನಗೆ ಧೈರ್ಯವುಂಟಾಗಲಿಲ್ಲ. ಅತ್ತೆಯ ಮನೆಗೆ ಹೊಸದಾಗಿ ಬಂದ ಸೊಸೆಯಂತೆ, ನನ್ನ ನಿಸ್ಸಹಾಯಕತೆ ವರ್ಣನಾತೀತವಾಗಿದ್ದಿತು.

ಆ ಸಮಯಕ್ಕೆ ನಾನು ಮಾಮಿಬಾಯಿ ಎಂಬುವಳ ಒಂದು ಮೊಕದ್ದಮೆಯನ್ನು ಹಿಡಿದೆನು. ಅದೊಂದು ಸ್ಮಾಲ್‌ಕಾಸ್ (Small cause) ದಾವ. "ನೀನು ದಳ್ಳಾಳಿಗೆ ಹಣ ಕೊಡಬೇಕಾಗುತ್ತದೆ" ಎಂದು ಹೇಳಿದರು. ನಾನು ಕೊಡಲು ಖಂಡಿತವಾಗಿ ತಿರಸ್ಕರಿಸಿದೆನು.

"ಆದರೆ ತಿಂಗಳಿಗೆ ಮೂರು ಸಾವಿರ, ನಾಲ್ಕು ಸಾವಿರ ಸಂಪಾದಿಸುತ್ತಿರುವ ದೊಡ್ಡ ಕ್ರಿಮಿನಲ್ ಲಾಯರುಗಳು ಸಹ ದಳ್ಳಾಳಿ ಹಣ ಕೊಡುತ್ತಾರೆ" ಎಂದರು.

"ನಾನು ಅವರನ್ನು ಅನುಕರಿಸಬೇಕಾದುದಿಲ್ಲ. ತಿಂಗಳಿಗೆ ೩೦೦ ರೂಪಾಯಿ ಸಂಪಾದನೆಯಾದರೆ ನನಗೆ ಅದು ಸಾಕು. ನಮ್ಮ ತಂದೆ ಅದಕ್ಕಿಂತ ಹೆಚ್ಚು ಸಂಪಾದಿಸಲಿಲ್ಲ" ಎಂದು ನಾನು ಉತ್ತರ ಕೊಟ್ಟೆನು.

"ಆದರೆ ಆ ಕಾಲವೆಲ್ಲ ಹೋಯಿತು. ಬೊಂಬಾಯಿಯಲ್ಲಿ ಖರ್ಚು ಮಿತಿ ಮೀರಿ ಏರುತ್ತಿದೆ. ಸ್ವಲ್ಪ ವ್ಯವಹಾರಜ್ಞರಾಗಿ ನಡೆದುಕೊಳ್ಳಬೇಕು."

ನನ್ನ ಮನಸ್ಸು ವಜ್ರದಂತೆ ದೃಢವಾಗಿದ್ದಿತು. ನಾನು ದಳ್ಳಾಳಿ ಹಣವನ್ನು ಕೊಡಲಿಲ್ಲ. ಆದರೂ ಮಾಮಿಬಾಯಿ ಮೊಕದ್ದಮೆ ನನಗೇ ಬಂದಿತು. ಅದೊಂದು ಸುಲಭವಾದ ಮೊಕದ್ದಮೆ. ನಾನು ಮೂವತ್ತು

ರೂಪಾಯಿ ಶುಲ್ಕವನ್ನು ತೆಗೆದುಕೊಂಡೆನು. ಆ ಮೊಕದ್ದಮೆ ಒಂದೇ ದಿನದಲ್ಲಿ ಮುಗಿದುಹೋಗುವ ಸಂಭವವಿದ್ದಿತು.

ಸ್ಮಾಲ್‌ಕಾಸ್ ಕೋರ್ಟಿಗೆ ಅದೇ ನನ್ನ ಮೊದಲ ಪ್ರವೇಶ. ನಾನು ಪ್ರತಿವಾದಿಯ ಪಕ್ಷದ ವಕೀಲನಾಗಿದ್ದೆನು. ವಾದಿಯ ಪಕ್ಷದ ಸಾಕ್ಷಿಗಳನ್ನು ನಾನು ಪಾಟಿ ಸವಾಲು ಮಾಡಬೇಕಾಗಿತ್ತು. ನಾನು ಎದ್ದು ನಿಂತೆನು. ಆದರೆ ನನ್ನ ಧೈರ್ಯ ಪೂರ್ತಿ ಮಾಯವಾಯಿತು. ನನ್ನ ತಲೆ ತಿರುಗುತ್ತಿತ್ತು. ಕೋರ್ಟು ಸಹ ಹಾಗೆಯೇ ತಿರುಗುತ್ತಿರುವಂತೆ ನನಗೆ ಭಾಸವಾಯಿತು. "ಪಾಟಿ ಸವಾಲ್" ಮಾಡಲು ನನಗೆ ಪ್ರಶ್ನೆಯೇ ಹೊಳೆಯಲಿಲ್ಲ. ನ್ಯಾಯಾಧಿಪತಿ, ನಕ್ಕಿರಬೇಕು. ವಕೀಲರಿಗೆ ನನ್ನ ಫಜೀತಿ, ವಿನೋದ ಹುಟ್ಟಿಸಿರಬೇಕು. ಆದರೆ ಇದಾವುದನ್ನೂ ನಾನು ನೋಡಲಾರದವನಾಗಿದ್ದೆನು. ನಾನು ದಳ್ಳಾಳಿಗೆ "ಮೊಕದ್ದಮೆಯನ್ನು ನಡೆಸಲು ನನ್ನಿಂದ ಸಾಧ್ಯವಿಲ್ಲ. ಶ್ರೀ ಪಟೇಲರನ್ನು ಗೊತ್ತುಮಾಡಿಕೊಳ್ಳಿ, ನಾನು ತೆಗೆದುಕೊಂಡಿರುವ ಶುಲ್ಕವನ್ನು ಹಿಂದಕ್ಕೆ ಕೊಡುತ್ತೇನೆ" ಎಂದು ಹೇಳಿ ಕುಳಿತುಬಿಟ್ಟೆನು. ಪಟೇಲರನ್ನು ಐವತ್ತೊಂದು ರೂಪಾಯಿಗಳಿಗೆ ಗೊತ್ತುಮಾಡಿಕೊಂಡರು. ಅವರಿಗೆ ಮೊಕದ್ದಮೆ ಮಕ್ಕಳ ಆಟದಂತಿತ್ತು.

ನನ್ನ ಕಕ್ಷಿಗಾರನಿಗೆ ಜಯವಾಯಿತೋ ಇಲ್ಲವೋ ಅದನ್ನು ತಿಳಿದುಕೊಳ್ಳದೇ ನಾನು ಕೋರ್ಟಿನಿಂದ ಧಾವಿಸಿದೆನು. ನನಗೆ ನಾಚಿಕೆಯಾಗಿದ್ದಿತು. ಮೊಕದ್ದಮೆಗಳನ್ನು ನಡೆಸುವ ಧೈರ್ಯ ಬರುವವರೆಗೆ ಇನ್ನು ಮೊಕದ್ದಮೆ ಹಿಡಿಯಬಾರದೆಂದು ನಿರ್ಣಯಿಸಿದೆನು. ವಾಸ್ತವವಾಗಿ ನಾನು ದಕ್ಷಿಣ ಆಫ್ರಿಕಾಕ್ಕೆ ಹೋಗುವವರೆಗೆ ಮತ್ತೆ ಕೋರ್ಟಿಗೆ ಹೋಗಲೇ ಇಲ್ಲ. ಈ ನಿರ್ಣಯದಲ್ಲಿ ನನ್ನ ಸದ್ಗುಣವೇನೂ ಇರಲಿಲ್ಲ. ಬೇರೆ ದಾರಿಯಿಲ್ಲದುದರಿಂದ ನಾನು ಈ ತೀರ್ಮಾನಕ್ಕೆ ಬಂದೆನು. ಕಳೆದುಕೊಳ್ಳುವುದಕ್ಕಾಗಿಯೇ ನನ್ನಲ್ಲಿಗೆ ಮೊಕದ್ದಮೆಗಳನ್ನು ತರುವಷ್ಟು ಮೂರ್ಖರು ಯಾರೂ ಇರಲಿಲ್ಲ.

ಆದರೆ ಬೊಂಬಾಯಿನಲ್ಲಿ ನನಗೆ ಮತ್ತೊಂದು ಮೊಕದ್ದಮೆ ಕಾದಿದ್ದಿತು. ಅದು ಬರಿಯ ಒಂದು ಅರ್ಜಿಯನ್ನು ಬರೆಯುವುದು. ಪೋರ್ ಬಂದರ್‌ನಲ್ಲಿ ಒಬ್ಬ ಬಡ ಮುಸಲ್ಮಾನನ ಜಮೀನನ್ನು ಮುಟ್ಟುಗೋಲು ಹಾಕಿಕೊಂಡಿದ್ದರು. ಅವನು ನಮ್ಮ ತಂದೆಯ ಹೆಸರನ್ನು ಕೇಳಿ ನಾನೂ

ನಮ್ಮ ತಂದೆಯಂತೆಯೇ ಯೋಗ್ಯನಾಗಿರಬೇಕೆಂದು ಭಾವಿಸಿ ನನ್ನ ಬಳಿ ಬಂದಿದ್ದನು. ಆತನ ಪಕ್ಷದ ಬಲವಾಗಿದ್ದಂತೆ ನನಗೆ ತೋರಿತು. ಆದರೆ ನಾನು ಅರ್ಜಿಯನ್ನು ಬರೆಯಲು ಒಪ್ಪಿದೆನು. ಅರ್ಜಿಯನ್ನು ಅಚ್ಚು ಮಾಡುವ ವೆಚ್ಚವನ್ನು ಅವನು ವಹಿಸಬೇಕಾಗಿದ್ದಿತು. ನಾನು ಅರ್ಜಿಯನ್ನು ಬರೆದು ಮಿತ್ರರಿಗೆ ಓದಿ ಹೇಳಿದೆನು. ಅವರು ಅದನ್ನು ಒಪ್ಪಿದರು. ಅರ್ಜಿಯನ್ನು ಬರೆಯಲು ನನಗೆ ಯೋಗ್ಯತೆಯಿದೆ ಎಂದು ನನಗೆ ತಕ್ಕ ಮಟ್ಟಿಗೆ ಧೈರ್ಯವುಂಟಾಯಿತು. ನಿಜವಾಗಿಯೂ ನನಗೆ ಆ ಯೋಗ್ಯತೆ ಇದ್ದಿತು.

ಶುಲ್ಕವನ್ನು ತೆಗೆದುಕೊಳ್ಳದೆಯೇ, ನಾನು ಅರ್ಜಿಯನ್ನು ಬರೆಯುವವನಾಗಿದ್ದರೆ, ನನ್ನ ವೃತ್ತಿ ಚೆನ್ನಾಗಿಯೇ ನಡೆಯುವುದಾಗಿದ್ದಿತು. ಆದರೆ ಹೊಟ್ಟೆಯಪಾಡಿಗೆ ದಾರಿ ಬೇಕಲ್ಲ ? ಉಪಾಧ್ಯಾಯರ ವೃತ್ತಿಯನ್ನು ಅಂಗೀಕರಿಸೋಣ ಎಂದು ನಾನು ಯೋಚಿಸಿದೆನು. ನನ್ನ ಇಂಗ್ಲಿಷ್ ಭಾಷಾ ಜ್ಞಾನ ಉತ್ತಮವಾಗಿದ್ದಿತು. ಯಾವುದಾದರೂ ಶಾಲೆಯಲ್ಲಿ ಮೆಟ್ರಿಕುಲೇಷನ್ ವಿದ್ಯಾರ್ಥಿಗಳಿಗೆ ಇಂಗ್ಲೀಷನ್ನು ಕಲಿಸುವುದು ನನಗೆ ಪ್ರಿಯವಾಗಿದ್ದಿತು. ಹೀಗೆ ನನ್ನ ಖರ್ಚಿನ ಸ್ವಲ್ಪ ಭಾಗವನ್ನಾದರೂ ನಾನು ಸಂಪಾದಿಸಿಕೊಳ್ಳಲು ಸಹಾಯವಾಗುತ್ತಿದ್ದಿತು. ಒಂದು ಜಾಹಿರಾತು ನನ್ನ ಕಣ್ಣಿಗೆ ಬಿದ್ದಿತು. "ನಿತ್ಯ ಒಂದು ಗಂಟೆ ಪಾಠ ಹೇಳುವ ಒಬ್ಬ ಇಂಗ್ಲಿಷ್ ಉಪಾಧ್ಯಾಯನು ಬೇಕು. ಸಂಬಳ ತಿಂಗಳಿಗೆ ಎಪ್ಪತ್ತೈದು ರೂಪಾಯಿ." ಅದೊಂದು ಪ್ರಸಿದ್ಧವಾದ ಪಾಠಶಾಲೆಯ ಜಾಹಿರಾತು. ನಾನು ಆ ಕೆಲಸಕ್ಕೆ ಅರ್ಜಿ ಹಾಕಿದೆನು. ಎದುರಿಗೆ ಹೋಗಿ ಸಂಧಿಸಬೇಕೆಂದು ಕರೆ ಬಂದಿತು. ನಾನು ಉತ್ಸಾಹದಿಂದ ಹೋದೆನು. ಆದರೆ ನಾನು ಪದವೀಧರನಲ್ಲ ಎಂಬುದು ಗೊತ್ತಾದ ಕೂಡಲೇ, ಪ್ರಿನ್ಸಿಪಾಲರು ವಿಷಾದದಿಂದ ನನ್ನ ಅರ್ಜಿಯನ್ನು ತಿರಸ್ಕರಿಸಿದರು.

"ಆದರೆ ನಾನು ಲಂಡನ್ ಮೆಟ್ರಿಕುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದೇನೆ. ಲ್ಯಾಟಿನ್ ನನ್ನ ದ್ವಿತೀಯ ಭಾಷೆ" ಎಂದೆನು.

"ಹೌದು, ಆದರೆ ನಮಗೆ ಬೇಕಾಗಿರುವುದು ಪದವೀಧರ" ಎಂದು ಉತ್ತರ ಬಂದಿತು.

ಬೇರೆ ದಾರಿ ಇರಲಿಲ್ಲ. ದುಃಖದಿಂದ ಕೈ, ಕೈ ಹಿಸುಕಿಕೊಂಡೆನು. ನಮ್ಮಣ್ಣನಿಗೂ ಸಹ ತುಂಬಾ ಯೋಚನೆಯುಂಟಾಯಿತು. ಇನ್ನು ಹೆಚ್ಚು ಕಾಲವನ್ನು ಬೊಂಬಾಯಿಯಲ್ಲಿ ಕಳೆಯುವುದು ಪ್ರಯೋಜನವಿಲ್ಲವೆಂಬ ತೀರ್ಮಾನಕ್ಕೆ ನಾವಿಬ್ಬರೂ ಬಂದೆವು. "ನಾನೂ ರಾಜಕೋಟೆಯಲ್ಲಿಯೇ ನೆಲೆಸುವುದು ಅಲ್ಲಿಯೇ ಸಣ್ಣ ವಕೀಲನಾಗಿರುವ ನಮ್ಮ ಅಣ್ಣ ಅರ್ಜಿ ಬರೆಯುವುದು ಮುಂತಾದ ಕೆಲವು ಕೆಲಸಗಳನ್ನು ನನಗೆ ವಹಿಸಬಹುದು" ಎಂದು. ರಾಜಕೋಟೆಯಲ್ಲಿ ಆಗಲೇ ಒಂದು ಸಂಸಾರ ಇದ್ದೇ ಇದ್ದಿತು. ಬೊಂಬಾಯಿಯ ಮನೆಯನ್ನು ಮುಚ್ಚುವುದರಿಂದ ತಕ್ಕಮಟ್ಟಿಗೆ ಹಣ, ಉಳಿತಾಯವಾಗುವುದಿದ್ದಿತು. ಆ ಸೂಚನೆ ನನಗೆ ಒಪ್ಪಿಗೆಯಾಯಿತು. ಹೀಗೆ ಆರು ತಿಂಗಳು ಬೊಂಬಾಯಿಯಲ್ಲಿ ವಾಸಮಾಡಿದನಂತರ ಅಲ್ಲಿದ್ದ ನನ್ನ ಸಣ್ಣ ಮನೆಯನು ಬಿಟ್ಟುದಾಯಿತು.

ನಾನು ಬೊಂಬಾಯಿಯಲ್ಲಿರುವವರೆಗೆ ನಿತ್ಯವೂ ಹೈಕೋರ್ಟಿಗೆ ಹೋಗುತ್ತಿದ್ದೆನು. ಆದರೆ ಅಲ್ಲಿ ನಾನು ಏನನ್ನು ಕಲಿತೆ ಎಂದು ಹೇಳಲಾರೆನು. ಹೆಚ್ಚಾಗಿ ಕಲಿಯಲು ಆವಶ್ಯಕವಾದ ಕಾನೂನಿನ ವೈಜ್ಞಾನಿಕ ತಿಳಿವು ನನಗೆ ಇರಲಿಲ್ಲ. ಅನೇಕ ವೇಳೆ ನಡೆಯುತ್ತಿದ್ದ ಮೊಕದ್ದಮೆಗಳನ್ನು ಅನುಸರಿಸಲು ಸಾಧ್ಯವಾಗದೆ ನಾನು ನಿದ್ರೆ ಹೋಗಿಬಿಡುತ್ತಿದ್ದೆನು. ಇದರಲ್ಲಿ ನನ್ನ ಜತೆಗಾರರಾಗಿದ್ದವರು ಇತರರೂ ಇದ್ದರು. ಅದರಿಂದ ನನ್ನ ನಾಚಿಕೆ, ಕಡಿಮೆ ಆಗುತ್ತಿದ್ದಿತು. ಕೆಲವು ಕಾಲ ಕಳೆದಮೇಲೆ, ಹೈಕೋರ್ಟಿನಲ್ಲಿ ತೂಕಡಿಸುವುದೂ ಒಂದು ಸಭ್ಯ ಪದ್ಧತಿ ಎಂದು ನನಗೆ ತಿಳಿದುದರಿಂದ, ನನ್ನ ಲಜ್ಜಾಶೀಲತೆ ಸಹ ಮರೆಯಾಯಿತು.

ಬೊಂಬಾಯಿಯಲ್ಲಿ ಮೊಕದ್ದಮೆಗಳೇ ಇಲ್ಲದೇ ಇದ್ದ ನನ್ನಂತಹ ಬ್ಯಾರಿಸ್ಟರುಗಳು, ಈ ತಲೆಮಾರಿನಲ್ಲಿಯೂ ಇರುವುದಾದರೆ, ಅವರಿಗೆ ಜೀವನ ನಡೆಸುವ ಒಂದು ಸಣ್ಣ ನಿಯಮವನ್ನು ಹೇಳಬಯಸುತ್ತೇನೆ. ನಾನು ಗಿರಿಗಾಂನಲ್ಲಿ ವಾಸಿಸುತ್ತಿದ್ದರೂ ನಾನು ಯಾವಾಗಲೂ ವಾಹನದಲ್ಲಿಯಾಗಲೀ ಟ್ರಾಮಿನಲ್ಲಿಯಾಗಲೀ ಪ್ರಯಾಣ ಮಾಡುತ್ತಿರಲಿಲ್ಲ. ಹೈಕೋರ್ಟಿಗೆ ನಡೆದುಕೊಂಡು ಹೋಗುವುದನ್ನೇ ನಾನು ನಿಯಮವಾಗಿ ಮಾಡಿಕೊಂಡಿದ್ದೆನು. ಅದಕ್ಕೆ ನಲವತ್ತೈದು ನಿಮಿಷಗಳು ಹಿಡಿಯುತ್ತಿದ್ದವು ಮತ್ತು

ನಾನು ಮನೆಗೆ ತಪ್ಪದೆ ನಡೆದುಕೊಂಡೇ ಹಿಂದಿರುಗುತ್ತಿದ್ದೆನು. ಮಧ್ಯಾಹ್ನದ ಪ್ರಖರ ಬಿಸಿಲು ಸಹ ನನಗೆ ಅಭ್ಯಾಸವಾಗಿದ್ದಿತು. ಹೀಗೆ ಕೋರ್ಟಿಗೆ ನಡೆದುಕೊಂಡೇ ಬಂದು ಹೋಗುತ್ತಿದ್ದುದರಿಂದ ನನಗೆ ತಕ್ಕಮಟ್ಟಿಗೆ ಹಣ ಉಳಿತಾಯವಾಗುತ್ತಿದ್ದಿತು. ನನ್ನ ಅನೇಕ ಮಿತ್ರರು ಬೊಂಬಾಯಿಯಲ್ಲಿ ಕಾಯಿಲೆ ಬೀಳುತ್ತಿದ್ದರೂ, ನಾನು ಒಂದು ಸಲವೂ ಕಾಯಿಲೆ ಬಿದ್ದ ನೆನಪು ನನಗೆ ಇಲ್ಲ. ನಾನು ಹಣವನ್ನು ಸಂಪಾದಿಸಲು ಪ್ರಾರಂಭಿಸಿದ ನಂತರವೂ ಸಹ ಆಫೀಸಿಗೆ ನಡೆದುಕೊಂಡೇ ಹೋಗಿ ಬರುವ ಅಭ್ಯಾಸವನ್ನು ಮುಂದುವರಿಸಿದೆನು. ಆ ಅಭ್ಯಾಸದ ಲಾಭ ನನಗೆ ಇಂದಿಗೂ ಆಗುತ್ತಿದೆ.

೪

ಮೊದಲನೆಯ ಆಘಾತ

ನಾನು ನಿರಾಶನಾಗಿ ಬೊಂಬಾಯಿಯಿಂದ ರಾಜಕೋಟೆಗೆ ಹೋದೆನು. ರಾಜಕೋಟೆಯಲ್ಲಿ ನನ್ನ ಸ್ವಂತ ಕಛೇರಿಯನ್ನು ಸ್ಥಾಪಿಸಿದೆನು. ಇಲ್ಲಿ ನಾನು ತಕ್ಕಮಟ್ಟಿಗೆ ಚೆನ್ನಾಗಿಯೇ ಅಭಿವೃದ್ಧಿ ಹೊಂದತೊಡಗಿದೆನು. ಅರ್ಜಿಗಳನ್ನೂ ನಿವೇದನ ಪತ್ರಿಕೆಗಳನ್ನೂ ಬರೆಯುವುದರಲ್ಲಿ ನನಗೆ ತಿಂಗಳಿಗೆ ಸರಾಸರಿ ಮುನ್ನೂರು ರೂಪಾಯಿಗಳ ವರಮಾನ ಬರುತ್ತಿದ್ದಿತು. ಈ ಕಾರ್ಯ ನನಗೆ ದೊರೆತುದಕ್ಕೆ ಕಾರಣ ನನ್ನ ಶಕ್ತಿ ಸಾಮರ್ಥ್ಯಗಳಲ್ಲ; ಇತರರ ಪ್ರಭಾವ. ನಮ್ಮಣ್ಣನಿಗೆ ವಕೀಲಿ ವೃತ್ತಿಯಲ್ಲಿ ಒಬ್ಬ ಪಾಲುದಾರ ಇದ್ದನು. ಅವನ ವೃತ್ತಿ ಚೆನ್ನಾಗಿ ನಿಯತವಾಗಿ ನಡೆಯುತ್ತಿದ್ದಿತು. ಅವರ ದೃಷ್ಟಿಯಲ್ಲಿ ಮುಖ್ಯವಾದುದೆಂದು ತೋರಿದ ಅಥವಾ ನಿಜವಾಗಿಯೇ ಮುಖ್ಯವಾಗಿದ್ದ ಅರ್ಜಿ ಮುಂತಾದುವನ್ನು ಬರೆಯಲು ಅವರು ಅವುಗಳನ್ನು ದೊಡ್ಡ ಬ್ಯಾರಿಸ್ಟರುಗಳಲ್ಲಿಗೆ ರವಾನಿಸುತ್ತಿದ್ದರು. ಅವರ ಬಳಿಗೆ ಬರುತ್ತಿದ್ದ ಬಡ ಕಕ್ಷಿಗಾರರ ಅರ್ಜಿಗಳನ್ನು ಬರೆಯುವುದು, ನನ್ನ ಪಾಲಿಗೆ ಬಂದಿತು.

ಬೊಂಬಾಯಿಯಲ್ಲಿ ನಾನು, ದಳ್ಳಾಳಿಯನ್ನು ಕೊಡುವುದಿಲ್ಲವೆಂಬ ತತ್ವವನ್ನು ನಿಷ್ಠೆಯಿಂದ ಪಾಲಿಸಿದ್ದೆನಾದರೂ ಇಲ್ಲಿ ಅವನ್ನು ನಡೆಸಲು

ಸಾಧ್ಯವಾಗಲಿಲ್ಲವೆಂದು ಒಪ್ಪಿಕೊಳ್ಳಬೇಕು. ಇಲ್ಲಿಯ ಸ್ಥಿತಿಗೂ ಅಲ್ಲಿಯ ಸ್ಥಿತಿಗೂ ವ್ಯತ್ಯಾಸವಿದೆ. ಬೊಂಬಾಯಿಯಲ್ಲಿ ಹಣವನ್ನು ಕೊಡುವುದು ದಳ್ಳಾಳಿಗಳಿಗೆ. ಇಲ್ಲಿ ಕೊಡುವುದು ನನಗೆ ಮೊಕದ್ದಮೆಗಳನ್ನು ಒದಗಿಸಿ ಕೊಡುತ್ತಿದ್ದ ವಕೀಲರಿಗೆ; ಬೊಂಬಾಯಿಯಲ್ಲಿ ಹೇಗೋ ಹಾಗೆ ಇಲ್ಲಿಯೂ ಸಹ ಎಲ್ಲ ಬ್ಯಾರಿಸ್ಟರುಗಳೂ ತಮ್ಮ ಶುಲ್ಕದ ಒಂದು ಭಾಗವನ್ನು ವಕೀಲರಿಗೆ ತಪ್ಪದೆ ಕೊಡಲೇ ಬೇಕು ಎಂದು ನನಗೆ ಹೇಳಿದರು. ನಮ್ಮ ಅಣ್ಣನ ವಾದಕ್ಕೆ ನನ್ನಲ್ಲಿ ಯಾವ ಉತ್ತರವೂ ಇರಲಿಲ್ಲ. ಅವರು ಹೀಗೆ ಹೇಳಿದರು: "ಇಲ್ಲಿ ನೋಡು. ನಾನು ಮತ್ತೊಬ್ಬ ವಕೀಲರ ಪಾಲುದಾರನಾಗಿರುವುದು ನಿನಗೆ ಗೊತ್ತೇ ಇದೆ. ನಮ್ಮಲ್ಲಿ ಬರುವ ಮೊಕದ್ದಮೆಗಳಲ್ಲಿ ನೀನು ನಡೆಸಬಹುದಾದುದನ್ನೆಲ್ಲ ನಿನಗೆ ನಾನು ಕೊಡುವುದು ಸ್ವಾಭಾವಿಕ. ನನ್ನ ಪಾಲುದಾರರಿಗೆ ನೀನು ದಳ್ಳಾಳಿ ಹಣವನ್ನು ಕೊಡಲು ಒಪ್ಪದಿದ್ದರೆ, ನನ್ನನ್ನು ನೀನು ಒಳ್ಳೆಯ ಪೇಚಾಟಕ್ಕೆ ಸಿಕ್ಕಿಸಿದಂತೆ ಆಗುತ್ತದೆ. ಅಲ್ಲದೆ ನೀನೂ ನಾನೂ ಒಟ್ಟಿಗೆ ಇರುವುದರಿಂದ ನೀನು ಕೊಟ್ಟುದರಲ್ಲಿ ಒಂದು ಪಾಲು ನನಗೆ ಬಂದೇ ಬರುತ್ತದೆ. ನನ್ನ ಪಾಲುದಾರ, ಅದೇ ಮೊಕದ್ದಮೆಯನ್ನು ಮತ್ತಾರಾದರೂ ಬ್ಯಾರಿಸ್ಟರಿಗೆ ಕೊಟ್ಟರೆ ಅವನ ಬಾಬ್ತು ದಳ್ಳಾಳಿ ಹಣ ಅವನಿಗೆ ತಾನಾಗಿಯೇ ಬರುತ್ತದೆ." ನಾನು ಈ ವಾದಕ್ಕೆ ಮರುಳಾದೆನು. ಬ್ಯಾರಿಸ್ಟರ್ ವೃತ್ತಿಯನ್ನು ನಾನು ನಡೆಸುವುದಾದರೆ ದಳ್ಳಾಳಿ ಕೊಡುವುದಿಲ್ಲವೆಂಬ ನನ್ನ ತತ್ವವನ್ನು ಇಂತಹ ಸಂದರ್ಭಗಳಲ್ಲಿ ಅನುಷ್ಠಾನಗೊಳಿಸುವುದು ಸಾಧ್ಯವಲ್ಲವೆಂದು ಅರಿತು ನನ್ನ ಮನಸ್ಸನ್ನು ಸಮಾಧಾನ ಮಾಡಿಕೊಂಡೆನು. ಇನ್ನೂ ಸ್ಪಷ್ಟವಾಗಿ ಹೇಳಬೇಕಾದರೆ ನನ್ನನ್ನೇ ನಾನು ಮೋಸಮಾಡಿಕೊಂಡೆನು. ಮತ್ತಾವ ಮೊಕದ್ದಮೆಯ ಸಂಬಂಧದಲ್ಲಿಯೂ ನಾನು ದಳ್ಳಾಳಿಯನ್ನು ಕೊಟ್ಟುದು ನನಗೆ ಜ್ಞಾಪಕವಿಲ್ಲ.

ಹೀಗೆ ನನ್ನ ಜೀವನಕ್ಕೆ ಸಾಕಾಗುವಷ್ಟು ಹಣವನ್ನು ನಾನು ಗಳಿಸತೊಡಗಿದೆನು. ಆದರೆ ನನ್ನ ಬಾಳಿನ ಪ್ರಥಮ ಆಘಾತ ನನಗೆ ಉಂಟಾದುದು ಈ ಸಂದರ್ಭದಲ್ಲಿಯೇ. ಬ್ರಿಟಿಷ್ ಅಧಿಕಾರಿ ಹೇಗೆ ನಡೆದುಕೊಳ್ಳುತ್ತಾನೆ ಎಂಬುದನ್ನು ನಾನು ಕಿವಿಯಲ್ಲಿ ಕೇಳಿದ್ದೆನು. ಆದರೆ ಅದುವರೆಗೆ ನಾನು ಅವರಲ್ಲಿ ಒಬ್ಬರನ್ನೂ ಪ್ರತ್ಯಕ್ಷವಾಗಿ ಸಂಧಿಸಿರಲಿಲ್ಲ.

ಪೋರ್‌ಬಂದರಿನ ಹಿಂದಿನ ರಾಣಾ ಸಾಹೇಬರು ಗದ್ದಿಗೆ ಏರುವುದಕ್ಕೆ ಮುಂಚೆ, ನಮ್ಮಣ್ಣ ಆತನಿಗೆ ಸಲಹೆಗಾರನೂ ಕಾರ್ಯದರ್ಶಿಯೂ ಆಗಿದ್ದನು. ಆ ಅಧಿಕಾರದಲ್ಲಿರುವಾಗ ರಾಣಾ ಸಾಹೇಬರಿಗೆ ತಪ್ಪು ಸಲಹೆಯನ್ನು ಕೊಟ್ಟ ನೆಂಬ ಅಪರಾಧ ನಮ್ಮಣ್ಣನ ತಲೆಗೆ ಕಟ್ಟಿತು. ವಿಷಯ ಪೊಲಿಟಿಕಲ್ ಏಜೆಂಟರವರಿಗೆ ಮುಟ್ಟಿದ್ದಿತು. ಅವರು ನಮ್ಮಣ್ಣನ ವಿಷಯದಲ್ಲಿ ಕೆಟ್ಟ ಅಭಿಪ್ರಾಯವುಳ್ಳವರಾಗಿದ್ದರು. ಇಂಗ್ಲೆಂಡಿನಲ್ಲಿ ನಾನು ಇದ್ದಾಗ ನನಗೆ ಅವರ ಪರಿಚಯವಾಗಿದ್ದಿತು. ಅವರು ನನ್ನೊಂದಿಗೆ ತಕ್ಕಮಟ್ಟಿನ ಸ್ನೇಹ ದಿಂದಲೇ ವರ್ತಿಸುತ್ತಿದ್ದರೆಂದು ಹೇಳಬಹುದು. ಆ ಸ್ನೇಹವನ್ನು ನಾನು ಉಪಯೋಗಪಡಿಸಿಕೊಂಡು ನಮ್ಮಣ್ಣನ ವಿಷಯವಾಗಿ ಒಳ್ಳೆಯ ಮಾತು ಗಳನ್ನು ಹೇಳಿ ಪೊಲಿಟಿಕಲ್ ಏಜೆಂಟರಿಗೆ ಅವನಲ್ಲಿದ್ದ ದುರಭಿಪ್ರಾಯವನ್ನು ನಾನು ಹೋಗಲಾಡಿಸಬೇಕೆಂದು ನಮ್ಮಣ್ಣ ಯೋಚಿಸಿದನು. ಈ ಅಭಿಪ್ರಾಯ ನನಗೆ ಸ್ವಲ್ಪವೂ ಒಪ್ಪಿಗೆಯಾಗಲಿಲ್ಲ. ಇಂಗ್ಲೆಂಡಿನಲ್ಲಿ ಆತನೊಡನೆ ಉಂಟಾದ ಅಲ್ಪ ಪರಿಚಯದ ಲಾಭವನ್ನು ಇಲ್ಲಿ ಪಡೆಯಲು ಯತ್ನಿಸುವುದು ಸರಿಯಲ್ಲ ವೆಂದು ನಾನು ಯೋಚಿಸಿದೆನು. "ನಮ್ಮಣ್ಣ ನಿಜವಾಗಿ ತಪ್ಪು ಮಾಡಿದ್ದರೆ ನನ್ನ ಶಿಫಾರಸಿನಿಂದ ಪ್ರಯೋಜನವೇನು ? ಅವನು ನಿರಪರಾಧಿಯಾಗಿದ್ದರೆ ಸರಿಯಾದ ಮಾರ್ಗದಲ್ಲಿ ತನ್ನ ಅರ್ಜಿಯನ್ನು ಸಲ್ಲಿಸಿ, ಆತ್ಮವಿಶ್ವಾಸದಿಂದ ಹೋರಾಡಿ ಪರಿಣಾಮವನ್ನು ಎದುರಿಸಬೇಕು" ಎಂದುಕೊಂಡೆನು. ಈ ವಿಚಾರಸರಣಿ ನಮ್ಮಣ್ಣನಿಗೆ ರುಚಿಸಲಿಲ್ಲ. "ನಿನಗೆ ಕಾಥೇವಾಡದ ವಿಷಯ ಗೊತ್ತಿಲ್ಲ. ನೀನು ಇನ್ನೂ ಪ್ರಪಂಚಜ್ಞಾನವನ್ನು ಕಲಿಯಬೇಕು. ಇಲ್ಲಿ ಏನೂ ನಡೆಯಬೇಕಾದರೂ ಸಿಫಾರಸಿನಿಂದಲೇ, ನಿನಗೆ ಪರಿಚಯವಿರುವ ಆಫೀಸರಲ್ಲಿ, ನಿಮ್ಮಣ್ಣನ ವಿಷಯವಾಗಿ ಒಂದೆರಡು ಒಳ್ಳೆಯ ಮಾತುಗಳನ್ನು ಆಡಿ ನಿನ್ನ ಕರ್ತವ್ಯವನ್ನು ಮಾಡದಿರುವುದು ನಿನಗೆ ಉಚಿತವಲ್ಲ" ಎಂದನು.

ನಾನು ನಮ್ಮಣ್ಣನ ಮಾತುಗಳನ್ನು ಮೀರಲಾರದೆ ನನಗೆ ಇಷ್ಟವಿಲ್ಲ ದಿದ್ದರೂ ಆ ಅಧಿಕಾರಿಯ ಬಳಿಗೆ ಹೋದೆನು. "ಅಧಿಕಾರಿಯನ್ನು ಹೋಗಿ ಸಂಧಿಸಲು ನನಗೆ ಯಾವ ಹಕ್ಕೂ ಇರಲಿಲ್ಲ. ಇದರಿಂದ ನನ್ನ ಆತ್ಮ ಗೌರವಕ್ಕೆ ಹಾನಿ" ಎಂಬುದೂ ನನಗೆ ಗೊತ್ತಿದ್ದಿತು. ನಾನು ಒಂದು

ಭೇಟಿಯನ್ನು ಕೋರಿದೆನು. ಅದೂ ದೊರೆತು, ನಾನು ಆತನನ್ನು ಹೋಗಿ ನೋಡಿದೆನು. ಇಂಗ್ಲೆಂಡಿನ ಪರಿಚಯವನ್ನು ಜ್ಞಾಪಿಸಿದೆನು. ನನಗೆ ತತ್‌ಕ್ಷಣ ಗೊತ್ತಾಯಿತು ; ಕಾಥೇವಾಡ ಇಂಗ್ಲೆಂಡ್ ಅಲ್ಲ, ರಜದಲ್ಲಿರುವ ವ್ಯಕ್ತಿ, ಅಧಿಕಾರದಲ್ಲಿರುವ ವ್ಯಕ್ತಿಯಲ್ಲ, ತೀರ ಭಿನ್ನ ಎಂಬುದು. ಪೊಲಿಟಿಕಲ್ ಏಜೆಂಟನು ನನ್ನ ಪರಿಚಯವನ್ನು ಅಂಗೀಕರಿಸಿದನು. ಆದರೆ ಅದರ ಜ್ಞಾಪಕ ಅವನ ದರ್ಪವನ್ನು ಹೆಚ್ಚಿಸಿದಂತೆ ತೋರಿತು. "ಆ ಪರಿಚಯದ ದುರುಪಯೋಗ ಮಾಡಿಕೊಳ್ಳಲು ನೀನು ಬಂದಿಲ್ಲವಷ್ಟೆ" ಎಂದು ಹೇಳುವಂತಿತ್ತು ಆ ದರ್ಪ. ಅದೇ ಅಭಿಪ್ರಾಯ ಅವನ ಮುಖದಲ್ಲಿ ಚಿತ್ರಿತವಾದಂತಿತ್ತು. ಆದರೂ ನಾನು ಹೋಗಿದ್ದ ವಿಷಯದ ಪ್ರಸ್ತಾಪ ಪ್ರಾರಂಭಿಸಿದೆನು. ಸಾಹೇಬ ಸಹನೆಯನ್ನು ಕಳೆದುಕೊಂಡನು. "ನಿಮ್ಮಣ್ಣ ಪಿತೂರಿಗಾರ. ಇನ್ನೇನನ್ನೂ ನೀನು ಹೇಳುವುದು ನನಗೆ ಬೇಕಾಗಿಲ್ಲ. ನನಗೆ ಸಮಯವಿಲ್ಲ. ನಿಮ್ಮಣ್ಣ ಏನಾದರೂ ಹೇಳುವುದಿದ್ದರೆ ಸರಿಯಾದ ರೀತಿಯಲ್ಲಿ ಅರ್ಜಿ ಹಾಕಲಿ" ಎಂದನು. ಉತ್ತರ ಸಾಕಾದುದಾಗಿದ್ದಿತು. ಪ್ರಾಯಶಃ ಅದು ನ್ಯಾಯವೂ ಆಗಿದ್ದಿತು. ಆದರೆ ಸ್ವಾರ್ಥಕ್ಕೆ ಕಣ್ಣಿಲ್ಲ. ನಾನು ನನ್ನ ಕಥೆಯನ್ನೇ ಮುಂದುವರಿಸಿದೆ. ಸಾಹೇಬ ಎದ್ದು ನಿಂತು "ಈಗ ಹೊರಡು" ಎಂದನು.

"ದಯವಿಟ್ಟು ನನ್ನ ಕತೆಯನ್ನು ಪೂರ್ತಿ ಕೇಳಿ" ಎಂದೆನು. ಆತನಿಗೆ ಅದರಿಂದ ಕೋಪವುಂಟಾಯಿತು. ತನ್ನ ಜವಾನನನ್ನು ಕರೆದು "ಈತನನ್ನು ಹೊರಕ್ಕೆ ಕಳುಹಿಸು" ಎಂದು ಹೇಳಿದನು. ನಾನು ಇನ್ನೂ ಅನುಮಾನಿಸುತ್ತಲೇ ಇದ್ದೆನು. ಜವಾನ ಬಂದು ನನ್ನ ಹೆಗಲಿಗೆ ಕೈಹಾಕಿ ನನ್ನನ್ನು ಕೊಠಡಿಯಿಂದ ಹೊರಕ್ಕೆ ನೂಕಿದನು.

ಸಾಹೇಬನು ಹೊರಟುಹೋದನು. ಜವಾನನೂ ಹೊರಟುಹೋದನು. ದುಃಖ ಮತ್ತು ಕೋಪದಿಂದ ಬುಸುಗುಟ್ಟುತ್ತಾ ನಾನೂ ಹಿಂದಿರುಗಿದೆನು. ನಾನು ತತ್‌ಕ್ಷಣ ಈ ಮುಂದಿನ ಅಭಿಪ್ರಾಯವುಳ್ಳ ಒಂದು ಪತ್ರವನ್ನು ಸಾಹೇಬನಿಗೆ ಬರೆದು ಕಳುಹಿಸಿದೆನು. "ನೀವು ನನಗೆ ಅವಮಾನ ಮಾಡಿದಿರಿ. ನಿಮ್ಮ ಆಳಿನ ಮೂಲಕ ನನ್ನ ಮೇಲೆ ಆಕ್ರಮಣ ನಡೆಸಿದಿರಿ. ನನ್ನಲ್ಲಿ

ಕ್ಷಮೆಯನ್ನು ಕೋರದಿದ್ದಲ್ಲಿ, ನಿಮ್ಮ ಮೇಲೆ ಮಾನನಷ್ಟದ ದಾವಾ ಹೂಡುತ್ತೇನೆ."

ಕೂಡಲೇ ಆತನ ಸವಾರನ ಕೈಯಲ್ಲಿ ಈ ಉತ್ತರ ಬಂದಿತು. "ನೀವು ನನ್ನೊಂದಿಗೆ ಅಸಭ್ಯ ರೀತಿಯಲ್ಲಿ ವರ್ತಿಸಿದಿರಿ. ನೀವು ಹೊರಟು ಹೋಗಿರೆಂದು ನಾನು ಹೇಳಿದೆ. ಆದರೆ ನೀವು ಹೋಗಲಿಲ್ಲ. ಆಗ ನಿಮಗೆ 'ಬಾಗಿಲು ತೋರಿಸು' ಎಂದು ನಾನು ಜವಾನನಿಗೆ ಹೇಳಬೇಕಾಯಿತು. ಆದರೂ ನೀವು ಹೊರಡಲಿಲ್ಲ. ಆದುದರಿಂದ ಆತ ನಿಮ್ಮನ್ನು ಹೊರಗೆ ಕಳುಹಿಸಲು ಸಾಕಾಗುವಷ್ಟು ಮಾತ್ರ ಬಲಪ್ರಯೋಗ ಮಾಡಿದನು. ನಿಮಗೆ ಇಷ್ಟಬಂದಂತೆ ವರ್ತಿಸಲು ನೀವು ಸ್ವತಂತ್ರರಾಗಿದ್ದೀರಿ."

"ಈ ಪ್ರತ್ಯುತ್ತರದ ಕಾಗದವನ್ನು ಜೇಬಿನಲ್ಲಿಟ್ಟುಕೊಂಡು ನಾನು ಮುಖಭಂಗಿತನಾಗಿ ಮನೆಗೆ ಬಂದು ನಡೆದ ವಿಷಯಗಳನ್ನೆಲ್ಲ ನಮ್ಮಣ್ಣನಿಗೆ ಹೇಳಿದೆನು. ಆತನಿಗೆ ದುಃಖವಾಯಿತು. ಆದರೆ ನನ್ನನ್ನು ಸಮಾಧಾನ ಪಡಿಸುವುದೆಂತು ? ಆತನು ನನ್ನ ವಕೀಲ ಮಿತ್ರರೊಂದಿಗೆಲ್ಲ ಮಾತುಕತೆ ನಡೆಸಿದನು. ಏಕೆಂದರೆ ಸಾಹೇಬನ ಮೇಲೆ ಮೊಕದ್ದಮೆಯನ್ನು ಹೇಗೆ ಹೂಡಬೇಕೆಂಬುದು ನನಗೆ ತಿಳಿದಿರಲಿಲ್ಲ. ಸರ್ ಫಿರೋಜ್‌ಷಾ ಮೆಹತಾ ರವರು ಆ ವೇಳೆಗೆ ಒಂದು ಮೊಕದ್ದಮೆಯ ಸಂಬಂಧದಲ್ಲಿ ಬೊಂಬಾಯಿ ನಿಂದ ರಾಜಕೋಟೆಗೆ ಬಂದಿದ್ದರು. ಆದರೆ, ನನ್ನಂತಹ ಹೊಸ ಬ್ಯಾರಿಸ್ಟರು ಅವರನ್ನು ನೋಡುವುದೆಂತು ? ಆದುದರಿಂದ ಅವರನ್ನು ಗೊತ್ತುಮಾಡಿ ಕೊಂಡಿದ್ದ ವಕೀಲರ ಮೂಲಕ, ನನ್ನ ಮತ್ತು ಪೊಲಿಟಿಕಲ್ ಏಜೆಂಟರ ವ್ಯವಹಾರಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನೆಲ್ಲ ಅವರಿಗೆ ಕಳುಹಿಸಿ ಅವರ ಸಲಹೆಯನ್ನು ಬೇಡಿದೆನು. ಅವರ ಪ್ರತ್ಯುತ್ತರ ಹೀಗಿದ್ದಿತು : "ಗಾಂಧೀಗೆ ಹೇಳಿ. ಇಂತಹ ಅನುಭವ, ಅನೇಕ ಬ್ಯಾರಿಸ್ಟರು ಮತ್ತು ವಕೀಲರಿಗೆ ಸಾಮಾನ್ಯವಾದುದು. ಆತ ಈಗ ತಾನೆ ಇಂಗ್ಲೆಂಡಿನಿಂದ ಬಂದಿದ್ದಾನೆ. ರಕ್ತ ಇನ್ನೂ ಬಿಸಿಯಾಗಿದೆ. ಬ್ರಿಟಿಷ್ ಅಧಿಕಾರಿಗಳ ವಿಷಯ ಅವನಿಗೆ ಇನ್ನೂ ತಿಳಿಯದು. ಹಣ ಸಂಪಾದನೆ ಮಾಡಿಕೊಂಡು ಸುಖವಾಗಿರುವುದು ಅವನ ಆಸೆಯಾದರೆ, ಪೊಲಿಟಿಕಲ್ ಏಜೆಂಟನಿಂದ ಬಂದಿರುವ ಕಾಗದವನ್ನು ಹರಿದು ಹಾಕಿ ತನಗಾದ ಅವಮಾನವನ್ನು

ನುಂಗಿಕೊಳ್ಳಲಿ. ಸಾಹೇಬನಿಗೆ ವಿರೋಧವಾಗಿ ಮೊಕದ್ದಮೆಯನ್ನು ಹೂಡುವುದರಿಂದ ಅವನಿಗೇನೂ ಲಾಭವಾಗುವುದಿಲ್ಲ. ಬದಲಾಗಿ ಅವನಿಗೆ ಕೇಡೇ ಉಂಟಾಗುವುದು. ಜೀವನದ ಅನುಭವ ಆತನಿಗೆ ಇನ್ನೂ ಬಹಳ ಆಗಬೇಕಾಗಿದೆ."

ಆ ಬುದ್ಧಿವಾದ ನನಗೆ ವಿಷದಷ್ಟು ಕಹಿಯಾಗಿದ್ದಿತು. ಆದರೆ ಅದನ್ನು ನುಂಗದೆ ಬೇರೆ ದಾರಿ ಇರಲಿಲ್ಲ. ನಾನು ನನಗಾದ ಅವಮಾನವನ್ನು ನುಂಗಿಕೊಂಡೆನು. ಅದರ ಸದುಪಯೋಗವನ್ನೂ ಪಡೆದೆನೆಂದು ಹೇಳಬೇಕು. "ಈ ಸ್ಥಿತಿಗೆ ನಾನು ನನ್ನನ್ನು ಎಂದಿಗೂ ತಂದುಕೊಳ್ಳುವುದಿಲ್ಲ. ಈ ರೀತಿಯಾಗಿ ಸ್ನೇಹದ ಲಾಭವನ್ನು ಹೊಂದಲು ಇನ್ನೆಂದಿಗೂ ಯತ್ನಿಸುವುದಿಲ್ಲ" ಎಂದು ನನ್ನಲ್ಲಿ ನಾನೇ ಹೇಳಿಕೊಂಡೆನು. ಅಂದಿನಿಂದ ಎಂದೂ ಆ ನಿರ್ಣಯವನ್ನು ಭಂಗಗೊಳಿಸಿಲ್ಲ. ಈ ಆಘಾತ ನನ್ನ ಜೀವನದ ಮಾರ್ಗವನ್ನೇ ಬದಲಾಯಿಸಿತು.

೫

ಆಫ್ರಿಕಕ್ಕೆ ಹೊರಡಲು ಸಿದ್ಧತೆ

ಆ ಅಧಿಕಾರಿಯ ಬಳಿಗೆ ನಾನು ಹೋದುದು ನಿಜವಾಗಿ ನನ್ನ ತಪ್ಪು. ಆದರೆ ಆತನ ಉದ್ಧಟತನ, ರೋಷ, ಗರ್ವ ಇವನ್ನು ನನ್ನ ತಪ್ಪಿಗೆ ಹೋಲಿಸಿದರೆ, ಅಳತೆ ಮೀರಿದುದಾಗಿದ್ದಿತು. ನನ್ನ ತಪ್ಪು ನನ್ನನ್ನು ಹೊರಕ್ಕೆ ತಳ್ಳಿಸುವಷ್ಟು ದೊಡ್ಡದಾಗಿರಲಿಲ್ಲ. ನಾನು ಅವನ ಕಾಲದ ಐದು ನಿಮಿಷವನ್ನು ಮಾತ್ರ ತೆಗೆದುಕೊಂಡಿದ್ದಿರಬಹುದು. ಆದರೆ ನಾನು ಮಾತನಾಡುವುದೇ ಅವನಿಗೆ ಸಹಿಸದಾಯಿತು. ಆತನು ನನ್ನನ್ನು "ಹೋಗು" ಎಂದು ವಿನಯದಿಂದ ಹೇಳಬಹುದಾಗಿದ್ದಿತು. ಆದರೆ ಅವನ ಅಧಿಕಾರ ಮದ ಮಿತಿಮೀರಿದುದಾಗಿದ್ದಿತು. ಆತನಲ್ಲಿ ಸಹನೆ ಇರಲೇ ಇಲ್ಲವೆಂಬುದು ನನಗೆ ಅನಂತರ ತಿಳಿಯಿತು. ತನ್ನನ್ನು ನೋಡಲು ಬಂದವರನ್ನು ಅವಮಾನಗೊಳಿಸುವುದೇ ಆತನ ಪದ್ಧತಿಯಾಗಿದ್ದಿತು. ಆತನ ಇಚ್ಛೆಗೆ ವಿರೋಧವಾಗಿ ಅಲ್ಪ ಕಾರಣ ದೊರೆತರೂ ಆತ ರೋಷಾವೇಶ ಭರಿತನಾಗುತ್ತಿದ್ದನು.

ನನ್ನ ಕೆಲಸವ ಹೆಚ್ಚು ಭಾಗ ಆತನ ಕೋರ್ಟಿನಲ್ಲಿಯೇ ಇರುತ್ತಿದ್ದಿತು. ಅವನ ಮನಸ್ಸನ್ನು ಒಲಿಸಿಕೊಳ್ಳಲು ನನಗೆ ಮನಸ್ಸಿರಲಿಲ್ಲ. ಅವನ ಮನಸ್ಸನ್ನು ಒಲಿಸಿಕೊಳ್ಳಲು ಅಂಗಲಾಚುವುದು ನನಗೆ ಇಷ್ಟವಿರಲಿಲ್ಲ. ಅವನ ಮೇಲೆ ಮೊಕದ್ದಮೆ ಹೂಡುವುದಾಗಿ ಅವನನ್ನು ಹೆದರಿಸಿದ ಮೇಲೆ, ಸುಮ್ಮನೆ ಇರುವುದು ನನಗೆ ಇಷ್ಟವಾಗಲಿಲ್ಲ.

ಈ ಮಧ್ಯೆ, ಕಾಥೇವಾಡದ ರಾಜಕೀಯ ಠಿಕ್ಕಾಟದ ಅನುಭವ ನನಗೆ ಸ್ವಲ್ಪ ಸ್ವಲ್ಪ ಉಂಟಾಗತೊಡಗಿದ್ದಿತು. ಕಾಥೇವಾಡ ಅನೇಕ, ಸಣ್ಣಪುಟ್ಟ ರಾಜ್ಯಗಳ ಮಿಶ್ರಪ್ರಾಂತವಾಗಿದ್ದುದರಿಂದ ಅಲ್ಲಿ ರಾಜಕೀಯ ಪುಡಾರಿಗಳಿಗೇನೂ ಕಡಿಮೆ ಇರಲಿಲ್ಲ. ರಾಜ್ಯಗಳಿಗೂ ರಾಜ್ಯಗಳಿಗೂ ನಡುವೆ ಅಲ್ಪ ಪಿತೂರಿ, ಅಧಿಕಾರ ಸ್ಥಾನಗಳಿಗೆ ನೌಕರರ ಪಿತೂರಿ ಇವು ಅಲ್ಲಿನ ನಿತ್ಯ ವಿಷಯಗಳಾಗಿದ್ದವು. ರಾಜರು ಹೊಗಳು ಭಟ್ಟರ ಕೈವಶರಾಗಿದ್ದರು. ಅವರು ಚಾಡಿ ಮಾತುಗಳಿಗೆ ಕಿವಿ ಕೊಡುತ್ತಿದ್ದರು. ಸಾಹೇಬನ ಸೇವಕನ ಮನಸ್ಸನ್ನು ಸಹ ಓಲಿಸಿಕೊಳ್ಳಬೇಕಾಗಿದ್ದಿತು. ಸಾಹೇಬನ ಶಿರಸ್ತೆದಾರ ಸಾಹೇಬನಿಗಿಂತ ಹೆಚ್ಚು ಪ್ರಬಲನಾಗಿದ್ದನು. ಏಕೆಂದರೆ ಅವನೇ ಸಾಹೇಬನ ಕಣ್ಣು ಕಿವಿ ಮತ್ತು ಬಾಯಿ ಆಗಿದ್ದನು. ಶಿರಸ್ತೆದಾರನ ಇಷ್ಟವೇ ಕಾನೂನು ಆಗಿದ್ದಿತು. ಅವನ ಸಂಪಾದನೆ ಸಾಹೇಬನ ಸಂಪಾದನೆಗಿಂತ ಯಾವಾಗಲೂ ಹೆಚ್ಚು ಎಂದು ಹೇಳುತ್ತಿದ್ದರು. ಆ ಮಾತು ಅತಿಶಯೋಕ್ತಿಯಾಗಿದ್ದಿರಬಹುದು. ಆದರೆ ಶಿರಸ್ತೆದಾರನ ವೆಚ್ಚ ಅವನ ಸಂಬಳಕ್ಕಿಂತ ಹೆಚ್ಚಾಗಿದ್ದುದು ನಿಜ.

ಆ ವಾತಾವರಣ ನನಗೆ ವಿಷಮಯವಾಗಿ ತೋರಿತು. ಇದರ ಸೋಂಕಿನಿಂದ ತಪ್ಪಿಸಿಕೊಳ್ಳುವುದು ಹೇಗೆಂಬುದೇ ನನಗೆ ಹಗಲು ರಾತ್ರಿ ಸಮಸ್ಯೆಯಾಯಿತು.

ನಾನು ಪೂರ್ಣವಾಗಿ ನಿರುತ್ಸಾಹಿಯಾಗಿದ್ದೆನು. ಇದು ನಮ್ಮಣ್ಣನಿಗೂ ತಿಳಿಯಿತು. ನನಗೆ ಯಾವುದಾದರೂ ಒಂದು ನೌಕರಿ ದೊರಕಿದರೆ, ಈ ಪಿತೂರಿಯ ವಾತಾವರಣದಿಂದ ನಾವು ಮುಕ್ತರಾಗಬಹುದೆಂದು ನಮ್ಮಿಬ್ಬರಿಗೂ ಎನ್ನಿಸಿತು. ಆದರೆ ಪಿತೂರಿ ತಂತ್ರವಿಲ್ಲದೆ ಮಂತ್ರಿ ಪದವಿಯಾಗಲೀ ನ್ಯಾಯಾಧಿಪತಿಯ ಪದವಿಯಾಗಲೀ ಎಲ್ಲಿಂದ ದೊರೆತೀತು? ಸಾಹೇಬ

ನಿಗೂ ನನಗೂ ನಡೆದ ಜಗಳದಿಂದ ನನ್ನ ವಕೀಲಿ ವೃತ್ತಿಗೂ ತಡೆಯಾಗಿದ್ದಿತು.

ಆ ಕಾಲದಲ್ಲಿ ಪೋರ್‌ಬಂದರ್, "ಅಡ್ಮಿನಿಸ್ಟ್ರೇಷನ್" ಆಳ್ವಿಕೆಯಲ್ಲಿದ್ದಿತು. (ಅಂದರೆ ಬ್ರಿಟಿಷ್ ಸರ್ಕಾರದಿಂದ ನಿಯಮಿತನಾದ ಅಧಿಕಾರಿ ಆ ಸಂಸ್ಥಾನವನ್ನು ಆಳುತ್ತಿದ್ದನು) ಅಲ್ಲಿಯ ರಾಜನಿಗೆ ಹೆಚ್ಚು ಅಧಿಕಾರವನ್ನು ಸಂಪಾದಿಸಿ ಕೊಡುವುದೇ ಮುಂತಾದ ವಿಷಯಗಳಲ್ಲಿ ಪ್ರಯತ್ನ ಮಾಡುವ ಕೆಲಸ ನನಗೆ ಬಿದ್ದಿದ್ದಿತು. ಮೇರರ (ಭೂತೆರಿಗೆ ಕೊಡುವ ರೈತರು) ಸಂಬಂಧವಾಗಿಯೂ ನಾನು ಆಡಳಿತದ ಅಧಿಕಾರಿಯನ್ನು (ಅಡ್ಮಿನಿಸ್ಟ್ರೇಟರ್) ನೋಡಬೇಕಾಗಿದ್ದಿತು. ಈ ಅಧಿಕಾರಿ ಭಾರತೀಯನೇ ಆದರೂ, ಅವನ ಅಧಿಕಾರ, ದರ್ಪ, ಪ್ರತಿಷ್ಠೆ, ಆಂಗ್ಲ ಸಾಹೇಬನವಕ್ಕಿಂತ ಒಂದು ಕೈ ಮೀರಿದುದಾಗಿದ್ದಿತು. ಆತ, ದಕ್ಷ ಅಧಿಕಾರಿಯೇನೋ ಹೌದು. ಆದರೆ ಆತನ ದಕ್ಷತೆಯಿಂದ ರೈತರಿಗೇನೂ ಸುಖವಾದಂತೆ ನನಗೆ ತೋರಲಿಲ್ಲ. ರಾಣಾ ಸಾಹೇಬರಿಗೆ ಸ್ವಲ್ಪ ಹೆಚ್ಚು ಅಧಿಕಾರ ದೊರಕಿಸುವುದರಲ್ಲಿ ನಾನು ಜಯಶಾಲಿಯಾದೆ. ಮೇರರಿಗೆ (ರೈತರು) ಏನೂ ಸಹಾಯವಾಗಲಿಲ್ಲ. ಅವರ ಕಷ್ಟ ನಿಷ್ಠುರಗಳನ್ನು ಅಧಿಕಾರಿ ಎಚ್ಚರಿಕೆಯಿಂದಲೂ ಶ್ರದ್ಧೆಯಿಂದಲೂ ಪರಿಶೀಲನೆ ಸಹ ಮಾಡಲಿಲ್ಲ ಎಂದು ನನಗೆ ತೋರಿತು.

ಹೀಗೆ ಈ ವಿಷಯದಲ್ಲಿ ಸಹ ನಾನು ನಿರಾಶನಾದೆನು. ನನ್ನ ಕಕ್ಷಿಗಾರರಿಗೆ ನ್ಯಾಯ ದೊರಕಿಲ್ಲವೆಂಬುದು ನನ್ನ ಮತವಾಗಿದ್ದಿತು. ಆದರೆ ಆ ನ್ಯಾಯ ದೊರಕಿಸಲು ನನಗೆ ಮಾರ್ಗವಿರಲಿಲ್ಲ. ನಾನು ಪೊಲಿಟಿಕಲ್ ಏಜೆಂಟರಲ್ಲಿಯೋ ಅಥವಾ ಗವರ್ನರಲ್ಲಿಯೋ, "ಅಪೀಲ್" ಹೋಗಬಹುದಾಗಿದ್ದಿತು ಅಷ್ಟೆ. ಅವರೂ ಸಹ "ಇದಕ್ಕೂ ನಮಗೂ ಸಂಬಂಧವಿಲ್ಲವೆಂದು" ಅರ್ಜಿಯನ್ನು ವಜಾಮಾಡುತ್ತಿದ್ದರು. ಅಂತಹ ತೀರ್ಮಾನಗಳಿಗೆ ಆಧಾರವಾಗಿ ಯಾವುದಾದರೂ ಕಾನೂನು ಅಥವಾ ನಿಯಮ ಇದ್ದಿದ್ದರೆ, ಏನನ್ನಾದರೂ ಮಾಡಬಹುದಾಗಿದ್ದಿತು. ಆದರೆ ಇಲ್ಲಿ ಸಾಹೇಬನ ಇಚ್ಛೆಯೇ ಕಾನೂನು ಆಗಿದ್ದಿತು. ನನ್ನ ತಾಳ್ಮೆ ಕೊನೆ ಮುಟ್ಟಿತು.

ಈ ಮಧ್ಯೆ, ಪೋರ್‌ಬಂದರಿನಲ್ಲಿದ್ದ ಒಬ್ಬ ಮೆಮನ್ ಕಂಪನಿ (ಅಂಗಡಿ)ಯವರು ನಮ್ಮಣ್ಣನಿಗೆ ಹೀಗೆ ಬರೆದರು : ದಕ್ಷಿಣ ಆಫ್ರಿಕಾದಲ್ಲಿ

ನಮ್ಮ ವ್ಯಾಪಾರವಿದೆ. ನಮ್ಮದು ದೊಡ್ಡ ವ್ಯಾಪಾರ. ನಾವು ದಕ್ಷಿಣ ಆಫ್ರಿಕಾದ ನ್ಯಾಯಸ್ಥಾನದಲ್ಲಿ ನಲವತ್ತುಸಾವಿರ ಪೌಂಡಿನ ಒಂದು ದೊಡ್ಡ ದಾವ ಹೂಡಿದ್ದೇವೆ. ಅದು ಬಹಳ ದಿನಗಳಿಂದ ನಡೆಯುತ್ತಾ ಇದೆ. ನಾವು ಉತ್ತಮರಾದ ವಕೀಲರು ಮತ್ತು ಬ್ಯಾರಿಸ್ಟರುಗಳನ್ನು ಗೊತ್ತುಮಾಡಿಕೊಂಡಿದ್ದೇವೆ. ನಿಮ್ಮ ತಮ್ಮನನ್ನು ನೀವು ಇಲ್ಲಿಗೆ ಕಳುಹಿಸಿದರೆ ನಮಗೆ ಸಹಾಯವಾಗುತ್ತದೆ. ಇದರಿಂದ ಅವನಿಗೂ ಒಳ್ಳೆಯದಾಗುತ್ತದೆ. ಆತ, ನಾವು ವಿವರಿಸುವುದಕ್ಕಿಂತ ಚೆನ್ನಾಗಿ, ಬ್ಯಾರಿಸ್ಟರಿಗೂ, ವಕೀಲರಿಗೂ ನಮ್ಮ ಪಕ್ಷದ ಸಂಗತಿಗಳನ್ನು ತಿಳಿಸಬಲ್ಲ. ಜತೆಗೆ ಆತ ಈ ಹೊಸ ದೇಶವನ್ನು ನೋಡಬಹುದು. ಹೊಸ ಹೊಸ ಜನರ ಪರಿಚಯವನ್ನೂ ಹೊಂದಬಹುದು."

ನಮ್ಮಣ್ಣ, ಈ ವಿಷಯವನ್ನು ನನ್ನೊಂದಿಗೆ ಆಲೋಚಿಸಿದನು. ಬ್ಯಾರಿಸ್ಟರಿಗೆ ಮೊಕದ್ದಮೆಯ ವಿಷಯಗಳನ್ನು ತಿಳಿಸಿ ಹೇಳುವುದು ಮಾತ್ರವೋ, ಅಥವಾ ನಾನೇ ನ್ಯಾಯಸ್ಥಾನಕ್ಕೂ ಹೋಗಿ ವಾದಿಸಬೇಕೋ ಎಂಬುದು ನನಗೆ ಸ್ಪಷ್ಟವಾಗಿ ಅರ್ಥವಾಗಲಿಲ್ಲ. ಆದರೂ ನನಗೆ ಹೋಗಬೇಕೆಂಬ ಆಸೆಯುಂಟಾಯಿತು.

ನಾನು ಹೋಗುತ್ತಿದ್ದುದು ದಾದಾ ಅಬ್ದುಲ್ಲಾ ಮತ್ತು ಕಂಪನಿ ಎಂಬ ಅಂಗಡಿಯವರ ಕೆಲಸಕ್ಕಾಗಿ. ಅದರ ಪಾಲುದಾರರಾದ ಸೇಠ್ ಅಬ್ದುಲ್ಲಾ ಕರೀಂ ಜಾವೇರಿಯವರನ್ನು ನನಗೆ ನಮ್ಮಣ್ಣ ಪರಿಚಯ ಮಾಡಿಕೊಟ್ಟನು. ಸೇಠರು "ಕೆಲಸ ನಿಮಗೆ ಕಠಿಣವಾಗುವುದಿಲ್ಲ. ನಮಗೆ ಮಿತ್ರರಾಗಿ ದೊಡ್ಡ ದೊಡ್ಡ ಐರೋಪ್ಯರು ಇದ್ದಾರೆ. ನಿಮಗೆ ಅವರ ಪರಿಚಯವಾಗುವುದು. ನಮ್ಮ ಅಂಗಡಿಯಲ್ಲಿಯೂ ನೀವು ನಮಗೆ ಸಹಾಯಮಾಡಬಹುದು. ನಮ್ಮ ಹೆಚ್ಚಿಗೆ ಪತ್ರವ್ಯವಹಾರ ಇಂಗ್ಲಿಷಿನಲ್ಲಿದೆ. ಅದರಲ್ಲಿಯೂ ನೀವು ನಮಗೆ ಸಹಾಯಕರಾಗಬಹುದು. ನೀವು ನಮ್ಮ ಅತಿಥಿಯೇ ಆಗಿರುತ್ತೀರಿ. ಆದುದರಿಂದ ನಿಮಗೆ ಯಾವ ಖರ್ಚೂ ಬೀಳುವುದಿಲ್ಲ" ಎಂದು ಹೇಳಿದರು.

"ನನ್ನ ಸೇವೆ ನಿಮಗೆ ಎಷ್ಟು ಕಾಲ ಬೇಕು ಸಂಬಳ ಎಷ್ಟು ಕೊಡುತ್ತೀರಿ ?" ಎಂದು ನಾನು ಕೇಳಿದೆನು.

"ಒಂದು ವರುಷಕ್ಕಿಂತ ಹೆಚ್ಚು ಕಾಲ ಬೇಕಿಲ್ಲ. ಮೊದಲನೆ ದರ್ಜೆಯ ಪ್ರಯಾಣ ವೆಚ್ಚ, ಆಫ್ರಿಕಾದಲ್ಲಿರುವಾಗ ನಿಮ್ಮ ಊಟ ವಸತಿ ಎಲ್ಲದರ ವೆಚ್ಚ, ಜತೆಗೆ ಒಂದು ನೂರು ಐದು ಪೌಂಡು ಸಂಭಾವನೆ."

ಹೀಗೆ ಹೋಗುವುದು ಬ್ಯಾರಿಸ್ಟರ್ ಆಗಿ ಅಲ್ಲ, ಅಂಗಡಿಯ ನೌಕರನಾಗಿ ಎಂದು ನಾನು ಭಾವಿಸಿದೆನು. ಆದರೆ ಹೇಗಾದರೂ ಸರಿಯೆ, ಭಾರತವನ್ನು ಬಿಟ್ಟರೆ ಸಾಕೆಂದು ನನಗೆ ಅನ್ನಿಸುತ್ತಿದ್ದಿತು. ಜತೆಗೆ ಒಂದು ಹೊಸ ದೇಶವನ್ನು ನೋಡುವ, ಮತ್ತು ಹೊಸ ಅನುಭವವನ್ನು ಹೊಂದುವ ಆಸೆಯೂ ಸೇರಿದ್ದಿತು. ಮನೆಯ ವೆಚ್ಚಕ್ಕೆ ನಮ್ಮಣ್ಣನಿಗೆ ನಾನು ನೂರ ಐದು ಪೌಂಡು ಗಳನ್ನು ಕಳುಹಿಸಬಹುದಾಗಿದ್ದಿತು. ನಾನು ಹೆಚ್ಚು ಚರ್ಚೆ ಮಾಡದೆ ನೌಕರಿಗೆ ಒಪ್ಪಿಕೊಂಡು ದಕ್ಷಿಣ ಆಫ್ರಿಕಾಕ್ಕೆ ಹೊರಡುವ ಸಿದ್ಧತೆ ಮಾಡಿ ಕೊಂಡೆನು.

೬

ನೆಟಾಲನ್ನು ತಲಪಿದುದು

ದಕ್ಷಿಣ ಆಫ್ರಿಕಾಕ್ಕೆ ಹೊರಟಾಗ, ಹಿಂದೆ ನಾನು ಇಂಗ್ಲೆಂಡಿಗೆ ಹೊರಡು ವಾಗ ಆದಷ್ಟು ವಿಯೋಗ ದುಃಖ ನನಗಾಗಲಿಲ್ಲ. ನಮ್ಮ ತಾಯಿ ತೀರಿಕೊಂಡಿದ್ದರು. ನನಗೆ ಸ್ವಲ್ಪಮಟ್ಟಿನ ಪ್ರಪಂಚ ಜ್ಞಾನವೂ ಹೊರಗಿನ ಪ್ರಪಂಚದ ಪ್ರವಾಸದ ಅನುಭವವೂ ಉಂಟಾಗಿದ್ದವು. ರಾಜಕೋಟೆಯಿಂದ ಬೊಂಬಾಯಿಗೆ ಹೋಗಿ ಬರುವುದು ಅಸಾಮಾನ್ಯ ವಿಷಯವಾಗಿರಲಿಲ್ಲ.

ಈಗ ಹೆಂಡತಿಯನ್ನು ಬಿಟ್ಟುಹೋಗುವ ವಿಯೋಗ ದುಃಖ ಮಾತ್ರ ನನಗೆ ಉಂಟಾಯಿತು. ನಾನು ಇಂಗ್ಲೆಂಡಿನಿಂದ ಹಿಂದಿರುಗಿದ ಈಚೆಗೆ, ನನಗೆ ಮತ್ತೊಂದು ಮಗು ಹುಟ್ಟಿದ್ದಿತು. ನಮ್ಮ ಪ್ರೇಮ, ಕಾಮದಿಂದ ವಿರಹಿತ ವಾಗಿದ್ದಿತೆಂದು ಇನ್ನೂ ಹೇಳಲು ಸಾಧ್ಯವಿರಲಿಲ್ಲ. ಆದರೂ ನಾವು ನಿಧಾನ ವಾಗಿ ಹೆಚ್ಚು ಶುದ್ಧರಾಗುತ್ತಾ ನಡೆದಿದ್ದೆವು. ಯೂರೋಪಿನಿಂದ ನಾನು ಹಿಂದಿರುಗಿದ ಮೇಲೆ, ನಾವಿಬ್ಬರೂ ಒಟ್ಟಿಗೆ ಇದ್ದ ಕಾಲ ಬಹು ಸ್ವಲ್ಪ. ಜತೆಗೆ

ನಾನು ಉತ್ತಮ ಉಪಾಧ್ಯಾಯನಲ್ಲದಿದ್ದರೂ, ಹೇಗೂ ಆಕೆಗೆ ಶಿಕ್ಷಕನಾಗಿದ್ದೆನು. ಕೆಲವು ಸುಧಾರಣೆಗಳನ್ನು ನಡೆಸಲು ಆಕೆಗೆ ನಾನು ಸಹಾಯಕನಾಗಿದ್ದೆನು. ಆದುದರಿಂದ ಈ ಸುಧಾರಣೆಗಳನ್ನು ಮುಂದುವರಿಸುವುದಕ್ಕಾಗಿಯಾದರೂ ನಾವು ಒಟ್ಟಾಗಿರುವುದು ಆವಶ್ಯಕವೆಂದು ನಮ್ಮಿಬ್ಬರಿಗೂ ಅನ್ನಿಸಿತ್ತು. ಆದರೆ ದಕ್ಷಿಣ ಆಫ್ರಿಕಾದ ಆಕರ್ಷಣೆ, ವಿಯೋಗವನ್ನು ಸಹನೀಯವಾಗಿ ಮಾಡಿತು. ನಾನು ಅವಳನ್ನು ಸಮಾಧಾನ ಪಡಿಸುತ್ತಾ, "ಒಂದು ವರುಷ ಕಳೆಯುವುದರೊಳಗಾಗಿ ನಾವು ಮತ್ತೆ ಸೇರುವುದು ಖಂಡಿತ" ಎಂದು ಹೇಳಿ ರಾಜಕೋಟೆಯಿಂದ ಬೊಂಬಾಯಿಗೆ ತೆರಳಿದೆನು.

ದಾದಾ ಅಬ್ದುಲ್ಲಾ ಕಂಪನಿಯವರ ಏಜೆಂಟರ ಮೂಲಕ ನನಗೆ ಟಿಕೇಟು ದೊರೆಯಬೇಕಾಗಿದ್ದಿತು. ಆದರೆ ಹಡಗಿನಲ್ಲಿ ಕ್ಯಾಬಿನ್ ಸಿದ್ಧವಿರಲಿಲ್ಲ. ನಾನು ಆ ಹಡಗಿನಲ್ಲಿ ಪ್ರಯಾಣ ಮಾಡದೆ ಇದ್ದಿದ್ದರೆ ಬೊಂಬಾಯಿನಲ್ಲಿಯೇ ಉಳಿದು ಬಿಡಬೇಕಾಗಿದ್ದಿತು. "ನಿಮಗೆ ಮೊದಲನೆಯ ತರಗತಿಯಲ್ಲಿ ಸ್ಥಳ ಒದಗಿಸಲು ನಾವು ನಮ್ಮ ಕೈಲಾದ ಯತ್ನವನ್ನೆಲ್ಲ ಮಾಡಿದೆವು. ಆದರೆ ಅದರಿಂದ ಏನೂ ಪ್ರಯೋಜನವಾಗಲಿಲ್ಲ. ಡೆಕ್ (ಕೊನೆಯ ತರಗತಿ) ನಲ್ಲಿ ನೀವು ಪ್ರಯಾಣ ಮಾಡುವುದಾದರೆ ಆಗಬಹುದು. ನಿಮ್ಮ ಊಟಕ್ಕೆ ಸೆಲೂನ್ (ಮೇಲು ದರ್ಜೆಯವರು ಊಟ ಮಾಡುವ ಸ್ಥಳ) ನಲ್ಲಿ ಏರ್ಪಾಡು ಮಾಡಬಹುದು." ಎಂದು ಏಜೆಂಟನು ಹೇಳಿದನು. ಆಗ ನಾನು ಮೊದಲನೆಯ ತರಗತಿಯಲ್ಲಿ ಪ್ರಯಾಣ ಮಾಡುತ್ತಿದ್ದ ಕಾಲವಾಗಿತ್ತು. ಬ್ಯಾರಿಸ್ಟರು ಡೆಕ್ಕಿನಲ್ಲಿ ಪ್ರಯಾಣ ಮಾಡುವುದು ಹೇಗೆ? ಆದುದರಿಂದ ನಾನು ಅದನ್ನು ತಿರಸ್ಕರಿಸಿದೆನು. ಏಜೆಂಟನ ಪ್ರಾಮಾಣಿಕತೆಯ ಬಗ್ಗೆಯೂ ನನಗೆ ಸಂದೇಹ ಉಂಟಾಯಿತು. ಮೊದಲನೆಯ ತರಗತಿಯ ಒಂದು ಸ್ಥಳ ಹಡಗಿನಲ್ಲಿ ಸಿಕ್ಕಲಾರದೆಂಬ ಮಾತಿನಲ್ಲಿ ನನಗೆ ನಂಬಿಕೆ ಇರಲಿಲ್ಲ. ಏಜೆಂಟನ ಒಪ್ಪಿಗೆ ಪಡೆದು ಮೊದಲನೆಯ ತರಗತಿಯ ಸ್ಥಳವನ್ನು ಸಂಪಾದಿಸಿಕೊಳ್ಳಲು ನಾನೇ ಪ್ರಯತ್ನ ಮಾಡತೊಡಗಿದೆನು. ನಾನು ಹಡಗಿಗೆ ಹೋಗಿ ಮುಖ್ಯ ಅಧಿಕಾರಿಯನ್ನು ಭೆಟ್ಟಿಯಾದೆನು. ಆತ ನನಗೆ ಮುಚ್ಚುಮರೆಯಿಲ್ಲದೆ ಹೀಗೆ ಹೇಳಿದನು: "ಸಾಮಾನ್ಯವಾಗಿ ನಮ್ಮ ಹಡಗಿಗೆ ಇಂತಹ ನೂಕುನುಗ್ಗಲು ಇಲ್ಲ. ಆದರೆ

ಮೊಸಾಂಬಿಕ್ ಗವರ್ನರ್, ಈ ಹಡಗಿನಲ್ಲಿ ಪ್ರಯಾಣ ಮಾಡುತ್ತಿದ್ದಾರೆ. ಆದುದರಿಂದ ಎಲ್ಲ ಮಲಗುವ ಮಂಚಗಳೂ ಭರ್ತಿಯಾಗಿವೆ" ಎಂದು.

"ಹೇಗಾದರೂ ಮಾಡಿ, ನನಗೂ ಒಂದಿಷ್ಟು ಸ್ಥಳವನ್ನು ಎಲ್ಲಿಯಾದರೂ ಕೊಡಲಾರಿರಾ?" ಎಂದು ಕೇಳಿದೆನು. ಆತ ನಗುತ್ತಾ ನನ್ನನ್ನು ತಲೆಯಿಂದ ಕಾಲಿನವರೆಗೆ ನೋಡಿದನು. "ಒಂದೇ ಮಾರ್ಗ ಇರುವುದು. ನನ್ನ ಕ್ಯಾಬಿನ್‌ನಲ್ಲಿ ಇನ್ನೊಂದು ಮಲಗಲು ಮಂಚವಿದೆ. ಅದನ್ನು ಸಾಮಾನ್ಯವಾಗಿ, ಪ್ರಯಾಣಿಕರಿಗೆ ಕೊಡುವುದಿಲ್ಲ. ಆದರೆ ನಿಮಗೆ ಅದನ್ನು ಕೊಡಲು ಸಿದ್ಧನಾಗಿದ್ದೇನೆ" ಎಂದನು. ನಾನು ಆತನನ್ನು ವಂದಿಸಿ, ಟಿಕೇಟು ಕೊಳ್ಳುವಂತೆ ಏಜಂಟನಿಗೆ ತಿಳಿಸಿದೆನು. ೧೮೯೩ನೆಯ ಏಪ್ರಿಲ್‌ನಲ್ಲಿ ನಾನು ನನ್ನ ಅದೃಷ್ಟವನ್ನು ಪರೀಕ್ಷಿಸಿಕೊಳ್ಳಲು ದಕ್ಷಿಣ ಆಫ್ರಿಕಾಕ್ಕೆ ಪೂರ್ಣ ಉತ್ಸಾಹದಿಂದ ಹೊರಟೆನು.

ನಮ್ಮ ಹಡಗು ನಿಂತ ಮೊದಲನೆಯ ಬಂದರು ಲಾಮು ಎಂಬುದು. ನಾವು ಹೊರಟ ಹದಿಮೂರನೆಯ ದಿನ ಅಲ್ಲಿಗೆ ತಲಪಿದೆವು. ಆ ವೇಳೆಗೆ ಹಡಗಿನ ಕಪ್ತಾನನೂ ನಾನೂ ತುಂಬ ಸ್ನೇಹಿತರಾಗಿದ್ದೆವು. ಆದರೆ ಆತನಿಗೆ ಚದುರಂಗದ ಆಟವಾಡುವುದರಲ್ಲಿ ಇಷ್ಟ ಹೆಚ್ಚು. ಆ ಆಟ ಅವನಿಗೆ ಹೊಸದಾಗಿದ್ದುದರಿಂದ, ಆ ಆಟಕ್ಕೆ ತನಗಿಂತಲೂ ಹೆಚ್ಚು ಹೊಸಬರಾಗಿದ್ದವರು ಅವನ ಜತೆಗೆ ಆಡುವುದು ಅವನಿಗೆ ಬೇಕಾಗಿದ್ದಿತು. ಆದುದರಿಂದ ಅವನು ನನ್ನನ್ನು ಆಟಕ್ಕೆ ಆಹ್ವಾನಿಸಿದನು. ಚದುರಂಗದ ಆಟದ ವಿಷಯ ನಾನು ಬಹಳ ಕೇಳಿದ್ದೆ. ಆದರೆ ಯಾವಾಗಲೂ ಅದನ್ನು ಆಡಿರಲಿಲ್ಲ. ಬುದ್ಧಿಶಕ್ತಿಯನ್ನು ಉಪಯೋಗಿಸಲು ಈ ಆಟದಲ್ಲಿ ಬಹಳ ಅವಕಾಶವಿದೆಯೆಂದು ಆಟಗಾರರು ಹೇಳುತ್ತಿದ್ದುದನ್ನು ಕೇಳಿದ್ದೆ. ಕಪ್ತಾನನು ನನಗೆ ಪಾಠ ಹೇಳಿಕೊಡಲು ಮುಂದೆ ಬಂದನು. ನನ್ನ ತಾಳ್ಮೆಗೆ ಮಿತಿಯೇ ಇಲ್ಲದುದರಿಂದ ನಾನು ಆತನಿಗೆ ಒಳ್ಳೆಯ ಶಿಷ್ಯನಾದೆನು. ನಾನು ಪ್ರತಿ ಆಟದಲ್ಲಿಯೂ ಸೋಲುತ್ತಿದ್ದೆನು. ಅದರಿಂದ ನನಗೆ ಆಟವನ್ನು ಕಲಿಸಬೇಕೆಂಬ ಆಸೆ ಆತನಿಗೆ ಇನ್ನೂ ಹೆಚ್ಚಾಯಿತು. ಚದುರಂಗದ ಆಟ ನನಗೂ ಪ್ರಿಯವಾಯಿತು. ಆದರೆ ಅದರಲ್ಲಿ ನನ್ನ ಅಭಿರುಚಿ ಹಡಗಿನಲ್ಲಿಯೇ ಕೊನೆಗೊಂಡಿತು. ರಾಜಾ

ರಾಣಿ ಮುಂತಾದುವುಗಳನ್ನು ನಡೆಸುವವರ ಆಚಿಗೆ ನನಗೆ ಅವನ್ನು ಕಲಿಯು ವುದು ಸಾಧ್ಯವಾಗಲಿಲ್ಲ.

ಲಾಮು ಬಂದರಿನಲ್ಲಿ, ಹಡಗು ಲಂಗರ್ ಹಾಕಿ, ಮೂರು ನಾಲ್ಕು ಗಂಟೆಗಳ ಕಾಲ ಉಳಿಯಿತು. ಬಂದರನ್ನು ನೋಡುವುದಕ್ಕಾಗಿ ನಾನು ಇಳಿದೆನು. ಕಪ್ತಾನನೂ ಸಹ ಹಡಗಿನಿಂದ ಇಳಿದು ಹೋದನು. ಆದರೆ ಆತ ನನಗೆ "ಇಲ್ಲಿ ಸಮುದ್ರವನ್ನು ನಂಬುವುದಕ್ಕಾಗುವುದಿಲ್ಲ. ನೀನು ಜಾಗ್ರತೆ ಹಿಂದಿರುಗಿಬಿಡು" ಎಂದು ಹೇಳಿದನು.

ಅದು ಬಹಳ ಸಣ್ಣ ಊರು. ನಾನು ಅಂಚೆ ಆಫೀಸಿಗೆ ಹೋದೆನು. ಅಲ್ಲಿದ್ದ ಭಾರತೀಯ ನೌಕರರನ್ನು ನೋಡಿ ನನಗೆ ಸಂತೋಷವಾಯಿತು. ಅವರೊಂದಿಗೆ ನಾನು ಮಾತುಕತೆಯಾಡಿದೆನು. ಅಲ್ಲಿ ನಾನು ಆಫ್ರಿಕನರನ್ನು ನೋಡಿದೆನು. ಅವರ ಜೀವನದ ರೀತಿ ನೀತಿಗಳಲ್ಲಿ ನನಗೆ ಬಹಳ ಕುತೂಹಲ ವುಂಟಾಗಿದ್ದಿತು. ಅದನ್ನು ತಿಳಿದುಕೊಳ್ಳಲು ಪ್ರಯತ್ನ ಪಟ್ಟೆನು. ಇದೆಲ್ಲದ ರಿಂದ ಸ್ವಲ್ಪ ಕಾಲ ಕಳೆದು ಹೋಯಿತು.

ಡೆಕ್‌ನಲ್ಲಿ ಪ್ರಯಾಣಮಾಡುತ್ತಿದ್ದ ಕೆಲವು ಪ್ರಯಾಣಿಕರಿಗೂ ನನಗೂ ಹೆಚ್ಚು ಪರಿಚಯವಾಗಿತ್ತು. ಅವರಲ್ಲಿ ಕೆಲವರು ನಿಧಾನವಾಗಿ ಅಡಿಗೆ ಮಾಡಿ ಕೊಂಡು ಶಾಂತವಾಗಿ ಊಟಮಾಡುವ ಉದ್ದೇಶದಿಂದ ಹಡಗಿನಿಂದ ಇಳಿದಿ ದ್ದರು. ಈಗ ತಮ್ಮ ಕೆಲಸವನ್ನು ಮುಗಿಸಿಕೊಂಡು ಅವರು ಹೊರಡಲು ಸಿದ್ಧರಾಗಿದ್ದರು. ಆದುದರಿಂದ ನಾವೆಲ್ಲರೂ ಒಂದೇ ದೋಣಿಯನ್ನು ಏರಿ ದೆವು. ಬಂದರಿನಲ್ಲಿ ಅಲೆಗಳ ಹೊಡೆತ ಜೋರಾಗಿದ್ದಿತು. ನಮ್ಮ ದೋಣಿ, ಹೊರಬಹುದಾದುದಕ್ಕಿಂತ ಹೆಚ್ಚು ಜನರನ್ನು ಹೊತ್ತಿದ್ದಿತು. ಪ್ರವಾಹವು ಅತ್ಯಂತ ವೇಗವಾಗಿದ್ದಿತು. ದೋಣಿಯ ಹಗ್ಗವನ್ನು ಹಡಗಿನ ಏಣಿಗೆ ಕಟ್ಟಲು ಸಾಧ್ಯವಾಗುತ್ತಲೇ ಇರಲಿಲ್ಲ. ದೋಣಿ, ಹಡಗಿನ ಏಣಿಯನ್ನು ಮುಟ್ಟುತ್ತಿದ್ದಿತು. ಆದರೆ ತತ್‌ಕ್ಷಣ ಅಲೆಯ ಹೊಡತದಿಂದ ದೂರಕ್ಕೆ ಸರಿಯುತ್ತಿದ್ದಿತು. ಹಡಗು ಹೊರಡಲು ಮೊದಲನೆಯ ಸಿಳ್ಳು ಆಗಲೇ ಆಗಿದ್ದಿತು. ನನಗೆ ಗಾಬರಿಯಾಯಿತು. ನಮ್ಮ ಸಂಕಟವನ್ನು ಕಪ್ತಾನನು ಹಡಗಿನ ಮೇಲಿನಿಂದ ನೋಡುತ್ತಿದ್ದನು. ಹಡಗು ಇನ್ನೂ ಐದು ನಿಮಿಷ ಹೆಚ್ಚಾಗಿ ನಿಲ್ಲಬೇಕೆಂದು ಆತ ಅಪ್ಪಣೆ ಕೊಟ್ಟಿದ್ದನು. ಹಡಗಿನ ಸಮೀಪ

ದಲ್ಲಿ ಮತ್ತೊಂದು ದೋಣಿ ಇದ್ದಿತು. ಮಿತ್ರರೊಬ್ಬರು ಅದನ್ನು ನನಗಾಗಿ ಹತ್ತು ರೂಪಾಯಿಗಳಿಗೆ ಗೊತ್ತುಮಾಡಿದರು. ಆ ದೋಣಿ, ತುಂಬಿದ್ದ ದೋಣಿಯಿಂದ ನನ್ನನ್ನು ಎತ್ತಿಕೊಂಡಿತು. ಹಡಗಿನ ಏಣಿಯನ್ನು ಆಗಲೇ ಮೇಲಕ್ಕೆ ಎತ್ತಿ ಕಟ್ಟಿದ್ದರು. ಆದುದರಿಂದ ನನ್ನನ್ನು ಒಂದು ಹಗ್ಗದಲ್ಲಿ ಕಟ್ಟಿ ಮೇಲಕ್ಕೆ ಎತ್ತಿಕೊಳ್ಳಬೇಕಾಯಿತು. ನಾನು ಹಡಗನ್ನು ಏರಿದ ಕೂಡಲೇ ಹಡಗು ಹೊರಟಿತು ದೋಣಿಯಲ್ಲಿದ್ದ ಇತರ ಪ್ರಯಾಣಿಕರು ಪಾಪ ! ಅದರಲ್ಲಿಯೇ ಉಳಿದರು. ಕಪ್ತಾನನು ಕೊಟ್ಟ ಎಚ್ಚರಿಕೆ ಈಗ ನನಗೆ ನಿಜವಾಗಿ ಅರ್ಥವಾಯಿತು.

ಲಾಮು ಆದನಂತರ ಮುಂದೆ ಬಂದ ಬಂದರು ಮೊಂಬಾಸಾ, ಅನಂತರದ ಬಂದರು ಸಾನ್ ಸಿಬಾರ್. ಸಾನ್‌ಸಿಬಾರ್‌ನಲ್ಲಿ ಬಹಳ ದಿನ ನಿಂತೆವು. ೮–೧೦ ದಿನ ಇರಬಹುದು. ಅನಂತರ ಇನ್ನೊಂದು ಹಡಗಿಗೆ ಬದಲಾಯಿಸಿ ಕೊಂಡೆವು.

ಕಪ್ತಾನನಿಗೆ ನನ್ನಲ್ಲಿ ಬಹಳ ವಿಶ್ವಾಸವುಂಟಾಗಿದ್ದಿತು. ಆದರೆ ಆ ವಿಶ್ವಾಸ ಒಂದು ಅಸಿಷ್ಟ ಮಾರ್ಗವನ್ನು ಹಿಡಿಯಿತು. ಅವನು ನನ್ನನ್ನೂ ತನ್ನ ಮತ್ತೊಬ್ಬ ಇಂಗ್ಲಿಷ್ ಮಿತ್ರನನ್ನೂ, ಹೊರಗೆ ಹೋಗಿ ತಿರುಗಾಡಿ ಕೊಂಡು ಬರಲು ಆಹ್ವಾನಿಸಿದನು ನಾವು ಅವನ ದೋಣಿಯಲ್ಲಿ ತೀರ ಪ್ರದೇಶಕ್ಕೆ ಹೋದೆವು. "ತಿರುಗಾಡಿಕೊಂಡು ಬರುವುದೆಂಬುದರ ಅರ್ಥ ವೇನೆಂಬುದು ನನಗೆ ತಿಳಿದಿರಲಿಲ್ಲ. ಅಂತಹ ವಿಷಯಗಳಲ್ಲಿ ನಾನು ಎಷ್ಟು ದಡ್ಡ ಎಂಬುದು ಕಪ್ತಾನನಿಗೂ ತಿಳಿದಿರಲಿಲ್ಲ. ಒಬ್ಬ ದಳ್ಳಾಳಿ, ನಮ್ಮನ್ನು ನೀಗ್ರೋ ಸ್ತ್ರೀಯರ ಗೃಹಗಳಿಗೆ ಕರೆದುಕೊಂಡು ಹೋದನು ನಮ್ಮಲ್ಲಿ ಪ್ರತಿಯೊಬ್ಬನನ್ನೂ ಒಂದೊಂದು ಕೊಠಡಿಗೆ ಸೇರಿಸಿದರು. ನಾನು ನಾಚಿಕೆ ಯಿಂದ ಮೂಕನಾಗಿ ನಿಂತಿದ್ದೆನು. ಪಾಪ ! ಆ ಹೆಂಗಸು ನನ್ನನ್ನು ಕುರಿತು ಏನು ಯೋಚಿಸಿಕೊಂಡಳೋ ದೇವರಿಗೆ ಗೊತ್ತು. ಕಪ್ತಾನನು ನನ್ನನ್ನು ಕರೆದಾಗ, ನಾನು ಒಳಕ್ಕೆ ಹೋಗಿದ್ದಂತೆಯೇ ಹೊರಕ್ಕೆ ಬಂದೆನು. ನನ್ನ ಅಕೃತ್ರಿಮ ಸ್ವಭಾವ ನನ್ನ ಮುಖದಲ್ಲಿಯೇ ಅವನಿಗೆ ಗೊತ್ತಾಯಿತು. ಮೊದಲು ನನಗೆ ತುಂಬ ಮಾನಭಂಗವಾದಂತೆ ಆಯಿತು. ಆದರೆ ಮುಂದೆ ಅದನ್ನು ಯೋಚಿಸಿದಾಗಲೆಲ್ಲ ಭಯಂಕರವಾದ ಜುಗುಪ್ಸೆ ನನಗೆ ಉಂಟಾಗು

ತ್ತಿದ್ದುದರಿಂದ ನನಗೆ ಮಾನಭಂಗವಾಯಿತೆಂಬ ಭಾವ ಬರುಬರುತ್ತಾ ಮರೆಯಾಯಿತು. ಆ ಹೆಂಗಸನ್ನು ಕಂಡಾಗ ನನ್ನ ಬುದ್ಧಿ ಕೆಟ್ಟ ಹಾದಿಯನ್ನು ಹಿಡಿಯದಿದ್ದುದಕ್ಕಾಗಿ ನಾನು ದೇವರನ್ನು ವಂದಿಸಿದೆನು. ಕೊಠಡಿಗೇ ಹೋಗುವುದಿಲ್ಲ ಎಂದು ಹೇಳಲು ನನಗೆ ಧೈರ್ಯವಿಲ್ಲದೆ ಹೋಯಿತಲ್ಲಾ ಎಂದು ನನ್ನ ದೌರ್ಬಲ್ಯದಲ್ಲಿ ನನಗೆ ಜುಗುಪ್ಸೆಯೂ, ನನ್ನ ಹೇಡಿತನಕ್ಕಾಗಿ ನನ್ನಲ್ಲಿಯೇ ನನಗೆ ಕನಿಕರವೂ ಉಂಟಾಯಿತು.

ನನ್ನ ಬಾಳಿನಲ್ಲಿ ಇದು ನನಗೆ ಆ ಬಗೆಯ ಮೂರನೆಯ ಪರೀಕ್ಷೆ ಆಗಿದ್ದಿತು. ಅನೇಕ ಯುವಕರು, ಪ್ರಾರಂಭದಲ್ಲಿ ಅವರಿಗೇನೂ ಗೊತ್ತಿಲ್ಲದೆ ತಾವು ಪರಿಶುದ್ಧರಾಗಿದ್ದರೂ, ತಮಗೆ ಮಾನಭಂಗವಾಗುವುದೆಂಬ ಭಯದಿಂದ ಅಕೃತ್ಯಕ್ಕೆ ಎಳೆಯಲ್ಪಟ್ಟಿರಬೇಕು. ನಾನು ಪಾಪಕೂಪದಿಂದ, ಪರಿಶುದ್ಧನಾಗಿ ಹೊರಕ್ಕೆ ಬಂದುದೇನೂ ನನ್ನ ಸದ್ಗುಣವಲ್ಲ. ಆ ಕೊಠಡಿಗೆ ಹೋಗುವುದಕ್ಕೆ ನಾನು ತಿರಸ್ಕರಿಸಿದ್ದರೆ ನನ್ನ ಸ್ವಪ್ರಯತ್ನದಿಂದ ನಾನು ಉಳಿದುಕೊಂಡೆನೆಂದು ಹೇಳಬಹುದಾಗಿದ್ದಿತು. ನನ್ನನ್ನು ರಕ್ಷಿಸುದುದಕ್ಕೆ ನಾನು ದಯಾಮಯನಾದ ಈಶ್ವರನನ್ನು ವಂದಿಸಬೇಕು ಈ ಸಂಗತಿಯಿಂದ ದೇವರಲ್ಲಿ ನನ್ನ ನಂಬಿಕೆ ಇನ್ನೂ ಹೆಚ್ಚು ದೃಢವಾಯಿತು. ಸುಳ್ಳು ನಾಚಿಕೆಯನ್ನು ತಕ್ಕಮಟ್ಟಿಗೆ ಬಿಡುವುದನ್ನೂ ಅದು ನನಗೆ ಕಲಿಸಿತು.

ನಾವು ಆ ಬಂದರಿನಲ್ಲಿ ಒಂದು ವಾರ ಕಾಲ ಇರಬೇಕಾಗಿದ್ದುದರಿಂದ ನಾನು ಊರೊಳಗೆ ಕೊಠಡಿಗಳನ್ನು ಗೊತ್ತು ಮಾಡಿಕೊಂಡು ಅಲ್ಲಿ ವಾಸ ಮಾಡತೊಡಗಿದೆನು. ಸುತ್ತಮುತ್ತ ತಿರುಗಾಡಿ ಅನೇಕ ವಿಷಯಗಳನ್ನು ನೋಡಿದೆನು. ಸಾನ್‌ಸಿಬಾರ್‌ನ ಸಸ್ಯ ಮತ್ತು ಹಸಿರು ವೃಕ್ಷ ವೈಭವ ಸಮೃದ್ಧಿಯನ್ನು ಮಲಬಾರಿಗೆ ಮಾತ್ರ ಹೋಲಿಸಬಹುದು. ದೈತ್ಯಾಕಾರದ ಮರಗಳನ್ನೂ ಗಾತ್ರವಾದ ಫಲಗಳನ್ನೂ ನೋಡಿ ನಾನು ಆಶ್ಚರ್ಯಗೊಂಡೆನು.

ಹಡಗು ನಿಂತ ಮುಂದಿನ ಬಂದರು ಮೊಸಾಂಬಿಕ್. ಅಲ್ಲಿಂದ ಹೊರಟು ಮೇ ತಿಂಗಳ ಕೊನೆಗೆ ನಾವು ನೆಟಾಲನ್ನು ತಲುಪಿದೆವು.

೭

ಕೆಲವು ಅನುಭವಗಳು

ನೆಟಾಲಿನ ಬಂದರು ಡರ್ಬನ್ ಎಂಬುದು. ಇದಕ್ಕೆ ಪ್ರೋರ್ಟ್ ನೆಟಾಲ್ ಎಂದೂ ಹೆಸರು. ನನ್ನನ್ನು ಎದುರುಗೊಳ್ಳಲು ಅಬ್ದುಲ್ಲಾ ಸೇಠರು ಬಂದರಿಗೆ ಬಂದಿದ್ದರು. ಹಡಗು ಬಂದರಿನ ಕಟ್ಟೆಯನ್ನು ಸೇರಿತು. ಜನರು ತಮ್ಮ ಮಿತ್ರರನ್ನು ಸಂಧಿಸಲು ಹಡಗಿಗೆ ಬರುತ್ತಿದ್ದರು. ಅಲ್ಲಿ ಭಾರತೀಯರನ್ನು ಹೆಚ್ಚು ಗೌರವದಿಂದಲೂ ಆದರದಿಂದಲೂ ಕಾಣುತ್ತಿರಲಿಲ್ಲವೆಂಬುದು ನನ್ನ ಕಣ್ಣಿಗೆ ಬಿದ್ದಿತು. ಅಬ್ದುಲ್ಲಾ ಸೇಠರ ಪರಿಚಯಸ್ಥರು ಅವರೊಡನೆ ಒಂದು ರೀತಿಯ ಒಣ ದೊಡ್ಡಸ್ತಿಕೆಯಿಂದ ನಡೆದುಕೊಳ್ಳುತ್ತಿದ್ದುದನ್ನೂ ನಾನು ಗಮನಿಸಿದೆನು. ಅದು ನನ್ನ ಮನಸ್ಸನ್ನು ಚುಚ್ಚಿತು. ಅಬ್ದುಲ್ಲಾ ಸೇಠರಿಗೆ ಅದು ಅಭ್ಯಾಸವಾಗಿ ಬಿಟ್ಟಿದ್ದಿತು. ನನ್ನನ್ನು ನೋಡಿದವರಿಗೆ ನನ್ನಲ್ಲಿ ಕೊಂಚ ಕುತೂಹಲವುಂಟಾಯಿತು. ನನ್ನ ಉಡುಪು, ಉಳಿದ ಭಾರತೀಯರಿಂದ ನನ್ನನ್ನು ಎತ್ತಿ ತೋರಿಸುತ್ತಿದ್ದಿತು. ನಾನು ಒಂದು ಫ್ರಾಕ್ ಕೋಟನ್ನೂ (ನೋಟು ಅಂಗಿ) ಬಂಗಾಳದವರ ಪಗರಿಯಂತಿರುವ ರುಮಾಲನ್ನು ಧರಿಸಿದ್ದೆನು.

ಅಬ್ದುಲ್ಲಾ ಸೇಠರು ನನ್ನನ್ನು ಕಂಪನಿಯ ವಸತಿಗೆ ಕರೆದುಕೊಂಡು ಹೋಗಿ ತಮ್ಮ ಕೊಠಡಿಯ ಮಗ್ಗುಲ ಕೋಣೆಯಲ್ಲಿ ಇಳಿಸಿದರು. ನನ್ನ ಮಾತು, ಅವರಿಗೆ ಅರ್ಥವಾಗುತ್ತಿರಲಿಲ್ಲ. ಅವರು ಹೇಳುವುದು ನನಗೆ ತಿಳಿಯುತ್ತಿರಲಿಲ್ಲ. ಅವರ ಸಹೋದರರಿಂದ ನಾನು ತಂದಿದ್ದ ಕಾಗದವನ್ನು ಅವರು ಪೂರ್ಣವಾಗಿ ಮೇಲಿನಿಂದ ಕೆಳಕ್ಕೆ ಓದಿದರು. ಆದರಿಂದ ಅವರು ಮತ್ತಷ್ಟು ಗೊಂದಲದಲ್ಲಿ ಬಿದ್ದರು.

ತಮ್ಮ ಸಹೋದರ ತಮಗೆ ಒಂದು ಬಿಳಿಯ ಆನೆಯನ್ನು ಕಳುಹಿಸಿದ್ದಾನೆಂದೇ ಅವರು ಭಾವಿಸಿದರು. ನನ್ನ ಉಡುಪಿನ ಮಾದರಿ, ಜೀವನ ಕ್ರಮ ಇವೆಲ್ಲ ಯೂರೋಪಿನವರ ಪದ್ಧತಿಯಾಗಿ ಬಹಳ ವೆಚ್ಚ ತಗಲುವುದೆಂದು ಅವರು ಯೋಚಿಸಿದರು. ನನಗೆ ವಹಿಸಬಹುದಾದಂಥ, ವಿಶಿಷ್ಟವಾದ ಯಾವ ಕಾರ್ಯವೂ ಆಗ ಅವರಲ್ಲಿ ಇರಲಿಲ್ಲ. ಅವರ ಮೊಕದ್ದಮೆ

ನಡೆಯುತ್ತಿದ್ದುದು ಟ್ರಾನ್ಸ್‌ವಾಲ್‌ನಲ್ಲಿ. ತತ್‌ಕ್ಷಣ ನನ್ನನ್ನು ಅಲ್ಲಿಗೆ ಕಳುಹಿಸುವುದರಲ್ಲಿ ಅರ್ಥವಿರಲಿಲ್ಲ. ಎಷ್ಟರ ಮಟ್ಟಿಗೆ ನನ್ನಲ್ಲಿ ಯೋಗ್ಯತೆಯೂ ಪ್ರಾಮಾಣಿಕತೆಯೂ ಇವೆಯೆಂದು, ಅವರು ಪರೀಕ್ಷಿಸಬೇಕಾಗಿತ್ತು. ನನ್ನ ಮೇಲೆ ಕಣ್ಣಿಟ್ಟಿರಲು ಪ್ರಿಟೋರಿಯದಲ್ಲಿರುವುದು (ಟ್ರಾನ್ಸ್‌ವಾಲಿನ ರಾಜಧಾನಿ) ಸಾಧ್ಯವಿರಲಿಲ್ಲ. ಪ್ರತಿವಾದಿಗಳು ಇದ್ದುದು ಪ್ರಿಟೋರಿಯದಲ್ಲಿ. ಅವರು ನನ್ನ ಮೇಲೆ ಅಯುಕ್ತವಾದ ಪ್ರಭಾವವನ್ನು ತಂದು ನನ್ನನ್ನು ಒಳಗೊಳಗೆ ತಮ್ಮ ಹಾಗೆ ಮಾಡಿಕೊಂಡರೆ ಹೇಗೆ? ಮೊಕದ್ದಮೆಗೆ ಸಂಬಂಧಪಟ್ಟ ಕಾರ್ಯವನ್ನು ನನಗೆ ವಹಿಸಲು ಸಾಧ್ಯವಾಗದಿದ್ದಲ್ಲಿ, ನನಗೆ ಕೊಡಬಹುದಾದಂತಹ ಕಾರ್ಯವಾವುದು? ಮೊಕದ್ದಮೆಯ ಕಾರ್ಯದ ಹೊರತು ಉಳಿದ ಕಾರ್ಯವನ್ನೆಲ್ಲ ಗುಮಾಸ್ತರೇ ನನಗಿಂತ ಉತ್ತಮವಾಗಿ ಮಾಡಬಲ್ಲವರಾಗಿದ್ದರು. ತಪ್ಪು ಮಾಡಿದರೆ, ಗುಮಾಸ್ತರಿಗೆ ಶಿಕ್ಷೆ ಮಾಡಲು ಸಾಧ್ಯವಿದ್ದಿತು. ನಾನು ತಪ್ಪು ಮಾಡಿದರೆ ನನ್ನನ್ನು ಶಿಕ್ಷಿಸಲು ಸಾಧ್ಯವಿದ್ದಿತೇ? ಆದುದರಿಂದ ಮೊಕದ್ದಮೆಗೆ ಸಂಬಂಧಪಟ್ಟ ಯಾವ ಕಾರ್ಯವನ್ನೂ ನನಗೆ ವಹಿಸಲು ಸಾಧ್ಯವಿಲ್ಲವಾಗುವುದಾದರೆ, ಯಾವ ಕೆಲಸವೂ ಇಲ್ಲದೆ ನನ್ನನ್ನು ಸುಮ್ಮನೆ ಮೊಕದ್ದಮೆಗಾಗಿ ಕಾಯುತ್ತಾ ಇಟ್ಟುಕೊಳ್ಳಬೇಕು. ಈ ಯೋಚನೆಗಳೆಲ್ಲ ಅವರಿಗೆ ಹೊಳೆದುವು.

ಸೇಠ್ ಅಬ್ದುಲ್ಲಾರವರಿಗೆ ಅಕ್ಷರಜ್ಞಾನ ಇರಲೇ ಇಲ್ಲವೆಂದು ಹೇಳಬಹುದು. ಆದರೆ ಅವರ ಅನುಭವ ಆಳವಾಗಿದ್ದಿತು. ಅವರ ಬುದ್ಧಿ ಬಹಳ ಚುರುಕಾಗಿದ್ದಿತು. ಅದು ಅವರಿಗೂ ಗೊತ್ತಿದ್ದಿತು. ಅಭ್ಯಾಸದಿಂದ ಅವರು ಮಾತುಕತೆಗೆ ಸಾಕಾದಷ್ಟು ಇಂಗ್ಲಿಷ್ ಭಾಷೆಯ ಜ್ಞಾನವನ್ನು ಸಂಪಾದಿಸಿಕೊಂಡಿದ್ದರು. ಬ್ಯಾಂಕ್ ಮ್ಯಾನೇಜರೊಂದಿಗೆ ವ್ಯವಹರಿಸುವುದಕ್ಕೆ, ಐರೋಪ್ಯ ವ್ಯಾಪಾರಿಗಳೊಂದಿಗೆ ಸಂಭಾಷಣೆ ನಡೆಸುವುದಕ್ಕೆ, ತಮ್ಮ ವಕೀಲರಿಗೆ ತಮ್ಮ ಮೊಕದ್ದಮೆಯ ವಿವರಗಳನ್ನು ಚರ್ಚಿಸುವುದಕ್ಕೆ ಇವೇ ಮುಂತಾದ ತಮ್ಮ ವ್ಯಾಪಾರ ಕೆಲಸಗಳಿಗೆಲ್ಲ ಅವರಿಗೆ ಗೊತ್ತಿದ್ದ ಇಂಗ್ಲಿಷು ಸಾಕಾಗಿದ್ದಿತು. ಭಾರತೀಯರು ಅವರನ್ನು ತುಂಬ ಮರ್ಯಾದೆಯಿಂದ ಕಾಣುತ್ತಿದ್ದರು. ಅವರ ಕಂಪೆನಿಯೇ ಆಗಿನ ಕಾಲಕ್ಕೆ ಅತ್ಯಂತ ದೊಡ್ಡ ಭಾರತೀಯ ಕಂಪೆನಿ ಎಂದು ಹೇಳಬಹುದಾಗಿದ್ದಿತು,

ಅಥವಾ ಅತಿ ದೊಡ್ಡ ಭಾರತೀಯ ಕಂಪೆನಿಗಳ ಪೈಕಿ ಅದೊಂದು. ಇಷ್ಟೆಲ್ಲ ಅನುಕೂಲಗಳಿದ್ದರೂ ಸೇಠರಲ್ಲಿ ಒಂದು ಕುಂದಕವಿದ್ದಿತು. ಅದು ಅವರ ಸಂಶಯ ಸ್ವಭಾವ.

ಇಸ್ಲಾಂ ಮತವೆಂದರೆ ಅವರಿಗೆ ಹೆಮ್ಮೆ; ಅಭಿಮಾನ. ಆ ಧರ್ಮ ತತ್ವಗಳನ್ನು ಕುರಿತು ಚರ್ಚಿಸಲು ಇಷ್ಟ. ಅವರಿಗೆ ಅರಬ್ಬೀ ಭಾಷೆ ಬರದಿದ್ದರೂ, ಪವಿತ್ರ ಕುರಾನ್ ಮತ್ತು ಇತರ ಇಸ್ಲಾಂ ಸಾಹಿತ್ಯ ಪರಿಚಯ ಅವರಿಗೆ ತಕ್ಕ ಮಟ್ಟಿಗೆ ಚೆನ್ನಾಗಿ ಇದ್ದಿತು. ಅಸಂಖ್ಯಾತ ದೃಷ್ಟಾಂತಗಳು, ಅವರ ನಾಲಿಗೆಯ ತುದಿಯಲ್ಲಿಯೇ ಇರುತ್ತಿದ್ದವು. ಅವರ ಜತೆಯಲ್ಲಿ ಸಂಪರ್ಕ ದಿಂದ ನನಗೆ ಇಸ್ಲಾಂ ಮತದ ವ್ಯಾವಹಾರಿಕ ಜ್ಞಾನ ತಕ್ಕಮಟ್ಟಿಗೆ ಚೆನ್ನಾಗಿಯೇ ಆಯಿತು. ಮುಂದೆ ನಮಗೆ ನಿಕಟ ಪರಿಚಯವಾದಾಗ, ನಾವು ಧಾರ್ಮಿಕ ವಿಷಯಗಳನ್ನು ಕುರಿತು ವಿಸ್ತಾರವಾದ ಚರ್ಚೆಗಳನ್ನು ಮಾಡುತ್ತಿದ್ದೆವು.

ನಾನು ಅಲ್ಲಿಗೆ ಹೋದ ಎರಡು ಮೂರು ದಿನಗಳೊಳಗೆ, ಸೇಠರು ನನ್ನನ್ನು ಡರ್ಬನ್ ನ್ಯಾಯಸ್ಥಾನಕ್ಕೆ ಕರೆದುಕೊಂಡು ಹೋದರು. ಅಲ್ಲಿ ಅವರು ನನ್ನನ್ನು ಅನೇಕರಿಗೆ ಪರಿಚಯ ಮಾಡಿಸಿ ತಮ್ಮ ಅಟಾರ್ನಿಯವರ ಮಗ್ಗುಲಲ್ಲಿ ನನ್ನನ್ನು ಕೂರಿಸಿದರು. ಮ್ಯಾಜಿಸ್ಟ್ರೇಟ್‌ರು ನನ್ನನ್ನೇ ದುರುಗುಟ್ಟಿಕೊಂಡು ನೋಡಿದರು. ಕೊನೆಗೆ "ನಿಮ್ಮ ರುಮಾಲನ್ನು ತೆಗೆಯಿರಿ" ಎಂದು ನನಗೆ ಹೇಳಿದರು. ರುಮಾಲನ್ನು ತೆಗೆಯಲು ನಾನು ತಿರಸ್ಕರಿಸಿ ನ್ಯಾಯಾಸ್ಥಾನವನ್ನು ಬಿಟ್ಟು ಹೊರಕ್ಕೆ ಬಂದೆನು.

ಕೆಲವು ಭಾರತೀಯರು ಮಾತ್ರ ಏಕೆ ರುಮಾಲನ್ನು ತೆಗೆಯಬೇಕೆಂಬ ವಿಷಯಗಳನ್ನು ಸೇಠ್ ಅಬ್ದುಲ್ಲಾ ನನಗೆ ವಿವರಿಸಿದರು.

ಹೀಗೆ ಇಲ್ಲಿಯೂ ನನಗೆ ಹೋರಾಟ ಕಾದಿದ್ದಿತು. ಮುಸಲ್ಮಾನರ ಉಡುಪನ್ನು ಧರಿಸಿರುವವರು ಬೇಕಾದರೆ ರುಮಾಲನ್ನು ಧರಿಸಿರಬಹುದು. ಆದರೆ ಇತರ ಭಾರತೀಯರು ನ್ಯಾಯಸ್ಥಾನವನ್ನು ಪ್ರವೇಶಿಸಿದ ಕೂಡಲೇ ರುಮಾಲನ್ನು ಕಡ್ಡಾಯವಾಗಿ ತೆಗೆಯಬೇಕೆಂದು ಅವರು ಹೇಳಿದರು.

ಈ ಸೂಕ್ಷ್ಮ ವ್ಯತ್ಯಾಸ ತಿಳಿಯಬೇಕಾದರೆ ಕೆಲವು ವಿವರಗಳನ್ನು ಹೇಳ ಬೇಕಾಗಿದೆ. ನಾನು ದಕ್ಷಿಣ ಆಫ್ರಿಕಾದಲ್ಲಿದ್ದ ಎರಡು ಮೂರು ದಿನಗಳಲ್ಲಿ

ಕೆಲವು ಸಂಗತಿಗಳು ನನಗೆ ಗೊತ್ತಾಗಿದ್ದುವು. ಅಲ್ಲಿಯ ಭಾರತೀಯರಲ್ಲಿ ಎರಡು ಮೂರು ಪಂಗಡಗಳಿದ್ದುವು. ಒಂದು, ಮುಸಲ್ಮಾನ್ ವರ್ತಕರ ಪಂಗಡ. ಅವರು ತಮ್ಮನ್ನು ಅರಬ್ಬರು ಎಂದು ಕರೆದುಕೊಳ್ಳುತ್ತಿದ್ದರು. ಮತ್ತೊಂದು ಪಂಗಡ ಹಿಂದೂಗಳದು ; ಇನ್ನೊಂದು ಪಂಗಡ ಪಾರಸೀ ಗುಮಾಸ್ತರದು. ಹಿಂದೂ ಗುಮಾಸ್ತರು ಯಾವ ಪಂಗಡಕ್ಕೂ ಸೇರದವರು. ಅವರು "ಅರಬ್ಬ"ರೊಂದಿಗೆ ಬೇಕಾದರೆ ಸೇರಿಕೊಳ್ಳಬಹುದಾಗಿದ್ದಿತು. ಪಾರಸೀ ಗುಮಾಸ್ತರು ತಮ್ಮನ್ನು ಪರ್ಶಿಯನ್ನರೆಂದು ಕರೆದುಕೊಳ್ಳುತ್ತಿದ್ದರು. ಈ ಮೂರು ವರ್ಗಗಳೂ ಪರಸ್ಪರ ಕೆಲವು ಸಾಮಾಜಿಕ ಸಂಬಂಧಗಳನ್ನು ಹೊಂದಿದ್ದುವು. ಆದರೆ ಎಲ್ಲದಕ್ಕಿಂತ ಹೆಚ್ಚಾದ ದೊಡ್ಡ ಪಂಗಡ, ಕರಾರು ಬದ್ಧ ಮತ್ತು ಸ್ವತಂತ್ರರಾದ ಕೂಲಿಗಳನ್ನೊಳಗೊಂಡ ತಮಿಳು, ತೆಲುಗು ಮತ್ತು ಉತ್ತರ ಭಾರತದವರ ಪಂಗಡ. ಕರಾರುಬದ್ಧ ಕೂಲಿಗಳು, ಎಂದರೆ ನೆಟಾಲಿನಲ್ಲಿ ಕೆಲಸ ಮಾಡಲು ಐದು ವರುಷಗಳ ಕರಾರಿಗೆ ಭಾರತ ದಿಂದ ಒಪ್ಪಿ ಹೋದವರು. ಇವರಿಗೆ ಗಿರಮಿಟಿಯರು ಎಂದೂ ಹೆಸರು. ಇದು ಇಂಗ್ಲಿಷಿನ ಅಗ್ರಿಮೆಂಟ್ ಎಂಬ ಶಬ್ದದ ಅಪಭ್ರಂಶದಿಂದ ಹುಟ್ಟಿ ದುದು. ಮೊದಲು ಹೇಳಿದ ಮೂರು ಪಂಗಡದವರಿಗೆ, ಈ ಕೂಲಿ ಗಳೊಂದಿಗೆ ಕೆಲಸ ಕಾರ್ಯ ವ್ಯಾಪಾರದ ಸಂಬಂಧವಿದ್ದಿತೇ ಹೊರತು ಮತ್ತಾವುದೂ ಸಂಬಂಧವಿರಲಿಲ್ಲ. ಇಂಗ್ಲಿಷ್‌ನವರು ಇವರನ್ನು ಕೂಲಿ ಗಳೆಂದು ಕರೆಯುತ್ತಿದ್ದರು. ಭಾರತೀಯರ ಬಹು ಭಾಗ ಕೂಲಿಗಳಾಗಿ ದ್ದುದರಿಂದ, ಎಲ್ಲ ಭಾರತೀಯರನ್ನು "ಸಾಮಿ" ಅಥವಾ ಕೂಲಿಗಳೆಂದೇ ಕರೆಯುತ್ತಿದ್ದರು. ತಮಿಳು ಹೆಸರುಗಳ ಕೊನೆಯಲ್ಲಿ "ಸಾಮಿ" ಎಂಬ ಪದ ಇರುತ್ತದೆ. ಅದು ಸಂಸ್ಕೃತದ ಸ್ವಾಮಿ ಅಥವಾ ಯಜಮಾನ ಎಂಬ ಮಾತಿಗೆ ಸಮಾನಾದುದು. ಭಾರತೀಯನನ್ನು ಕೂಲಿ ಎಂದು ಕರೆದಾಗ ಅವನಿಗೆ ಅಸಮಾಧಾನವಾಗುತ್ತಿದ್ದಿತು. ಆದರೆ ಅವನು ಚತುರನಾದರೆ ಮಾತನ್ನು ಹೀಗೆ ಹಿಂದಿರುಗಿಸುತ್ತಿದ್ದನು : "ನೀವು ನನ್ನನ್ನೇನೋ ಸಾಮಿ ಎಂದು ಕರೆಯುತ್ತೀರಿ. ಆದರೆ ಸಾಮಿ ಎಂದರೆ ಯಜಮಾನ. ನಾನು ನಿಮ್ಮ ಯಜಮಾನನಲ್ಲವಲ್ಲ!" ಇದನ್ನು ಕೇಳಿ ಕೆಲವು ಇಂಗ್ಲಿಷಿನವರಿಗೆ ಅಳುಕು ಉಂಟಾಗುತ್ತಿದ್ದಿತು ; ಕೆಲವರು ಸಿಟ್ಟಿಗೇಳುತ್ತಿದ್ದರು ; ಬಯ್ಯು

ತ್ತಿದ್ದರು. ಅವಕಾಶ ದೊರೆತರೆ ಹೊಡೆಯೂ ಬಿಡುತ್ತಿದ್ದರು. ಏಕೆಂದರೆ ಸಾಮಿ ಎಂಬುದು ತಿರಸ್ಕಾರದ ಮಾತು, ಈ ವಿಷಯ ಅವರಿಗೆ ಗೊತ್ತಿತ್ತು. ಅದು ಯಜಮಾನ ಎಂದು ಅರ್ಥಮಾಡುವುದಾದರೆ ಕರೆದವರಿಗೆ ಅವಮಾನ ಮಾಡಿದಂತೆ ತಾನೆ !

ಆದುದರಿಂದ ನನ್ನನ್ನು ಕೂಲಿ ಬ್ಯಾರಿಸ್ಟರ್ ಎಂದು ಕರೆಯುತ್ತಿದ್ದರು. ವರ್ತಕರನ್ನು "ಕೂಲಿ ವರ್ತಕ" ರೆಂದು ಕರೆಯುತ್ತಿದ್ದರು ; ಕೂಲಿ ಎಂಬ ಪದದ ಮೂಲ ಅರ್ಥ, ಮರೆತು ಹೋಗಿ ಭಾರತೀಯರಿಗೆಲ್ಲ ಅದೇ ಹೆಸರಾಯಿತು. ಮುಸಲ್ಮಾನ ವರ್ತಕರಿಗೆ ತಮ್ಮನ್ನು ಕೂಲಿಗಳೆಂದು ಕರೆದರೆ ಕೋಪ ಬರುತ್ತಿದ್ದಿತು. ಅವರು "ನಾನು ಕೂಲಿಯಲ್ಲ. ನಾನು ಅರಬ್" ಎನ್ನುತ್ತಿದ್ದರು. ಅಥವಾ "ನಾನು ವ್ಯಾಪಾರಿ" ಎನ್ನುತ್ತಿದ್ದರು. ಇಂಗ್ಲಿಷಿನವನು ವಿನೀತನಾದವನಾದರೆ, ಹಾಗೇ ಕರೆಯುವುದಕ್ಕೆ ಕ್ಷಮೆ ಬೇಡುತ್ತಿದ್ದನು.

ಇಂತಹ ಪರಿಸ್ಥಿತಿಯಲ್ಲಿ ರುಮಾಲನ್ನು ಧರಿಸುವ ಪ್ರಶ್ನೆಗೆ ಬಹಳ ಪ್ರಾಮುಖ್ಯತೆ ದೊರೆಯುತ್ತಿದ್ದಿತು. ತಾನು ಧರಿಸಿದ್ದ ಭಾರತೀಯ ರುಮಾಲನ್ನು ತೆಗೆಯುವುದೆಂದರೆ ದೊಡ್ಡ ಅವಮಾನವನ್ನು ಸಹಿಸಿದಂತೆ ಆಗುತ್ತಿದ್ದಿತು. ಆದುದರಿಂದ ರುಮಾಲಿಗೆ ಶರಣು ಹೊಡೆದು ಫರಂಗಿ ಹ್ಯಾಟನ್ನು ಧರಿಸಿಕೊಂಡರೆ ಇಂತಹ ಅವಮಾನ ಪ್ರಸಂಗಗಳಿಂದಲೂ ಅದರ ಸಂಬಂಧದ ವಾದವಿವಾದದಿಂದಲೂ ತಪ್ಪಿಸಿಕೊಳ್ಳಬಹುದೆಂದು ನನಗೆ ತೋರಿತು.

"ಆದರೆ ಸೇಟ್ ಅಬ್ದುಲ್ಲಾ ನನ್ನ ಅಭಿಪ್ರಾಯವನ್ನು ಒಪ್ಪಲಿಲ್ಲ. "ನೀವು ಹಾಗೇನಾದರೂ ಮಾಡಿದರೆ ಅದರ ಪರಿಣಾಮ ಬಹಳ ಕೆಟ್ಟದ್ದಾಗುತ್ತದೆ. ಭಾರತದ ರುಮಾಲನ್ನೇ ಹಾಕಿಕೊಳ್ಳುವೆವೆಂದು ದೃಢಸಂಕಲ್ಪ ಹೊಂದಿರುವ ಬ್ಯಾರಿಸ್ಟರರ ಸ್ಥಿತಿ, ಸಂಕಟಕ್ಕೆ ಈಡಾಗುವುದು. ರುಮಾಲು ನಿಮ್ಮ ತಲೆಗೆ ಬಹಳ ಚೆನ್ನಾಗಿ ಒಪ್ಪುತ್ತದೆ. ನೀವು ಇಂಗ್ಲಿಷ್ ಹ್ಯಾಟನ್ನು ಧರಿಸಿದರೆ ನೀವು ಪರಿಚಾರಕನಂತೆ (waiter) ಕಾಣುತ್ತೀರಿ" ಎಂದು ಹೇಳಿದರು.

ಈ ಸಲಹೆಯಲ್ಲಿ ದೇಶಪ್ರೇಮ ವ್ಯವಹಾರ ಕುಶಲತೆ ಮತ್ತು ಸ್ವಲ್ಪ ಸಂಕುಚಿತ ಭಾವ ಎಲ್ಲ ಇದ್ದವು. ವ್ಯವಹಾರ ಕುಶಲತೆ ಎದ್ದು ಕಾಣು ತ್ತಿದ್ದಿತು. ರುಮಾಲನ್ನು ಧರಿಸಬೇಕೆಂದು ಹೇಳಲು ಕಾರಣ ಅವರ ದೇಶ ಪ್ರೇಮವೆ. ಪರಿಚಾರಕನಾಗಿ (Waiter) ಕಾಣುತ್ತೇನೆಂಬ ತಿರಸ್ಕಾರದಲ್ಲಿ ಸಂಕುಚಿತ ಬುದ್ಧಿ ವ್ಯಕ್ತವಾಗುತ್ತಿದ್ದಿತು. ಕರಾರು ಬದ್ಧ ಕೂಲಿಗಳೂ ಮೂರು ಪಂಗಡವಾಗಿದ್ದರು : ಹಿಂದೂ, ಮುಸಲ್ಮಾನ್ ಮತ್ತು ಕ್ರೈಸ್ತರು. ಕೊನೆಯವರು, ಕ್ರೈಸ್ತರಾಗಿ ಮತಾಂತರ ಹೊಂದಿದ ಭಾರತದ ಕರಾರು ಬದ್ಧ ಕೂಲಿಗಳ ಮಕ್ಕಳು. ೧೮೯೩ರಲ್ಲಿಯೇ ಅವರ ಸಂಖ್ಯೆ ದೊಡ್ಡ ದಾಗಿದ್ದಿತು. ಅವರು ಇಂಗ್ಲಿಷ್ ಪೋಷಾಕು ಧರಿಸುತ್ತಿದ್ದರು ; ಅವರಲ್ಲಿ ಬಹು ಸಂಖ್ಯೆಯವರು ಹೋಟೆಲುಗಳಲ್ಲಿ ಪರಿಚಾರಕರಾಗಿ ತಮ್ಮ ಜೀವನ ವನ್ನು ಸಂಪಾದಿಸಿಕೊಳ್ಳುತ್ತಿದ್ದರು. ಇಂಗ್ಲಿಷು ಹ್ಯಾಟನ್ನು ಕುರಿತು ಸೇಠ್ ಅಬ್ದುಲ್ಲಾರವರು ತಿರಸ್ಕಾರವಾಗಿ ಮಾತನಾಡಿದುದು ಈ ಪರಿಚಾರಕರುಗಳ ವರ್ಗವನ್ನು ಮನಸ್ಸಿನಲ್ಲಿಟ್ಟುಕೊಂಡು. ಹೋಟೆಲುಗಳಲ್ಲಿ ಪರಿಚಾರಕರಾಗಿ ಸೇವೆ ಮಾಡುವುದು ಮಾನಕ್ಕೆ ಕಡಿಮೆ ಎಂಬ ಎಣಿಕೆಯಿದ್ದಿತು. ಇಂದಿಗೂ ಅನೇಕರಲ್ಲಿ ಇದೇ ಬಗೆಯ ನಂಬಿಕೆ ಇದೆ.

ಒಟ್ಟಿನಲ್ಲಿ ನಾನು ಅಬ್ದುಲ್ಲಾ ಸೇಠರ ಸಲಹೆಯನ್ನು ಒಪ್ಪಿದೆನು. ವಿಷಯವನ್ನು ನಾನು ಪತ್ರಿಕೆಗಳಿಗೆಲ್ಲ ಬರೆದು, ನ್ಯಾಯಸ್ಥಾನದಲ್ಲಿ ನಾನು ರುಮಾಲನ್ನು ಧರಿಸುವುದೇ ನ್ಯಾಯ ಎಂದು ಪ್ರತಿಪಾದಿಸಿದೆನು. ಪತ್ರಿಕೆ ಗಳಲ್ಲಿ ಈ ವಿಷಯ ಬಹಳ ಚರ್ಚೆಯಾಯಿತು. ಪತ್ರಿಕೆಗಳು ನನ್ನನ್ನು ಬೇಡದ ಅತಿಥಿ (ಅನಿಮಂತ್ರಿತ ಅತಿಥಿ) ಎಂದು ವರ್ಣಿಸಿದವು. ಹೀಗೆ ಈ ಸಂಗತಿಯಿಂದ ನಾನು ಆಫ್ರಿಕಾಕ್ಕೆ ಬಂದ ಕೆಲವೇ ದಿನಗಳಲ್ಲಿ ನನಗೆ ಅನಿರೀಕ್ಷಿತ ವಾದ ಪ್ರಸಿದ್ಧಿಯುಂಟಾಯಿತು. ಕೆಲವರು ನಾನು ಮಾಡಿದುದು ಸರಿ ಎಂದರು. ಇತರರು ನನ್ನ ಧೂರ್ತತನವನ್ನು ಬಲವಾಗಿ ಟೀಕಿಸಿದರು.

ನನ್ನ ರುಮಾಲು, ನಾನು ದಕ್ಷಿಣ ಆಫ್ರಿಕಾದಲ್ಲಿರುವವರೆಗೆ ಸ್ವಲ್ಪ ಹೆಚ್ಚು ಕಡಿಮೆ ನನ್ನ ಜತೆಯಲ್ಲಿಯೇ ಇದ್ದಿತು. ನಾನು ದಕ್ಷಿಣ ಆಫ್ರಿಕಾದಲ್ಲಿ ಯಾವಾಗ ಮತ್ತು ಏಕೆ ಯಾವ ತಲೆಯುಡಿಗೆಯನ್ನು ಬಿಟ್ಟುಬಿಟ್ಟೆನೆಂಬುದು ಮುಂದೆ ಗೊತ್ತಾಗುವುದು.

೮

ಪ್ರಿಟೋರಿಯಾಕ್ಕೆ ಹೋಗುವಾಗ

ಡರ್ಬಾನಲ್ಲಿ ವಾಸಿಸುತ್ತಿದ್ದ ಭಾರತೀಯ ಕ್ರೈಸ್ತರೊಂದಿಗೆ, ನನಗೆ ಬಹು ಬೇಗ ಸಂಪರ್ಕವುಂಟಾಯಿತು. ನ್ಯಾಯಾಲಯದ ದುಬಾಷಿಯಾಗಿದ್ದ ಶ್ರೀಪಾಲರು ರೋಮನ್ ಕ್ಯಾಥೊಲಿಕರಾಗಿದ್ದರು. ನನಗೆ ಅವರ ಪರಿಚಯ ವಾಯಿತು. ಹಾಗೆಯೇ ನನಗೆ ಆಗ ಪ್ರಾಟಸ್ಟೆಂಟ್ ಮಿಷನ್ನಿನಲ್ಲಿ ಉಪಾಧ್ಯಾಯರಾಗಿದ್ದ ಸುಭಾನ್ ಗಾಡ್‌ಫ್ರೇಯವರ ಪರಿಚಯವೂ ಆಯಿತು. ಅವರು ೧೯೨೪ರಲ್ಲಿ ಭಾರತಕ್ಕೆ ಆಗಮಿಸಿದ ದಕ್ಷಿಣ ಆಫ್ರಿಕಾದ ನಿಯೋಗದ ಸದಸ್ಯರಾದ ಮಿ. ಜೇಮ್ಸ್‌ಗಾಡ್ ಫ್ರೇಯವರ ತಂದೆಯವರು. ನಾನು ಸ್ವಲ್ಪ ಹೆಚ್ಚು ಕಡಿಮೆ ಅದೇ ಕಾಲದಲ್ಲಿಯೇ ದಿವಂಗತ ಪಾರ್ಸೀ ರುಸ್ತುಂಜೀ ಮತ್ತು ದಿವಂಗತ ಆಡಂಜೀ ಮಿಯಾಖಾನ್ ಇವರನ್ನೂ ಸಂಧಿಸಿದೆನು. ಅಲ್ಲಿಯವರಿಗೆ ವ್ಯಾಪಾರೋದ್ಯಮಕ್ಕಾಗಿ ಮಾತ್ರವೇ ಆಗಾಗ್ಗೆ ಸೇರುತ್ತಿದ್ದ ಈ ಎಲ್ಲ ಮಿತ್ರರೂ ಒಬ್ಬರೊಂದಿಗೆ ಒಬ್ಬರು ನಿಕಟ ಬಾಂಧವ್ಯವನ್ನು ಹೊಂದಿದರು. ಈ ವಿಷಯ ಮುಂದೆ ನೋಡೋಣ.

ನಾನು ಹೀಗೆ ನನ್ನ ಪರಿಚಯವನ್ನು ವಿಸ್ತಾರಗೊಳಿಸುವುದರಲ್ಲಿ ನಿರತನಾಗಿದ್ದಾಗ, ದಾದಾ ಅಬ್ದುಲ್ಲಾ ಸೇಠರಿಗೆ ಅವರ ವಕೀಲರಿಂದ ಕಾಗದ ಬಂದಿತು. "ಮೊಕದ್ದಮೆ ನಡೆಸಲು ಸಿದ್ಧರಾಗಬೇಕಾಗಿದೆ. ನೀವೇ ಪ್ರಿಟೋರಿಯಾಕ್ಕೆ ಬನ್ನಿ. ಇಲ್ಲದಿದ್ದರೆ ನಿಮ್ಮ ಪ್ರತಿನಿಧಿ ಒಬ್ಬರನ್ನು ಕಳುಹಿಸಿ" ಎಂದು.

ಅಬ್ದುಲ್ಲಾ ಸೇಠರು "ಓದಿ" ಎಂದು ಕಾಗದವನ್ನು ನನಗೆ ಕೊಟ್ಟರು. "ಪ್ರಿಟೋರಿಯಾಕ್ಕೆ ನೀವು ಹೋಗುತ್ತೀರಾ ?" ಎಂದು ಕೇಳಿದರು. ನಾನು "ನಿಮ್ಮಿಂದ ಮೊಕದ್ದಮೆಯ ವಿವರಗಳನ್ನು ತಿಳಿದುಕೊಂಡು ನಂತರ ಹೇಳುತ್ತೇನೆ. ಅಲ್ಲಿ ನಾನು ಹೋಗಿ ಮಾಡಬೇಕಾದುದು ಏನು ಎಂಬುದು ನನಗೆ ಸ್ವಲ್ಪವೂ ತಿಳಿಯದು" ಎಂದು ಹೇಳಿದೆನು. ಅವರು ಮೊಕದ್ದಮೆಯ ವಿಷಯವನ್ನು ನನಗೆ ತಿಳಿಸುವಂತೆ ಗುಮಾಸ್ತರಿಗೆ ಹೇಳಿದರು

ಮೊಕದ್ದಮೆಯ ಅಧ್ಯಯನವನ್ನು ನಾನು ಪ್ರಾರಂಭಿಸಿದೆನು. ಓದುತ್ತಾ ಓದುತ್ತಾ ಅದನ್ನು ಪ್ರಾರಂಭದಿಂದಲೇ ಮೊದಲು ಮಾಡಬೇಕೆಂದು ನನಗೆ ತೋರಿತು. ನಾನು ಸಾನ್‌ಸಿಬಾರ್‌ನಲ್ಲಿದ್ದ ಕೆಲವು ದಿವಸಗಳು ಅಲ್ಲಿಯ ನ್ಯಾಯಸ್ಥಾನಕ್ಕೆ ಕಾರ್ಯವನ್ನು ನೋಡಲು ಹೋಗಿದ್ದೆನು. ಒಬ್ಬ ಪಾರಸೀ ವಕೀಲರು ಸಾಕ್ಷಿಯನ್ನು ವಿಚಾರಣೆ ಮಾಡುತ್ತಿದ್ದರು. ಲೆಕ್ಕದ ಪುಸ್ತಕದಲ್ಲಿದ್ದ ಜಮಾ ಖರ್ಚು ಅಂಕಿ ಅಂಶಗಳನ್ನು ಕುರಿತು ಪ್ರಶ್ನೆ ಹಾಕುತ್ತಿದ್ದರು ಅವೊಂದೂ ನನಗೆ ಅರ್ಥವಾಗಲಿಲ್ಲ. ಲೆಕ್ಕಗಳನ್ನು ಜಮಾ ಖರ್ಚು ಬರೆಯುವುದನ್ನು ನಾನು ಪಾಠಶಾಲೆಗೆ ಹೋದಾಗಲೂ ಕಲಿಯಲಿಲ್ಲ! ಇಂಗ್ಲೆಂಡಿನಲ್ಲಿದ್ದಾಗಲೂ ಕಲಿಯಲಿಲ್ಲ. ನಾನು ದಕ್ಷಿಣ ಆಫ್ರಿಕಾಕ್ಕೆ ಬಂದಿದ್ದುದು ಮುಖ್ಯವಾಗಿ ಲೆಕ್ಕ, ಅಂಕಿ, ಜಮಾ ಖರ್ಚಿಗೆ ಸಂಬಂಧಪಟ್ಟ ಮೊಕದ್ದಮೆಯಲ್ಲಿ ವ್ಯವಹರಿಸುವುದಕ್ಕಾಗಿ. ಲೆಕ್ಕ ಮತ್ತು ಜಮಾ ಖರ್ಚು ತಿಳಿದವರು ಮಾತ್ರ ಅದನ್ನು ಅರ್ಥಮಾಡಿಕೊಳ್ಳಲು ಮತ್ತು ವಿವರಿಸಲು ಶಕ್ತರಾಗಿದ್ದರು. ಗುಮಾಸ್ತರು "ಇದು ಜಮಾ ಇದು ಖರ್ಚು", ಎಂದು ವಿವರಿಸುತ್ತಾ ಹೋದಂತೆಲ್ಲ ನನಗೆ ಹೆಚ್ಚು ಹೆಚ್ಚು ದಿಗ್ಭ್ರಮೆ ಯುಂಟಾಯಿತು. 'ಪಿ, ನೋಟ್' ಎಂದರೆ ಏನೆಂಬುದು ನನಗೆ ಅರ್ಥವೇ ಆಗಲಿಲ್ಲ. ಶಬ್ದಕೋಶದಲ್ಲಿ ಸಹ ಆ ಪದ ನನಗೆ ಸಿಕ್ಕಲಿಲ್ಲ. ನಾನು ಗುಮಾಸ್ತನಿಗೆ "ನನಗೆ ಈ ವಿಷಯ ಒಂದೂ ತಿಳಿಯದು" ಎಂದು ಹೇಳಿದೆನು. ಆತ 'ಪಿ, ನೋಟ್' ಅಂದರೆ ಪ್ರಾಮಿಸರಿ ನೋಟು ಎಂದು ವಿವರಿಸಿದನು. ಲೆಕ್ಕ ಪತ್ರಗಳನ್ನಿಡುವ ಕ್ರಮಕ್ಕೆ ಸಂಬಂಧಪಟ್ಟ ಒಂದು ಪುಸ್ತಕವನ್ನು ಕೊಂಡು ಓದಿದೆನು. ಅದರಿಂದ ನನಗೆ ಸ್ವಲ್ಪ ಧೈರ್ಯವುಂಟಾಯಿತು. ಮೊಕದ್ದಮೆ ನನಗೆ ಅರ್ಥವಾಯಿತು. ಅಬ್ದುಲ್ಲಾ ಶೇಠರಿಗೂ ಜಮಾ ಖರ್ಚು ಬರೆಯುವುದು ತಿಳಿದಿರಲಿಲ್ಲ. ಆದರೆ ಅವರ ವ್ಯವಹಾರ ಜ್ಞಾನ ಪೂರ್ಣವಾಗಿದ್ದಿತು. ಜಮಾ ಖರ್ಚು ಲೆಕ್ಕದಲ್ಲಿ ಉಂಟಾಗಬಹುದಾದ ತೊಡಕುಗಳನ್ನು ಅವರು ತತ್‌ಕ್ಷಣ ಬಿಡಿಸಿ ಬಿಡುತ್ತಿದ್ದರು. "ನಾನು ಪ್ರಿಟೋರಿಯಾಕ್ಕೆ ಹೋಗಲು ಸಿದ್ಧನಾಗಿದ್ದೇನೆ" ಎಂದು ಅವರಿಗೆ ತಿಳಿಸಿದೆನು.

ಶೇಠರು "ಅಲ್ಲಿ ಎಲ್ಲಿ ಇಳಿದುಕೊಳ್ಳುತ್ತೀರಿ? ಎಂದು ಕೇಳಿದರು. „ನೀವು ಎಲ್ಲಿ ಇಳಿಡುಕೊಳ್ಳಿ ಎಂದರೆ ಅಲ್ಲಿ" ಎಂದು ಉತ್ತರವಿತ್ತೆನು.

"ಹಾಗಾದರೆ ನಮ್ಮ ವಕೀಲರಿಗೆ ಬರೆಯುತ್ತೇನೆ. ನೀವು ಇಳಿದುಕೊಳ್ಳಲು ಅವರು ಏರ್ಪಾಡು ಮಾಡುತ್ತಾರೆ. ಅಲ್ಲಿರುವ ನನ್ನ ಮೆಮನ್ ಮಿತ್ರರಿಗೂ ಬರೆಯುತ್ತೇನೆ. ಆದರೆ ಅವರ ಜತೆ ನೀವು ಉಳಿಯಬಾರದೆಂಬುದು ನನ್ನ ಸಲಹೆ. ನಮ್ಮ ಪ್ರತಿಪಕ್ಷಕ್ಕೆ ಪ್ರಿಟೋರಿಯಾದಲ್ಲಿ ಬಹಳ ಪ್ರಭಾವವಿದೆ. ಅವರ ಪೈಕಿ ಯಾರಿಗಾದರೂ ನನ್ನ ನಿಮ್ಮ ಅಂತರಂಗದ ಕಾಗದ ಪತ್ರಗಳು ದೊರೆತು ಅವರು ಅದನ್ನು ಓದಿಕೊಂಡರೆ ನಮಗೆ ಆದರಿಂದ ಬಹಳ ಕೇಡು ಉಂಟಾಗುವುದು. ಅವರೊಂದಿಗೆ ಪರಿಚಯವನ್ನು ನೀವು ಎಷ್ಟು ಕಡಿಮೆ ಇಟ್ಟುಕೊಂಡರೆ ನಮಗೆ ಅಷ್ಟು ಒಳ್ಳೆಯದು" ಎಂದು ಸೇಠ್ ಹೇಳಿದರು.

"ನಿಮ್ಮ ವಕೀಲರು ಎಲ್ಲಿ ಏರ್ಪಾಡು ಮಾಡುತ್ತಾರೋ ಅಲ್ಲಿಯೆ ಇರುತ್ತೇನೆ. ಇಲ್ಲದಿದ್ದರೆ ನಾನೇ ಬೇರೆ ತಂಗುವ ಸ್ಥಳವನ್ನು ಗೊತ್ತು ಮಾಡಿಕೊಳ್ಳುತ್ತೇನೆ. ನಮ್ಮಿಬ್ಬರಲ್ಲಿ ರಹಸ್ಯವಾಗಿರುವ ವಿಷಯ ಮತ್ತೆ ಯಾವ ಪ್ರಾಣಿಗೂ ತಿಳಿಯುವುದಿಲ್ಲ. ಈ ವಿಷಯದಲ್ಲಿ ಯೋಚಿಸದೇ ನಿಸ್ಸಂದೇಹದಿಂದಿರಬೇಕೆಂಬುದು ನನ್ನ ಇಷ್ಟ. ಸಾಧ್ಯವಾದರೆ ಮೊಕದ್ದಮೆಯನ್ನು ನ್ಯಾಯಸ್ಥಾನದ ಹೊರಗಡೆಯೇ ತೀರ್ಮಾನ ಮಾಡಿಸುವುದಕ್ಕೆ ನಾನು ಪ್ರಯತ್ನಿಸುತ್ತೇನೆ. ಎಷ್ಟಾದರೂ ತಯ್ಯಾಬ್ ಸೇಠರು ನಮ್ಮ ನೆಂಟರೇ ಅಲ್ಲವೆ ? ಎಂದೆನು.

ತಯ್ಯಾಬ್ ಹಾಜಿಖಾನ್ ಮೊಹಮ್ಮದ್ ಸೇಠರು, ಅಬ್ದುಲ್ಲಾ ಸೇಠರ ಸಮೀಪ ಬಂಧು.

ಮೊಕದ್ದಮೆ ನ್ಯಾಯಸ್ಥಾನದ ಹೊರಗೆ, ತೀರ್ಮಾನವಾಗಬಹುದೆಂಬುದನ್ನು ಕೇಳಿ ಸೇಠರು ಗಾಬರಿಯಾದುದು ನನಗೆ ಕಂಡಿತು. ನಾನು ಆ ವೇಳೆಗಾಗಲೇ ಡರ್ಬಾನಿನಲ್ಲಿ ಆರು-ಏಳು ದಿನಗಳು ನೆಲಸಿದ್ದುದಾಗಿತ್ತು. ನಾವು ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡಿದ್ದೆವು. ನಾನು ಒಂದು ಬಿಳಿಯ ಆನೆ ಎಂದು ಸೇಠರು ಈಚೆಗೆ ಭಾವಿಸಲಿಲ್ಲ. ಅವರು ಹೀಗೆ ಹೇಳಿದರು.

"ಹುಂ .. ನಮ್ಮ ನಮ್ಮಲ್ಲಿ ಮೊಕದ್ದಮೆಯನ್ನು ತೀರ್ಮಾನ ಮಾಡಿಕೊಳ್ಳುವುದಕ್ಕೆ ಸಮಾನವಾದುದು ಮತ್ತಾವುದಿದೆ ? ಹೌದು, ನಾವೆಲ್ಲ

ಬಂಧುಗಳೇ, ಒಬ್ಬರನ್ನೊಬ್ಬರು ಚೆನ್ನಾಗಿ ಬಲ್ಲೆವು. ತಯ್ಯಾಬ್ ಸೇಠರು ಯಾವುದಕ್ಕೂ ಸುಲಭವಾಗಿ ಒಪ್ಪುವವರಲ್ಲ. ನಾವು ಸ್ವಲ್ಪ ಎಚ್ಚರ ತಪ್ಪಿದರೆ ತೀರಿತು, ನಮ್ಮಿಂದ ಏನೆಲ್ಲವನ್ನು ಕಸಿದುಕೊಂಡು ನಮ್ಮನ್ನು ಹಾಳುಮಾಡಿ ಬಿಡುತ್ತಾರೆ. ಆದುದರಿಂದ ಚೆನ್ನಾಗಿ ಆಲೋಚನೆ ಮಾಡದೆ ಏನನ್ನೂ ಮಾಡಬೇಡಿ."

"ಆ ವಿಷಯದಲ್ಲಿ ಯೋಚಿಸಬೇಡಿ. ಮೊಕದ್ದಮೆಯನ್ನು ಕುರಿತ ತಯ್ಯಾಬ್ ಸೇಠರೊಂದಿಗೆ ಮಾತನಾಡುವುದಿಲ್ಲ; ಯಾರೊಂದಿಗೂ ಮಾತ ನಾಡುವುದಿಲ್ಲ. "ನೀವಿಬ್ಬರೂ ಒಟ್ಟಿಗೆ ಸೇರಿ ಒಂದು ಒಪ್ಪಂದಕ್ಕೆ ಬನ್ನಿ. ಕೋರ್ಟಿಗೆ ಹಣ ಸುರಿಯುವುದನ್ನು ನಿಲ್ಲಿಸಿ" ಎಂದು ನಾನು ತಯ್ಯಾಬ್ ಸೇಠರಿಗೆ ಸೂಚಿಸುತ್ತೇನೆ ಅಷ್ಟೆ."

ಡರ್ಬಾನ್ ತಲುಪಿದ ಏಳನೆಯ ಅಥವಾ ಎಂಟನೆಯ ದಿನ ಅಲ್ಲಿಂದು ಬಿಟ್ಟೆನು. ನನಗಾಗಿ ಒಂದು ಮೊದಲನೆ ದರ್ಜೆಯ ಟಿಕೀಟು ಕೊಂಡು ಜಾಗವನ್ನು ಗೊತ್ತುಮಾಡಿದ್ದರು. ಮಲಗಲು ಹಾಸಿಗೆ ಬೇಕಾದಲ್ಲಿ, ಐದು ಷಿಲಿಂಗ್ ಹೆಚ್ಚಿಗೆ ಕೊಡುವುದು ಆಗ ವಾಡಿಕೆಯಿದ್ದಿತು. ಅಬ್ದುಲ್ಲಾ ಸೇಠರು, ನಾನು ಒಂದು ಹಾಸಿಗೆಯನ್ನು ಗೊತ್ತುಮಾಡಿಕೊಳ್ಳಬೇಕೆಂದು ಒತ್ತಿ ಹೇಳಿದರು. ನಾನು ಪ್ರತಿಷ್ಠೆಯಿಂದಲೂ ಹಠದಿಂದಲೂ, ಐದು ಷಿಲಿಂಗ್ ಉಳಿಸಬೇಕೆಂಬ ಆಸೆಯಿಂದಲೂ ಅವರ ಮಾತನ್ನು ತಿರಸ್ಕರಿಸಿದೆನು. ಅಬ್ದುಲ್ಲಾ ಸೇಠರು ನನ್ನನ್ನು ಎಚ್ಚರಿಸಿದರು. "ಇಲ್ಲಿ ನೋಡಿ, ಇದು ಹಿಂದೂಸ್ಥಾನವಲ್ಲ. ಬೇರೆ ದೇಶ, ಭಗವಂತನ ದಯದಿಂದ ನಿಮಗೆ ಬೇಕಾದ ಸೌಕರ್ಯಗಳನ್ನು ಒದಗಿಸಿಕೊಡಲು ನಮಗೆ ಅನುಕೂಲವಿದೆ. ನಿಮಗೆ ಯಾವುದು ಬೇಕಾದರೂ ಸಂಕೋಚಪಟ್ಟುಕೊಳ್ಳಬೇಡಿ, ಕೊರತೆ ಮಾಡಿಕೊಳ್ಳಬೇಡಿ" ಎಂದು ಹೇಳಿದರು.

ನಾನು ಅವರಿಗೆ ಕೃತಜ್ಞತೆ ಸೂಚಿಸಿ "ನೀವೇನೂ ಯೋಚನೆ ಮಾಡ ಬೇಡಿ" ಎಂದು ಹೇಳಿ ಕಳುಹಿಸಿದೆನು.

ರೈಲು ರಾತ್ರಿ ೯ ಗಂಟೆಗೆ ನೆಟಾಲಿನ ರಾಜಧಾನಿಯಾದ ಮೊರ್ಟ್ಸ್ ಬರ್ಗನ್ನು ತಲಪಿತು. ಹಾಸಿಗೆಗಳನ್ನು ಒದಗಿಸುತ್ತಿದ್ದ ರೈಲ್ವೆ ಸ್ಟೇಷನ್ ಅದು. ಒಬ್ಬ ರೈಲ್ವೆ ನೌಕರನು ಬಂದು "ನಿಮಗೆ ಹಾಸಿಗೆ ಬೇಡವೇ?"

ಎಂದು ನನ್ನನ್ನು ಕೇಳಿದನು. ನಾನು "ಬೇಡ, ನನ್ನ ಬಳಿ ಹಾಸಿಗೆಯಿದೆ" ಎಂದೆನು. ನೌಕರನು ಹೊರಟು ಹೋದನು. ಆದರೆ ಅಲ್ಲಿಗೆ ಒಬ್ಬ ಪ್ರಯಾಣಿಕ ಬಂದನು. ಅವನು ನನ್ನನ್ನು ಮೇಲಕ್ಕೂ ಕೆಳಕ್ಕೂ ನೋಡಿದನು. ನಾನು ಬಣ್ಣದ ಮನುಷ್ಯನೆಂಬುದು ಅವನ ಕಣ್ಣಿಗೆ ಬಿದ್ದಿತು. ಆದ್ದರಿಂದ ಅವನಿಗೆ ಉದ್ರೇಕವುಂಟಾಯಿತು. ಆತ ಹೋಗಿ ಒಬ್ಬರು ಇಬ್ಬರು ರೈಲ್ವೆ ನೌಕರರನ್ನು ಕರೆದುಕೊಂಡು ಹಿಂದಿರುಗಿದನು. ಅವರಾರೂ ಮಾತನಾಡಲಿಲ್ಲ. ಆ ವೇಳೆಗೆ ಮತ್ತೊಬ್ಬ ಅಧಿಕಾರಿ ನನ್ನ ಬಳಿ ಬಂದು ಹೀಗೆ ಹೇಳಿದನು : "ಹೊರಡು. ವ್ಯಾನ್ (ಕೊನೆಯಲ್ಲಿರುವ) ಗಾಡಿಗೆ ನೀನು ಹೋಗಬೇಕು."

ನಾನು ಹೀಗೆ ಹೇಳಿದೆ : "ಆದರೆ ನಾನು ಫಸ್ಟ್‌ಕ್ಲಾಸ್ ಟಿಕೆಟ್ ತೆಗೆದುಕೊಂಡಿದ್ದೇನೆ."

ಆತ "ಚಿಂತೆಯಿಲ್ಲ. ನನ್ನ ಮಾತನ್ನು ಕೇಳು. ನೀನು ಕೊನೆಯ ಗಾಡಿಗೆ ಹೋಗಲೇ ಬೇಕು" ಎಂದನು.

"ಇಲ್ಲಿ ಕೇಳಿ. ನಾನು ಈ ಗಾಡಿಯಲ್ಲಿ ಕುಳಿತು ಪ್ರಯಾಣ ಮಾಡಲು ಡರ್ಬಾನಿನಲ್ಲಿ ಅವಕಾಶ ದೊರೆತಿದೆ. ನಾನು ಇದರಲ್ಲಿಯೇ ಪ್ರಯಾಣ ಮಾಡುವುದು ನಿಶ್ಚಯ"

ಅಧಿಕಾರಿಯು "ಕೂಡದು. ಈ ಗಾಡಿಯಿಂದ ನೀನು ಇಳಿಯಲೇ ಬೇಕು. ಇಲ್ಲದಿದ್ದರೆ ಪೋಲೀಸ್ ಕಾನ್‌ಸ್ಟೇಬಲ್‌ನನ್ನು ಕರೆಯುತ್ತೇನೆ. ನಾನೇ ಕತ್ತು ಹಿಡಿದು ದಬ್ಬುತ್ತೇನೆ" ಎಂದನು.

"ಸರಿ ನೀನು ದಬ್ಬಬಹುದು. ನಾನಾಗಿಯೇ ಗಾಡಿಬಿಟ್ಟು ಇಳಿಯುವುದಿಲ್ಲ."

ಕಾನ್‌ಸ್ಟೇಬಲ್ ಬಂದನು. ಅವನು ನನ್ನ ಕೈಹಿಡಿದು ನನ್ನನ್ನು ಹೊರಕ್ಕೆ ತಳ್ಳಿದನು. ನನ್ನ ಸಾಮಾನುಗಳನ್ನೂ ಹೊರಕ್ಕೆ ಹಾಕಿದನು. ಬೇರೆ ಗಾಡಿಗೆ ಹೋಗಲು ನಾನು ತಿರಸ್ಕರಿಸಿದೆನು. ರೈಲು ಹೊರಟು ಹೋಯಿತು. ನಾನು ಹೋಗಿ ಪ್ರತೀಕ್ಷಾಗೃಹ (ವೇಟಿಂಗ್ ರೂಂ) ದಲ್ಲಿ ಕುಳಿತೆನು. ಕೈಚೀಲ ಮಾತ್ರ ನನ್ನ ಬಳಿ ಇದ್ದಿತು. ಉಳಿದ ಸಾಮಾನುಗಳೆಲ್ಲ

ಅವು ಬಿದ್ದ ಎಡೆಯಲ್ಲಿಯೇ ಇದ್ದವು. ರೈಲ್ವೆ ಅಧಿಕಾರಿಗಳು ಅವನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದರು.

ಆಗ ಚಳಿಗಾಲವಾಗಿತ್ತು. ದಕ್ಷಿಣ ಆಫ್ರಿಕಾದ ಎತ್ತರದ ಪ್ರದೇಶಗಳಲ್ಲಿ ಚಳಿಗಾಲದಲ್ಲಿ ಚಳಿ ಅತಿ ತೀವ್ರ. ಮೆರಿಟ್ಸ್‌ಬರ್ಗ್ ನಗರ ಉನ್ನತ ಪ್ರದೇಶದಲ್ಲಿರುವುದರಿಂದ ಚಳಿ ಸಹಿಸಲಾಗದಷ್ಟು ತೀವ್ರವಾಗಿದ್ದಿತು. ನನ್ನ ಸಿಲುವಂಗಿ ನನ್ನ ಹಾಸಿಗೆಯ ಜತೆಯಲ್ಲಿದ್ದಿತು. ಅದನ್ನು ಕೇಳಿದರೆ ಮತ್ತೆ ನನ್ನನ್ನು ಎಲ್ಲಿ ಅವಮಾನಗೊಳಿಸುವರೋ ಎಂಬ ಭಯದಿಂದ ಕೇಳಲು ನನಗೆ ಧೈರ್ಯವುಂಟಾಗಲಿಲ್ಲ. ನಾನು ನಡುಗುತ್ತಾ ಮುದುರಿಕೊಂಡಿದ್ದೆನು. ಅರ್ಧರಾತ್ರಿಯ ವೇಳೆಗೆ ಮತ್ತೊಬ್ಬ ಪ್ರಯಾಣಿಕ ಒಳಕ್ಕೆ ಬಂದನು. ನನ್ನೊಂದಿಗೆ ಮಾತುಕತೆಯಾಡಲು ಬಹುಶಃ ಅವನಿಗೆ ಇಷ್ಟವಿದ್ದಿತೇನೊ ? ಆದರೆ ನನಗೆ ಮಾತನಾಡಲು ಬೇಕಿರಲಿಲ್ಲ.

ನನ್ನ ಕರ್ತವ್ಯವೇನೆಂದು ನಾನು ಯೋಚಿಸ ತೊಡಗಿದೆನು. ನನ್ನ ಹಕ್ಕುಗಳಿಗಾಗಿ ನಾನು ಹೋರಾಡಲೇ ? ಅಥವಾ ಭಾರತಕ್ಕೆ ಹಿಂದಿರುಗಿ ಹೋಗಲೇ ಅಥವಾ ನನಗಾದ ಅವಮಾನವನ್ನು ಮರೆತು, ಪ್ರಿಟೋರಿಯಾಕ್ಕೆ ಹೋಗಿ, ಮೊಕದ್ದಮೆ ಮುಗಿದನಂತರ ಭಾರತಕ್ಕೆ ಹಿಂದಿರುಗಲೆ ? ನನ್ನ ಹೊಣೆಗಾರಿಕೆಯನ್ನು ನಿರ್ವಹಿಸದೆ ಭಾರತಕ್ಕೆ ಹಿಂದಿರುಗುವುದು ಹೇಡಿತನ. ನನಗೆ ಸಂಭವಿಸಿದ ಕಷ್ಟಗಳೆಲ್ಲ ಬರಿ ಮೇಲಿನ ಹುಣ್ಣು ; ಆಳವಾಗಿರುವ ವರ್ಣದ್ವೇಷವೆಂಬ ರೋಗದ ಬಾಹ್ಯ ಸಂಕೇತ. ನಾನು, ಸಾಧ್ಯವಾದರೆ ಈ ರೋಗವನ್ನು ಬುಡ ಸಹಿತ ಕಿತ್ತು ಒಗೆಯಬೇಕು. ಆ ಪ್ರಯತ್ನದಲ್ಲಿ ಒದಗುವ ಕಷ್ಟಗಳನ್ನೆಲ್ಲ ಸಹಿಸಬೇಕು. ಈ ವರ್ಣದ್ವೇಷವನ್ನು ಹೋಗಲಾಡಿಸಲು ಎಷ್ಟರಮಟ್ಟಿಗೆ ಆವಶ್ಯಕವೋ ಅಷ್ಟರಮಟ್ಟಿಗೆ ಮಾತ್ರ ನಾನು ಅನ್ಯಾಯಗಳಿಗೆ ಪರಿಹಾರಗಳನ್ನು ಹೊಂದಲು ಯತ್ನಿಸಬೇಕು.

ಹೀಗೆ, ನಾನು ಮುಂದಿನ ರೈಲಿನಲ್ಲಿ ಪ್ರಿಟೋರಿಯಾಕ್ಕೆ ಹೋಗುವುದೆಂದು ನಿರ್ಣಯಿಸಿದೆನು.

ಮರು ದಿನ ಬೆಳಗ್ಗೆ ನಾನು ರೈಲ್ವೆಗಳ ಜನರಲ್ ಮ್ಯಾನೇಜರ್ ಅವರಿಗೆ ವಿಷಯಗಳನ್ನೆಲ್ಲ ತಿಳಿಸಿ ಒಂದು ಉದ್ದವಾದ ತಂತಿ ಸಮಾಚಾರ ಕಳುಹಿಸಿದೆನು. ಅಬ್ದುಲ್ಲಾ ಸೇಠರಿಗೂ ಸುದ್ದಿ ತಿಳಿಸಿದೆನು. ಸೇಠರು ಕೂಡಲೇ ಹೋಗಿ

ಜನರಲ್ ಮ್ಯಾನೇಜರರನ್ನು ಸಂಧಿಸಿದರು. ಜನರಲ್ ಮ್ಯಾನೇಜರು, ರೈಲ್ವೆ ಅಧಿಕಾರಿಗಳ ವರ್ತನೆಯನ್ನೇ ಸಮರ್ಥಿಸಿದರು. ಆದರೆ "ಸ್ಟೇಷನ್ ಮಾಸ್ಟರಿಗೆ ಗಾಂಧಿಯನ್ನು ಸೌಖ್ಯವಾಗಿ ಅವರ ಗುರಿಗೆ ಮುಟ್ಟಿಸುವಂತೆ ಆಗಲೇ ತಿಳಿಸಿದ್ದೇನೆ" ಎಂದು ಹೇಳಿದರು. ಅಬ್ದುಲ್ಲಾ ಸೇಠರು ಮೆರಿಟ್ಸ್ ಬರ್ಗ್‌ನಲ್ಲಿಯೂ ಭಾರತೀಯ ವರ್ತಕರಿಗೂ ಇತರ ಸ್ಥಳಗಳಲ್ಲಿಯ ಸ್ನೇಹಿತರಿಗೂ ನನ್ನನ್ನು ಸಂಧಿಸುವಂತೆಯೂ ನನ್ನ ಕ್ಷೇಮವನ್ನು ನೋಡಿಕೊಳ್ಳುವಂತೆಯೂ ತಂತಿ ಕೊಟ್ಟರು. ವರ್ತಕರು ರೈಲ್ವೆ ಸ್ಟೇಷನಿನಲ್ಲಿ ಬಂದು ನನ್ನನ್ನು ಎದುರುಗೊಂಡರು, ತಮಗೆ ಸಂಭವಿಸಿದ್ದ ಕಷ್ಟಗಳನ್ನೆಲ್ಲ ವಿವರಿಸಿ, ಉಂಟಾದ ಕಷ್ಟಗಳು ಅಸಾಧಾರಣವಾದ ವಿಷಯವಲ್ಲವೆಂದು ಹೇಳಿ ನನ್ನನ್ನು ನಿಧಾನಪಡಿಸಲು ಪ್ರಯತ್ನಿಸಿದರು. ಮೊದಲನೆಯ ಮತ್ತು ಎರಡನೆಯ ತರಗತಿಗಳಲ್ಲಿ ಪ್ರಯಾಣ ಮಾಡುವ ಭಾರತೀಯರು, ರೈಲ್ವೆ ನೌಕರರಿಂದಲೂ ಬಿಳಿಯ ಪ್ರಯಾಣಿಕರಿಂದಲೂ ತೊಂದರೆಯನ್ನು ನಿರೀಕ್ಷಿಸಬೇಕೆಂದೂ ಅವರು ಹೇಳಿದರು. ಆ ದುಃಖದ ಕತೆಗಳನ್ನು ಕೇಳುವುದರಲ್ಲಿಯೇ ಆ ದಿನ ಕಳೆದು ಹೋಯಿತು. ಸಾಯಂಕಾಲದ ರೈಲು ಬಂದಿತು. ಅದರಲ್ಲಿ ನನಗಾಗಿ ಒಂದು ಮಲಗುವ ಸ್ಥಳವನ್ನು ಕಾದಿರಿಸಿದ್ದರು. ನಾನು ಅದನ್ನು ಡರ್ಬಾನಿನಲ್ಲಿ ಕೊಳ್ಳಲು ತಿರಸ್ಕರಿಸಿದ್ದರೂ ಮೆರಿಟ್ಸ್‌ಬರ್ಗ್‌ನಲ್ಲಿ ಒಂದು ಹಾಸಿಗೆ ಟಿಕೆಟನ್ನು ಕೊಂಡುಕೊಂಡೆನು.

ರೈಲು ನನ್ನನ್ನು ಚಾರ್ಲ್ಸ್‌ಟೌನ್‌ಗೆ ಕರೆದುಕೊಂಡು ಹೋಯಿತು.

೯

ಇನ್ನೂ ಹೆಚ್ಚಿನ ಕಷ್ಟಗಳು

ರೈಲು, ಚಾರಲ್ಸ್‌ಟೌನನ್ನು ಬೆಳಿಗ್ಗೆ ಸೇರಿತು. ಆ ಕಾಲದಲ್ಲಿ ಚಾರಲ್ಸ್‌ಟೌನ್‌ನಿಂದ ಜೊಹಾನ್ಸ್‌ಬರ್ಗಿಗೆ ರೈಲು ಇರಲಿಲ್ಲ. ಕುದುರೆ ಟಪಾಲ್ ಬಂಡಿ ಇದ್ದಿತು. ಕುದುರೆಗಾಡಿ ದಾರಿಯಲ್ಲಿ ರಾತ್ರಿ ಸ್ಟ್ಯಾಂಡರ್

ಟನ್ ಎಂಬಲ್ಲಿ ಉಳಿಯುತ್ತಿದ್ದಿತು. ನನ್ನ ಬಳಿ ಕುದುರೆಗಾಡಿಯ ಟಿಕೆಟ್ ಇದ್ದಿತು. ಮೆರಿಟ್ಸ್‌ವಬಾರ್ಗ್‌ನಿಂದ ನನ್ನ ಪ್ರಯಾಣ ಒಂದು ದಿನ ತಡವಾದರೂ ಆ ಟಿಕೆಟ್ ರದ್ದಾಗಿರಲಿಲ್ಲ. ಅಲ್ಲದೆ ಅಬ್ದುಲ್ಲಸೇಠರು ಚಾರಲ್ಸ್ ಟೌನ್‌ನಲ್ಲಿದ್ದ ಕುದುರೆಗಾಡಿ ಏಜೆಂಟರಿಗೆ ಒಂದು ತಂತಿ ಕಳುಹಿಸಿ ವಿಷಯ ವನ್ನು ತಿಳಿಸಿದ್ದರು.

ಆದರೆ ಕುದುರೆ ಗಾಡಿಯಿಂದ ನನ್ನನ್ನು ತಪ್ಪಿಸಲು ಏಜೆಂಟನಿಗೆ ಒಂದು ನೆಪ ಸಾಕಾಗಿದ್ದಿತು. ಆದುದರಿಂದ ಆತನು "ನಿಮ್ಮ ಟಿಕೆಟ್ ರದ್ದಾಗಿದೆ" ಎಂದು ಹೇಳಿದನು. ನಾನು ಅವನಿಗೆ ಸರಿಯಾದ ಪ್ರತ್ಯುತ್ತರವನ್ನೇ ಕೊಟ್ಟೆನು. ಅವನ ಮನಸ್ಸಿನಲ್ಲಿದ್ದುದು ಗಾಡಿಯಲ್ಲಿ ಸ್ಥಳವಿರಲಿಲ್ಲ ಎಂಬುದಲ್ಲ. ಅವನ ಅಭಿಪ್ರಾಯ ಬೇರೆಯಾಗಿದ್ದಿತು. ಪ್ರಯಾಣಿಕರನ್ನೆಲ್ಲ ಗಾಡಿಯ ಒಳಗಡೆ ಕೂಡಿಸಬೇಕು. ನಾನು 'ಕೂಲಿ' ಮತ್ತು ಆ ಭಾಗಕ್ಕೆ ಹೊಸಬ. ಆದುದರಿಂದ ನನ್ನನ್ನು ಇತರ ಪ್ರಯಾಣಿಕರ ಜತೆಯಲ್ಲಿ ಕುಳ್ಳಿರಿಸುವುದು ಯೋಗ್ಯವಲ್ಲವೆಂದೇ ಆ "ಲೀಡರ್" ಯೋಚಿಸಿದನು. (ಗಾಡಿ ಮೇಲ್ವಿಚಾರಣೆ ನೋಡಿಕೊಳ್ಳುವವನಿಗೆ ಲೀಡರ್ ಅಥವಾ ಮುಂದಾಳು ಎಂದು ಹೆಸರು.) ಗಾಡಿ ಹೊಡೆಯುವವನ ಅಕ್ಕಪಕ್ಕದಲ್ಲಿ (ಕುಳಿತುಕೊಳ್ಳುವ ಪೆಟ್ಟಿಗೆಯ ಆಚೆ ಈಚೆ) ಸ್ಥಳವಿದ್ದಿತು. ಈ "ಮುಂದಾಳು" ಯಾವಾಗಲೂ ಆ ಒಂದು ಸ್ಥಳದಲ್ಲಿ ಕುಳಿತುಕೊಂಡು ನನ್ನನ್ನು ತನ್ನ ಸ್ಥಳದಲ್ಲಿ ಕೂರಿಸಿದನು, ಅದು ಅನ್ಯಾಯ ಅವಮಾನ ಎಂಬುದು ನನಗೆ ಗೊತ್ತಾಯಿತು. ಆದರೂ ನಾನು ಅದನ್ನು ಸಹಿಸಿಕೊಳ್ಳುವುದು ಸರಿ ಎಂದು ಭಾವಿಸಿದೆನು. ಬಲಾತ್ಕಾರದಿಂದ ಗಾಡಿಯ ಒಳಗೆ ಹೋಗಿ ಕುಳಿತುಕೊಳ್ಳಲು ನನಗೆ ಸಾಧ್ಯವಿರಲಿಲ್ಲ. ನಾನು ಅಲ್ಲಿಯೇ ಪ್ರತಿಭಟಿಸುತ್ತಾ ಕುಳಿತಿದ್ದರೆ ನನ್ನನ್ನು ಬಿಟ್ಟು ಗಾಡಿ ಹೊರಟೇ ಹೋಗುತ್ತಿದ್ದಿತು. ಅಂದರೆ ಇನ್ನೇನು ಸಂಭವಿಸಬಹುದೋ ಬಲ್ಲವರಾರು? ಆದುದರಿಂದ ನನ್ನ ಮನಸ್ಸು ತುಂಬ ಉದ್ವೇಗಗೊಂಡಿದ್ದರೂ ನಾನು ವಿವೇಕಿ ಯಂತೆ ಸಾರಥಿಯ ಮಗ್ಗುಲಲ್ಲಿ ಕುಳಿತುಕೊಂಡೆನು.

ಸುಮಾರು ಮಧ್ಯಾಹ್ನ ಮೂರುಗಂಟೆಗೆ ಗಾಡಿ ಪರ್ಡಿಕೋಫ್‌ನ್ನು ತಲಪಿತು. ಆಗ "ಲೀಡರ್"ಗೆ ನಾನು ಕುಳಿತುಕೊಂಡ ಸ್ಥಳದಲ್ಲಿ ತಾನು

ಕುಳಿತುಕೊಳ್ಳುವ ಇಚ್ಛೆಯುಂಟಾಯಿತು. ಬಹುಶಃ ಆತನಿಗೆ ಸಿಗರೇಟ್ ಸೇದುವುದೂ ಸ್ವಲ್ಪ ಶುದ್ಧವಾದ ಗಾಳಿಯೂ ಬೇಕಾಗಿದ್ದಿರಬಹುದು. ಆತ, ಗಾಡಿ ಹೊಡೆಯುವವನಿಂದ ಒಂದು ಕೊಳೆಯಾದ ಗೋಣಿಯ ರಟ್ಟಿನ ಚೂರನ್ನು ತೆಗೆದುಕೊಂಡು ಅದನ್ನು ಗಾಡಿ ಹೊಡೆಯುವನು ಕಾಲಿಡುವ ಸ್ಥಳದಲ್ಲಿ ಹಲಗೆಯ ಮೇಲೆ ಹಾಸಿ, ನನಗೆ "ಸ್ವಾಮಿ, ನೀನು ಇಲ್ಲಿ ಕುಳಿತುಕೊ. ನಾನು ಗಾಡಿ ಹೊಡೆಯುವವನ ಹತ್ತಿರದಲ್ಲಿ ಕುಳಿತು ಕೊಳ್ಳಬೇಕಾಗಿದೆ" ಎಂದನು. ಆ ಅವಮಾನವನ್ನು ಸಹಿಸಲು ನನ್ನಿಂದ ಸಾಧ್ಯವಾಗಲಿಲ್ಲ. ನಾನು ಭಯದಿಂದಲೂ ನಡುಗುತ್ತಲೂ ಅವನಿಗೆ ಹೀಗೆ ಹೇಳಿದೆ: "ನನ್ನನ್ನು ಇಲ್ಲಿ ಕೂಡಿಸಿದವನು ನೀನು. ನ್ಯಾಯವಾಗಿ ನನಗೆ ಗಾಡಿಯೊಳಗೆ ಸ್ಥಳ ಕೊಡಬೇಕಾಗಿದ್ದಿತು. ಆ ಅವಮಾನವನ್ನು ನಾನು ಸಹಿಸಿಕೊಂಡೆ. ಈಗ ನೀನು ಹೊರಗಡೆ ಕುಳಿತುಕೊಂಡು ಸಿಗರೇಟು ಸೇದ ಬೇಕಾಗಿದೆ. ಅದಕ್ಕಾಗಿ ನಾನು ನಿನ್ನ ಕಾಲಬಳಿ ಕುಳಿತುಕೊಳ್ಳಬೇಕು. ನಾನು ಅಲ್ಲಿ ಕುಳಿತುಕೊಳ್ಳುವುದಿಲ್ಲ. ಬೇಕಾದರೆ ಗಾಡಿಯೊಳಗೆ ಕುಳಿತು ಕೊಳ್ಳಲು ಸಿದ್ಧನಾಗಿದ್ದೇನೆ"

ಈ ಮಾತುಗಳನ್ನು ನಾನು ಆತುರ ಆತುರವಾಗಿ ಆಡಿ ಮುಗಿಸುವಷ್ಟ ರೊಳಗೆ ಅವನು ನನ್ನ ಮೇಲೆ ಆಕ್ರಮಣ ಮಾಡಿ ನನ್ನ ಕಿವಿಗೆ ಬಲವಾಗಿ ಹೊಡೆಯ ತೊಡಗಿದನು. ನನ್ನ ಕೋಟಿಗೆ ಕೈಹಾಕಿ ನನ್ನನ್ನು ಕೆಳಕ್ಕೆ ಎಳೆಯಲು ಪ್ರಯತ್ನಿಸಿದನು. ನಾನು ಸಾರಥಿ ಕುಳಿತುಕೊಳ್ಳುವ ಆಸನದ ಹಿತ್ತಾಳೆಯ ಕಂಬಿಗಳನ್ನು ಬಲವಾಗಿ ಹಿಡಿದುಕೊಂಡೆನು. ಮುಂಗೈ ಮೂಳೆ ಮುರಿದರೂ ಸರಿ, ಕೈ ಬಿಡುವುದಿಲ್ಲ ಎಂದು ದೃಢಸಂಕಲ್ಪ ಮಾಡಿ ಕೊಂಡೆನು. ಆತ ನನ್ನನ್ನು ಬಯ್ಯುತ್ತಿದ್ದನು, ಕೆಳಕ್ಕೆ ಎಳೆಯುತ್ತಿದ್ದನು; ಹೊಡೆಯುತ್ತಿದ್ದನು. ನಾನು ಯಾವ ಪ್ರತೀಕಾರವನ್ನೂ ಮಾಡದೆ ಸುಮ್ಮನಿದ್ದನು. ಪ್ರಯಾಣಿಕರು ಇದನ್ನೆಲ್ಲ ನೋಡುತ್ತಿದ್ದರು. ಅವನು ಬಲಶಾಲಿ, ನಾನು ಬಲಹೀನ. ಪ್ರಯಾಣಿಕರಲ್ಲಿ ಕೆಲವರಿಗೆ ಕನಿಕರವುಂಟಾ ಯಿತು. "ಏ! ಅವನ ಪಾಡಿಗೆ ಅವನನ್ನು ಬಿಟ್ಟುಬಿಡು. ಹೊಡೆಯಬೇಡ. ಅವನದೇನೂ ತಪ್ಪಿಲ್ಲ. ಅವನು ಹೇಳುವುದು ನ್ಯಾಯವಾಗಿದೆ. ಅಲ್ಲಿ ಅವನಿಗೆ ಕುಳಿತುಕೊಳ್ಳಲು ಸಾಧ್ಯವಾಗದಿದ್ದರೆ, ಇಲ್ಲಿ ಬಂದು ನಮ್ಮೊಂದಿಗೆ

ಒಳಗೆ ಕುಳಿತುಕೊಳ್ಳಲಿ" ಎಂದರು. ಅದೆಲ್ಲ ಸಾಧ್ಯವಿಲ್ಲವೆಂದು ಅವನು ಕೂಗಿದನು—ಆದರೆ ಅವನಿಗೆ ಸ್ವಲ್ಪ ಮುಖಭಂಗವಾದಂತೆ ತೋರಿತು. ಅವನು ನನ್ನನ್ನು ಹೊಡೆಯುವುದನ್ನು ನಿಲ್ಲಿಸಿದನು. ನನ್ನನ್ನು ಮತ್ತಷ್ಟು ಬೈದು ಹಿಡಿದುಕೊಂಡಿದ್ದ ನನ್ನ ಕೈಯನ್ನು ಬಿಟ್ಟನು. ಗಾಡಿ ಸಡೆ ಯುವವನ ಮತ್ತೊಂದು ಮಗ್ಗುಲಲ್ಲಿ ಕುಳಿತಿದ್ದ ಹಾಟೆಂಟಾಟ್ ಸೇವಕನನ್ನು, ಕೆಳಕ್ಕೆ ಕೂರಿಸಿ ತಾನು ತೆರವಾದ ಆ ಸ್ಥಳದಲ್ಲಿ ಕುಳಿತುಕೊಂಡನು.

ಪ್ರಯಾಣಿಕರೆಲ್ಲ ತಮ್ಮ ತಮ್ಮ ಸ್ಥಳಗಳಲ್ಲಿ ಕುಳಿತುಕೊಂಡರು. ಶಿಳ್ಳನ್ನು ಊದಿದಕೂಡಲೇ ಗಾಡಿ ಹೊರಟಿತು. ನನ್ನ ಹೃದಯ ಡವ ಡವನೆ ಬಡಿದುಕೊಳ್ಳುತ್ತಿತ್ತು. ನಾನು ಜೀವಂತನಾಗಿ ನನ್ನ ಗುರಿಯನ್ನು ಮುಟ್ಟುತ್ತೇನೆಯೇ ಎಂಬುದು ನನ್ನ ಚಿಂತೆಯಾಗಿತ್ತು. ಆತ ಆಗಿಂದಾಗ್ಗೆ ನನ್ನನ್ನು ಕೋಪದಿಂದ ನೋಡುತ್ತಿದ್ದನು. ನನ್ನ ಕಡೆಗೆ ಬೆರಳು ತೋರಿ ಸುತ್ತಾ "ಹುಷಾರು ; ಸ್ಟ್ಯಾಂಡರ್‌ಟನ್ ಮಾತ್ರ ಸಿಕ್ಕಲಿ. ನಾನು ನಿನಗೆ ಏನು ಮಾಡುತ್ತೇನೆಂಬುದನ್ನು ತೋರಿಸುತ್ತೇನೆ" ಎಂದು ಗುರುಗುಟ್ಟುತ್ತಿದ್ದನು. ನಾನು ಮಾತನಾಡದೆ ಕುಳಿತಿದ್ದು "ದೇವರೇ ನನ್ನನ್ನು ಕಾಪಾಡು" ಎಂದು ಪ್ರಾರ್ಥಿಸುತ್ತಿದ್ದೆನು.

ನಾವು ರಾತ್ರಿಗೆ ಸ್ಟ್ಯಾಂಡರ್‌ಟನ್ನನ್ನು ಸೇರಿದೆವು. ಅಲ್ಲಿ ಕೆಲವು ಭಾರತೀಯರ ಮುಖಗಳನ್ನು ನೋಡಿ ನಾನು ಸಮಾಧಾನದ ನಿಟ್ಟುಸಿರು ಬಿಟ್ಟೆನು. ನಾನು ಗಾಡಿಯಿಂದ ಇಳಿದಕೂಡಲೇ ಆ ಮಿತ್ರರು, "ನಾವು ನಿಮ್ಮನ್ನು ಎದುರುಗೊಂಡು ಇಸಾ ಸೇಠರ ಅಂಗಡಿಗೆ ಕರೆದುಕೊಂಡು ಹೋಗಲು ಬಂದಿದ್ದೇವೆ. ನಮಗೆ ದಾದಾ ಅಬ್ದುಲ್ಲಾ ತಂತಿ ಕೊಟ್ಟಿದ್ದರು" ಎಂದು ಹೇಳಿದರು. ನನಗೆ ತುಂಬ ಸಂತೋಷವಾಯಿತು. ಅನಂತರ ನಾವೆಲ್ಲ ಇಸಾ ಹಾಜಿ ಸುಮರ್ ಸೇಠ್‌ರ ಅಂಗಡಿಗೆ ಹೋದೆವು. ಸೇಠರೂ ಅವರ ಗುಮಾಸ್ತರೂ ನನ್ನ ಸುತ್ತ ಸೇರಿದರು. ನಾನು ಪಟ್ಟ ಸಂಕಟವನ್ನೆಲ್ಲ ಅವರಿಗೆ ತಿಳಿಸಿದೆನು. ಅದನ್ನು ಕೇಳಿ ಅವರಿಗೆ ಬಹಳ ದುಃಖವಾಯಿತು. ಅವರಿಗೆ ಸಂಭವಿಸಿದ್ದ ಕ್ರೂರ ಅನುಭವಗಳ ವಿಷಯಗಳನ್ನೆಲ್ಲ ಹೇಳಿ ಅವರು ನನ್ನನ್ನು ಸಮಾಧಾನ ಗೊಳಿಸಿದರು.

ಕುದುರೆಗಾಡಿ ಕಂಪೆನಿಯ ಏಜೆಂಟರಿಗೆ ಈ ವಿಷಯಗಳನ್ನೆಲ್ಲ ತಿಳಿಸಬೇಕೆಂದು ನಾನು ಬಯಸಿದೆನು. ನಾನು ವಿಷಯ ವಿವರಿಸಿ ಅವರಿಗೆ ಒಂದು ಪತ್ರವನ್ನು ಬರೆದೆ. ಅವರ ನೌಕರ, ನನ್ನನ್ನೂ ಹೆದರಿಸಿದುದನ್ನೂ ಕುರಿತು ಬರೆದೆನು. ಮರು ದಿವಸ ಬೆಳಿಗ್ಗೆ ಗಾಡಿ ಮತ್ತೆ ಹೊರಟಾಗ ನನ್ನನ್ನು ಇತರ ಪ್ರಯಾಣಿಕರ ಜತೆಯಲ್ಲಿ ಸರಿಯಾದ ಸ್ಥಳದಲ್ಲಿ ಕೂರಿಸುವನೆಂಬ ಆಶ್ವಾಸನವನ್ನೂ ಕೊಡಬೇಕೆಂದು ಕೇಳಿದೆನು. ಏಜೆಂಟನು ಈ ಕೆಳಗಿನ ಅರ್ಥ ಬರುವ ಪ್ರತ್ಯುತ್ತರವನ್ನು ಕೊಟ್ಟನು. “ಸ್ಟ್ಯಾಂಡರ್‌ಟನ್‌ನಿಂದ ದೊಡ್ಡ ಗಾಡಿ ಹೊರಡುತ್ತದೆ. ಅದರ ನೌಕರರು ಬೇರೆಯವರು. ನೀವು ಯಾರ ಮೇಲೆ ದೂರು ಕೊಟ್ಟಿರುವಿರೋ ಆ ನೌಕರ ನಾಳೆ ಅದರಲ್ಲಿರುವುದಿಲ್ಲ. ನಿಮ್ಮನ್ನು ಇತರ ಪ್ರಯಾಣಿಕರ ಜತೆ ಕೂರಿಸಲಾಗುವುದು” ಇದರಿಂದ ನನಗೆ ಸ್ವಲ್ಪ ಸಮಾಧಾನವಾಯಿತು. ನನಗೆ ಹಿಂಸೆ ಮಾಡಿದ ಆ ನೌಕರನ ಮೇಲೆ ಮೊಕದ್ದಮೆ ನಡೆಸಬೇಕೆಂಬುದು ನನ್ನ ಇಷ್ಟವಾಗಿರಲಿಲ್ಲ. ಹೀಗೆ ನನ್ನ ಮೇಲೆ ಬಲಪ್ರಯೋಗ ಮಾಡಿದ ಅಧ್ಯಾಯ ಅಲ್ಲಿಗೆ ಮುಗಿಯಿತು.

ಬೆಳಿಗ್ಗೆ ಇಸಾ ಸೇಠರ ನೌಕರ, ನನ್ನನ್ನು ಕರೆದುಕೊಂಡು ಹೋಗಿ ಗಾಡಿಯಲ್ಲಿ ಕೂರಿಸಿದನು. ನನಗೆ ಕುಳಿತುಕೊಳ್ಳಲು ಒಳ್ಳೆಯ ಸ್ಥಳ ಸಿಕ್ಕಿತು. ಆ ರಾತ್ರಿ ನಾನು ಸುಖವಾಗಿ ಜೊಹಾನ್ಸ್‌ಬರ್ಗ್‌ನ್ನು ತಲುಪಿದೆನು.

ಸ್ಟ್ಯಾಂಡರ್‌ಟನ್ ಒಂದು ಸಣ್ಣ ಹಳ್ಳಿ. ಜೊಹಾನ್ಸ್‌ಬರ್ಗ್ ದೊಡ್ಡ ಪಟ್ಟಣ. ಸೇಠ್ ಅಬ್ದುಲ್ಲಾ, ಜೊಹಾನ್ಸ್‌ಬರ್ಗ್‌ಗೆ ಸಹ ತಂತಿ ಕಳುಹಿಸಿದುದಲ್ಲದೆ, ಅಲ್ಲಿಯ ಮುಹಮ್ಮದ್ ಖಾಸಿಮ್ ಕುಮ್ರುದ್ದೀನರ ಹೆಸರನ್ನೂ ವಿಳಾಸವನ್ನೂ ನನಗೆ ಕೊಟ್ಟಿದ್ದರು. ನನ್ನನ್ನು ಎದುರುಗೊಳ್ಳಲು ಅವರ ನೌಕರ, ಗಾಡಿ ನಿಲ್ದಾಣಕ್ಕೆ ಬಂದಿದ್ದನು. ಆದರೆ ನಾನು ಅವನನ್ನು ನೋಡಲಿಲ್ಲ. ಅವನೂ ನನ್ನನ್ನು ಗುರುತು ಹಿಡಿದಂತೆ ಕಾಣಲಿಲ್ಲ. ಆದುದರಿಂದ ಯಾವುದಾದರೂ ಹೋಟಲಿಗೆ ಹೋಗುವುದೆಂದು ನಾನು ನಿಶ್ಚಯಿಸಿದೆನು. ಅನೇಕ ಹೋಟೇಲುಗಳ ಹೆಸರು ನನಗೆ ಗೊತ್ತಿದ್ದಿತು. ಒಂದು ಗಾಡಿಯನ್ನು ಗೊತ್ತುಮಾಡಿಕೊಂಡು ಗ್ರ್ಯಾಂಡ್ ನ್ಯಾಷನಲ್ ಹೊಟೇಲಿಗೆ ಹೊಡೆಯುವಂತೆ ಹೇಳಿದೆನು. ಹೊಟೇಲಿನ ಮ್ಯಾನೇಜರನ್ನು ಕಂಡು

"ನನಗೆ ಒಂದು ಕೊಠಡಿ ಬೇಕು" ಎಂದು ಕೇಳಿದೆನು. ಆತ ನನ್ನನ್ನು ದುರುಗುಟ್ಟಿಕೊಂಡು ನೋಡಿದನು. ಅನಂತರ ವಿನಯದಿಂದ "ಏನು ಮಾಡಲಿ ? ಎಲ್ಲ ಕೊಠಡಿಗಳೂ ತುಂಬಿಹೋಗಿವೆಯಲ್ಲ ?" ಎಂದು ಹೇಳಿ ನನ್ನನ್ನು "ಹೋಗಿ ಬನ್ನಿ" ಎಂದು ಕಳುಹಿಸಿಬಿಟ್ಟನು. ಆದುದರಿಂದ ನಾನು ಗಾಡಿಯವನಿಗೆ ಮಹಮದ್ ಖಾಸಿಮ್ ಕಾಮ್ರುದ್ದೀನರ ಅಂಗಡಿಗೆ ಹೋಗು ವಂತೆ ಹೇಳಿದೆನು. ಅಲ್ಲಿ ಅಬ್ದುಲ್ ಗನಿ ಸೇಠರು ನನ್ನನ್ನೇ ಎದುರು ನೋಡುತ್ತಾ ಕುಳಿತಿದ್ದರು. ಅವರು ನನ್ನನ್ನು ಆದರದಿಂದ ಎದುರು ಗೊಂಡರು. ಹೋಟೆಲಿನಲ್ಲಿ ನನಗಾದ ಅನುಭವದ ಕಥೆ ಕೇಳಿ ಅವರು ಬಹಳ ನಕ್ಕರು. "ಹೋಟೆಲಿಗೆ ನಿಮ್ಮನ್ನು ಎಂದಿಗಾದರೂ ಸೇರಿಸುತ್ತಾರೆಂದು ನೀವು ನಿರೀಕ್ಷಿಸಬಹುದೇ ?" ಎಂದು ಕೇಳಿದರು. "ಯಾಕೆ ಸೇರಿಸುವುದಿಲ್ಲ ?" ಎಂದು ನಾನು ಕೇಳಿದೆ.

"ನೀವು ಇಲ್ಲಿ ಕೆಲವು ದಿನಗಳು ನಿಂತರೆ ನಿಮಗೆ ಈ ವಿಷಯ ಸ್ಪಷ್ಟ ವಾಗುವುದು. ಇಲ್ಲಿ ನಮ್ಮಂಥವರು ಮಾತ್ರ ಇಂತಹ ದೇಶದಲ್ಲಿ ಇರಬಲ್ಲೆವು. ಏಕೆಂದರೆ ಹಣಗಳಿಸುವುದಕ್ಕಾಗಿ ನಾವು ಯಾವ ಅವಮಾನವನ್ನಾದರೂ ಸಹಿಸಿಕೊಳ್ಳುವೆವು" ಎಂದರು ಅವರು. ಅನಂತರ ಅವರು ದಕ್ಷಿಣ ಆಫ್ರಿಕಾ ದಲ್ಲಿ ವಾಸಿಸುತ್ತಿರುವ ಭಾರತೀಯರ ಕಷ್ಟಗಳ ದಾರುಣ ಕಥೆಯನ್ನೆಲ್ಲ ನನಗೆ ವಿವರಿಸಿದರು.

ಈ ಕಥೆ ಮುಂದುವರಿದಂತೆ ಸೇಠ್ ಅಬ್ದುಲ್‌ಗನಿಯವರ ವಿಷಯ ನಮಗೆ ಇನ್ನೂ ಹೆಚ್ಚು ಹೆಚ್ಚಾಗಿ ಗೊತ್ತಾಗುವುದು.

ಅವರು ಮುಂದುವರಿಸಿ ಹೀಗೆ ಹೇಳಿದರು. "ಈ ದೇಶ, ನಿಮ್ಮಂಥ ವರಿಗಲ್ಲ. ಇಲ್ಲಿ ನೋಡಿ. ನಾಳೆ ನೀವು ಪ್ರಿಟೋರಿಯಾಕ್ಕೆ ಹೋಗಬೇಕಾ ಗಿದೆ. ನೀವು ಮೂರನೆಯ ದರ್ಜೆಯಲ್ಲಿ ಪ್ರಯಾಣಮಾಡಬೇಕಾಗಿದೆ. ನೆಟಾಲ್‌ನಲ್ಲಿರುವುದಕ್ಕಿಂತ ಟ್ರಾನ್ಸ್‌ವಾಲ್‌ನಲ್ಲಿ ಪರಿಸ್ಥಿತಿ ಇನ್ನೂ ಹೆಚ್ಚು ಕೆಡಕಾಗಿದೆ. ಇಲ್ಲಿ ಭಾರತೀಯರಿಗೆ ಮೊದಲನೆಯ ಮತ್ತು ಎರಡನೆಯ ದರ್ಜೆಯ ಟಿಕೆಟ್ಟುಗಳನ್ನು ಕೊಡುವುದೇ ಇಲ್ಲ."

"ಈ ಪರಿಸ್ಥಿತಿಯನ್ನು ಸರಿಪಡಿಸಲು ನೀವು ಮೇಲಿಂದ ಮೇಲೆ ಸತತ ಪ್ರಯತ್ನ ಮಾಡಿದಂತೆ ಕಾಣುವುದಿಲ್ಲ" ಎಂದೆನು.

"ನಾವು ಅನೇಕ ಮನವಿಗಳನ್ನು ಕಳುಹಿಸಿದ್ದೇವೆ. ಆದರೆ ಇದನ್ನೂ ಒಪ್ಪಿಕೊಳ್ಳಬೇಕು. ಭಾರತೀಯರಿಗೆ ತಾವು ಯಾವಾಗಲೂ ಮೊದಲನೆಯ ಅಥವಾ ಎರಡನೆಯ ದರ್ಜೆಯಲ್ಲಿಯೇ ಪ್ರಯಾಣ ಮಾಡಬೇಕೆಂಬ ಹಠವೇನೂ ಇಲ್ಲ."

ನಾನು ರೈಲ್ವೆ ಕಾನೂನುಗಳ ನಿಯಮಗಳನ್ನೆಲ್ಲ ಓದಿ ನೋಡಿದೆನು. ಆ ಕಾನೂನಿನಲ್ಲಿ ದೋಷವಿದ್ದಿತು; ತಪ್ಪಿಸಿಕೊಳ್ಳಲು ದಾರಿಯಿದ್ದಿತು. ಟ್ರಾನ್ಸ್‌ವಾಲ್‌ನ ಕಾನೂನುಗಳ ಭಾಷೆ, ಸ್ಪಷ್ಟವೂ ಅಸಂದಿಗ್ಧವೂ ಆಗಿರಲಿಲ್ಲ. ರೈಲ್ವೆ ಕಾನೂನು ಇನ್ನೂ ಹೆಚ್ಚು ಅಸ್ಪಷ್ಟವೂ ಗೊಂದಲಕ್ಕೆ ಎಡೆಗೊಡುವುದೂ ಆಗಿದ್ದಿತು.

ನಾನು ಸೇಠರಿಗೆ ಹೇಳಿದೆನು. "ನಾನು ರೈಲಿನ ಮೊದಲನೆಯ ದರ್ಜೆಯಲ್ಲಿಯೇ ಪ್ರಿಟೋರಿಯಾಕ್ಕೆ ಪ್ರಯಾಣಮಾಡುತ್ತೇನೆ. ಅದು ಸಾಧ್ಯವಿಲ್ಲದಿದ್ದರೆ ಒಂದು ಕುದುರೆಗಾಡಿಯನ್ನು ಗೊತ್ತುಮಾಡಿಕೊಂಡು ಅದರಲ್ಲಿ ಪ್ರಯಾಣಮಾಡುತ್ತೇನೆ. ಬರಿಯ ಮುವ್ವತ್ತೇಳು ಮೈಲಿ ಅಂತಹ ದೂರವೇನೂ ಅಲ್ಲ."

ಸೇಠ್ ಅಬ್ದುಲ್ ಗನಿಯವರು "ಹೀಗೆ ಮಾಡಿದರೆ ಪ್ರಯಾಣಕ್ಕೆ ಹೆಚ್ಚು ಕಾಲ ಹಿಡಿಯುವುದು. ಹಣವೂ ಹೆಚ್ಚಾಗಿ ವೆಚ್ಚವಾಗುವುದು" ಎಂದು ವಿವರಿಸಿದರು. ಆದರೆ ನಾನು ರೈಲಿನಲ್ಲಿ ಮೊದಲನೆಯ ದರ್ಜೆಯಲ್ಲಿ ಪ್ರಯಾಣ ಮಾಡಬೇಕೆಂಬ ಸಲಹೆಗೆ ಅವರು ಒಪ್ಪಿದರು. ನಾನು ಸ್ಟೇಷನ್ ಮಾಸ್ಟರಿಗೆ ಒಂದು ಪತ್ರವನ್ನು ಬರೆದೆನು. ನಾನು ಬ್ಯಾರಿಸ್ಟರ್, ನಾನು ಯಾವಾಗಲೂ ಮೊದಲನೆ ದರ್ಜೆಯಲ್ಲಿಯೇ ಪ್ರಯಾಣಮಾಡುವುದು ವಾಡಿಕೆ. ನಾನು ಪ್ರಿಟೋರಿಯವನ್ನು ಆದಷ್ಟು ಬೇಗ ತಲಪಬೇಕಾಗಿದೆ. ರೈಲು ಹೊರಡುವುದಕ್ಕೆ ಮುಂಚೆ ಈ ಕಾಗದಕ್ಕೆ ಪ್ರತ್ಯುತ್ತರವನ್ನು ಕೊಡಲು ನಿಮಗೆ ಕಾಲಾವಕಾಶವಿಲ್ಲ. ಆದುದರಿಂದ ನಾನೇ ನೇರವಾಗಿ ಬಂದು ಸ್ಟೇಷನ್‌ನಲ್ಲಿ ನಿಮ್ಮಿಂದ ಪ್ರತ್ಯುತ್ತರವನ್ನು ಪಡೆಯುತ್ತೇನೆ. ಮೊದಲನೆಯ ದರ್ಜೆಯ ಟಿಕೆಟ್ ನನಗೆ ದೊರೆಯುವುದೆಂದು ನಿರೀಕ್ಷಿಸುತ್ತೇನೆ" ಎಂದು ತಿಳಿಸಿದ್ದೆನು. ಪ್ರತ್ಯುತ್ತರವನ್ನು ನೇರವಾಗಿ ನಾನೇ ಬಂದು ಪಡೆಯುತ್ತೇನೆ ಎಂದು ನಾನು ಬರೆದುದರ

ಹಿಂದೆ ಒಂದು ಉದ್ದೇಶವಿದ್ದಿತು. ಕೂಲಿ ಬ್ಯಾರಿಸ್ಟರ್ ಎಂದರೆ ಸ್ಟೇಷನ್ ಮಾಸ್ಟರು ಏನೋ ಭಾವಿಸಿಕೊಂಡಿರುತ್ತಾರೆ. ಮೊದಲನೆಯ ದರ್ಜೆಯ ಟಿಕೆಟ್ ಕೊಡುವುದಕ್ಕಾಗುವುದಿಲ್ಲ ಎಂದು ಒಂದು ಸಲ ಆತ ಪ್ರತ್ಯುತ್ತರ ಬರೆದು ಕಳುಹಿಸಿ ಬಿಟ್ಟರೆ, ನಾನು ಪ್ರತ್ಯಕ್ಷವಾಗಿ ಎದುರಿಗೆ ಹೋದಾಗಲೂ ಹಾಗೆಯೇ ಹೇಳಿ ಬಿಡಬಹುದು. ಆದುದರಿಂದ ನಾನು ಅವನ ಎದುರಿಗೆ ಕಳಂಕರಹಿತವಾದ ಅಚ್ಚುಕಟ್ಟು ಇಂಗ್ಲಿಷ್ ಉಡುಪನ್ನು ಧರಿಸಿಕೊಂಡು ಹೋಗಬೇಕು. ನನ್ನ ಮಾತುಗಳಿಂದ, ಮೊದಲನೆಯ ದರ್ಜೆಯ ಟಿಕೆಟ್ ಕೊಡುವಂತೆ ಆತನನ್ನು ಒಲಿಸಿಕೊಳ್ಳಬಹುದೆಂದೂ ನಾನು ಯೋಚಿಸಿದ್ದೆನು. ಆದುದರಿಂದ ನಾನು ಮೋಟು ಅಂಗಿ (ಇಂಗ್ಲಿಷ್ ಫ್ಯಾಷನ್) ನೆಕ್‌ಟೈ ಇವುಗಳನ್ನು ಧರಿಸಿಕೊಂಡು ಸ್ಟೇಷನ್ನಿಗೆ ಹೋದೆನು. ಸ್ಟೇಷನ್ ಮಾಸ್ಟರರ ಮುಂದೆ ಮೇಜಿನ ಮೇಲೆ ಒಂದು ಸವರನ್ ನಾಣ್ಯವನ್ನು ಇಟ್ಟು ನನಗೆ ಮೊದಲನೆಯ ದರ್ಜೆಯ ಟಿಕೆಟ್ ಕೊಡುವಂತೆ ಕೇಳಿದೆನು.

ಆತ "ನೀವು ನನಗೆ ಆ ಕಾಗದ ಬರೆದು ಕಳುಹಿಸಿದಿರಿ ಅಲ್ಲವೆ ?

ನಾನು : "ಹೌದು. ನನಗೆ ಒಂದು ಮೊದಲನೆಯ ದರ್ಜೆಯ ಟಿಕೆಟ್ ಕೊಟ್ಟರೆ ತುಂಬ ಉಪಕಾರವಾಗುವುದು. ನಾನು ಇಂದೇ ಪ್ರಿಟೋರಿಯ ತಲಪಬೇಕು."

ಆತ ನಕ್ಕನು. ಅವನಿಗೆ ನನ್ನಲ್ಲಿ ಕನಿಕರವುಂಟಾಯಿತು. "ನಾನು ಟ್ರಾನ್ಸ್‌ವಾಲಿನವನಲ್ಲ. ನಾನು ಹಾಲೆಂಡಿಗೆ ಸೇರಿದವನು. ನಿಮ್ಮ ಭಾವನೆಗಳು ನನಗೆ ಅರ್ಥವಾಗುತ್ತವೆ. ನಿಮ್ಮಲ್ಲಿ ನನ್ನ ಸಹಾನುಭೂತಿ ಇದೆ. ನಿಮಗೆ ಒಂದು ಟಿಕೆಟ್ ಕೊಡುತ್ತೇನೆ. ಆದರೆ ಒಂದು ಷರತ್ತಿನ ಮೇಲೆ. ಗಾರ್ಡ್ ನಿಮ್ಮ ಪ್ರಯಾಣಕ್ಕೆ ತಡೆ ಹಾಕಿದರೆ ನೀವು ರೈಲ್ವೆ ಕಂಪೆನಿಗೆ ವಿರೋಧವಾಗಿ ಮೊಕದ್ದಮೆ ಹೂಡಬಾರದು. ಅದೇ ಷರತ್ತು. ನಿಮಗೆ ಸುಖ ಪ್ರಯಾಣವನ್ನು ಕೋರುತ್ತೇನೆ. ನೀವು ಸಭ್ಯ ಗೃಹಸ್ಥರೆಂಬುದು (ಜೆಂಟಲ್‌ಮನ್) ನಿಮ್ಮನ್ನು ನೋಡಿದರೇ ಗೊತ್ತಾಗುತ್ತದೆ."

ಹೀಗೆ ಹೇಳಿ ಆತ ನನಗೆ ಟಿಕೆಟ್ ಕೊಟ್ಟನು. ನಾನು ಆತನಿಗೆ ನನ್ನ ಕೃತಜ್ಞತೆಯನ್ನು ಅರ್ಪಿಸಿ, ಆತನು ಕೇಳಿದ ಆಶ್ವಾಸನವನ್ನು ಕೊಟ್ಟೆನು.

ನನ್ನನ್ನು ರೈಲಿಗೆ ಕೂರಿಸಲು ಸೇಠ್ ಅಬ್ದುಲ್ ಗನಿ ಸ್ಟೇಷನ್ನಿಗೆ ಬಂದಿದ್ದರು. ನಡೆದ ಸಂಗತಿಯನ್ನು ನೋಡಿ ಅವರಿಗೆ ಸಂತೋಷವೂ ಆಶ್ಚರ್ಯವೂ ಉಂಟಾಯಿತು. ಆದರೂ ಅವರು ನನ್ನನ್ನು ಎಚ್ಚರಿಸಿದರು "ಸದ್ಯ ನೀವು ಸುಖವಾಗಿ ಪ್ರಿಟೋರಿಯ ತಲುಪಿದರೆ ಸಾಕು ಗಾರ್ಡು, ನಿಮ್ಮನ್ನು ಪ್ರಥಮ ದರ್ಜೆಯ ಗಾಡಿಯಲ್ಲಿ ಕೂರುಗೊಡುವುದಿಲ್ಲ. ಒಂದು ವೇಳೆ ಆತ ಕೂರುಗೊಟ್ಟರೂ ಉಳಿದ ಪ್ರಯಾಣಿಕರು ಕೂರುಗೊಡುವುದಿಲ್ಲ ಎಂಬುದು ನನ್ನ ಭಯ" ಎಂದು ಹೇಳಿದರು.

ನಾನು ಒಂದನೆಯ ದರ್ಜೆಯ ಗಾಡಿಯಲ್ಲಿ ಕುಳಿತೆನು. ರೈಲು ಹೊರಟಿತು. ಜರ್ಮಿಸ್ಟನ್ ಎಂಬ ಸ್ಟೇಷನ್ನಿನಲ್ಲಿ ಗಾರ್ಡು, ಟಿಕೆಟ್‌ಗಳನ್ನು ಪರೀಕ್ಷಿಸಲು ಗಾಡಿಗೆ ಬಂದನು. ನನ್ನನ್ನು ಅಲ್ಲಿ ನೋಡಿ ಆತನಿಗೆ ಕೋಪ ಬಂದಿತು. ಮೂರನೆಯ ದರ್ಜೆಯ ಗಾಡಿಗೆ ಹೋಗು ಎಂದು ನನಗೆ ಬೆರಳಸನ್ನೆಯಿಂದ ಆತ ಸೂಚಿಸಿದನು. ನಾನು ಆತನಿಗೆ ನನ್ನ ಮೊದಲನೆಯ ದರ್ಜೆಯ ಟಿಕೆಟ್ ತೋರಿಸಿದೆನು. ಆತ "ಪರವಾಯಿಲ್ಲ, ಮೂರನೆಯ ತರಗತಿಗೆ ನಡೆ" ಎಂದನು.

ಗಾಡಿಯಲ್ಲಿ ನನ್ನ ಹೊರತು, ಇದ್ದವನು ಒಬ್ಬ ಇಂಗ್ಲಿಷ್ ಪ್ರಯಾಣಿಕ ಮಾತ್ರ. ಆತ ಗಾರ್ಡಿಗೆ "ಆ ಗೃಹಸ್ಥನಿಗೆ ಏಕೆ ತೊಂದರೆ ಕೊಡುತ್ತಿಯೋ ? ಅವನ ಹತ್ತಿರ ಮೊದಲನೆಯ ದರ್ಜೆಯ ಟಿಕೆಟ್ ಇರುವುದು ನಿನಗೆ ಕಾಣುವುದಿಲ್ಲವೆ ? ಆತ ನನ್ನ ಜತೆ ಪ್ರಯಾಣ ಮಾಡುವುದರಿಂದ ನನಗೆ ಎಳ್ಳಷ್ಟೂ ತೊಂದರೆಯಿಲ್ಲ" ಎಂದು ಹೇಳಿ ನನ್ನ ಕಡೆ ತಿರುಗಿ "ನಿಮ್ಮ ಪಾಡಿಗೆ ನೀವು ಸುಖವಾಗಿ ಪ್ರಯಾಣ ಮಾಡಿ" ಎಂದು ಹೇಳಿದನು.

ಗಾರ್ಡು "ಕೂಲಿಯೊಂದಿಗೆ ಪ್ರಯಾಣ ಮಾಡುವುದು ನಿಮ್ಮ ಇಚ್ಛೆಯಾದರೆ ನನಗೇನು ?" ಎಂದು ಗೊಣಗುತ್ತಾ ಹೊರಟುಹೋದನು.

ಸಂಧ್ಯಾಕಾಲ ಎಂಟು ಗಂಟೆಗೆ ರೈಲು ಪ್ರಿಟೋರಿಯವನ್ನು ಸೇರಿತು.

೧೦

ಪ್ರಿಟೋರಿಯಾದಲ್ಲಿ ಮೊದಲನೆಯ ದಿನ

ದಾದಾ ಅಬ್ದುಲ್ಲಾರ ವಕೀಲರ ಪರವಾಗಿ, ನನ್ನನ್ನು ಎದುರುಗೊಳ್ಳಲು ಯಾರಾದರೂ, ಪ್ರಿಟೋರಿಯಾ ರೈಲ್ವೆ ನಿಲ್ದಾಣಕ್ಕೆ ಬಂದಿರಬಹುದೆಂದು ನಾನು ನಿರೀಕ್ಷಿಸಿದ್ದೆನು. ನಾನು ಯಾವ ಭಾರತೀಯರ ಮನೆಯಲ್ಲಿಯೂ ಇಳಿದುಕೊಳ್ಳುವುದಿಲ್ಲವೆಂದು ಖಂಡಿತವಾಗಿ ಹೇಳಿದ್ದುದರಿಂದ, ನನ್ನನ್ನು ಎದುರುಗೊಳ್ಳಲು ಯಾವ ಭಾರತೀಯನೂ ಸ್ಟೇಷನ್ನಿಗೆ ಬಂದಿರುವುದಿಲ್ಲವೆಂದು ನನಗೆ ಗೊತ್ತಿದ್ದಿತು. ಆದರೆ ವಕೀಲರು ಯಾರನ್ನೂ ಕಳುಹಿಸಿರಲಿಲ್ಲ. ನಾನು ಅಲ್ಲಿಗೆ ಹೋದ ದಿನ ಭಾನುವಾರವಾಗಿದ್ದುದರಿಂದ ಯಾರನ್ನಾದರೂ ಕಳುಹಿಸಬೇಕಾದರೆ ತುಂಬ ತೊಂದರೆಯಾಗುತ್ತಿದ್ದಿತೆಂದು ನನಗೆ ಅನಂತರ ಗೊತ್ತಾಯಿತು. ನನಗೆ ಏನು ಮಾಡುವುದಕ್ಕೂ ತೋಚಲಿಲ್ಲ. ಎಲ್ಲಿಗೆ ಹೋಗುವುದು ಎಂಬ ಯೋಚನೆಯುಂಟಾಯಿತು ಯಾವ ಹೋಟಲಿನಲ್ಲಿಯೂ ನನ್ನನ್ನು ಸೇರಿಸಲಾರರೆಂದು ನಾನು ಹೆದರಿದೆನು.

೧೮೯೩ನೆ ಇಸವಿಯ ಪ್ರಿಟೋರಿಯಾ ಸ್ಟೇಷನ್ನೇ ಬೇರೆ, ೧೯೧೪ರ ಪ್ರಿಟೋರಿಯಾ ಸ್ಟೇಷನ್ನೇ ಬೇರೆ. ದೀಪಗಳು ಮಂಕಾಗಿ ಉರಿಯುತ್ತಿದ್ದವು. ಪ್ರಯಾಣಿಕರ ಸಂಖ್ಯೆ ಬಹು ಕಡಿಮೆಯಾಗಿದ್ದಿತು. ಎಲ್ಲ ಪ್ರಯಾಣಿಕರೂ ಸ್ಟೇಷನ್ನಿನಿಂದ ಹೋಗುವವರೆಗೆ ನಾನು ಸುಮ್ಮನಿದ್ದೆನು. ಅನಂತರ ಟಿಕೆಟ್ ಕಲೆಕ್ಟರನಿಗೆ ಬಿಡುವಾದಾಗ ನನ್ನ ಟಿಕೆಟ್ಟನ್ನು ಅವನಿಗೆ ಕೊಟ್ಟು 'ಒಂದು ಸಣ್ಣ ಹೋಟಲು ಎಲ್ಲಿರುವುದೆಂಬುದನ್ನು ತಿಳಿದುಕೊಳ್ಳೋಣ ; ಅಥವಾ ಒಂದು ರಾತ್ರಿಯನ್ನು ಎಲ್ಲಿ ಕಳೆಯಬಹುದೆಂಬುದನ್ನು ತಿಳಿದುಕೊಳ್ಳೋಣ' ಎಂದು ಯೋಚಿಸಿದೆನು. ಇಲ್ಲದಿದ್ದರೆ ಸ್ಟೇಷನ್ನಿನಲ್ಲಿಯೇ ರಾತ್ರಿ ಕಳೆಯೋಣ ಎಂದೂ ಯೋಚಿಸಿದೆನು. ಈ ವಿಷಯವನ್ನು ಟಿಕೆಟ್ ಕಲೆಕ್ಟರ್‌ರಿಂದ ವಿಚಾರಿಸಲೂ ನಾನು ಹಿಂದೆಗೆದೆನು. ಅಲ್ಲಿ ಆತ, ನನ್ನನ್ನು ಅವಮಾನಗೊಳಿಸುತ್ತಾನೋ ಎಂದು ನನಗೆ ಭಯವಾಗಿದ್ದಿತು.

ಎಲ್ಲ ಪ್ರಯಾಣಿಕರೂ ಹೊರಟು ಹೋಗಿ, ಸ್ಟೇಷನ್ ಬರಿದಾಯಿತು. ನನ್ನ ಟಿಕೆಟನ್ನು ಕಲೆಕ್ಟರಿಗೆ ಕೊಟ್ಟು ಆತನನ್ನು ಪ್ರಶ್ನಿಸತೊಡಗಿದೆನು.

ಆತ ನನಗೆ ವಿನಯದಿಂದಲೇ ಪ್ರತ್ಯುತ್ತರಕೊಟ್ಟನು. ಆದರೆ ಅವನಿಂದ ಹೆಚ್ಚು ಪ್ರಯೋಜನವಾಗುವುದಿಲ್ಲವೆಂಬುದು ನನಗೆ ಗೊತ್ತಾಯಿತು. ಆದರೆ ಸಮೀಪದಲ್ಲಿ ನಿಂತಿದ್ದ ಒಬ್ಬ ಅಮೆರಿಕನ್ ನೀಗ್ರೋ, ನಮ್ಮ ಸಂಭಾಷಣೆಯಲ್ಲಿ ಸೇರಿಕೊಂಡನು.

ಆತ ಹೇಳಿದನು : "ನೀವು ಇಲ್ಲಿಗೆ ಪೂರ್ಣವಾಗಿ ಹೊಸಬರು, ನಿಮಗೆ ಇಲ್ಲಿ ಯಾರೂ ಸ್ನೇಹಿತರಿಲ್ಲವೆಂದು ಕಾಣುತ್ತದೆ. ನೀವು ನನ್ನ ಜತೆಯಲ್ಲಿ ಬಂದರೆ ನಿಮ್ಮನ್ನು ಒಂದು ಸಣ್ಣ ಹೋಟಲಿಗೆ ಕರೆದುಕೊಂಡು ಹೋಗುತ್ತೇನೆ. ಅದರ ಯಜಮಾನ ಒಬ್ಬ ಅಮೆರಿಕದವನು. ನನಗೆ ಆತ ಚೆನ್ನಾಗಿ ಗೊತ್ತು. ಆತ ನಿಮ್ಮನ್ನು ತನ್ನ ಹೋಟಲಿನಲ್ಲಿ ಇಳಿಸಿ ಕೊಳ್ಳುವನು."

ಆತನ ಆಶ್ವಾಸನ ಫಲಕಾರಿಯಾಗುವ ವಿಷಯದಲ್ಲಿ ನನಗೆ ಸಂಶಯ ವಿದ್ದಿತು. ಆದರೂ ನಾನು ಆತನ ಸಲಹೆಯನ್ನು ವಂದನಾಪೂರ್ವಕ ಅಂಗೀಕರಿಸಿದೆನು. ಆತ ನನ್ನನ್ನು 'ಜಾನ್‌ಸನ್ಸ್ ಫ್ಯಾಮಿಲಿ ಹೊಟೇಲ್' ಎಂಬಲ್ಲಿಗೆ ಕರೆದುಕೊಂಡು ಹೋದನು. ಆತ ಜಾನ್ಸನ್‌ನನ್ನು ಒಂದು ಕಡೆಗೆ ಕರೆದು ನನ್ನ ವಿಷಯವನ್ನು ತಿಳಿಸಿದನು. ಜಾನ್ಸನ್ ನನ್ನನ್ನು ಆ ರಾತ್ರಿ ಹೋಟಲಿನಲ್ಲಿ ಇಳಿಸಲು ಒಪ್ಪಿದನು. ಆದರೆ ನನ್ನ ಕೊಠಡಿಯಲ್ಲಿಯೇ ನಾನು ಊಟಮಾಡಬೇಕೆಂಬ ಷರತ್ತಿಗೆ ನನ್ನನ್ನು ಒಳಪಡಿಸಿದನು.

ಆತ ಹೀಗೆ ಹೇಳಿದನು : "ನನಗೆ ವರ್ಣದ್ವೇಷವಿಲ್ಲವೆಂದು ನಿಮಗೆ ಆಶ್ವಾಸನ ಕೊಡುತ್ತೇನೆ. ಆದರೆ ನನ್ನ ಗಿರಾಕಿಗಳೆಲ್ಲ ಐರೋಪ್ಯ ಜನರು. ಭೋಜನಶಾಲೆಯಲ್ಲಿ ನೀವು ಊಟಮಾಡಲು ನಾನು ಅವಕಾಶ ಕೊಟ್ಟರೆ ನನ್ನ ಗಿರಾಕಿಗಳಿಗೆಲ್ಲ ಅಸಮಾಧಾನವಾಗಬಹುದು. ಅವರು ನನ್ನ ಹೋಟಲನ್ನು ಬಿಟ್ಟು ಹೋದರೂ ಹೋಗಬಹುದು".

"ಈ ರಾತ್ರಿ ಇಳಿದುಕೊಳ್ಳುವುದಕ್ಕಾದರೂ ನೀವು ಸ್ಥಳ ಕೊಟ್ಟುದ ಕ್ಕಾಗಿ ನಿಮ್ಮನ್ನು ವಂದಿಸುತ್ತೇನೆ. ಇಲ್ಲಿಯ ಪರಿಸ್ಥಿತಿ ಸ್ವಲ್ಪ ಹೆಚ್ಚು ಕಡಿಮೆ, ನನಗೆ ಗೊತ್ತಾಗಿದೆ. ನಿಮ್ಮ ಕಷ್ಟ, ನನಗೆ ಅರ್ಥವಾಗಿದೆ. ನೀವು ನನ್ನ ಕೊಠಡಿಯಲ್ಲಿಯೇ ನನ್ನ ಭೋಜನವನ್ನು ಏರ್ಪಡಿಸುವುದು ನನಗೆ ಅಸಮಾಧಾನವಿಲ್ಲ. ನಾನು ನಾಳೆ ಬೇರೆ ಏರ್ಪಾಡನ್ನು ಮಾಡಿ

ಕೊಳ್ಳಲು ಸಾಧ್ಯವಾಗಬಹುದೆಂದು ನಂಬುತ್ತೇನೆ" ಎಂದು ನಾನು ಪ್ರತ್ಯುತ್ತರವಿತ್ತೆನು.

ನಾನು ಕೊಠಡಿಯಲ್ಲಿ ಹೋಗಿ ಆಲೋಚಿಸುತ್ತಾ ಒಬ್ಬಂಟಿಗನಾಗಿ ಕುಳಿತೆನು. ಹೋಟಲಿನಲ್ಲಿಯೂ ಬಹಳ ಜನ ಗಿರಾಕಿಗಳು ಇರಲಿಲ್ಲ. ಪರಿಚಾರಕನು (ವೇಟರ್) ನನ್ನ ಊಟವನ್ನು ತೆಗೆದುಕೊಂಡು ಬೇಗ ಬರುವನೆಂದು ನಿರೀಕ್ಷಿಸುತ್ತಾ ನಾನು ಕುಳಿತಿದ್ದೆನು. ಅದರ ಬದಲು ಜಾನ್‌ಸನ್ನನೇ ಬಂದನು. "ನಿಮ್ಮ ಊಟವನ್ನು ನೀವು ಇಲ್ಲಿಯೇ ಮಾಡಬೇಕೆಂದು ನಿಮಗೆ ಹೇಳಿದುದಕ್ಕೆ ನನಗೆ ನಾಚಿಕೆಯಾಯಿತು. ಆದುದರಿಂದ ನಾನು ನನ್ನ ಇತರ ಗಿರಾಕಿಗಳೊಂದಿಗೆ ಮಾತನಾಡಿದೆ; ಭೋಜನ ಶಾಲೆಯಲ್ಲಿ ನೀವು ಊಟಮಾಡಿದರೆ ಅವರಿಗೇನಾದರೂ ಆಕ್ಷೇಪಣೆಯುಂಟೆ ?" ಎಂದು ಕೇಳಿದೆ. ಅವರು "ನಮಗೇನೂ ಆಕ್ಷೇಪಣೆಯಿಲ್ಲ. ಆತನು ಬೇಕಾದಷ್ಟು ದಿನಗಳು ಇಲ್ಲಿ ಇರಲಿ" ಎಂದು ಹೇಳಿದರು. ಆದುದರಿಂದ ನಿಮಗೆ ಬೇಕಾದರೆ ಭೋಜನ ಶಾಲೆಗೆ ಬನ್ನಿ. ಮತ್ತು ಎಷ್ಟು ದಿನ ಬೇಕೋ ಅಷ್ಟು ದಿನ ಇಲ್ಲಿಯೇ ಇರಿ" ಎಂದು ಹೇಳಿದನು.

ನಾನು ಆತನನ್ನು ವಂದಿಸಿ ಭೋಜನ ಶಾಲೆಗೆ ಹೋಗಿ ತೃಪ್ತಿಯಾಗಿ ಊಟಮಾಡಿದೆನು.

ಮರು ದಿನ ಬೆಳಗ್ಗೆ ನಾನು ವಕೀಲರನ್ನು ನೋಡಿದೆನು. ಅವರ ಹೆಸರು ಎ. ಡಬ್ಲ್ಯು. ಬೇಕರ್ ಎಂದು. ಅಬ್ದುಲ್ಲಾ ಸೇಠರು ಅವರ ವಿಚಾರವನ್ನು ನಮಗೆ ತಕ್ಕಮಟ್ಟಿಗೆ ತಿಳಿಸಿದ್ದುದರಿಂದ ಅವರ ಆದರದ ಸ್ವಾಗತದಿಂದ ನಾನು ಆಶ್ಚರ್ಯಗೊಳ್ಳಲಿಲ್ಲ. ಅವರು ನನ್ನನ್ನು ತುಂಬ ವಿಶ್ವಾಸದಿಂದ ಬರಮಾಡಿಕೊಂಡು ನನ್ನ ಯೋಗಕ್ಷೇಮವನ್ನು ವಿಚಾರಿಸಿದರು. ನಾನು ನನ್ನ ವಿಷಯವನ್ನೆಲ್ಲ ತಿಳಿಸಿದೆನು. ಅನಂತರ ಅವರು ಹೀಗೆ ಹೇಳಿದರು: "ಈಗ ಬ್ಯಾರಿಸ್ಟರ್ ಆಗಿ ನೀವು ಮಾಡಬಹುದಾದ ಕೆಲಸ ಯಾವುದೂ ಇಲ್ಲ. ಏಕೆಂದರೆ ನಾವು ಉತ್ತಮರಾದ ವಕೀಲರನ್ನು ಗೊತ್ತು ಮಾಡಿದ್ದೇವೆ. ಈ ಮೊಕದ್ದಮೆ ತುಂಬ ದಿನಗಳಿಂದ ಎಳೆಯುತ್ತಿದೆ ಮತ್ತು ತೊಡಕಾದುದು. ನಮಗೆ ಬೇಕಾದ ವಿಷಯಗಳನ್ನು ತಿಳಿಸುವುದಕ್ಕೆ ಮಾತ್ರ ನಿಮ್ಮ ಸಹಾಯವನ್ನು ನಾನು ತೆಗೆದುಕೊಳ್ಳುತ್ತೇನೆ. ನಮ್ಮ ಕಕ್ಷಿಗಾರರೊಂದಿಗೆ

ನಮ್ಮ ವಿಚಾರವಿನಿಮಯ ಇನ್ನು ಸುಲಭ. ಏಕೆಂದರೆ ಅವರು ನನಗೆ ತಿಳಿಸಬೇಕಾದ ವಿಷಯಗಳನ್ನೆಲ್ಲ ಇನ್ನು ನಿಮ್ಮ ಮೂಲಕ ತಿಳಿದುಕೊಳ್ಳುತ್ತೇನೆ. ಇದರಿಂದ ನಿಜವಾಗಿ ಅನುಕೂಲವಾಯಿತು. ನಾನು, ನೀವು ಇಳಿದುಕೊಳ್ಳಲು ಇನ್ನೂ ಕೊಠಡಿಯನ್ನು ಗೊತ್ತುಮಾಡಿಲ್ಲ. ನಿಮ್ಮನ್ನು ನೋಡಿ ಅನಂತರ ಮಾಡೋಣ ಎಂದು ಯೋಚಿಸಿದೆ. ಇಲ್ಲಿರುವ ವರ್ಣದ್ವೇಷ ಭಯಂಕರವಾದುದು. ಆದುದರಿಂದ ನಿಮ್ಮಂತಹವರಿಗೆ ಇಳಿದುಕೊಳ್ಳಲು ವಸತಿ ದೊರಕುವುದು ಕಷ್ಟ. ಆದರೆ ನನಗೆ ಒಬ್ಬ ಬಡ ಹೆಂಗಸು ಗೊತ್ತು. ಆಕೆ ಒಬ್ಬ ರೊಟ್ಟಿ ಮಾಡುವವನ ಹೆಂಡತಿ. ಅವಳ ಮನೆಯಲ್ಲಿ ನೀವು ಇರಲು ಆಕೆ ಒಪ್ಪಬಹುದು. ಇದರಿಂದ ಅವಳ ಉತ್ಪನ್ನ ಸ್ವಲ್ಪ ಅಧಿಕವಾಗುವುದು. ಬನ್ನಿ ಅವಳ ಮನೆಗೆ ಹೋಗೋಣ."

ವಕೀಲರು ನನ್ನನ್ನು ಅವಳ ಮನೆಗೆ ಕರೆದುಕೊಂಡು ಹೋದರು. ಅಲ್ಲಿ ಆಕೆಯೊಡನೆ ಏಕಾಂತವಾಗಿ ಸ್ವಲ್ಪ ಹೊತ್ತು ನನ್ನ ವಿಷಯವನ್ನು ಮಾತನಾಡಿದರು. ನಾನು ವಾರಕ್ಕೆ ೩೫ ಷಿಲಿಂಗ್ ಕೊಡುವುದಾದರೆ ತನ್ನ ಮನೆಯಲ್ಲಿ ಊಟಮಾಡಿಕೊಂಡಿರಲು ಆಕೆ ಒಪ್ಪಿದಳು.

ಮಿ. ಬೇಕರ್ ಅವರು ವಕೀಲರಾಗಿದ್ದುದು ಮಾತ್ರವಲ್ಲದೆ ಶ್ರದ್ಧಾವಂತರಾದ ಲೌಕಿಕ ಧರ್ಮೋಪದೇಶಕರಾಗಿದ್ದರು (ಪಾದರಿಗಳು, ಧರ್ಮೋಪದೇಶಕರು. ಅದು ಅವರ ಕಸಬು). ಅವರು ಇನ್ನೂ ಜೀವಂತರಾಗಿದ್ದಾರೆ. ಈಗ ವಕೀಲ ವೃತ್ತಿಯನ್ನು ಪೂರ್ಣವಾಗಿ ಬಿಟ್ಟು, ಕ್ರೈಸ್ತ ಧರ್ಮಬೋಧನೆಯಲ್ಲಿ ಮಾತ್ರ ತೊಡಗಿದ್ದಾರೆ. ಅವರು ಧನಿಕರು. ಈಗಲೂ ನನ್ನೊಂದಿಗೆ ಪತ್ರವ್ಯವಹಾರ ನಡೆಸುತ್ತಿದ್ದಾರೆ. ಅವರ ಪತ್ರಗಳಲ್ಲಿ ಅವರು ಮತ್ತೆ ಮತ್ತೆ ಅದೇ ವಿಷಯವನ್ನೇ ಪ್ರಸ್ತಾಪಿಸುತ್ತಾರೆ. ಬೇರೆ ಬೇರೆ ದೃಷ್ಟಿ ಕೋನದಿಂದ ಕ್ರೈಸ್ತ ಧರ್ಮದ ಉತ್ಕೃಷ್ಟತೆಯನ್ನು ಪ್ರತಿಪಾದಿಸಿ, ಏಸು ಮಾತ್ರವೇ ದೇವರ ಒಬ್ಬನೇ ಮಗನೆಂದೂ ಮನುಷ್ಯ ಕುಲದ ಉದ್ಧಾರಕನೆಂದೂ ಅವರು ವಾದಿಸುತ್ತಾರೆ.

ನಮ್ಮ ಮೊದಲನೆಯ ಭೆಟ್ಟಿಯ ಕಾಲದಲ್ಲಿಯೇ ಮಿ. ಬೇಕರರು ನನ್ನ ಧಾರ್ಮಿಕ ಅಭಿಪ್ರಾಯಗಳೇನೆಂಬುದನ್ನು ಕೇಳಿದರು. ನಾನು ಹೀಗೆ

ಹೇಳಿದೆನು : "ನಾನು ಜನ್ಮದಿಂದ ಹಿಂದೂ. ಆದರೆ ನನಗೆ ಹಿಂದೂ ಧರ್ಮದ ವಿಷಯು ಹೆಚ್ಚಾಗಿ ತಿಳಿಯದು. ಇತರ ಧರ್ಮಗಳ ವಿಷಯ ತಿಳಿದಿರುವುದು ಇನ್ನೂ ಕಡಿಮೆ. ಧರ್ಮದ ವಿಷಯದಲ್ಲಿ ನನ್ನ ನಿಲುವೇನು? ನನ್ನ ನಂಬಿಕೆ ಯೇನು? ಏನನ್ನು ನಂಬಬೇಕು ಒಂದೂ ನನಗೆ ತಿಳಿಯದು. ನನ್ನ ದರ್ಮ ವನ್ನೂ ಸಾಧ್ಯವಾದ ಮಟ್ಟಿಗೆ ಇತರ ಧರ್ಮಗಳನ್ನೂ ಕುರಿತು ಎಚ್ಚರಿಕೆಯಿಂದ ಅಧ್ಯಯನ ಮಾಡಬೇಕೆಂಬುದು ನನ್ನ ಉದ್ದೇಶ."

ಇದನ್ನೆಲ್ಲ ಕೇಳಿ ಬೇಕರರಿಗೆ ಸಂತೋಷವಾಯಿತು. ಅವರು ಹೀಗೆ ಹೇಳಿದರು : "ದಕ್ಷಿಣ ಆಫ್ರಿಕಾ ಜನರಲ್ ಮಿಷನ್ನಿನ ಡೈರಕ್ಟರುಗಳ ಪೈಕಿ ನಾನೊಬ್ಬ. ನಾನು ನನ್ನ ಸ್ವಂತ ವೆಚ್ಚದಿಂದ ಒಂದು ಚರ್ಚ್ ಕಟ್ಟಿದ್ದೇನೆ. ಅಲ್ಲಿ ಕ್ಲಿಪ್ತವಾಗಿ ಧರ್ಮಬೋಧನೆಯನ್ನು ಮಾಡುತ್ತೇನೆ. ನನ್ನಲ್ಲಿ ವರ್ಣದ್ವೇಷವಿಲ್ಲ. ನನ್ನ ಸಹೋದ್ಯೋಗಿಗಳೂ ಕೆಲವರು ಇದ್ದಾರೆ. ನಾವೆಲ್ಲ ಪ್ರತಿದಿನವೂ ಮಧ್ಯಾಹ್ನ ಒಂದು ಗಂಟೆಗೆ ಒಟ್ಟಾಗಿ ಸೇರಿ ಆತ್ಮ ಶಾಂತಿಯನ್ನೂ ಬೆಳಕನ್ನೂ ಕರುಣಿಸಬೇಕೆಂದು ಕೆಲವು ನಿಮಿಷ, ದೇವರನ್ನು ಪ್ರಾರ್ಥನೆ ಮಾಡುತ್ತೇವೆ. ನೀವೂ ಅಲ್ಲಿ ಬಂದು ನಮ್ಮ ಜತೆ ಸೇರಿದರೆ ನನಗೆ ಸಂತೋಷ. ನಿಮ್ಮನ್ನು ನನ್ನ ಸಹೋದ್ಯೋಗಿಗಳಿಗೆ ಪರಿಚಯ ಮಾಡಿಸುತ್ತೇನೆ. ನಿಮ್ಮೊಡನೆ ಸೇರಲು ಅವರಿಗೆ ಸಂತೋಷವಾಗುವುದು. ಅವರ ಸಹವಾಸ ನಿಮಗೂ ಇಷ್ಟವಾಗುವುದರಲ್ಲಿ ಸಂದೇಹವಿಲ್ಲ. ನಾನು ನಿಮಗೆ ಓದಲು ಕೆಲವು ಧಾರ್ಮಿಕ ಗ್ರಂಥಗಳನ್ನೂ ಕೊಡುತ್ತೇನೆ. ಆದರೆ ಗ್ರಂಥ ಗಳಲ್ಲೆಲ್ಲ ಗ್ರಂಥರತ್ನ ಪವಿತ್ರ ಬೈಬಲ್. ಅದನ್ನು ನೀವು ಓದಬೇಕೆಂದು ನಾನು ಒತ್ತಿ, ಒತ್ತಿ ಹೇಳುತ್ತೇನೆ."

ನಾನು ಬೇಕರ್‌ರವರನ್ನು ವಂದಿಸಿ, ಸಾಧ್ಯವಾದಷ್ಟು ತಪ್ಪದೆ ಕ್ಲಿಪ್ತವಾಗಿ ಒಂದು ಗಂಟೆಯ ಪ್ರಾರ್ಥನಾ ಸಭೆಗೆ ಹೋಗಲು ಒಪ್ಪಿಕೊಂಡೆನು.

"ಹಾಗಾದರೆ ನಾಳೆ ಇಲ್ಲಿ ಒಂದು ಗಂಟೆಗೆ ನೀವು ಬರುವುದನ್ನು ನಾನು ಕಾಯುತ್ತಿರುತ್ತೇನೆ. ಇಬ್ಬರೂ ಒಟ್ಟಿಗೆ ಪ್ರಾರ್ಥನೆಗೆ ಹೋಗೋಣ" ಎಂಬುದಾಗಿ ಹೇಳಿ ಅವರು ನನ್ನಿಂದ ಬೀಳ್ಕೊಂಡರು.

ಹೆಚ್ಚು ವಿಚಾರ ಮಾಡಲು ನನಗೆ ಅವಕಾಶ ದೊರೆತಿರಲಿಲ್ಲ.

ನಾನು ಮಿ. ಜಾನ್‌ಸನ್‌ರ ಹೋಟಲಿಗೆ ಹೋಗಿ ಅವರಿಗೆ ಕೊಡಬೇಕಾದ ಹಣವನ್ನು ಕೊಟ್ಟು ನನ್ನ ಸಾಮಾನುಗಳನ್ನು ನನ್ನ ವಸತಿಗೆ ತಂದು ಹಾಕಿಕೊಂಡು, ಊಟವನ್ನು ಪೂರೈಸಿದೆನು. ಮನೆಯ ಯಜಮಾನತಿ ಒಳ್ಳೆಯ ಹೆಂಗಸು. ನನಗಾಗಿ ಆಕೆ ಶಾಕಾಹಾರ ಭೋಜನವನ್ನು ಏರ್ಪಡಿಸಿದ್ದಳು. ನಾನು ಆ ಸಂಸಾರಕ್ಕೆ ಹೊಂದಿಕೊಳ್ಳಲು ನನಗೆ ಹೆಚ್ಚು ಕಾಲ ಹಿಡಿಯಲಿಲ್ಲ.

ಅನಂತರ, ದಾದಾ ಅಬ್ದುಲ್ಲಾ ರವರು ತಮ್ಮ ಸ್ನೇಹಿತನಿಗಾಗಿ ಕೊಟ್ಟಿದ್ದ ಪತ್ರವನ್ನು ತೆಗೆದುಕೊಂಡು ಅವರನ್ನು ನೋಡಲು ಹೋದೆನು. ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ಕಷ್ಟಗಳನ್ನು ಕುರಿತು ಅವರಿಂದ ನನಗೆ ಇನ್ನೂ ಅನೇಕ ವಿಷಯಗಳು ತಿಳಿದುವು. ನಾನು ತಮ್ಮ ಮನೆಯಲ್ಲಿಯೇ ಇರಬೇಕೆಂದು ಅವರು ಬಹಳ ಒತ್ತಾಯ ಮಾಡಿದರು. ನಾನು ಅವರನ್ನು ವಂದಿಸಿ ಆಗಲೇ ಬೇರೆ ಏರ್ಪಾಡು ಮಾಡಿಕೊಂಡಿರುವುದಾಗಿ ತಿಳಿಸಿದೆನು. ನನಗೆ ಏನಾದರೂ ಬೇಕಾದರೆ ಅವರನ್ನು ಕೇಳಲು ಸಂಕೋಚಪಡಬಾರದೆಂದು ಅವರು ಆಗ್ರಹಪೂರ್ವಕವಾಗಿ ಹೇಳಿದರು.

ಈ ವೇಳೆಗೆ ಕತ್ತಲೆಯಾಯಿತು. ಮನೆಗೆ ಹಿಂದಿರುಗಿ ಊಟ ಮುಗಿಸಿ ನನ್ನ ಕೊಠಡಿಯಲ್ಲಿ ಹೋಗಿ ಯೋಚಿಸುತ್ತಾ ಮಲಗಿಕೊಂಡೆನು. ನಾನು ಸದ್ಯದಲ್ಲಿಯೇ ಮಾಡಬೇಕಾದ ಕೆಲಸ ಯಾವುದೂ ಇರಲಿಲ್ಲ. ಆ ವಿಚಾರವನ್ನು ಅಬ್ದುಲ್ಲಾ ಸೇಠರಿಗೆ ಬರೆದು ತಿಳಿಸಿದೆ. "ಬೇಕರರಿಗೆ ನನ್ನಲ್ಲಿ ಇಷ್ಟೊಂದು ಮಿತ್ರತ್ವವುಂಟಾಗಿರುವುದರ ಅರ್ಥವೇನು? ಅವರ ಜತೆಯ ಧಾರ್ಮಿಕ ಸಹೋದ್ಯೋಗಿಗಳಿಂದ ನನಗೆ ದೊರೆಯುವ ಲಾಭವೇನು? ಕ್ರೈಸ್ತ ಧರ್ಮವನ್ನು ನಾನು ಎಷ್ಟರ ಮಟ್ಟಿಗೆ ಅಭ್ಯಾಸ ಮಾಡಬಹುದು? ಹಿಂದೂ ಧರ್ಮವನ್ನು ಕುರಿತ ಪುಸ್ತಕಗಳು ನನಗೆ ಸಿಕ್ಕುವುದು ಹೇಗೆ? ನನ್ನ ಸ್ವಂತ ಧರ್ಮವನ್ನು ಚೆನ್ನಾಗಿ ತಿಳಿದುಕೊಂಡ ಹೊರತು ಕ್ರೈಸ್ತ ಧರ್ಮವನ್ನು ಸರಿಯಾಗಿ ತಿಳಿದುಕೊಳ್ಳಲು ಸಾಧ್ಯವೆ? ಎಂದೆಲ್ಲ ಯೋಚಿಸಿ ಕೊನೆಗೆ ಒಂದೇ ತೀರ್ಮಾನಕ್ಕೆ ಬಂದೆನು. ನಾನು ನಿಷ್ಪಕ್ಷಪಾತವಾಗಿ ಎಲ್ಲದರ ವ್ಯಾಸಂಗವನ್ನೂ ಮಾಡಬೇಕು. ಅನಂತರ ಬೇಕರರ ಗುಂಪಿನೊಂದಿಗೆ ಪರಮಾತ್ಮನ ಪ್ರೇರಣೆ

ಯಂತೆ ನಡೆಯಬೇಕು. ನನ್ನ ಧರ್ಮವನ್ನು ಪೂರ್ಣವಾಗಿ ಅಧ್ಯಯನ ಮಾಡಿ ತಿಳಿದುಕೊಂಡಲ್ಲದೆ ಮತ್ತೊಂದು ಧರ್ಮವನ್ನು ಆಲಿಂಗನೆ ಮಾಡಿ ಕೊಳ್ಳುವ ವಿಷಯವನ್ನು ಯೋಚಿಸಕೂಡದು.

ಹೀಗೆ ವಿಚಾರ ಮಾಡುತ್ತಾ ನಾನು ನಿದ್ರೆ ಹೋದೆನು.

೧೧

ಕ್ರೈಸ್ತಮತ ಸಂಪರ್ಕಗಳು

ಮರುದಿನ ಮಧ್ಯಾಹ್ನ ಒಂದು ಗಂಟೆಗೆ ನಾನು ಶ್ರೀ ಬೇಕರ್‌ರವರ ಪ್ರಾರ್ಥನಾ ಸಭೆಗೆ ಹೋದೆನು. ಅಲ್ಲಿ ನನಗೆ ಮಿಸ್ ಹ್ಯಾರಿಸ್, ಮಿಸ್ ಗ್ಯಾಬ್, ಮಿಸ್ಟರ್ ಕೋಟ್ಸ್ ಮತ್ತು ಇತರರ ಪರಿಚಯವಾಯಿತು. ಪ್ರಾರ್ಥನೆಗಾಗಿ ಎಲ್ಲರೂ ಮಂಡಿಯೂರಿ ಕುಳಿತರು. ನಾನೂ ಹಾಗೆಯೇ ಮಾಡಿದೆನು. ಆ ಪ್ರಾರ್ಥನೆಗಳು, ಪ್ರತಿಯೊಬ್ಬರೂ ತಮ್ಮ ತಮ್ಮ ಬಯಕೆ ಗಳು ಈಡೇರಲೆಂದು ಭಗವಂತನನ್ನು ಕೇಳಿಕೊಳ್ಳುವುದಾಗಿದ್ದವು. "ಈ ದಿನ ವನ್ನು ಶಾಂತವಾಗಿ ಕಳೆಯೋಣ. ದೇವರೇ ನಮ್ಮ ಹೃದಯದ ಬಾಗಿಲು ನಿನಗಾಗಿ ತೆರೆಯಲಿ" ಎಂಬುದೇ ನಿತ್ಯದ ವಾಡಿಕೆಯ ಪ್ರಾರ್ಥನೆಯಾಗಿದ್ದಿತು.

ನಾನು ಹೋದ ಮೇಲೆ ನನ್ನ ಕ್ಷೇಮಕ್ಕಾಗಿಯೂ ಒಂದು ಪ್ರಾರ್ಥನೆ ಯನ್ನು ಸೇರಿಸಿಕೊಂಡರು. "ದೇವರೇ ನಮ್ಮೊಡನೆ ಬಂದು ಸೇರಿರುವ ಈ ಹೊಸ ತಮ್ಮನಿಗೆ ದಾರಿಯನ್ನು ತೋರಿಸು. ನಮಗೆ ಕರುಣಿಸಿರುವ ಶಾಂತಿಯನ್ನು ಅವನಿಗೂ ಕರುಣಿಸು. ನಮ್ಮನ್ನು ಸಂರಕ್ಷಿಸಿರುವ ಕ್ರಿಸ್ತ ಪ್ರಭುವು ಈತನನ್ನೂ ಸಂರಕ್ಷಿಸಲಿ. ನಾವು ಏಸುವಿನ ಹೆಸರಿನಲ್ಲಿ ಇವೆಲ್ಲ ವನ್ನೂ ಬೇಡುತ್ತೇವೆ" ಸಭೆಯಲ್ಲಿ ಕೀರ್ತನೆ ಭಜನೆ ಹಾಡು ಮುಂತಾದುವು ಏನೂ ಇರಲಿಲ್ಲ. ಪ್ರತಿದಿನವೂ ಬೇರೆ ಬೇರೆ ವಿಶೇಷವಾಗಿ ಏನಾದರೊಂದನ್ನು ಬೇಡಿಕೊಂಡನಂತರ ಅದು ಮಧ್ಯಾಹ್ನ ಊಟದ ಸಮಯವಾದುದರಿಂದ, ಊಟಕ್ಕೆ ಹೋಗುತ್ತಿದ್ದೆವು. ಪ್ರಾರ್ಥನೆ, ಐದು ನಿಮಿಷಗಳಿಗಿಂತ ಹೆಚ್ಚು ಕಾಲವನ್ನು ಹಿಡಿಯುತ್ತಿರಲಿಲ್ಲ.

ಮಿಸೆಸ್ ಹ್ಯಾರಿಸ್ ಮತ್ತು ಗ್ಯಾಬ್, ಇಬ್ಬರೂ ವಯಸ್ಸಾದ ಅವಿವಾಹಿತ ಮಹಿಳೆಯರಾಗಿದ್ದರು. ಮಿ. ಕೋಟ್ಸ್ ಕ್ವೇಕರ್ ಗುಂಪಿಗೆ ಸೇರಿದವರು (ಕ್ರಿಸ್ತಮತದ ಒಂದು ಒಳ ಪಂಗಡ). ಆ ಇಬ್ಬರು ಮಹಿಳೆಯರೂ ಒಟ್ಟಿಗೆ ವಾಸಿಸುತ್ತಿದ್ದರು. ನಾನು ಪ್ರತಿ ಭಾನುವಾರವೂ ನಾಲ್ಕು ಗಂಟೆಗೆ ಚಹಾಪಾನಕ್ಕೆ ಅವರ ಮನೆಗೆ ಹೋಗಬೇಕೆಂದು ಅವರು ನನಗೆ ಆಹ್ವಾನ ಕೊಟ್ಟರು.

ಪ್ರತಿ ಭಾನುವಾರವೂ ನಾನು ಕೋಟ್ಸ್‌ರನ್ನು ಸಂಧಿಸಿದಾಗ ಅವರಿಗೆ ನಾನು ನನ್ನ ವಾರದ ಧಾರ್ಮಿಕ ದಿನಚರಿಯನ್ನು ಕೊಡುತ್ತಿದ್ದೆನು. ನಾನು ಓದಿದ ಗ್ರಂಥಗಳು ಅವುಗಳಿಂದ ನನ್ನ ಮೇಲೆ ಉಂಟಾದ ಪರಿಣಾಮ ಇವುಗಳನ್ನು ಕುರಿತು ನಾವು ಚರ್ಚಿಸುತ್ತಿದ್ದೆವು. ಆ ಇಬ್ಬರು ಮಹಿಳೆಯರೂ ತಮ್ಮ ಆನಂದದ ಅನುಭವಗಳನ್ನೂ ತಾವು ಪಡೆದ ಶಾಂತಿಯನ್ನೂ ಕುರಿತು ಮಾತನಾಡುತ್ತಿದ್ದರು.

ಮಿ. ಕೋಟ್ಸ್‌ರು ಸರಳ ಹೃದಯದ ಯುವಕರೂ ದೃಢಮನಸ್ಸುಳ್ಳವರೂ, ಆಗಿದ್ದರು. ನಾವು ನಿತ್ಯ ಒಟ್ಟಾಗಿ ತಿರುಗಾಡಲು ಹೋಗುತ್ತಿದ್ದೆವು. ಅವರು ಇತರ ಕ್ರೈಸ್ತ ಮಿತ್ರರ ಬಳಿಗೂ ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು.

ನಮ್ಮ ಮಿತ್ರತ್ವ ಹೆಚ್ಚಾಗಿ ಬೆಳೆದಂತೆ, ಅವರು ತಮಗೆ ಒಪ್ಪಿಗೆಯಾದ ಪುಸ್ತಕಗಳನ್ನೇ ನನಗೆ ಕೊಡಲಾರಂಭಿಸಿದರು. ನನ್ನ ಬೀರು ಅವುಗಳಿಂದಲೇ ತುಂಬಿದ್ದಿತು. ಅವರು ನನ್ನ ಮೇಲೆ ಪುಸ್ತಕದ ಹೊರೆಯನ್ನೇ ಹೊರಿಸಿದರೆನ್ನಬಹುದು. ನಾನು ಅವುಗಳನ್ನೆಲ್ಲ ಓದಲು ಶ್ರದ್ಧೆಯೊಡನೆ ಒಪ್ಪಿದೆನು. ಓದಿದಂತೆಲ್ಲ ಅವರೊಡನೆ ಅವುಗಳ ವಿಷಯವನ್ನು ಚರ್ಚಿಸುತ್ತಲೂ ಇದ್ದೆನು.

೧೮೯೩ರಲ್ಲಿ ನಾನು ಅಂತಹ ಅನೇಕ ಪುಸ್ತಕಗಳನ್ನು ಓದಿದೆನು. ಅವುಗಳ ಹೆಸರೆಲ್ಲ ನನಗೆ ಜ್ಞಾಪಕವಿಲ್ಲ. ಆದರೆ ಅವುಗಳಲ್ಲಿ ಸಿಟಿ ಟೆಂಪಲಿನ (ದೇವಸ್ಥಾನ) ಪಾರ್ಕರರ ವ್ಯಾಖ್ಯಾನ, ಪಿಯರ್‌ಸನ್‌ರವರ "ಮೆನಿ ಇನ್‌ಫಾಲಿಯಬಲ್ ಪ್ರೂಫ್ಸ್ (ಸ್ವತಃಸಿದ್ಧ ಸಿದ್ಧಾಂತ) ಮತ್ತು ಬಟ್ಲರ್‌ರವರ ಅನಾಲಜಿ (ಸಾಮ್ಯ) ಮುಂತಾದ ಪುಸ್ತಕಗಳಿದ್ದವು. ಆ ಪುಸ್ತಕಗಳ

ಕೆಲವು ಭಾಗಗಳು ನನಗೆ ಅರ್ಥವಾಗುತ್ತಿರಲಿಲ್ಲ. ಅವುಗಳಲ್ಲಿ ಕೆಲವು ವಿಷಯಗಳು ನನಗೆ ಇಷ್ಟವಾದವು ; ಕೆಲವು ಆಗಲಿಲ್ಲ. ಮೆನಿ ಇನ್‌ಫಾಲಿಯಬಲ್ ಪ್ರೂಫ್ಸ್ ಎಂಬ ಗ್ರಂಥ ಅದು ಲೇಖಕರು ಅರ್ಥಮಾಡಿಕೊಂಡಿದ್ದ ಬೈಬಲ್ ಧರ್ಮದ ಸಮರ್ಥನೆಯಾಗಿದ್ದಿತು. ನನ್ನ ಮೇಲೆ ಆ ಗ್ರಂಥದ ಪರಿಣಾಮವೇನೂ ಆಗಲಿಲ್ಲ. ಪಾರ್ಕರ್‌ರವರ ವ್ಯಾಖ್ಯಾನ, ನೀತಿ ವರ್ಧಕವಾಗಿದ್ದುದಾದರೂ, ಪ್ರಚಲಿತ ಕ್ರೈಸ್ತ ಧರ್ಮದಲ್ಲಿ ನಂಬಿಕೆಯಿಲ್ಲದವರಿಗೆ ಅದರಿಂದ ಲಾಭವಾಗುತ್ತಿರಲಿಲ್ಲ. ಬಟ್ಲರ್‌ರವರ ಅನಾಲಜಿ ಗಂಭೀರವಾದ ಮತ್ತು ಕ್ಲಿಷ್ಟವಾದ ಗ್ರಂಥವಾಗಿ ನನಗೆ ತೋರಿತು. ಅದನ್ನು ನಾನು ಸರಿಯಾಗಿ ಅರ್ಥಮಾಡಿಕೊಳ್ಳಲು ನಾಲ್ಕೈದುಬಾರಿಯಾದರೂ ಓದಬೇಕಾಗಿದ್ದಿತು. ದೇವರು ಇದ್ದಾನೆ ಎಂಬುದನ್ನು ಸಾಧಿಸುವುದಕ್ಕಾಗಿ ಅದರಲ್ಲಿ ಮುಂಡಿಸಿದ್ದ ವಾದಗಳು ನನ್ನ ಮಟ್ಟಿಗೆ ಅನಗತ್ಯವಾಗಿದ್ದುವು. ಏಕೆಂದರೆ ನನ್ನ ನಾಸ್ತಿಕತೆ ಆವೇಳೆಗಾಗಲೇ ಕಳೆದು ಹೋಗಿದ್ದಿತು. ಆದರೆ "ಏಸುವೊಬ್ಬನೇ ದೇವರ ಅವತಾರ, ಮನುಷ್ಯನಿಗೂ ದೇವರಿಗೂ ನಡುವೆ ಅವನೇ ರಾಯಭಾರಿ ; ಅವನೊಬ್ಬನನ್ನು ಮರೆಹೋಗುವುದರಿಂದ ಮಾತ್ರವೇ ಭಗವಂತನ ಕರುಣೆ ಸಾಧ್ಯ" ಎಂಬ ವಾದ ನನ್ನ ಮನಸ್ಸಿಗೆ ಹಿಡಿಸಲಿಲ್ಲ.

ಆದರೆ ಮಿ. ಕೋಟ್ಸರು ಸೋಲನ್ನು ಸುಲಭವಾಗಿ ಒಪ್ಪುವವರಾಗಿರಲಿಲ್ಲ. ನನ್ನಲ್ಲಿ ಅವರ ವಿಶ್ವಾಸ ಅಧಿಕವಾಗಿದ್ದಿತು. ನನ್ನ ಕತ್ತಿನಲ್ಲಿದ್ದ ವೈಷ್ಣವ ಚಿಹ್ನೆಯಾದ ತುಳಸೀ ಮಣಿಯ ಹಾರವನ್ನು ಅವರು ನೋಡಿದರು. ಅದೊಂದು ಮೂಢ ನಂಬಿಕೆ ಎಂದು ಅವರಿಗೆ ಭಾಸವಾಗಿ ಅದರಿಂದ ನೋವಾಯಿತು. "ನಿಮ್ಮಂತಹವರಿಗೆ ಇಂತಹ ಮೂಢ ನಂಬಿಕೆ ತರವಲ್ಲ. ಎಲ್ಲಿ ಅದನ್ನು ಕಿತ್ತು ಎಸೆಯುತ್ತೇನೆ" ಎಂದರು.

"ಬೇಡ. ಅದಾಗದು, ಅದು ನಮ್ಮ ತಾಯಿ ಕೊಟ್ಟಿರುವ ಒಂದು ಪವಿತ್ರ ವಸ್ತು" ಎಂದೆನು.

"ಆದರೆ ನಿಮಗೆ ಅದರಲ್ಲಿ ನಂಬಿಕೆಯಿದೆಯೇ ?"

"ನನಗೆ ಇದರ ಗೂಢಾರ್ಥ ತಿಳಿಯದು. ಇದನ್ನು ಧರಿಸದಿದ್ದಲ್ಲಿ ನನಗೇನಾದರೂ ಅಪಾಯ ಸಂಭವಿಸುವುದೆಂದು ನಾನು ಭಾವಿಸುವುದಿಲ್ಲ.

ಅವರೆ ನನ್ನ ಕ್ಷೇಮವನ್ನು ಸಾಧಿಸುವುದೆಂಬ ನಂಬಿಕೆಯಿಂದಲೂ ಪ್ರೇಮದಿಂದಲೂ ನಮ್ಮ ತಾಯಿ ನನ್ನ ಕುತ್ತಿಗೆಗೆ ಸೇತುಹಾಕಿದ ಈ ಹಾರವನ್ನು ನಾನು ಸರಿಯಾದ ಕಾರಣವಿಲ್ಲದೆ ತೆಗೆದು ಹಾಕಲಾರೆ. ಕಾಲ ಕಳೆದಂತೆ ಅದು ಜೀರ್ಣವಾಗಿ ತನ್ನಷ್ಟಕ್ಕೆ ತಾನು ಬಿದ್ದು ಹೋದರೆ ಇನ್ನೊಂದು ಹೊಸದನ್ನು ಮಾಡಿಸಿ ಹಾಕಿಕೊಳ್ಳಲು ನಾನು ಬಯಸುವುದಿಲ್ಲ. ಆದರೆ ಈ ತುಳಸೀ ಮಣಿಯನ್ನು ಕಿತ್ತು ಹಾಕಲಾಗುವುದಿಲ್ಲ."

ಮಿ. ಕೋಟ್ಸರಿಗೆ ನನ್ನ ಧರ್ಮದಲ್ಲಿ ಆದರವಿಲ್ಲದುದರಿಂದ ನನ್ನ ವಾದ ಅವರಿಗೆ ಒಪ್ಪಿಗೆಯಾಗಲಿಲ್ಲ. ಅಜ್ಞಾನ ಕೂಪದಿಂದ ನನ್ನನ್ನು ಉದ್ಧರಿಸುವ ಕಾಲಕ್ಕಾಗಿ ಅವರು ನಿರೀಕ್ಷಿಸುತ್ತಿದ್ದರು. ಇತರ ಧರ್ಮಗಳಲ್ಲಿ ಸ್ವಲ್ಪ ಸತ್ಯ ಇದ್ದರೂ ಇರಬಹುದು. ಅದರಿಂದೇನಾಯಿತು? ಕ್ರೈಸ್ತ ಧರ್ಮವೇ ಸತ್ಯದ ಪ್ರತೀಕ. ಅದನ್ನು ಅಂಗೀಕರಿಸದವರಿಗೆ ಮುಕ್ತಿಯಿಲ್ಲ. ಏಸುವಿನ ಮಧ್ಯಸ್ಥಿಕೆಯಿಲ್ಲದವರು ಪಾಪಗಳನ್ನು ತೊಳೆದುಕೊಳ್ಳಲಾಗುವುದಿಲ್ಲ. ಇವಿಲ್ಲದ ಎಲ್ಲ ಪುಣ್ಯಕಾರ್ಯಗಳೂ ವ್ಯರ್ಥ ಎಂಬುದನ್ನು ನನಗೆ ಮನದಟ್ಟು ಮಾಡಲು ಅವರು ಅಪೇಕ್ಷಿಸುತ್ತಿದ್ದರು.

ನನಗೆ ಅನೇಕ ಪುಸ್ತಕಗಳ ಪರಿಚಯ ಮಾಡಿಸಿದಂತೆ ಅವರು, ತಮ್ಮ ಗಣನೆಯಲ್ಲಿ ನಿಷ್ಠಾವಂತ ಕ್ರೈಸ್ತರೆನಿಸಿಕೊಂಡ ಅನೇಕ ಮಿತ್ರರ ಪರಿಚಯವನ್ನೂ ಮಾಡಿಸಿದರು. ಇಂತಹ ಒಂದು ಪರಿಚಯ, ಕ್ರೈಸ್ತ ಧರ್ಮದ ಒಂದು ಒಳ ಪಂಗಡವಾದ ಪ್ಲಿಮತ್ ಬ್ರದರ್ಸ್ ಗುಂಪಿಗೆ ಸೇರಿದ ಒಂದು ಸಂಸಾರದೊಡನೆ ಆಯಿತು.

ಮಿ. ಕೋಟ್ಸ್‌ರು ಪರಿಚಯ ಮಾಡಿಕೊಟ್ಟವರಲ್ಲಿ ಅನೇಕರು ಒಳ್ಳೆಯವರಾಗಿದ್ದರು. ಈಶ್ವರನಲ್ಲಿ ಭಯಭಕ್ತಿಯುಳ್ಳವರಾಗಿದ್ದರು. ಆದರೆ ಪ್ಲಿಮತ್ ಬ್ರದರ್ಸ್ ಸಂಸಾರದೊಡನೆ ನನ್ನ ಪರಿಚಯವಾದಾಗ ಅವರಲ್ಲಿ ಒಬ್ಬ ನನ್ನ ಮುಂದೆ ಒಂದು ವಾದವನ್ನು ಒಡ್ಡಿದ. ಆ ವಾದಕ್ಕೆ ನಾನು ಸಿದ್ಧನಾಗಿರಲಿಲ್ಲ.

"ನಮ್ಮ ಧರ್ಮದ ಸ್ವಾರಸ್ಯ ನಿಮಗೆ ತಿಳಿಯುವುದಿಲ್ಲ. ನೀವು ಹೇಳುವುದನ್ನು ಕೇಳಿದರೆ ನೀವು ಯಾವಾಗಲೂ ನಿಮ್ಮ ತಪ್ಪುಗಳನ್ನು

ಕುರಿತು ಯೋಚಿಸುತ್ತಿರುವಿರೆಂದೂ ಅವುಗಳನ್ನು ತಿದ್ದಿಕೊಳ್ಳುತ್ತಲೂ ಪಶ್ಚಾತ್ತಾಪ ಪಡುತ್ತಲೂ ಇರುವಿರೆಂದೂ ತೋರುತ್ತದೆ. ಈ ಅವಿರತ ಕರ್ಮ ಚಕ್ರದಿಂದ ನಿಮಗೆ ಮುಕ್ತಿ ದೊರೆಯುವುದೆಂತು ? ನಿಮಗೆ ಎಂದಿಗೂ ಶಾಂತಿ ದೊರೆಯುವುದಿಲ್ಲ. ನಾವೆಲ್ಲ ಪಾಪಿಗಳು ಎಂದು ನೀವು ಒಪ್ಪುತ್ತೀರಿ. ಈಗ ನಮ್ಮ ನಂಬಿಕೆಯ ಪರಿಪೂರ್ಣತೆಯನ್ನು ನೋಡಿ ತಿದ್ದಿಕೊಳ್ಳುವುದು, ಪ್ರಾಯಶ್ಚಿತ್ತ ಇವುಗಳಿಗಾಗಿ ನಾವು ಮಾಡುವ ಪ್ರಯತ್ನ ವ್ಯರ್ಥ. ಆದರೂ ನಮಗೆ ಮುಕ್ತಿ ಬೇಕು. ನಾವು ಪಾಪದ ಹೊರೆಯನ್ನು ಸಹಿಸುವುದಾದರೂ ಎಂತು ? ಅದನ್ನು ಏಸುವಿನ ಮೇಲೆ ಹಾಕುವುದೊಂದೇ ಸಾಧ್ಯ. ಆತನೊಬ್ಬ ಮಾತ್ರ ದೇವರ ಪಾಪರಹಿತ ಪುತ್ರ. ಏಸುವೇ ಹೇಳಿದ್ದಾನೆ: "ನನ್ನನ್ನು ನಂಬಿದವರು ಅಮೃತತ್ವವನ್ನು ಹೊಂದುತ್ತಾರೆ ಎಂದು. ಅದು ದೇವರ ಅಪಾರ ಕರುಣೆ, ಏಸುವಿನ ಪ್ರಾಯಶ್ಚಿತ್ತವನ್ನು ನಾವು ನಂಬುವುದರಿಂದ, ನಮ್ಮ ಪಾಪಗಳು ನಮ್ಮನ್ನು ಬಂಧಿಸುವುದಿಲ್ಲ. ಪಾಪವನ್ನು ನಾವು ಮಾಡಿಯೇ ಮಾಡುತ್ತೇವೆ. ಪಾಪ ರಹಿತರಾಗಿ ಈ ಜಗತ್ತಿನಲ್ಲಿ ಬದುಕುವುದು ಸಾಧ್ಯವಿಲ್ಲ. ಆದುದರಿಂದಲೇ ಏಸು, ಕಷ್ಟವನ್ನು ಅನುಭವಿಸಿ ಮನುಷ್ಯ ಪ್ರಪಂಚದ ಪಾಪಕ್ಕೆಲ್ಲ ಪ್ರಾಯಶ್ಚಿತ್ತ ಮಾಡಿಕೊಂಡನು. ಆದುದರಿಂದ ಏಸುವಿನ ಮಹಾ ಬಲಿದಾನ ವನ್ನು ಒಪ್ಪುವವರು ಮಾತ್ರವೇ ಶಾಶ್ವತ ಶಾಂತಿಯನ್ನು ಹೊಂದಬಲ್ಲರು. ಯೋಚಿಸಿ ನೋಡಿ. ನಿಮ್ಮದು ಎಂತಹ ಅಶಾಂತ ಜೀವನ, ನಮ್ಮದು ಎಂತಹ ಶಾಂತಿಯ ವರ ?"

ಆ ವಾದ ನನ್ನ ಮನಸ್ಸಿಗೆ ಹಿಡಿಸಲಿಲ್ಲ. ನಾನು ನಮ್ರನಾಗಿ ಹೀಗೆ ಹೇಳಿದೆ:

"ಎಲ್ಲ ಕ್ರೈಸ್ತರೂ ಮನ್ನಣೆ ಈಯುವ ಕ್ರೈಸ್ತ ಧರ್ಮ ಇದೇ ಆದರೆ ನಾನು ಅದನ್ನು ಅಂಗೀಕರಿಸಲಾರೆ. ನನ್ನ ಪಾಪದ ಪರಿಣಾಮವನ್ನು ತಪ್ಪಿಸಿಕೊಳ್ಳಲು ಇಷ್ಟಪಡುವುದಿಲ್ಲ. ನಾನು ಬಯಸುವುದು ಪಾಪ ದಿಂದಲೇ ಬಿಡುಗಡೆ; ಪಾಪಕಾರ್ಯದಿಂದ, ಪಾಪಪ್ರವೃತ್ತಿಯಿಂದ ಬಿಡುಗಡೆ. ಆ ಗುರಿ ಸಾಧಿತವಾಗುವವರೆಗೆ ಅಶಾಂತವಾಗಿರುವುದೇ ನನಗೆ ತೃಪ್ತಿ."

ಇದಕ್ಕೆ ಪ್ಲಿಮತ್ ಬ್ರದರ್ಸ್ ಮಿತ್ರ ಮತ್ತೆ ಹೀಗೆ ಹೇಳಿದ : "ನನ್ನ ಮಾತನ್ನು ಕೇಳಿ. ನಿಶ್ಚಯವಾಗಿ ಹೇಳುತ್ತೇನೆ. ನಿಮ್ಮ ಪ್ರಯತ್ನ ನಿಷ್ಪ್ರಯೋಜನ. ನನ್ನ ಮಾತನ್ನು ನಿಧಾನವಾಗಿ ಆಲೋಚಿಸಿ. ನೋಡಿ"

ಆ ಮಿತ್ರ ತನ್ನ ಮಾತಿಗೆ ಅನುಸಾರವಾಗಿಯೇ ನಡೆದನು. ತಿಳಿದೂ ತಿಳಿದೂ ಅಕೃತ್ಯವನ್ನು ಮಾಡಿದನು. ಆ ಅಕೃತ್ಯದ ಯೋಚನೆಯಿಂದ ತನ್ನ ಶಾಂತಿ ನಾಶವಾಗಲಿಲ್ಲವೆಂಬುದನ್ನೂ ತೋರಿಸಿದನು.

ಆದರೆ ಈ ಮಿತ್ರರನ್ನು ನೋಡುವುದಕ್ಕೆ ಮುಂಚೆಯೇ ಎಲ್ಲ ಕ್ರೈಸ್ತರೂ ಈ ವಿಧವಾದ ಪಾಪದ ಪ್ರಾಯಶ್ಚಿತ್ತ ನಿವೃತ್ತಿಯಲ್ಲಿ ನಂಬಿಕೆಯುಳ್ಳವರಾಗಿಲ್ಲ ವೆಂಬುದು ನನಗೆ ಗೊತ್ತಿದ್ದಿತು. ಮಿ. ಕೋಟ್ಸರು ದೇವಭೀರುವಾಗಿಯೇ ನಡೆಯುತ್ತಿದ್ದರು. ಅವರ ಹೃದಯ ಪರಿಶುದ್ಧವಾಗಿದ್ದಿತು. ಆತ್ಮಶುದ್ಧೀ ಕರಣ ಸಾಧ್ಯವೆಂಬುದು ಅವರ ನಂಬಿಕೆಯಾಗಿದ್ದಿತು. ಆ ಇಬ್ಬರು ಮಹಿಳೆ ಯರೂ ಇದೇ ನಂಬಿಕೆಯುಳ್ಳವರಾಗಿದ್ದರು. ನನ್ನ ಕೈಗೆ ದೊರೆತ ಅನೇಕ ಪುಸ್ತಕಗಳು ಭಕ್ತಿಭಾವನೆಯಿಂದ ಪೂರಿತವಾಗಿದ್ದವು. ನನ್ನ ಈ ಕೊನೆಯ (ಪ್ಲಿಮತ್ ಬ್ರದರ್ಸ್ ಪರಿಚಯದ) ಅನುಭವದಿಂದ ಕೋಟ್ಸರಿಗೆ ತುಂಬ ಬೇಸರಿಕೆಯಾಯಿತು. ಆದರೆ ನಾನು ಅವರಿಗೆ, ಒಬ್ಬ ಪ್ಲಿಮತ್ ಬ್ರದರ್ ಕ್ರಿಸ್ತನ ಅನುಚಿತ ನಂಬಿಕೆಯು, ಕ್ರೈಸ್ತಧರ್ಮದ ವಿಷಯದಲ್ಲಿ ನನಗೆ ಅನಾದರಣೆಯನ್ನು ಹುಟ್ಟಿಸಲಾರದೆಂದು ಸಮಾಧಾನ ಪಡಿಸಿದೆನು.

ನನಗೆ ಸಂದೇಹವಿದ್ದುದು ಬೇರೆ ಕಡೆ. ಬೈಬಲ್ ಮತ್ತು ಅದರ ಸಂಬಂಧದ ಅಂಗೀಕೃತ ಅರ್ಥಗಳಲ್ಲಿ.

೧೨

ಭಾರತೀಯರೊಂದಿಗೆ ಪರಿಚಯ

ಕ್ರೈಸ್ತರ ಪರಿಚಯವನ್ನು ಕುರಿತು ಮುಂದೆ ಬರೆಯುವುದಕ್ಕೆ ಮುಂಚಿತ ವಾಗಿ ಅದೇ ಕಾಲದ ಇತರ ಕೆಲವು ಅನುಭವಗಳನ್ನು ಹೇಳಬೇಕು.

ನೆಟಾಲ್‌ನಲ್ಲಿ ದಾದಾ ಅಬ್ದುಲ್ಲಾರವರು ಹೊಂದಿದ್ದ ಸ್ಥಾನವನ್ನೇ, ಪ್ರಿಟೋರಿಯಾದಲ್ಲಿ ಸೇಠ್ ತಯ್ಯಾಬ್ ಹಾಜೀಖಾನರು ಹೊಂದಿದ್ದರು. ಯಾವ ಸಾರ್ವಜನಿಕ ಕಾರ್ಯವೂ ಅವರ ಸಂಪರ್ಕವಿಲ್ಲದೆ ಸಾಧ್ಯವಿರಲಿಲ್ಲ. ನಾನು ಅಲ್ಲಿಗೆ ಹೋದ ಮೊದಲನೆಯ ವಾರವೇ ಅವರನ್ನು ಕಂಡು ಪ್ರಿಟೋರಿಯಾದಲ್ಲಿರುವ ಪ್ರತಿಯೊಬ್ಬ ಭಾರತೀಯನ ಪರಿಚಯವನ್ನೂ ಮಾಡಿಕೊಳ್ಳಬೇಕೆಂದು ಅವರಿಗೆ ತಿಳಿಸಿದೆನು. ಅಲ್ಲಿರುವ ಭಾರತೀಯರ ಸ್ಥಿತಿಗತಿಗಳನ್ನು ಅರಿಯುವುದು ನನ್ನ ಉದ್ದೇಶವೆಂದೂ ಈ ಕಾರ್ಯದಲ್ಲಿ ಅವರ ಸಹಾಯ ನನಗೆ ಬೇಕೆಂದೂ ಹೇಳಿದೆನು. ಆ ಸಹಾಯವನ್ನು ಕೊಡಲು ಅವರು ಸಂತೋಷದಿಂದ ಒಪ್ಪಿದರು.

ನನ್ನ ಮೊದಲನೆಯ ಕಾರ್ಯವಾಗಿ, ನಾನು ಪ್ರಿಟೋರಿಯಾದಲ್ಲಿರುವ ಎಲ್ಲ ಭಾರತೀಯರನ್ನೂ ಒಂದು ಸಭೆ ಕೂಡಿಸಿ, ಟ್ರಾನ್ಸ್‌ವಾಲ್‌ನಲ್ಲಿ ಅವರ ಸ್ಥಿತಿಗತಿಗಳನ್ನು ಕುರಿತ ಚಿತ್ರವನ್ನು ಅವರ ಮುಂದೆ ಇಟ್ಟೆನು. ಸಭೆ ನಡೆದುದು ಸೇಠ್ ಹಾಜೀ ಮುಹಮ್ಮದ್ ಹಾಜೀ ಜೂಸಾಬ್‌ರ ಮನೆಯಲ್ಲಿ. ಅವರಿಗೆ ನಾನು ಒಂದು ಪರಿಚಯ ಕಾಗದವನ್ನು ತಂದಿದ್ದೆನು. ಆ ಸಭೆಗೆ ಮುಖ್ಯವಾಗಿ ಬಂದಿದ್ದವರು ಮೆಮನ್ ವ್ಯಾಪಾರಿಗಳೇ, ಅಲ್ಲಿ ಕೆಲವು ಹಿಂದೂಗಳೂ ಇದ್ದರು. ವಾಸ್ತವವಾಗಿ ಪ್ರಿಟೋರಿಯಾದಲ್ಲಿ ಹಿಂದೂಗಳ ಸಂಖ್ಯೆ, ಬಹಳ ಕಡಿಮೆಯಾಗಿದ್ದಿತು.

ಆ ಸಭೆಯಲ್ಲಿ ನಾನು ಮಾಡಿದ ಭಾಷಣ, ನನ್ನ ಜೀವನದ ಮೊದಲನೆಯ ಸಾರ್ವಜನಿಕ ಭಾಷಣವೆಂದು ಹೇಳಬಹುದು ಭಾಷಣದ ವಿಷಯವನ್ನು ನಾನು ಚೆಕ್ಕಮುಟ್ಟಿಗೆ ಸಿದ್ಧಮಾಡಿಕೊಂಡು ಹೋಗಿದ್ದೆನು. ವ್ಯಾಪಾರದಲ್ಲಿ ಸತ್ಯವನ್ನು ಅನುಸರಿಸಬೇಕು ಎಂಬುದೇ ನನ್ನ ಭಾಷಣದ ವಿಷಯವಾಗಿದ್ದಿತು. ವ್ಯಾಪಾರದಲ್ಲಿ ಸತ್ಯವನ್ನು ಆಚರಿಸುವುದು ಸಾಧ್ಯವಿಲ್ಲ ಎಂದು ವರ್ತಕರು ಹೇಳಿದುದನ್ನು ನಾನು ಪದೇ ಪದೇ ಕೇಳಿದ್ದೆನು. ಅದು ಸರಿ ಎಂದು ಆಗ ನಾನು ಯೋಚಿಸಲಿಲ್ಲ! ಈಗಲೂ ಯೋಚಿಸುವುದಿಲ್ಲ. ಈಗಲೂ ನನ್ನ ಅನೇಕ ವ್ಯಾಪಾರೀ ಮಿತ್ರರು, ವ್ಯಾಪಾರವೂ ಸತ್ಯವೂ ಒಟ್ಟಾಗಿ ಇರುವುದಿಲ್ಲವೆಂದು ವಾದಿಸುತ್ತಾರೆ. "ವ್ಯಾಪಾರ ವ್ಯಾವಹಾರಿಕ ವಿಷಯ. ಸತ್ಯ, ಧಾರ್ಮಿಕ ವಿಷಯ. ವ್ಯಾವಹಾರಿಕ ವಿಷಯವೇ

ಬೇರೆ ಧಾರ್ಮಿಕ ವಿಷಯವೇ ಬೇರೆ. ಶುದ್ಧ ಸತ್ಯಕ್ಕೆ ವ್ಯಾಪಾರದಲ್ಲಿ ಸ್ಥಳವಿಲ್ಲ. ಸಾಧ್ಯವಾದಷ್ಟು ಮಾತ್ರ ಸತ್ಯವನ್ನು ಹೇಳಬಹುದು" ಎಂದು ಅವರು ವಾದಿಸುತ್ತಾರೆ. ನನ್ನ ಭಾಷಣದಲ್ಲಿ ಈ ವಾದವನ್ನು ನಾನು ತೀವ್ರವಾಗಿ ವಿರೋಧಿಸಿ ವರ್ತಕರಲ್ಲಿ ಕರ್ತವ್ಯ ಜ್ಞಾನವನ್ನು ಎಚ್ಚರಗೊಳಿಸಿದೆನು. ಅದು ದ್ವಿಮುಖವಾಗಿದ್ದಿತು. ನೀವು ಪರದೇಶದಲ್ಲಿ ಸತ್ಯವನ್ನು ಅನುಸರಿಸುವುದು ಅತ್ಯಂತ ಆವಶ್ಯಕ. ನಿಮ್ಮ ಜವಾಬ್ದಾರಿ ಅಧಿಕ. ಏಕೆಂದರೆ ಇಲ್ಲಿರುವ ಕೆಲವು ಭಾರತೀಯರ ನಡತೆಯೇ, ಸ್ವದೇಶದಲ್ಲಿರುವ ಕೋಟ್ಯಾಂತರ ಜನರ ನಡತೆಯು ಅಳತೆಗೋಲಾಗುತ್ತದೆ." ಎಂದು ಹೇಳಿದೆನು.

ಅವರ ಸುತ್ತಮುತ್ತಲಿನ ಆಂಗ್ಲೇಯರಿಗೆ ಹೋಲಿಸಿದರೆ ನಮ್ಮ ಭಾರತೀಯರ ಸ್ವಭಾವ, ಪದ್ಧತಿಗಳು ಬಹಳ ಅನಾರೋಗ್ಯಕರವಾಗಿ ನನಗೆ ತೋರಿದ್ದಿತು. ನಾನು ಅವರ ಕಡೆಗೆ ಭಾರತೀಯರ ಗಮನವನ್ನು ಸೆಳೆದೆನು. ಹಿಂದೂಗಳು, ಮುಸಲ್ಮಾನರು, ಕ್ರೈಸ್ತರು, ಗುಜರಾತೀ, ಮದರಾಸೀ, ಪಂಜಾಬೀ, ಸಿಂಧೀ, ಕಚ್ಛಿ, ಸೂರತಿ ಮುಂತಾದ ಜಾತಿ ಭೇದವನ್ನೆಲ್ಲ ಮರೆಯಬೇಕೆಂದೂ ನಾನು ಒತ್ತಿ ಹೇಳಿದೆನು.

ಕೊನೆಯಲ್ಲಿ "ನೀವು ಒಂದು ಸಂಘವನ್ನು ಸ್ಥಾಪಿಸಿಕೊಳ್ಳಿ. ಅದರ ಮೂಲಕ, ಸಂಬಂಧಪಟ್ಟ ಅಧಿಕಾರಿಗಳಿಗೆ, ಭಾರತದಿಂದ ವಲಸೆ ಬಂದವರ ಕಷ್ಟಗಳನ್ನು ನಿರೂಪಿಸಿ, ನಿವೇದನ ಪತ್ರಗಳನ್ನು ಸಲ್ಲಿಸಬಹುದು. ನಿಮ್ಮ ಈ ಎಲ್ಲ ಕಾರ್ಯಗಳಲ್ಲಿ ನನ್ನಿಂದ ಸಾಧ್ಯವಾದಷ್ಟು ಸೇವೆಯನ್ನೂ ಕಾಲವನ್ನೂ ನಿಮಗೆ ಅರ್ಪಿಸುತ್ತೇನೆ" ಎಂದು ಹೇಳಿದೆನು.

ನನ್ನ ಭಾಷಣದಿಂದ ಸಭೆಯಲ್ಲಿ ನೆರೆದಿದ್ದವರ ಮೇಲೆ ತಕ್ಕಮಟ್ಟಿನ ಪರಿಣಾಮವಾಯಿತೆಂದು ನನಗೆ ತೋರಿತು.

ನನ್ನ ಭಾಷಣದ ಅನಂತರ ಚರ್ಚೆ ಪ್ರಾರಂಭವಾಯಿತು. ಕೆಲವರು ನನಗೆ ಅಲ್ಲಿಯ ಸ್ಥಿತಿಗತಿಗಳನ್ನು ಕುರಿತು ವಿಷಯಗಳನ್ನು ಸಂಗ್ರಹಿಸಿ ಕೊಡುವುದಾಗಿ ಹೇಳಿದರು. ನನಗೆ ಉತ್ಸಾಹವುಂಟಾಯಿತು. ಸಭೆಯಲ್ಲಿ ಇಂಗ್ಲಿಷ್ ಬಲ್ಲವರು ಬಹಳ ಕಡಿಮೆ ಜನ ಇದ್ದುದು ನನಗೆ ಕಂಡಿತು. ಆ ದೇಶದಲ್ಲಿ ಇಂಗ್ಲಿಷ್ ಭಾಷೆಯ ಜ್ಞಾನದಿಂದ ಪ್ರಯೋಜನವಾಗುವುದೆಂದು

ನನಗೆ ತೋರಿದುದರಿಂದ ನಾನು ಇಂಗ್ಲಿಷನ್ನು ಕಲಿಯಬೇಕೆಂದು ಅವರಿಗೆ ತಿಳಿಸಿದೆನು. “ವಯಸ್ಸಾದ ಮೇಲೆ ಸಹ, ಭಾಷೆಗಳನ್ನು ಕಲಿಯುವುದು ಸಾಧ್ಯ” ಎಂದು ಹೇಳಿ ಹಾಗೆ ಕಲಿತವರ ಉದಾಹರಣೆಯನ್ನು ತಿಳಿಸಿದೆನು. “ಒಂದು ತರಗತಿಯನ್ನು ಪ್ರಾರಂಭಿಸಿ, ಅದರ ಮೇಲ್ವಿಚಾರಣೆ ನಾನು ನೋಡಿಕೊಳ್ಳುತ್ತೇನೆ. ಅಥವಾ ಇಷ್ಟವುಳ್ಳ ವ್ಯಕ್ತಿಗಳಿಗೆ ನಾನೇ ಇಂಗ್ಲಿಷ್ ಭಾಷೆಯನ್ನು ಕಲಿಸುತ್ತೇನೆ” ಎಂದೂ ಹೇಳಿದೆನು.

ಇಂಗ್ಲಿಷ್ ಪಾಠದ ತರಗತಿ ಪ್ರಾರಂಭವಾಗಲಿಲ್ಲ. ಆದರೆ ಮೂರು ಜನ ಯುವಕರು ಇಂಗ್ಲಿಷ್ ಕಲಿಯುವ ಅಪೇಕ್ಷೆಯನ್ನು ಸೂಚಿಸಿದರು. ನಾನು ಅವರಿದ್ದಲ್ಲಿಗೆ ಹೋಗಿ ಅವರಿಗೆ ಅನುಕೂಲವಾದ ಕಾಲದಲ್ಲಿ ಪಾಠವನ್ನು ಹೇಳಿಕೊಡುವುದಾದರೆ ಸಾಧ್ಯ ಎಂದು ಅವರು ಷರತ್ತು ಹಾಕಿದರು. ಅವರಲ್ಲಿ ಇಬ್ಬರು ಮುಸಲ್ಮಾನರು-ಒಬ್ಬ ಕ್ಷೌರಿಕ; ಇನ್ನೊಬ್ಬ ಗುಮಾಸ್ತ; ಮತ್ತೊಬ್ಬ ಹಿಂದೂ-ಚಿಲ್ಲರೆ ಅಂಗಡಿಯ ಮಾಲಿಕ. ಎಲ್ಲರಿಗೂ ಅವರವರ ಸೌಕರ್ಯಕ್ಕನುಗುಣವಾಗಿ ನಡೆಯಲು ನಾನು ಒಪ್ಪಿದೆನು. ಪಾಠ ಹೇಳುವ ಶಕ್ತಿ, ನನ್ನಲ್ಲಿ ವಿಶೇಷವಾಗಿದ್ದಿತು. ನನ್ನ ವಿದ್ಯಾರ್ಥಿಗಳಿಗೆ ಶ್ರಮವಾಗಬಹುದೇ ಹೊರತು ನನಗೆ ಆಗುತ್ತಿರಲಿಲ್ಲ: ನಾನು ಪಾಠ ಹೇಳಿಕೊಡಲು ಅವರ ವಸತಿಗೆ ಹೋದಾಗ, ಅವರು ತಮ್ಮ ಕೆಲಸಗಳಲ್ಲಿ ತೊಡಗಿರುತ್ತಿದ್ದರು. ಆದರೂ ನಾನು ತಾಳ್ಮೆಗೆಡಲಿಲ್ಲ. ಆ ಮೂವರಲ್ಲಿ ಯಾರಿಗೂ ಇಂಗ್ಲಿಷನ್ನು ಆಳವಾಗಿ ಚೆನ್ನಾಗಿ ಅಭ್ಯಾಸ ಮಾಡಬೇಕೆಂಬ ಇಷ್ಟವಿರಲಿಲ್ಲ. ಆದರೆ ಅವರ ಪೈಕಿ ಇಬ್ಬರು, ಎಂಟು ತಿಂಗಳು ಪಾಠ ಕಲಿಯುವುದರಿಂದಾಗಿ ತಕ್ಕಮಟ್ಟಿನ ಇಂಗ್ಲಿಷ್ ಜ್ಞಾನವನ್ನು ಸಂಪಾದಿಸಿದರೆಂದು ಹೇಳಬಹುದು. ಇಂಗ್ಲಿಷಿನಲ್ಲಿ ಲೆಕ್ಕಗಳನ್ನು ಇಡುವುದು, ಸಾಮಾನ್ಯವಾದ ಕಾಗದಪತ್ರಗಳನ್ನು ಬರೆಯುವುದು ಇಷ್ಟು ಅವರಿಗೆ ಬಂದಿತು. ಕ್ಷೌರಿಕನಿಗೆ ತನ್ನಲ್ಲಿ ಬರುವ ಗಿರಾಕಿಗಳೊಂದಿಗೆ ಇಂಗ್ಲಿಷಿನಲ್ಲಿ ಮಾತನಾಡುವಷ್ಟು ಇಂಗ್ಲಿಷನ್ನು ಕಲಿಯುವುದಷ್ಟೇ ಅವಶ್ಯವಾಗಿದ್ದಿತು. ಹೀಗೆ ಅವರು ವ್ಯಾಸಂಗ ಮಾಡಿದುದರಿಂದ ಇಬ್ಬರ ಸಂಪಾದನೆ ತಕ್ಕಮಟ್ಟಿಗೆ ವೃದ್ಧಿಗೊಂಡಿತು.

ವ್ಯಾಪಾರಿಗಳ ಸಭೆಯ ನಡವಳಿಕೆಯಿಂದ ನನಗೆ ತೃಪ್ತಿಯಾಗಿದ್ದಿತು. ಅಂತಹ ಸಭೆಗಳನ್ನು ತಿಂಗಳಿಗೆ ಒಂದು ಸಲ ಅಥವಾ ವಾರಕ್ಕೆ ಒಂದು ಸಲ

ಸೇರಿಸಬೇಕೆಂಬ ತೀರ್ಮಾನವಾದಂತೆ ಜ್ಞಾಪಕ. ಸಭೆಗಳು ತಪ್ಪದೆ ನಡೆಯು ತ್ತಿದ್ದವು ಆ ಸಭೆಗಳಲ್ಲಿ ಮುಚ್ಚುಮರೆಯಿಲ್ಲದೆ ಅಭಿಪ್ರಾಯ ವಿನಿಮಯ ವಾಗುತ್ತಿದ್ದಿತು. ಇದರ ಫಲವಾಗಿ ನನಗೆ ಪರಿಚಯವಿಲ್ಲದ ಯಾವ ಭಾರತೀ ಯನೂ ಪ್ರಿಟೋರಿಯದಲ್ಲಿ ಇರಲೇ ಇಲ್ಲ. ಎಲ್ಲರ ಸ್ಥಿತಿಗತಿಗಳೂ ನನಗೆ ಗೊತ್ತಾಗಿದ್ದವು. ಇದರಿಂದ ನಾನು ಮುಂದೆ ಪ್ರಿಟೋರಿಯಾದಲ್ಲಿರುವ ಬ್ರಿಟಿಷ್ ಏಜೆಂಟರಾದ ಎ. ಜಾಕೊಬಸ್ ಡಿವೆಟ್‌ರ ಪರಿಚಯ ಮಾಡಿ ಕೊಳ್ಳಬೇಕೆಂಬ ಪ್ರೇರಣೆ ನನ್ನಲ್ಲಿ ಉಂಟಾಯಿತು. ಆತನಿಗೆ ಭಾರತೀಯರಲ್ಲಿ ಸಹಾನುಭೂತಿಯಿದ್ದಿತು. ಆದರೆ ಆತನ ಮಾತು ಎಲ್ಲಿಯೂ ನಡೆಯುತ್ತಿರ ಲಿಲ್ಲ ಆದರೂ ನಮಗೆ ತನಗೆ ಸಾಧ್ಯವಾದಷ್ಟು ಸಹಾಯ ಮಾಡಲು ಆತನು ಒಪ್ಪಿದನು. ನಾವು ಯಾವಾಗ ಬೇಕಾದರೂ ತನ್ನನ್ನು ಬಂದು ಕಾಣಬಹು ದೆಂದು ಒಪ್ಪಿದನು.

ಅನಂತರ ನಾನು ರೈಲ್ವೆ ಅಧಿಕಾರಿಗಳೊಡನೆ ಪತ್ರ ವ್ಯವಹಾರ ಮಾಡಿದೆನು. "ನಿಮ್ಮ ನಿಯಮಗಳಂತೆಯೂ ಸಹ ನೀವು ಭಾರತೀಯರ ವಿಷಯದಲ್ಲಿ ಮಾಡಿರುವ ಅನ್ಯಾಯ ಸರಿಯಾದುದಲ್ಲ" ಎಂದು ತಿಳಿಸಿದೆನು. ಅವರಿಂದ ನನಗೆ ಒಂದು ಪ್ರತ್ಯುತ್ತರ ಬಂದಿತು. ಭಾರತೀಯರು ಸರಿಯಾದ ಉಡುಪನ್ನು ಧರಿಸಿ ಪ್ರಯಾಣ ಮಾಡುವುದಾದರೆ ಅವರಿಗೆ ರೈಲಿನಲ್ಲಿ ಮೊದಲನೆಯ ಮತ್ತು ಎರಡನೆಯ ದರ್ಜೆಯ ಟಿಕೆಟ್ಟುಗಳನ್ನು ಕೊಡುವು ದಾಗಿಯೂ ತಿಳಿಸಿದ್ದರು. ಇದರಿಂದ ಪೂರ್ಣವಾದ ನ್ಯಾಯ ದೊರೆತಂತೆ ಆಗಿರಲಿಲ್ಲ. ಏಕೆಂದರೆ, ಯಾರು ಸರಿಯಾದ ಉಡುಪನ್ನು ಧರಿಸಿದ್ದಾರೆ ಯಾರು ಧರಿಸಿಲ್ಲ ಎಂಬುದನ್ನು ತೀರ್ಮಾನಿಸುವುದು ಸ್ಟೇಷನ್ ಮಾಸ್ಟರಿಗೆ ಬಿಟ್ಟುದಾಗಿದ್ದಿತು.

ಬ್ರಿಟಿಷ್ ಏಜೆಂಟರು, ಭಾರತೀಯರಿಗೆ ಸಂಬಂಧಪಟ್ಟ ತಮ್ಮಲ್ಲಿದ್ದ ಕಾಗದಪತ್ರಗಳನ್ನು ನನಗೆ ತೋರಿಸಿದರು. ತಯ್ಯಾಬ್ ಸೇಠರೂ ಅದೇ ಬಗೆಯ ಕೆಲವು ಕಾಗದಗಳನ್ನು ನನಗೆ ಕೊಟ್ಟಿದ್ದರು. ಅವುಗಳನ್ನು ಓದಿದುಪರಿಂದ ಭಾರತೀಯರನ್ನು ಎಷ್ಟು ಕ್ರೌರ್ಯದಿಂದ ಆರೆಂಜ್ ಫ್ರೀಸ್ಟೇಟ್‌ನಿಂದ ಹೊರಕ್ಕೆ ಓಡಿಸಿದ್ದರೆಂಬುದು ನನಗೆ ಗೊತ್ತಾಯಿತು.

ಸಂಕ್ಷೇಪವಾಗಿ ಹೇಳಬೇಕಾದರೆ, ನಾನು ಪ್ರಿಟೋರಿಯಾದಲ್ಲಿ ಉಳಿದುದರಿಂದ, ಟ್ರಾನ್ಸ್‌ವಾಲ್ ಮತ್ತು ಆರೆಂಜ್ ಫ್ರೀಸ್ಟೇಟ್‌ನಲ್ಲಿದ್ದ ಭಾರತೀಯರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಿತಿಯನ್ನು ಕುರಿತು ಆಳವಾಗಿ ಅಧ್ಯಯನ ಮಾಡಲು ನನಗೆ ಅವಕಾಶವಾಯಿತು. ಮುಂದೆ ಈ ಅಧ್ಯಯನದಿಂದ ನನಗೆ ಅಮೌಲ್ಯವಾದ ಸಹಾಯವಾಗುವುದೆಂಬುದು ಆಗ ನನಗೆ ಸ್ವಲ್ಪವೂ ತಿಳಿಯಲಿಲ್ಲ. ಏಕೆಂದರೆ ನಾನು ಒಂದು ವರ್ಷ ಕಳೆಯುವುದರೊಳಗಾಗಿ—ಅಥವಾ ಮೊಕದ್ದಮೆ ಮುಗಿದುಹೋದರೆ ಇನ್ನೂ ಮುಂಚಿತವಾಗಿಯೇ — ಭಾರತಕ್ಕೆ ಹಿಂದಿರುಗುವ ಆಲೋಚನೆಯನ್ನು ಇಟ್ಟುಕೊಂಡಿದ್ದೆನು.

ಆದರೆ ಈಶ್ವರ ಸಂಕಲ್ಪ ಬೇರೆಯಾಗಿದ್ದಿತು.

೧೩

"ಕೂಲಿ"ಯಾಗಿರುವುದರ ಅನುಭವ

ಟ್ರಾನ್ಸ್‌ವಾಲ್‌ನಲ್ಲಿಯೂ ಆರೆಂಜ್ ಫ್ರೀಸ್ಟೇಟ್‌ನಲ್ಲಿಯೂ ಇರುವ ಭಾರತೀಯರ ಸ್ಥಿತಿಗತಿಗಳನ್ನು ವಿವರಿಸಲು ಇದು ಸ್ಥಳವಲ್ಲ. ಆ ಕಥೆಯನ್ನು ವಿಸ್ತಾರವಾಗಿ ತಿಳಿಯಬಯಸುವವರು, ನನ್ನ "ದಕ್ಷಿಣ ಆಫ್ರಿಕದಲ್ಲಿ ಸತ್ಯಾಗ್ರಹ" ಎಂಬ ಪುಸ್ತಕವನ್ನು ಓದಬೇಕೆಂದು ಸೂಚಿಸುತ್ತೇನೆ. ಆದರೂ ಅದರ ವಿಷಯವನ್ನು ಇಲ್ಲಿ ಸಂಕ್ಷೇಪವಾಗಿ ಹೇಳುವುದು ಅವಶ್ಯಕ.

ಆರೆಂಜ್ ಫ್ರೀಸ್ಟೇಟ್‌ನಲ್ಲಿ ೧೮೮೮ರಲ್ಲಿ ಅಥವಾ ಅದಕ್ಕೆ ಮುಂಚೆಯೇ ಅಂಗೀಕೃತವಾದ ಒಂದು ವಿಶೇಷ ಕಾನೂನು, ಭಾರತೀಯರ ಎಲ್ಲ ಅಧಿಕಾರವನ್ನೂ ಕಸಿದುಕೊಂಡಿತ್ತು. ಅವರು ಆ ದೇಶದಲ್ಲಿ ಉಳಿಯಲು ಇಷ್ಟಪಟ್ಟರೆ, ಹೋಟೆಲುಗಳಲ್ಲಿ "ವೇಟರ್"ಗಳಾಗಿ ಅಥವಾ ಅದೇ ಬಗೆಯ ಮತ್ತಾವುದಾದರೂ ಸೇವಕವೃತ್ತಿಯಲ್ಲಿ ಮಾತ್ರ ಉಳಿಯಬಹುದಾಗಿದ್ದಿತು. ವ್ಯಾಪಾರಿಗಳಿಗೆಲ್ಲ, ನಾಮಮಾತ್ರದ ಪರಿಹಾರಕೊಟ್ಟು ಓಡಿಸಿಬಿಟ್ಟರು. ವ್ಯಾಪಾರಿಗಳು ಅರ್ಜಿಗಳನ್ನೂ ಪ್ರಾರ್ಥನಾ ಪತ್ರಗಳನ್ನೂ ಸರ್ಕಾರಕ್ಕೆ ಸಲ್ಲಿಸಿದರು. ಆದರೆ ಅವುಗಳಿಂದ ಏನೂ ಪ್ರಯೋಜನವಾಗಲಿಲ್ಲ.

೧೮೮೫ರಲ್ಲಿ ಟ್ರಾನ್ಸ್‌ವಾಲ್‌ನಲ್ಲಿ ಒಂದು ಅತಿ ಕಠಿಣವಾದ ಕಾನೂನನ್ನು ಜಾರಿಮಾಡಿದರು. ೧೮೮೬ರಲ್ಲಿ ಆ ಕಾನೂನಿಗೆ ಒಂದು ಸಣ್ಣ ತಿದ್ದುಪಡಿಯನ್ನು ಸೇರಿಸಿದರು. ಆ ತಿದ್ದುಪಡಿಗೆ ಅನುಸಾರವಾಗಿ, ಟ್ರಾನ್ಸ್‌ವಾಲನ್ನು ಪ್ರವೇಶಿಸುವ ಭಾರತೀಯರೆಲ್ಲ ತಲೆಗೆ ಮೂರು ಪೌಂಡು ತೆರಿಗೆಯನ್ನು ಕೊಟ್ಟು ಅಲ್ಲಿಗೆ ಪ್ರವೇಶಿಸಬೇಕಾಗಿದ್ದಿತು. ಅವರಿಗೆಂದೇ ಬೇರೆ ಗೊತ್ತುಮಾಡಿರುವ ಪ್ರದೇಶಗಳಲ್ಲಿ ಹೊರತು ಉಳಿದ ಕಡೆ ಅವರು ಜಮೀನಿನ ಮಾಲಿಕರಾಗುವಂತೆ ಇರಲಿಲ್ಲ. ಆಚರಣೆಯಲ್ಲಿ ಆಗಲೂ ಕೂಡ ಅವರು ಭೂಮಿಯ ಒಡೆಯರಾಗುತ್ತಿರಲಿಲ್ಲ. ಅವರಿಗೆ ಮತವನ್ನು ಚಲಾಯಿಸುವ ಹಕ್ಕು ಇರಲಿಲ್ಲ. ಈ ಕಷ್ಟಗಳೆಲ್ಲ ಅವರಿಗೆ, ಏಷ್ಯಾದವರಿಗಾಗಿ ಮಾಡಿದ್ದ ವಿಶೇಷ ಕಾನೂನಿನ ರೀತಿಯಾಗಿ ಉಂಟಾಗುತ್ತಿದ್ದವು. ಇವರ ಜತೆಗೆ, ಬಣ್ಣದವರ ವಿರುದ್ಧವಾಗಿ ಮಾಡಿದ್ದ ಕಾನೂನುಗಳೂ ಭಾರತೀಯರಿಗೆ ಅನ್ವಯವಾಗುತ್ತಿದ್ದವು. ಬಣ್ಣದವರಿಗೆ ವಿರುದ್ಧವಾಗಿ ಮಾಡಿದ್ದ ಕಾನೂನಿನಂತೆ, ಭಾರತೀಯರು ಕಾಲುದಾರಿಗಳಲ್ಲಿ (ಫುಟ್ ಪಾತ್) ನಡೆಯಲು ಅಧಿಕಾರವಿರಲಿಲ್ಲ. ರಾತ್ರಿ ಒಂಬತ್ತು ಗಂಟೆಯಾದನಂತರ ಪರವಾನಗಿಯಿಲ್ಲದೆ ಅವರು ಹೊರಗೆ ಸಂಚರಿಸುವಂತಿರಲಿಲ್ಲ. ಈ ಕೊನೆಯ ನಿಯಮವನ್ನು ಭಾರತೀಯರ ವಿಷಯದಲ್ಲಿ ಸ್ವಲ್ಪ ಸಡಿಲವಾಗಿ ಪ್ರಯೋಗಿಸುತ್ತಿದ್ದರು. ಅರಬ್ಬರು ಎಂದು ಕರೆದುಕೊಳ್ಳುವವರನ್ನು, ಅವರ ಮೇಲೆ ದೊಡ್ಡ ಕೃಪೆಯೋ ಎಂಬಂತೆ ಈ ಕಾನೂನಿನಿಂದ ವಿನಾಯಿಸಿದ್ದರು. ಹೀಗೆ ಆ ವಿನಾಯಿತಿ ಪೋಲೀಸಿನವರ ಉಪಕಾರ ಬುದ್ಧಿಯ ಮೇಲೆ ಸ್ವಾಭಾವಿಕವಾಗಿ ಅವಲಂಬಿಸುತ್ತಿದ್ದಿತು.

ಈ ಎರಡು ಕಾನೂನುಗಳ ಪರಿಣಾಮವನ್ನೂ ನಾನು ಅನುಸರಿಸಬೇಕಾಯಿತು. ನಾನು ಮಿ. ಕೋಟ್ಸ್‌ರೊಡನೆ, ಅನೇಕ ವೇಳೆ ತಿರುಗಾಡಲು ಹೋಗುತ್ತಿದ್ದೆನು. ಹಿಂದಿರುಗುವುದು ಸಾಧಾರಣವಾಗಿ ಹತ್ತು ಗಂಟೆಯಾಗುತ್ತಿದ್ದಿತು. ಪೋಲೀಸರು ನನ್ನನ್ನು ಬಂಧಿಸಿದರೇ ಹೇಗೆ?! ಈ ವಿಷಯದಲ್ಲಿ ನನಗಿಂತ ಮಿ ಕೋಟ್ಸರಿಗೆ ಯೋಚನೆ ಹೆಚ್ಚಾಗಿದ್ದಿತು. ಅವರು ತಮ್ಮ ನೀಗ್ರೋ ಸೇವಕರಿಗೆ ಅನುಮತಿ ಚೀಟಿಯನ್ನು ಕೊಡಬಹುದಾಗಿದ್ದಿತು. ಆದರೆ ಅವರು ನನಗೆ ಅಂತಹ ಚೀಟಿಯನ್ನು ಕೊಡುವುದು ಹೇಗೆ?

ಯಜಮಾನರು ಮಾತ್ರ ಸೇವಕರಿಗೆ ಚೀಟಿಯನ್ನು ಕೊಡಬಹುದಾಗಿದ್ದಿತು. ನನಗೆ ಒಂದು ಚೀಟಿ ಬೇಕಾಗಿದ್ದರೆ, ಮಿ. ಕೋಟ್ಸ್‌ರು ಒಂದನ್ನು ಕೊಡಲು ಸಿದ್ಧರಾಗಿದ್ದರೂ ಅವರು ಕೊಡಲು ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ ಅದು ಮೋಸವಾಗುತ್ತಿದ್ದಿತು.

ಆದುದರಿಂದ ಕೋಟ್ಸ್‌ರೋ ಅಥವಾ ಅವರ ಸ್ನೇಹಿತರೊಬ್ಬರೋ ನನ್ನನ್ನು ಸರ್ಕಾರಿ ವಕೀಲರಾದ ಡಾಕ್ಟರ್ ಕ್ರೌಸ್ ಅವರಲ್ಲಿಗೆ ಕರೆದುಕೊಂಡು ಹೋದರು. ಹೋಗಿ ನೋಡುವಲ್ಲಿ ನಾನೂ ಅವರೂ ಒಂದೇ ಇನ್ (ಶಾಲೆ)ನಿಂದ ತೇರ್ಗಡೆ ಹೊಂದಿದ ಬ್ಯಾರಿಸ್ಟರ್‌ಗಳೆಂಬುದು ಗೊತ್ತಾಯಿತು. ರಾತ್ರಿ ೯ ಗಂಟೆಯ ನಂತರ ಹೊರಗೆ ತಿರುಗಾಡಬೇಕಾದರೆ ನನಗೆ ಒಂದು ಪರವಾನಗಿ ಬೇಕಾಗಿದೆ ಎಂಬುದನ್ನು ಕೇಳಿ ಅವರಿಗೆ ಕೋಪ ಬಂದಿತು. ನನ್ನಲ್ಲಿ ಅವರು ಸಹಾನುಭೂತಿಯನ್ನು ತೋರಿಸಿದರು. ನನಗೆ ಒಂದು ಪರವಾನಗಿಯನ್ನು ಕೊಡುವುದರ ಬದಲು ಅವರು, ನಾನು ಯಾವಾಗ ಬೇಕಾದರೂ ಪೋಲೀಸರ ಪ್ರತಿಬಂಧಕವಿಲ್ಲದೆ ಹೊರಗಡೆ ತಿರುಗಬಹುದೆಂದು ಒಂದು ಅಪ್ಪಣೆ ಕಾಗದವನ್ನು ಬರೆದು ಕೊಟ್ಟರು. ನಾನು ಹೊರಗಡೆ ತಿರುಗಲು ಹೋದಾಗಲೆಲ್ಲ ಆ ಕಾಗದವನ್ನು ಜೇಬಿನಲ್ಲಿಯೇ ಇಟ್ಟುಕೊಂಡಿರು ತ್ತಿದ್ದೆನು. ಆದರೆ ನಾನು ಅದನ್ನು ಉಪಯೋಗಿಸಬೇಕಾದ ಸಂದರ್ಭವೇ ಬರಲಿಲ್ಲವೆಂಬುದು ನನ್ನ ಸುಯೋಗ.

ಡಾಕ್ಟರ್ ಕ್ರೌಸ್‌ರವರು ನನ್ನನ್ನು ತಮ್ಮಲ್ಲಿಗೆ ಆಹ್ವಾನಿಸಿದರು. ನಾವಿಬ್ಬರೂ ಮಿತ್ರರಾದೆವೆಂದೇ ಹೇಳಬಹುದು. ನಾನು ಆಗಿಂದಾಗ್ಗೆ ಅವರಲ್ಲಿ ಹೋಗುತ್ತಿದ್ದೆನು. ಅವರೇ ನನ್ನನ್ನು ಅವರಿಗಿಂತ ಹೆಚ್ಚು ಪ್ರಸಿದ್ಧರಾದ ಅವರ ಅಣ್ಣಂದಿರಿಗೆ ಪರಿಚಯ ಮಾಡಿಸಿದರು. ಆಗ ಇವರ ಅಣ್ಣಂದಿರು ಜೊಹಾನ್ಸ್‌ಬರ್ಗ್‌ನಲ್ಲಿ ಪ್ರಸಿದ್ಧರಾದ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿದ್ದರು. ಬೋಯರ್ ಯುದ್ಧದ ಕಾಲದಲ್ಲಿ, ಒಬ್ಬ ಇಂಗ್ಲಿಷ್ ಅಧಿಕಾರಿಯನ್ನು ಖೂನಿಮಾಡುವ ಪಿತೂರಿಯಲ್ಲಿ ಅವರು ಸೇರಿದ್ದರೆಂದು ಸೈನ್ಯದ ಕಾನೂನಿನ ಪ್ರಕಾರ ವಿಚಾರಣೆಯಲ್ಲಿ ಅವರಿಗೆ ಏಳು ವರುಷ ಕಾರಾಗೃಹ ಶಿಕ್ಷೆಯನ್ನು ವಿಧಿಸಲಾಯಿತು. ಅವರ ವಕೀಲ ಸನ್ನದನ್ನೂ ಕಿತ್ತುಕೊಂಡರು. ಯುದ್ಧ ಮುಗಿದನಂತರ ಅವರಿಗೆ ಕಾರಾಗೃಹದಿಂದ

ಬಿಡುಗಡೆಯಾಯಿತು. ಟ್ರಾನ್ಸ್‌ವಾಲ್ ವಕೀಲ ವೃಂದ ಇವರನ್ನು ಮರ್ಯಾದೆಯಿಂದ ಮತ್ತೆ ತಮ್ಮಲ್ಲಿ ಸೇರಿಸಿಕೊಂಡಿತು. ಅವರು ಅಲ್ಲಿಯೇ ತಮ್ಮ ವಕೀಲಿ ವೃತ್ತಿಯನ್ನು ಮುಂದುವರಿಸಿದರು.

ಈ ಸಂಪರ್ಕಗಳೆಲ್ಲ ಮುಂದೆ ನನ್ನ ಸಾರ್ವಜನಿಕ ಜೀವನದಲ್ಲಿ ತುಂಬ ಪ್ರಯೋಜನಕರವಾದುವು. ಅವುಗಳಿಂದ ನನ್ನ ಕಾರ್ಯ ಬಹುಮಟ್ಟಿಗೆ ಸುಲಭವಾಯಿತು. ಕಾಲು ದಾರಿ (ಫುಟ್ ಪಾತ್)ಯಲ್ಲಿ ಭಾರತೀಯರು ತಿರುಗಾಡಬಾರದೆಂಬ ಕಾನೂನಿನ ಪರಿಣಾಮದಿಂದ ನನಗೆ ತೊಂದರೆಯೇ ಆಯಿತು. ನಾನು ಯಾವಾಗಲೂ ಪ್ರೆಸಿಡೆಂಟ್ ಸ್ಟ್ರೀಟ್ ಎಂಬ ರಸ್ತೆಯನ್ನು ದಾಟಿ ಬಯಲು ಪ್ರದೇಶಕ್ಕೆ ತಿರುಗಾಡಲು ಹೋಗುತ್ತಿದ್ದೆನು. ಈ ಬೀದಿಯಲ್ಲಿ ಪ್ರೆಸಿಡೆಂಟ್ ಕ್ರೂಗರ್‌ರ ಮನೆ ಇದ್ದಿತು. ಅದು ಆಡಂಬರವಿಲ್ಲದ ಸಾಮಾನ್ಯ ಮನೆ, ಸುತ್ತ ತೋಟ ಇರಲಿಲ್ಲ. ಮನೆ ಯಾವ ರೀತಿಯಲ್ಲಿಯೂ ವಿಶೇಷ ತರಹದ ಮನೆಯಾಗಿರಲಿಲ್ಲ. ಆ ಸುತ್ತಮುತ್ತಲ ಇತರ ಮನೆಗಳಿಂದ ಅದು ಯಾವ ರೀತಿಯಿಂದಲೂ ಬೇರೆಯಾಗಿರಲಿಲ್ಲ. ಪ್ರಿಟೋರಿಯದಲ್ಲಿದ್ದ ಅನೇಕ ಲಕ್ಷಾಧಿಪತಿಗಳ ಮನೆಗಳು, ಅದಕ್ಕಿಂತ ಹೆಚ್ಚು ಆಡಂಬರವುಳ್ಳವುಗಳಾಗಿ ಉಪವನದಿಂದ ಸುತ್ತಲ್ಪಟ್ಟಿದ್ದವು. ಮನೆಯ ಮುಂದೆ ಇರುತ್ತಿದ್ದ ಪೋಲೀಸ್ ಕಾವಲಿನಿಂದ ಮಾತ್ರ, ಅದು ಯಾರೋ ಅಧಿಕಾರಿಯ ಮನೆ ಎಂದು ಗೊತ್ತಾಗುತ್ತಿದ್ದಿತು. ನಾನು ಯಾವಾಗಲೂ ಮನೆಯ ಮುಂದಿನ ಕಾಲು ದಾರಿಯಲ್ಲಿ ಕಾವಲು ಪೋಲೀಸಿನವನನ್ನು ದಾಟಿಕೊಂಡು ಹೋಗುತ್ತಿದ್ದೆನು. ನನ್ನನ್ನು ಯಾರೂ ಯಾವಾಗಲೂ ತಡೆಯಲಿಲ್ಲ.

ಅಲ್ಲಿಯ ಕಾವಲುಗಾರರನ್ನು ಆಗಿಂದಾಗ್ಗೆ ಬದಲಾಯಿಸುತ್ತಿದ್ದರು. ಒಂದು ದಿನ ಒಬ್ಬ ಕಾವಲುಗಾರ, ನಾನು ಕಾಲು ಹಾದಿಯಲ್ಲಿ ಹೋಗುತ್ತಿರುವಾಗ ಇದ್ದಕ್ಕಿದ್ದಂತೆ ಬಂದು ನನ್ನನ್ನು ಹೊಡೆದು ರಸ್ತೆಗೆ ತಳ್ಳಿದನು. ಅವನು ನನಗೆ ಯಾವ ಸೂಚನೆಯನ್ನೂ ಕೊಡಲಿಲ್ಲ. ದಾರಿಯನ್ನು ಬಿಟ್ಟು ಹೋಗೆಂದು ಸಹ ಹೇಳಲಿಲ್ಲ. ನಾನು ಆಶ್ಚರ್ಯ ಮತ್ತು ಖೇದದಿಂದ ಚಕಿತನಾದನು. ನಾನು ಕಾವಲಿನವನೊಂದಿಗೆ ಈ ವಿಷಯವನ್ನು ಪ್ರಸ್ತಾಪಿಸುವುದಕ್ಕೆ ಮುಂಚಿತವಾಗಿಯೇ, ಅದೇ ದಾರಿಯಲ್ಲಿ ಕುದುರೆಯ ಮೇಲೆ ಹೋಗುತ್ತಿದ್ದ ಮಿ|| ಕೋಟ್ಸ್‌ರು ನನ್ನನ್ನು ಕೂಗಿ ಹೀಗೆ ಹೇಳಿದರು :

"ಗಾಂಧೀ, ನಾನು ಎಲ್ಲವನ್ನೂ ನೋಡಿದೆ. ಈ ಮನುಷ್ಯನ ಮೇಲೆ ನೀವು ಮೊಕದ್ದಮೆ ಹೂಡಿದರೆ ನಾನು ಸಂತೋಷದಿಂದ ನಿಮ್ಮ ಪರವಾಗಿ ಸಾಕ್ಷಿ ನುಡಿಯುತ್ತೇನೆ. ನಿಮ್ಮ ಮೇಲೆ ಅಂತಹ ಹಿಂಸೆ ನಡೆದುದಕ್ಕೆ ನನಗೆ ಬಹಳ ದುಃಖವಾಗಿದೆ."

ನಾನು, "ನೀವು ದುಃಖಿತರಾಗಬೇಕಾದುದಿಲ್ಲ ಈ ಬಡಪಾಯಿಗೇನು ಗೊತ್ತು ? ಅವನಿಗೆ ಬಣ್ಣದವರೆಲ್ಲ ಒಂದೇ. ನನಗೆ ಮಾಡಿದಂತೆಯೇ ಅವನು ಎಲ್ಲ ನೀಗ್ರೋಗಳಿಗೂ ಮಾಡುತ್ತಾನೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ನನಗೆ ಸಂಭವಿಸುವ ವೈಯಕ್ತಿಕ ಅನ್ಯಾಯಕ್ಕಾಗಿ ಯಾರ ಮೇಲೆಯೂ ಮೊಕದ್ದಮೆ ಹೂಡುವುದಿಲ್ಲವೆಂಬ ನಿಯಮವನ್ನು ನಾನು ಮಾಡಿಕೊಂಡಿದ್ದೇನೆ. ಆದುದರಿಂದ ನಾನು ಇವನ ಮೇಲೆ ಮೊಕದ್ದಮೆ ನಡೆಸುವುದಿಲ್ಲ" ಎಂದೆನು.

ಮಿ. ಕೋಟ್ಸನು "ನೀವು ಹೇಳುವುದು ನಿಮ್ಮ ಸ್ವಭಾವಕ್ಕೆ ಅನುಗುಣವಾದ ಮಾತು. ಆದರೆ ಮತ್ತೊಮ್ಮೆ ಯೋಚಿಸಿ. ಎಂತಹ ಜನರಿಗೆ ನಾವು ಪಾಠ ಕಲಿಸಬೇಕು" ಎಂದು ಹೇಳಿದನು. ಅವನು ಪೋಲೀಸಿನವನೊಂದಿಗೆ ಮಾತನಾಡಿ ಆತನನ್ನು ಗದ್ದರಿಸಿದನು. ಅವರ ಸಂಭಾಷಣೆ ಡಚ್ ಭಾಷೆಯಲ್ಲಿ ನಡೆದುದರಿಂದ ನನಗೆ ಅರ್ಥವಾಗಲಿಲ್ಲ. ಪೋಲೀಸ್‌ನವನು ಬೋಯರ್ ಪಂಗಡಕ್ಕೆ ಸೇರಿದವನು. ಅವನು ನನ್ನ ಕ್ಷಮೆಯನ್ನು ಯಾಚಿಸಿದನು ಅದರ ಆವಶ್ಯಕತೆಯೂ ಇರಲಿಲ್ಲ. ನಾನು ಆಗಲೇ ಅವನನ್ನು ಕ್ಷಮಿಸಿ ಆಗಿದ್ದಿತು

ಆದರೆ ನಾನು ಅನಂತರ ಆ ಬೀದಿಯಲ್ಲಿ ಹೋಗುವುದನ್ನು ಪೂರ್ಣವಾಗಿ ಬಿಟ್ಟುಬಿಟ್ಟೆನು. "ಆ ಪೋಲೀಸ್ ಕಾವಲಿನವನ ಸ್ಥಾನಕ್ಕೆ ಇತರ ಹೊಸ ಕಾವಲುಗಾರರು ಬರಬಹುದು. ವಿಷಯ ಗೊತ್ತಿಲ್ಲದೆ ಅವರೂ ಇವನಂತೆಯೇ ವರ್ತಿಸಬಹುದು ಅನಾವಶ್ಯಕವಾಗಿ ನಾನು ಏಕೆ ಮತ್ತೊಂದು ಹೊಡೆತವನ್ನು ನನ್ನ ಮೇಲೆ ತಂದುಕೊಳ್ಳಬೇಕು ?" ಆದುದರಿಂದ ನನ್ನ ಸಂಚಾರಕ್ಕೆ ನಾನು ಬೇರೆ ಮಾರ್ಗವನ್ನು ಆರಿಸಿಕೊಂಡೆನು.

ಈ ಘಟನೆಯಿಂದ, ಅಲ್ಲಿಯ ಭಾರತೀಯ ನಿವಾಸಿಗಳಲ್ಲಿ ನನ್ನ ಅನುಕಂಪ ಇನ್ನೂ ತೀವ್ರವಾಯಿತು. ಬ್ರಿಟಿಷ್ ಏಜೆಂಟರನ್ನು ಈ ವಿಷಯದಲ್ಲಿ

ಸಂಧಿಸಿದ ನಂತರ, ಒಂದು ಪ್ರಾಯೋಗಿಕ ಮೊಕದ್ದಮೆಯನ್ನು ಹಾಕ ಬಹುದೆ ? ಎಂಬ ವಿಷಯವಾಗಿ ನಾನು ಭಾರತೀಯರೊಂದಿಗೆ ವಿಚಾರ ವಿನಿಮಯ ಮಾಡಿದೆನು.

ಹೀಗೆ ನಾನು ಅಲ್ಲಿಯ ಭಾರತೀಯ ನಿವಾಸಿಗಳ ಸ್ಥಿತಿಗತಿಗಳನ್ನು ಕುರಿತು ಗ್ರಂಥಗಳನ್ನು ಓದುವುದರಿಂದ ಮಾತ್ರವಲ್ಲದೆ ಸ್ವಂತ ಅನುಭವ ದಿಂದಲೂ ಆಳವಾಗಿ ಅಧ್ಯಯನ ಮಾಡಿದೆನು. ದಕ್ಷಿಣ ಆಫ್ರಿಕಾದಲ್ಲಿ ಆತ್ಮ ಗೌರವವುಳ್ಳ ಭಾರತೀಯರು ಇರಲು ಸಾಧ್ಯವಿಲ್ಲವೆಂಬುದು, ನನಗೆ ಹೆಜ್ಜೆ ಹೆಜ್ಜೆಗೂ ಗೊತ್ತಾಗತೊಡಗಿತು. ಈ ಪರಿಸ್ಥಿತಿಯನ್ನು ಉತ್ತಮ ಪಡಿಸು ವುದು ಹೇಗೆ ಎಂಬ ಪ್ರಶ್ನೆ ನನ್ನ ಮನಸ್ಸನ್ನು ಇನ್ನೂ ತೀವ್ರವಾಗಿ ಹಿಡಿಯಿತು.

ಆದರೆ ನನ್ನ ತಾತ್ಕಾಲಿಕವಾದ ಮುಖ್ಯ ಕರ್ತವ್ಯ, ದಾದಾ ಅಬ್ದುಲ್ಲಾ ರವರ ಮೊಕದ್ದಮೆಯನ್ನು ಗಮನಿಸುವುದೇ ಆಗಿದ್ದಿತು.

೧೪

ಮೊಕದ್ದಮೆಗೆ ಸಿದ್ಧತೆ

ಪ್ರಿಟೋರಿಯದಲ್ಲಿ ನಾನು ಒಂದು ವರುಷ ಕಳೆದುದು ನನ್ನ ಜೀವನ ದಲ್ಲಿ ಅಮೂಲ್ಯ ಅನುಭವವಾಯಿತು. ನಾನು ಸಾರ್ವಜನಿಕ ಕಾರ್ಯಗಳನ್ನು ಮಾಡುವ ವಿಧಾನ ಕಲಿಯುವ ಅವಕಾಶ ದೊರೆತುದೂ ಇಲ್ಲಿಯೇ. ಸೇವೆಗೆ ತಕ್ಕಮಟ್ಟಿಗೆ ಯೋಗ್ಯತೆಯನ್ನು ಸಂಪಾದಿಸಿದುದೂ ಇಲ್ಲಿಯೇ. ನನ್ನಲ್ಲಿ ಸುಪ್ತವಾಗಿದ್ದ ಧಾರ್ಮಿಕ ಚೇತನ, ಸಂಜೀವ ಶಕ್ತಿಯಾದುದೂ, ವಕೀಲ ವೃತ್ತಿಯ ನಿಜವಾದ ಜ್ಞಾನ ನನಗೆ ಸಂಪಾದನೆಯಾದುದೂ ಇಲ್ಲಿಯೇ. ಹೊಸದಾಗಿ ಬ್ಯಾರಿಸ್ಟರ್ ಆದವನು, ಅನುಭವವುಳ್ಳ ಬ್ಯಾರಿಸ್ಟರ್‌ರವರ ಕಛೇರಿಯಲ್ಲಿ ಕಲಿಯುವುದನ್ನೆಲ್ಲ ನಾನು ಇಲ್ಲಿ ಕಲಿತೆನು. ನಾನೂ ಕೂಡ ವಕೀಲನಾಗಿ ಜೀವನಮಾಡಬಹುದು ಎಂಬ ಆತ್ಮವಿಶ್ವಾಸ ನನಗೆ ಇಲ್ಲಿಯೇ ದೊರಕಿದುದು. ವಕೀಲನಾಗಿ ಜಯವನ್ನು ಗಳಿಸುವ ಗುಟ್ಟನ್ನು ಸಹ ನಾನು ಕಲಿತುದು ಇಲ್ಲಿಯೇ.

ದಾದಾ ಅಬ್ದುಲ್ಲಾರವರ ಮೊಕದ್ದಮೆ ಸಣ್ಣ ಮೊಕದ್ದಮೆಯಾಗಿರಲಿಲ್ಲ. ಅದು ನಲವತ್ತು ಸಾವಿರ ಪೌಂಡಿನ ದಾವಾ ; ವ್ಯಾಪಾರಕ್ಕೆ ಸಂಬಂಧಪಟ್ಟ ಮೊಕದ್ದಮೆಯಾಗಿದ್ದುದರಿಂದ ಅದರಲ್ಲಿ ಲೆಕ್ಕದ ತೊಡಕುಗಳು ವಿಶೇಷವಾಗಿದ್ದುವು. ಮೊಕದ್ದಮೆಯ ಒಂದು ಭಾಗ ವಾಗ್ದಾನ (ಸಾಲ) ಪತ್ರ (ಪ್ರಾಮಿಸರಿ ನೋಟ್)ಗಳ ಮೇಲೆ ಅವಲಂಬಿಸಿತ್ತು. ಮತ್ತೊಂದು ಭಾಗ ವಾಗ್ದಾನ (ಸಾಲ) ಪತ್ರಗಳನ್ನು ಬರೆದು ಕೊಡುವ ಒಪ್ಪಂದದ ಮೇಲೆ ಅವಲಂಬಿಸಿದ್ದಿತು. "ವಾಗ್ದಾನ (ಸಾಲ) ಪತ್ರಗಳನ್ನು ಮೋಸದಿಂದ ಪಡೆದಿದ್ದಾರೆ. ಇದಕ್ಕೆ ಪ್ರತಿಫಲ ನಮಗೆ ದೊರೆತಿಲ್ಲ" ಎಂಬುದು ಪ್ರತಿವಾದಿಗಳ ವಾದವಾಗಿದ್ದಿತು. ಈ ತೊಡಕಾದ ಮೊಕದ್ದಮೆಯಲ್ಲಿ ಕಾನೂನು ಮತ್ತು ಸಂಗತಿಗಳಿಗೆ ಸಂಬಂಧಪಟ್ಟ ಪ್ರಶ್ನೆಗಳು ಬೇಕಾದಷ್ಟು ಇದ್ದವು.

ಎರಡು ಪಕ್ಷಗಳವರೂ ಅತ್ಯುತ್ತಮವಾದ ವಕೀಲರನ್ನು ಗೊತ್ತು ಮಾಡಿಕೊಂಡಿದ್ದರು. ಅವರ ಕಾರ್ಯಕ್ರಮವನ್ನು ಅಧ್ಯಯನ ಮಾಡುವ ಅವಕಾಶ ನನಗೆ ಹೀಗೆ ದೊರಕಿದ್ದಿತು. ವಾದಿಯ ಪಕ್ಷದ ವಾದವನ್ನು ಸಿದ್ಧಮಾಡಿ ವಕೀಲರಿಗೆ ಒದಗಿಸುವುದು. ಮತ್ತು ಅದಕ್ಕೆ ಪೋಷಕಗಳಾದ ಸಂಗತಿ, ಅಂಶಗಳನ್ನು ಆರಿಸಿ ಇಡುವುದು ನನ್ನ ಪಾಲಿಗೆ ಬಿದ್ದಿದ್ದಿತು. ನಾನು ಸಿದ್ಧ ಮಾಡಿಕೊಟ್ಟ ಟಿಪ್ಪಣಿಯಲ್ಲಿ, ವಕೀಲರು ಎಷ್ಟನ್ನು ಒಪ್ಪುತ್ತಿದ್ದರು ; ಎಷ್ಟನ್ನು ತಿರಸ್ಕರಿಸುತ್ತಿದ್ದರು. ಮತ್ತು ಸಲಹೆಗಾರರು ಸಿದ್ಧಪಡಿಸಿದ ಟಿಪ್ಪಣಿಯಲ್ಲಿ ವಕೀಲರು ಎಷ್ಟನ್ನು ಅಂಗೀಕರಿಸುತ್ತಿದ್ದರು ; ಇವನ್ನು ನೋಡುವುದರಿಂದಲೇ ಎಷ್ಟೋ ತಿಳಿವಳಿಕೆಯುಂಟಾಗುತ್ತಿದ್ದಿತು. ಈ ಮೊಕದ್ದಮೆಯ ಸಿದ್ಧತೆಯಲ್ಲಿ, ನನ್ನ ಗ್ರಹಣಶಕ್ತಿ ಮತ್ತು ವಿಷಯಗಳನ್ನು ಸುವ್ಯವಸ್ಥಿತವಾಗಿ ಒಟ್ಟುಗೂಡಿಸಿ ರೂಪಿಸುವ ಶಕ್ತಿ ಇವುಗಳನ್ನು ನಾನು ಅರಿತುಕೊಳ್ಳಲು ಸಾಧ್ಯವಾಗುವುದೆಂದು ತಿಳಿದೆನು.

ಮೊಕದ್ದಮೆಯಲ್ಲಿ ನನಗೆ ಅತ್ಯಂತ ಉತ್ಸಾಹವುಂಟಾಯಿತು. ನಾನು ಅದರಲ್ಲಿಯೇ ತಲ್ಲೀನನಾದೆನು. ಆ ವ್ಯವಹಾರಕ್ಕೆ ಸಂಬಂಧಿಸಿದ ಎಲ್ಲ ಕಾಗದಪತ್ರಗಳನ್ನು ನಾನು ಓದಿದೆನು. ನನ್ನ ಕಕ್ಷಿಗಾರರು ದಕ್ಷರೂ ಬುದ್ಧಿವಂತರೂ ಆಗಿದ್ದರು. ಅವರು ನನ್ನಲ್ಲಿ ಅಪಾರವಾದ ನಂಬಿಕೆಯನ್ನಿಟ್ಟಿದ್ದರು. ಇದರಿಂದ ನನ್ನ ಕೆಲಸ ಸುಲಭವಾಯಿತು. ನಾನು

ಬುಕ್ ಕೀಪಿಂಗ್ (ಜಮಾಖರ್ಚು ಲೆಕ್ಕ)ನ ಸೂಕ್ಷ್ಮ ಅಧ್ಯಯನವನ್ನು ಮಾಡಿದೆನು. ಅಲ್ಲದೆ ಗುಜರಾತಿಯಲ್ಲಿದ್ದ ಬಹು ಭಾಗ ಪತ್ರ ವ್ಯವಹಾರವನ್ನು ನಾನು ಇಂಗ್ಲಿಷಿಗೆ ಭಾಷಾಂತರಿಸಬೇಕಾಗಿದ್ದಿತು. ಇದರಿಂದ ಭಾಷಾಂತರಿಸುವ ನನ್ನ ಶಕ್ತಿಯೂ ವೃದ್ಧಿಗೊಂಡಿತು.

ಮೊದಲೇ ಹೇಳಿದಂತೆ, ಧಾರ್ಮಿಕ ವಿಷಯಗಳಲ್ಲಿಯೂ ಸಾರ್ವಜನಿಕ ವಿಷಯಗಳಲ್ಲಿಯೂ ನನಗೆ ಸ್ವಲ್ಪ ಶ್ರದ್ಧೆಯಿದ್ದರೂ, ಆ ಕಾಲದಲ್ಲಿ ಅವು ನನ್ನ ಮುಖ್ಯ ಕಾರ್ಯರಂಗವಾಗಿರಲಿಲ್ಲ. ಮೊಕದ್ದಮೆಗೆ ಸಿದ್ಧವಾಗುವುದು ನನ್ನ ಅತ್ಯಂತ ಪ್ರಾಮುಖ್ಯವಾದ ಕಾರ್ಯವಾಗಿದ್ದಿತು. ಕಾನೂನು ವ್ಯಾಸಂಗ, ಅವಶ್ಯಕವಾದಾಗಲೆಲ್ಲ ಇತರೆ ಮೊಕದ್ದಮೆಗಳ ವ್ಯಾಸಂಗ (ಲಾ ಕೇಸಸ್) ಇವುಗಳಿಗೆ ನನ್ನ ಕಾಲ ವಿನಿಯೋಗದಲ್ಲಿ ಆದ್ಯತೆ ದೊರೆಯುತ್ತಿದ್ದಿತು. ಇದರ ಫಲವಾಗಿ, ಮೊಕದ್ದಮೆಯ ಎಲ್ಲ ಅಂತರಂಗವೂ ನನಗೆ ಸಂಪೂರ್ಣವಾಗಿ ಕರಗತವಾಯಿತು. ಎರಡೂ ಕಡೆಯ ಕಕ್ಷಿಗಾರರಿಗೆ ತಮ್ಮ ಮೊಕದ್ದಮೆಯ ವಿಷಯ ಅಷ್ಟು ಅರ್ಥವಾಗಿರಲಿಲ್ಲವೆಂದು ಹೇಳಬಹುದು. ಏಕೆಂದರೆ ಎರಡು ಪಕ್ಷದವರ ಎಲ್ಲ ಪತ್ರವ್ಯವಹಾರವನ್ನೂ ನಾನು ಪೂರ್ಣವಾಗಿ ವ್ಯಾಸಂಗ ಮಾಡಿದ್ದೆನು.

ದಿವಂಗತ ಪಿನ್‌ಕಟ್‌ರು ಹೇಳಿದ್ದ "ಮೊಕದ್ದಮೆಯ ಸಂಗತಿಗಳು ಕಾನೂನಿನ ಮುಕ್ಕಾಲು ಭಾಗ" ಎಂಬ ಸಲಹೆ ನನಗೆ ಜ್ಞಾಪಕಕ್ಕೆ ಬಂದಿತು. ಅನಂತರ ಕೆಲವು ಕಾಲದ ಮೇಲೆ ದಕ್ಷಿಣ ಆಫ್ರಿಕಾದ ಪ್ರಸಿದ್ಧ ಬ್ಯಾರಿಸ್ಟರ್ ಆದ ಮಿ. ಲಿಯೋನಾರ್ಡ್‌ರು ಆ ಹೇಳಿಕೆಗೆ ಪೂರ್ಣ ಸಮರ್ಥನೆಯಾದರು. ನಾನು ನಡೆಸುತ್ತಿದ್ದ ಒಂದು ಮೊಕದ್ದಮೆಯಲ್ಲಿ, ನ್ಯಾಯ, ನನ್ನ ಕಕ್ಷಿಗಾರರ ಪರವಾಗಿದ್ದರೂ ಕಾನೂನು ಅವರಿಗೆ ವಿರುದ್ಧವಾಗಿದ್ದುದು ನನಗೆ ಕಂಡಿತು. ನಾನು ನಿರಾಶನಾಗಿ ಮಿ. ಲಿಯೊನಾರ್ಡ್‌ರವರಲ್ಲಿ ಹೋಗಿ ಸಲಹೆಯನ್ನು ಕೇಳಿದೆನು. ಮೊಕದ್ದಮೆಯ ವಿದ್ಯಮಾನಗಳು ನನ್ನ ಕಕ್ಷಿಗಾರರಿಗೆ ಬಹಳ ಅನುಕೂಲವಾಗಿದೆಯೆಂಬುದು ಅವರಿಗೂ ತೋರಿತು. ಅವರು ಹೀಗೆ ಹೇಳಿದರು : "ಗಾಂಧೀ, ನಾನು ಒಂದು ವಿಷಯ ತಿಳಿದಿದ್ದೇನೆ. ಮೊಕದ್ದಮೆಯ ಸಂಗತಿಗಳನ್ನು ನಾವು ಎಚ್ಚರಿಕೆಯಿಂದ ಅರ್ಥ ಮಾಡಿಕೊಂಡರೆ

ಅದಕ್ಕೆ ತಕ್ಕ ಕಾನೂನು ತಾನಾಗಿಯೇ ದೊರಕುತ್ತವೆ. ಮೊಕದ್ದಮೆಯ ವಿಷಯಗಳನ್ನೇ ನಾವು ಇನ್ನೂ ಹೆಚ್ಚು ಆಳವಾಗಿ ಅಭ್ಯಾಸ ಮಾಡಬೇಕು. ಈ ಮೊಕದ್ದಮೆಯ ವಿಷಯಗಳನ್ನು ಇನ್ನೂ ಚೆನ್ನಾಗಿ ಓದಿಕೊಳ್ಳಿ. ಅನಂತರ ನನ್ನನ್ನು ಬಂದು ನೋಡಿ." ನಾನು ಮೊಕದ್ದಮೆಯ ಸಂಗತಿಗಳನ್ನು ಮತ್ತೆ ಅಧ್ಯಯನ ಮಾಡಿದೆನು. ಅವು ನನಗೆ ಮತ್ತೊಂದು ಹೊಸ ಬೆಳಕಿನಲ್ಲಿ ಕಂಡವು. ಅದಕ್ಕೆ ಸಂಬಂಧಪಟ್ಟ ಮತ್ತೊಂದು ದಕ್ಷಿಣ ಆಫ್ರಿಕಾ ನ್ಯಾಯಸ್ಥಾನದ ಮೊಕದ್ದಮೆ ನನ್ನ ಲಕ್ಷ್ಯಕ್ಕೆ ಬಂದಿತು. ನನಗೆ ಸಂತೋಷವಾಯಿತು. ನಾನು ಲಿಯೋನಾರ್ಡ್‌ರನ್ನು ಕಂಡು ವಿಷಯಗಳನ್ನೆಲ್ಲ ತಿಳಿಸಿದೆನು. ಅವರು "ಸರಿ, ನಾವು ಮೊಕದ್ದಮೆಯನ್ನು ಗೆಲ್ಲುತ್ತೇವೆ. ಯಾವ ನ್ಯಾಯಾಧಿಪತಿಯ ಮುಂದೆ ಇದು ಬರುವುದೆಂಬುದನ್ನು ನಾವು ಸ್ವಲ್ಪ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು" ಎಂದರು.

ದಾದಾ ಅಬ್ದುಲ್ಲಾರವರ ಮೊಕದ್ದಮೆಗೆ ನಾನು ಸಿದ್ಧತೆ ಮಾಡಿಕೊಳ್ಳುತ್ತಿರುವಾಗ, ಮೊಕದ್ದಮೆಯಲ್ಲಿ ಸಂಗತಿಗಳು ಇಷ್ಟು ಪ್ರಾಮುಖ್ಯ ಎಂಬುದು ನನಗೆ ಅರ್ಥವಾಗಿರಲಿಲ್ಲ. ಸಂಗತಿ ಅಥವಾ ವಿಷಯ ಎಂದರೆ ಸತ್ಯ ಸಂಗತಿಗಳು. ನಾವು ಸತ್ಯವನ್ನೇ ಅವಲಂಬಿಸಿದರೆ ಸ್ವಾಭಾವಿಕವಾಗಿಯೇ ಕಾನೂನು ನಮಗೆ ಸಹಾಯಕವಾಗುತ್ತದೆ. ದಾದಾ ಅಬ್ದುಲ್ಲಾರವರ ಮೊಕದ್ದಮೆಯಲ್ಲಿ, ಸತ್ಯವಾದ ಸಂಗತಿಗಳಿಂದ ಆ ಮೊಕದ್ದಮೆಯಲ್ಲಿ ಕಾನೂನು ಅವರಿಗನುಕೂಲವಾಗುವುದೆಂಬುದು ನನಗೆ ಸ್ಪಷ್ಟವಾಯಿತು. ಆದರೆ ಮೊಕದ್ದಮೆಯನ್ನು ನ್ಯಾಯಸ್ಥಾನದಲ್ಲಿಯೇ ಮುಂದುವರಿಸುತ್ತಾ ಹೋದರೆ, ವಾದಿ ಪ್ರತಿವಾದಿಗಳಿಬ್ಬರೂ ದಿವಾಳಿಯಾಗುವುದು ನಿಶ್ಚಯ. ಅವರಿಬ್ಬರೂ ಒಂದೇ ಧರ್ಮಕ್ಕೆ ಸೇರಿದವರಾಗಿದ್ದರು ; ಬಂಧುಗಳಾಗಿದ್ದರು. ಮೊಕದ್ದಮೆ ಎಷ್ಟು ದಿವಸ ಹೀಗೆ ಎಳೆದಾಡಬಹುದೆಂಬುದನ್ನು ಹೇಳುವಂತೆ ಇರಲಿಲ್ಲ. ಈ ಮೊಕದ್ದಮೆಯನ್ನು ಮುಂದುವರಿಸಿ ಕೋರ್ಟಿನಲ್ಲಿಯೇ ಹೋರಾಡಬೇಕೆ ? ಯಾರಿಗೂ ಅನುಕೂಲವಾಗದೆ ಇದು ಬಹುಕಾಲ ನಡೆಯಬಹುದು. ಆದುದರಿಂದ ಸಾಧ್ಯವಾದರೆ ಮೊಕದ್ದಮೆ ಆದಷ್ಟು ಬೇಗ ಮುಗಿದು ಹೋಗಬೇಕೆಂಬುದು ಎರಡು ಪಕ್ಷದವರ ಇಷ್ಟವೂ ಆಗಿದ್ದಿತು.

ನಾನು ತಯಬ್ ಸೇಠರನ್ನು ಹೋಗಿ ಕಂಡು, ಎರಡು ಪಕ್ಷಗಳವರೂ ತಮ್ಮ ವ್ಯಾಜ್ಯವನ್ನು ಪಂಚಾಯಿತಿಗೆ ಒಪ್ಪಿಸಬೇಕೆಂದು ಪ್ರಾರ್ಥಿಸಿ ಸಲಹೆ ಕೊಟ್ಟೆನು. "ನಿಮ್ಮ ವಕೀಲರ ಸಲಹೆಯನ್ನು ಕೇಳಿ, ಎರಡು ಪಕ್ಷಗಳಿಗೂ ಒಪ್ಪಿಗೆಯಾದ ಒಬ್ಬ ಪಂಚಾಯಿತಿದಾರರನ್ನು ನಿಯಮಿಸಿಕೊಂಡರೆ ಮೊಕದ್ದಮೆಯನ್ನು ಬೇಗ ಮುಗಿಸಬಹುದು" ಎಂದು ಹೇಳಿದೆನು. ಕಕ್ಷಿಗಾರರಿಬ್ಬರೂ ಧನಿಕ ವರ್ತಕರೇ ಆಗಿದ್ದರು. ಆದರೆ ವಕೀಲರಿಗೆ ತೆರಬೇಕಾದ ಶುಲ್ಕದ ಮೊತ್ತ, ಅವರ ಆಸ್ತಿಯನ್ನೆಲ್ಲ ನುಂಗಿಬಿಡುವಷ್ಟು ವೇಗವಾಗಿ ಏರುತ್ತಾ ಹೋಗುತ್ತಿದ್ದಿತು ಮೊಕದ್ದಮೆ ಅವರ ಲಕ್ಷ್ಯವನ್ನೆಲ್ಲ ಸೆಳೆದುಕೊಳ್ಳುತ್ತಿದ್ದಿತು. ಇನ್ನಾವ ಕಾರ್ಯಕ್ಕೂ ಅವರಿಗೆ ಒಂದು ಗಳಿಗೆಯೂ ಉಳಿಯುತ್ತಿರಲಿಲ್ಲ. ಈ ಮಧ್ಯೆ, ಒಬ್ಬರಲ್ಲಿ ಒಬ್ಬರಿಗೆ ಅಸಮಾಧಾನ ಬೆಳೆಯುತ್ತಲೇ ಹೋಗುತ್ತಿದ್ದಿತು. ನನಗೆ ನನ್ನ ವೃತ್ತಿಯಲ್ಲಿಯೇ ಬೇಸರಿಕೆ ಹುಟ್ಟಿತು. ಎರಡು ಕಡೆಯ ವಕೀಲರೂ ತಮ್ಮ ಕಕ್ಷಿಗಾರರ ಪರವಾಗಿ, ಎದುರು ಪಕ್ಷದ ವಿರುದ್ಧ ಕಾನೂನು ಗಾರುಡಿಯನ್ನು ಎತ್ತುತ್ತಿದ್ದರು. ಜಯವನ್ನು ಗಳಿಸುವ ಪಕ್ಷ, ತಾನು ವೆಚ್ಚಮಾಡಿದ ಎಲ್ಲ ಹಣವನ್ನೂ ಎದುರು ಪಕ್ಷದಿಂದ ಹೊಂದುವುದು ಸಾಧ್ಯವಿಲ್ಲವೆಂಬುದು, ಅದು ಮೊದಲನೆಯ ಸಲವಾಗಿ, ನನಗೆ ಗೊತ್ತಾಯಿತು. ಕೋರ್ಟಿನ ಕಾನೂನಿನಂತೆ, ಕಕ್ಷಿಗಾರನು ವಕೀಲರಿಗೆ ಕೊಡಬೇಕಾದ ಶುಲ್ಕ, ಇಷ್ಟೇ ಎಂದು ನಿಗದಿಯಾಗಿದ್ದಿತು. ಆದರೆ ವಕೀಲರು ಕಕ್ಷಿಗಾರರಿಂದ, ಅದಕ್ಕಿಂತ ಬಹಳ ಹೆಚ್ಚಾದ ಹಣವನ್ನು ತೆಗೆದುಕೊಳ್ಳುತ್ತಿದ್ದರು. ಇದನ್ನು ಸಹಿಸಲು ನನ್ನಿಂದ ಆಗಲಿಲ್ಲ. ಎರಡು ಕಡೆಯವರಿಗೂ ಸ್ನೇಹಿತನಾಗಿದ್ದು ಅವರಲ್ಲಿ ಸಮರಸವನ್ನುಂಟುಮಾಡುವುದು ನನ್ನ ಕರ್ತವ್ಯವೆಂದು ನಾನು ಭಾವಿಸಿದೆನು. ಎರಡು ಪಕ್ಷದವರಿಗೂ ರಾಜಿ ಮಾಡಿಸಲು ನನ್ನ ಸರ್ವ ಪ್ರಯತ್ನವನ್ನೂ ಮಾಡಿದೆನು. ಕೊನೆಗೆ ತಯಾಬ್ ಸೇಠರೂ ಒಪ್ಪಿದರು. ಒಬ್ಬ ಪಂಚಾಯಿತಿದಾರನನ್ನು ನಿಯಮಿಸಿದುದಾಯಿತು. ಅವನ ಮುಂದೆ ಮೊಕದ್ದಮೆಯನ್ನು ವಾದಿಸಿದರು. ದಾದಾ ಅಬ್ದುಲ್ಲಾ ಸೇಠರು ಗೆದ್ದರು.

ಆದರೆ ಇಷ್ಟರಿಂದಲೇ ನನಗೆ ಸಮಾಧಾನವಾಗಲಿಲ್ಲ. ನನ್ನ ಕಕ್ಷಿಗಾರರು ತಮಗೆ ಬರಬೇಕಾದ ಹಣವನ್ನೆಲ್ಲ ಒಟ್ಟಾಗಿ ವಸೂಲಿಮಾಡಲು ಪ್ರಯತ್ನಿಸಿ

ದ್ದರೆ ತಯಾಬ್ ಸೇಠ್‌ರಿಗೆ ಆ ಹಣವನ್ನೆಲ್ಲ ಕೊಡಲು ಸಾಧ್ಯವಾಗುತ್ತಿರಲಿಲ್ಲ. ದಕ್ಷಿಣ ಆಫ್ರಿಕಾದ ಮೆಮನ್ ವರ್ತಕರಲ್ಲಿ, ದಿವಾಳಿಯಾಗುವುದಕ್ಕಿಂತ ಸಾಯುವುದೇ ಉತ್ತಮವೆಂಬ ಧರ್ಮನಿಯಮವಿದ್ದಿತು. ತಾವು ಕೊಡಬೇಕಾದ ೩೭,೦೦೦ ಪೌಂಡುಗಳನ್ನೂ, ಕೋರ್ಟ್ ವೆಚ್ಚವನ್ನೂ ಒಂದೇ ಗಂಟಿನಲ್ಲಿ ಕೊಡುವುದು ತಯಾಬ್ ಸೇಠರಿಗೆ ಸಾಧ್ಯವಿರಲಿಲ್ಲ. ಒಂದು ಕಾಸೂ ಕಡಿಮೆಯಿಲ್ಲದಂತೆ ಎಲ್ಲ ಹಣವನ್ನೂ ಕೊಡುವುದು ತಯಾಬ್ ಸೇಠರ ಉದ್ದೇಶವಾಗಿದ್ದಿತು. ದಿವಾಳಿಯಾಗುವುದು ಅವರ ಉದ್ದೇಶವಾಗಿರಲಿಲ್ಲ. ಇದಕ್ಕೆ ಇದ್ದುದು ಒಂದೇ ದಾರಿ. ಅವರು ಮಿತವಾಗಿ, ಕಂತುಗಳಲ್ಲಿ ಕೊಡಲು ದಾದಾ ಅಬ್ದುಲ್ಲಾ ಅವಕಾಶಕೊಡಬೇಕಾಗಿದ್ದಿತು. ದಾದಾ ಅಬ್ದುಲ್ಲಾ ಆ ಬಗೆಯ ಔದಾರ್ಯವನ್ನೇ ತೋರಿಸಿದರು. ದೀರ್ಘಕಾಲದ ಅನೇಕ ಅವಧಿಗಳಲ್ಲಿ ಸಾಲವನ್ನು ಹಿಂದಕ್ಕೆ ಪಡೆಯಲು ಅವರು ಒಪ್ಪಿದರು. ಇಬ್ಬರನ್ನೂ ಪಂಚಾಯಿತಿಯ ತೀರ್ಮಾನಕ್ಕೆ ಒಪ್ಪಿಸುವುದಕ್ಕಿಂತ, ಕಂತುಗಳಲ್ಲಿ ಹಣ ವಸೂಲಿಗೆ ಒಪ್ಪಿಸುವುದು ನನಗೆ ಹೆಚ್ಚು ಕಷ್ಟವಾಯಿತು. ಕೊನೆಯ ಫಲಿತಾಂಶದಿಂದ ಇಬ್ಬರಿಗೂ ಸಂತೋಷವಾಯಿತು ; ಸಾರ್ವಜನಿಕರ ದೃಷ್ಟಿಯಲ್ಲಿ ಇಬ್ಬರ ಗೌರವವೂ ಹೆಚ್ಚಿತು. ನನ್ನ ಆನಂದಕ್ಕೆ ಪಾರವೇ ಇರಲಿಲ್ಲ. ವಕೀಲ ವೃತ್ತಿಯ ನಿಜವಾದ ಹಾದಿಯನ್ನು ನಾನು ಆ ಸಂದರ್ಭದಿಂದ ಕಲಿತೆನು. ಮನುಷ್ಯ ಸ್ವಭಾವದ ಉತ್ತಮ ಅಂಶಗಳನ್ನು ಗ್ರಹಿಸಿ ಅವರ ಹೃದಯವನ್ನು ಸ್ಪರ್ಶಿಸುವುದನ್ನು ನಾನು ಕಲಿತೆನು. ವಿರೋಧದಿಂದ ಬೇರೆ ಬೇರೆಯಾಗಿರುವ ಎರಡು ಪಕ್ಷದವರನ್ನೂ ಒಟ್ಟಿಗೆ ಕೂಡಿಸುವುದೇ ವಕೀಲರ ನಿಜವಾದ ಕಾರ್ಯವೆಂಬುದನ್ನು ನಾನು ಈ ಸಂದರ್ಭದಲ್ಲಿ ಅರಿತೆನು. ಈ ಪಾಠ ನನ್ನ ಮನಸ್ಸಿನಲ್ಲಿ ಎಂದಿಗೂ ಮರೆಯದಂತೆ ಅಚ್ಚು ಒತ್ತಿತು. ನಾನು ಆಫ್ರಿಕಾದಲ್ಲಿ ವಕೀಲನಾಗಿ ಕೆಲಸ ಮಾಡಿದ ಇಪ್ಪತ್ತು ವರುಷಗಳಲ್ಲಿ ಬಹುಭಾಗವನ್ನು, ನ್ಯಾಯಾಲಯದ ಹೊರಗೆ ನೂರಾರು ಮೊಕದ್ದಮೆಗಳನ್ನು ರಾಜಿ ಮಾಡಿಸುವುದರಲ್ಲಿಯೇ ಕಳೆದೆನು. ಅದರಿಂದ ನನಗೇನೂ ನಷ್ಟವಾಗಲಿಲ್ಲ—ಹಣವಂತು ನಷ್ಟವಾಗಲಿಲ್ಲ, ಆತ್ಮಕ್ಕಂತೂ ನಷ್ಟ ಆಗಲೇ ಇಲ್ಲ.

೧೫

ಧಾರ್ಮಿಕ ಮಂಥನ

ಕ್ರೈಸ್ತ ಮಿತ್ರರೊಂದಿಗೆ ನನಗೆ ಉಂಟಾದ ಅನುಭವದತ್ತ ತಿರುಗಲು ಈಗ ಕಾಲ ಒದಗಿದೆ.

ಮಿ. ಬೇಕರ್, ನನ್ನ ಭವಿಷ್ಯವನ್ನು ಕುರಿತು ಹೆಚ್ಚು ಹೆಚ್ಚಾಗಿ ಚಿಂತಿಸತೊಡಗಿದ್ದರು. ನನ್ನನ್ನು ಅವರು ವೆಲ್ಲಿಂಗ್ಟನ್ ಕನ್‌ವೆನ್‌ಷನ್ (ಕ್ರೈಸ್ತರ ಸಭೆ)ಗೆ ಕರೆದುಕೊಂಡು ಹೋದರು. ಪ್ರಾಟೆಸ್ಟೆಂಟ್ ಕ್ರೈಸ್ತರು ತಮ್ಮಲ್ಲಿ ಧರ್ಮ ಜಾಗ್ರತಿ ಅಥವಾ ಆತ್ಮ ಶುದ್ಧಿಗಾಗಿ ಕೆಲವು ವರುಷಗಳಿಗೊಮ್ಮೆ ಇಂತಹ ಮೇಳಗಳನ್ನು ಕೂಡಿಸುತ್ತಾರೆ, ಇದನ್ನು ಧರ್ಮದ ಪುನರ್ ಪ್ರತಿಷ್ಠೆ ಅಥವಾ ಪುನರುದ್ಧಾರ ಎಂದು ಕರೆಯಬಹುದು. ವೆಲ್ಲಿಂಗ್ಟನ್ ಕನ್‌ವೆನ್‌ಷನ್ ಈ ಬಗೆಯದಾಗಿದ್ದಿತು. ಆ ಸ್ಥಳದ ಪ್ರಸಿದ್ಧ ಧರ್ಮನಿಷ್ಠ (ಡಿವೈನ್)ರಾದ ರೆವರೆಂಡ್ ಆಂಡ್ರು ಮರ್ರೆರವರು ಆ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಆ ಸಮ್ಮೇಳನದ ಧಾರ್ಮಿಕ ಔನ್ನತ್ಯದ ವಾತಾವರಣ, ಅದರಲ್ಲಿ ಬಂದು ಭಾಗವಹಿಸುತ್ತಿದ್ದವರ ಉತ್ಸಾಹ, ಶ್ರದ್ಧೆ ಇವೆಲ್ಲ ನನ್ನನ್ನು ಅನಿವಾರ್ಯವಾಗಿ ಕ್ರೈಸ್ತಮತವನ್ನು ಆಲಿಂಗಿಸಿಕೊಳ್ಳುವಂತೆ ಮಾಡುವುದೆಂಬುದು ಮಿ. ಬೇಕರ್ರವರ ನಂಬಿಕೆಯಾಗಿದ್ದಿತು.

ಆದರೆ ಅವರ ಕೊನೆಯ ಭರವಸೆ, ಪ್ರಾರ್ಥನೆಯ ಪರಿಣಾಮಕಾರಿ ಶಕ್ತಿಯಲ್ಲಿದ್ದಿತು. ಪ್ರಾರ್ಥನೆಯಲ್ಲಿ ಅವರಿಗೆ ಅನಂತ ಅಚಲವಾದ ವಿಶ್ವಾಸವಿದ್ದಿತು. ಅಂತಃಕರಣಪೂರ್ವಕವಾಗಿ ಮಾಡಿದ ಪ್ರಾರ್ಥನೆಯನ್ನು ಈಶ್ವರ ಕೇಳಿಯೇ ಕೇಳುತ್ತಾನೆಂಬುದು ಅವರ ವಿಶ್ವಾಸವಾಗಿದ್ದಿತು. ಅವರು ಬ್ರಿಸ್ಟಲ್‌ನ ಜಾರ್ಜ್ ಮುಲ್ಲರ್ (ಒಬ್ಬ ಭಾವುಕ ಈಸಾಯಿ) ಮುಂತಾದವರ ಉದಾಹರಣೆಯನ್ನು ಹೇಳುತ್ತಿದ್ದರು. ಮುಲ್ಲರ್ ಅವರು ನಮ್ಮ ನಿತ್ಯ ವ್ಯವಹಾರಕ್ಕೆ ಸಹ ಪೂರ್ಣವಾಗಿ ಪ್ರಾರ್ಥನೆಯ ಮೇಲೆಯೇ ಅವಲಂಬಿಸುತ್ತಿದ್ದರು. ಪ್ರಾರ್ಥನೆಯ ಮಹಿಮೆಯನ್ನು ಕುರಿತ ಅವರ ಉಪನ್ಯಾಸವನ್ನು ನಾನು ತೆರೆದ ಮನಸ್ಸಿನಿಂದ ಆಲಿಸುತ್ತಿದ್ದೆನು. ನನ್ನ ಅಂತರಾತ್ಮ, ನಾನು ಕ್ರೈಸ್ತಮತವನ್ನು ಅಪ್ಪಿಕೊಳ್ಳಬೇಕೆಂದು ಪ್ರೇರಿಸಿದರೆ, ನಾನು ಕ್ರೈಸ್ತ

ನಾಗಲು ಯಾವ ಅಡ್ಡಿಯೂ ಬರಲಾರದೆಂದು ಅವರಿಗೆ ಆಶ್ವಾಸನವಿತ್ತೆನು. ಅಂತರಾತ್ಮನ ಪ್ರೇರಣೆಯಂತೆ ನಡೆಯಲು ಬಹು ಕಾಲದಿಂದಲೇ ನಾನು ಅಭ್ಯಾಸಮಾಡಿಕೊಂಡಿದ್ದುದರಿಂದ, ಈ ಆಶ್ವಾಸನವನ್ನು ಕೊಡಲು ನಾನು ಹಿಂದೆಗೆಯಲಿಲ್ಲ. ಅಂತರಂಗ ಧ್ವನಿಗೆ ಅಧೀನನಾಗಿ ನಡೆಯುವುದರಲ್ಲಿ ನನಗೆ ಆನಂದವಿದ್ದಿತು. ಅದಕ್ಕೆ ವಿರೋಧವಾಗಿ ನಡೆಯುವುದೆಂದರೆ ನನಗೆ ಕಷ್ಟವೂ ನೋವೂ ಉಂಟಾಗುತ್ತಿದ್ದಿತು.

ಹೀಗೆ ನಾವು ವೆಲ್ಲಿಂಗ್ಟನ್‌ಗೆ ಹೋದೆವು. ನನ್ನಂತಹ ಬಣ್ಣದ ಮನುಷ್ಯನನ್ನು ತನ್ನ ಒಡನಾಡಿಯಾಗಿ ಕರೆದುಕೊಂಡು ಹೋಗುವುದು ಮಿ. ಬೇಕರ್‌ಅವರಿಗೆ ತುಂಬ ಕಷ್ಟವಾಯಿತು. ನನ್ನ ಕಾರಣದಿಂದಲೇ ಅವರು ಅನೇಕ ವೇಳೆ ಅನೇಕ ತೊಂದರೆಗಳನ್ನು ಸಹಿಸಬೇಕಾಯಿತು. ಪ್ರಯಾಣದ ಮಧ್ಯೆ ನಾವು ಒಂದು ದಿನ ಪ್ರಯಾಣವನ್ನು ನಿಲ್ಲಿಸಬೇಕಾಯಿತು. ಏಕೆಂದರೆ ಭಾನುವಾರ (ಸಾಬತ್) ಮಿ. ಬೇಕರ್ ಮತ್ತು ಸಂಗಡಿಗರು ಪ್ರಯಾಣ ಮಾಡುತ್ತಿರಲಿಲ್ಲ. ನಾವು ಉಳಿದುಕೊಂಡ ಊರಿನ ಹೋಟಲ್ ಯಜಮಾನನು, ಬಹಳ ಚರ್ಚೆ ಮಾಡಿದನಂತರ, ನನಗೆ ಇಳಿದುಕೊಳ್ಳುವುದಕ್ಕೆ ಅವಕಾಶ ಕೊಟ್ಟನು. ಆದರೆ ನನ್ನನ್ನು ಭೋಜನ ಶಾಲೆಗೆ ಸೇರಿಸಲು ಖಂಡಿತ ಒಪ್ಪಲಿಲ್ಲ. ಮಿ. ಬೇಕರರು ಅಷ್ಟು ಸುಲಭವಾಗಿ ಬಿಡುವವರಾಗಿರಲಿಲ್ಲ. ಭೋಜನ ಶಾಲೆಗಳಿಗೆ ಬರುವ ಅತಿಥಿಗಳಿಗೆ ಈ ಹಕ್ಕು ಇದ್ದೇ ಇದೆಯೆಂದು ಅವರು ವಾದಿಸಿದರು. ಅವರ ಕಷ್ಟ ನನಗೆ ಅರ್ಥವಾಗುತ್ತಿದ್ದಿತು. ವೆಲ್ಲಿಂಗ್ಟನ್‌ನಲ್ಲಿ ಸಹ ನಾನು ಅವರ ಜತೆಯಲ್ಲಿಯೇ ಉಳಿದೆನು. ಇದರಿಂದ ಅವರಿಗೆ ಉಂಟಾದ ಕಿರುಕುಳಗಳು ನನ್ನ ಕಣ್ಣಿಗೆ ಬೀಳದಂತೆ ಅವರು ಎಷ್ಟೇ ಮರೆಮಾಡಿದರೂ ಅವೆಲ್ಲವೂ ನನ್ನ ಕಣ್ಣಿಗೆ ಬಿದ್ದವು.

ಆ ಸಮ್ಮೇಳನ ಕ್ರೈಸ್ತ ಭಕ್ತರ ಒಂದು ಸಮ್ಮೇಳನವಾಗಿದ್ದಿತು. ಅವರ ಶ್ರದ್ಧೆಯನ್ನು ನೋಡಿ ನನಗೆ ತುಂಬ ಆನಂದವಾಯಿತು. ನಾನು ಅಲ್ಲಿ ರೆವರೆಂಡ್ ಮರ್ರೆಯವರನ್ನು ಸಂಧಿಸಿದೆನು. ನನಗಾಗಿ ಅನೇಕರು ಪ್ರಾರ್ಥಿಸುತ್ತಿದ್ದುದನ್ನು ನಾನು ನೋಡಿದೆನು. ಅವರ ಕೆಲವು ಭಜನೆ ಗೀತೆಗಳು ನನಗೆ ಪ್ರಿಯವಾದುವು. ಅವು ತುಂಬ ಇಂಪಾಗಿದ್ದುವು.

ಸಮ್ಮೇಳನ ಮೂರುದಿನ ನಡೆಯಿತು. ಸಮ್ಮೇಳನಕ್ಕಾಗಿ ನೆರೆದಿದ್ದವರ ಧಾರ್ಮಿಕ ಭಕ್ತಿ ಭಾವ ನನಗೆ ಅರ್ಥವಾಯಿತು. ನಾನು ಅದನ್ನು ಮೆಚ್ಚಿದೆನು. ಆದರೆ ನನ್ನ ನಂಬಿಕೆಯನ್ನೂ ನನ್ನ ಧರ್ಮವನ್ನೂ ಬದಲಾಯಿಸಲು ನನಗೆ ಏನೂ ಕಾರಣ ಕಾಣಲಿಲ್ಲ. ಕ್ರೈಸ್ತನಾಗುವುದರಿಂದ ಮಾತ್ರವೇ ಮನುಷ್ಯ ಸ್ವರ್ಗಕ್ಕೆ ಹೋಗಬಲ್ಲ ಮೋಕ್ಷವನ್ನು ಹೊಂದಬಲ್ಲ, ಎಂಬುದನ್ನು ನಂಬಲು ನನ್ನಿಂದ ಸಾಧ್ಯವಾಗಲಿಲ್ಲ. ನಾನು ಹೀಗೆ ಕೆಲವು ಕ್ರೈಸ್ತ ಮಿತ್ರರೊಂದಿಗೆ ಸ್ಪಷ್ಟವಾಗಿ ಹೇಳಿದಾಗ, ಅವರಿಗೆ ಆಶ್ಚರ್ಯವೂ ಖೇದವೂ ಉಂಟಾಯಿತು. ಆದರೆ ನಾನು ನಿರುಪಾಯನಾಗಿದ್ದೆನು.

ನನ್ನ ಕಷ್ಟಗಳು ಇನ್ನೂ ಆಳವಾಗಿದ್ದವು. "ಏಸು ಒಬ್ಬನೇ ಪರಮಾತ್ಮನ ಅವತಾರ ಪುತ್ರ. ಅವನನ್ನು ನಂಬಿದವರಿಗೆ ಮಾತ್ರವೇ ಅಮೃತತ್ವ ದೊರೆಯುತ್ತದೆ" ಎಂಬುದನ್ನು ನಂಬುವುದು ನನ್ನಿಂದ ಸಾಧ್ಯವಿರಲಿಲ್ಲ. ದೇವರಿಗೆ ಮಕ್ಕಳು ಇರುವುದಾದರೆ ನಾವೆಲ್ಲ ಅವನ ಮಕ್ಕಳೇ. ಏಸುವು ದೇವರ ಹಾಗೆ ಇದ್ದಾನೆ ಅಥವಾ ಅವನೇ ದೇವರು ಎಂದು ಹೇಳುವುದಾದರೆ, ಮನುಷ್ಯರೆಲ್ಲ ದೇವರಂತೆ ಇದ್ದಾರೆ, ಅಥವಾ ಅವರೆಲ್ಲ ದೇವರು ಎನ್ನಬಹುದು. ಏಸುವು ತನ್ನ ಮರಣದಿಂದಲೂ ರಕ್ತವನ್ನು ಚೆಲ್ಲಿಯೂ ಪ್ರಪಂಚದ ಪಾಪವನ್ನೆಲ್ಲ ಪರಿಹಾರ ಮಾಡಿದನೆಂಬ ಮಾತನ್ನು ಅಕ್ಷರಶಃ ನಂಬಲು ನನ್ನ ವಿವೇಕ ಬುದ್ಧಿ ಒಪ್ಪಲಿಲ್ಲ. ಇದನ್ನು ರೂಪಕಾಲಂಕಾರವಾಗಿ ಪರಿಗಣಿಸಿದರೆ. ಸ್ವಲ್ಪ ಸತ್ಯ ಇರಬಹುದು. ಎರಡನೆಯದಾಗಿ, ಕ್ರೈಸ್ತ ಮತಕ್ಕನುಸಾರವಾಗಿ, ಮನುಷ್ಯರಿಗೆ ಮಾತ್ರ ಆತ್ಮವುಂಟು; ಉಳಿದ ಪ್ರಾಣಿಗಳಿಗೆ ಇಲ್ಲ, ಅವುಗಳ ಮರಣದೊಂದಿಗೆ ಅವುಗಳ ಸರ್ವಥಾ ನಾಶವಾಗುತ್ತದೆ. ನನ್ನ ನಂಬಿಕೆ ಇದಕ್ಕೆ ವಿರುದ್ಧವಾಗಿದ್ದಿತು. ಏಸುವು ತ್ಯಾಗಿ, ಮಹಾತ್ಮ ದೈವಾಂಶಪುರುಷ, ಧರ್ಮೋಪದೇಶಕ, ಹುತಾತ್ಮನೆಂದು ನಾನು ನಂಬಲು ಸಿದ್ಧನಾಗಿದ್ದೆನು. ಆದರೆ ಆತನು ಸೃಷ್ಟಿಯಲ್ಲಿ ಪುರುಷೋತ್ತಮನೆಂದು ಒಪ್ಪಲು ನಾನು ಸಿದ್ಧವಿರಲಿಲ್ಲ. ಆತನು ಶಿಲುಬೆಯ ಮೇಲೆ ಮೃತ್ಯುವನ್ನು ಕಂಡಿದ್ದು ಪ್ರಪಂಚಕ್ಕೆ ಒಂದು ದೊಡ್ಡ ಆದರ್ಶ. ಅದರಲ್ಲಿ ಗುಪ್ತವಾದ ರಹಸ್ಯ ಚಮತ್ಕಾರವಾಗಲೀ ಸಮಾದವಾಗಲೀ ಇದ್ದಿತೆಂಬುದನ್ನು ನನ್ನ ಹೃದಯ ಒಪ್ಪಲಿಲ್ಲ. ಇತರ ಧರ್ಮಾವಲಂಬಿ ಸಾಧು ಸಂತರ ಪವಿತ್ರ

ಜೀವನದಲ್ಲಿ ದೊರಕದಿದ್ದ ಯಾವ ಮಹತ್ವವೂ, ಕ್ರೈಸ್ತಧರ್ಮದ ಪವಿತ್ರ ಜೀವಿಗಳಿಂದ ನನಗೆ ದೊರಕಲಿಲ್ಲ. ಕ್ರೈಸ್ತರಲ್ಲಿ, ಭಗವಂತನ ಕೃಪೆಯಿಂದ ಉಂಟಾಗುತ್ತಿದ್ದ ಪರಿವರ್ತನೆ, ಇತರ ಧರ್ಮಾನುಯಾಯಿಗಳಲ್ಲಿಯೂ ಭಗವಂತನ ಕೃಪೆಯಿಂದ ಉಂಟಾಗುತ್ತಿದ್ದುದು ನನಗೆ ಗೊತ್ತಿದ್ದಿತು. ಸಿದ್ಧಾಂತದ ದೃಷ್ಟಿಯಿಂದ ನೋಡಿದರೂ, ನನಗೆ ಕ್ರೈಸ್ತ ಸಿದ್ಧಾಂತದಲ್ಲಿ ಯಾವ ಅಲೌಕಿಕತೆಯೂ ಕಾಣಬರಲಿಲ್ಲ. ತ್ಯಾಗದೃಷ್ಟಿಯಿಂದ ನೋಡಿದರೆ ಹಿಂದೂ ಧರ್ಮಾನುಯಾಯಿಯ ತ್ಯಾಗ, ಕ್ರೈಸ್ತರನ್ನು ಮೀರಿಸಿದುದಾಗಿ ನನಗೆ ತೋರಿತು. ಕ್ರೈಸ್ತಧರ್ಮ ಸಂಪೂರ್ಣ ಧರ್ಮವೆಂದಾಗಲೀ ಸರ್ವೋತ್ಕೃಷ್ಟ ಧರ್ಮವೆಂದಾಗಲಿ ಪರಿಗಣಿಸುವುದು ನನ್ನಿಂದ ಸಾಧ್ಯವಾಗಲಿಲ್ಲ.

ನಾನು ಸಮಯ ದೊರಕಿದಾಗಲೆಲ್ಲ ನನ್ನ ಕ್ರೈಸ್ತ ಮಿತ್ರರನ್ನು ನನ್ನ ಈ ಹೃದಯ ಮಂಥನದಲ್ಲೊಂದು ಭಾಗಿಯಾಗಿ ಮಾಡಿಕೊಂಡೆನು. ಆದರ ಅವರು ಕೊಟ್ಟ ಪ್ರತ್ಯುತ್ತರದಿಂದ ನನಗೆ ಸಮಾಧಾನವಾಗಲಿಲ್ಲ.

ನಾನು ಕ್ರೈಸ್ತ ಮತವನ್ನು, ಅದು ಸಂಪೂರ್ಣ ಮತ, ಅತ್ಯುತ್ತಮ ಮತ ಎಂದು ನಂಬಲು ಹೇಗೆ ಸಾಧ್ಯವಾಗಲಿಲ್ಲವೋ, ಹಾಗೆಯೇ ಹಿಂದೂ ಧರ್ಮವೂ ಅಂತಹ ಧರ್ಮವೆಂದು ನಂಬಲಾಗಲಿಲ್ಲ. ಹಿಂದೂ ಧರ್ಮದ ದೋಷಗಳು ನನಗೆ ಎದ್ದು ಕಾಣುತ್ತಿದ್ದವು. ಒಂದು ವೇಳೆ ಅಸ್ಪೃಶ್ಯತೆ ಹಿಂದೂ ಧರ್ಮದ ಭಾಗವಾಗಿದ್ದರೆ, ಅದೊಂದು ಕೊಳೆತ ಅಥವಾ ಅನಾವಶ್ಯಕವಾದ ಭಾಗ. ಹಿಂದೂಗಳಲ್ಲಿ ಅಸಂಖ್ಯಾತ ಸಂಪ್ರದಾಯಗಳು ಜಾತಿಗಳು ಏಕೆ ಇವೆ ಎಂಬುದು ನನಗೆ ಅರ್ಥವಾಗಲಿಲ್ಲ. ವೇದಗಳು ಈಶ್ವರನ ವಾಕ್ಯ, ಅವನಿಂದಲೇ ಪ್ರಣೀತ, ಎಂದು ಹೇಳುವುದರ ಅರ್ಥವೇನು? ವೇದವು ಈಶ್ವರ ಪ್ರಣೀತವಾದರೆ ಕೊರಾನ್ ಏಕೆ ಅಲ್ಲ? ಬೈಬಲ್ ಏಕೆ ಅಲ್ಲ?

ಕ್ರೈಸ್ತ ಮಿತ್ರರು ನನ್ನನ್ನು ತಮ್ಮ ಮತಕ್ಕೆ ಸೇರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಂತೆ, ಮುಸಲ್ಮಾನ ಮಿತ್ರರೂ ತಮ್ಮ ಮತಕ್ಕೆ ಸೇರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಅಬ್ದುಲ್ಲಾ ಸೇಠರು ನನಗೆ ಯಾವಾಗಲೂ ಕೊರಾನನ್ನು ಓದಿ, ಅಧ್ಯಯನಮಾಡು ಎಂದು ಹೇಳುತ್ತಲೇ ಇದ್ದರು.

ಅವರು ಕೊರಾನಿನ ಸೊಗಸು, ಮಹಿಮೆಗಳನ್ನು ಕುರಿತೂ ಆಗಾಗ ಹೇಳುತ್ತಲೇ ಇದ್ದರು.

ನಾನು ರಾಯಚಂದಭಾಯಿಯವರಿಗೆ ನನ್ನ ಕಷ್ಟಗಳನ್ನೆಲ್ಲ ಕುರಿತು ಕಾಗದ ಬರೆದೆನು. ಭಾರತದಲ್ಲಿದ್ದ ಇತರ ಧರ್ಮಶಾಸ್ತ್ರಜ್ಞರೊಂದಿಗೂ ಪತ್ರವ್ಯವಹಾರ ನಡೆಸಿದೆನು. ನನಗೆ ಪ್ರತ್ಯುತ್ತರವೂ ದೊರೆಯಿತು. ರಾಯಚಂದಭಾಯಿಯವರ ಕಾಗದದಿಂದ ನನ್ನ ಮನಸ್ಸಿಗೆ ಕೊಂಚ ಶಾಂತಿಯುಂಟಾಯಿತು. ಅವರು "ಸ್ವಲ್ಪ ತಾಳ್ಮೆಯಿಂದ ವರ್ತಿಸಿ ; ಹಿಂದೂ ಧರ್ಮವನ್ನು ಇನ್ನೂ ಚೆನ್ನಾಗಿ ಆಳವಾಗಿ ಅಧ್ಯಯನಮಾಡಿ" ಎಂದು ಬರೆದಿದ್ದರು. ಅವರ ಕಾಗದದಲ್ಲಿ ಒಂದು ವಾಕ್ಯ ಹೀಗೆ ಇದ್ದಿತು : "ನಿಷ್ಪಕ್ಷಪಾತ ದೃಷ್ಟಿಯಿಂದ ವಿಚಾರ ಮಾಡಿದ ಮೇಲೆ ಹಿಂದೂ ಧರ್ಮದಲ್ಲಿರುವ ಸೂಕ್ಷ್ಮವಾದ ಮತ್ತು ಮಹತ್ವದ ವಿಚಾರ, ಆತ್ಮನಿರೀಕ್ಷಣ ಮತ್ತು ದಯೆ ಇವು ಮತ್ತಾವ ಧರ್ಮದಲ್ಲಿಯೂ ಇಲ್ಲವೆಂಬುದು ನನಗೆ ದೃಢವಾಗಿ ಮನದಟ್ಟಾಗಿದೆ"

ಕೊರಾನಿಗೆ, ಸೇಲ್ ಎಂಬುವರು ಬರೆದಿರುವ ಭಾಷಾಂತರವನ್ನು ಕೊಂಡುಕೊಂಡು ನಾನು ಓದತೊಡಗಿದೆನು. ಇಸ್ಲಾಂ ಧರ್ಮದ ಮೇಲಿನ ಇತರ ಗ್ರಂಥಗಳನ್ನು ತರಿಸಿಕೊಂಡೆನು. ಇಂಗ್ಲೆಂಡಿನಲ್ಲಿದ್ದ ಕ್ರೈಸ್ತ ಮಿತ್ರರೊಂದಿಗೆ ಪತ್ರವ್ಯವಹಾರ ನಡೆಸಿದೆನು. ಅವರ ಪೈಕಿ ಒಬ್ಬರು ನನ್ನನ್ನು ಎಡ್ವರ್ಡ್ ಮೇಟ್‌ಲ್ಯಾಂಡರಿಗೆ ಪರಿಚಯ ಮಾಡಿಸಿದರು. ಮೇಟ್ಲಾಂಡರೊಂದಿಗೆ ನಾನು ಪತ್ರವ್ಯವಹಾರವನ್ನು ಪ್ರಾರಂಭಿಸಿದೆನು. ಅವರು, ತಾವೂ ಅನ್ನಾ ಕಿಂಗ್ಸ್‌ಫರ್ಡ್‌ರೂ ಸೇರಿ ಬರೆದಿದ್ದ ದಿ ಪರ್‌ಫೆಕ್ಟ್ ವೆ (ಉತ್ತಮೋತ್ತಮ ಮಾರ್ಗ) ಎಂಬ ಪುಸ್ತಕವನ್ನು ನನಗೆ ಕಳುಹಿಸಿದರು. ಆ ಪುಸ್ತಕ ಪ್ರಚಲಿತ ಈಸಾಯಿ ಧರ್ಮ ನಂಬಿಕೆಗಳ ಖಂಡನೆಯಾಗಿದ್ದಿತು. ಅವರು ನನಗೆ ಮತ್ತೊಂದು ಪುಸ್ತಕವನ್ನೂ ಕಳುಹಿಸಿದರು. ಅದರ ಹೆಸರು ಬೈಬಲ್ಲಿನ ಹೊಸ ಅರ್ಥ ಎಂದು. ನಾನು ಈ ಎರಡು ಪುಸ್ತಕಗಳನ್ನೂ ಮೆಚ್ಚಿದೆನು. ಅವು ಹಿಂದೂ ಧರ್ಮವನ್ನು ಸಮರ್ಥಿಸುವಂತೆ ತೋರಿದವು. ಟಾಲಸ್ಟಾಯ್‌ರವರು ಬರೆದ "ದಿ ಕಿಂಗ್‌ಡಂ ಆಫ್ ಗಾಡ್ ಈಸ ವಿತಿನ್ ಯೂ" (ಪರಮಾತ್ಮ ಸಾಮ್ರಾಜ್ಯ ನಿನ್ನಲ್ಲಿಯೇ ಇದೆ) ಎಂಬ

ಪುಸ್ತಕ ನನ್ನನ್ನು ಮುಗ್ಧನನ್ನಾಗಿ ಮಾಡಿತು. ಅದು ನನ್ನ ಮನಸ್ಸಿನಲ್ಲಿ ಶಾಶ್ವತವಾದ ಪರಿಣಾಮವನ್ನು ಬಿಟ್ಟಿತು. ಈ ಪುಸ್ತಕದ ಸ್ವತಂತ್ರ ವಿಚಾರ ಶೈಲಿ, ಪ್ರೌಢನೀತಿ, ಸತ್ಯ ಪ್ರತಿಪಾದನೆ ಇವುಗಳ ಎದುರಿನಲ್ಲಿ ಕೋಟ್ಸರು ನನಗೆ ಕೊಟ್ಟಿದ್ದ ಪುಸ್ತಕಗಳೆಲ್ಲ ಶುಷ್ಕವಾಗಿ ತೋರಿದುವು.

ಹೀಗೆ ನನ್ನ ಅಧ್ಯಯನ ಕ್ರೈಸ್ತರು ಯೋಚಿಸದಿದ್ದ ದಾರಿಯಲ್ಲಿ ನನ್ನನ್ನು ಕೊಂಡೊಯ್ದಿತು. ಎಡ್ವರ್ಡ್ ಮೇಟ್‌ಲ್ಯಾಂಡ್‌ರೊಂದಿಗೆ ನನ್ನ ಪತ್ರವ್ಯವಹಾರ ಅನೇಕ ವರುಷಗಳ ವರೆಗೆ ನಡೆಯಿತು. ರಾಯಚಂದ ಭಾಯಿಯವರೊಂದಿಗೆ ಅವರು ಸ್ವರ್ಗಸ್ಥರಾಗುವವರೆಗೆ ನನ್ನ ಪತ್ರವ್ಯವಹಾರ ನಡೆಯೇ ಇದ್ದಿತು. ಅವರು ಕಳುಹಿಸಿದ ಕೆಲವು ಪುಸ್ತಕಗಳನ್ನು ನಾನು ಓದಿದೆನು. ಅವುಗಳ ಪೈಕಿ ಪಂಚೀಕರಣ, ಮಣಿರತ್ನಮಾಲಾ ಯೋಗ ವಾಸಿಷ್ಠದ ಮುಮುಕ್ಷು ಪ್ರಕರಣ, ಹರಿಭದ್ರಸೂರಿಯ ಷಡ್ದರ್ಶನ ಸಮುಚ್ಚಯ ಇವು ಇದ್ದವು.

ನಾನು ಯಾವ ಹಾದಿಯನ್ನು ಹಿಡಿಯಬೇಕೆಂದು ನನ್ನ ಕ್ರೈಸ್ತ ಮಿತ್ರರು ಬಯಸಿದ್ದರೋ, ಆ ಹಾದಿಯನ್ನು ನಾನು ಹಿಡಿಯಲಿಲ್ಲವಾದರೂ, ನನ್ನಲ್ಲಿ ಧರ್ಮ ಜಿಜ್ಞಾಸೆಯ ಬುದ್ಧಿಯನ್ನು ಜಾಗ್ರತಗೊಳಿಸಿದುದಕ್ಕಾಗಿ, ನಾನು ಅವರಿಗೆ ಎಂದೆಂದಿಗೂ ಕೃತಜ್ಞನಾಗಿದ್ದೇನೆ. ನನಗೂ ಅವರಿಗೂ ಉಂಟಾದ ಈ ಬಾಂಧವ್ಯದ ನೆನಪನ್ನು ನಾನು ಯಾವಾಗಲೂ ಪೋಷಿಸುವೆನು. ಮುಂದಿನ ವರುಷಗಳಲ್ಲಿ ಈ ಬಗೆಯ ಹಿತವಾದ ಮತ್ತು ಪವಿತ್ರವಾದ ಸಂಬಂಧಗಳು ಕಡಿಮೆಯಾಗಲಿಲ್ಲ ; ಹೆಚ್ಚುತ್ತಲೇ ಹೋದವು.

೧೬

ನಾವೊಂದು ನೆನೆದರೆ ದೇವರು ಮತ್ತೊಂದನ್ನು ನೆನೆಯುತ್ತಾನೆ

ಮೊಕದ್ದಮೆ ಮುಗಿದುಹೋಯಿತು. ಪ್ರಿಟೋರಿಯಾದಲ್ಲಿರಲು ನನಗೆ ಇನ್ನು ಕಾರಣವಿರಲಿಲ್ಲ. ಆದುದರಿಂದ ನಾನು ಡರ್ಬಾನಿಗೆ ಹಿಂದಿರುಗಿ ಭಾರತಕ್ಕೆ ಹೊರಡುವ ಸಿದ್ಧತೆಗಳನ್ನು ಮಾಡತೊಡಗಿದೆನು. ಆದರೆ ಸೇಠ್ ಅಬ್ದುಲ್ಲಾ ನನಗೆ ಸರಿಯಾದ ಮರ್ಯಾದೆಯನ್ನು ಮಾಡದೆ ಬೀಳ್ಕೊಡುವ

ಮನುಷ್ಯರಾಗಿರಲಿಲ್ಲ. ಅವರು ಸಿಡನ್‌ಹ್ಯಾಂನಲ್ಲಿ ನನಗೆ ಒಂದು ಆದರದ ಔತಣ ಕೂಟವನ್ನು ಏರ್ಪಡಿಸಿದರು.

ಆ ದಿನವನ್ನೆಲ್ಲ ನಾನು ಅಲ್ಲಿಯೇ ಕಳೆಯಬೇಕೆಂದು ಗೊತ್ತಾಗಿದ್ದಿತು. ಅಲ್ಲಿದ್ದ ವೃತ್ತಪತ್ರಿಕೆಗಳ ಪುಟಗಳನ್ನು ತಿರುವಿಹಾಕುತ್ತಿರುವಾಗ, ಒಂದು ಪುಟದ ಕೊನೆಯಲ್ಲಿ "ಭಾರತೀಯರಿಗೆ ಮತಾಧಿಕಾರ" ಎಂಬ ತಲೆಬರಹದ ವಾಕ್ಯವೃಂದ ನನ್ನ ಕಣ್ಣಿಗೆ ಬಿದ್ದಿತು. ಅದು ಆಗ ನೆಟಾಲ್ ಶಾಸನ ಸಭೆಯ ಮುಂದೆ ಇದ್ದ ಒಂದು ಮಸೂದೆಗೆ ಸಂಬಂಧಪಟ್ಟುದಾಗಿದ್ದಿತು. ನೆಟಾಲ್ ಶಾಸನ ಸಭೆಗೆ ಸದಸ್ಯರನ್ನು ಚುನಾಯಿಸಿಲು ಭಾರತೀಯರಿಗೆ ಇದ್ದ ಹಕ್ಕನ್ನು ಕಸಿದುಕೊಳ್ಳುವುದೇ ಆ ಮಸೂದೆಯ ಉದ್ದೇಶವಾಗಿದ್ದಿತು. ಆ ಮಸೂದೆಯ ವಿಷಯ ನನಗೆ ಗೊತ್ತಿರಲಿಲ್ಲ! ಹಾಗೆಯೇ ಅಲ್ಲಿ ನೆರೆದಿದ್ದ ಇತರ ಯಾರಿಗೂ ತಿಳಿದಿರಲಿಲ್ಲ.

ನಾನು ಅಬ್ದುಲ್ಲಾ ಸೇಠರನ್ನು, "ಏನು ಈ ವಿಷಯ?" ಎಂದು ಪ್ರಶ್ನಿಸಿದೆನು. "ಈ ಸಂಗತಿಗಳೆಲ್ಲ ನಮಗೇನು ಗೊತ್ತಾಗುತ್ತವೆ? ನಮ್ಮ ವ್ಯಾಪಾರಕ್ಕೆ ಸಂಬಂಧಪಟ್ಟ ಸಮಾಚಾರಗಳು ಮಾತ್ರ ನಮಗೆ ಗೊತ್ತಾಗುತ್ತವೆ. ನಿಮಗೆ ತಿಳಿದಿರುವಂತೆ, ಆರೆಂಜ್ ಫ್ರೀಸ್ಟೇಟ್‌ನಲ್ಲಿ ನಮ್ಮ ವ್ಯಾಪಾರ, ಪೂರ್ಣವಾಗಿ ನಾಶವಾಗಿದೆ. ಅದಕ್ಕಾಗಿ ನಾವು ಚಳುವಳಿ ನಡೆಸಿದೆವು. ಏನೂ ಪ್ರಯೋಜನವಾಗಲಿಲ್ಲ. ನಮಗೆ ಓದುಬರಹ ಬಾರದುದರಿಂದ ನಾವು ಎಷ್ಟೇ ಆಗಲಿ ಕುಂಟರು. ನಾವು ವರ್ತಮಾನ ಪತ್ರಿಕೆಗಳನ್ನು ಕೊಂಡುಕೊಳ್ಳುವುದು, ವ್ಯಾಪಾರದ ಏರಿಳಿತ ಧಾರಣೆ ವಾಸಿಗಳನ್ನು ತಿಳಿದುಕೊಳ್ಳುವುದಕ್ಕೆ ಮಾತ್ರ. ಶಾಸನಗಳ ವಿಚಾರ ನಮಗೇನು ಗೊತ್ತು? ಇಲ್ಲಿರುವ ಐರೋಪ್ಯ ವಕೀಲರೇ ನಮ್ಮ ಕಣ್ಣು ಕಿವಿಗಳು." ಎಂದರು.

ನಾನು ಹೇಳಿದೆ: "ಆದರೆ ಇಲ್ಲಿಯೇ ಹುಟ್ಟ ವಿದ್ಯಾವಂತರಾಗಿರುವ ಅನೇಕ ಭಾರತೀಯ ಯುವಕರು ಇರುವರಲ್ಲ, ಅವರು ನಿಮಗೆ ಸಹಾಯ ಮಾಡುವುದಿಲ್ಲವೆ?

ಅಬ್ದುಲ್ಲಾ ನಿರಾಸೆಯಿಂದ ಹೇಳಿದರು: "ಅವರೇ! ಅವರು ನಮ್ಮ ಹತ್ತಿರಕ್ಕೇ ಸುಳಿಯುವುದಿಲ್ಲ. ನಿಜ ಹೇಳಬೇಕಾದರೆ ಅವರು ನಮ್ಮವರೆಂದು

ಹೇಳಿಕೊಳ್ಳಲು ನನಗೂ ಬೇಕಿಲ್ಲ. ಅವರೆಲ್ಲ ಕ್ರೈಸ್ತ ಮತಾನುಯಾಯಿಗಳು. ಆದುದರಿಂದ ಅವರು ಬಿಳಿಯ ಪಾದರಿಗಳ ಹಿಡಿತದಲ್ಲಿದ್ದಾರೆ. ಆ ಪಾದರಿಗಳು ಸರಕಾರದ ಅಧೀನದಲ್ಲಿದ್ದಾರೆ."

ಇದನ್ನು ಕೇಳಿ ನನ್ನ ಕಣ್ಣು ತೆರೆಯಿತು. ಆ ಜನರನ್ನು ನಾವು ನಮ್ಮವರನ್ನಾಗಿ ಮಾಡಿಕೊಳ್ಳಬೇಕೆಂದು ನನಗೆ ತೋರಿತು. ಕ್ರೈಸ್ತ ಧರ್ಮದ ಅರ್ಥ ಇದೇ ಏನು? ಕ್ರೈಸ್ತರಾದ ಮಾತ್ರಕ್ಕೆ ಅವರು ಭಾರತೀಯರಲ್ಲವೆ?

ಆದರೆ ನಾನು ಭಾರತಕ್ಕೆ ಹಿಂದಿರುಗುವ ಸಿದ್ಧತೆಯಲ್ಲಿದ್ದುದರಿಂದ ಈ ವಿಷಯದಲ್ಲಿ ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಹಿಂದೆಗೆದೆನು. ನಾನು ಸೇಠ್ ಅಬ್ದುಲ್ಲಾರವರಿಗೆ ಇಷ್ಟನ್ನು ಮಾತ್ರ ಹೇಳಿದೆನು: "ಈ ಮಸೂದೆ ಏನಾದರೂ ಕಾನೂನು ಆದರೆ ನಮ್ಮ ಸ್ಥಿತಿ ಇನ್ನೂ ಕೆಡುವುದು. ಭಾರತೀಯರ ನಾಶಕ್ಕೆ ಇದು ಮೊದಲನೆಯ ಹೆಜ್ಜೆ. ಇದು ನಮ್ಮ ಆತ್ಮಗೌರವದ ಮೂಲಕ್ಕೆ ಕೊಡಲಿ ಪೆಟ್ಟು."

"ಇರಬಹುದು. ನಾನು ನಿಮಗೆ ಈ ಫ್ರಾಂಚೈಸ್‌ನ ಮೂಲವನ್ನು ಹೇಳುತ್ತೇನೆ. (ಅಲ್ಲಿ ಫ್ರಾಂಚೈಸ್ ಎಂಬ ಇಂಗ್ಲಿಷ್ ಪದವನ್ನೇ ಹೇಳುತ್ತಿದ್ದರು. ಮತಾಧಿಕಾರವೆಂದರೆ ಯಾರಿಗೂ ಅರ್ಥವಾಗುತ್ತಿರಲಿಲ್ಲ. ಇಂತಹ ಅನೇಕ ಇಂಗ್ಲಿಷ್ ಪದಗಳು ದೇಶಭಾಷೆಯಲ್ಲಿ ಸೇರಿಹೋಗಿದ್ದವು.) ನಮಗೆ ಇದರ ವಿಷಯ ಏನೂ ತಿಳಿಯದು. ಆದರೆ ನಮ್ಮ ಅತ್ಯುತ್ತಮ ವಕೀಲರ ಪೈಕಿ ಒಬ್ಬರಾದ ಮಿ. ಎಸ್ಕೋಂಬ್‌ರವರು, ಈ ವಿಷಯವನ್ನು ನಮಗೆ ತಿಳಿಯ ಹೇಳಿದರು. ಅವರು ನಿಮಗೂ ಗೊತ್ತು. ಅದು ನಡೆದುದು ಹೀಗೆ. ಅವರು ಒಳ್ಳೆಯ ಹೋರಾಟಗಾರರು. ಇಲ್ಲಿಯ ಬಂದರಿನ ಎಂಜಿನೀಯರಿಗೂ ಅವರಿಗೂ ಅಂತಹ ಮಿತ್ರತ್ವವೇನೂ ಇಲ್ಲ. ಎಂಜಿನೀಯರು ಚುನಾವಣೆಯಲ್ಲಿ ತಮಗೆ ಬರಬಹುದಾದ ಮತಗಳನ್ನು ಕಡಿಮೆಮಾಡಿ ತಮ್ಮನ್ನು ಸೋಲಿಸಬಹುದೆಂಬ ಭಯ ಎಸ್ಕೋಂಬ್ ಅವರಿಗೆ ಉಂಟಾಯಿತು. ಆದುದರಿಂದ ಅವರು ವಿಷಯಗಳನ್ನೆಲ್ಲ ನಮಗೆ ತಿಳಿಸಿದರು. ಅವರ ಸಲಹೆಯಂತೆ ನಾವೆಲ್ಲರೂ ನಮ್ಮ ಹೆಸರುಗಳನ್ನು ಮತದಾರರ ಪಟ್ಟಿಯಲ್ಲಿ ಬರೆಸಿದೆವು. ನಮ್ಮ ಮತಗಳನ್ನೂ ಅವರಿಗೇ ಕೊಟ್ಟೆವು.

ಈಗ ನಿಮಗೆ ಗೊತ್ತಾಗುತ್ತದೆ. ಈ ಮತಾಧಿಕಾರಕ್ಕೆ ನೀವು ಕೊಡುವ ಬೆಲೆಯನ್ನು ನಾವು ಏಕೆ ಕೊಡುವುದಿಲ್ಲವೆಂಬುದು. ಆದರೆ ನೀವು ಹೇಳುವುದು ನಮಗೆ ಗೊತ್ತಾಗುತ್ತದೆ. ಈಗ ನಿಮ್ಮ ಸಲಹೆಯೇನು ?"

ನೆರೆದಿದ್ದ ಇತರ ಅತಿಥಿಗಳು ಈ ಸಂಭಾಷಣೆಯನ್ನು ಗಮನವಿಟ್ಟು ಕೇಳುತ್ತಿದ್ದರು. ಒಬ್ಬರು ಹೀಗೆ ಹೇಳಿದರು : "ನಾನು ಹೇಳುತ್ತೇನೆ, ಕೇಳಿ, ಈ ಹಡಗಿನಲ್ಲಿ ನೀವು ಪ್ರಯಾಣ ಮಾಡುವುದನ್ನು ನಿಲ್ಲಿಸಿ ಒಂದು ತಿಂಗಳು ಇಲ್ಲಿಯೇ ಇರಿ. ನೀವು ಹೇಳಿದಂತೆ ನಾವು ಹೋರಾಟ ಮಾಡುತ್ತೇವೆ."

ಎಲ್ಲರೂ ಒಟ್ಟಾಗಿ, "ಸರಿ, ಅದೇ ಸರಿ. ಅಬ್ದುಲ್ಲಾ ಸೇಠರೇ ನೀವು ಗಾಂಧೀ ಭಾಯಿಯನ್ನು ನಿಲ್ಲಿಸಬೇಕು."

ಸೇಠರು ಚುರುಕು ಬುದ್ಧಿಯುಳ್ಳವರು. ಅವರು "ಇನ್ನು ಇವರನ್ನು ನಿಲ್ಲಿಸಲು ನನಗೆ ಅಧಿಕಾರವಿಲ್ಲ. ಅಥವಾ ನನಗೆಷ್ಟು ಅಧಿಕಾರವಿದೆಯೋ ಅಷ್ಟೇ ನಿಮಗೂ ಇದೆ. ಆದರೆ ನೀವು ಹೇಳುವುದು ಸರಿ. ನಾವೆಲ್ಲ ಸೇರಿ ಇವರನ್ನು ಇಲ್ಲಿ ನಿಲ್ಲುವುದಕ್ಕೆ ಒಪ್ಪಿಸೋಣ. ಆದರೆ ಅವರು ವಕೀಲರೆಂಬುದನ್ನು ಮರೆಯಬೇಡಿ. ಅವರ ರುಸುಮು ?"

ರುಸುಮಿನ ವಿಷಯ ಕೇಳಿ ನನಗೆ ದುಃಖವಾಯಿತು ನಾನು "ಅಬ್ದುಲ್ಲಾ ಸೇಠರೇ ರುಸುಮಿನ ಪ್ರಶ್ನೆಯೇ ಇಲ್ಲ. ಸಾರ್ವಜನಿಕ ಕಾರ್ಯಕ್ಕೆ ರುಸುಮು ಕೊಡಬೇಕಾದುದಿಲ್ಲ. ನಾನು ನಿಲ್ಲುವುದಾದರೆ ನಿಮ್ಮ ಸೇವಕನಾಗಿ ಮಾತ್ರ. ನಿಮಗೆ ತಿಳಿದಿರುವಂತೆ ನನಗೆ ಈ ಮಿತ್ರರ ಪರಿಚಯವೂ ಇಲ್ಲ ಆದರೆ ಅವರೆಲ್ಲ ಈ ಕಾರ್ಯದಲ್ಲಿ ಸಹಕರಿಸುವರೆಂಬುದು ನಿಮ್ಮ ನಂಬಿಕೆಯಾದರೆ ಇನ್ನೂ ಒಂದು ತಿಂಗಳು ಇಲ್ಲಿ ಇರಲು ನಾನು ಸಿದ್ಧನಾಗಿದ್ದೇನೆ. ಆದರೆ ಒಂದು ವಿಷಯ ಜ್ಞಾಪಕವಿರಲಿ. ನೀವು ನನಗೆ ರುಸುಮು ಏನನ್ನೂ ಕೊಡದಿದ್ದರೂ, ನಾವು ಯೋಚಿಸಿರುವ ಸಾರ್ವಜನಿಕ ಕಾರ್ಯವನ್ನು ನಾವು ಸ್ವಲ್ಪ ಹಣವನ್ನಿಟ್ಟುಕೊಳ್ಳದೆ ಪ್ರಾರಂಭಿಸಲು ಸಾಧ್ಯವಿಲ್ಲ. ನಾವು ಯಾರಿಗಾದರೂ ತಾರನ್ನು ಕಳುಹಿಸಬೇಕಾಗಬಹುದು. ಕೆಲವು ಸಾಹಿತ್ಯವನ್ನು ಮುದ್ರಣ ಮಾಡಿಸಬೇಕಾಗಬಹುದು; ಎಲ್ಲಿಗಾದರೂ ಹೋಗಿ ಬರಬೇಕಾಗಬಹುದು. ಸ್ಥಳದ ವಕೀಲರ ಸಲಹೆಯನ್ನು ಪಡೆಯಬೇಕಾಗ

ಬಹುದು; ನನಗೆ ನಿಮ್ಮ ಕಾನೂನುಗಳು ಗೊತ್ತಿಲ್ಲದುದರಿಂದ, ಕೆಲವು ಕಾನೂನು ಪುಸ್ತಕಗಳನ್ನು ಕೊಳ್ಳಬೇಕಾಗಬಹುದು. ಇವೆಲ್ಲವೂ ಹಣವಿಲ್ಲದೆ ಸಾಧ್ಯವಿಲ್ಲ. ಈ ಕಾರ್ಯ ಒಬ್ಬನಿಂದ ಸಾಧ್ಯವಿಲ್ಲವೆಂಬುದೂ ಸ್ಪಷ್ಟ. ಅವನಿಗೆ ಅನೇಕರು ಮುಂದೆ ಬಂದು ಸಹಾಯ ನೀಡಬೇಕು."

ಎಲ್ಲರೂ ಒಟ್ಟಾಗಿಯೇ, "ಅಲ್ಲಾ, ದೊಡ್ಡವನು, ದಯಾಶಾಲಿ, ಹಣ ಬಂದೇ ಬರುತ್ತದೆ; ನಿಮಗೆ ಬೇಕಾದಷ್ಟು ಕೆಲಸಗಾರರೂ ಸಿಕ್ಕುತ್ತಾರೆ. ನೀವು ನಿಲ್ಲುವುದಕ್ಕೆ ಮೊದಲು ಸಮ್ಮತಿಸಿ. ಎಲ್ಲ ಸರಿ ಹೋಗುತ್ತದೆ" ಎಂದರು.

ಹೀಗೆ ನನ್ನನ್ನು ಬೀಳ್ಕೊಡಲು ನೆರೆದಿದ್ದ ಕೂಟ, ಕಾರ್ಯಕಾರಿ ಸಮಿತಿಯಾಗಿ ಪರಿವರ್ತನೆಗೊಂಡಿತು. "ಊಟ ಮುಂತಾದುವನ್ನು ಬೇಗ ಮುಗಿಸಿ ಮನೆಗಳಿಗೆ ಹೋಗೋಣ" ಎಂದು ನಾನು ಸೂಚಿಸಿದೆನು. ಮನಸ್ಸಿನಲ್ಲಿ ಮುಂದಿನ ಹೋರಾಟದ ರೂಪರೇಖೆಗಳನ್ನು ಚಿತ್ರಿಸಿಕೊಂಡೆನು. ಮತದಾರರ ಪಟ್ಟಿಯಲ್ಲಿ ಯಾರ ಯಾರ ಹೆಸರುಗಳಿವೆ ಎಂಬುದನ್ನೂ ನಾನು ತಿಳಿದುಕೊಂಡು, ಇನ್ನೂ ಒಂದು ತಿಂಗಳು ಅಲ್ಲಿ ನಿಲ್ಲಬೇಕೆಂದು ನಿಶ್ಚಯಿಸಿದೆನು.

ಹೀಗೆ ನಾನು ದಕ್ಷಿಣ ಆಫ್ರಿಕಾದಲ್ಲಿ ಬಹುಕಾಲ ವಾಸಿಸುವುದರ ತಳಹದಿಯನ್ನು ದೇವರೇ ಹಾಕಿದನು; ಆತ್ಮಗೌರವದ ಸಮರಕ್ಕೆ ಬೀಜವನ್ನೂ ಅವನೇ ಬಿತ್ತಿದನು.

೧೭

ನೆಟಾಲ್‌ನಲ್ಲಿ ನೆಲೆಸಿದುದು

೧೮೯೩ರಲ್ಲಿ, ಸೇಠ್ ಹಾಜೀ ಮೊಹಮ್ಮದ್ ಹಾಜೀದಾದಾ, ನೆಟಾಲಿನ ಭಾರತೀಯರ ಪೈಕಿ ಅಗ್ರಗಣ್ಯರೆಂದು ಪರಿಗಣಿತರಾಗಿದ್ದರು. ಆದರೆ ಸಂಪತ್ತಿನ ದೃಷ್ಟಿಯಲ್ಲಿ ಸೇಠ್ ಅಬ್ದುಲ್ಲಾ ಹಾಜೀ ಆದಮ್ ಅವರೆಲ್ಲೆಲ್ಲ ಪ್ರಮುಖರಾಗಿದ್ದರು. ಆದರೆ ಅವರೂ ಉಳಿದ ಎಲ್ಲರೂ ಸಾರ್ವಜನಿಕ ವಿಷಯಗಳಲ್ಲಿ

ಯಾವಾಗಲೂ ಸೇಠ್ ಹಾಜಿ ಮೊಹಮ್ಮದ್‌ರಿಗೆ ಪ್ರಥಮ ಸ್ಥಾನವನ್ನು ಕೊಡುತ್ತಿದ್ದರು. ಆದುದರಿಂದ ಸೇಠ್ ಅಬ್ದುಲ್ಲಾರವರ ಮನೆಯಲ್ಲಿ, ಹಾಜೀ ಮೊಹಮ್ಮದ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಭೆ ಸೇರಿ; ಫ್ರಾಂಚೈಸ್ ಬಿಲ್ಲನ್ನು (ಮತಾಧಿಕಾರ ಮಸೂದೆ) ವಿರೋಧಿಸಬೇಕೆಂದು ತೀರ್ಮಾನ ಮಾಡಲಾಯಿತು.

ಸ್ವಯಂಸೇವಕರ ಪಟ್ಟಿಯನ್ನು ತಯಾರಿಸಿದೆವು. ನೆಟಾಲಿನಲ್ಲಿ ಜನಿಸಿದ ಭಾರತೀಯರು, ಮುಖ್ಯವಾಗಿ ಭಾರತೀಯ ಕ್ರೈಸ್ತ ಯುವಕರು ಈ ಸಭೆಗೆ ಆಹ್ವಾನಿತರಾಗಿದ್ದರು. ಡರ್ಬಾನ್ ಕೋರ್ಟಿನ ದ್ವಿಭಾಷಿಯಾದ ಮಿ. ಪಾಲ್ ಮತ್ತು ಮಿಷನ್ ಸ್ಕೂಲ್ ಹೆಡ್ಮಾಸ್ಟರ್ ಆದ ಸುಭಾನ್ ಗಾಡ್‌ಫ್ರೇ ಅವರೂ ಸಭೆಗೆ ಬಂದಿದ್ದರು. ಸಭೆಗೆ ಅನೇಕ ಕ್ರೈಸ್ತ ಯುವಕರು ಬರಲು ಅವರೇ ಕಾರಣ. ಅವರೆಲ್ಲರೂ ಸ್ವಯಂಸೇವಕರಾದರು.

ಸ್ಥಳದ ಅನೇಕ ವ್ಯಾಪಾರಿಗಳನ್ನೂ ಸ್ವಯಂಸೇವಕರನ್ನಾಗಿ ಸೇರಿಸಿಕೊಂಡೆವು. ಅವರಲ್ಲಿ ಮುಖ್ಯವಾಗಿ ಸೇಠ್ ದಾವೂದ್ ಮೊಹಮ್ಮದ್, ಮೊಹಮ್ಮದ್ ಕಾಸಿಂ ಕಾಮರುದ್ದೀನ್, ಆದಮ್‌ಜೀ ಮಿಯಾನ್ ಉ. ಕೋಲಂದವೇಲು ಪಿಳ್ಳೆ, ಸಿ. ಲಚಿರಾಮ್, ರಂಗಸಾಮಿ, ಪಡಿಯಾಚಿ ಮತ್ತು ಆಮದ್ ಜೀವಾ, ಮುಂತಾದವರು. ಪಾರ್ಸೀ ರುಸ್ತುಂಜೀಯಂತೂ ಇದ್ದೇ ಇದ್ದರು. ಗುಮಾಸ್ತರ ಪೈಕಿ ಮಾಣಿಕ್‌ಜೀ, ಜೋಷಿ, ನರಸಿಂಹರಾಮ್ ಇವರೆಲ್ಲ ಇದ್ದರು. ಇವರಲ್ಲಿ ದಾದಾ ಅಬ್ದುಲ್ಲಾ ಮುಂತಾದವರ ದೊಡ್ಡ ದೊಡ್ಡ ಅಂಗಡಿಗಳಲ್ಲಿ ಕೆಲಸಮಾಡುತ್ತಿದ್ದರು. ತಾವು ಹೀಗೆ ಸಾರ್ವಜನಿಕ ಕಾರ್ಯದಲ್ಲಿ ಭಾಗಿಯಾಗುತ್ತಿರುವುದನ್ನು ಕಂಡು ಅವರಿಗೆ ಆಶ್ಚರ್ಯವೂ ಸಂತೋಷವೂ ಆಯಿತು. ಹೀಗೆ ಸಾರ್ವಜನಿಕ ಕಾರ್ಯದಲ್ಲಿ ಭಾಗಿಯಾಗಲು ಆಹ್ವಾನಿತರಾದುದು ಅವರ ಬಾಳಿನಲ್ಲಿ ಹೊಸ ಅನುಭವವಾಗಿದ್ದಿತು. ಭಾರತೀಯರಿಗೆ ಉಂಟಾದ ಆಪತ್ತಿನ ಎದುರಿಗೆ ಉಚ್ಚ—ನೀಚ, ಹಿರಿಯ — ಕಿರಿಯ, ಮಾಲಿಕ — ನೌಕರ, ಹಿಂದೂ — ಮುಸಲ್ಮಾನ, ಪಾರಸೀ— ಈಸಾಯಿ, ಗುಜರಾತೀ— ಮದರಾಸಿ— ಸಿಂಧೀ, ಎಂಬ ವ್ಯತ್ಯಾಸಗಳೆಲ್ಲ ಮರೆಯಾದವು. ಎಲ್ಲರೂ ಒಂದೇ ಸಮನಾಗಿ ಭಾರತಮಾತೆಯ ಪುತ್ರರೂ ಸೇವಕರೂ ಆಗಿದ್ದರು.

ಮಸೂದೆಯ ಎರಡನೆಯ ಚರ್ಚೆ ಮುಗಿದು ಅದು ಆಗಲೇ ಅಂಗೀಕೃತವಾಗಿದ್ದಿತು; ಅಥವಾ ಆಗುವುದರಲ್ಲಿದ್ದಿತು. ಆಗ ಶಾಸನ ಸಭೆಯಲ್ಲಿ ಮಾಡಿದ ಭಾಷಣಗಳಲ್ಲಿ "ಭಾರತೀಯರು ಈ ಕಠಿಣವಾದ ಮಸೂದೆಗೆ ಯಾವ ವಿರೋಧವನ್ನೂ ವ್ಯಕ್ತಪಡಿಸಿಲ್ಲ. ಆದುದರಿಂದ ಅವರು ಮತಾಧಿಕಾರ ಹೊಂದಲು ಅರ್ಹರಲ್ಲ ಎಂಬುದು ಇದರಿಂದಲೇ ಗೊತ್ತಾಗುತ್ತದೆ." ಎಂಬುದನ್ನು ಒತ್ತಿ ಹೇಳಲಾಗಿದ್ದಿತು.

ಸಭೆಯಲ್ಲಿ ನೆರೆದಿದ್ದವರಿಗೆ ನಾನು ಪರಿಸ್ಥಿತಿಯನ್ನು ವಿವರಿಸಿದೆನು. ನಾವು ಮೊದಲು ಮಾಡಿದ ಕಾರ್ಯ, ಶಾಸನ ಸಭೆಯ ಸ್ಪೀಕರರಿಗೆ "ಮಸೂದೆಯ ಮೇಲಿನ ಚರ್ಚೆಯನ್ನು ಮುಂದಕ್ಕೆ ಹಾಕಬೇಕೆಂದು" ಪ್ರಾರ್ಥಿಸಿ ಒಂದು ತಾರನ್ನು ಕಳುಹಿಸಿದುದು. ಅದೇ ಬಗೆಯ ತಾರನ್ನು ಪ್ರಧಾನ ಮಂತ್ರಿ ಸರ್ ಜಾನ್ ರಾಬಿನ್‌ಸನ್‌ರವರಿಗೂ, ಮತ್ತು ದಾದಾ ಅಬ್ದುಲ್ಲಾರವರ ಮಿತ್ರರೆಂಬ ದೃಷ್ಟಿಯಿಂದ ಮಿ. ಎಸ್ಕೋಂಬ್‌ರವರಿಗೂ ಕಳುಹಿಸಿದೆವು. ಸ್ಪೀಕರ್‌ರವರು ಕೂಡಲೇ ಮಸೂದೆಯ ಮೇಲಿನ ಚರ್ಚೆಯನ್ನು ಎರಡು ದಿನಗಳು ಮುಂದಕ್ಕೆ ಹಾಕುವುದಾಗಿ ಉತ್ತರ ಕೊಟ್ಟರು. ಇದರಿಂದ ನಮಗೆ ಸಂತೋಷವಾಯಿತು.

ಶಾಸನ ಸಭೆಗೆ ಒಪ್ಪಿಸುವ ಅರ್ಜಿ ಸಿದ್ಧವಾಯಿತು. ಅದರ ಮೂರು ಪ್ರತಿಗಳು ಆಗಬೇಕಾಗಿದ್ದವು. ವೃತ್ತಪತ್ರಿಕೆಗಳಿಗಾಗಿ ಒಂದು ಪ್ರತಿ ಬೇಕಾಗಿದ್ದಿತು. ಸಾಧ್ಯವಾದಷ್ಟು ಜನರಿಂದ ಅರ್ಜಿಗೆ ರುಜು ಹಾಕಿಸಬೇಕೆಂದು ತೀರ್ಮಾನವಾಯಿತು. ಈ ಕಾರ್ಯಗಳನ್ನೆಲ್ಲ ಮಾಡಲು ನಮಗೆ ಇದ್ದುದು ಒಂದು ರಾತ್ರಿ ಮಾತ್ರ. ಇಂಗ್ಲಿಷ್ ಬಲ್ಲ ಸ್ವಯಂಸೇವಕರು ರಾತ್ರಿಯೆಲ್ಲ ಕೆಲಸಮಾಡಿದರು. ಸುಂದರವಾದ ಹಸ್ತಾಕ್ಷರವುಳ್ಳ ಮಿ. ಆರ್ಥರ್ ಎಂಬ ವೃದ್ಧರು ಮುಖ್ಯವಾದ ಪ್ರತಿಯನ್ನು ಬರೆದರು. ಉಳಿದವನ್ನು ಒಬ್ಬರು ಓದಿಹೇಳಿ ಇತರರು ಬರೆದರು. ಹೀಗೆ ಒಟ್ಟಿಗೆ ಐದು ಪ್ರತಿಗಳು ಸಿದ್ಧವಾದವು. ವರ್ತಕ ಸ್ವಯಂಸೇವಕರು ತಮ್ಮ ಸ್ವಂತ ಗಾಡಿಗಳಲ್ಲಿ ಅಥವಾ ತಾವೇ ದುಡ್ಡು ಕೊಟ್ಟು ಬಾಡಿಗೆ ಗಾಡಿಗಳಲ್ಲಿ ಹೋಗಿ ಅರ್ಜಿಗೆ ರುಜು ಹಾಕಿಸಿ ತಂದರು. ಕಾರ್ಯ, ಬಹಳ ಬೇಗ ಮುಗಿದು ಅರ್ಜಿಗಳನ್ನು ಕಳುಹಿಸಿದುದಾಯಿತು. ಪತ್ರಿಕೆಗಳು ನಮಗೆ ಅನುಕೂಲವಾದ

ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಅರ್ಜಿಯನ್ನು ಪ್ರಕಟಿಸಿದುವು. ಇದರಿಂದ ಶಾಸನ ಸಭೆಯ ಮೇಲೆ ಪರಿಣಾಮವುಂಟಾಯಿತು. ಸಭೆಯಲ್ಲಿ ಇದರ ಚರ್ಚೆ ನಡೆಯಿತು. ಮಸೂದೆಯ ಪರವಾಗಿದ್ದವರು, ನಮ್ಮ ಅರ್ಜಿಯಲ್ಲಿ ಎತ್ತಿದ ವಾದಕ್ಕೆ ಹುರುಳಿಲ್ಲದ ಪ್ರತ್ಯುತ್ತರವನ್ನು ಕೊಟ್ಟರು. ಮಸೂದೆ, ಹೇಗೋ ಅಂಗೀಕೃತವಾಯಿತು.

ಇದು ಹೀಗಾಗುವುದೆಂದು ನಮಗೆ ಮೊದಲೇ ಗೊತ್ತಿದ್ದಿತು. ಆದರೆ ಚಳುವಳಿಯಿಂದ ಅಲ್ಲಿಯ ಭಾರತೀಯರಲ್ಲಿ ಹೊಸ ಜೀವ ಪ್ರವಹಿಸಿದ್ದಿತು. ಭಾರತೀಯರೆಲ್ಲ ಒಂದು ಸಮಾಜ, ಅದು ಅವಿಭಾಜ್ಯ. ವ್ಯಾಪಾರದ ಹಕ್ಕುಗಳಿಗೆ ಮಾತ್ರವೇ ಅಲ್ಲ. ರಾಜಕೀಯ ಹಕ್ಕುಗಳಿಗಾಗಿಯೂ ಹೋರಾಡುವುದು ತಮ್ಮ ಧರ್ಮ, ಎಂಬುದನ್ನು ಅವರು ಮನಗಾಣುವಂತೆ ಮಾಡಿತು.

ಆಗ ವಸಾಹತುಗಳಿಗೆ ಲಾರ್ಡ್ ರಿಪನ್‌ರು ಸೆಕ್ರೆಟರಿ ಆಫ್ ಸ್ಟೇಟ್ ಆಗಿದ್ದರು. ಅವರಿಗೆ ಒಂದು ಭಾರಿ ಅರ್ಜಿಯನ್ನು ಸಲ್ಲಿಸಬೇಕೆಂದು ತೀರ್ಮಾನಿಸಲಾಯಿತು. ಆ ಕಾರ್ಯ ಸುಲಭವಾದುದೂ, ಒಂದೆರಡು ದಿನಗಳಲ್ಲಿ ಆಗುವುದೂ, ಆಗಿರಲಿಲ್ಲ. ಮತ್ತೆ ಸ್ವಯಂಸೇವಕರನ್ನು ಕೂಡಿಸಿದೆವು. ತಮ್ಮ ತಮ್ಮ ಪಾಲಿನ ಕಾರ್ಯವನ್ನು ಎಲ್ಲರೂ ಮಾಡಿದರು.

ನಾನು ಅರ್ಜಿಯನ್ನು ಸಿದ್ಧಪಡಿಸಲು ಬಹಳ ಶ್ರಮಪಟ್ಟೆನು. ಪ್ರಕಟವಾಗಿದ್ದ ಎಲ್ಲ ಸಾಹಿತ್ಯವನ್ನೂ ವ್ಯಾಸಂಗ ಮಾಡಿದೆನು. ನನ್ನ ವಾದ ಒಂದು ತತ್ವ ಮತ್ತು ಒಂದು ಪರಿಸ್ಥಿತಿ ಈ ಎರಡರ ಸುತ್ತ ನೇಯ್ದುದಾಗಿದ್ದಿತು. ನನಗೆ ಭಾರತದಲ್ಲಿ ಮತಾಧಿಕಾರವಿದೆ. ಆದ್ದರಿಂದ ನೆಟಾಲ್‌ನಲ್ಲಿಯೂ ಇರಬೇಕಾದುದು ನ್ಯಾಯ. ಎರಡನೆಯದಾಗಿ, ಮತಾಧಿಕಾರವನ್ನು ಚಲಾಯಿಸಬಲ್ಲ ಭಾರತೀಯರು ನೆಟಾಲ್‌ನಲ್ಲಿ ಬಹಳ ಕಡಿಮೆ ಜನ ಇದ್ದುದರಿಂದ ಆ ಮತಾಧಿಕಾರವನ್ನು ಕಿತ್ತುಕೊಳ್ಳುವುದು ಸರಿಯಲ್ಲವೆಂದು ವಾದಿಸಿದೆನು.

ಹದಿನೈದು ದಿನಗಳೊಳಗೆ, ಅರ್ಜಿಗೆ ಹತ್ತು ಸಾವಿರ ರುಜುಗಳನ್ನು ಹಾಕಿಸಿದುದಾಯಿತು. ದೇಶದಲ್ಲಿ ಹತ್ತು ಸಾವಿರ ಜನರ ರುಜು ಹಾಕಿಸುವುದು—ಅದರಲ್ಲಿಯೂ ಈ ಬಗೆಯ ಕೆಲಸ ಸ್ವಯಂಸೇವಕರಿಗೆ ಹೊಸದು ಎಂಬುದನ್ನು ಪರಿಗಣಿಸಿದರೆ—ಸುಲಭವಾದ ಕೆಲಸವಾಗಿರಲಿಲ್ಲ. ರುಜು

ಹಾಕುವವರು, ಅದರ ಅರ್ಥವನ್ನು ಪೂರ್ಣವಾಗಿ ತಿಳಿಯದೆ ರುಜು ಹಾಕ ಬಾರದೆಂದು ನಿರ್ಣಯವಾಗಿದ್ದುದರಿಂದ, ಅರ್ಹರಾದ ಸ್ವಯಂಸೇವಕರನ್ನು ಮಾತ್ರವೇ ಆರಿಸಿಕೊಳ್ಳಬೇಕಾಗಿದ್ದಿತು. ಅಲ್ಲಿ ಹಳ್ಳಿಗಳು ದೂರ ದೂರ ವಾಗಿದ್ದವು. ಅನೇಕ ಸ್ವಯಂಸೇವಕರು ಪೂರ್ಣ ಶ್ರದ್ಧೆಯಿಂದ ಮಾಡಿದರೆ ಮಾತ್ರ, ಅದು ಆಗುವ ಕೆಲಸವಾಗಿದ್ದಿತು. ಅವರು ಹಾಗೆ ಮಾಡಿಯೂ ಮಾಡಿದರು. ಪ್ರತಿಯೊಬ್ಬನೂ ತನಗೆ ವಹಿಸಿದ್ದ ಕೆಲಸಗಳನ್ನು ಉತ್ಸಾಹ ದಿಂದ ಮಾಡಿ ಮುಗಿಸಿದನು. ಆದರೆ ಪಂಗ್ತಿಗಳನ್ನು ಬರೆಯುತ್ತಿರುವಾಗ ಸೇಠ್ ದಾವುದ್ ಮೊಹಮ್ಮದ್, ರುಸ್ತುಮ್‌ಜೀ ಆದಂಜೀ ಮಿಯಾಖಾನ್ ಆಮದ್ ಜೀವಾ ಮುಂತಾದವರ ಚಿತ್ರ ನನ್ನ ಕಣ್ಣ ಮುಂದೆ ಕಟ್ಟಿ ನಿಂತಿದೆ. ಅವರು ಅತ್ಯಂತ ಹೆಚ್ಚು ರುಜುಗಳನ್ನು ಹಾಕಿಸಿ ತಂದರು. ದಾವುದ್ ಸೇಠರು ದಿನವೆಲ್ಲ ಗಾಡಿಯಲ್ಲಿ ರುಜು ಸಂಗ್ರಹಕ್ಕಾಗಿ ಹೋಗುತ್ತಲೇ ಇದ್ದರು. ಇದೆಲ್ಲ ಕೇವಲ ಪ್ರೀತಿಯಿಂದ ಮಾಡಿದ ಕೆಲಸವಾಗಿದ್ದಿತು. ತಾವು ಈ ಕಾರ್ಯದಲ್ಲಿ ಮಾಡಿದ ವೆಚ್ಚಕ್ಕಾಗಿ ಸಹ ಯಾರೂ ಒಂದು ಕಾಸನ್ನೂ ತೆಗೆದು ಕೊಳ್ಳಲಿಲ್ಲ. ದಾದಾ ಅಬ್ದುಲ್ಲಾರವರ ಮನೆ, ಹೋಗಿ ಬರುವವರು ಇಳಿದು ಕೊಳ್ಳುವ ಧರ್ಮಶಾಲೆಯೂ ಸಾರ್ವಜನಿಕ ಕಛೇರಿಯೂ ಆಗಿದ್ದಿತು. ನನ್ನ ಕೆಲಸದಲ್ಲಿ ಸಹಾಯಕರಾಗಿದ್ದ ಅನೇಕ ವಿದ್ಯಾವಂತ ಮಿತ್ರರೂ ಇತರರೂ ಅಲ್ಲಿಯೇ ಭೋಜನ ಮಾಡುತ್ತಿದ್ದೆವು. ಹೀಗೆ ಎಲ್ಲ ಸಹಾಯಕರೂ ತುಂಬ ವೆಚ್ಚವನ್ನು ವಹಿಸಬೇಕಾಯಿತು.

ಕೊನೆಗೆ ಅರ್ಜಿಯನ್ನು ಒಪ್ಪಿಸಿದೆವು. ಹಂಚುವುದಕ್ಕಾಗಿಯೂ ಪ್ರಚಾರಕ್ಕಾಗಿಯೂ ಸಾವಿರ ಪ್ರತಿಗಳನ್ನು ಅಚ್ಚು ಹಾಕಿಸಬೇಕಾಗಿದ್ದಿತು. ಭಾರತದ ಜನತೆಗೆ ಅದೇ ಮೊದಲನೆಯ ಸಲವಾಗಿ ನೆಟಾಲಿನ ಪರಿಸ್ಥಿತಿ ಗೊತ್ತಾಯಿತು. ಅರ್ಜಿಯ ಪ್ರತಿಗಳನ್ನು ನಾನು ನನಗೆ ತಿಳಿದ ಎಲ್ಲ ವೃತ್ತ ಪತ್ರಿಕೆಗಳಿಗೂ ಪ್ರಕಟನಗಾರರಿಗೂ ಕಳುಹಿಸಿದೆನು.

ನಮ್ಮ ಅರ್ಜಿಯನ್ನು ಕುರಿತು, ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯು ತಾನು ಬರೆದ ಪ್ರಧಾನ ಲೇಖನದಲ್ಲಿ, ನಮ್ಮ ಕೇಳಿಕೆಗೆ ಬೆಂಬಲವಿತ್ತಿತು. ಇಂಗ್ಲೆಂಡಿನ ಬೇರೆಬೇರೆ ಪಕ್ಷಗಳ ಪತ್ರಿಕೆಗಳಿಗೂ ಪ್ರಕಾಶಕರಿಗೂ ಅರ್ಜಿಯ ನಕಲನ್ನು ಕಳುಹಿಸಿದೆವು. ಲಂಡನ್ ಟೈಮ್ಸ್ ಪತ್ರಿಕೆ ನಮ್ಮ ಬೇಡಿಕೆ

ಯನ್ನು ಸಮರ್ಥಿಸಿತು. ಕಾನೂನಿಗೆ ಮಂಜೂರಾತಿ ದೊರೆಯದಿರಬಹುದು ಎಂಬ ಆಸೆ ನಮ್ಮಲ್ಲಿ ಅಂಕುರಿಸಿತು.

ಇನ್ನು ನೆಟಾಲನ್ನು ಬಿಡುವುದು ನನಗೆ ಸಾಧ್ಯವಿರಲಿಲ್ಲ. ಭಾರತೀಯ ಮಿತರು ನನ್ನ ಸುತ್ತ ನೆರೆದು ನಾನು ಅಲ್ಲಿಯೇ ಖಾಯಂ ಆಗಿ ನೆಲಸಬೇಕೆಂದು ಒತ್ತಾಯಪಡಿಸತೊಡಗಿದರು. ನನ್ನ ಕಷ್ಟಗಳನ್ನು ನಾನು ವಿವರಿಸಿದೆನು. ಸಾರ್ವಜನಿಕರ ವೆಚ್ಚದಲ್ಲಿ ಜೀವನ ನಡೆಸಬಾರದೆಂದು ನಾನು ನಿಶ್ಚಯಿಸಿದ್ದೆನು. ನನ್ನ ಸಂಸಾರವನ್ನು ಸ್ವತಂತ್ರವಾಗಿ ಹೂಡುವುದು ಅವಶ್ಯಕವಾಗಿ ನನಗೆ ತೋರಿತು. ಮನೆ ಚೆನ್ನಾಗಿರಬೇಕು. ಒಳ್ಳೆಯ ಸ್ಥಳದಲ್ಲಿ ಇರಬೇಕೆಂದು ನಾನು ಯೋಚಿಸಿದೆನು. ಬ್ಯಾರಿಸ್ಟರ್‌ಗಳಿಗೆ ಸ್ವಾಭಾವಿಕವಾದ ಮಟ್ಟದಲ್ಲಿ ನಾನು ಜೀವನ ನಡೆಸದೆ ಇದ್ದರೆ ನೆಟಾಲಿನಲ್ಲಿದ್ದ ಭಾರತೀಯರ ಗೌರವದ ಉತ್ಕರ್ಷಕ್ಕೆ ನನ್ನಿಂದ ಏನೂ ಸಹಾಯವಾಗದೆಂದೂ ನಾನು ಭಾವಿಸಿದೆನು. ವರುಷಕ್ಕೆ ೩೦೦ ಪೌಂಡುಗಳಿಗಿಂತ ಕಡಿಮೆ ವೆಚ್ಚದಲ್ಲಿ ಅಂತಹ ಸಂಸಾರ ನಡೆಸುವುದು ಸಾಧ್ಯವಿಲ್ಲವೆಂದು ನನಗೆ ತೋರಿತು. ಆದುದರಿಂದ, ಅಲ್ಲಿನ ಭಾರತೀಯರು ನನಗೆ ವರುಷಕ್ಕೆ ೩೦೦ ಪೌಂಡು ಉತ್ಪತ್ತಿ ಬರುವ ವಕೀಲಿ ಕೆಲಸವನ್ನು ಒದಗಿಸುವ ಆಶ್ವಾಸನವನ್ನು ಕೊಟ್ಟರೆ, ನಾನು ಅಲ್ಲಿ ನೆಲಸು ವುದಾಗಿ ನಿರ್ಧರಿಸಿ, ನನ್ನ ನಿರ್ಧಾರವನ್ನು ಅವರಿಗೆ ತಿಳಿಸಿದೆನು.

ಅವರು, "ನೀವು ಮಾಡುವ ಸಾರ್ವಜನಿಕ ಕಾರ್ಯಕ್ಕಾಗಿ ನೀವು ಅಷ್ಟು ಹಣವನ್ನು ತೆಗೆದುಕೊಂಡರೆ ನಮಗೆ ಸಂತೋಷ. ನಾವು ಅಷ್ಟು ಹಣವನ್ನು ಸುಲಭವಾಗಿ ಕೂಡಿಸಬಲ್ಲೆವು. ನೀವು ಮಾಡುವ ನಮ್ಮ ಸ್ವಂತ ವಕೀಲಿ ಕೆಲಸಕ್ಕೆ ತೆಗೆದುಕೊಳ್ಳುವ ರುಸುಮು ಬೇರೆ" ಎಂದರು.

ನಾನು, "ಸಾರ್ವಜನಿಕ ಕಾರ್ಯಕ್ಕೆ ನಿಮ್ಮಿಂದ ಹೀಗೆ ಹಣವನ್ನು ತೆಗೆದುಕೊಳ್ಳಲಾರೆ. ಈ ಕೆಲಸಕ್ಕೆ ಬ್ಯಾರಿಸ್ಟರ್ ಆಗಿ ನಾನು ಹೆಚ್ಚು ಬುದ್ಧಿವಂತಿಕೆ ಉಪಯೋಗಿಸಬೇಕಾಗುವುದಿಲ್ಲ. ನೀವೆಲ್ಲ ಕೆಲಸ ಮಾಡು ವಂತೆ ಮಾಡುವುದೇ ನನ್ನ ಮುಖ್ಯ ಕಾರ್ಯ. ಅದಕ್ಕೆ ನಾನು ಹೇಗೆ ಹಣ ವನ್ನು ತೆಗೆದುಕೊಳ್ಳುವುದು ? ಈ ಕಾರ್ಯಕ್ಕೆ ನಾನು ಪದೇ ಪದೇ ನಿಮ್ಮನ್ನು ಹಣ ಕೇಳಬೇಕಾಗುತ್ತದೆ. ನನ್ನ ಜೀವನದ ವೆಚ್ಚವನ್ನೂ ಇದ ರಿಂದ ತೆಗೆದುಕೊಳ್ಳಬೇಕಾಗುವುದಾದರೆ ಸಾರ್ವಜನಿಕ ಕಾರ್ಯಕ್ಕೆ

ನಿಮ್ಮನ್ನು ನಿಸ್ಸಂಕೋಚವಾಗಿ ಹಣ ಕೇಳಲು ಸಾಧ್ಯವಾಗುವುದಿಲ್ಲ. ಕೊನೆಗೆ ಕೆಲಸವೆಲ್ಲ ನಿಂತು ಹೋಗುತ್ತದೆ. ಅಷ್ಟೇ ಅಲ್ಲ, ಇಲ್ಲಿನ ಭಾರತೀಯರು ವರುಷಕ್ಕೆ ೩೦೦ ಪೌಂಡುಗಳಿಗಿಂತ ಹೆಚ್ಚಾಗಿಯೇ ಹಣವನ್ನು ಕೂಡಿಸಬೇಕೆಂಬುದು ನನ್ನ ಇಷ್ಟ” ಎಂದೆನು.

“ಆದರೆ, ನಿಮ್ಮನ್ನು ನಾವು ಇಷ್ಟು ದಿನಗಳಿಂದ ಅರಿತಿದ್ದೇವೆ. ಅವಶ್ಯಕವಾದುದಕ್ಕಿಂತ ಹೆಚ್ಚು ಹಣವನ್ನು ನೀವು ತೆಗೆದುಕೊಳ್ಳುವುದಿಲ್ಲವೆಂಬುದು ನಮಗೆ ಚೆನ್ನಾಗಿ ಗೊತ್ತು. ನೀವು ಇಲ್ಲಿರಬೇಕೆಂದು ನಾವು ಬಯಸುವುದಾದರೆ ನಿಮ್ಮ ವೆಚ್ಚವನ್ನು ನಾವು ಕೊಡಬೇಕಾದುದು ನ್ಯಾಯವಲ್ಲವೇ ?”

“ನೀವು ಪ್ರೇಮ ಮತ್ತು ತಾತ್ಕಾಲಿಕ ಉತ್ಸಾಹದಿಂದ ಹೀಗೆ ಹೇಳುತ್ತಿದ್ದೀರಿ. ಈ ಪ್ರೇಮವೂ ಉತ್ಸಾಹವೂ ಶಾಶ್ವತವಾಗಿರುವುದೆಂದು ನಾನು ಹೇಗೆ ನಂಬಬಹುದು ? ನಿಮ್ಮ ಸ್ನೇಹಿತನಾಗಿಯೂ ಸೇವಕನಾಗಿಯೂ ನಾನು ಆಗಿಂದಾಗ್ಗೆ ನಿಮಗೆ ಕಠಿಣವಾದ ಮಾತುಗಳನ್ನು ಹೇಳಬೇಕಾಗಿ ಬರಬಹುದು. ಆಗ ನನ್ನಲ್ಲಿ ನಿಮ್ಮ ಪ್ರೀತಿ, ಎಂದಿನಂತೆ ಉಳಿಯುವುದೋ ಇಲ್ಲವೋ ದೇವರಿಗೊಬ್ಬನಿಗೇ ಗೊತ್ತು. ಆದರೆ ವಿಷಯವೇನೆಂದರೆ, ಸಾರ್ವಜನಿಕ ಕಾರ್ಯಕ್ಕಾಗಿ ನಾನು ಸಂಬಳವನ್ನು ಸ್ವೀಕರಿಸಬಾರದು. ನೀವೆಲ್ಲ ನಿಮ್ಮ ಕೋರ್ಟು ಕೆಲಸಗಳನ್ನು ನನಗೆ ವಹಿಸಲು ಒಪ್ಪಿದರೆ ಅಷ್ಟು ಸಾಕು. ಅದರಿಂದಲೂ ಸಹ ನಿಮಗೆ ಕಷ್ಟವಾಗಬಹುದು. ಮೊದಲನೆಯದಾಗಿ, ನಾನು ಬಿಳಿಯ ಬ್ಯಾರಿಸ್ಟರ್ ಅಲ್ಲ. ಎರಡನೆಯದು ಕೋರ್ಟು ನನ್ನಂಥವರಿಗೆ ಮರ್ಯಾದೆ ಕೊಡುವುದೋ ಇಲ್ಲವೋ ಗೊತ್ತಿಲ್ಲ ; ಮತ್ತು ವಕೀಲಿ ವೃತ್ತಿಯಲ್ಲಿ ನಾನು ಎಷ್ಟರ ಮಟ್ಟಿಗೆ ಜಯಶಾಲಿಯಾಗುವೆನೋ ಹೇಳಲಾರೆ. ಆದುದರಿಂದ ಕೋರ್ಟಿನ ಕೆಲಸವನ್ನು ನನಗೆ ವಹಿಸುವುದರಲ್ಲಿ ಸಹ ನಿಮಗೆ ಸ್ವಲ್ಪ ಅಪಾಯವಿದ್ದೇ ಇದೆ. ನೀವು ಕೋರ್ಟು ಕೆಲಸವನ್ನು ನನಗೆ ವಹಿಸುವುದೇ ನನ್ನ ಸಾರ್ವಜನಿಕ ಕಾರ್ಯಕ್ಕೆ ನೀವು ಕೊಟ್ಟ ಪ್ರತಿಫಲ ಎಂದು ನಾನು ಭಾವಿಸುತ್ತೇನೆ.

ಈ ಚರ್ಚೆಯ ಪರಿಣಾಮವಾಗಿ ಸುಮಾರು ಇಪ್ಪತ್ತು ವರ್ತಕರು ತಮ್ಮ ಕೋರ್ಟು ಕಾರ್ಯಗಳನ್ನು ಒಂದು ವರುಷ ಕಾಲ ನನಗೆ ವಹಿಸಿದರು. ಇದರ ಜತೆಗೆ, ದಾದಾ ಅಬ್ದುಲ್ಲಾ ನಾನು ಭಾರತಕ್ಕೆ ಹೊರಡುವಾಗ ನನಗೆ

ಕೊಡಬೇಕೆಂದಿದ್ದ ಸಂಭಾವನೆಗೆ ಬದಲಾಗಿ, ನನಗೆ ಬೇಕಾದ ಕುರ್ಚಿ ಮೇಜು ಮುಂತಾದ ಮರದ ಸಾಮಾನುಗಳನ್ನು ಕೊಂಡು ಕೊಟ್ಟರು.

ಹೀಗೆ ನಾನು ನೆಟಾಲ್‌ನಲ್ಲಿ ನೆಲೆಸಿದನು.

೧೦

ವರ್ಣದ್ವೇಷ

ನ್ಯಾಯಾಲಯದ ಚಿಹ್ನೆ, ಒಂದು ತಕ್ಕಡಿ. ಅದನ್ನು ಸಮನಾಗಿ ಹಿಡಿದಿರುವವಳು ನಿಷ್ಪಕ್ಷಪಾತಿಯೂ ಕುರುಡಿಯೂ ಆದರೂ ಕುಶಲಮತಿಯುಳ್ಳ ಒಬ್ಬ ವೃದ್ಧೆ. ವಿಧಿ ಅವಳನ್ನು ಉದ್ದೇಶಪೂರ್ವಕವಾಗಿಯೇ ಕುರುಡಿಯನ್ನಾಗಿ ಮಾಡಿದೆ. ಇದರ ಉದ್ದೇಶ ಅವಳು ಮನುಷ್ಯರ ಮುಖವನ್ನು ನೋಡಿ ಅಲ್ಲ, ಯೋಗ್ಯತೆಯನ್ನು ನೋಡಿ ನ್ಯಾಯ ತೀರ್ಮಾನವನ್ನು ಕೊಡಲೆಂದು. ಆದರೆ ನೆಟಾಲಿನ ಲಾ ಸೊಸೈಟಿ (ಕಾನೂನು ಸಂಘ) ಅಲ್ಲಿನ ನ್ಯಾಯಸ್ಥಾನ ಈ ತತ್ವಕ್ಕೂ ತನ್ನ ಚಿಹ್ನೆಗೂ ವಿರೋಧವಾಗಿ ನಡೆಯಬೇಕೆಂದು ಅಲ್ಲಿನ ಸುಪ್ರೀಂಕೋರ್ಟನ್ನು ಪ್ರೇರಿಸಲು ಹೊರಟಿತ್ತು.

ಸುಪ್ರೀಂಕೋರ್ಟಿನ ಅಡ್ವೊಕೇಟ್ ಆಗಿ ಸೇರಲು ನಾನು ಅರ್ಜಿಯನ್ನು ಹಾಕಿದೆನು. ನನ್ನ ಬಳಿ ಬೊಂಬಾಯಿ ಹೈಕೋರ್ಟಿನ ಮೊದಲ ಸನ್ನದು ಇದ್ದಿತು. ನಾನು ಬೊಂಬಾಯಿ ಹೈಕೋರ್ಟಿನಲ್ಲಿ ಸೇರಿದಾಗ, ಇಂಗ್ಲೆಂಡಿನ ಪ್ರಮಾಣ ಪತ್ರವನ್ನು ಅಲ್ಲಿ ಕೊಡಬೇಕಾಯಿತು. ವಕೀಲಿ ಕೆಲಸಕ್ಕೆ ಅನುಮತಿಯನ್ನು ಕೇಳುವ ಅರ್ಜಿಯ ಜತೆಯಲ್ಲಿ, ಎರಡು ಯೋಗ್ಯತಾ ಪತ್ರಗಳನ್ನೂ ಕೊಡಬೇಕಾಗಿದ್ದಿತು. ಐರೋಪ್ಯರ ಯೋಗ್ಯತಾಪತ್ರಗಳಿಗೆ ಹೆಚ್ಚು ಬೆಲೆ ಬರುವುದೆಂದು ನಾನು ಯೋಚಿಸಿ, ಸೇಠ್ ಅಬ್ದುಲ್ಲಾ ರವರ ಮೂಲಕ ನನಗೆ ಪರಿಚಯವಾಗಿದ್ದ ಇಬ್ಬರು ಐರೋಪ್ಯ ವರ್ತಕರಿಂದ ಅವುಗಳನ್ನು ಸಂಪಾದಿಸಿಕೊಂಡೆನು. ಅರ್ಜಿಯನ್ನು ವಕೀಲಿ ವೃಂದದವರೊಬ್ಬರು ಕೋರ್ಟಿಗೆ ಕೊಡಬೇಕಾಗಿದ್ದಿತು. ಸಾಧಾರಣವಾಗಿ ಅಟಾರ್ನಿ ಜನರಲ್ ರವರೇ ಯಾವ ಶುಲ್ಕವನ್ನೂ ತೆಗೆದುಕೊಳ್ಳದೆ, ಅರ್ಜಿಯನ್ನು ಕೋರ್ಟಿಗೆ ಕೊಡುವ ಪದ್ಧತಿಯಿದ್ದಿತು. ಈಗಾಗಲೇ ಗೊತ್ತಿರುವಂತೆ

ದಾದಾ ಅಬ್ದುಲ್ಲಾರವರ ಮಿತ್ರರಾದ ಮಿ. ಎಸ್ಕೊಂಬ್‌ರವರು ಅಟಾರ್ನಿ ಜನರಲ್‌ರಾಗಿದ್ದರು. ನಾನು ಹೋಗಿ ಅವರನ್ನು ಕಂಡೆನು. ಅವರು ನನ್ನ ಅರ್ಜಿಯನ್ನು ಕೋರ್ಟಿಗೆ ಕೊಡಲು ಸಂತೋಷದಿಂದ ಒಪ್ಪಿದರು.

ಆ ವೇಳೆಗೆ ವಕೀಲ ಸಭೆಯು ನಾನು ವಕೀಲನಾಗಿ ನೆಟಾಲ್ ಕೋರ್ಟನ್ನು ಸೇರುವುದನ್ನು ವಿರೋಧಿಸಿ ಏಕಾಏಕಿ ನನಗೆ ಒಂದು "ನೋಟೀಸ್" ಕೊಟ್ಟಿತು. ಆಕ್ಷೇಪಣೆಯ ಒಂದು ಕಾರಣ, ನಾನು ಅರ್ಜಿಯ ಜತೆ ನನ್ನ ಇಂಗ್ಲಿಷ್ ಸರ್ಟಿಫಿಕೇಟನ್ನು ಕೊಟ್ಟಿರಲಿಲ್ಲ ಎಂಬುದು ಆದರೆ ಮುಖ್ಯವಾದ ಆಕ್ಷೇಪಣೆ ಏನೆಂದರೆ, ವಕೀಲರು ನ್ಯಾಯಸ್ಥಾನದಲ್ಲಿ ಪ್ರವೇಶ ಹೊಂದಲು ಅನುಮತಿ ಕೊಡುವ ಕಾನೂನುಗಳನ್ನೂ ನಿಯಮಗಳನ್ನೂ ರಚಿಸುವಾಗ, ಒಬ್ಬ ಬಣ್ಣದ ಮನುಷ್ಯ (ಕಪ್ಪು ಅಥವಾ ಹಳದಿ) ವಕೀಲನಾಗಿ ಸೇರಲು ಅರ್ಜಿ ಹಾಕಬಹುದೆಂಬ ಸಂಭವವನ್ನು ಅವರು ನಿರೀಕ್ಷಿಸಿರಲಿಲ್ಲ. "ನೆಟಾಲ್, ಐರೋಪ್ಯರ ಸಾಹಸದಿಂದ ಅಭಿವೃದ್ಧಿ ಹೊಂದಿದೆ. ಅಲ್ಲಿಯ ವಕೀಲ ವೃಂದದಲ್ಲಿ ಬಿಳಿಯರ ಪ್ರಾಧಾನ್ಯವೇ ಇರಬೇಕು. ಬಣ್ಣದವರಿಗೆ ಪ್ರವೇಶ ಕೊಟ್ಟರೆ, ಅವರು ನಿಧಾನವಾಗಿ ಸಂಖ್ಯೆಯಲ್ಲಿ ಐರೋಪ್ಯರಿಗಿಂತ ಹೆಚ್ಚಾಗಬಹುದು. ಕೊನೆಗೆ ಅವರ ರಕ್ಷಣೆಯ ಕೋಟೆಯೇ ಮುರಿದು ಬೀಳಬಹುದು." ಎಂಬುದು ಅವರ ಭಯವಾಗಿದ್ದಿತು.

ವಕೀಲ ಸಭೆ, ತನ್ನ ವಿರೋಧವನ್ನು ಪುಷ್ಟೀಕರಿಸಲು ಒಬ್ಬ ಪ್ರಮುಖ ವಕೀಲರನ್ನು ಗೊತ್ತುಮಾಡಿದ್ದಿತು. ಅವರೂ ಸಹ ದಾದಾ ಅಬ್ದುಲ್ಲಾರವರೊಡನೆ ಸಂಬಂಧವುಳ್ಳವರಾಗಿದ್ದುದರಿಂದ ನಾನು ಹೋಗಿ ತಮ್ಮನ್ನು ನೋಡಬೇಕೆಂದು ಸೇಠ್ ಅಬ್ದುಲ್ಲಾರವರ ಸಂಗಡ ನನಗೆ ಹೇಳಿ ಕಳುಹಿಸಿದರು. ನಾನು ಹೋದೆನು. ಅವರು ನನ್ನೊಂದಿಗೆ ನಿಸ್ಸಂಕೋಚವಾಗಿ ಮಾತನಾಡಿ ನನ್ನ ಪೂರ್ವ ಚರಿತ್ರೆಯನ್ನೆಲ್ಲ ಕೇಳಿ ತಿಳಿದುಕೊಂಡರು. ಅನಂತರ ಹೀಗೆ ಹೇಳಿದರು.

"ನಿಮಗೆ ವಿರೋಧವಾಗಿ ಹೇಳಲು ನನಗೆ ಏನೂ ಇಲ್ಲ. ನೀವು ಇಲ್ಲಿಯೇ ಜನಿಸಿದ ಧೂರ್ತರು ಒಬ್ಬರಾಗಿರಬಹುದೆಂದು ನನಗೆ ಭಯ ಇದ್ದಿತು. ನಿಮ್ಮ ಅರ್ಜಿಯ ಜತೆಯಲ್ಲಿ ಮೂಲ ಪ್ರಮಾಣ ಪತ್ರವನ್ನು

ನೀವು ಕಳುಹಿಸದೆ ಇದ್ದುದರಿಂದ ನನ್ನ ಸಂಶಯ ಇನ್ನೂ ದೃಢವಾಯಿತು. ನಮ್ಮದಲ್ಲದ ಪ್ರಮಾಣ ಪತ್ರಗಳನ್ನು ಉಪಯೋಗಿಸಿಕೊಂಡಿರುವವರೂ ಇದ್ದಾರೆ. ನೀವು ಐರೋಪ್ಯ ವರ್ತಕರಿಂದ ತೆಗೆದುಕೊಂಡಿರುವ ಯೋಗ್ಯತಾ ಪತ್ರಗಳಿಗೆ ನಾನು ಬೆಲೆ ಕೊಡುವುದಿಲ್ಲ. ನಿಮ್ಮ ವಿಷಯ ಅವರಿಗೇನು ಗೊತ್ತು ? ಎಷ್ಟು ದಿನಗಳಿಂದ ಅವರು ನಿಮ್ಮನ್ನು ಬಲ್ಲರು ?"

ನಾನು ಹೇಳಿದೆ "ಇಲ್ಲಿರುವವರೆಲ್ಲ ನನಗೆ ಹೊಸಬರೇ. ಸೇಠ್ ಅಬ್ದುಲ್ಲಾ ಸಹ ಇಲ್ಲಿಯೇ ಮೊದಲು ನನಗೆ ಪರಿಚಯವಾದುದು."

"ಆದರೆ ಅವರು ನಿಮ್ಮ ಸ್ಥಳಕ್ಕೆ ಸೇರಿದವರೆಂದು ನೀವು ಹೇಳುತ್ತೀರಿ. ನಿಮ್ಮ ತಂದೆ ಅಲ್ಲಿ ಮುಖ್ಯಮಂತ್ರಿಯಾಗಿದ್ದರೆ, ನಿಮ್ಮ ಕುಟುಂಬದವರು, ಸೇಠ್ ಅಬ್ದುಲ್ಲಾರಿಗೆ ತಿಳಿದೇ ಇರುತ್ತಾರೆ. ನೀವು ಅವರಿಂದ ಶಿಫಾರಸು ಪತ್ರವನ್ನು ತಂದರೆ ನನಗೆ ಯಾವ ಅಭ್ಯಂತರವೂ ಇರುವುದಿಲ್ಲ. ಆಗ, ನಿಮ್ಮ ಅರ್ಜಿಯನ್ನು ವಿರೋಧಿಸಲು ನನಗೆ ಸಾಧ್ಯವಿಲ್ಲವೆಂದು ನಾನು ಸಂತೋಷದಿಂದ ವಕೀಲ ಸಭೆಗೆ ತಿಳಿಸಿಬಿಡುತ್ತೇನೆ."

ಅವರ ಮಾತು ನನ್ನನ್ನು ರೇಗಿಸಿತು. ಆದರೆ ನಾನು ಕೋಪವನ್ನು ತಡೆದುಕೊಂಡೆನು. "ದಾದಾ ಅಬ್ದುಲ್ಲಾರವರ ಶಿಫಾರಸು ಪತ್ರವನ್ನು ತಂದಿದ್ದರೆ, ಅದನ್ನೂ ತಿರಸ್ಕರಿಸುತ್ತಿದ್ದರು. ಆಗ ಐರೋಪ್ಯರ ಶಿಫಾರಸು ಪತ್ರಗಳನ್ನು ಕೇಳುತ್ತಿದ್ದರು. ವಕೀಲನಾಗಿ ನನ್ನನ್ನು ಸೇರಿಸಿಕೊಳ್ಳುವುದಕ್ಕೂ ನನ್ನ ಜನನ, ಪೂರ್ವಚರಿತ್ರೆಗೂ ಏನು ಸಂಬಂಧ ? ನಾನು ದರಿದ್ರರ ಮಗನಾಗಿರಲಿ, ಕೆಟ್ಟವರ ಮಗನೇ ಆಗಿರಲಿ ಅದನ್ನು ನನಗೆ ವಿರೋಧವಾಗಿ ಉಪಯೋಗಿಸಲು ಹೇಗೆ ಸಾಧ್ಯ ?" ಎಂದು ನನ್ನಲ್ಲಿಯೇ ಕೇಳಿಕೊಂಡೆನು. ಆದರೆ ತಡೆದುಕೊಂಡು ಹೀಗೆ ಹೇಳಿದೆನು.

"ವಕೀಲ ಸಭೆಗೆ ಇವನ್ನೆಲ್ಲ ಕೇಳಲು ಅಧಿಕಾರವಿದೆಯೆಂದು ನಾನು ಒಪ್ಪುವುದಿಲ್ಲ. ಆದರೆ ನಿಮ್ಮ ಇಷ್ಟದಂತೆ ದಾದಾ ಅಬ್ದುಲ್ಲಾರವರ ಶಿಫಾರಸು ಪತ್ರವನ್ನು ತಂದುಕೊಡಲು ಸಿದ್ಧನಾಗಿದ್ದೇನೆ."

ಸೇಠ್ ಅಬ್ದುಲ್ಲಾರವರ ಶಿಫಾರಸು ಪತ್ರವನ್ನು ಸಿದ್ಧಪಡಿಸಿ ವಕೀಲ ಸಭೆಯ ವಕೀಲರಿಗೆ ಕೊಟ್ಟದ್ದಾಯಿತು. ಅವರು "ನನ್ನ ಒಪ್ಪಿಗೆಯಿದೆ" ಎಂದು ಹೇಳಿದರು. ಆದರೂ ವಕೀಲ ಸಂಘ ಒಪ್ಪಲಿಲ್ಲ. ಅವರು

ಸುಪ್ರೀಂ ಕೋರ್ಟಿನಲ್ಲಿ ನನ್ನ ಅರ್ಜಿಯನ್ನು ವಿರೋಧಿಸಿದರು. ಸುಪ್ರೀಂ ಕೋರ್ಟಿನಲ್ಲಿ, ಮಿ. ಎಸ್ಕೊಂಬ್‌ರವರನ್ನು ಪ್ರತ್ಯುತ್ತರಕ್ಕಾಗಿ ಸಹ ಕೇಳದೆ ಮುಖ್ಯ ನ್ಯಾಯಾಧೀಶರು, ಈ ಅಭಿಪ್ರಾಯದ ತೀರ್ಮಾನ ಕೊಟ್ಟರು.

"ಅರ್ಜಿದಾರರು ಮೂಲ ಪ್ರಮಾಣ ಪತ್ರವನ್ನು ಕೊಟ್ಟಿಲ್ಲ ಎಂಬ ಆಕ್ಷೇಪಣೆಯಲ್ಲಿ ತಿರುಳಿಲ್ಲ. ಅವರು ಸುಳ್ಳು ಪ್ರಮಾಣ ಪತ್ರವನ್ನು ಕೊಟ್ಟಿದ್ದರೆ ಅದು ರುಜುವಾತು ಆದರೆ ಅವರ ಹೆಸರನ್ನು ವಕೀಲರ ಪಟ್ಟಿಯಿಂದ ತೆಗೆದು ಹಾಕಬಹುದು. ಕಾನೂನಿಗೆ ಬಿಳಿಯವರು ಬಣ್ಣದವರು ಎಂಬ ಭೇದವಿಲ್ಲ. ಮಿ. ಗಾಂಧೀ ಅಡ್ವೊಕೇಟ್ ಆಗಿ ಅಂಗೀಕೃತ ವಾಗುವುದನ್ನು ತಡೆಯಲು ಕೋರ್ಟಿಗೆ ಅಧಿಕಾರವಿಲ್ಲ. ನಾವು ಅವರ ಅರ್ಜಿಯನ್ನು ಅಂಗೀಕರಿಸಿದ್ದೇವೆ. ಮಿ. ಗಾಂಧೀ ನೀವು ಈಗ ಪ್ರಮಾಣ ವಚನವನ್ನು ಸ್ವೀಕರಿಸಿ."

ನಾನು ಎದ್ದು ನಿಂತು, ರಿಜಿಸ್ಟ್ರಾರ್‌ರವರ ಮುಂದೆ ಪ್ರಮಾಣ ವಚನ ವನ್ನು ತೆಗೆದುಕೊಂಡೆನು. ನನ್ನ ಪ್ರಮಾಣವಚನವಾದ ಕೂಡಲೇ ಶ್ರೇಷ್ಠ ನ್ಯಾಯಾಧೀಶರು ಹೇಳಿದರು :

"ಮಿ. ಗಾಂಧೀ, ಈಗ ನೀವು ನಿಮ್ಮ ರುಮಾಲನ್ನು ತೆಗೆಯಬೇಕು. ವಕೀಲರು ಹಾಕಿಕೊಳ್ಳಬೇಕಾದ ಉಡುಪಿಗೆ ಸಂಬಂಧಪಟ್ಟ ಕೋರ್ಟ್ ನಿಯಮಗಳನ್ನು ನೀವು ಅನುಸರಿಸಬೇಕು."

ನನ್ನ ಮಿತಿಯನ್ನು ನಾನು ಅರಿತೆನು. ಜಿಲ್ಲಾ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ರುಮಾಲನ್ನು ತೆಗೆಯುವುದಿಲ್ಲವೆಂದು ನಾನು ಸ್ಪಷ್ಟಪಡಿಸಿ ದ್ದರೂ, ಇಲ್ಲಿ ಸುಪ್ರೀಂ ಕೋರ್ಟಿನ ಅಜ್ಞೆಗನುಸಾರವಾಗಿ ತೆಗೆದಿಟ್ಟೆನು. ಸುಪ್ರೀಂಕೋರ್ಟಿನ ಆಜ್ಞೆಯನ್ನೂ ನಾನು ವಿರೋಧಿಸಿದ್ದರೆ ಅದು ನ್ಯಾಯ ವಾಗುತ್ತಿರಲಿಲ್ಲ ಎಂದಲ್ಲ. ಆದರೆ ಇನ್ನೂ ದೊಡ್ಡ ಹೋರಾಟವನ್ನು ನಡೆಸಲು ನನ್ನ ಶಕ್ತಿಯನ್ನು ಉಳಿಸಿಕೊಳ್ಳುವುದು ನನಗೆ ಬೇಕಾಗಿದ್ದಿತು. "ರುಮಾಲನ್ನು ಧರಿಸಿಯೇ ತೀರುತ್ತೇನೆ" ಎಂದು ಹೋರಾಡುವುದಕ್ಕಾಗಿಯೇ ನನ್ನ ಬುದ್ಧಿಯ ನ್ನೆಲ್ಲ ವೆಚ್ಚಮಾಡಿ ಬಿಡಬಾರದು. ಈ ಬುದ್ಧಿ, ಇನ್ನೂ ಹೆಚ್ಚು ಮಹತ್ವದ ಸಮಯಕ್ಕೆ ಅರ್ಹವಾಗಿದೆ, ಎನಿಸಿತು ನನಗೆ.

ಸೇಠ್ ಅಬ್ದುಲ್ಲಾ ಮತ್ತು ಇತರ ಮಿತ್ರರು, ನನ್ನ ಈ ವಿಧೇಯತೆಯನ್ನು (ಅಥವಾ ದೌರ್ಬಲ್ಯವೋ) ಒಪ್ಪಲಿಲ್ಲ. ನ್ಯಾಯಸ್ಥಾನವಲ್ಲಿ ವಕೀಲಿ ವೃತ್ತಿಯಲ್ಲಿ ತೊಡಗಿರುವಾಗ ನಾನು ರುಮಾಲು ಧರಿಸಿಕೊಂಡೇ ಇರುವ ಹಕ್ಕನ್ನು ಬಿಡಕೂಡದಾಗಿದ್ದಿತೆಂಬುದು ಅವರ ಅಭಿಪ್ರಾಯವಾಗಿದ್ದಿತು. ನಾನು ಅವರನ್ನು ಸಮಾಧಾನ ಪಡಿಸಿದೆನು. "ದೇಶಕ್ಕೆ ತಕ್ಕ ವೇಷ. ಭಾರತದಲ್ಲಿ ಇಂಗ್ಲಿಷ್ ಅಧಿಕಾರಿಯಾಗಲೀ ನ್ಯಾಯಾಧಿಪತಿಯಾಗಲೀ ನಿಮ್ಮ ರುಮಾಲನ್ನು ತೆಗೆಯಿರಿ ಎಂದು ಹೇಳಿದರೆ ಅವರ ಮಾತನ್ನು ತಿರಸ್ಕರಿಸುವುದು ನ್ಯಾಯ. ಆದರೆ ನೆಟಾಲ್‌ನಲ್ಲಿ ನಾನೂ ಕೋರ್ಟಿನ ಒಬ್ಬ ಅಧಿಕಾರಿಯೇ ಆಗಿದ್ದು, ಕೋರ್ಟಿನ ಪದ್ಧತಿಗಳಿಗೆ ವಿರೋಧವಾಗಿ ನಡೆಯುವುದು ಸರಿಯಲ್ಲ."

ನಾನು ಮಿತ್ರರನ್ನು ತಕ್ಕಮಟ್ಟಿಗೆ ಸಮಾಧಾನಪಡಿಸಿದೆನು. ಆದರೆ ಒಂದು ವಿಷಯವನ್ನು ಬೇರೆ ಬೇರೆ ಪರಿಸ್ಥಿತಿಯಲ್ಲಿ ಬೇರೆ ಬೇರೆ ದೃಷ್ಟಿಕೋನದಿಂದ ನೋಡಬೇಕು ಎಂಬುದನ್ನು ಈ ಸಂದರ್ಭದಲ್ಲಿ ಅವರು ಮನಗಾಣುವಂತೆ ಮಾಡಿದೆನೆಂದು ಹೇಳಲಾರೆ. ಆದರೆ ನನ್ನ ಜೀವಮಾನವೆಲ್ಲ ನಾನು ಮಾಡಿರುವ ಸತ್ಯಾನ್ವೇಷಣೆ, ಭಿನ್ನಾಭಿಪ್ರಾಯಗಳನ್ನು ಹೊಂದಿಕೆಯಿಂದ ಏಕಮಾರ್ಗಕ್ಕೆ ತರುವ ರಾಜಿ ಕ್ರಮದ ಸೊಗಸನ್ನು ನನಗೆ ಕಲಿಸಿದೆ. ಈ ರಾಜಿಯ ಮನೋಭಾವ ಸತ್ಯಾಗ್ರಹದ ಒಂದು ಅವಶ್ಯಕ ಅನಿವಾರ್ಯ ಭಾಗ ಎಂಬುದು ನನಗೆ ಮುಂದೆ ಗೊತ್ತಾಯಿತು. ನನ್ನ ಈ ರಾಜಿ ಸ್ವಭಾವದಿಂದ ನನಗೆ ಅನೇಕ ಬಾರಿ ಪ್ರಾಣಾಪಾಯವೂ ಮಿತ್ರರ ಅಸಂತೋಷವೂ ಸಂಭವಿಸಿದೆ. ಆದರೆ ಸತ್ಯವು ವಜ್ರದಂತೆ ಕಠಿಣ ಕಮಲದಂತೆ ಕೋಮಲ.

ವಕೀಲ ಸಭೆಯ ವಿರೋಧ, ನನಗೆ ದಕ್ಷಿಣ ಆಫ್ರಿಕಾದಲ್ಲಿ ಮತ್ತಷ್ಟು ಪ್ರಚಾರವನ್ನು ಕೊಟ್ಟಿತು. ಅನೇಕ ವೃತ್ತಪತ್ರಿಕೆಗಳು ವಿರೋಧವನ್ನು ತೆಗಳಿ, ಇದಕ್ಕೆ ವಕೀಲ ಸಂಘದ ಅಸೂಯೆಯೇ ಕಾರಣವೆಂದೂ ಬರೆದವು. ಈ ಪ್ರಸಿದ್ಧಿಯಿಂದ ನನ್ನ ಕೆಲಸ ತಕ್ಕಮಟ್ಟಿಗೆ ಸುಲಭವಾಯಿತು.

೧೯

ನೆಟಾಲ್ ಇಂಡಿಯನ್ ಕಾಂಗ್ರೆಸ್

ವಕೀಲಿ ವೃತ್ತಿ, ನನ್ನ ಗೌಣ ಕಸಬು ಆಯಿತು; ಮತ್ತು ಹಾಗೆಯೇ ಉಳಿಯಿತು. ನಾನು ನೆಟಾಲಿನಲ್ಲಿ ನೆಲೆಸಿದುದು ಸಾರ್ಥಕವೆನಿಸಬೇಕಾದರೆ, ನಾನು ಸಾರ್ವಜನಿಕ ಕಾರ್ಯದಲ್ಲಿ ತನ್ಮಯನಾಗುವುದು ಆವಶ್ಯಕವಾಗಿದ್ದಿತು. ಭಾರತೀಯರ ಮತಾಧಿಕಾರವನ್ನು ಕಸಿದುಕೊಂಡ ಶಾಸನಕ್ಕೆ ವಿರೋಧವಾದ ಅರ್ಜಿಯನ್ನು ಕಳುಹಿಸಿ ಆಯಿತೆಂದು ಸುಮ್ಮನೆ ಕುಳಿತರೆ ಆಗುತ್ತಿರಲಿಲ್ಲ. ವಸಾಹತುಗಳ ಸೆಕ್ರೆಟರಿ ಆಫ್ ಸ್ಟೇಟಿನ ಮನಸ್ಸಿನ ಮೇಲೆ ಪರಿಣಾಮವನ್ನು ಉಂಟುಮಾಡಲು, ಎಡಬಿಡದೆ ಚಳುವಳಿ ನಡೆಸುವುದು ಮುಖ್ಯವಾಗಿದ್ದಿತು. ಈ ಕಾರ್ಯಸಾಧನೆಗೆ ಒಂದು ಶಾಶ್ವತ ಸಂಸ್ಥೆಯನ್ನು ಸ್ಥಾಪಿಸುವುದು ಆವಶ್ಯಕವೆಂದು ತೋರಿತು. ನಾನು ಸೇಠ್ ಅಬ್ದುಲ್ಲಾ ಮತ್ತು ಇತರ ಮಿತ್ರರೊಡನೆ ಆಲೋಚನೆ ಮಾಡಿದೆನು. ನಾವೆಲ್ಲ ಒಂದು ಶಾಶ್ವತವಾದ ಸಾರ್ವಜನಿಕ ಸಂಸ್ಥೆಯನ್ನು ಸ್ಥಾಪಿಸಬೇಕೆಂದು ನಿಶ್ಚಯಿಸಿದೆವು.

ಈ ಸಂಸ್ಥೆಗೆ ಹೆಸರನ್ನಿಡುವುದು ನನಗೆ ಬಹಳ ಕಷ್ಟವಾಯಿತು. ಅದು ಯಾವ ಪಕ್ಷಕ್ಕೂ ಸೇರದಂತೆ ಇರಬೇಕು. ಕಾಂಗ್ರೆಸ್ ಎಂಬ ಹೆಸರು ಇಂಗ್ಲೆಂಡಿನ ಸಂಪ್ರದಾಯಪ್ರೇಮಿಗಳ (ಕನ್‌ಸರ್‌ವೆಟಿವ್) ಪಕ್ಷಕ್ಕೆ ಅರುಚಿಕರವಾಗಿದ್ದಿತೆಂಬುದು ನನಗೆ ಗೊತ್ತಿದ್ದಿತು. ಆದರೂ ಕಾಂಗ್ರೆಸ್ ಭಾರತದ ಪ್ರಾಣವಾಗಿದ್ದಿತು. ಕಾಂಗ್ರೆಸ್ ಸಂಸ್ಥೆಯನ್ನು ನೆಟಾಲಿನಲ್ಲಿ ಪ್ರಸಿದ್ಧಪಡಿಸಿ ಜನಪ್ರಿಯವಾಗಿ ಮಾಡುವುದು ನನ್ನ ಆಸೆಯಾಗಿದ್ದಿತು. ಆ ಹೆಸರನ್ನು ಅಂಗೀಕರಿಸಲು ಹಿಂದೆಗೆಯುವುದು, ಹೇಡಿತನವಾಗಿ ತೋರಿತು. ಆದುದರಿಂದ ಸಂಸ್ಥೆಯನ್ನು ಕಾಂಗ್ರೆಸ್ ಎಂದು ಕರೆಯಲು ಇರುವ ಕಾರಣಗಳನ್ನೆಲ್ಲ ವಿವರಿಸಿ ಅದೇ ಹೆಸರನ್ನು ಇಡಬೇಕೆಂದು ನಾನು ಸೂಚಿಸಿದೆನು. ಹೀಗೆ ಮೇ ೨೨ನೆಯ ತಾರೀಖು "ನೆಟಾಲ್ ಇಂಡಿಯನ್ ಕಾಂಗ್ರೆಸ್" ಸಂಸ್ಥೆ ಸ್ಥಾಪನೆಯಾಯಿತು.

ಆ ದಿನ ದಾದಾ ಅಬ್ದುಲ್ಲಾರವರ ವಿಶಾಲವಾದ ಕೊಠಡಿ ಕಿಕ್ಕಿರಿದು ತುಂಬಿದ್ದಿತು. ನೆರೆದಿದ್ದವರೆಲ್ಲರ ಉತ್ಸಾಹಪೂರಿತ ಮನ್ನಣೆ, ಕಾಂಗ್ರೆಸ್ಸಿಗೆ

ದೊರೆಯಿತು. ಅದರ ಸಂವಿಧಾನ ಬಹಳ ಸರಳವಾಗಿದ್ದಿತು. ಚಂದಾ ಬಹಳ ಹೆಚ್ಚಾಗಿದ್ದಿತು. ತಿಂಗಳಿಗೆ ಐದು ಷಿಲಿಂಗ್ ಕೊಡುವವನು ಮಾತ್ರ ಸದಸ್ಯರಾಗಬಹುದಾಗಿದ್ದಿತು. ಧನಿಕರು ತಮ್ಮ ಶಕ್ತಿಯಿದ್ದಷ್ಟನ್ನು ಚಂದಾ ಹಣವಾಗಿ ಸಲ್ಲಿಸಬೇಕೆಂದು ಪ್ರೇರಿಸಿದೆವು. ಅಬ್ದುಲ್ಲಾ ಸೇಠರವರು ಪಟ್ಟಿಯಲ್ಲಿ ಮೊದಲನೆಯ ಹೆಸರಾಯಿತು. ಅವರು ತಿಂಗಳಿಗೆ ಎರಡು ಪೌಂಡು ಕೊಡಲು ಒಪ್ಪಿದರು. ಇನ್ನೂ ಇಬ್ಬರು ಸ್ನೇಹಿತರು ಅಷ್ಟೇ ಚಂದಾ ಕೊಡಲು ಒಪ್ಪಿದರು. ನಾನೂ ಸಹ ಈ ವಿಷಯದಲ್ಲಿ ಹಿಂಜರಿಯಕೂಡದೆಂದು ಯೋಚಿಸಿ ತಿಂಗಳಿಗೆ ಒಂದು ಪೌಂಡು ಚಂದಾ ಕೊಡಲು ಒಪ್ಪಿದೆನು. ನನಗೆ ಅದೇನೂ ಕಡಿಮೆ ಹಣವಾಗಿರಲಿಲ್ಲ. ನನ್ನ ಜೀವನವನ್ನು ನಡೆಸಿಕೊಳ್ಳುವುದು ನನಗೆ ಸಾಧ್ಯವಾಗುವುದಾದರೆ ಅದು ನನ್ನ ಶಕ್ತಿಗೆ ಮೀರಿದುದಲ್ಲವೆಂದು ನಾನು ಭಾವಿಸಿದೆನು. ದೇವರು ನನಗೆ ಸಹಾಯ ಮಾಡಿದನು. ಹೀಗೆ ತಿಂಗಳಿಗೆ ಒಂದು ಪೌಂಡು ಚಂದಾ ಕೊಡಲೊಪ್ಪಿದವರು ಅನೇಕ ಮಂದಿ ನಮಗೆ ದೊರಕಿದರು. ತಿಂಗಳಿಗೆ ಹತ್ತು ಷಿಲಿಂಗ್ ಕೊಡಲೊಪ್ಪಿದವರ ಸಂಖ್ಯೆ ಇನ್ನೂ ದೊಡ್ಡದಾಗಿದ್ದಿತು. ಇದರ ಜತೆಗೆ ಸದಸ್ಯರಾಗದೆ ಧಾರ್ಮಿಕ ದೃಷ್ಟಿಯಿಂದ ಹಣವನ್ನು ಕೊಟ್ಟವರೂ ಇದ್ದರು. ಅವರಿಗೆಲ್ಲ ಸಂಸ್ಥೆ ಕೃತಜ್ಞವಾಗಿದ್ದಿತು.

ಕೇಳಿದ ಮಾತ್ರಕ್ಕೆ, ಯಾರೂ ಚಂದಾ ಹಣವನ್ನು ಕೊಡುವುದಿಲ್ಲವೆಂಬುದು ನನಗೆ ಅನುಭವದಿಂದ ಗೊತ್ತಾಯಿತು. ಡರ್ಬಾನಿನಿಂದ ಹೊರಗಿದ್ದ ಸದಸ್ಯರನ್ನು ಪದೇ ಪದೇ ಹೋಗಿ ನೋಡುವುದು ಸಾಧ್ಯವಿರಲಿಲ್ಲ. ಒಂದು ಕ್ಷಣದಲ್ಲಿದ್ದ ಉತ್ಸಾಹ ಮರುಕ್ಷಣದಲ್ಲಿ ಮಾಯವಾದಂತೆ ತೋರುತ್ತಿದ್ದಿತು. ಡರ್ಬಾನಿನಲ್ಲಿದ್ದ ಸದಸ್ಯರ ಚಂದಾ ಹಣವನ್ನು ಪಡೆಯುವುದಕ್ಕೆ ಸಹ ಅವರನ್ನು ಎಡಬಿಡದೆ ಕೇಳಬೇಕಾಗಿದ್ದಿತು.

ನಾನು ಕಾರ್ಯದರ್ಶಿಯಾಗಿದ್ದುದರಿಂದ ಚಂದಾ ಹಣವನ್ನು ವಸೂಲಿ ಮಾಡುವ ಕಾರ್ಯ ನನ್ನ ಪಾಲಿಗೆ ಬಿದ್ದಿದ್ದಿತು. ಬರಬರುತ್ತಾ ನನ್ನ ಗುಮಾಸ್ತನು ದಿನವನ್ನೆಲ್ಲ ಚಂದಾ ವಸೂಲಿಗಾಗಿಯೇ ಕಳೆಯಬೇಕಾದ ಸ್ಥಿತಿ ಬಂದಿತು. ಗುಮಾಸ್ತನಿಗೆ ಆ ಕೆಲಸದಿಂದ ಬೇಸರಿಕೆಯುಂಟಾಯಿತು. ಈ ಪರಿಸ್ಥಿತಿಯನ್ನು ಸರಿಪಡಿಸಬೇಕಾದರೆ ಚಂದಾ ಹಣವನ್ನು ತಿಂಗಳ

ಬದಲು ವರುಷಕ್ಕೊಮ್ಮೆ—ಅದೂ ಖಂಡಿತವಾಗಿ ವರುಷದ ಪ್ರಾರಂಭ ದಲ್ಲಿಯೇ—ಕೊಡುವ ವ್ಯವಸ್ಥೆ ಮಾಡಬೇಕೆಂದು ನನಗೆ ತೋರಿತು. ಇದಕ್ಕಾಗಿ ನಾನು ಕಾಂಗ್ರೆಸ್ಸಿನ ಒಂದು ಸಭೆಯನ್ನು ಕರೆದೆನು. ಚಂದಾ ಹಣವನ್ನು ತಿಂಗಳಿಗೊಮ್ಮೆ ಕೊಡುವುದನ್ನು ಬಿಟ್ಟು ವರುಷಕ್ಕೊಮ್ಮೆ ಕೊಡುವುದನ್ನೂ ವಾರ್ಷಿಕ ಚಂದಾ ಮೂರು ಪೌಂಡುಗಳಿಗೆ ಕಡಿಮೆ ಇಲ್ಲದಿರಬೇಕೆಂಬುದನ್ನೂ ಎಲ್ಲರೂ ಒಪ್ಪಿದರು. ಹೀಗೆ ಹಣದ ವಸೂಲಿಯ ಕೆಲಸ ಬಹಳ ಮಟ್ಟಿಗೆ ಸುಲಭವಾಯಿತು.

ಸಾರ್ವಜನಿಕ ಕಾರ್ಯವನ್ನು ಸಾಲಮಾಡಿದ ಹಣದಿಂದ ನಡೆಸಕೂಡ ದೆಂಬುದನ್ನು ನಾನು ಪ್ರಾರಂಭದಲ್ಲಿಯೇ ಅರಿತಿದ್ದೆನು. ಜನಗಳ ವಾಗ್ದಾನ ವನ್ನು ಯಾವುದಕ್ಕೆ ಬೇಕಾದರೂ ನಂಬಬಹುದು. ಆದರೆ ದುಡ್ಡಿಗೆ ನಂಬುವುದ ಕ್ಕಾಗುವುದಿಲ್ಲ. ತಾವು ಕೊಡುವುದಾಗಿ ಒಪ್ಪಿಕೊಂಡ ಚಂದಾ ಹಣವನ್ನು ಯಾರೂ ಬೇಗ ಕೊಡುವುದು ನನ್ನ ಅನುಭವಕ್ಕೆ ಬಂದಿಲ್ಲ. ನೆಟಾಲಿನ ಭಾರತೀಯರೂ ಈ ವಿಷಯಕ್ಕೆ ಅಪವಾದವಾಗಿರಲಿಲ್ಲ. ಹಣ, ಕೈಯಲ್ಲಿದ್ದ ಹೊರತು ಯಾವ ಕೆಲಸವನ್ನೂ ಮಾಡುತ್ತಿರಲಿಲ್ಲವಾಗಿ ನೆಟಾಲ್ ಇಂಡಿಯನ್ ಕಾಂಗ್ರೆಸ್, ಎಂದಿಗೂ ಸಾಲಗಾರನಾಗಲಿಲ್ಲ.

ಸದಸ್ಯರನ್ನು ಸೇರಿಸುವುದರಲ್ಲಿ ನನ್ನ ಸಹೋದ್ಯೋಗಿಗಳು ಅಪೂರ್ವವಾದ ಉತ್ಸಾಹದಿಂದ ಕೆಲಸ ಮಾಡಿದರು. ಅವರಿಗೆ ಅಮೂಲ್ಯವಾದ ಅನುಭವ ವಾಯಿತು. ಅನೇಕ ಮಂದಿ ನಗದು ಹಣ ಕೊಟ್ಟು ಸದಸ್ಯರಾದರು. ದೂರದ ಒಳನಾಡಿನ ಹಳ್ಳಿಗಳಲ್ಲಿ ಕೆಲಸ ಮಾಡುವುದು ಕಷ್ಟವಾಗಿದ್ದಿತು. ಸಾರ್ವಜನಿಕ ಕಾರ್ಯದ ಸ್ವರೂಪ ಜನರಿಗೆ ತಿಳಿದಿರಲಿಲ್ಲ. ಆದರೂಕೂಡ ದೂರ ದೂರದ ಸ್ಥಳಗಳಿಂದ ನಮಗೆ ಆಹ್ವಾನ ಬರುತ್ತಿದ್ದಿತು. ವರ್ತಕ ಮುಖಂಡರು ಎಲ್ಲೆಡೆಯೂ ನಮ್ಮ ಆತಿಥ್ಯದ ಭಾರವನ್ನು ವಹಿಸುತ್ತಿದ್ದರು.

ಹೀಗೆ ಕೈಕೊಂಡ ಸಂಚಾರದಲ್ಲಿ ಒಂದೆಡೆ ಪರಿಸ್ಥಿತಿ ಸ್ವಲ್ಪ ಕಷ್ಟಕರ ವಾಯಿತು. ನಾವು ಹೋಗಿ ಇಳಿದುಕೊಂಡಿದ್ದ ವರ್ತಕ, ಆರು ಪೌಂಡು ಕೊಡಬೇಕೆಂದು ನಮ್ಮ ನಿರೀಕ್ಷಣೆಯಾಗಿದ್ದಿತು. ಆದರೆ ಆತ ಮೂರು ಪೌಂಡಿಗಿಂತ ಒಂದು ಕಾಸನ್ನೂ ಹೆಚ್ಚಾಗಿ ಕೊಡಲು ಒಪ್ಪಲಿಲ್ಲ. ನಾವು

ಆತನಿಂದ ಮೂರು ಪೌಂಡನ್ನು ಸ್ವೀಕರಿಸಲು ಒಪ್ಪಿದರೆ, ಇತರರೂ ಅಷ್ಟನ್ನೇ ಕೊಟ್ಟುಬಿಡುತ್ತಿದ್ದರು. ಹಣ ಕೂಡಿಸುವ ಕೆಲಸ ಕೆಟ್ಟು ಹೋಗುತ್ತಿದ್ದಿತು. ರಾತ್ರಿ ಹೊತ್ತಾಗಿದ್ದಿತು, ನಮಗೆಲ್ಲ ಹಸಿವಾಗಿದ್ದಿತು. ಆದರೆ ನಾವು ಪಡೆಯಬೇಕೆಂದು ನಿರ್ಣಯಿಸಿದ್ದ ಹಣವನ್ನು ಪಡೆಯದೆ ಊಟ ಮಾಡುವುದೆಂತ ? ಆತನನ್ನು ಒಪ್ಪಿಸಲು ಮಾಡಿದ ಪ್ರಯತ್ನವೆಲ್ಲ ವ್ಯರ್ಥವಾಯಿತು. ಆತ ವಜ್ರದಂತೆ ಕಠಿಣವಾಗಿದ್ದನು. ಊರಿನ ಇತರ ವರ್ತಕರೆಲ್ಲ ಆತನಿಗೆ ಹೇಳಿದರು. ನಾವೂ ಸಹ ಅವನಂತೆಯೇ ಸ್ವಲ್ಪವೂ ಸೋಲದೆ ಎಲ್ಲರೂ ರಾತ್ರಿಯೆಲ್ಲ ಕುಳಿತೇ ಬಿಟ್ಟೆವು. ನನ್ನ ಅನೇಕ ಸಹೋದ್ಯೋಗಿಗಳು ಕೋಪೋದ್ರಿಕ್ತರಾಗಿದ್ದರು. ಆದರೆ ಯಾರೂ ತಾಳ್ಮೆಗೆಡಲಿಲ್ಲ. ಕಡೆಗೆ ಇನ್ನೇನು ಬೆಳಗಾಯಿತು ಎನ್ನುವಾಗ ಆತ ಸೋತು ಆರು ಪೌಂಡುಗಳನ್ನು ಕೊಟ್ಟು ನಮಗೆ ಔತಣವನ್ನು ಮಾಡಿಸಿದನು. ಇದು ನಡೆದುದು ಟೋಂಗಾಟಿನಲ್ಲಿ. ಆದರೆ ಅದರ ಪರಿಣಾಮ ಉತ್ತರತೀರದ ಸ್ಟ್ಯಾಂಗರ್ ಮತ್ತು ಒಳನಾಡಿನ ಚಾರ್ಲ್ಸ್‌ಟೌನ್‌ವರೆಗೆ ಹಬ್ಬಿತು. ಇದರಿಂದ ನಮ್ಮ ನಿಧಿವಸೂಲಿ ಕೆಲಸ ಜಾಗ್ರತೆಯಾಯಿತು.

ಆದರೆ ಹಣ ವಸೂಲಿ ಒಂದೇ ನಾವು ಮಾಡಬೇಕಾಗಿದ್ದ ಕಾರ್ಯವಾಗಿರಲಿಲ್ಲ. ವಾಸ್ತವವಾಗಿ ಆವಶ್ಯಕವೆಷ್ಟೋ ಅದಕ್ಕಿಂತ ಹೆಚ್ಚು ಹಣವನ್ನು ಹತ್ತಿರ ಇಟ್ಟುಕೊಳ್ಳಬಾರದೆಂಬ ತತ್ವವನ್ನು ನಾನು ಹಿಂದೆಯೇ ಕಲಿತುಕೊಂಡಿದ್ದೆನು.

ತಿಂಗಳಿಗೆ ಒಂದು ಸಲ, ಆವಶ್ಯಕವಾದರೆ ವಾರಕ್ಕೆ ಒಂದು ಸಲ ಸಭೆ ಸೇರುತ್ತಿದ್ದೆವು. ಹಿಂದಿನ ಸಭೆಯ ನಡವಳಿಕೆಗಳು ಓದಲ್ಪಡುತ್ತಿದ್ದವು. ಎಲ್ಲ ಪ್ರಶ್ನೆಗಳ ಚರ್ಚೆಯೂ ನಡೆಯುತ್ತಿದ್ದಿತು. ಸಾರ್ವಜನಿಕ ಚರ್ಚೆಯಲ್ಲಿ ಭಾಗವಹಿಸುವುದೂ ವಿಷಯಗಳನ್ನು ಕುರಿತು ಸಂಕ್ಷೇಪವಾಗಿ ಮಾತನಾಡುವುದೂ ಜನರಿಗೆ ಅಭ್ಯಾಸವಾಗಿರಲಿಲ್ಲ. ಎದ್ದು ನಿಂತು ಮಾತನಾಡಲು ಪ್ರತಿಯೊಬ್ಬನೂ ಹಿಂದೆಗೆಯುತ್ತಿದ್ದನು. ಸಭೆಯಲ್ಲಿ ನಡೆಯಬೇಕಾದ ಕ್ರಮವನ್ನು ನಾನು ಅವರಿಗೆ ವಿವರಿಸಿ ಹೇಳುತ್ತಿದ್ದೆನು. ಅವರದರ ಅಪ್ರಗಳಂತೆ ನಡೆಯುತ್ತಿದ್ದರು. ಇದೇ ಒಂದು ಶಿಕ್ಷಣವೆಂದು ಅವರು ತೋರಿತು. ಹತ್ತು ಜನರ ಎದುರಿಗೆ ಅದುವರೆಗೆ ಎಂದೂ ಮಾತುಗಳನ್ನೇ

ಆಗಿದ್ದ ಅನೇಕರು, ಸಾರ್ವಜನಿಕ ವಿಷಯಗಳನ್ನು ಕುರಿತು ಬಹಿರಂಗವಾಗಿ ಯೋಚಿಸುವ ಮತ್ತು ಮಾತನಾಡುವ ಅಭ್ಯಾಸವನ್ನು ಮಾಡಿಕೊಂಡರು.

ಸಾರ್ವಜನಿಕ ಕಾರ್ಯಗಳಲ್ಲಿ ಸಣ್ಣ ಸಣ್ಣ ಖರ್ಚುಗಳೇ ಬಹಳ ಹಣವನ್ನು ನುಂಗಿಬಿಡುವುವೆಂಬುದು ನನಗೆ ತಿಳಿದಿದ್ದುದರಿಂದ ಪ್ರಾರಂಭದಲ್ಲಿ ಪಾವತಿ ಪುಸ್ತಕಗಳನ್ನು ಸಹ ಅಚ್ಚು ಮಾಡಿಸಬಾರದೆಂದು ನಾನು ನಿರ್ಧರಿಸಿದ್ದೆನು. ನನ್ನ ಆಫೀಸಿನಲ್ಲಿ ಒಂದು ಚಕ್ರಲೇಖಕ (ಸೈಕ್ಲೋಸ್ಟೈಲ್) ಯಂತ್ರವಿದ್ದಿತು. ಅದರಲ್ಲಿ ನಾನು ಪಾವತಿ ಪುಸ್ತಕಗಳ ಮತ್ತು ವರದಿಗಳ ನಕಲನ್ನು ಮಾಡುತ್ತಿದ್ದೆನು. ಕಾಂಗ್ರೆಸ್ ಭಂಡಾರದಲ್ಲಿ ಹಣ ಭರ್ತಿಯಾಗಿ, ಸದಸ್ಯರ ಸಂಖ್ಯೆಯೂ ಕೆಲಸವೂ ಹೆಚ್ಚಾಗಿ ಬೆಳೆದನಂತರವೇ, ಅಂತಹವುಗಳನ್ನೆಲ್ಲ ನಾನು ಅಚ್ಚು ಮಾಡಿಸಲು ಮೊದಲು ಮಾಡಿದುದು. ಪ್ರತಿಯೊಂದು ಸಂಸ್ಥೆಗೂ ಇಂತಹ ಮಿತವ್ಯಯ ಆವಶ್ಯಕ. ಆದರೆ ಇಂತಹ ಹಿಡಿತವನ್ನು ಅವುಗಳಲ್ಲಿ ಅನುಸರಿಸುತ್ತಿಲ್ಲವೆಂಬುದು ನನಗೆ ಗೊತ್ತು. ಆದುದರಿಂದ ನಾನು ಸಣ್ಣದಾಗಿ ಹುಟ್ಟಿ ಮುಂದೆ ದೊಡ್ಡದಾಗಿ ಬೆಳೆದ ಒಂದು ಸಂಸ್ಥೆಗೆ ಸಂಬಂಧಪಟ್ಟ ಈ ಸಣ್ಣ ವಿಷಯಗಳನ್ನು ಕುರಿತು ಬರೆಯುವುದು ಯುಕ್ತವೆಂದು ಯೋಚಿಸಿದ್ದೇನೆ.

ತಾವು ಕೊಟ್ಟ ಹಣಕ್ಕೆ ಪಾವತಿಯನ್ನು ಪಡೆಯುವುದು ಜನರ ಲಕ್ಷ್ಯದಲ್ಲಿ ಬರುತ್ತಲೇ ಇರಲಿಲ್ಲ. ಆದರೂ ಪಾವತಿಗಳನ್ನು ಕೊಡಬೇಕೆಂದು ನಾವು ಕಟ್ಟುಮಾಡಿದ್ದೆವು. ಪ್ರತಿಯೊಂದು ಕಾಸಿಗೂ ಸರಿಯಾದ ಲೆಕ್ಕವಿದ್ದಿತು. ಇಂದೂ ಕೂಡ ನೆಟಾಲ್ ಇಂಡಿಯನ್ ಕಾಂಗ್ರೆಸ್ಸಿನ ೧೮೯೪ನೆಯ ಇಸವಿಯ ಲೆಕ್ಕಪತ್ರ ಪುಸ್ತಕಗಳು ಅಚ್ಚಳಿಯದೆ ಪೂರ್ಣವಾಗಿ ಸಿಕ್ಕುತ್ತವೆ ಎಂದು ಹೇಳಬಲ್ಲೆನು. ಸರಿಯಾದ ಲೆಕ್ಕಪತ್ರಗಳೇ ಯೋಗ್ಯವಾದ ಸಂಸ್ಥೆಯ ಲಕ್ಷಣ. ಅವು ಇಲ್ಲದಿದ್ದರೆ ಅಪಕೀರ್ತಿಗೆ ಈಡಾಗುತ್ತವೆ. ಲೆಕ್ಕಪತ್ರಗಳನ್ನು ಸರಿಯಾಗಿ ಇಡದಿದ್ದರೆ, ಸತ್ಯವನ್ನು ಅದರ ಪರಿಶುದ್ಧ ರೂಪದಲ್ಲಿ ಅನುಸರಿಸಲು ಸಾಧ್ಯವಿಲ್ಲ.

ಕಾಂಗ್ರೆಸ್ ಕೈಕೊಂಡ ಮತ್ತೊಂದು ಕಾರ್ಯ, ಆಫ್ರಿಕದಲ್ಲಿಯೇ ಹುಟ್ಟಿ ಬೆಳೆದ ವಿದ್ಯಾವಂತ ಭಾರತೀಯರ ಸೇವೆ. "ವಸಾಹತಿನಲ್ಲಿ

ಜನಿಸಿದ ಭಾರತೀಯ ವಿದ್ಯಾಸಂಸ್ಥೆ” ಎಂಬುದು ಕಾಂಗ್ರೆಸ್ಸಿನ ಪೋಷಣೆಯಲ್ಲಿ ಸ್ಥಾಪಿತವಾಯಿತು. ಅದರ ಸದಸ್ಯರಲ್ಲಿ ಬಹುಪಾಲು ಅವಿದ್ಯಾವಂತ ತರುಣರೇ ಆಗಿದ್ದರು. ಅವರು ಒಂದು ನಾಮಮಾತ್ರದ ಚಂದಾ ಹಣವನ್ನು ಕೊಡಬೇಕಾಗಿದ್ದಿತು. ಆವರ ಆವಶ್ಯಕತೆಗಳನ್ನೂ ಕೊರತೆಗಳನ್ನೂ ವ್ಯಕ್ತಪಡಿಸುವುದಕ್ಕೂ, ಅವರಲ್ಲಿ ಆಲೋಚನಾ ಶಕ್ತಿಯನ್ನು ಚೇತನಗೊಳಿಸುವುದಕ್ಕೂ, ಭಾರತೀಯ ವ್ಯಾಪಾರಿಗಳೊಂದಿಗೆ ಅವರಿಗೆ ಸಂಪರ್ಕವನ್ನು ಉಂಟುಮಾಡುವುದಕ್ಕೂ, ಅವರಿಗೆ ಜನ ಸೇವೆಯ ಅವಕಾಶವನ್ನು ಕಲ್ಪಿಸಿ ಕೊಡುವುದಕ್ಕೂ, ಈ ಸಂಸ್ಥೆ ಸಹಾಯಕವಾಗಿದ್ದಿತು. ಅದೊಂದು ಬಗೆಯ ಚರ್ಚಾ ಕೂಟವಾಗಿದ್ದಿತು. ಸದಸ್ಯರು ಕ್ಲಿಪ್ತಕಾಲದಲ್ಲಿ ಸೇರಿ ವಿವಿಧ ವಿಷಯಗಳನ್ನು ಕುರಿತು ಚರ್ಚಿಸುತ್ತಿದ್ದರು. ಅಥವಾ ಪ್ರಬಂಧಗಳನ್ನು ಓದುತ್ತಿದ್ದರು. ಸಂಘದ ಉಪಯೋಗಕ್ಕಾಗಿ ಒಂದು ಸಣ್ಣ ಪುಸ್ತಕ ಭಂಡಾರವೂ ಸ್ಥಾಪನೆಯಾಯಿತು.

ಕಾಂಗ್ರೆಸ್ಸಿನ ಮೂರನೆಯ ಕಾರ್ಯ ಪ್ರಚಾರ ಕಾರ್ಯ. ದಕ್ಷಿಣ ಆಫ್ರಿಕಾದಲ್ಲಿಯೂ ಇಂಗ್ಲೆಂಡಿನಲ್ಲಿಯೂ ಇರುವ ಈ ಇಂಗ್ಲಿಷರಿಗೂ, ಭಾರತದಲ್ಲಿರುವ ಜನತೆಗೂ ನೆಟಾಲಿನ ನಿಜ ಸ್ಥಿತಿಯನ್ನು ತಿಳಿಸುವುದೇ ಈ ಪ್ರಚಾರದ ಗುರಿಯಾಗಿದ್ದಿತು. ಆ ಉದ್ದೇಶದಿಂದ ನಾನು ಎರಡು ಕೈಪಿಡಿಗಳನು ಬರೆದೆನು. ಮೊದಲನೆಯದು “ದಕ್ಷಿಣ ಆಫ್ರಿಕಾದಲ್ಲಿರುವ ಪ್ರತಿ ಒಬ್ಬ ಆಂಗ್ಲೇಯನಿಗೂ ಮನವಿ. ಅದರಲ್ಲಿ ನೆಟಾನಲ್ಲಿರುವ ಭಾರತೀಯರ ಸಾಮಾನ್ಯ ಪರಿಸ್ಥಿತಿಯನ್ನು ಸಾಕ್ಷ್ಯಗಳೊಂದಿಗೆ ನಿರೂಪಿಸಲಾಗಿದ್ದಿತು. ಎರಡನೆಯ ಕೈಪಿಡಿಯ ಹೆಸರು “ಭಾರತೀಯರ ಮತಾಧಿಕಾರ—ಒಂದು ಬಿನ್ನಹ.” ಅದರಲ್ಲಿ ನೆಟಾಲಿನ ಭಾರತೀಯರ ಮತಾಧಿಕಾರವನ್ನು ಕುರಿತ ಸಂಕ್ಷೇಪ ಇತಿಹಾಸ, ಅಂಕಿ ಅಂಶಗಳೊಂದಿಗೆ ವಿವರಿಸಲ್ಪಟ್ಟಿದ್ದಿತು. ಈ ಕೈಪಿಡಿಗಳ ಸಿದ್ಧತೆಗಾಗಿ ನಾನು ಬಹಳ ವ್ಯಾಸಂಗಮಾಡಿ ಶ್ರಮ ಪಟ್ಟಿದ್ದೆನು. ದೊರೆತ ಫಲ, ಶ್ರಮಕ್ಕೆ ಅರ್ಹವಾದುದಾಗಿದ್ದಿತು. ಅವು ಎಲ್ಲೆಲ್ಲಿಯೂ ಪ್ರಚಾರವಾದವು.

ಈ ಎಲ್ಲ ಕಾರ್ಯದ ಫಲವಾಗಿ, ಭಾರತೀಯರಿಗೆ ದಕ್ಷಿಣ ಆಫ್ರಿಕಾದಲ್ಲಿ ಅನೇಕ ಮಿತ್ರರಾದರು. ಭಾರತದ ಎಲ್ಲ ಪಕ್ಷಗಳ ಸಹಾನುಭೂತಿಯೂ

ಅವರಿಗೆ ದೊರಕಿತು. ಅದು ದಕ್ಷಿಣ ಆಫ್ರಿಕಾದ ಭಾರತೀಯರ ದಾರಿಯನ್ನು ತೆರವುಮಾಡಿ, ಅವರ ಎದುರಿಗೆ ಅವರು ಸಾಧಿಸಬೇಕಾದ ಸ್ಪಷ್ಟವಾದ ಕಾರ್ಯವನ್ನು ರೂಪಿಸಿ, ಮಂಡಿಸಿತು.

೨೦

ಬಾಲಸುಂದರಂ

ಶುದ್ಧ ಅಂತಃಕರಣದಿಂದಲೂ ಮನಃಪೂರ್ವಕವಾಗಿಯೂ ಮನುಷ್ಯ ಏನನ್ನಾದರೂ ಬಯಸಿದರೆ ಅದು ಸಿದ್ಧಿಸುತ್ತದೆ. ನನ್ನ ಅನುಭವದಲ್ಲಿಯೇ ಈ ನಿಯಮ ಅನೇಕ ವೇಳೆ ನಿಜವಾಗಿದೆ. ಬಡವರ ಸೇವೆಯೇ ನನ್ನ ಹೃದಯದ ಪ್ರಬಲ ಇಚ್ಛೆ. ಈ ಇಚ್ಛೆಯೇ ನನ್ನನ್ನು ಯಾವಾಗಲೂ ಬಡವರೊಡನೆ ಸೇರಿಸಿ ನಾನು ಅವರೊಂದಿಗೆ ಒಂದಾಗುವಂತೆ ಮಾಡಿದೆ.

ನೆಟಾಲ್ ಇಂಡಿಯನ್ ಕಾಂಗ್ರೆಸ್‌ನಲ್ಲಿ, ಅಲ್ಲಿಯೇ ಹುಟ್ಟಿ ಬೆಳೆದ ಭಾರತೀಯರೂ ಗುಮಾಸ್ತರೂ ಸದಸ್ಯರಾಗಿದ್ದರೂ, ಸಾಮಾನ್ಯ ಅನಕ್ಷರಸ್ಥ ಕೂಲಿಗಳೂ ಕರಾರುಬದ್ಧ ಕೂಲಿಗಳೂ ಇನ್ನೂ ಅದರ ಹೊರಗೇ ಇದ್ದರು. ಕಾಂಗ್ರೆಸ್ ಇನ್ನೂ ಅವರ ಸಂಸ್ಥೆಯಾಗಿರಲಿಲ್ಲ. ಚಂದಾ ಕೊಟ್ಟು ಸದಸ್ಯರಾಗಲು ಅವರಿಗೆ ಚೈತನ್ಯವಿರಲಿಲ್ಲ. ಕಾಂಗ್ರೆಸ್ಸಿನಲ್ಲಿ ಅವರಿಗೆ ಪ್ರೇಮ ಹುಟ್ಟಬೇಕಾದರೆ, ಕಾಂಗ್ರೆಸ್ ಅವರ ಸೇವೆಯನ್ನು ಮಾಡಬೇಕು. ಇದಕ್ಕೆ ನಾನಾಗಲೀ ಕಾಂಗ್ರೆಸ್ಸಾಗಲೀ ಸಿದ್ಧವಾಗುವುದಕ್ಕೆ ಮುಂಚೆಯೇ ಒಂದು ಅವಕಾಶ ಸಿಕ್ಕಿತು. ನಾನು ವಕೀಲ ವೃತ್ತಿಯನ್ನು ಪ್ರಾರಂಭಿಸಿ ಇನ್ನೂ ೩–೪ ತಿಂಗಳು ಮಾತ್ರ ಆಗಿದ್ದಿತು. ಕಾಂಗ್ರೆಸ್ ಸಂಸ್ಥೆ ಸಹ ಇನ್ನೂ ಬಾಲ್ಯದಲ್ಲಿಯೇ ಇದ್ದಿತು. ನನ್ನ ಮುಂದೆ ಒಂದು ದಿನ ಒಬ್ಬ ತಮಿಳನು ಬಂದು ನಿಂತನು. ಅವನ ಉಡುಪು ಚಿಂದಿಯಾಗಿತ್ತು. ತಲೆಗೆ ಸುತ್ತುವ ಬಟ್ಟೆಯನ್ನು ಕೈಯಲ್ಲಿ ಹಿಡಿದುಕೊಂಡಿದ್ದನು. ಅವನ ಮುಂದಿನ ಎರಡು ಹಲ್ಲುಗಳೂ ಮುರಿದಿದ್ದವು, ಬಾಯಿನಿಂದ ರಕ್ತ ಸೋರುತ್ತಿದ್ದಿತು. ಅವನ ಯಜಮಾನ ಅವನನ್ನು ಚೆನ್ನಾಗಿ ಹೊಡೆದಿದ್ದನು. ಅವನ ವಿಷಯವನ್ನೆಲ್ಲ ನಾನು, ತಮಿಳನೇ ಆದ ನನ್ನ ಗುಮಾಸ್ತನ ಮೂಲಕ ಅರಿತೆನು. ಬಾಲಸುಂದರಂ — ಅದೇ ಆ ಕೂಲಿಯ ಹೆಸರು — ಡರ್ಬಾನಿನ ಒಬ್ಬ ಪ್ರಸಿದ್ಧ

ಐರೋಪ್ಯನ ಬಳಿ, ಕರಾರುಬದ್ಧ ಕೂಲಿಯಾಗಿ ಕೆಲಸ ಮಾಡುತ್ತಿದ್ದನು. ಅವನ ಯಜಮಾನನಿಗೆ ಅವನ ಮೇಲೆ ಕೋಪಬಂದಿತು. ಅವನು ಎಚ್ಚರ ತಪ್ಪಿ ಬಾಲಸುಂದರಂನನ್ನು ಅವನ ಎರಡು ಹಲ್ಲು ಮುರಿಯುವಂತೆ ಚೆನ್ನಾಗಿ ಹೊಡೆದನು.

ಬಾಲಸುಂದರಂನನ್ನು ನಾನು ವೈದ್ಯನ ಬಳಿಗೆ ಕಳುಹಿಸಿದೆನು. ಆ ಕಾಲದಲ್ಲಿ ಅಲ್ಲಿ ಇದ್ದವರು ಬಿಳಿಯ ವೈದ್ಯರು ಮಾತ್ರ. ಬಾಲಸುಂದರನಿಗೆ ಉಂಟಾದ ಘಾಯದ ಸ್ವರೂಪದ ವಿಷಯದಲ್ಲಿ ನನಗೆ ವೈದ್ಯರಿಂದ ಒಂದು ಸರ್ಟಿಫಿಕೇಟು ಬೇಕಾಗಿದ್ದಿತು. ಸರ್ಟಿಫಿಕೇಟು ನನಗೆ ದೊರಕಿತು. ನಾನು ಕೂಡಲೇ ಏಟುತಿಂದ ಆತನನ್ನು ಮ್ಯಾಜಿಸ್ಟ್ರೇಟರಲ್ಲಿಗೆ ಕರೆದುಕೊಂಡು ಹೋಗಿ ಅವನ ಪ್ರಮಾಣಪತ್ರಿಕೆಯನ್ನು ಮ್ಯಾಜಿಸ್ಟ್ರೇಟರಿಗೆ ಕೊಡಿಸಿದೆನು. ಮ್ಯಾಜಿಸ್ಟ್ರೇಟರಿಗೆ ಅದನ್ನು ಓದಿ ಕೋಪ ಬಂದಿತು. ಅವರು ಐರೋಪ್ಯ ಯಜಮಾನನಿಗೆ ಸಮನ್‌ಗಳನ್ನು ಕಳುಹಿಸುವಂತೆ ಅಪ್ಪಣೆ ಮಾಡಿದರು.

ಯಜಮಾನನಿಗೆ ಶಿಕ್ಷೆ ಮಾಡಿಸುವುದು ನನ್ನ ಇಷ್ಟವಾಗಿರಲಿಲ್ಲ. ಯಜಮಾನನ ಕೈಯಿಂದ ಬಾಲಸುಂದರಂನನ್ನು ಬಿಡುಗಡೆ ಮಾಡಿಸುವುದಷ್ಟೆ ನನ್ನ ಗುರಿಯಾಗಿದ್ದಿತು. ಕರಾರು ಕೂಲಿಗಳಿಗೆ ಸಂಬಂಧಿಸಿದ ಕಾನೂನನ್ನು ನಾನು ಓದಿ ನೋಡಿದೆನು. ಒಬ್ಬ ಸಾಮಾನ್ಯ ಕೂಲಿ, ಮೊದಲೇ ಸೂಚನೆ ಕೊಡದೆ ಯಜಮಾನನ ಸೇವೆಯನ್ನು ಬಿಟ್ಟು ಬಿಟ್ಟರೆ, ಯಜಮಾನ ಕೋರ್ಟಿನಲ್ಲಿ ಆತನ ಮೇಲೆ ಸಿವಿಲ್ ಸ್ವಭಾವದ ಮೊಕದ್ದಮೆ ನಡೆಸಲು ಅವಕಾಶವಿದ್ದಿತು. ಕರಾರು ಕೂಲಿಯ ವಿಷಯದಲ್ಲಿ ಕಾನೂನು ಬೇರೆ ರೀತಿಯಾಗಿದ್ದಿತು. ಯಜಮಾನ ಕೂಲಿಯ ಮೇಲೆ ಕ್ರಿಮಿನಲ್ ಕೋರ್ಟಿನಲ್ಲಿ ಮೊಕದ್ದಮೆ ಹೂಡಬಹುದಾಗಿದ್ದಿತು. ವಿಚಾರಣೆ ನಡೆಸಿ ಅವನು ತಪ್ಪಿತಸ್ಥನೆಂದು ತೀರ್ಮಾನವಾದರೆ ಕೂಲಿಯನ್ನು ಕಾರಾಗೃಹಕ್ಕೆ ಕಳುಹಿಸಬಹುದಾಗಿದ್ದಿತು. ಈ ಕಾರಣದಿಂದಲೇ ಸರ್ ವಿಲಿಯಂ ಹಂಟರರು, "ಕರಾರು ಕೂಲಿಯ ಸ್ಥಿತಿ ಗುಲಾಮಗಿರಿಯಷ್ಟೇ ಕೇಡಾದುದು" ಎಂದು ಹೇಳಿದ್ದರು. ಕರಾರು ಕೂಲಿ, ಗುಲಾಮನಂತೆಯೇ ಯಜಮಾನನ ಆಸ್ತಿ.

ಬಾಲಸುಂದರಂನನ್ನು ಬಿಡಿಸಲು ಎರಡು ದಾರಿಗಳಿದ್ದುವು. ಪ್ರೊಟೆಕ್ಟರ್ ಆಫ್ ಇನ್‌ಡೆಂಚರ್ಡ್ ಲೇಬರ್ (ಕರಾರು ಕೂಲಿ ರಕ್ಷಕ) ಇವನ ಕರಾರನ್ನು

ರದ್ದುಗೊಳಿಸುವುದು, ಅಥವಾ ಇವನನ್ನು ಬೇರೊಬ್ಬ ಯಜಮಾನನಲ್ಲಿ ಕೂಲಿಯಾಗಿ ಕಳುಹಿಸುವುದು. ಅದು ಒಂದು ಮಾರ್ಗ.

ಎರಡನೆಯದು, ಬಾಲಸುಂದರಂನ ಯಜಮಾನ ತಾನಾಗಿಯೇ ಅವನನ್ನು ಬಿಟ್ಟುಕೊಡುವುದು. ನಾನು ಬಾಲಸುಂದರಂನ ಯಜಮಾನನನು ಹೋಗಿ ನೋಡಿದೆನು. "ನಿಮ್ಮ ಮೇಲೆ ಮೊಕದ್ದಮೆ ಹೂಡಿ ನಿಮಗೆ ಶಿಕ್ಷೆ ಮಾಡಿಸುವುದು ನನ್ನ ಉದ್ದೇಶವಲ್ಲ. ನೀವು ಆತನನ್ನು ತೀವ್ರವಾಗಿ ಹೊಡೆದಿರುವುದು ನಿಮ್ಮ ಮನಸ್ಸಿಗೆ ಗೊತ್ತಾಗಿರಬೇಕು. ನೀವು ಆತನ ಕರಾರನ್ನು ಮತ್ತಾರಿಗಾದರೂ ವರ್ಗಾಯಿಸಿದರೆ ನನಗೆ ಅಷ್ಟು ಸಾಕು." ಆತ ಈ ಮಾತಿಗೆ ಕೂಡಲೇ ಒಪ್ಪಿದನು. ನಾನು ಅನಂತರ ಹೋಗಿ ಪ್ರೊಟೆಕ್ಟರ್‌ನನ್ನು ನೋಡಿದೆನು. ಬಾಲಸುಂದರಂಗೆ ಹೊಸ ಯಜಮಾನ ಸಿಕ್ಕುವುದಾದರೆ, ಅವನನ್ನು ವರ್ಗಾಯಿಸುವುದಾಗಿ ಪ್ರೊಟೆಕ್ಟರ್ ಸಹ ಒಪ್ಪಿದನು.

ಹೀಗೆ ನಾನು ಬಾಲಸುಂದರಂಗೋಸ್ಕರ ಹೊಸ ಯಜಮಾನನು ಹುಡುಕಿಕೊಂಡು ಹೋದೆನು. ಯಜಮಾನ, ಐರೋಪ್ಯ ಆಗಬೇಕಾಗಿದ್ದಿತು. ಭಾರತೀಯ ಯಜಮಾನರು ಕರಾರು ಕೂಲಿಗಳನ್ನು ಇಟ್ಟುಕೊಳ್ಳುವಂತೆ ಇರಲಿಲ್ಲ. ಆ ಕಾಲದಲ್ಲಿ ನನಗೆ ಪರಿಚಯವಿದ್ದ ಐರೋಪ್ಯರು ಬಹು ಸ್ವಲ್ಪ ಮಂದಿ ಮಾತ್ರ. ಅವರಲ್ಲಿ ಒಬ್ಬರನ್ನು ನಾನು ಹೋಗಿ ನೋಡಿದೆನು. ಅವರು ಬಾಲಸುಂದರಂನನ್ನು ಇಟ್ಟುಕೊಳ್ಳಲು ಅತಿಕೃಪೆಯಿಂದ ಒಪ್ಪಿದರು. ನಾನು ಅವರಿಗೆ ಇದಕ್ಕಾಗಿ ತುಂಬ ಕೃತಜ್ಞತೆಯನ್ನು ಅರ್ಪಿಸಿದೆನು. ನ್ಯಾಯಾಧೀಶರು ಬಾಲಸುಂದರಂನ ಯಜಮಾನ ತಪ್ಪಿತಸ್ಥನೆಂದು ತೀರ್ಮಾನಿಸಿದರು. ಆತ ಕೂಲಿಯನ್ನು ಬೇರೊಬ್ಬರಿಗೆ ವರ್ಗಾಯಿಸಲು ಒಪ್ಪಿರುವನೆಂಬುದನ್ನೂ ಉಲ್ಲೇಖಿಸಿದರು.

ಬಾಲಸುಂದರಂನ ಸಮಾಚಾರ, ಎಲ್ಲ ಕರಾರು ಕೂಲಿಗಳಿಗೂ ಗೊತ್ತಾಯಿತು. ಅವರೆಲ್ಲ ನನ್ನನ್ನು ತಮ್ಮ ಮಿತ್ರನೆಂದು ಭಾವಿಸತೊಡಗಿದರು. ಈ ಹೊಸ ಸಂಬಂಧ ನನಗೆ ಆನಂದದಾಯಕವಾಗಿದ್ದಿತು. ಕರಾರು ಕೂಲಿಗಳು, ಎಡೆಬಿಡದ ಪ್ರವಾಹದಂತೆ ನನ್ನ ಕಛೇರಿಗೆ ಬರತೊಡಗಿದರು.

ಅವರ ಕಷ್ಟಸುಖಗಳನ್ನು ತಿಳಿದುಕೊಳ್ಳಲು ನನಗೆ ಇದರಿಂದ ಅತ್ಯುತ್ತಮ ಅವಕಾಶ ದೊರೆಯಿತು.

ಬಾಲಸುಂದರಂನ ಮೊಕದ್ದಮೆಯ ಪ್ರತಿಧ್ವನಿ ದೂರದ ಮದರಾಸಿನಲ್ಲಿಯೂ ಕೇಳಿಸಿತು. ಪ್ರಾಂತದ ಬೇರೆ ಬೇರೆ ಭಾಗಗಳಿಂದ ನೆಟಾಲಿಗೆ ಕರಾರಿನ ಕೂಲಿಗಳಾಗಿ ಹೋದವರಿಗೆಲ್ಲ ತಮ್ಮ ಜತೆಗಾರರಿಂದ ಈ ಮೊಕದ್ದಮೆಯ ವಿಷಯ ತಿಳಿಯುತ್ತಿದ್ದಿತು.

ಬಾಲಸುಂದರಂನ ಮೊಕದ್ದಮೆಯಲ್ಲಿ ಅಂತಹ ವಿಶೇಷವೇನೂ ಇರಲಿಲ್ಲ. ಆದರೆ ತಮ್ಮ ಪರವಾಗಿ ಕೆಲಸಮಾಡಲು ನೆಟಾಲ್‌ನಲ್ಲಿ ವಾದ ಮಾಡುತ್ತಾರೆ, ಎಂಬುದರಿಂದಲೇ ಕರಾರು ಕೂಲಿಗಳಿಗೆ ಆನಂದವೂ ಆಶ್ಚರ್ಯವೂ ಉಂಟಾಯಿತು. ಅವರಲ್ಲಿ ಹೊಸ ಆಸೆ ಅಂಕುರಿಸಿತು.

ಬಾಲಸುಂದರನು ರುಮಾಲನ್ನು ಕೈಯಲ್ಲಿ ಹಿಡಿದುಕೊಂಡು ನನ್ನ ಆಫೀಸನ್ನು ಪ್ರವೇಶಿಸಿದನೆಂದು ಹೇಳಿದೆ. ಅದು ಒಂದು ವಿಶೇಷ ರೀತಿಯ ಕರುಣಾಜನಕ ಸ್ಥಿತಿಯಾಗಿದ್ದಿತಲ್ಲದೆ ನಮ್ಮ ಅವನತಿಯನ್ನೂ ತೋರಿಸುವುದಾಗಿದ್ದಿತು. ನನ್ನ ರುಮಾಲನ್ನು ತೆಗೆ ಎಂದು ನನಗೆ ಹೇಳಿದಾಗ, ನಡೆದ ಸಂಗತಿಯನ್ನು ನಾನು ಆಗಲೇ ಹೇಳಿದ್ದೆನೆ. ಪ್ರತಿಯೊಬ್ಬ ಕರಾರು ಕೂಲಿ ಅಥವಾ ಹೊಸದಾಗಿ ಬಂದ ಭಾರತೀಯ, ಐರೋಪ್ಯರನ್ನು ನೋಡಬೇಕಾದರೆ, ರುಮಾಲು ತಲೆಗೆ ಕಟ್ಟಿದ ಬಟ್ಟೆ ಅಥವಾ ಟೋಪಿಯನ್ನು ಕೈಯಲ್ಲಿ ಹಿಡಿದುಕೊಂಡು ಹೋಗಲೇಬೇಕೆಂಬ ಪದ್ಧತಿಯನ್ನು ಬಲಾತ್ಕಾರವಾಗಿ ಸ್ಥಾಪಿಸಿದ್ದರು. ಎರಡು ಕೈಗಳನ್ನೂ ಎತ್ತಿ ಮುಗಿಯುವುದೂ ಸಾಕಾಗುತ್ತಿರಲಿಲ್ಲ. ನನ್ನಲ್ಲಿ ಬರುವಾಗಲೂ ಅದೇ ಪದ್ಧತಿಯನ್ನು ಅನುಸರಿಸಬೇಕೆಂದು ಬಾಲಸುಂದರಂ ಭಾವಿಸಿದನು. ನನಗೆ ಆ ಬಗೆಯ ಅನುಭವವಾದುದು ಅದೇ ಮೊದಲು. ನನಗೇ ನಾಚಿಕೆಯಾಗಿ, "ತಲೆಗೆ ನಿನ್ನ ವಸ್ತ್ರ ಕಟ್ಟಿಕೊ" ಎಂದು ಹೇಳಿದೆ. ಅವನು ಸ್ವಲ್ಪ ಸಂಕೋಚದಿಂದಲೇ ಕಟ್ಟಿಕೊಂಡನು. ಆದರೆ ಅದರಿಂದ ಅವನಿಗಾದ ಆನಂದ ನನಗೆ ಗೊತ್ತಾಯಿತು.

ಜನ ತಮ್ಮ ಅಣ್ಣತಮ್ಮಂದಿರನ್ನು ಅವಮಾನಗೊಳಿಸುವುದರಿಂದ ತಮ್ಮ ಮಾನ ಹೆಚ್ಚುತ್ತದೆಂದು ಹೇಗೆ ಭಾವಿಸುತ್ತಾರೋ ಎಂಬುದು ನನಗೆ ಯಾವಾಗಲೂ ಗೂಢರಹಸ್ಯವಾಗಿಯೇ ಉಳಿದಿದೆ.

೨೧

ಮೂರು ಪೌಂಡಿನ ತೆರಿಗೆ

ಬಾಲಸುಂದರಂನ ಮೊಕದ್ದಮೆಯಿಂದ ನನಗೆ ಕರಾರು ಕೂಲಿಗಳ ಸಂಪರ್ಕ ಹೆಚ್ಚಾಯಿತು. ಅವರ ಪರಿಸ್ಥಿತಿಯನ್ನು ಕುರಿತು ಆಳವಾಗಿ ಅಭ್ಯಾಸ ಮಾಡಲು ನನ್ನನ್ನು ಪ್ರೇರಿಸಿದುದು, ಅವರ ಮೇಲೆ ಬಲವಾದ ವಿಶೇಷ ತೆರಿಗೆಯನ್ನು ವಿಧಿಸಬೇಕೆಂದು ನಡೆಯುತ್ತಿದ್ದ ಬಿಳಿಯ ಜನರ ಚಳುವಳಿಯೇ.

ಅದೇ ವರುಷ ಅಂದರೆ ೧೮೯೪ರಲ್ಲಿ ನೆಟಾಲ್ ಸರಕಾರ, ಕರಾರು ಕೂಲಿಗಳಿಗೆಲ್ಲ ೨೫ ಪೌಂಡು ತೆರಿಗೆಯನ್ನು ವಿಧಿಸಲು ಆಲೋಚಿಸಿತು. ಅದನ್ನು ನೋಡಿ ನಾನು ದಿಗ್ಭ್ರಾಂತನಾದೆನು. ಈ ವಿಷಯವನ್ನು ನಾನು ಕಾಂಗ್ರೆಸ್ಸಿನ ಮುಂದೆ ಮಂಡಿಸಿದೆನು. ಆ ತೆರಿಗೆಗೆ ಸರಿಯಾದ ರೀತಿಯಲ್ಲಿ ಪ್ರತಿಭಟನೆಯನ್ನು ವ್ಯವಸ್ಥೆಗೊಳಿಸಬೇಕೆಂದು ತೀರ್ಮಾನವಾಯಿತು.

ಮೊಟ್ಟಮೊದಲು ಈ ಕಂದಾಯದ ಮೂಲವನ್ನು ಸಂಕ್ಷೇಪವಾಗಿ ವಿವರಿಸಬೇಕು.

೧೮೬೦ರಲ್ಲಿ ನೆಟಾಲ್‌ನಲ್ಲಿದ್ದ ಐರೋಪ್ಯರಿಗೆ ಅಲ್ಲಿ ಕಬ್ಬಿನ ಬೆಳೆ ಬೆಳೆಯಲು ಒಳ್ಳೆಯ ಅವಕಾಶವಿದೆ ಎಂದು ತೋರಿತು. ಇದರಿಂದ ಅವರಿಗೆ ಕೂಲಿಗಳ ಆವಶ್ಯಕತೆಯುಂಟಾಯಿತು. ಹೊರಗಡೆಯ ಕೂಲಿಗಳಿಂದಲ್ಲದೆ ಕಬ್ಬನ್ನು ಬೆಳೆಯುವುದೂ ಸಕ್ಕರೆಯನ್ನು ತಯಾರಿಸುವುದೂ ಸಾಧ್ಯವಿರಲಿಲ್ಲ. ಆದುದರಿಂದ ನೆಟಾಲ್ ಸರಕಾರ, ಭಾರತ ಸರಕಾರದೊಂದಿಗೆ ಪತ್ರ ವ್ಯವಹಾರ ನಡೆಸಿ, ಕರಾರು ಕೂಲಿಗಳನ್ನು ನೆಟಾಲಿಗೆ ಕೊಂಡೊಯ್ಯಲು ಅನುಮತಿ ಪಡೆದರು. ಈ ಕೂಲಿಗಳು ತಾವು ನೆಟಾಲಿನಲ್ಲಿ ಐದು ವರುಷ ಕೆಲಸಮಾಡುತ್ತೇವೆಂದು ಕರಾರಿಗೆ ಸಹಿ ಹಾಕಿ ಹೋಗಬೇಕಾಗಿದ್ದಿತು. ಐದು ವರುಷಗಳನಂತರ ಅವರು ಬೇಕಾದರೆ ಅಲ್ಲಿಯೇ ನೆಲೆಸಬಹುದು.

ಭೂಮಾಲಿಕರಾಗುವ ಪೂರ್ಣ ಹಕ್ಕು ಅವರಿಗೆ ದೊರೆಯುವುದು. ಕೂಲಿಗಳಿಗೆ ಹೀಗೆ ಆಕರ್ಷಣೆಯನ್ನು ತೋರಿಸಿದ್ದರು. ಭಾರತದ ಕೂಲಿಗಳ ಕರಾರಿನ ವಾಯಿದೆ ಮುಗಿದ ಮೇಲೆ ಇವರ ಕಾರ್ಯದಿಂದ ಅಭಿವೃದ್ಧಿಗೊಂಡ ವ್ಯವಸಾಯವನ್ನು ತಾವು ಮುಂದುವರಿಸಬಹುದೆಂದು ಆಗ ಬಿಳಿಯರು ಭಾವಿಸಿದ್ದರು.

ಆದರೆ ಭಾರತೀಯರು, ಅವರಿಂದ ನಿರೀಕ್ಷಿಸಿದುದಕ್ಕಿಂತ ಹೆಚ್ಚಾಗಿ ಕೆಲಸಮಾಡಿದರು. ಅವರು ಬೇಕಾದಷ್ಟು ತರಕಾರಿಗಳನ್ನು ಬೆಳೆದರು. ಅವರು ಅನೇಕ ಬಗೆಯ ಭಾರತೀಯ ತರಕಾರಿಗಳನ್ನು ಅಲ್ಲಿ ಪ್ರಚುರಪಡಿಸಿದುದಲ್ಲದೆ, ಅಲ್ಲಿಯ ತರಕಾರಿಗಳನ್ನು ಕಡಿಮೆ ಖರ್ಚಿನಲ್ಲಿ ಬೆಳೆಯತೊಡಗಿದರು. ಆ ದೇಶದಲ್ಲಿ ಮಾವಿನ ಬೆಳೆಯನ್ನು ಮೊದಲು ಬೆಳೆಯಲು ಇವರೇ ಪ್ರಾರಂಭಿಸಿದವರು. ಅವರ ಸಾಹಸ ವ್ಯವಸಾಯದೊಂದಿಗೆ ನಿಲ್ಲಲಿಲ್ಲ. ಅವರು ವ್ಯಾಪಾರ ಕ್ಷೇತ್ರವನ್ನೂ ಪ್ರವೇಶಿಸಿದರು. ಅವರು ಜಮೀನು ಕೊಂಡು ಮನೆಗಳನ್ನು ಕಟ್ಟಿಕೊಂಡರು. ಕೂಲಿಗಳಾಗಿದ್ದವರು ಜಮೀನು ಮತ್ತು ಮನೆಗಳ ಮಾಲಿಕರಾಗಿ ತಮ್ಮ ಜೀವನ ಮಟ್ಟವನ್ನು ಹೆಚ್ಚಿಸಿಕೊಂಡರು. ಅವರ ಜತೆಯಲ್ಲಿ ಬಾರತದಿಂದ ವ್ಯಾಪಾರಿಗಳೂ ಹೋಗಿ ಅಲ್ಲಿಯೇ ನೆಲೆಸಿದರು. ದಿವಂಗತ ಅಬು ಬಾಕರ್ ಅಹಮದ್ ಸೇಠರು, ಅವರಲ್ಲಿ ಮೊದಲನೆಯವರು. ಅವರ ವ್ಯಾಪಾರೋದ್ಯಮ ಬಹು ಬೇಗ ವಿಶಾಲವಾಗಿ ವೃದ್ಧಿಗೊಂಡಿತು.

ಇದನ್ನು ನೋಡಿ ಬಿಳಿಯ ವರ್ತಕರು ಗಾಬರಿಗೊಂಡರು. ಭಾರತದ ಕೂಲಿಗಳನ್ನು ಅವರು ಮೊದಲು ಆಹ್ವಾನಿಸಿದಾಗ, ಅವರಲ್ಲಿದ್ದ ಈ ವ್ಯಾಪಾರ ಕೌಶಲವನ್ನು ಕುರಿತು ಅವರು ಯೋಚಿಸಿರಲಿಲ್ಲ. ಭಾರತೀಯರು ಸ್ವತಂತ್ರರಾಗಿ ವ್ಯವಸಾಯಗಾರರಾಗುವುದನ್ನು ಅವರು ಸಹಿಸುತ್ತಿದ್ದರು. ಆದರೆ ವ್ಯಾಪಾರದಲ್ಲಿ ಸ್ಪೈರ್ಧೆಯನ್ನು ಅವರು ಸಹಿಸಲಾರದಾದರು.

ಇದರಿಂದ ಭಾರತೀಯರ ಮೇಲೆ ವಿರೋಧದ ಬೀಜ ನೆಟ್ಟಿತು. ಅದರ ಬೆಳವಣಿಗೆಗೆ ಇನ್ನೂ ಅನೇಕ ವಿಷಯಗಳು ಸಹಕಾರಿಯಾದುವು. ಜೀವನ ಕ್ರಮದಲ್ಲಿ ನಮಗೂ ಐರೋಪ್ಯರಿಗೂ ಇರುವ ವ್ಯತ್ಯಾಸ, ನಮ್ಮ ಸರಳ ತನ, ಕಡಿಮೆ ಲಾಭದಿಂದಲೇ ನಾವು ತೃಪ್ತರಾಗುವುದು, ಆರೋಗ್ಯ

ನೈರ್ಮಲ್ಯ ನಿಯಮಗಳಿಗೆ ನಮ್ಮ ಅಲಕ್ಷ್ಯ, ನಮ್ಮ ಮನೆಗಳನ್ನೂ ಆವರಣ ವನ್ನೂ ಪರಿಶುದ್ಧವಾಗಿಯೂ ಅಚ್ಚುಕಟ್ಟಾಗಿಯೂ ಇಡುವುದರಲ್ಲಿ ನಮ್ಮ ತಾಮಸ ವೃತ್ತಿ, ನಮ್ಮ ಮನೆಗಳನ್ನು ಚೆನ್ನಾಗಿ ಮಾಡಿಕೊಳ್ಳಲು ಹಣ ವೆಚ್ಚಮಾಡದ ನಮ್ಮ ಜಿಪುಣತನ–ಇವುಗಳ ಜತೆಗೆ ನಮ್ಮಿಬ್ಬರ ಮತಭೇದ ಈ ಎಲ್ಲ ಸೇರಿ ಆ ದ್ವೇಷಾಗ್ನಿಯನ್ನು ಉಜ್ವಲ ಗೊಳಿಸಿದವು. ಈ ದ್ವೇಷ ಎರಡು ಶಾಸನಗಳ ರೂಪದಲ್ಲಿ ಹೊರಬಂದಿತು. ಭಾರತೀಯರ ಮತಾಧಿ ಕಾರವನ್ನು ಕಿತ್ತುಕೊಳ್ಳುವ ಒಂದು ಶಾಸನ; ಕರಾರು ಕೂಲಿಗಳ ಮೇಲೆ ೩ ಪೌಂಡು ತಲೆಗಂದಾಯ ಹೇರುವ ಮತ್ತೊಂದು ಶಾಸನ. ಈ ಶಾಸನ ರೂಪದ ದ್ವೇಷವಲ್ಲದೆ ಇನ್ನೂ ಅನೇಕ ಬಗೆಯ ಕಿರುಕುಳಗಳನ್ನು ಭಾರತೀಯ ರಿಗೆ ಕೊಡಲು ಆಗಲೇ ಪ್ರಾರಂಭಿಸಿದರು.

ಹಿಂದೂಸ್ಥಾನದ ಕೂಲಿಗಳನ್ನು ಬಲಾತ್ಕಾರವಾಗಿ ಅವರ ದೇಶಕ್ಕೆ ಹಿಂದಕ್ಕೆ ಕಳುಹಿಸಿ ಅವರ ಕರಾರಿನ ಉಳಿದ ಕಾಲವನ್ನು ಭಾರತದಲ್ಲಿಯೇ ಕಳೆಯುವಂತೆ ಮಾಡಬೇಕೆಂಬುದು ಮೊದಲನೆಯ ಸಲಹೆಯಾಗಿದ್ದಿತು. ಈ ಸೂಚನೆಯನ್ನು ಭಾರತ ಸರಕಾರ, ಒಪ್ಪುವ ಸಂಭವವಿರಲಿಲ್ಲ. ಆದುದ ರಿಂದ ನೆಟಾಲ್ ಸರಕಾರ ಬೇರೊಂದು ಸೂಚನೆಯನ್ನು ಮಾಡಿತು, ಅದರ ಪ್ರಕಾರ:

(೧) ಕರಾರುಬದ್ಧ ಕೂಲಿಯು, ತನ್ನ ಅವಧಿ ಮುಗಿದ ಕೂಡಲೇ ಭಾರತಕ್ಕೆ ಹಿಂದಿರುಗಬೇಕು.

(೨) ಅವನು ಪ್ರತಿ ಎರಡು ವರ್ಷಕ್ಕೊಮ್ಮೆ ಒಂದು ಹೊಸ ಕರಾರಿಗೆ ಸಹಿ ಹಾಕಬೇಕು. ಅವನ ಕೂಲಿಯೂ ಪ್ರತಿ ಸಲವೂ ಹೆಚ್ಚಿಸಲ್ಪಡುವುದು.

(೩) ಅವನು ಭಾರತಕ್ಕೆ ಹಿಂದಿರುಗಲು ಅಥವಾ ತನ್ನ ಕರಾರನ್ನು ಪುನರುಜ್ಜೀವನಗೊಳಿಸಲು ತಿರಸ್ಕರಿಸಿದರೆ, ವರುಷಕ್ಕೆ ೨೫ ಪೌಂಡು ತೆರಿಗೆ ಯನ್ನು ಕೊಡಬೇಕು.

ಸರ್ ಹೆನ್ರಿ ಬಿನ್ಸ್ ಮತ್ತು ಮಿ. ಮೇಸನ್ ಇವರಿಬ್ಬರ ಒಂದು ನಿಯೋಗ, ಈ ಕ್ರಮಗಳಿಗೆ ಭಾರತ ಸರಕಾರದ ಒಪ್ಪಿಗೆಯನ್ನು ಪಡೆಯು

ವುದಕ್ಕಾಗಿ ಭಾರತಕ್ಕೆ ಬಂದಿತು. ಆಗ ಲಾರ್ಡ್ ಎಲ್ಗಿನರು ವೈಸರಾಯ ರಾಗಿದ್ದರು. ಅವರು ೨೫ ಪೌಂಡು ತೆರಿಗೆಯನ್ನು ವಿರೋಧಿಸಿ ೩ ಪೌಂಡಿನ ತಲೆಗಂದಾಯಕ್ಕೆ ಒಪ್ಪಿಗೆಯಿತ್ತರು. ವೈಸರಾಯ್ ಮಾಡಿದುದು ದೊಡ್ಡ ತಪ್ಪು ಎಂದು ನಾನು ಆಗ ಯೋಚಿಸಿದೆನು. ಈಗಲೂ ಅದೇ ನನ್ನ ಅಭಿಪ್ರಾಯ. ತನ್ನ ಒಪ್ಪಿಗೆಯನ್ನು ಕೊಡುವುದರಲ್ಲಿ ವೈಸರಾಯರು ಭಾರತದ ಹಿತರಕ್ಷಣೆಯನ್ನು ಕುರಿತು ಸ್ವಲ್ಪವೂ ಯೋಚಿಸಲೇ ಇಲ್ಲ. ಈ ರೀತಿಯಾಗಿ ನೆಟಾಲಿನ ಫರಂಗಿಯವರಿಗೆ ಸೌಕರ್ಯವನ್ನು ಉಂಟುಮಾಡಿ ಕೊಡುವುದು ಆತನ ಕರ್ತವ್ಯದ ಭಾಗವಾಗಿರಲಿಲ್ಲ. ಮುಂದೆ ಮೂರು ನಾಲ್ಕು ವರುಷಗಳಲ್ಲಿ ಪ್ರತಿಯೊಬ್ಬ ಕರಾರು ಕೂಲಿಯೂ, ಅವನ ಹೆಂಡತಿಯೂ ಹದಿನಾರು ವರುಷದ ಮಗನೂ ೧೩ ವರುಷಕ್ಕೆ ಮೇಲ್ಪಟ್ಟ ಹೆಣ್ಣು ಮಗಳೂ, ಈ ತೆರಿಗೆಯ ಹೊರೆಯನ್ನು ಹೊರಬೇಕಾಗುತ್ತಿದ್ದಿತು. ಗಂಡಹೆಂಡಿರು, ಎರಡು ಮಕ್ಕಳು ಈ ನಾಲ್ವರ ಸಂಸಾರಕ್ಕೆ—ಅದರಲ್ಲಿಯೂ ಗಂಡನ ಸಂಬಳ, ಯಾವಾಗಲೂ ವಾರಕ್ಕೆ ೧೪ ಷಿಲಿಂಗಿಗಿಂತ ಹೆಚ್ಚಾಗಿಲ್ಲ ದಿರುವಾಗ, ವರುಷಕ್ಕೆ ೧೨ ಪೌಂಡು ತೆರಿಗೆ ವಿಧಿಸುವುದು ತೀರಾ ಅನ್ಯಾಯ ವಾಗಿದ್ದಿತು. ಇಂತಹ ಅನ್ಯಾಯ ಜಗತ್ತಿನಲ್ಲಿ ಮತ್ತೆಲ್ಲಿಯೂ ಇರಲಿಲ್ಲ.

ಈ ಕಾನೂನಿಗೆ ವಿರೋಧವಾಗಿ ನಾವು ತೀವ್ರವಾದ ಪ್ರಚಂಡ ಚಳುವಳಿ ಯನ್ನು ಹೂಡಿದೆವು. ನೆಟಾಲ್ ಕಾಂಗ್ರೆಸ್, ಈ ವಿಷಯದಲ್ಲಿ ಸುಮ್ಮನೆ ಕುಳಿತಿದ್ದರೆ ವೈಸರಾಯರು ೨೫ ಪೌಂಡು ತೆರಿಗೆಯನ್ನು ಸಹ ಒಪ್ಪಬಹುದೆಂಬ ಸಂಭವವಿದ್ದಿತು. ೨೫ ಪೌಂಡನ್ನು ೩ ಪೌಂಡಿಗೆ ಇಳಿಸಲು ಕಾರಣ ಪ್ರಾಯಶಃ ಬಹಳ ಮಟ್ಟಿಗೆ ಕಾಂಗ್ರೆಸ್ಸಿನ ಚಳುವಳಿಯೇ. ಹಾಗೆಂದು ನಾನು ಯೋಚಿಸು ವುದು ತಪ್ಪಾಗಿದ್ದರೂ ಇರಬಹುದು. ಭಾರತ ಸರಕಾರ, ಕಾಂಗ್ರೆಸ್ ವಿರೋಧಿ ಸಲಿ ಬಿಡಲಿ, ಪ್ರಾರಂಭದಿಂದಲೂ ೨೫ ಪೌಂಡು ತೆರಿಗೆಗೆ ವಿರೋಧವಾಗಿದ್ದು, ಮೂರು ಪೌಂಡಿಗೆ ಒಪ್ಪಿರಬಹುದು. ಹೇಗಾದರೂ ಭಾರತ ಸರ್ಕಾರ ಮಾಡಿ ದುದು ವಿಶ್ವಾಸಘಾತಕತನ. ಭಾರತದ ಹಿತರಕ್ಷಣೆಗಳ ವಿಶ್ವಸ್ತರಾದ ವೈಸರಾಯರು, ಇಂತಹ ಅಮಾನುಷ ತೆರಿಗೆಗೆ ಎಂದಿಗೂ ಒಪ್ಪಿಗೆಯನ್ನು ಕೊಡಕೂಡದಾಗಿದ್ದಿತು.

ತೆರಿಗೆ, ಇಪ್ಪತ್ತೈದು ಪೌಂಡಿನಿಂದ ಮೂರು ಪೌಂಡಿಗೆ ಇಳಿದುದು

ಒಂದು ಸಾಧನೆ ಎಂದು ಕಾಂಗ್ರೆಸ್ ಎಣಿಸುವಂತೆ ಇರಲಿಲ್ಲ. ತಾನು ಕರಾರು ಕೂಲಿಗಳ ಹಿತವನ್ನು ಪೂರ್ಣವಾಗಿ ರಕ್ಷಿಸಲಿಲ್ಲ ಎಂಬ ಪಶ್ಚಾತ್ತಾಪ ಕಾಂಗ್ರೆಸ್ಸಿಗೆ ಇದ್ದೇ ಇದ್ದಿತು. ಆ ತೆರಿಗೆಯನ್ನು ತೆಗೆಸಿ ಹಾಕುವುದು ಯಾವಾಗಲೂ ಅದರ ಧ್ಯೇಯವಾಗಿದ್ದಿತು. ಆದರೆ ಆ ಧ್ಯೇಯ ಸಫಲವಾಗಲು ಇಪ್ಪತ್ತು ವರುಷ ಹಿಡಿಯಿತು. ಕೊನೆಯಲ್ಲಿ ಅದು ಫಲಕಾರಿಯಾದುದು ಬರಿಯ ನೆಟಾಲ್ ಭಾರತೀಯರ ಪ್ರಯತ್ನದಿಂದ ಮಾತ್ರವಲ್ಲ, ದಕ್ಷಿಣ ಆಫ್ರಿಕಾದಲ್ಲಿದ್ದ ಎಲ್ಲ ಭಾರತೀಯರ ಪ್ರಯತ್ನದಿಂದಲೂ. ದಿವಂಗತ ಗೋಖಲೆ ಯವರ ವಿಷಯದಲ್ಲಿ, ಅಲ್ಲಿನ ಸರಕಾರ ವಚನಭ್ರಷ್ಟರಾದುದೇ ಕೊನೆಯ ಕದನಕ್ಕೆ ಕಾರಣವಾಯಿತು. ಅದರಲ್ಲಿ ಕರಾರು ಕೂಲಿಗಳು ತಮ್ಮ ಪೂರ್ಣ ಶಕ್ತಿಯನ್ನೂ ವಿನಿಯೋಗಿಸಿ ಭಾಗವಹಿಸಿದರು. ಸರಕಾರ ನಡೆಸಿದ ಗೋಲಿ ಬಾರಿನಲ್ಲಿ, ಕೆಲವರು ಪ್ರಾಣ ತೆತ್ತರು. ಹತ್ತು ಸಾವಿರಕ್ಕಿಂತ ಹೆಚ್ಚು ಜನ ಸೆರೆವಾಸವನ್ನು ಅನುಭವಿಸಿದರು.

ಆದರೆ ಕೊನೆಯಲ್ಲಿ ಸತ್ಯವೇ ಜಯಿಸಿತು. ಭಾರತೀಯರು ಅನುಭವಿಸಿದ ದುಃಖ ನೋವು, ಆ ಸತ್ಯದ ಪ್ರತ್ಯಕ್ಷ ಪ್ರಕಟನೆಯಾಯಿತು. ಆದರೆ ಉತ್ಕಟ ಶ್ರದ್ಧೆ, ಧೈರ್ಯ, ಸತತ ಆಂದೋಳನ ಇವು ಇಲ್ಲದಿದ್ದರೆ ಚಳುವಳಿಗೆ ಜಯವಾಗುತ್ತಿರಲಿಲ್ಲ. ಕಾಂಗ್ರೆಸ್ ಚಳುವಳಿಯನ್ನು ನಿಲ್ಲಿಸಿಬಿಟ್ಟಿದ್ದರೆ, ತಲೆಗಂದಾಯ ಅನಿವಾರ್ಯವೆಂದು ಅದಕ್ಕೆ ತಲೆ ಬಗ್ಗಿಸಿದ್ದಿದ್ದರೆ ಈ ಕೆಟ್ಟ ತೆರಿಗೆಯನ್ನು ಕರಾರು ಕೂಲಿಗಳು ಇಂದಿನವರೆಗೆ ಕೊಡುತ್ತಲೇ ಇರಬೇಕಾಗುತ್ತಿದ್ದಿತು. ಇದರಿಂದ ದಕ್ಷಿಣ ಆಫ್ರಿಕಾದ ಭಾರತೀಯರ ಮತ್ತು ಅಖಿಲ ಭಾರತದ ಅಪಮಾನ ಶಾಶ್ವತವಾಗಿ ನಿಂತುಹೋಗುತ್ತಿದ್ದಿತು.

೨೨

ಧರ್ಮಗಳ ತುಲನಾತ್ಮಕ ಅಧ್ಯಯನ

ನಾನು ಜನ ಸೇವೆಯಲ್ಲಿ ಹೀಗೆ ತಲ್ಲೀನನಾದುದರ ಕಾರಣ ಆತ್ಮ ದರ್ಶನದ ಅಭಿಲಾಷೆಯೇ. ಸೇವೆಯಿಂದ ಮಾತ್ರವೇ ಈಶ್ವರ ಸಾಕ್ಷಾತ್ಕಾರ ಸಾಧ್ಯವೆಂದು ನನಗೆ ತೋರಿದುದರಿಂದ, ನಾನು ಸೇವೆಯನ್ನೇ ನನ್ನ ಧರ್ಮ ವಾಗಿ ಮಾಡಿಕೊಂಡೆನು. ಸೇವೆ ಎಂದರೆ ನನ್ನ ಮಟ್ಟಿಗೆ ಭಾರತದ ಸೇವೆಯೇ.

ಅದು ಸಹಜವಾಗಿ ತಾನಾಗಿಯೇ, ನಾನು ಹುಡುಕಿಕೊಂಡು ಹೋಗದೆ ನನಗೆ ದೊರೆಯಿತು. ಸೇವೆ, ನನ್ನ ಸಹಜ ಪ್ರವೃತ್ತಿಯಾಗಿದ್ದಿತು. ನಾನು ದಕ್ಷಿಣ ಆಫ್ರಿಕಾಕ್ಕೆ ಹೋದುದು ಪ್ರವಾಸ ಸುಖವನ್ನು ಅನುಭವಿಸುವುದಕ್ಕಾಗಿ, ಕಾಥೆಯುವಾಡದ ಪಿತೂರಿಗಳನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಮತ್ತು ನನ್ನ ಜೀವನವನ್ನು ನಡೆಸುವುದಕ್ಕಾಗಿ. ಆದರೆ ನಾನು ಆಗಲೇ ಹೇಳಿರುವಂತೆ, ಈಶ್ವರನನ್ನು ಹುಡುಕುವುದರಲ್ಲಿಯೂ ಆತ್ಮದರ್ಶನದ ಪ್ರಯತ್ನದಲ್ಲಿಯೂ ತೊಡಗಿದ್ದೆನು.

ಕ್ರೈಸ್ತ ಮಿತ್ರರು ನನ್ನ ಜ್ಞಾನ ದಾಹವನ್ನು ತೀವ್ರಗೊಳಿಸಿದ್ದರು ಅದನ್ನು ತೃಪ್ತಿಪಡಿಸುವುದು ಅಸಾಧ್ಯವಾಗಿದ್ದಿತು. ನಾನು ಉದಾಸೀನನಾಗಿರಬೇಕೆಂದು ಬಯಸಿದರೂ ಅವರು ನನ್ನನ್ನು ಶಾಂತವಾಗಿ ಬಿಡುತ್ತಿರಲಿಲ್ಲ. ದಕ್ಷಿಣ ಆಫ್ರಿಕಾ ಜನರಲ್ ಮಿಷನ್ನಿನ ಮಿ. ಸ್ಪೆನ್ಸರ್ ವಾಟ್‌ಸನ್‌ರು, ಡರ್ಬಾನಿನಲ್ಲಿ ನನ್ನನ್ನು ಸಂಧಿಸಿದರು. ನಾನು ಅವರ ಸಂಸಾರಕ್ಕೆ ಸೇರಿದವನೇ ಆದೆನು. ನಾನು ಪ್ರಿಟೋರಿಯಾದಲ್ಲಿ ಕ್ರೈಸ್ತರೊಂದಿಗೆ ಹೊಂದಿದ್ದ ಸಂಪರ್ಕ, ಅವರ ಮನಸ್ಸಿನಲ್ಲಿದ್ದಿತು. ಮಿ. ವಾಟ್‌ಸನ್‌ರ ರೀತಿಯೇ ಪೃಥಕ್ಕಾಗಿದ್ದಿತು. ಅವರು ಕ್ರೈಸ್ತ ಧರ್ಮವನ್ನು ಅಂಗೀಕರಿಸು ಎಂದು ಯಾವಾಗಲೂ ನನಗೆ ಹೇಳಿದುದು ಜ್ಞಾಪಕವಿಲ್ಲ. ಆದರೆ ಅವರು ತಮ್ಮ ಬಾಳನ್ನೇ ತೆರೆದ ಪುಸ್ತಕದಂತೆ ನನ್ನ ಎದುರಿಗೆ ಇಟ್ಟು, ತಮ್ಮ ಚಲನವಲನ ನಡೆನುಡಿಗಳೆಲ್ಲ, ನನ್ನ ಕಣ್ಣಿಗೆ ಸ್ಪಷ್ಟವಾಗಿ ಬೀಳುವಂತೆ ಮಾಡಿದರು. ಶ್ರೀಮತಿ ವಾಟ್‌ಸನ್ ಅತ್ಯಂತ ಮೃದು ಸ್ವಭಾವದ ಕುಶಾಗ್ರ ಬುದ್ಧಿಯ ಮಹಿಳೆಯಾಗಿದ್ದಳು. ಈ ದಂಪತಿಗಳ ರೀತಿ, ಕಾರ್ಯವಿಧಾನಗಳನ್ನು ನಾನು ಮೆಚ್ಚಿದೆನು. ನಮಗೂ ಅವರಿಗೆ ಇದ್ದ ಮೂಲಭೂತ ಅಭಿಪ್ರಾಯ ಭೇದ ನಮ್ಮಿಬ್ಬರಿಗೂ ಗೊತ್ತಾಗಿದ್ದಿತು. ಎಷ್ಟೇ ಚರ್ಚೆಮಾಡಿದರೂ ಅವುಗಳನ್ನು ಹೋಗಲಾಡಿಸುವುದು ಸಾಧ್ಯವಿರಲಿಲ್ಲ. ಆದರೆ ಉದಾರತೆ, ಸಹಿಷ್ಣುತೆ, ಸತ್ಯ ಇವು ಇದ್ದಲ್ಲಿ ಭಿನ್ನಾಭಿಪ್ರಾಯವೂ ಲಾಭದಾಯಕವಾಗುತ್ತದೆ. ಶ್ರೀ ಮತ್ತು ಶ್ರೀಮತಿ ವಾಟ್‌ಸನರ ನಮ್ರತೆ, ಉದ್ಯಮಶೀಲತೆ, ಕರ್ತವ್ಯಪರಾಯಣತೆ ಇವು ನನಗೆ ಪ್ರಿಯವಾದವು. ನಾವು ಪದೇ ಪದೇ ಸಂಧಿಸುತ್ತಿದ್ದೆವು.

ಈ ಸ್ನೇಹದಿಂದ ಧರ್ಮದಲ್ಲಿ ನನ್ನ ಶ್ರದ್ಧೆ ಸಜೀವವಾಗಿ ಉಳಿಯಿತು. ಪ್ರಿಟೋರಿಯಾದಲ್ಲಿ ನನ್ನ ಧಾರ್ಮಿಕ ವ್ಯಾಸಂಗಕ್ಕೆ ದೊರೆಯುತ್ತಿದ್ದಂತಹ ವಿರಾಮ ಈಗ ದೊರೆಯುವುದು ಅಸಾಧ್ಯವಾಗಿದ್ದಿತು. ಆದರೆ ನನಗೆ ದೊರೆತ ಕಾಲವನ್ನು ನಾನು ಸರಿಯಾಗಿ ಉಪಯೋಗಿಸಿಕೊಂಡೆನು. ನನ್ನ ಧಾರ್ಮಿಕ ಪತ್ರ ವ್ಯವಹಾರ ನಡೆದೇ ಇದ್ದಿತು. ರಾಯಚಂದ ಭಾಯಿ ನನಗೆ ಮಾರ್ಗದರ್ಶನ ಮಾಡುತ್ತಲೇ ಇದ್ದರು. ಮಿತ್ರರೊಬ್ಬರು ನರ್ಮದಾ ಶಂಕರವರು ಬರೆದ ಧರ್ಮ ವಿಚಾರ ಎಂಬ ಗ್ರಂಥವನ್ನು ಕಳುಹಿಸಿದರು. ಅದರ ಉಪೋದ್ಘಾತದಿಂದ ನನಗೆ ಬಹಳ ಪ್ರಯೋಜನವಾಯಿತು. ಕವಿಯು ಬಾಳಿದ ವಿಲಾಸಯುಕ್ತ ಜೀವನದ ವಿಷಯವನ್ನು ನಾನು ಕೇಳಿದ್ದೆನು. ಉಪೋದ್ಘಾತದಲ್ಲಿ ಅವನ ಬಾಳಿನಲ್ಲಿ ಉಂಟಾದ ಪರಿವರ್ತನೆಯನ್ನು ಓದಿ ಆಕರ್ಷಿತನಾದೆನು. ಇದರಿಂದ ಆ ಪುಸ್ತಕದಲ್ಲಿ ನನಗೆ ಆದರ ಭಾವವುಂಟಾಗಿ ಅದನ್ನು ಮೊದಲಿನಿಂದ ಕೊನೆಯವರೆಗೆ ಓದಿದೆನು. ನಾನು ಮಾಕ್ಸ್‌ಮುಲ್ಲರ್ ಬರೆದ "ಭಾರತ, ಅದು ನಮಗೆ ಏನನ್ನು ಕಲಿಸಬಲ್ಲದು ?" ಎಂಬ ಗ್ರಂಥವನ್ನೂ, ಥಿಯಾಸಾಫಿಕಲ್ ಸೊಸೈಟಿ ಪ್ರಕಟಿಸಿದ ಉಪನಿಷತ್ತುಗಳ ಭಾಷಾಂತರವನ್ನೂ ಶ್ರದ್ಧೆಯಿಂದ ವ್ಯಾಸಂಗ ಮಾಡಿದೆನು. ಇವೆಲ್ಲವುಗಳಿಂದ ಹಿಂದೂ ಧರ್ಮದಲ್ಲಿ ನನ್ನ ಆದರ ಹೆಚ್ಚಾಯಿತು. ಅದರ ಸೊಗಸು ಸೌಂದರ್ಯ ನನ್ನ ಮನಸ್ಸನ್ನು ತುಂಬಿತು. ಆದರೆ ಇದರಿಂದ ಇತರ ಧರ್ಮಗಳಲ್ಲಿ ನನಗೆ ಅನಾದರ ಉಂಟಾಗಲಿಲ್ಲ. ನಾನು ವಾಷಿಂಗ್ಟನ್ ಇರ್ವಿಂಗ್ ಬರೆದ ಮೊಹಮ್ಮದ್ ಮತ್ತು ಆತನ ಉತ್ತರಾಧಿಕಾರಿಗಳು ಎಂಬ ಪುಸ್ತಕವನ್ನೂ, ಕಾರ್ಲೈಲ್‌ನು ಬರೆದ ಮೊಹಮ್ಮದನ ಗುಣಗಾನವನ್ನೂ ಓದಿದೆನು. ಈ ಪುಸ್ತಕಗಳಿಂದ ಮೊಹಮ್ಮದನ ವಿಷಯದಲ್ಲಿ ನನಗೆ ಗೌರವ ಹೆಚ್ಚಾಯಿತು. ಜೊರತುಷ್ಟ್ರನ ವಚನಗಳು ಎಂಬ ಒಂದು ಪುಸ್ತಕವನ್ನೂ ನಾನು ಓದಿದೆನು.

ಹೀಗೆ ನಾನು ಭಿನ್ನ ಭಿನ್ನ ಧರ್ಮಗಳ ನನ್ನ ಜ್ಞಾನವನ್ನು ಹೆಚ್ಚಿಸಿಕೊಂಡೆನು. ಈ ವ್ಯಾಸಂಗದಿಂದ ನನ್ನಲ್ಲಿ ಆತ್ಮ ನಿರೀಕ್ಷಣ ಬುದ್ಧಿ ಚುರುಕಾಯಿತು. ವ್ಯಾಸಂಗದಿಂದ ಯಾವ ಯಾವ ವಿಷಯಗಳಲ್ಲಿ ನನಗೆ ಮೆಚ್ಚುಗೆಯುಂಟಾಯಿತೋ, ಅವುಗಳನ್ನೆಲ್ಲ ಆಚರಿಸುವ ಅಭ್ಯಾಸವೂ

ಸನ್ನಲ್ಲಿ ಬೆಳೆಯಿತು. ಹೀಗೆ, ಹಿಂದೂ ಯೋಗಶಾಸ್ತ್ರವನ್ನು ವ್ಯಾಸಂಗ ಮಾಡಿ ನನಗೆ ತಿಳಿದಮಟ್ಟಿಗೆ ನಾನು ಯೋಗಾಭ್ಯಾಸವನ್ನು ಪ್ರಾರಂಭಿಸಿದೆನು. ಆದರೆ ಅದರಲ್ಲಿ ಬಹು ದೂರ ಹೋಗುವುದಕ್ಕಾಗಲಿಲ್ಲ. ಭಾರತಕ್ಕೆ ಹಿಂದಿರುಗಿದ ನಂತರ ಯಾರಾದರೂ ಒಬ್ಬ ಯೋಗಪ್ರವೀಣನ ಸಹಾಯದಿಂದ ಅದನ್ನು ಮುಂದುವರಿಸಬೇಕೆಂದು ನಿಶ್ಚಯಿಸಿದ್ದೆನು. ಆ ಆಸೆ ಇನ್ನೂ ಪೂರ್ತಿಯಾಗಿಲ್ಲ.

ನಾನು ಟಾಲ್‌ಸ್ಟಾಯ್‌ರವರ ಪುಸ್ತಕಗಳ ಆಳವಾದ ವ್ಯಾಸಂಗವನ್ನೂ ಸಹ ಮಾಡಿದೆನು. ಅವರ "ಏಸುವಿನ ಬೋಧನೆ ಸಾರಾಂಶ" "ಮಾಡತಕ್ಕದೇನು ?" ಎಂಬ ಗ್ರಂಥಗಳು ನನ್ನ ಮೇಲೆ ಆಳವಾದ ಪರಿಣಾಮವನ್ನುಂಟು ಮಾಡಿದುವು. ವಿಶ್ವಪ್ರೇಮದ ಅಮಿತ ಶಕ್ತಿಯ ಸಾಧ್ಯತೆ ನನಗೆ ಹೆಚ್ಚು ಹೆಚ್ಚಾಗಿ ಗೊತ್ತಾಗ ತೊಡಗಿತು.

ಇದೇ ಸಮಯಕ್ಕೆ ನನಗೆ ಮತ್ತೊಂದು ಈಸಾಯಿ ಕುಟುಂಬದೊಡನೆ ಪರಿಚಯವಾಯಿತು. ಅವರ ಸೂಚನೆಯಂತೆ ನಾನು ಪ್ರತಿ ಭಾನುವಾರವೂ ವೆಸ್ಲಿಯನ್ ಚರ್ಚಿಗೆ ಹೋಗತೊಡಗಿದೆನು. ಆ ದಿನಗಳಲ್ಲೆಲ್ಲ ಅವರಲ್ಲಿ ಊಟಕ್ಕೆ ಹೋಗಲು ನನಗೆ ಆಹ್ವಾನವಿತ್ತಿದ್ದರು. ಚರ್ಚಿನಲ್ಲಿ ನನ್ನ ಮೇಲೆ ಹಿತವಾದ ಪ್ರಭಾವವುಂಟಾಗಲಿಲ್ಲ. ಪ್ರವಚನಗಳು ಸ್ಫೂರ್ತಿ ದಾಯಕಗಳಾಗಿರಲಿಲ್ಲ. ಮಂದಿರದಲ್ಲಿ ಸೇರುವವರಿಗೆ ಅಂತಹ ಧಾರ್ಮಿಕ ಶ್ರದ್ಧೆಯಿದ್ದಂತೆ ನನಗೆ ತೋರಲಿಲ್ಲ. ಅವರು ಭಕ್ತಿಭಾವಪೂರಿತರಾಗಿ ಕಾಣಲಿಲ್ಲ. ಅವರು ಪ್ರಾಪಂಚಿಕ ಮನೋಭಾವವುಳ್ಳವರಾಗಿ, ಮನೋರಂಜನೆಯಲ್ಲಿ ಆಸಕ್ತರಾಗಿ, ಪದ್ಧತಿಯಂತೆ ಚರ್ಚಿಗೆ ಹೋಗುತ್ತಿದ್ದರು. ಚರ್ಚಿನಲ್ಲಿ ನನಗೆ ಒಂದೊಂದು ಸಲ ನನ್ನ ಪ್ರಯತ್ನವನ್ನು ಮೀರಿ ನಿದ್ರೆ ಬಂದುಬಿಡುತ್ತಿದ್ದಿತು. ಇದರಿಂದ ನನಗೆ ನಾಚಿಕೆಯಾಗುತ್ತಿದ್ದಿತು. ಆದರೆ ನನ್ನ ಹಾಗೆಯೇ ನಿದ್ರೆ ಹೊಡೆಯುತ್ತಿದ್ದ ನನ್ನ ನೆರೆಯುವರನ್ನು ನೋಡಿ, ನನ್ನ ನಾಚಿಕೆ ಕಡಿಮೆಯಾಗುತ್ತಿದ್ದಿತು. ಹೀಗೆ ಬಹುಕಾಲ ನಡೆಯುವುದು ನನ್ನಿಂದ ಸಾಧ್ಯವಾಗಲಿಲ್ಲ. ಕೆಲವು ದಿನಗಳ ಅನಂತರ ನಾನು ಅಲ್ಲಿಗೆ ಹೋಗುವುದನ್ನು ನಿಲ್ಲಿಸಿಬಿಟ್ಟೆನು.

ನಾನು ಪ್ರತಿ ಭಾನುವಾರವೂ ಹೋಗಿ ನೋಡುತ್ತಿದ್ದ ಕುಟುಂಬ ದೊಂದಿಗೆ ನನ್ನ ಸಂಬಂಧ ಇದ್ದಕ್ಕಿದ್ದಂತೆ ಕತ್ತರಿಸಿ ಹೋಯಿತು. ವಾಸ್ತವ ವಾಗಿ ನಾನು ಇನ್ನು ಅಲ್ಲಿಗೆ ಹೋಗಕೂಡದೆಂದು ನನಗೆ ಎಚ್ಚರಿಕೆ ಕೊಡಲ್ಪಟ್ಟಿತು. ಅದು ನಡೆದುದು ಹೀಗೆ; ನಾನು ಹೋಗುತ್ತಿದ್ದ ಮನೆಯ ಯಜಮಾನಿ, ಒಳ್ಳೆಯ ಸರಳ ಸ್ವಭಾವದ ಹೆಂಗಸು. ಆದರೆ ಅವಳದು ಸ್ವಲ್ಪ ಸಂಕುಚಿತ ಬುದ್ಧಿ. ಆಗ ನಾನು ಆರ್ನಾಲ್ಡರ ಲೈಟ್ ಆಫ್ ಏಷ್ಯಾ (ಏಷ್ಯಾದ ಜ್ಯೋತಿ) ಎಂಬ ಗ್ರಂಥವನ್ನು ಮತ್ತೊಂದು ಬಾರಿ ಓದುತ್ತಿದ್ದೆನು. ಒಂದು ಸಲ ಬುದ್ಧನ ಬಾಳಿನೊಂದಿಗೆ, ಏಸುವಿನ ಬಾಳನ್ನು ಹೋಲಿಸತೊಡಗಿದೆವು. ನಾನು ಹೇಳಿದೆ: "ಬುದ್ಧನ ದಯೆ ಯನ್ನು ನೋಡಿ. ಅದು ಬರಿಯ ಮನುಷ್ಯರಷ್ಟಕ್ಕೆ ನಿಲ್ಲಲಿಲ್ಲ. ಸಕಲ ಜೀವಜಂತುಗಳನ್ನೂ ಆಲಿಂಗಿಸಿಕೊಂಡಿತು. ಆತನ ಭುಜದ ಮೇಲೆ ಆನಂದ ದಿಂದ ಆಡುತ್ತಿದ್ದ ಆಡಿನ ಮರಿಯನ್ನು ನೆನೆಸಿಕೊಂಡರೆ ನಮ್ಮ ಹೃದಯ ಪ್ರೇಮದಿಂದ ಪೂರ್ಣವಾಗುವುದಿಲ್ಲವೆ? ಜೀವವಿರುವ ಎಲ್ಲ ಪ್ರಾಣಿಗಳಲ್ಲಿಯೂ ಇಂತಹ ಪ್ರೇಮ, ಏಸುವಿನ ಬಾಳಿನಲ್ಲಿ ನಮಗೆ ಕಾಣುವುದಿಲ್ಲವಲ್ಲ" ಎಂದು ಹೇಳಿದೆ. ಈ ಹೋಲಿಕೆಯಿಂದ ಆ ಸದ್ಗೃಹಿಣಿಗೆ ದುಃಖವಾಯಿತು. ಆಕೆಯ ಭಾವನೆಗಳು ನನಗೆ ಅರ್ಥವಾದವು. ನನ್ನ ಮಾತನ್ನು ನಾನು ಅಷ್ಟಕ್ಕೇ ನಿಲ್ಲಿಸಿದೆ. ನಾವು ಊಟದ ಕೋಣೆಗೆ ಹೋದೆವು. ಆಕೆಯ ಮಗ—ಇನ್ನೂ ಐದು ವರುಷ ತುಂಬದ ಪುಟ್ಟ ಕಂದ—ಸಹ ನಮ್ಮೊಂದಿಗೆ ಇದ್ದನು. ನನಗೆ ಮಕ್ಕಳ ಜತೆಯಲ್ಲಿದ್ದರೆ ಅತ್ಯಂತ ಸಂತೋಷ. ನಾನೂ ಈ ಬಾಲಕನೂ ಅನೇಕ ದಿನಗಳಿಂದ ಸ್ನೇಹಿತರಾಗಿದ್ದೆವು. ಅವನ ತಟ್ಟೆಯಲ್ಲಿದ್ದ ಮಾಂಸದ ತುಂಡನ್ನು ಹೀನಾಯಿಸಿಯೂ ನನ್ನ ತಟ್ಟೆಯಲ್ಲಿದ್ದ ಸೇಬಿನ ಹಣ್ಣನ್ನು ಪ್ರಶಂಸಿಸಿಯೂ ನಾನು ಮಾತನಾಡಿದೆನು. ಏನೂ ಅರಿಯದ ಆ ಬಾಲಕ ಅದನ್ನು ಒಪ್ಪಿ, ತಾನೂ ಹಣ್ಣನ್ನು ಹೊಗಳತೊಡಗಿದನು.

ಆದರೆ ತಾಯಿಗೊ? ಆಕೆಗೆ ಗಾಬರಿಯಾಯಿತು.

ನಾನು ಎಚ್ಚೆತ್ತುಕೊಂಡು ಮಾತನ್ನು ನಿಲ್ಲಿಸಿ ವಿಷಯವನ್ನು ಬದ ಲಾಯಿಸಿದೆನು. ಮುಂದಿನವಾರ ನಾನು ಅವರ ಮನೆಗೆ ಸ್ವಲ್ಪ ಧೈರ್ಯ

ದಿಂದಲೇ ಪದ್ಧತಿಯಂತೆ ಹೋದೆನು. ಹೋಗುವುದನ್ನು ನಿಲ್ಲಿಸಬೇಕೆಂದು ನಾನು ಎಣಿಸಲಿಲ್ಲ. ನಿಲ್ಲಿಸುವುದು ಸರಿಯೆಂದೂ ನನಗೆ ತೋರಲಿಲ್ಲ. ಆದರೆ ಆಕೆ ನನ್ನ ಮಾರ್ಗವನ್ನು ಸುಲಭ ಮಾಡಿದರು.

"ಗಾಂಧೀ, ನಿಮ್ಮ ಸಹವಾಸದಿಂದ ನನ್ನ ಮಗನಿಗೆ ಏನೂ ಒಳ್ಳೆಯದಾಗಲಿಲ್ಲವೆಂದು ನಾನು ಹೇಳಿದರೆ ನೀವು ತಪ್ಪು ತಿಳಿದುಕೊಳ್ಳಬಾರದು. ಆತ ನಿತ್ಯ ಮಾಂಸವನ್ನು ತಿನ್ನಲು ಹಿಂದೆಗೆಯುತ್ತಾನೆ. ನಿಮ್ಮ ವಾದವನ್ನು ನನಗೆ ಜ್ಞಾಪಿಸಿ, ಹಣ್ಣನ್ನು ಕೇಳುತ್ತಾನೆ. ಇದನ್ನು ಸಹಿಸಲು ಸಾಧ್ಯವಿಲ್ಲ. ಅವನು ಮಾಂಸವನ್ನು ಬಿಟ್ಟರೆ ಕಾಯಿಲೆ ಬೀಳದಿದ್ದರೂ ನಿಶ್ಯಕ್ತನಾಗುವುದು ಖಂಡಿತ. ನಾನು ಅದನ್ನು ಹೇಗೆ ಸಹಿಸಲಿ ? ಇಲ್ಲಿಂದ ಮುಂದೆ ನಿಮ್ಮ ಚರ್ಚೆ, ದೊಡ್ಡವರಾದ ನಮ್ಮೊಂದಿಗೆ ಮಾತ್ರ ಇರಲಿ. ಅವುಗಳಿಂದ ಮಕ್ಕಳ ಮೇಲೆ ಕೆಟ್ಟ ಪರಿಣಾಮವಾಗುವುದು ನಿಶ್ಚಯ" ಎಂದು ಆಕೆ ಹೇಳಿದಳು.

ನಾನು ಹೀಗೆ ಪ್ರತ್ಯುತ್ತರವಿತ್ತೆನು : "ಶ್ರೀಮತಿಯವರೆ, ನನಗೆ ದುಃಖವಾಗಿದೆ. ನನಗೂ ಮಕ್ಕಳಿರುವುದರಿಂದ ನಿಮ್ಮ ಚಿಂತೆ ನನಗೆ ಅರ್ಥವಾಗುತ್ತದೆ. ಈ ಅಪ್ರಿಯ ಪರಿಸ್ಥಿತಿಯನ್ನು ನಾವು ಬಹು ಸುಲಭವಾಗಿ ಕೊನೆಗಾಣಿಸಬಹುದು. ನಾನು ಏನು ಹೇಳುತ್ತೇನೆಯೋ ಅದಕ್ಕಿಂತ ಹೆಚ್ಚಾಗಿ ನಾನು ಏನನ್ನು ತಿನ್ನುತ್ತೇನೆ ಎಂಬುದರಿಂದ ನಿಮ್ಮ ಮಗನ ಮೇಲೆ ಹೆಚ್ಚು ಪರಿಣಾಮವುಂಟಾಗುವುದು ನಿಶ್ಚಯ ಆದುದರಿಂದ ನಾನು ಇಲ್ಲಿಗೆ ಬರುವುದನ್ನು ನಿಲ್ಲಿಸುವುದೇ ಉತ್ತಮ ಮಾರ್ಗ, ಇದರಿಂದ ನಮ್ಮ ಮೈತ್ರಿಗೇನೂ ಕುಂದಕ ಉಂಟಾಗಬೇಕಾದುದಿಲ್ಲ."

ಆಕೆ ಸಮಾಧಾನದಿಂದ 'ನಿಮಗೆ ಕೃತಜ್ಞಳಾಗಿದ್ದೇನೆ" ಎಂದಳು.

೨೩

ಗೃಹಸ್ಥನಾಗಿ

ಸಂಸಾರವನ್ನು ಹೂಡುವುದು ನನಗೇನೂ ಹೊಸ ಅನುಭವವಾಗಿರಲಿಲ್ಲ. ಆದರೆ ನೆಟಾಲ್ಸ್‌ನಲ್ಲಿ ಹೂಡಿದ ಮನೆ, ನಾನು ಬೊಂಬಾಯಿ ಮತ್ತು ಲಂಡನ್‌ನಲ್ಲಿ ಹೂಡಿದುದಕ್ಕಿಂತ ಭಿನ್ನವಾಗಿದ್ದಿತು. ಈಗ ವೆಚ್ಚದ ಒಂದು ಭಾಗ

ಬರಿಯ ಪ್ರತಿಷ್ಠೆಗಾಗಿಯೇ ಆಗಿದ್ದಿತು. ನೆಟಾಲ್‌ನಲ್ಲಿ ಭಾರತದ ಪ್ರತಿನಿಧಿಯಾಗಿ, ಭಾರತದ ಬ್ಯಾರಿಸ್ಟರ್ ಆಗಿ ನನ್ನ ಯೋಗ್ಯತೆಗೆ ತಕ್ಕಂಥ ಸಂಸಾರ ನಡೆಸುವುದು ಆವಶ್ಯಕವೆಂದು ನಾನು ಯೋಚಿಸಿದೆನು. ಆದುದರಿಂದ ಒಳ್ಳೆಯ ಸ್ಥಳದಲ್ಲಿ ಸೊಗಸಾದ ಒಂದು ಚಿಕ್ಕ ಮನೆಯನ್ನು ತೆಗೆದುಕೊಂಡೆನು. ಮನೆ ತಕ್ಕ ಕುರ್ಚಿ, ಮೇಜು ಅಲಂಕಾರಗಳಿಂದ ಸಜ್ಜಿತವಾಗಿದ್ದಿತು. ನಮ್ಮ ಆಹಾರ, ಸರಳವಾಗಿದ್ದಿತು. ಆದರೆ ನಾನು ಆಗಿಂದಾಗ್ಗೆ ಇಂಗ್ಲಿಷ್ ಮಿತ್ರರನ್ನೂ ಭಾರತೀಯ ಸಹೋದ್ಯೋಗಿಗಳನ್ನೂ ಊಟಕ್ಕೆ ಆಹ್ವಾನಿಸುತ್ತಿದ್ದುದರಿಂದ, ಊಟ ತಿಂಡಿಯ ವೆಚ್ಚ, ಯಾವಾಗಲೂ ಅಧಿಕವಾಗಿಯೇ ಇರುತ್ತಿದ್ದಿತು.

ಪ್ರತಿಯೊಂದು ಮನೆಗೂ ಒಬ್ಬ ಒಳ್ಳೆಯ ಸೇವಕ ಆವಶ್ಯಕ, ಆದರೆ ನಾನು ಯಾರನ್ನೂ ಆಳಾಗಿ ಇಟ್ಟುಕೊಳ್ಳುವುದನ್ನು ಎಂದೂ ಕಲಿಯಲೇ ಇಲ್ಲ.

ಒಬ್ಬ ಸ್ನೇಹಿತ, ನನಗೆ ಜತೆಗಾರನೂ ಸಹಾಯಕನೂ ಆಗಿದ್ದ. ಒಬ್ಬ ಅಡಿಗೆಯವನಿದ್ದ. ಅವನು ಸಂಸಾರಕ್ಕೆ ಸೇರಿದವನಾಗಿದ್ದ. ನನ್ನ ಆಫೀಸಿನ ಗುಮಾಸ್ತರೂ ಇದ್ದರು. ಅವರು ನನ್ನ ಜತೆಯಲ್ಲಿಯೇ ಇದ್ದುಕೊಂಡು ಊಟಮಾಡುತ್ತಿದ್ದರು.

ಈ ಪ್ರಯೋಗದಲ್ಲಿ ನನಗೆ ತಕ್ಕಮಟ್ಟಿಗೆ ಜಯವಾಯಿತೆಂದು ಹೇಳಬಹುದು. ಆದರೆ ಅದರಲ್ಲಿ ತಕ್ಕಷ್ಟು ಕಹಿಯಿಲ್ಲದೆ ಇರಲಿಲ್ಲ.

ನನ್ನ ಜತೆಗಾರ ಬಹಳ ಬುದ್ಧಿವಂತ. ನನ್ನ ವಿಷಯದಲ್ಲಿ ಅವನು ಪ್ರಾಮಾಣಿಕನಾಗಿರುವನೆಂದೂ ನಾನು ಯೋಚಿಸಿದ್ದೆನು, ಆದರೆ ಅದರಲ್ಲಿ ನನಗೆ ಮೋಸವಾಯಿತು. ನನ್ನ ಜತೆಯಲ್ಲಿಯೇ ಇದ್ದ ಆಫೀಸ್ ಗುಮಾಸ್ತನಲ್ಲಿ ಅವನಿಗೆ ಅಸೂಯೆಯುಂಟಾಯಿತು. ಅವನು ಗುಮಾಸ್ತನ ಮೇಲೆ ಇಲ್ಲ ಸಲ್ಲದ ಕಥೆಗಳನ್ನೆಲ್ಲ ಕಟ್ಟಿ ನನಗೆ ಹೇಳಿದುದರಿಂದ, ನಾನು ಗುಮಾಸ್ತನನ್ನು ಸಂಶಯ ದೃಷ್ಟಿಯಿಂದ ನೋಡತೊಡಗಿದೆನು. ಈ ಗುಮಾಸ್ತನದು ಬಹಳ ಸಿಟ್ಟಿನ ಸ್ವಭಾವ. ಅವನಲ್ಲಿ ನನಗೆ ಸಂಶಯ ವುಂಟಾಯಿತೆಂಬುದನ್ನು ತಿಳಿದಕೂಡಲೇ ಅವನು ಆಫೀಸನ್ನೂ ಮನೆಯನ್ನೂ ತ್ಯಜಿಸಿ ಹೋದನು. ನನಗೆ ದುಃಖವುಂಟಾಯಿತು. ಬಹುಶಃ ನಾನು ಅವನ ವಿಷಯದಲ್ಲಿ ಅನ್ಯಾಯ

ಮಾಡಿದೆ ಎಂದು ನನಗೆ ತೋರಿತು. ಅದು ಸದಾ ನನ್ನ ಮನಸ್ಸಿನಲ್ಲಿ ಕೊರೆಯುತ್ತಿದ್ದಿತು.

ಈ ಮಧ್ಯೆ, ಅಡಿಗೆಯುವನು ಕೆಲವು ದಿನ ರಜ ಹೋದನು. ಅಥವಾ ಯಾವುದೋ ಕಾರಣಕ್ಕಾಗಿ ಹೊರಟು ಹೋದನು. ಅವನ ಗೈರು ಹಾಜರಿಯಲ್ಲಿ ಮತ್ತೊಬ್ಬನನ್ನು ಕರೆತರುವುದು ಆವಶ್ಯಕವಾಗಿದ್ದಿತು. ಈ ಎರಡನೆಯ ಅಡಿಗೆಯುವನು ಶುದ್ಧ ಪೋಕರಿ ಎಂಬುದು ನನಗೆ ಅನಂತರ ಗೊತ್ತಾಯಿತು. ಆದರೆ ನನ್ನ ಪಟ್ಟಿಗೆ ಅವನೇ ದೇವದೂತನಾದನು. ಅವನು ನನ್ನ ಮನೆಗೆ ಬಂದ ಎರಡು ಮೂರು ದಿನಗಳೊಳಗೆ, ನನಗೇ ಗೊತ್ತಿಲ್ಲದಂತೆ ನನ್ನ ಮನೆಯಲ್ಲಿ ನಡೆಯುತ್ತಿದ್ದ ಕೆಲವು ಅಕ್ರಮಗಳು ಅವನಿಗೆ ಗೊತ್ತಾದುವು. ಅದನ್ನು ನನ್ನ ಗಮನಕ್ಕೆ ತರಬೇಕೆಂದು ಅವನು ನಿಶ್ಚಯಿಸಿದನು. ನಾನು ಎಲ್ಲರನ್ನೂ ನಂಬುತ್ತಿದ್ದರೂ, ಖಂಡಿತದ ಮನುಷ್ಯ ಎಂಬುದು ಗೊತ್ತಾಗಿದ್ದಿತು. ಈ ಕಾರಣದಿಂದ ತಾನು ಕಂಡುಕೊಂಡ ಸಂಗತಿ ಅವನಿಗೆ ಇನ್ನೂ ಗಾಬರಿಯನ್ನು ಹುಟ್ಟಿಸಿತು. ಪ್ರತಿದಿನವೂ ಮಧ್ಯಾಹ್ನ ಒಂದು ಗಂಟೆಗೆ ನಾನು ಆಫೀಸಿನಿಂದ ಮನೆಗೆ ಊಟಕ್ಕೆ ಹೋಗುತ್ತಿದ್ದೆನು. ಒಂದು ದಿನ ಹನ್ನೆರಡು ಗಂಟೆಗೆ ಅಡಿಗೆಯುವನು ಏದುತ್ತಾ ಆಫೀಸಿಗೆ ಬಂದನು. "ತತ್‌ಕ್ಷಣ ಮನೆಗೆ ಬನ್ನಿ. ಅಲ್ಲಿ ನಿಮಗೆ ಆಶ್ಚರ್ಯವಾಗುವ ವಿಷಯವಿದೆ" ಎಂದನು.

ನಾನು ಹೇಳಿದೆ: "ಅದೇನು ವಿಷಯ ಹೇಳು. ಈಗ ಅದನ್ನು ನೋಡುವುದಕ್ಕಾಗಿ ಆಫೀಸನ್ನು ಹೇಗೆ ಬಿಟ್ಟು ಬರಲಿ ?"

"ಬರದಿದ್ದರೆ ಅನಂತರ ನೀವು ಪಶ್ಚಾತ್ತಾಪ ಪಡುವಿರಿ. ಇಷ್ಟೇ ನಾನು ಹೇಳುವುದು" ಎಂದನು.

ಅವನ ದೃಢತೆಯಲ್ಲಿ ಪ್ರಾರ್ಥನೆ ಸಹ ನನಗೆ ಕಂಡಿತು. ನಾನು ಗುಮಾಸ್ತನ ಜತೆ ಮನೆಗೆ ಹೋದೆನು. ಅಡಿಗೆಯುವನು ನನಗಿಂತ ಮುಂದೆ ನಡೆದನು. ಅಡಿಗೆಯುವನು ನನ್ನನ್ನು ನೆಟ್ಟಗೆ ಮಹಡಿಯ ಮೇಲಕ್ಕೆ ಕರೆದುಕೊಂಡು ಹೋದನು. ನನ್ನ ಜತೆಗಾರನ ಕೋಣೆಯ ಕಡೆ ಕೈತೋರಿಸಿ ಈ ಬಾಗಿಲನ್ನು ತೆಗೆದು ನೀವೇ ಒಳಗೆ ನೋಡಿ" ಎಂದನು.

ಆಗ ನನಗೆ ಎಲ್ಲಾ ಗೊತ್ತಾಯಿತು. ನಾನು ಬಾಗಿಲನ್ನು ತಟ್ಟಿದೆನು. ಜವಾಬಿಲ್ಲ. ನಾನು ಗೋಡೆಗಳೇ ಅಲ್ಲಾಡುವಂತೆ ಬಲವಾಗಿ ಬಾಗಿಲಿಗೆ ಹೊಡೆದೆನು. ಬಾಗಿಲು ತೆರೆಯಿತು. ಒಳಗೆ ಒಬ್ಬಳು ವ್ಯಭಿಚಾರಿಣಿಯಿದ್ದಳು. ನಾನು ಅವಳಿಗೆ "ಇಲ್ಲಿಂದ ತೆರಳು. ಮತ್ತೆ ಎಂದಿಗೂ ಇಲ್ಲಿ ಕಾಲಿಡಬೇಡ" ಎಂದು ಹೇಳಿದೆನು.

ನನ್ನ ಜತೆಗಾರನಿಗೆ ಹೀಗೆ ಹೇಳಿದೆ: ಈ ಗಳಿಗೆಯಿಂದ ನಿನಗೂ ನನಗೂ ಸಂಬಂಧವಿಲ್ಲ. ನಾನು ನಿನ್ನಿಂದ ಪೂರ್ತಿ ಮೋಸ ಹೋದೆ; ಮೂರ್ಖನಾದೆ. ನಾನು ನಿನ್ನಲ್ಲಿಟ್ಟ ವಿಶ್ವಾಸಕ್ಕೆ ಇದಲ್ಲವೇ ನಿನ್ನ ಪ್ರತ್ಯುಪಕಾರ?"

ಆತ ವಿವೇಕಿಯಾಗುವುದಕ್ಕೆ ಬದಲಾಗಿ, "ನಿಮ್ಮ ರಹಸ್ಯವನ್ನೆಲ್ಲ ಹೊರಗೆಡಹುತ್ತೇನೆ" ಎಂದು ನನ್ನನ್ನು ಹೆದರಿಸಿದನು.

ನಾನು "ನನ್ನಲ್ಲಿ ಮುಚ್ಚಿಟ್ಟುಕೊಳ್ಳತಕ್ಕದ್ದೇನೂ ಇಲ್ಲ. ನಾನು ಏನು ಮಾಡಿದ್ದರೂ ಅದನ್ನು ನೀನು ಬಹಿರಂಗಪಡಿಸಬಹುದು. ಆದರೆ ಕೂಡಲೇ ಈ ಮನೆ ಬಿಟ್ಟು ಹೊರಡು" ಎಂದೆನು.

ಇದರಿಂದ ಅವನ ಕೋಪ ಮತ್ತಷ್ಟು ಹೆಚ್ಚಿತು. ಇದಕ್ಕೆ ಉಪಾಯ ವಿರಲಿಲ್ಲ. ಕೆಳಗೆ ನಿಂತಿದ್ದ ಗುಮಾಸ್ತನಿಗೆ ನಾನು ಹೀಗೆ ಹೇಳಿದೆನು. "ದಯವಿಟ್ಟು ಹೋಗಿ ಪೋಲೀಸ್ ಸೂಪರಿಂಟೆಂಡೆಂಟರಿಗೆ ಹೇಳಿ ನನ್ನ ಜತೆಯಲ್ಲಿರುವ ಒಬ್ಬ ಮನುಷ್ಯ ವಿಶ್ವಾಸ ಘಾತಕತನದಿಂದ ನಡೆದಿದ್ದಾನೆಂದೂ, ನನ್ನ ಮನೆಯಲ್ಲಿ ಅವನನ್ನು ಇಟ್ಟುಕೊಳ್ಳಲು ನನಗೆ ಇಷ್ಟವಿಲ್ಲವೆಂದೂ ಆದರೆ ಅವನು ಮನೆಬಿಟ್ಟು ಹೋಗಲು ತಿರಸ್ಕರಿಸುತ್ತಿದ್ದಾನೆಂದೂ ಹೇಳಿ ಅವನನ್ನು ಮನೆಯಿಂದ ಹೊರಡಿಸಲು ಪೋಲೀಸ್ ಸಹಾಯವನ್ನು ಕಳುಹಿಸಿದರೆ ಕೃತಜ್ಞ ನಾಗಿರುವೆನೆಂದೂ ಹೇಳಿ."

ನನ್ನದು ಬರಿಯ ಮಾತಲ್ಲ ಎಂಬುದು, ಅಪರಾಧಿಗೆ ಇದರಿಂದ ಗೊತ್ತಾಯಿತು. ಆತನ ಅಪರಾಧ, ಆತನನ್ನು ನಿರ್ಬಲನನ್ನಾಗಿ ಮಾಡಿದ್ದಿತು. ಅವನು ನನ್ನಲ್ಲಿ ಕ್ಷಮೆಯನ್ನು ಯಾಚಿಸಿ ಪೋಲೀಸರಿಗೆ ಸುದ್ದಿ ಕೊಡಬಾರ ದೆಂದು ಬೇಡಿಕೊಂಡನು. ತತ್‌ಕ್ಷಣ ಮನೆಯನ್ನು ಬಿಡಲು ಒಪ್ಪಿ ಹಾಗೆಯೇ ಮಾಡಿದನು.

ಈ ಘಟನೆ, ನನ್ನ ಬಾಳಿನಲ್ಲಿ ನನಗೆ ಸಕಾಲಿಕವಾದ ಎಚ್ಚರಿಕೆಯಾಯಿತು. ಆ ದುರ್ಮಾರ್ಗಿ ನನಗೆ ಮೋಹಕ ರೂಪದ ಅನಿಷ್ಟವಾಗಿದ್ದನೆಂಬುದು ಈಗ ನನಗೆ ಸ್ಪಷ್ಟವಾಗಿ ಗೊತ್ತಾಗುತ್ತಿದೆ. ಅವನಿಗೆ ಆಶ್ರಯ ಕೊಟ್ಟುದರಿಂದ ನಾನು ಒಳ್ಳೆಯ ಉದ್ದೇಶಕ್ಕಾಗಿ ಕೆಟ್ಟಮಾರ್ಗವನ್ನು ಆರಿಸಿಕೊಂಡಿದ್ದನು. ಬೇವಿನ ಮರದಲ್ಲಿ ಮಾವಿನ ಹಣ್ಣು ಬೆಳೆಯುವ ಆಸೆಯಿಟ್ಟುಕೊಂಡಿದ್ದನು. ನನ್ನ ಜತೆಗಾರನ ನಡತೆ ಚೆನ್ನಾಗಿಲ್ಲವೆಂದು ನನಗೆ ಗೊತ್ತಿದ್ದಿತು. ಆದರೆ ಅವನಿಗೆ ನನ್ನಲ್ಲಿ ವಿಶ್ವಾಸವಿದೆಯೆಂದು ನಂಬಿದ್ದನು. ಅವನನ್ನು ತಿದ್ದುವ ಪ್ರಯತ್ನದಲ್ಲಿ ನಾನೇ ತೇಲಿಹೋಗುತ್ತಿದ್ದನು. ಸನ್ಮಿತ್ರರ ವಿಶ್ವಾಸದ ಮಾತುಗಳಿಗೆ ನಾನು ಕಿವಿಗೊಟ್ಟಿರಲಿಲ್ಲ, ಮೋಹ ನನ್ನನ್ನು ಪೂರ್ತಿಯಾಗಿ ಕುರುಡನನ್ನಾಗಿ ಮಾಡಿದ್ದಿತು.

ಹೊಸ ಅಡಿಗೆಯವನು ಇಲ್ಲದಿದ್ದಿದ್ದರೆ ನನಗೆ ಸತ್ಯ ಎಂದಿಗೂ ಗೊತ್ತಾಗುತ್ತಿರಲಿಲ್ಲ. ಮತ್ತು ನಾನು ಆ ಜತೆಗಾರನ ಪ್ರಭಾವಕ್ಕೆ ಸಿಕ್ಕಿದ್ದುದರಿಂದ, ಆಗ ನಾನು ಪ್ರಾರಂಭಿಸಿದ ಅನಾಸಕ್ತಿಯ ಜೀವನವನ್ನು ನಡೆಸಲು ಬಹುಶಃ ಶಕ್ತನಾಗುತ್ತಿರಲಿಲ್ಲ. ಅವನಿಗಾಗಿ ನಾನು ಯಾವಾಗಲೂ ಕಾಲವನ್ನು ವೆಚ್ಚಮಾಡುತ್ತಿದ್ದಿರಬೇಕಾಗಿದ್ದಿತು. ನನ್ನನ್ನು ಅಂಧಕಾರದಲ್ಲಿಟ್ಟು ಕೆಟ್ಟ ದಾರಿಗೆ ಎಳೆಯುವ ಶಕ್ತಿ ಅವನಿಗೆ ಇದ್ದಿತು.

ಆದರೆ ಮೊದಲಿನಂತೆ ದೇವರು ಆಗಲೂ ನನ್ನ ರಕ್ಷಣೆಗೆ ಬಂದನು. ನನ್ನ ಉದ್ದೇಶ ಶುದ್ಧವಾಗಿದ್ದಿತು. ಆದುದರಿಂದ ನಾನು ತಪ್ಪುಮಾಡಿದರೂ ರಕ್ಷಿತನಾದೆನು. ಮತ್ತು ಈ ಪ್ರಾರಂಭದ ಅನುಭವ ನನಗೆ ಭವಿಷ್ಯಕ್ಕೆ ಎಚ್ಚರಿಕೆಯನ್ನು ಕೊಟ್ಟಿತು.

ಆ ಅಡಿಗೆಯವನು, ಸ್ವರ್ಗದಿಂದ ಬಂದ ದೂತನೇ ಆದನು. ಅವನಿಗೆ ಅಡಿಗೆ ಮಾಡಲು ಬರುತ್ತಿರಲಿಲ್ಲ. ಆದುದರಿಂದ ಅವನು ಅಡಿಗೆಯವನಾಗಿ ನನ್ನ ಮನೆಯಲ್ಲಿ ಇರುವಂತೆಯೂ ಇರಲಿಲ್ಲ. ಆದರೆ ಅವನ ಹೊರತು ಮತ್ತಾರೂ ನನ್ನ ಕಣ್ಣನ್ನು ತೆರೆಯಬಲ್ಲವರಾಗಿರಲಿಲ್ಲ. ನನಗೆ ಅನಂತರ ತಿಳಿಯಿತು. ಆ ಹೆಂಗಸನ್ನು ನನ್ನ ಮನೆಗೆ ಕರೆತಂದುದು ಅದೇ ಮೊದಲನೆಯ ಸಲವಲ್ಲ. ಅವಳು ಇದಕ್ಕೆ ಮುಂಚೆ ಅನೇಕ ಸಲ ಬಂದಿದ್ದಳು. ಆದರೆ ಯಾರಿಗೂ ಈ ಅಡಿಗೆಯವನಿಗಿದ್ದ ಧೈರ್ಯವಿರಲಿಲ್ಲ. ಏಕೆಂದರೆ ನಾನು ನನ್ನ

ಆ ಮಿತ್ರನಲ್ಲಿ ಪೂರ್ಣ ವಿಶ್ವಾಸವನ್ನು ಇಟ್ಟಿದ್ದೆನೆಂಬುದು, ಎಲ್ಲರಿಗೂ ಗೊತ್ತಿದ್ದಿತು. ಅಡಿಗೆಯವನು ನನಗೆ ಈ ಉಪಕಾರವನ್ನು ಮಾಡುವುದ ಕ್ಕಾಗಿಯೇ ಕಳುಹಿಸಲ್ಪಟ್ಟಿದ್ದನೋ ಎಂಬಂತೆ ತೋರಿತು. ಏಕೆಂದರೆ ಅದೇ ಗಳಿಗೆಯಲ್ಲಿಯೇ ಅವನು ನನ್ನನ್ನು ಬಿಟ್ಟು ಹೋಗಲು ಬಯಸಿದನು.

"ನಾನು ನಿಮ್ಮ ಮನೆಯಲ್ಲಿರಲಾರೆ. ಬಹಳ ಸುಲಭವಾಗಿ ನಿಮ್ಮ ಮನಸ್ಸನ್ನು ತಿರುಗಿಸಬಹುದು. ಈ ಮನೆ ನನಗಲ್ಲ" ಎಂದನು.

ನಾನು ಅವನಿಗೆ ಹೋಗಲನುಮತಿಯಿತ್ತೆನು.

ಈಗ ನನಗೆ ಗೊತ್ತಾಯಿತು. ಗುಮಾಸ್ತನಿಗೆ ವಿರೋಧವಾಗಿ ನನ್ನ ಮನಸ್ಸಿನಲ್ಲಿ ವಿಷವನ್ನು ತುಂಬಿದವನು ನನ್ನ ಈ ಮಿತ್ರನೇ. ಗುಮಾಸ್ತನಿಗೆ ಮಾಡಿದ ಅನ್ಯಾಯವನ್ನು ಸರಿಪಡಿಸಬೇಕೆಂದು ನಾನು ಬಹಳ ಪ್ರಯತ್ನ ಪಟ್ಟೆನು. ಆದರೆ ಅವನನ್ನು ಪೂರ್ಣವಾಗಿ ಸಮಾಧಾನಪಡಿಸಲು ನನ್ನಿಂದ ಆಗಲಿಲ್ಲವೆಂಬುದು ನನ್ನ ಶಾಶ್ವತ ಪಶ್ಚಾತ್ತಾಪ. ಎಷ್ಟೇ ಚೆನ್ನಾಗಿ ಜೋಡಿಸಿ ದರೂ ಒಡಕು, ಒಡಕೇ.

೨೪

ಸ್ವದೇಶದತ್ತ

ಈ ವೇಳೆಗೆ ನಾನು ಮೂರು ವರುಷ ದಕ್ಷಿಣ ಆಫ್ರಿಕದಲ್ಲಿ ನೆಲಸಿದು ದಾಗಿದ್ದಿತು. ಅಲ್ಲಿಯ ಜನರು ನನ್ನನ್ನು ಅರಿತರು; ನಾನು ಅವರನ್ನು ಅರಿತೆನು ೧೮೯೬ರಲ್ಲಿ ನಾನು, ಆರು ತಿಂಗಳು ಭಾರತಕ್ಕೆ ಹೋಗಲು ಅನುಮತಿಯನ್ನು ಕೇಳಿದೆನು. ನಾನು ದಕ್ಷಿಣ ಆಫ್ರಿಕಾದಲ್ಲಿ ಬಹುಕಾಲ ವಾಸಿ ಸುವೆನೆಂದು ತೋರಿತು. ನನ್ನ ವಕೀಲಿ ಕೆಲಸ ಚೆನ್ನಾಗಿಯೇ ನಡೆಯುತ್ತಿ ದ್ದಿತು. ಅಲ್ಲಿಯ ಜನರಿಗೆ ನಾನು ಅವರೊಡನಿರುವುದು ಆವಶ್ಯಕವೆಂದು ತೋರಿದುದು ನನಗೆ ಕಂಡಿತು. ಆದುದರಿಂದ ನಾನು ಭಾರತಕ್ಕೆ ಹೋಗಿ ನನ್ನ ಹೆಂಡತಿ ಮಕ್ಕಳನ್ನು ಕರೆದುಕೊಂಡು ಬಂದು ಕುಟುಂಬದೊಡನೆ ಅಲ್ಲಿ ನೆಲಸ ಬೇಕೆಂದು ನಿಶ್ಚಯಿಸಿದೆನು. ಭಾರತಕ್ಕೆ ಹಿಂದಿರುಗುವುದರಿಂದ ಅಲ್ಲಿ ನಾನು

ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸಿ, ಭಾರತೀಯರಿಗೆ ದಕ್ಷಿಣ ಆಫ್ರಿಕಾದ ಭಾರತೀಯರಲ್ಲಿ ಹೆಚ್ಚು ಆಸಕ್ತಿ ಕುತೂಹಲ ಉಂಟಾಗುವಂತೆ ಮಾಡಲು ಸಾಧ್ಯವಾಗಬಹುದೆಂದೂ ಯೋಚಿಸಿದೆನು. ಮೂರು ಪೌಂಡು ಕಂದಾಯವು ತೆರೆದಿಟ್ಟ ಗಾಯವಾಗಿದ್ದಿತು. ಅದು ರದ್ದು ಆಗುವವರೆಗೆ ಶಾಂತಿ ಎಲ್ಲಿಯದು?

ಆದರೆ ನನ್ನ ಗೈರುಹಾಜರಿಯಲ್ಲಿ, ಕಾಂಗ್ರೆಸ್ ಕೆಲಸ ಮತ್ತು ಶಿಕ್ಷಣ ಸಂಸ್ಥೆಯ ಜವಾಬ್ದಾರಿಯನ್ನು ವಹಿಸಿಕೊಳ್ಳುವವರು ಯಾರು? ನನ್ನ ದೃಷ್ಟಿಗೆ ಬಿದ್ದವರು ಇಬ್ಬರು. ಆದಂಜೀ ಮಿಯಾಖಾನ್ ಮತ್ತು ಪಾರ್ಸೀ ರುಸ್ತುಂಜೀ. ವ್ಯಾಪಾರಿವರ್ಗದಲ್ಲಿ ಅನೇಕ ಕೆಲಸಗಾರರು ಈಗ ಸಿಕ್ಕುತ್ತಿದ್ದರು. ಆದರೆ ಅವರ ಪೈಕಿ ಅತಿಪ್ರಮುಖರಾಗಿ ಕ್ರಮವಾದ ಕೆಲಸದಿಂದ ಕಾರ್ಯದರ್ಶಿಗಳ ಸ್ಥಾನಕ್ಕೆ ಅರ್ಹರಾದವರೂ ನೆಟಾಲಿನ ಎಲ್ಲ ಭಾರತೀಯರ ಗೌರವಕ್ಕೂ ಪಾತ್ರರಾದವರೂ ಇವರಿಬ್ಬರೇ. ಕಾರ್ಯದರ್ಶಿಗೆ, ತಕ್ಕಮಟ್ಟಿಗೆ ಇಂಗ್ಲಿಷ್ ಭಾಷಾಜ್ಞಾನ ಆವಶ್ಯಕವಾಗಿದ್ದಿತು. ನಾನು ದಿವಂಗತ ಆದಮ್‌ಜೀ ಮಿಯಾಖಾನ್‌ರ ಹೆಸರನ್ನು ಕಾರ್ಯದರ್ಶಿಯಾಗಿ ಶಿಫಾರಸು ಮಾಡಿದೆನು. ಕಾಂಗ್ರೆಸ್ ಅವರು ಕಾರ್ಯದರ್ಶಿಯಾಗುವುದನ್ನು ಒಪ್ಪಿತು. ಆ ಆಯ್ಕೆ ಬಹಳ ಉತ್ತಮವಾಗಿದ್ದಿತೆಂಬುದು ಅನುಭವದಿಂದ ಗೊತ್ತಾಯಿತು. ಆದಮ್‌ಜೀ ಮಿಯಾಖಾನರು ಎಲ್ಲರನ್ನೂ ತಮ್ಮ ಕಾರ್ಯತತ್ಪರತೆ, ಔದಾರ್ಯ, ಮಾಧುರ್ಯ ವಿನಯಗಳಿಂದ ಸಂತೋಷಪಡಿಸಿ ಕಾರ್ಯದರ್ಶಿಯ ಕೆಲಸವನ್ನು ನಿರ್ವಹಿಸಲು, ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ತೇರ್ಗಡೆಯಾದ ಇಂಗ್ಲಿಷ್ ವಿದ್ಯಾವಂತರೇ ಆಗಬೇಕಾದುದಿಲ್ಲವೆಂದು ಎಲ್ಲರಿಗೂ ತೋರಿಸಿಕೊಟ್ಟರು.

೧೮೯೬ನೆಯ ಸಂವತ್ಸರದ ಮಧ್ಯಭಾಗದಲ್ಲಿ ಕಲ್ಕತ್ತಾಕ್ಕೆ ಹೊರಟಿದ್ದ ಎಸ್. ಎಸ್. ಪೊಂಗೋಲ ಎಂಬ ಹಡಗಿನಲ್ಲಿ ನಾನು ಸ್ವದೇಶಕ್ಕೆ ಹೊರಟೆನು.

ಹಡಗಿನಲ್ಲಿ ಬಹಳ ಕಡಿಮೆ ಪ್ರಯಾಣಿಕರಿದ್ದರು. ಅವರ ಪೈಕಿ ಇಬ್ಬರು ಭಾರತೀಯ ಅಧಿಕಾರಿಗಳಿದ್ದರು. ಅವರೊಂದಿಗೆ ನಾನು ನಿತ್ಯ ಒಂದು ಗಂಟೆ ಚದುರಂಗದ ಆಟವನ್ನು ಆಡುತ್ತಿದ್ದೆನು. ಹಡಗಿನ ವೈದ್ಯರು, ನನಗೆ ತಮಿಳು ಸ್ವಯಂ ಬೋಧಿನಿಯನ್ನು ಕೊಟ್ಟರು. ನಾನು ಅದನ್ನು ವ್ಯಾಸಂಗ

ಮಾಡತೊಡಗಿದೆನು. ನೆಟಾಲಿನಲ್ಲಿ ನನ್ನ ಅನುಭವದಿಂದ ನನಗೆ ಒಂದು ವಿಷಯ ಗೊತ್ತಾಗಿದ್ದಿತು. ಮುಸಲ್ಮಾನರೊಂದಿಗೆ ಹೆಚ್ಚು ನಿಕಟ ಸಂಪರ್ಕವನ್ನಿಟ್ಟುಕೊಳ್ಳಬೇಕಾದರೆ ಉರ್ದುವನ್ನು ಕಲಿಯಬೇಕು; ಮದರಾಸಿನ ಭಾರತೀಯರೊಂದಿಗೆ ಹೆಚ್ಚು ಸಂಪರ್ಕವನ್ನಿಟ್ಟುಕೊಳ್ಳಬೇಕಾದರೆ ತಮಿಳನ್ನು ಕಲಿಯಬೇಕು.

ಹಡಗಿನಲ್ಲಿ ನನ್ನ ಜತೆಯಲ್ಲಿ ಉರ್ದುವನ್ನು ಓದುತ್ತಿದ್ದ ಇಂಗ್ಲಿಷ್ ಮಿತ್ರರ ಕೋರಿಕೆಯಂತೆ, ಡೆಕ್ ಪ್ರಯಾಣಿಕರ ಪೈಕಿ ಒಬ್ಬ ಉತ್ತಮ ಉರ್ದು ಮುನಷಿಯನ್ನು ನಾನು ಗುರುತಿಸಿದೆ. ನಮ್ಮ ವ್ಯಾಸಂಗದಲ್ಲಿ ನಾವು ಚೆನ್ನಾಗಿಯೇ ಮುಂದುವರಿದೆವು. ಆ ಮತ್ತೊಬ್ಬ ಅಧಿಕಾರಿಯ ಜ್ಞಾಪಕಶಕ್ತಿ ನನ್ನದಕ್ಕಿಂತ ಚೆನ್ನಾಗಿದ್ದಿತು. ಒಂದು ಸಲ ನೋಡಿದ ಪದವನ್ನು ಅವನು ಎಂದಿಗೂ ಮರೆಯುತ್ತಿರಲಿಲ್ಲ. ಉರ್ದು ಅಕ್ಷರಗಳನ್ನು ಓದುವುದು ನನಗೆ ಅನೇಕ ವೇಳೆ ಕಷ್ಟವಾಗುತ್ತಿದ್ದಿತು. ನನ್ನ ಪ್ರಯತ್ನಗಳನ್ನು ನಾನು ಇನ್ನೂ ಹೆಚ್ಚಿಸಿದೆ. ಆದರೂ ಆ ಅಧಿಕಾರಿಯ ಸಮಕ್ಕೆ ಬರಲಾಗಲಿಲ್ಲ.

ತಮಿಳಿನಲ್ಲಿ ನಾನು ಚೆನ್ನಾಗಿಯೇ ಮುಂದುವರಿದೆನು. ನನಗೆ ಹೇಳಿಕೊಡುವ ಸಹಾಯಕರು ಯಾರೂ ಇರಲಿಲ್ಲ. ಆದರೆ ತಮಿಳು ಸ್ವಯಂಬೋಧಿನಿ ಚೆನ್ನಾಗಿದ್ದಿತು. ಉಪಾಧ್ಯಾಯನ ಆವಶ್ಯಕತೆ ನನಗೆ ತೋರಲಿಲ್ಲ.

ಭಾರತಕ್ಕೆ ಬಂದ ಮೇಲೆ ಸಹ, ಈ ವ್ಯಾಸಂಗಗಳನ್ನು ನಾನು ಮುಂದುವರಿಸುವ ಆಶೆಯನ್ನಿಟ್ಟುಕೊಂಡಿದ್ದೆನು. ಆದರೆ ಅದು ಸಾಧ್ಯವಾಗಲಿಲ್ಲ. ೧೮೯೩ರಿಂದ ಈಚೆಗೆ ನಾನು ಹೆಚ್ಚಾಗಿ ಓದಿದುದು ಸೆರೆಮನೆಯಲ್ಲಿಯೇ. ನಾನು ಜೈಲಿನಲ್ಲಿ ಉರ್ದು ಮತ್ತು ತಮಿಳುಗಳಲ್ಲಿ ಸ್ವಲ್ಪ ಮುಂದುವರಿದ್ದುದೇನೋ ನಿಜ. ದಕ್ಷಿಣ ಆಫ್ರಿಕಾದ ಸೆರೆಮನೆಯಲ್ಲಿ ತಮಿಳನ್ನೂ ಯರವಡಾ ಸೆರೆಮನೆಯಲ್ಲಿ ಉರ್ದುವನ್ನೂ ಕಲಿತೆನು. ಆದರೆ ತಮಿಳು ಮಾತನಾಡುವುದನ್ನು ನಾನು ಕಲಿಯಲೇ ಇಲ್ಲ. ಓದುವುದಕ್ಕೆ ಕಲಿತ ಅಲ್ಪ ಸ್ವಲ್ಪ ಸಹ, ಅಭ್ಯಾಸವಿಲ್ಲದುದರಿಂದ ಮರೆಯಾಗುತ್ತಿದೆ.

ತಮಿಳು ಮತ್ತು ತೆಲುಗಿನ ಈ ಅಜ್ಞಾನ ನನ್ನ ಕಾರ್ಯಕ್ಕೆ ದೊಡ್ಡ ಅನಾನುಕೂಲ ಎಂದು ಈಗಲೂ ನನಗೆ ತೋರುತ್ತಿದೆ. ದಕ್ಷಿಣ ಆಫ್ರಿಕಾದಲ್ಲಿ

ದ್ರಾವಿಡರು ನನ್ನ ಮೇಲೆ ಕರೆದ ವಾತ್ಸಲ್ಯ ವೃಷ್ಟಿಯನ್ನು, ನಾನು ಎಂದಿಗೂ ಮರೆಯುವಂತೆ ಇಲ್ಲ. ತಮಿಳು ಅಥವಾ ತೆಲುಗು ಮಿತ್ರರನ್ನು ನಾನು ಸೋಶಿಸಲಾಗಲಿಲ್ಲ, ದಕ್ಷಿಣ ಆಫ್ರಿಕಾದಲ್ಲಿ ಇವರ ಸಹಯೋಗಿಗಳು ತೋರಿಸಿದ ಶ್ರದ್ಧೆ, ಉದ್ಯೋಗಶೀಲತೆ, ಪ್ರೇಮ, ಸ್ವಾರ್ಥತ್ಯಾಗ ಅವೆಲ್ಲ ನನ್ನ ನೆನಪಿಗೆ ಬರುತ್ತವೆ. ಅವರೆಲ್ಲ—ಪುರುಷರೂ ಸ್ತ್ರೀಯರೂ—ಬಹು ಮಟ್ಟಿಗೆ ಅನಕ್ಷರಸ್ಥರೇ. ದಕ್ಷಿಣ ಆಫ್ರಿಕಾದ ಹೋರಾಟ ನಡೆದುದು ಇಂತಹವರಿಗಾಗಿ. ಆ ಹೋರಾಟವನ್ನು ಮಾಡಿದವರು ಅನಕ್ಷರಸ್ಥ ಯೋಧರು. ಅದು ಬಡವರಿಗಾಗಿ ನಡೆದ ಹೋರಾಟ. ಮತ್ತು ಬಡವರು ಅದರಲ್ಲಿ ಪೂರ್ಣವಾಗಿ ಭಾಗವಹಿಸಿದರು. ಈ ಸರಳ ಹೃದಯದ ಒಳ್ಳೆಯ ಜನರ ಹೃದಯವನ್ನು ಆಕರ್ಷಿಸುವುದರಲ್ಲಿ, ಅವರ ಭಾಷೆ ನನಗೆ ಬರದುದರಿಂದ ನನಗೇನೂ ತಡೆಯುಂಟಾಗಲಿಲ್ಲ. ಅವರು ಅರ್ಧಮರ್ಧ ಹಿಂದುಸ್ತಾನೀ ಅಥವಾ ಅರ್ಧಮರ್ಧ ಇಂಗ್ಲಿಷು ಮಾತನಾಡುತ್ತಿದ್ದರು. ಇದರಿಂದ ನಮ್ಮ ಕೆಲಸವನ್ನು ನಡೆಸಿಕೊಂಡು ಹೋಗಲು ಏನೂ ತೊಂದರೆಯಾಗಲಿಲ್ಲ. ಅವರು ನನ್ನಲ್ಲಿಟ್ಟಿದ್ದ ಮಮತೆಗೆ ಪ್ರತಿಯಾಗಿ, ತಮಿಳು ಮತ್ತು ತೆಲುಗು ಭಾಷೆಗಳನ್ನು ಕಲಿಯಬೇಕೆಂಬುದು ನನ್ನ ಇಷ್ಟವಾಗಿದ್ದಿತು. ಮೊದಲೇ ಹೇಳಿದಂತೆ ತಮಿಳಿನಲ್ಲಿ ನಾನು ಸ್ವಲ್ಪ ಮುಂದುವರಿದೆ. ತೆಲುಗಿನಲ್ಲಿ—ಇದನ್ನು ಕಲಿಯಲು ಪ್ರಯತ್ನಪಟ್ಟುದು ನಾನು ಭಾರತದಲ್ಲಿರುವಾಗ—ನನ್ನ ಪ್ರಯತ್ನ ಅಕ್ಷರಗಳನ್ನು ಕಲಿಯುವಷ್ಟಕ್ಕೆ ಮುಕ್ತಾಯವಾಯಿತು. ಈ ಭಾಷೆಗಳನ್ನು ಕಲಿಯಲು ಇನ್ನು ನನ್ನಿಂದ ಸಾಧ್ಯವಿಲ್ಲವೆಂದು ತೋರುತ್ತಿದೆ. ಆದುದರಿಂದ ದ್ರಾವಿಡರು ಹಿಂದೂಸ್ತಾನಿಯನ್ನು ಕಲಿಯುವರೆಂಬುದು ನನ ಆಸೆ. ದಕ್ಷಿಣ ಆಫ್ರಿಕಾದಲ್ಲಿ ಇಂಗ್ಲಿಷ್ ಬರದ ದ್ರಾವಿಡರು, ಹಿಂದೀ ಅಥವಾ ಹಿಂದೂಸ್ತಾನಿಯನ್ನು ತಪ್ಪಾಗಿಯಾದರೂ ಆಡುತ್ತಾರೆ. ಇಂಗ್ಲಿಷ್ ಮಾತನಾಡುವವರು ಮಾತ್ರವೇ ಹಿಂದೀ, ಹಿಂದೂಸ್ತಾನಿಯನ್ನು ಕಲಿಯುವುದಿಲ್ಲ, ಇಂಗ್ಲಿಷಿನ ಜ್ಞಾನ, ನಮ್ಮ ಸ್ವಂತ ಭಾಷೆಗಳನ್ನು ನಾವು ಕಲಿಯಲು ಒಂದು ವಿಘ್ನವೋ ಏನೊ.

ಆದರೆ ಇದು ವಿಷಯಾಂತರವಾಯಿತು. ನನ್ನ ಪ್ರಯಾಣದ ಕಥೆಯನ್ನು ಮುಂದುವರಿಸುತ್ತೇನೆ. ಎಸ್. ಎಸ್. ಪೊಂಗೋಲ ಹಡಗಿನ

ಕಪ್ತಾನನನ್ನು ವಾಚಕರಿಗೆ ಪರಿಚಯ ಮಾಡಿಕೊಡಬೇಕಾಗಿದೆ. ನಮ್ಮಿಬ್ಬ ರಲ್ಲಿಯೂ ಸ್ನೇಹ ಬೆಳೆದಿದ್ದಿತು. ಕಪ್ತಾನನು ಪ್ಲಿಮತ್ ಬದರ್‍ಸ್ ಸಂಪ್ರದಾ ಯಕ್ಕೆ ಸೇರಿದವನಾಗಿದ್ದನು. ನಮ್ಮ ಸಂಭಾಷಣೆ, ಜಲಯಾನ ವಿಜ್ಞಾನ ಕ್ಕಿಂತ ಹೆಚ್ಚಾಗಿ, ಆಧ್ಯಾತ್ಮಿಕಕ್ಕೆ ಸಂಬಂಧಿಸಿದುದಾಗಿದ್ದಿತು. ಆವನು ನೀತಿಯೇ ಬೇರೆ ಧರ್ಮಶ್ರದ್ಧೆಯೇ ಬೇರೆ ಎನ್ನುತ್ತಿದ್ದನು. ಬೈಬಲ್‍ನ ಬೋಧನೆ ಆತನಿಗೆ ಮಕ್ಕಳ ಆಟವಾಗಿದ್ದಿತು. ಅದರ ಸೌಂದರ್ಯ ವಿದ್ದುದು ಅದರ ಸರಳತೆಯಲ್ಲಿ. ಆತ ಹೀಗೆ ಹೇಳುತ್ತಿದ್ದ: "ಎಲ್ಲ ಸ್ತ್ರೀ, ಪುರುಷರೂ, ಮಕ್ಕಳೂ ಏಸುವಿನಲ್ಲಿಯೂ ಅವನ ಬಲಿದಾನದಲ್ಲಿಯೂ ನಂಬಿಕೆಯಿಡಲಿ. ಆಗ ಅವರ ಪಾಪಗಳು ನಾಶವಾಗಿ ಅವರು ಉದ್ಧಾರ ವಾಗುತ್ತಾರೆ" ಈ ಮಿತ್ರನನ್ನು ನೋಡಿ ಪ್ರಿಟೋರಿಯಾದ ಪ್ಲಿಮತ್ ಬ್ರದರ್‍ಸ್‌ರವರ ನೆನಪು ನನಗೆ ಉಂಟಾಯಿತು. ನೀತಿಯ ಹತೋಟಿಯನ್ನು ನಿಯಮಿಸಿದ ಧರ್ಮ, ಆತನಿಗೆ ನೀರಸವಾಗಿದ್ದಿತು. ಈ ಚರ್ಚೆಗೆಲ್ಲ ನನ್ನ ಶಾಕಾಹಾರ ನಿಯಮವೇ ಅವಕಾಶಮಾಡಿಕೊಟ್ಟಿತು. ನಾನು ಮಾಂಸವನ್ನು ಏಕೆ ತಿನ್ನಕೂಡದು? ಗೋಮಾಂಸವನ್ನೇ ತಿಂದರೆ ಹಾನಿ ಏನು? ದೇವರು, ಪ್ರಾಣಿವರ್ಗಗಳನ್ನೆಲ್ಲ ಮನುಷ್ಯನ ಉಪಭೋಗಕ್ಕಾಗಿಯೇ ಸೃಷ್ಟಿಸಿಲ್ಲವೇ ಉದಾಹರಣೆಗೆ ಹಣ್ಣು ತರಕಾರಿ ಮುಂತಾದ ಸಸ್ಯ ಸಮೂಹಗಳನ್ನು ಸೃಷ್ಟಿಸಿರುವಂತೆ. ಈ ಪ್ರಶ್ನೆಗಳು ನಮ್ಮನ್ನು ಅನಿವಾರ್ಯವಾಗಿ ಧಾರ್ಮಿಕ ಚರ್ಚೆಗೆ ಎಳೆದುವು.

ನಾವಿಬ್ಬರೂ, ಒಬ್ಬರ ಅಭಿಪ್ರಾಯಕ್ಕೆ ಮತ್ತೊಬ್ಬರನ್ನು ಪರಿವರ್ತಿಸಲು ಸಾಧ್ಯವಾಗಲಿಲ್ಲ. ಧರ್ಮ, ಮತ್ತು ನೀತಿ ಎರಡೂ ಒಂದೇ ಎಂಬುದು ನನ್ನ ದೃಢವಾದ ಅಭಿಪ್ರಾಯವಾಗಿದ್ದರೆ ತನ್ನ ಅಭಿಪ್ರಾಯವೇ ಸರಿಯೆಂದು ಕಪ್ತಾನ ದೃಢವಾಗಿ ನಂಬಿದ್ದನು.

ಇಪ್ಪತ್ತನಾಲ್ಕು ದಿನಗಳನಂತರ ಆ ಆನಂದದಾಯಕ ಪ್ರವಾಸ ಕೊನೆ ಮುಟ್ಟಿತು ಹುಗ್ಲಿಯ ಸುಂದರ ಸನ್ನಿವೇಶವನ್ನು ಅನುಭವಿಸುತ್ತಾ ನಾನು ಕಲ್ಕತ್ತಾದಲ್ಲಿ ಹಡಗಿನಿಂದ ಇಳಿದೆನು. ಅದೇ ದಿನ ನಾನು ಬೊಂಬಾಯಿಗೆ ರೈಲಿನಲ್ಲಿ ಹೊರಟೆನು.

೨೫

ಹಿಂದೂಸ್ಥಾನದಲ್ಲಿ

ಬೊಂಬಾಯಿಗೆ ಹೋಗುವ ಮಾರ್ಗದಲ್ಲಿ ರೈಲು, ಅಲಹಾಬಾದಿನಲ್ಲಿ ನಲವತ್ತೈದು ನಿಮಿಷಗಳು ನಿಂತಿತು. ಈ ಸಮಯದಲ್ಲಿ ಗಾಡಿಯಲ್ಲಿ ಕುಳಿತು ಊರನ್ನು ಸುತ್ತಿನೋಡಿಕೊಂಡು ಬರೋಣವೆಂದು ನಿಶ್ಚಯಿಸಿದೆನು. ಔಷಧಿಯ ಅಂಗಡಿಯಲ್ಲಿ ಕೆಲವು ಔಷಧಿಯನ್ನೂ ನಾನು ತೆಗೆದುಕೊಳ್ಳಬೇಕಾಗಿದ್ದಿತು. ಔಷಧಿ ಅಂಗಡಿಯವನು ಅರ್ಧ ನಿದ್ರೆಯಲ್ಲಿದ್ದ. ನನಗೆ ಔಷಧಿ ಕೊಡಲು ಬಹಳ ಸಮಯವನ್ನು ತೆಗೆದುಕೊಂಡನು. ನಾನು ಸ್ಟೇಷನ್ನಿಗೆ ಹಿಂದಿರುಗುವ ವೇಳೆಗೆ ಆಗಲೇ ರೈಲು ಹೊರಟಿದ್ದಿತು. ಸ್ಟೇಷನ್ ಮಾಸ್ಟರು, ನನಗಾಗಿ ರೈಲನ್ನು ಒಂದು ನಿಮಿಷ ದಯವಿಟ್ಟು ನಿಲ್ಲಿಸಿದ್ದರು. ಆದರೆ ನಾನು ಬರದುದನ್ನು ಕಂಡು ನನ್ನ ಸಾಮಾನುಗಳನ್ನೆಲ್ಲ ರೈಲಿನಿಂದ ತೆಗೆಸಿ ಇಟ್ಟಿದ್ದರು.

ನಾನು ಕೆಲ್ನರ್ ಹೋಟಲಿನ ಒಂದು ಕೊಠಡಿಯಲ್ಲಿ ಇಳಿದುಕೊಂಡು ಅಲ್ಲಿಂದಲೇ ನನ್ನ ಕಾರ್ಯವನ್ನು ಪ್ರಾರಂಭಿಸಬೇಕೆಂದು ನಿಶ್ಚಯಿಸಿದೆನು. ಅಲಹಾಬಾದಿನಲ್ಲಿ ಪ್ರಕಟವಾಗುತ್ತಿದ್ದ ಪಯೋನಿಯರ್ ಪತ್ರಿಕೆಯ ವಿಷಯ ನಾನು ಬಹಳ ಕೇಳಿದ್ದೆ. ಅದು ಭಾರತೀಯರ ಆಶೋತ್ತರಗಳಿಗೆ ವಿರುದ್ಧವಾದ ಪತ್ರಿಕೆ ಎಂಬುದೂ ತಿಳಿದುಕೊಂಡಿದ್ದೆ. ಆಗ ಮಿ. ಚೆಸ್ನಿ ಜೂನಿಯರ್ (ಕಿರಿಯವರು) ಅದರ ಸಂಪಾದಕರಾಗಿದ್ದರೆಂದು ನನಗೆ ಜ್ಞಾಪಕ. ನನಗೆ ಎಲ್ಲ ಪಕ್ಷಗಳವರ ಬೆಂಬಲವೂ ಬೇಕಾಗಿದ್ದಿತು. ಆದ್ದರಿಂದ ನಾನು ಮಿ. ಚೆಸ್ನಿಯವರಿಗೆ "ನನ್ನ ರೈಲು ತಪ್ಪಿತು. ಇವತ್ತೇ ನೀವು ನನಗೆ ಒಂದು ಭೇಟಿಯನ್ನು ಕೊಟ್ಟರೆ ನಾನು ನಾಳೆ ರೈಲಿನಲ್ಲಿ ಹೊರಡಲು ಅನುಕೂಲವಾಗುವುದು" ಎಂದು ಬರೆದು ಒಂದು ಚೀಟಿಯನ್ನು ಕಳುಹಿಸಿದೆನು. ಅವರು ತತ್‌ಕ್ಷಣವೇ ನನಗೆ ಭೇಟಿ ಕೊಟ್ಟರು. ಅದರಲ್ಲಿಯೂ ನನ್ನ ಮಾತುಗಳನ್ನೆಲ್ಲ ಅವರು ಸಾವಧಾನವಾಗಿ ಕೇಳಿದುದರಿಂದ ನನಗೆ ವಿಶೇಷವಾದ ಸಂತೋಷವುಂಟಾಯಿತು. "ನೀವು ದಕ್ಷಿಣ ಆಫ್ರಿಕಾದ ವಿಷಯದಲ್ಲಿ ಏನನ್ನಾದರೂ

ಬರೆದರೆ, ಅದರ ಮೇಲೆ ನಾನು ನಾಲ್ಕು ಮಾತು ಬರೆಯುತ್ತೇನೆ. ಆದರೆ ನಿಮ್ಮ ಕೇಳಿಕೆಗಳಿಗೆಲ್ಲ ನಾನು ಬೆಂಬಲ ಕೊಡಬಲ್ಲೆನೆಂದು ಹೇಳಲಾರೆ. ಏಕೆಂದರೆ ನಾನು ದಕ್ಷಿಣ ಆಫ್ರಿಕಾದ ಐರೋಪ್ಯರ ಅಭಿಪ್ರಾಯಕ್ಕೂ ತಕ್ಕ ಬೆಲೆ ಕೊಡಬೇಕಾಗಿದೆ" ಎಂದು ಆಶ್ವಾಸನ ಕೊಟ್ಟರು.

ನಾನು ಹೀಗೆ ಹೇಳಿದೆ: "ನೀವು ದಕ್ಷಿಣ ಆಫ್ರಿಕಾದ ಪ್ರಶ್ನೆಯನ್ನು ಅಧ್ಯಯನಮಾಡಿ ನಿಮ್ಮ ಪತ್ರಿಕೆಯಲ್ಲಿ ಅದನ್ನು ಚರ್ಚಿಸಿದರೆ ಅಷ್ಟು ಸಾಕು. ನಾವು ಕೇವಲ ನ್ಯಾಯವನ್ನು ಹೊರತು ಮತ್ತೇನನ್ನೂ ಕೇಳುವುದೂ ಇಲ್ಲ. ಬಯಸುವುದೂ ಇಲ್ಲ."

ಅಂದಿನ ಉಳಿದ ಕಾಲವನ್ನು ಪ್ರಯಾಗದ ದಿವ್ಯ ತ್ರಿವೇಣಿಸಂಗಮ ದರ್ಶನವಲ್ಲಿಯೂ, ನನ್ನ ಮುಂದಿನ ಕಾರ್ಯಕ್ರಮವನ್ನು ನಿರ್ಣಯಿಸುವುದ ಲ್ಲಿಯೂ ಕಳೆದೆನು.

ಹೀಗೆ ಅನಿರೀಕ್ಷಿತವಾಗಿ ಪಯೋನಿಯರ್ ಪತ್ರಿಕೆಯ ಸಂಪಾದಕ ರೊಡನೆ ನಡೆದ ಭೇಟಿಯು, ಮುಂದೆ ನೆಟಾಲಿನಲ್ಲಿ ನನ್ನ ಮೇಲೆ ಐರೋಪ್ಯರಿಂದ ಆಕ್ರಮಣವಾಗುವುದಕ್ಕೆ ಕಾರಣವಾದ ಅನೇಕ ಘಟನೆಗಳ ನಾಂದಿಯಾಯಿತು.

ನಾನು ಬೊಂಬಾಯಿಯಲ್ಲಿ ನಿಲ್ಲಸೆ ನೇರವಾಗಿ ರಾಜಕೋಟೆಗೆ ಹೋಗಿ, ದಕ್ಷಿಣ ಆಫ್ರಿಕಾದ ಪರಿಸ್ಥಿಯನ್ನು ಕುರಿತು ಒಂದು ಸಣ್ಣ ಪುಸ್ತಕವನ್ನು ಬರೆದು ಮುದ್ರಿಸಲು ಒಂದು ತಿಂಗಳ ಕಾಲ ಹಿಡಿಯಿತು. ಅದರ ರಟ್ಟು ಹಸಿರು ಬಣ್ಣದುದಾಗಿದ್ದಿತು. ಆದುದರಿಂದ ಅನಂತರ ಅದು ಗ್ರೀನ್ ಪ್ಯಾಂಪ್ಲೆಟ್ (ಹಸಿರು ಹೊತ್ತಗೆ) ಎಂದೇ ಪ್ರಸಿದ್ಧವಾಯಿತು. ಅದರಲ್ಲಿ ನಾನು ಉದ್ದೇಶಪೂರ್ವಕವಾಗಿಯೇ ದಕ್ಷಿಣ ಆಫ್ರಿಕಾದ ಭಾರತೀಯರ ಸ್ಥಿತಿಯನ್ನು ಕುರಿತು ಮಿತವಾಗಿ (ತಗ್ಗಿಸಿ) ಬರೆದಿದ್ದೆನು. ನಾನು ಹಿಂದೆ ಹೇಳಿದ ಎರಡು ಸಣ್ಣ ಪುಸ್ತಕಗಳಲ್ಲಿ ಉಪಯೋಗಿಸಿದುದಕ್ಕಿಂತ ಸೌಮ್ಯವಾದ ಭಾಷೆಯನ್ನು ಇದರಲ್ಲಿ ಉಪಯೋಗಿಸಿದ್ದೆನು. ಏಕೆಂದರೆ ದೂರದಿಂದ ಕೇಳುವವರಿಗೆ ಸಣ್ಣ ವಿಷಯಗಳೂ ದೊಡ್ಡವಾಗಿ ಕಾಣುತ್ತವೆಂದು ನನಗೆ ತಿಳಿದಿದ್ದಿತು.

ಹತ್ತು ಸಾವಿರ ಪ್ರತಿಗಳನ್ನು ಮುದ್ರಿಸಿ ಭಾರತದ ಎಲ್ಲ ಪತ್ರಿಕೆಗಳಿಗೂ ಪಕ್ಷಗಳ ನಾಯಕರಿಗೂ ಕಳುಹಿಸಲಾಯಿತು. ಪಯೋನಿಯರ್ ಪತ್ರಿಕೆ

ಮೊದಲು ಇದರ ಮೇಲೆ ಟೀಕೆಯನ್ನು ಬರೆಯಿತು ಅದರ ಸಾರಾಂಶವನ್ನು ರಾಯಿಟರ್ ಇಂಗ್ಲೆಂಡಿಗೆ ತಂತಿ ಕಳುಹಿಸಿತು. ಆ ಸಾರಾಂಶದ ಸಾರಾಂಶವನ್ನು ರಾಯಿಟರ್ ಇಂಗ್ಲೆಂಡು ಆಫೀಸು ನೆಟಾಲಿಗೆ ಟೆಲಿಗ್ರಾಂ ಮೂಲಕ ಕಳುಹಿಸಿತು. ಆ ತಾರು, ಮೂರು ಪಂಗ್ತಿಗಳಿಗಿಂತ ಹೆಚ್ಚಾಗಿರಲಿಲ್ಲ. ದಕ್ಷಿಣ ಆಫ್ರಿಕಾದ ಭಾರತೀಯರ ಸ್ಥಿತಿಯನ್ನು ಕುರಿತು ನಾನು ಬರೆದ ಚಿತ್ರದ ಸಂಕ್ಷೇಪ ಸಂಸ್ಕರಣ ಅದು. ಆದರೆ ಅದು ನಾನು ಬರೆದುದರ ಅತಿಶಯೋಕ್ತಿಯಾಗಿದ್ದಿತು. ಆ ಶಬ್ದಗಳನ್ನು ನಾನು ಉಪಯೋಗಿಸಿರಲಿಲ್ಲ. ಇದರಿಂದ ನೆಟಾಲಿನಲ್ಲಿ ಉಂಟಾದ ಪರಿಣಾಮವನ್ನು ಮುಂದೆ ನೋಡೋಣ. ಈ ಮಧ್ಯೆ ಮುಖ್ಯವಾದ ಪತ್ರಿಕೆಗಳೆಲ್ಲ ದಕ್ಷಿಣ ಆಫ್ರಿಕಾ ಪ್ರಶ್ನೆಯ ಮೇಲೆ ದೊಡ್ಡ ಟೀಕೆಗಳನ್ನು ಬರೆದುವು.

ಈ ಸಣ್ಣ ಪುಸ್ತಕದ ಪ್ರತಿಗಳನ್ನು ಟಪಾಲಿನಲ್ಲಿ ಕಳುಹಿಸಲು ಸಿದ್ಧಮಾಡುವುದು ಸುಲಭವಾದ ಮಾತಾಗಿರಲಿಲ್ಲ. ಪುಸ್ತಕ ಕಳುಹಿಸಲು ಆವಶ್ಯಕವಾದ ಕಾಗದ ಲಕ್ಕೋಟೆ ಮುಂತಾದುವುಗಳನ್ನು ಮಾಡಲು ನಾನು ಕೂಲಿ ಗೊತ್ತುಮಾಡಿದ್ದರೆ ಬಹಳ ಹಣ ವೆಚ್ಚವಾಗುತ್ತಿದ್ದಿತು. ಅದಕ್ಕೆ ನಾನೊಂದು ಮಾರ್ಗವನ್ನು ಕಂಡುಹಿಡಿದೆನು. ನಾನು ವಾಸಿಸುತ್ತಿದ್ದ ಸ್ಥಳದ ಬಾಲಕರನ್ನೆಲ್ಲ ಸೇರಿಸಿ ಅವರಿಗೆ ಶಾಲೆಯಿಲ್ಲದಿದ್ದ ಒಂದು ಬೆಳಗ್ಗೆ ಎರಡು ಮೂರು ಗಂಟೆಗಳು ಈ ಕೆಲಸಮಾಡಿ ಕೊಡುವಂತೆ ಕೇಳಿದೆನು. ಅವರು ಸಂತೋಷದಿಂದ ಒಪ್ಪಿದರು. ಅದಕ್ಕೆ ಪ್ರತಿಯಾಗಿ ನಾನು ಅವರನ್ನು ಆಶೀರ್ವದಿಸಿ ನಾನು ಸಂಗ್ರಹಿಸಿದ್ದ ಉಪಯೋಗಿಸಿದ ಅಂಚೆ ಚೀಟಿಗಳನ್ನು ಅವರಿಗೆ ಬಹುಮಾನವಾಗಿ ಕೊಟ್ಟೆನು. ಅವರು ನನ್ನ ಕೆಲಸವನ್ನು ಬಹು ಬೇಗ ಮಾಡಿ ಮುಗಿಸಿದರು. ಚಿಕ್ಕ ಮಕ್ಕಳನ್ನು ಸ್ವಯಂಸೇವಕರನ್ನಾಗಿ ಮಾಡಿ ಅವರಿಂದ ನಾನು ಕೆಲಸಮಾಡಿಸಿಕೊಂಡುದು ಅದೇ ಮೊದಲು. ಅವರ ಪೈಕಿ ಇಬ್ಬರು ಬಾಲ್ಯ ಸ್ನೇಹಿತರು ಇಂದು ನನ್ನ ಸಹೋದ್ಯೋಗಿಗಳಾಗಿದ್ದಾರೆ.

ಇದೇ ಸಮಯದಲ್ಲಿ ಬೊಂಬಾಯಿಯಲ್ಲಿ ಪ್ಲೇಗು ರೋಗ ತಲೆಹಾಕಿತು. ನಾಲ್ಕು ದಿಕ್ಕುಗಳಲ್ಲಿಯೂ ಗಾಬರಿಯೆದ್ದಿತು ರಾಜಕೋಟೆಗೂ ಪ್ಲೇಗು ಹರಡಬಹುದೆಂದು ಭಯವಿದ್ದಿತು. ಆರೋಗ್ಯ ಮತ್ತು ನೈರ್ಮಲ್ಯದ

ಇಲಾಖೆಯಲ್ಲಿ ನಾನೂ ಸ್ವಲ್ಪ ಸೇವೆಮಾಡಬಹುದೆಂದು ನನಗೆ ತೋರಿದುದ ರಿಂದ ನನ್ನ ಸೇವೆಯನ್ನು ಅಂಗೀಕರಿಸಬೇಕೆಂದು ಸಂಸ್ಥಾನ ಸರಕಾರಕ್ಕೆ ಬರೆದೆನು. ಸರಕಾರ ನನ್ನ ಸೇವೆಯನ್ನು ಅಂಗೀಕರಿಸಿ ಈ ವಿಷಯವನ್ನು ನೋಡಿಕೊಳ್ಳಲು ರಚಿಸಿದ್ದ ಸಮಿತಿಗೆ ನನ್ನನ್ನೂ ಸೇರಿಸಿತು. ನಾನು ಪಾಯಖಾನೆ ಗೃಹಗಳ ಸ್ವಚ್ಛತೆಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟೆನು. ಸಮಿತಿಯು ಪ್ರತಿ ಬೀದಿಯಲ್ಲಿಯೂ ಇರುವ ಪಾಯಖಾನೆ ಗೃಹಗಳನ್ನು ಪರೀಕ್ಷೆ ಮಾಡಬೇಕೆಂದು ನಿರ್ಣಯಿಸಿತು. ತಮ್ಮ ಮನೆಗಳ ಪಾಯಖಾನೆ ಗೃಹಗಳನ್ನು ಸಮಿತಿ ಪರೀಕ್ಷಿಸಲು, ಬಡವರಿಗೆ ಏನು ಆಕ್ಷೇಪಣೆ ಇರಲಿಲ್ಲ. ಅಷ್ಟೇ ಅಲ್ಲ. ಬದಲಾವಣೆಗಳನ್ನು ಸೂಚಿಸಿದರೆ, ಅವನ್ನೂ ಅವರು ಮಾಡುತ್ತಿದ್ದರು. ಆದರೆ ಮೇಲು ದರ್ಜೆಯವರ ಮನೆಗಳನ್ನು ನಾವು ಪರೀಕ್ಷಿ ಸಲು ಹೋದಾಗ, ಅವರು ನಮ್ಮನ್ನು ಮನೆಯೊಳಕ್ಕೆ ಬಿಡಲಿಲ್ಲ. ಇನ್ನು ನಮ್ಮ ಸಲಹೆ ಕೇಳುವುದೆಲ್ಲಿ ಬಂತು ? ಧನಿಕರ ಪಾಯಖಾನೆ ಗೃಹ, ಬಡವರದಕ್ಕಿಂತ ಹೆಚ್ಚು ಅಶುದ್ಧವಾಗಿದ್ದಿತೆಂಬುದು ನನ್ನ ಸಾಮಾನ್ಯ ಅನುಭವ. ಅವು ಕತ್ತಲು ಕವಿದು ಕೊಳಕು ಕ್ರಿಮಿಗಳಿಂದ ದುರ್ಗಂಧ ಪೂರಿತವಾಗಿದ್ದವು. ನಾವು ಸೂಚಿಸಿದ ಸುಧಾರಣೆಗಳು ಸುಲಭವಾಗಿದ್ದವು. ಮಲ, ನೆಲದ ಮೇಲೆ ಬೀಳದಂತೆ ಬಕೆಟ್‌ಗಳನ್ನು ಇಡುವುದು ; ಮೂತ್ರ ನೆಲದ ಮೇಲೆ ಬಿದ್ದು ಇಂಗುವುದರ ಬದಲು, ಅದೂ ಬಕೆಟ್‌ನಲ್ಲಿಯೇ ಶೇಖರವಾಗುವಂತೆ ನೋಡುವುದು, ಪಾಯಖಾನೆ ಮನೆಗೂ ಹೊರಗಿನ ಗೋಡೆಗೂ ನಡುವೆ ಇದ್ದ ಭಾಗವನ್ನು ಒಡೆದು ಹಾಕಿ, ಪಾಯಖಾನೆ ಮನೆಗೆ ಹೆಚ್ಚು ಬೆಳಕು ಗಾಳಿ ಬರುವಂತೆಯೂ ಝಾಡಮಾಲಿ ಒಂದು ಚೆನ್ನಾಗಿ ಶುದ್ಧಿಮಾಡುವುದಕ್ಕೂ ಅವಕಾಶ ಮಾಡಿಕೊಡುವುದು. ಧನಿಕ ವರ್ಗ, ಈ ಕೊನೆಯ ಸುಧಾರಣೆಗೆ ಅನೇಕ ಅಡ್ಡಿಗಳನ್ನು ಒಡ್ಡಿದರು. ಅನೇಕರು ಅದನ್ನು ನಡೆಸಲೇ ಇಲ್ಲ.

ಸಮಿತಿ ಅಸ್ಪೃಶ್ಯರ ನಿವಾಸಗಳನ್ನೂ ಪರೀಕ್ಷೆ ಮಾಡಬೇಕಾಗಿದ್ದಿತು. ಆ ನಿವಾಸಗಳಿಗೆ ನನ್ನೊಂದಿಗೆ ಬರಲು ಸಮಿತಿಯ ಒಬ್ಬ ಸದಸ್ಯರು ಮಾತ್ರ ಸಿದ್ಧರಾದರು. ಉಳಿದವರಿಂದ ಅಲ್ಲಿಗೆ ಹೋಗುವುದಾಗಲೀ ಅವರ ಪಾಯಖಾನೆ ಗೃಹಗಳನ್ನು ಪರೀಕ್ಷಿಸುವುದಾಗಲೀ ನಡೆಯುವ ಕಾರ್ಯವಾಗಿರ

ಲಿಲ್ಲ. ನನಗೆ ಆ ಮನೆಗಳಲ್ಲಿ ಒಂದು ಹಿತವಾದ ಆಶ್ಚರ್ಯವೇ ಕಂಡಿತು. ಅಸ್ಪೃಶ್ಯರ ನಿವಾಸಕ್ಕೆ ನಾನು ಭೇಟಿಯನ್ನು ಕೊಟ್ಟುದು ನನ್ನ ಜೀವಮಾನ ದಲ್ಲಿ ಅದೇ ಮೊದಲನೆಯ ಸಲವಾಗಿದ್ದಿತು. ಅಲ್ಲಿಯ ಸ್ತ್ರೀ ಪುರುಷರಿಗೆ ನಮ್ಮನ್ನು ನೋಡಿ ಆಶ್ಚರ್ಯವಾಯಿತು. "ನಿಮ್ಮ ಪಾಯಖಾನೆ ಮನೆಗಳನ್ನು ನಾವು ಪರೀಕ್ಷಿಸಬೇಕಾಗಿದೆ" ಎಂದು ನಾನು ಹೇಳಿದೆನು.

ಅವರು ಆಶ್ಚರ್ಯದಿಂದ "ನಮ್ಮ ಪಾಯಖಾನೆ ಮನೆಗಳು !" ಎಂದರು. ನಾವು ಹೊರಗೆ ಬಯಲಿನಲ್ಲಿ ಹೋಗಿ ನಮ್ಮ ಕಾರ್ಯ ತೀರಿಸಿ ಬರುತ್ತೇವೆ. ಪಾಯಖಾನೆ ಮನೆಗಳು ನಿಮ್ಮಂತಹ ದೊಡ್ಡವರಿಗೆ" ಎಂದರು.

"ಸರಿ. ಹಾಗಾದರೆ ನಿಮ್ಮ ಮನೆಗಳನ್ನು ನಾವು ಪರೀಕ್ಷಿಸಿದರೆ ನಿಮ್ಮ ಆಕ್ಷೇಪಣೆ ಇಲ್ಲವಲ್ಲ ?" ಎಂದು ನಾನು ಕೇಳಿದೆನು.

"ಧಾರಾಳವಾಗಿ ಬನ್ನಿ ಸ್ವಾಮಿ. ನಮ್ಮ ಮನೆಗಳ ಮೂಲೆ ಮೂಲೆ ಗಳನ್ನೂ ನೀವು ನೋಡಬಹುದು. ನಮ್ಮದು ಮನೆಗಳಲ್ಲ. ಬಿಲಗಳು."

ನಾನು ಒಳಗೆ ಹೋದೆ. ನೋಡಿ ಸಂತೋಷವಾಯಿತು. ಮನೆಯ ಒಳಗೆ, ಹೊರಗೆ ಇದ್ದಷ್ಟೇ ಶುದ್ಧವಾಗಿದ್ದಿತು. ಬಾಗಿಲನ್ನು ಶುದ್ಧವಾಗಿ ಗುಡಿಸಿದ್ದರು. ನೆಲವನ್ನು ಸಗಣಿಯಿಂದ ಚೆನ್ನಾಗಿ ಸಾರಿಸಿದ್ದರು. ಇದ್ದ ಒಂದೆರಡು ಮಡಕೆಗಳೂ ತಟ್ಟೆಗಳೂ ಶುದ್ಧವಾಗಿ ಹೊಳೆಯುತ್ತಿದ್ದವು. ಪ್ಲೇಗು ಅಲ್ಲಿಗೆ ಪ್ರವೇಶಿಸುವ ಭಯವಿರಲಿಲ್ಲ.

ಶ್ರೀಮಂತರ ಮನೆಗಳೊಂದರೊಳಗೆ ನಾವು ಒಂದು ಪಾಯಖಾನೆ ಮನೆಯನ್ನು ನೋಡಿದೆವು. ಅದನ್ನು ಸ್ವಲ್ಪ ವಿಶದವಾಗಿ ವಿವರಿಸಬೇಕು. ಪ್ರತಿಯೊಂದು ಕೊಠಡಿಯಲ್ಲಿಯೂ ಒಂದು ಮೋರಿಯಿದ್ದಿತು. ಇದನ್ನು ಮೂತ್ರ ವಿಸರ್ಜನೆಗೂ ನೀರನ್ನು ಚೆಲ್ಲುವುದಕ್ಕೂ ಉಪಯೋಗಿಸುತ್ತಿದ್ದರು. ಇದರಿಂದ ಮನೆಯೆಲ್ಲ ದುರ್ಗಂಧದಿಂದ ತುಂಬಿದ್ದಿತು. ಆದರೆ ಒಂದು ಮನೆಯ ಮಹಡಿಯಲ್ಲಿ ಒಂದು ಮಲಗುವ ಕೋಣೆಯಿದ್ದಿತು. ಅದರಲ್ಲಿಯೂ ಒಂದು ಮೋರಿಯಿದ್ದಿತು. ಅದನ್ನು ಮೂತ್ರಕ್ಕಾಗಿಯೂ ಪಾಯಖಾನೆ ಗಾಗಿಯೂ ಉಪಯೋಗಿಸುತ್ತಿದ್ದರು. ಮೋರಿಗೆ ಸೇರಿದ ಒಂದು ಕೊಳವೆ ಯಲ್ಲಿ ಮಲಮೂತ್ರವೆಲ್ಲ ಮಹಡಿಯಿಂದ ಕೆಳಕ್ಕೆ ಇಳಿಯುತ್ತಿದ್ದಿತು. ಆ

ಕೊಠಡಿಯ ದುರ್ನಾತ ಸಹಿಸಲಸಾಧ್ಯವಾಗಿದ್ದಿತು. ಮನೆಯವರು ಹೇಗೆ ಅಲ್ಲಿ ಮಲಗುತ್ತಿದ್ದರೋ ಪಾಠಕರೇ ಊಹಿಸಲಿ !

ಸಮಿತಿಯವರು, ವೈಷ್ಣವ ಹವೇಲಿ (ದೇವಾಲಯ) ಯನ್ನೂ ಹೋಗಿ ನೋಡಿದರು. ಹವೇಲಿಯ ಮೇಲ್ವಿಚಾರಕನಾಗಿದ್ದ ಪೂಜಾರಿಗೂ ನಮ್ಮ ಮನೆಯವರಿಗೂ ತುಂಬ ಸ್ನೇಹವಿದ್ದಿತು. ಆದುದರಿಂದ ನಾವು ಹವೇಲಿಯನ್ನು ಪರೀಕ್ಷಿಸಲು ಮತ್ತು ನಮಗೆ ಆವಶ್ಯಕವೆಂದು ತೋರಿದ ಸುಧಾರಣೆಗಳನ್ನು ಸೂಚಿಸಲು ಒಪ್ಪಿದನು. ಆತನೇ ಎಂದಿಗೂ ನೋಡಿಲ್ಲದ ಹವೇಲಿಯ ಆವರಣದ ಒಂದು ಭಾಗವಿದ್ದಿತು. ಅದು ಊಟದ ಎಲೆಗಳನ್ನೂ ಇತರ ಕಸವನ್ನೂ ಗೋಡೆಯಿಂದ ಆಚೆಗೆ ಎಸೆಯುತ್ತಿದ್ದ ಜಾಗ, ಅದು ಕಾಗೆ ಹದ್ದುಗಳು ಯಾವಾಗಲೂ ಬಂದು ಹೋಗುವ ಸ್ಥಳವಾಗಿದ್ದಿತು. ಪಾಯಖಾನೆ ಗೃಹಗಳಂತೂ ಅಶುದ್ಧವಾಗಿದ್ದವು. ನಾವು ಕೊಟ್ಟ ಸಲಹೆಗಳ ಪೈಕಿ, ಪೂಜಾರಿ ಯಾವ ಯಾವುದನ್ನು ನಡೆಸಿದ ಎಂಬುದನ್ನು ಅರಿಯಲು ನಾನು ಹೆಚ್ಚು ಕಾಲ ರಾಜಕೋಟೆಯಲ್ಲಿ ನಿಲ್ಲಲಿಲ್ಲ.

ಪೂಜಾಸ್ಥಾನದಲ್ಲಿ ಅಷ್ಟೊಂದು ಕೊಳಕನ್ನು ನೋಡಿ ನಾನು ದುಃಖಿತನಾದೆನು. ಪವಿತ್ರವಾದ ಸ್ಥಳದಲ್ಲಿ ಆರೋಗ್ಯ ಮತ್ತು ನೈರ್ಮಲ್ಯ ನಿಯಮಗಳನ್ನು ಎಚ್ಚರಿಕೆಯಿಂದ ಅನುಸರಿಸುತ್ತಾರೆಂದು ನಿರೀಕ್ಷಿಸುವುದು ಸಹಜವಾಗಿದೆ. ಆಗಲೇ ನನಗೆ ತಿಳಿದಿದ್ದಂತೆ, ಸ್ಮೃತಿಗಳ ಲೇಖಕರು ಅಂತರಂಗ ಬಹಿರಂಗ ಪಾರಿಶುದ್ಧತೆಗೆ ಅತ್ಯಂತ ಪ್ರಾಮುಖ್ಯತೆಯನ್ನು ಕೊಡಬೇಕೆಂದು ಹೇಳಿದ್ದಾರೆ.

೨೭

ರಾಜನಿಷ್ಠೆ; ರೋಗಿಗಳ ಶುಶ್ರೂಷೆ

ಬ್ರಿಟಿಷ್ ಸಂವಿಧಾನದಲ್ಲಿ ನಾನು ಇಟ್ಟಷ್ಟು ರಾಜನಿಷ್ಠೆಯನ್ನು ಮತ್ತಾರೂ ಇಟ್ಟುದನ್ನು ನಾನು ನೋಡಿಲ್ಲವೆಂದು ಹೇಳಬಹುದು. ಈ ರಾಜನಿಷ್ಠೆಯ ಮೂಲದಲ್ಲಿ, ನನ್ನ ಸತ್ಯಪ್ರೇಮ ಇದ್ದಿತೆಂಬುದು ಈಗ ನನಗೆ ಕಾಣುತ್ತದೆ. ರಾಜನಿಷ್ಠೆಯನ್ನಾಗಲೀ ಅಥವಾ ಮತ್ತಾವುದೇ ಗುಣವನ್ನಾಗಲೀ,

ಬರಿಯ ನಟನೆಯಿಂದ ತೋರಿಸುವುದು ನನಗೆ ಎಂದಿಗೂ ಸಾಧ್ಯವಾಗಿಲ್ಲ. ನೆಟಾಲಿನಲ್ಲಿ ನಾನು ಹೋಗುತ್ತಿದ್ದ ಪ್ರತಿಯೊಂದು ಸಭೆಯಲ್ಲಿಯೂ, ಆಂಗ್ಲ ರಾಷ್ಟ್ರಗೀತೆಯನ್ನು ತಪ್ಪದೆ ಹಾಡುತ್ತಿದ್ದರು. ಆಗ ನಾನೂ ಹಾಡುವುದರಲ್ಲಿ ಸೇರಬೇಕು, ಎನಿಸುತ್ತಿದ್ದಿತು. ಬ್ರಿಟಿಷ್ ಆಳ್ವಿಕೆಯಲ್ಲಿರುವ ದೋಷಗಳು ನನಗೆ ತಿಳಿದಿರಲಿಲ್ಲವೆಂದಲ್ಲ. ಆದರೆ ಒಟ್ಟಿನಲ್ಲಿ ಅದು ನನಗೆ ಒಪ್ಪಿಗೆಯಾಗಿದ್ದಿತು. ಆ ಕಾಲದಲ್ಲಿ ನಾನು ಒಟ್ಟಿನಲ್ಲಿ ಬ್ರಿಟಿಷರ ಆಳ್ವಿಕೆ ಪ್ರಜೆಗಳಿಗೆ ಹಿತಕರವಾದುದು ಎಂದು ನಂಬಿದ್ದೆನು.

ದಕ್ಷಿಣ ಆಫ್ರಿಕಾದಲ್ಲಿ ನಾನು ನೋಡಿದ ವರ್ಣದ್ವೇಷ ಬ್ರಿಟಿಷ್ ಸಂಪ್ರದಾಯಕ್ಕೆ ತೀರ ವಿರುದ್ಧವಾದುದೆಂದು ನಾನು ಯೋಚಿಸಿದೆನು. ಇದು ತಾತ್ಕಾಲಿಕ ಮತ್ತು ಆ ಸ್ಥಳಕ್ಕೆ ಮಾತ್ರ ಸಂಬಂಧಿಸಿದುದು, ಎಂದೂ ಭಾವಿಸಿದೆ. ಆದುದರಿಂದ ರಾಜನಿಷ್ಠೆಯಲ್ಲಿ ಇಂಗ್ಲಿಷರೊಂದಿಗೆ ಪ್ರತಿಸ್ಪರ್ಧಿಸಿದೆನು. ಬಹಳ ಶ್ರಮಪಟ್ಟು ಇಂಗ್ಲಿಷ್ ರಾಷ್ಟ್ರಗೀತೆಯ ರಾಗವನ್ನು ನಾನು ಕಲಿತುಕೊಂಡೆನು. ಅದನ್ನು ಹಾಡುತ್ತಿದ್ದಾಗಲೆಲ್ಲ ಅವರ ಜತೆ ಸೇರಿ ನಾನೂ ಹಾಡುತ್ತಿದ್ದೆನು. ಗದ್ದಲ, ಆಡಂಬರವಿಲ್ಲದೆ ರಾಜಭಕ್ತಿಯನ್ನು ಸೂಚಿಸುವ ಪ್ರಸಂಗ ದೊರೆತಾಗಲೆಲ್ಲ, ನಾನೂ ತಪ್ಪದೆ ಅದರಲ್ಲಿ ಭಾಗವಹಿಸುತ್ತಿದ್ದೆನು.

ನನ್ನ ಬಾಳಿನಲ್ಲಿ ನಾನು ಎಂದೂ ಈ ರಾಜನಿಷ್ಠೆಯ ದುರುಪಯೋಗಪಡಿಸಿಕೊಳ್ಳಲಿಲ್ಲ. ಅದರ ಮೂಲಕ ನನ್ನ ಸ್ವಾರ್ಥವನ್ನು ಸಾಧಿಸಲು ಪ್ರಯತ್ನಿಸಲಿಲ್ಲ. ರಾಜನಿಷ್ಠೆ, ನನ್ನ ಕರ್ತವ್ಯವೆಂದು ಭಾವಿಸಿ ಪ್ರತಿಫಲವನ್ನು ಅಪೇಕ್ಷಿಸದೆ ಅದನ್ನು ಸಲ್ಲಿಸುತ್ತಿದ್ದೆನು.

ನಾನು ಭಾರತವನ್ನು ತಲಪಿದಾಗ ವಿಕ್ಟೋರಿಯಾ ರಾಣಿಯ ವಜ್ರ ಮಹೋತ್ಸವದ ಸಿದ್ಧತೆಗಳು ನಡೆಯುತ್ತಿದ್ದವು. ರಾಜಕೋಟೆಯಲ್ಲಿ ಈ ಉದ್ದೇಶಕ್ಕಾಗಿ ನಿಯಮಿಸಿದ್ದ ಸಮಿತಿಯಲ್ಲಿ ಸೇರಲು ನನ್ನನ್ನೂ ಆಹ್ವಾನಿಸಿದರು. ಆಹ್ವಾನವನ್ನು ನಾನು ಅಂಗೀಕರಿಸಿದೆನು. ಉತ್ಸವ ಬರಿಯ ಆಡಂಬರ ಪ್ರದರ್ಶನವಾಗಬಹುದೆಂಬ ಸಂಶಯ ನನ್ನಲ್ಲಿದ್ದಿತು. ಅದರಲ್ಲಿ ಬಹಳ ಬೂಟಾಟಿಕೆಯನ್ನು ಕಂಡು ನನಗೆ ದುಃಖವಾಯಿತು. ನಾನು ಈ ಸಮಿತಿಯಲ್ಲಿರುವುದು ಸರಿಯೆ? ತಪ್ಪೆ? ಎಂದು ನನ್ನನ್ನೇ ಕೇಳಿಕೊಂಡೆನು.

ಕೊನೆಯಲ್ಲಿ ನನ್ನ ಕರ್ತವ್ಯವನ್ನು ನಾನು ಮಾಡಿ ತೆಪ್ಪಗಿರೋಣ ಎಂದು ನಿಶ್ಚಯಿಸಿದೆನು.

ಉತ್ಸವದಲ್ಲಿ ಒಂದು ಸೂಚನೆ ಗಿಡಗಳನ್ನು ನೆಡುವುದಾಗಿದ್ದಿತು. ಅನೇಕರು ಅದನ್ನು ಬರಿಯ ನಟನೆಗಾಗಿಯೂ ಅಧಿಕಾರಿಗಳನ್ನು ತೃಪ್ತಿಪಡಿಸು ವುದಕ್ಕೂ ಮಾಡುತ್ತಿದ್ದುದು ನನಗೆ ತೋರಿತು. ನಾನು ಅವರಿಗೆ ತಿಳಿಯ ಹೇಳಲು ಪ್ರಯತ್ನಿಸಿದೆನು. "ಗಿಡಗಳನ್ನು ನೆಡಬೇಕೆಂದು ಬಲಾತ್ಕಾರವೇನು ಇಲ್ಲ. ಇದೊಂದು ಬಾಯ ಸೂಚನೆ ಅಷ್ಟೇ. ಇದನ್ನು, ಮಾಡಿದರೆ ಶ್ರದ್ಧೆ ಯಿಂದ ಮಾಡಬೇಕು, ಇಲ್ಲದಿದ್ದರೆ ಮಾಡಿಸಬೇಕು" ಎಂದು ಹೇಳಿದೆ. ನನ್ನ ಮಾತನ್ನು ಕೇಳಿ ಅವರಿಗೆ ನಗು ಬಂದಂತೆ ನನಗೆ ತೋರಿತು. ನನಗೆ ವಹಿಸಿದ ಗಿಡವನ್ನು ನಾನು ಶ್ರದ್ಧೆಯಿಂದ ನೆಟ್ಟು ನೀರು ಹಾಕಿ ಪೋಷಿಸಿದೆನೆಂದು ಜ್ಞಾಪಕವಿದೆ.

ಹಾಗೆಯೇ ನಾನು ನನ್ನ ಸಂಸಾರದ ಮಕ್ಕಳಿಗೆಲ್ಲ ರಾಷ್ಟ್ರಗೀತೆಯನ್ನು (ಬ್ರಿಟಿಷ್) ಹಾಡುವುದನ್ನು ಕಲಿಸಿದೆನು. ಸ್ಥಳದ ಟ್ರೇನಿಂಗ್ ಕಾಲೇಜಿನ ವಿದ್ಯಾರ್ಥಿಗಳಿಗೆ ನಾನು ಅದನ್ನು ಕಲಿಸಿದುದು ಜ್ಞಾಪಕವಿದೆ. ಆದರೆ ಅದು ವಜ್ರಮಹೋತ್ಸವದಲ್ಲಿಯೋ ಅಥವಾ ಏಳನೆಯ ಎಡ್ವರ್ಡರು ಭಾರತದ ಚಕ್ರವರ್ತಿಯಾಗಿ ಪಟ್ಟಾಭಿಷಿಕ್ತರಾದಾಗಲೋ—ಸರಿಯಾಗಿ ನೆನಪಿಲ್ಲ—ಕೆಲವು ದಿನಗಳ ಮೇಲೆ ಈ ಹಾಡಿನ ಮಾತುಗಳು ನನಗೆ ಕರ್ಕಶವಾಗಿ ತೋರಿದುವು. ಅಹಿಂಸೆಯ ನನ್ನ ಭಾವನೆ ಪಕ್ವವಾಗುತ್ತಾ ನಡೆದಂತೆ ನನ್ನ ಮಾತು ಮತ್ತು ಆಲೋಚನೆಗಳ ವಿಷಯದಲ್ಲಿ ನಾನು ಹೆಚ್ಚು ಎಚ್ಚರಿಕೆ ವಹಿಸತೊಡಗಿದೆನು.

ಇಂಗ್ಲೆಂಡಿನ ಶತ್ರುಗಳನ್ನು ಚದುರಿಸು
ಅವರನ್ನು ಬೀಳಿಸು
ಅವರ ರಾಜತಂತ್ರವನ್ನು ದಿಗ್ಭ್ರಮೆಗೊಳಿಸು
ಅವರ ಕುತಂತ್ರಗಳನ್ನು ನಾಶಗೊಳಿಸು

ಈ ಸಾಲುಗಳು ನನ್ನ ಅಹಿಂಸಾಭಾವನೆಗೆ ಬಹು ಕರ್ಕಶವಾಗಿ ತೋರಿದುವು. ನನ್ನ ಅಭಿಪ್ರಾಯಗಳನ್ನು ನಾನು ಡಾ. ಬೂತ್‌ರಲ್ಲಿ

ಹೇಳಿದೆ. ಅಹಿಂಸೆಯಲ್ಲಿ ನಂಬಿಕೆಯಿರುವವರು ಈ ಸಾಲುಗಳನ್ನು ಹಾಡುವುದು ಯೋಗ್ಯವಲ್ಲವೆಂದು ಅವರೂ ಒಪ್ಪಿದರು. "ಶತ್ರುಗಳೆನ್ನಿಸಿಕೊಳ್ಳುವವರು ನೀತಿನಿಯಮಗಳಿಲ್ಲದವರೆಂದು ಹೇಗೆ ಗೊತ್ತು. ಅವರು ಶತ್ರುಗಳಾದ ಮಾತ್ರಕ್ಕೆ ಅವರು ಮಾಡುತ್ತಿರುವುದು ತಪ್ಪು ಎಂದು ಹೇಳಬಹುದೆ? ದೇವರನ್ನು ಪ್ರಾರ್ಥಿಸುವಾಗ ನಾವು ನ್ಯಾಯವಾದುದನ್ನು ಮಾತ್ರ ಕೇಳಬಹುದು" ಎಂದು ಹೇಳಿದೆನು. ಮತ್ತು ತಮ್ಮ ಸಮಾಜದಲ್ಲಿ ಹಾಡಲು ಒಂದು ಹೊಸ ಗೀತವನ್ನು ರಚಿಸಿದರು. ಆದರೆ ಡಾ. ಬೂತ್‌ರ ವಿಷಯ ಮುಂದೆ ಇನ್ನೂ ಹೆಚ್ಚಾಗಿ ನೋಡೋಣ.

ರಾಜನಿಷ್ಠೆಯಂತೆಯೇ, ರೋಗಿಗಳಿಗೆ ಶುಶ್ರೂಷೆ ಮಾಡುವ ಆಸೆಯೂ ನನ್ನ ಸ್ವಭಾವದಲ್ಲಿ ಆಳವಾಗಿ ಬೇರೂರಿದ್ದಿತು. ಮಿತ್ರರೇ ಆಗಲಿ, ಅಪರಿಚಿತರಾಗಲೀ ಅವರು ರೋಗಿಗಳಾದರೆ ಅವರನ್ನು ಉಪಚರಿಸುವುದು ನನಗೆ ಪ್ರಿಯವಾಗಿದ್ದಿತು.

ರಾಜಕೋಟೆಯಲ್ಲಿದ್ದಾಗ ದಕ್ಷಿಣ ಆಫ್ರಿಕಾವನ್ನು ಕುರಿತು ಸಣ್ಣ ಪುಸ್ತಕವನ್ನು ಬರೆಯುವುದರಲ್ಲಿ ತೊಡಗಿದ್ದಾಗ, ನಾನು ಬೊಂಬಾಯಿಗೆ ಒಂದು ಸಲ ಅವಸರವಾಗಿ ಹೋಗಿ ಬರುವ ಸಂದರ್ಭವೊದಗಿತು. ಪಟ್ಟಣಗಳಲ್ಲಿ ಸಭೆಗಳನ್ನು ನಡೆಸಿ, ದಕ್ಷಿಣ ಆಫ್ರಿಕಾದ ಪ್ರಶ್ನೆಯ ಮೇಲೆ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವುದು ನನ್ನ ಉದ್ದೇಶವಾಗಿದ್ದಿತು. ಈ ಉದ್ದೇಶಕ್ಕೆ ನಾನು ಬೊಂಬಾಯಿಯನ್ನು ಮೊದಲನೆಯ ನಗರವಾಗಿ ಆರಿಸಿಕೊಂಡೆನು. ಮೊದಲು ನಾನು ನ್ಯಾಯಮೂರ್ತಿ ರಾನಡೆಯವರನ್ನು ಹೋಗಿ ಕಂಡೆನು. ಅವರು ನನ್ನ ಮಾತುಗಳನ್ನು ಬಹಳ ಲಕ್ಷ್ಯದಿಂದ ಕೇಳಿ, ಅನಂತರ ನಾನು ಸರ್ ಫಿರೋಜ್ ಷಾರವರನ್ನು ನೋಡಬೇಕೆಂದು ಸಲಹೆಯಿತ್ತರು. ಮರು ದಿವಸ ನಾನು ನ್ಯಾಯಮೂರ್ತಿ ತಯಾಬ್ಜಿಯವರನ್ನು ನೋಡಿದೆ. ಅವರೂ ಸಹ ಅದೇ ಸಲಹೆಯನ್ನು ಕೊಟ್ಟರು. ಅವರು ಹೀಗೆ ಹೇಳಿದರು: "ಜಸ್ಟಿಸ್ ರಾನಡೆಯವರಾಗಲೀ ನಾನಾಗಲಿ ನಿಮಗೆ ಅಷ್ಟೇನೂ ಮಾರ್ಗದರ್ಶನ ಮಾಡಲಾರೆವು. ನನ್ನ ಪರಿಸ್ಥಿತಿ ನಿಮಗೆ ಗೊತ್ತೇ ಇದೆ. ನಾವು ಸಾರ್ವಜನಿಕ ವಿಷಯಗಳಲ್ಲಿ ಪಾತ್ರ ವಹಿಸಲಾರೆವು. ಆದರೆ ನಿಮಗೆ ನಮ್ಮ ಪೂರ್ಣ ಸಹಾನುಭೂತಿಯಿದೆ.

ನಿಮಗೆ ಸರಿಯಾದ ಮಾರ್ಗದರ್ಶನ ಮಾಡಬಲ್ಲವರು ಸರ್ ಫಿರೋಜ್ ಷಾ ಒಬ್ಬರೇ."

ಸರ್ ಫಿರೋಜ್ ಷಾರವರನ್ನು ನೋಡುವುದಂತೂ ನನ್ನ ಉದ್ದೇಶವೇ ಆಗಿದ್ದಿತು. ಆದರೆ ಈ ಇಬ್ಬರು ಹಿರಿಯರು, ಅವರ ಸಲಹೆಯಂತೆ ನೀವು ನಡೆಯಿರಿ ಎಂದು ನನಗೆ ಹೇಳಿದುದರಿಂದ, ಸರ್ ಫಿರೋಜ್ ಷಾರವರ ಅಪಾರ ಪ್ರಭಾವ ಸಾರ್ವಜನಿಕ ಜೀವನದಲ್ಲಿ ಅವರ ಸ್ಥಾನ, ಇವು ನನಗೆ ಇನ್ನೂ ಚೆನ್ನಾಗಿ ಮನದಟ್ಟಾಯಿತು. ಕಾಲಕ್ರಮದಲ್ಲಿ ನಾನು ಅವರನ್ನು ಸಂಧಿಸಿದೆನು. ಅವರಲ್ಲಿ ನನಗೆ ಉಂಟಾಗುವ ಭಯಭಕ್ತಿಗೆ ನನ್ನ ಮನಸ್ಸನ್ನು ಅನುಗೊಳಿಸಿದ್ದೆನು ಜನ ಅವರಿಗೆ ಕೊಟ್ಟಿದ್ದ ಬಿರುದುಗಳೆಲ್ಲ ನನಗೆ ಗೊತ್ತಿದ್ದವು. ನಾನು ನೋಡುತ್ತಿರುವುದು ಬೊಂಬಾಯಿನ ಸಿಂಹ, ಬೊಂಬಾಯಿ ಪ್ರಾಂತದ 'ಅನಭಿಷಿಕ್ತ ರಾಜ' ಎಂಬುದು ನನಗೆ ಗೊತ್ತಿದ್ದಿತು. ಆದರೆ ಆ ರಾಜ, ನನ್ನಲ್ಲಿ ಗಾಬರಿಯುಂಟುಮಾಡಲಿಲ್ಲ. ಪ್ರೀತಿಯ ತಂದೆ ವಯಸ್ಸಿಗೆ ಬಂದ ಮಗನನ್ನು ಎದುರುಗೊಳ್ಳುವಂತೆ, ಅವರು ನನ್ನನ್ನು ಕಂಡರು. ನಮ್ಮ ಭೇಟಿ ಅವರ ಕಛೇರಿಯಲ್ಲಿ ನಡೆಯಿತು. ಅವರ ಸುತ್ತ ಅವರ ಮಿತ್ರರೂ ಅನುಯಾಯಿಗಳೂ ಇದ್ದರು. ಅವರ ಪೈಕಿ ಶ್ರೀ ಡಿ. ಈ. ವಾಚಾ ಮತ್ತು ಶ್ರೀ ಕಾಮಾ ಅವರೂ ಇದ್ದರು. ವಾಚಾರವರ ವಿಷಯವನ್ನು ನಾನು ಹಿಂದೆಯೇ ಕೇಳಿದ್ದೆನು. ಅವರು ಸರ್ ಫಿರೋಜ್ ಷಾರವರ ಬಲಗೈ ಎಂದು ಪರಿಗಣಿತರಾಗಿದ್ದರು. ಶ್ರೀ ವೀರಚಂದ್ ಗಾಂಧೀಯವರು ವಾಚಾ ಒಬ್ಬ ದೊಡ್ಡ ಸಂಖ್ಯಾಸಂಗ್ರಹಣ ಶಾಸ್ತ್ರಜ್ಞರೆಂದು ನನಗೆ ಹೇಳಿದ್ದರು. ವಾಚಾ, "ಗಾಂಧೀ, ನಾವು ಮತ್ತೆ ಭೇಟಿಯಾಗೋಣ" ಎಂದು ಹೇಳಿದರು.

ಈ ಪರಿಚಯಗಳೆಲ್ಲ ಎರಡು ನಿಮಿಷಗಳೊಂದಿಗೆ ಮುಗಿದು ಹೋದುವು. ನಾನು ಸರ್ ಫಿರೋಜ್ ಷಾರವರಿಗೆ ವಿಷಯಗಳನ್ನೆಲ್ಲ ತಿಳಿಸಿದೆ. ಅವರು ಗಮನವಿಟ್ಟು ನನ್ನ ಮಾತುಗಳನ್ನು ಕೇಳಿದರು. ನಾನು, "ರಾನಡೆ, ತಯಾಬ್ಜಿ ಇವರನ್ನೂ ಸಹ ನೋಡಿದ್ದೆ" ಎಂದು ಹೇಳಿದೆ. ಸರ್ ಫಿರೋಜ್ ಷಾ "ಗಾಂಧೀ, ನಾನು ನಿಮಗೆ ಸಹಾಯಮಾಡಬೇಕೆಂದು ನನಗೆ ತೋರುತ್ತಿದೆ. ಇಲ್ಲಿ ಒಂದು ಸಾರ್ವಜನಿಕ ಸಭೆಯನ್ನು ನಡೆಸಬೇಕು"

ಎಂದರು. ಹೀಗೆ ಹೇಳಿ ತಮ್ಮ ಕಾರ್ಯದರ್ಶಿ ಮುನಷಿಯ ಕಡೆ ತಿರುಗಿ "ಸಭೆ ನಡೆಯಲು ಒಂದು ತಾರೀಖನ್ನು ಗೊತ್ತುಮಾಡಿ" ಎಂದು ಹೇಳಿದರು. ಸಭೆಯ ತಾರೀಖು ಗೊತ್ತಾಯಿತು. "ಸಭೆಗೆ ಹಿಂದಿನ ದಿವಸ ನನ್ನನ್ನು ಬಂದು ನೋಡಿ" ಎಂದು ಹೇಳಿ ಅವರು ನನ್ನನ್ನು ಕಳುಹಿಸಿಕೊಟ್ಟರು. ಈ ಭೆಟ್ಟಿಯಿಂದ ನನ್ನ ಭಯವೆಲ್ಲ ಮಾಯವಾಯಿತು. ನಾನು ಸಂತೋಷದಿಂದ ಮನೆಗೆ ಹೋದೆನು.

ನಾನು ಬೊಂಬಾಯಿಯಲ್ಲಿದ್ದಾಗ ಅಲ್ಲಿಯೇ ಕಾಯಿಲೆ ಮಲಗಿದ್ದ ನನ್ನ ಭಾವನನ್ನು ನೋಡಲು ಹೋದೆನು. ಆತನು ಧನಿಕನಾಗಿರಲಿಲ್ಲ. ಆತನ ಹೆಂಡತಿ (ನಮ್ಮಕ್ಕ) ಅವನ ಶುಶ್ರೂಷೆ ಮಾಡಲು ಶಕ್ತಳಾಗಿರಲಿಲ್ಲ. ಕಾಯಿಲೆ ತೀವ್ರವಾಗಿದ್ದಿತು. "ನಿಮ್ಮನ್ನು ರಾಜಕೋಟೆಗೆ ಕರೆದುಕೊಂಡು ಹೋಗುತ್ತೇನೆ" ಎಂದು ಹೇಳಿದೆನು. ಅವರು ಒಪ್ಪಿದರು. ನಾನು ನನ್ನ ಅಕ್ಕನನ್ನೂ ಭಾವನನ್ನೂ ಕರೆದುಕೊಂಡು ರಾಜಕೋಟೆಗೆ ಹಿಂದಿರುಗಿದೆ. ಕಾಯಿಲೆ, ನಾನು ನಿರೀಕ್ಷಿಸಿದುದಕ್ಕಿಂತ ಹೆಚ್ಚು ಕಾಲ ಎಳೆಯಿತು. ನಾನು ನನ್ನ ಭಾವನನ್ನು ನನ್ನ ಕೊಠಡಿಯಲ್ಲಿ ಮಲಗಿಸಿ ಹಗಲೂ ರಾತ್ರಿ ಅವನ ಉಪಚಾರಕ್ಕೆ ಅಲ್ಲಿಯೇ ಉಳಿದೆನು. ನಾನು ರಾತ್ರಿ ಹೊತ್ತಿನಲ್ಲಿಯೂ ಕೆಲವು ವೇಳೆ ಎಚ್ಚರವಾಗಿರಬೇಕಾಗುತ್ತಿದ್ದಿತು. ಹೀಗೆ ಆತನನ್ನು ಶುಶ್ರೂಷೆ ಮಾಡುತ್ತಲೇ ದಕ್ಷಿಣ ಆಫ್ರಿಕಾಕ್ಕೆ ಸಂಬಂಧಿಸಿದ ಕೆಲಸವನ್ನೂ ಮಾಡಬೇಕಾಗುತ್ತಿದ್ದಿತು. ಕೊನೆಗೆ ರೋಗಿ ಸ್ವರ್ಗಸ್ಥನಾದನು. ಅವನ ಅಂತ್ಯಕಾಲದಲ್ಲಿ ಆತನ ಶುಶ್ರೂಷೆ ಮಾಡಲು ನನಗೆ ಅವಕಾಶ ಸಿಕ್ಕಿತಲ್ಲ ಎಂಬ ದೊಡ್ಡ ಸಮಾಧಾನ ನನಗೆ ಉಂಟಾಯಿತು.

ಶುಶ್ರೂಷೆ ಮಾಡುವ ನನ್ನ ಸ್ವಭಾವ ಬರಬರುತ್ತಾ ಒಂದು ದೊಡ್ಡ ಉತ್ಸಾಹವೇ ಆಯಿತು, ಇದರಿಂದ ನಾನು ನನ್ನ ಇತರ ಕಾರ್ಯಗಳನ್ನೆಲ್ಲ ಬಿಟ್ಟು, ಅದರಲ್ಲಿ ಲೀನನಾಗುತ್ತಿದ್ದೆ. ಕೆಲವು ವೇಳೆ ನನ್ನ ಹೆಂಡತಿ ಮಕ್ಕಳು ಮತ್ತು ಮನೆಯವರನ್ನೆಲ್ಲ ಆ ಕೆಲಸದಲ್ಲಿ ತೊಡಗಿಸಿಬಿಡುತ್ತಿದ್ದೆನು.

ಇಂತಹ ಸೇವೆಯನ್ನು ಸಂತೋಷದಿಂದ ಮಾಡದಿದ್ದರೆ ಅದಕ್ಕೆ ಅರ್ಥವಿಲ್ಲ. ಕೇವಲ ಆಡಂಬರ ಅಥವಾ ಸಾರ್ವಜನಿಕ ತೃಪ್ತಿಗಾಗಿ ಇಂತಹ ಕೆಲಸವನ್ನು ಮಾಡಿದರೆ, ಮಾಡುವವನ ಉತ್ಸಾಹ ಕುಗ್ಗುತ್ತದೆ ಮತ್ತು

ಆತ ಆತ್ಮಶಕ್ತಿಹೀನನಾಗುತ್ತಾನೆ. ಸಂತೋಷವಿಲ್ಲದೆ ಮಾಡುವ ಸೇವೆಯಿಂದ, ಸೇವೆ ಮಾಡುವವನಿಗೂ ಫಲವಿಲ್ಲ, ಮಾಡಿಸಿಕೊಳ್ಳುವವನಿಗೂ ಫಲವಿಲ್ಲ. ಆದರೆ ಸಂತೋಷ ಮನೋಭಾವನೆಯಿಂದ ಮಾಡಿದ ಸೇವೆಯ ಎದುರಿಗೆ, ಧನ, ವಿಲಾಸ ಆರಾಮ ಇವೆಲ್ಲ ತುಚ್ಛವಾಗಿ ಕಾಣುತ್ತವೆ.

೨೭

ಬೊಂಬಾಯಿಯಲ್ಲಿ ಸಭೆ

ನಮ್ಮ ಭಾವ ಸ್ವರ್ಗಸ್ಥನಾದ ಮರುದಿನವೇ ನಾನು ಸಾರ್ವಜನಿಕ ಸಭೆಗಾಗಿ ಬೊಂಬಾಯಿಗೆ ಹೋಗಬೇಕಾಯಿತು. ನಾನು ಅಲ್ಲಿ ಮಾಡಬೇಕಾದ ಭಾಷಣವನ್ನು ಕುರಿತು ಯೋಚಿಸಲು ನನಗೆ ಸಮಯವೇ ಇರಲಿಲ್ಲ. ಅನೇಕ ದಿನಗಳ ಹಗಲು ರಾತ್ರಿಯ ಜಾಗರಣೆಯಿಂದ ನಾನು ನಿಶ್ಯಕ್ತನಾಗಿದ್ದೆನು. ನನ್ನ ಗಂಟಲು ಒಡೆದು ಹೋಗಿದ್ದಿತು. ಆದರೂ ನಾನು ದೇವರ ಮೇಲೆ ಭಾರ ಹಾಕಿ ಬೊಂಬಾಯಿಗೆ ಹೋದೆನು. ನನ್ನ ಭಾಷಣವನ್ನು ಬರೆಯಬೇಕೆಂಬ ಯೋಚನೆ, ನನಗೆ ಕನಸಿನಲ್ಲಿಯೂ ಬರಲಿಲ್ಲ.

ಸರ್ ಫಿರೋಜ್ ಷಾರವರ ಅಪ್ಪಣೆಯಂತೆ, ಸಭೆಯ ಹಿಂದಿನ ದಿನದ ಸಂಜೆ ಐದು ಗಂಟೆಗೆ, ಅವರನ್ನು ನೋಡಿದೆನು.

“ಗಾಂಧೀ, ನಿಮ್ಮ ಭಾಷಣ ಸಿದ್ಧವಾಗಿದೆಯೆ?” ಎಂದು ಅವರು ಕೇಳಿದರು.

ನಾನು ಭಯದಿಂದ ನಡುಗುತ್ತ “ಇಲ್ಲ ಸ್ವಾಮಿ, ನಾನು ಹಾಗೆಯೇ ಮಾತನಾಡೋಣವೆಂದಿದ್ದೇನೆ” ಎಂದೆನು.

“ಬೊಂಬಾಯಿಯಲ್ಲಿ ಅದು ನಡೆಯುವುದಿಲ್ಲ. ಇಲ್ಲಿ ವೃತ್ತಪತ್ರಿಕೆಗಳವರು ಭಾಷಣಗಳನ್ನು ಸರಿಯಾಗಿ ಬರೆದುಕೊಳ್ಳುವುದಿಲ್ಲ. ಈ ಸಭೆಯಿಂದ ನಮಗೆ ಪ್ರಯೋಜನವಾಗಬೇಕಾದರೆ, ನಿಮ್ಮ ಭಾಷಣವನ್ನು ನೀವು ಬರೆಯಬೇಕು. ನಾಳೆ ಮುಂಜಾನೆಯೊಳಗೆ ಅದರ ಮುದ್ರಣವೂ ಆಗಬೇಕು. ಇದು ನಿಮ್ಮಿಂದ ಆಗುತ್ತದೆ ತಾನೆ?”

ನನಗೆ ಗಾಬರಿಯಾಯಿತು. ಆದರೂ ನಾನು ಪ್ರಯತ್ನಪಡುವುದಾಗಿ ಹೇಳಿದೆನು.

"ಹಾಗಾದರೆ ಹಸ್ತಪ್ರತಿಗೆ ಶ್ರೀ ಮುನಷಿಯವರು ಎಷ್ಟು ಹೊತ್ತಿಗೆ ನಿಮ್ಮಲ್ಲಿ ಬರಬೇಕು ಹೇಳಿ" ಎಂದು ಅವರು ಕೇಳಿದರು.

"ರಾತ್ರಿ ಹನ್ನೊಂದು ಗಂಟೆಗೆ" ಎಂದು ಹೇಳಿದೆನು.

ಮರುದಿವಸ ಸಭೆಗೆ ಹೋದಾಗ, ಸರ್ ಫಿರೋಜ್ ಷಾರವರ ಸಲಹೆ ಎಷ್ಟು ವಿವೇಕಪೂರಿತವಾದುದಾಗಿದ್ದಿತೆಂಬುದು ನನಗೆ ಗೊತ್ತಾಯಿತು. ಸಭೆ ನಡೆದುದು ಸರ್ ಕವಾಸ್ಜೀ ಜಹಾಂಗೀರ್ ಇನ್‌ಸ್ಟಿಟ್ಯೂಟಿನಲ್ಲಿ. ಸರ್ ಫಿರೋಜ್ ಷಾರವರು ಭಾಷಣ ಮಾಡುವರೆಂದರೆ ಸಭಾಭವನ ಯಾವಾಗಲೂ ಕಿಕ್ಕಿರಿದು ತುಂಬುತ್ತಿದ್ದಿತೆಂದೂ, ಅದರಲ್ಲಿಯೂ ವಿದ್ಯಾರ್ಥಿಗಳು ಅವರ ಭಾಷಣವನ್ನು ಕೇಳಲು ಉತ್ಸಾಹದಿಂದ ನೆರೆಯುತ್ತಿದ್ದರೆಂದೂ ನಾನು ಕೇಳಿದ್ದೆನು. ನನ್ನ ಅನುಭವದಲ್ಲಿ ಅಂತಹ ಸಭೆಯು ಅದೇ ಮೊದಲು. ನಾನು ನಡುಗುತ್ತಾ ನನ್ನ ಭಾಷಣವನ್ನು ಓದಲು ಪ್ರಾರಂಭಿಸಿದೆನು. ನನ್ನ ಧ್ವನಿ ಎಲ್ಲೋ ಕೆಲವರಿಗೆ ಮಾತ್ರ ಕೇಳುತ್ತಿರುವುದು ನನಗೆ ಗೊತ್ತಾಯಿತು. ಸರ್ ಫಿರೋಜ್ ಷಾರವರು "ಇನ್ನೂ ಗಟ್ಟಿಯಾಗಿ, ಇನ್ನೂ ಗಟ್ಟಿಯಾಗಿ" ಎಂದು ಹೇಳುತ್ತಾ ನನ್ನನ್ನು ಪ್ರೋತ್ಸಾಹಿಸಿದರು. ಅವರು ಉತ್ತೇಜನ ಕೊಟ್ಟಷ್ಟೂ ನನ್ನ ಧ್ವನಿಯು ಕುಗ್ಗಿಯೇ ಹೋಯಿತೆಂದು ನನ್ನ ಭಾವನೆ.

ನನ್ನ ಹಳೆಯ ಮಿತ್ರ ಕೇಶವರಾವ್ ದೇಶಪಾಂಡೆಯವರು ನನ್ನ ಸಹಾಯಕ್ಕೆ ಬಂದರು. ನನ್ನ ಭಾಷಣದ ಪ್ರತಿಯನ್ನು ನಾನು ಅವರಿಗೆ ಕೊಟ್ಟೆನು. ಅವರ ಧ್ವನಿ ಚೆನ್ನಾಗಿದ್ದಿತು. ಆದರೆ ಶ್ರೋತೃಗಳಿಗೆ ಅವರು ಓದುವುದೂ ಕೇಳಲಿಲ್ಲ. "ವಾಚಾ, ವಾಚಾ" ಎಂಬ ಧ್ವನಿಯಿಂದ ಸಭಾಭವನ ತುಂಬಿತು. ಆದುದರಿಂದ ಶ್ರೀ ವಾಚಾ ಎದ್ದು ನಿಂತು ಭಾಷಣವನ್ನು ಓದಿದರು. ಅದರ ಪರಿಣಾಮ ಅದ್ಭುತವಾಯಿತು. ಶ್ರೋತೃಗಳು ನಿಶ್ಶಬ್ದವಾಗಿ ಕುಳಿತು ಮಧ್ಯೆ ಮಧ್ಯೆ ಉಚಿತವಾದೆಡೆಗಳಲ್ಲೆಲ್ಲ ಚಪ್ಪಾಳೆ ತಟ್ಟುತ್ತಾ

ನಾಚಿಕೆ (ಷೇಮ್) ಎಂದು ಕೂಗುತ್ತಾ ಭಾಷಣವನ್ನು ಕೊನೆಯುವರೆಗೆ ಕೇಳಿದನು. ಅದರಿಂದ ನನಗೆ ತುಂಬ ಸಂತೋಷವಾಯಿತು.

ಸರ್ ಫಿರೋಜ್ ಷಾ ನನ್ನ ಭಾಷಣವನ್ನು ಮೆಚ್ಚಿದರು. ನನಗೆ ಗಂಗಾಸ್ನಾನ ಮಾಡಿದಷ್ಟು ಆನಂದವಾಯಿತು.

ಈ ಸಭೆಯಿಂದ ನನಗೆ ಶ್ರೀ ದೇಶಪಾಂಡೆ ಮತ್ತು ಮತ್ತೊಬ್ಬ ಪಾರಸೀ ಮಿತ್ರರು (ಅವರು ಸರಕಾರದಲ್ಲಿ ದೊಡ್ಡ ಹುದ್ದೆಯಲ್ಲಿರುವುದರಿಂದ ಅವರ ಹೆಸರನ್ನು ಹೇಳುವುದಕ್ಕೆ ಹಿಂದೆಗೆಯುತ್ತೇನೆ) ಇವರ ಪೂರ್ಣ ಸಹಾನುಭೂತಿ ದೊರಕಿತು. ಅವರಿಬ್ಬರೂ ನನ್ನ ಜತೆಯಲ್ಲಿ ದಕ್ಷಿಣ ಆಫ್ರಿಕಾಕ್ಕೆ ಬರುವುದಾಗಿ ತಿಳಿಸಿದರು. ಆಗ ಸ್ಮಾಲ್ ಕಾಸ್ ಕೋರ್ಟ್ ನ್ಯಾಯಾಧಿಪತಿಗಳಾದ ಮಿ. ಕರಾಸೆಟ್‌ಜಿಯವರು ಪಾರಸೀ ಮಿತ್ರರನ್ನು ಅವರ ನಿರ್ಧಾರದಿಂದ ಕದಲಿಸಿದರು. ಏಕೆಂದರೆ ಅವರು ತಮ್ಮ ಮಿತ್ರರ ವಿವಾಹಕ್ಕೆ ಸಂಧಾನ ನಡೆಸಿದ್ದರು. ಪಾರಸೀ ಮಿತ್ರರು ಮದುವೆ ಯನ್ನು ಆರಿಸಿಕೊಳ್ಳಬೇಕಾಗಿದ್ದಿತು ಅಥವಾ ದಕ್ಷಿಣ ಆಫ್ರಿಕಾವನ್ನು ಆರಿಸಿ ಕೊಳ್ಳಬೇಕಾಗಿದ್ದಿತು. ಅವರು ಮೊದಲಿನದನ್ನು ಆರಿಸಿಕೊಂಡರು. ಆದರೆ ಸಂಕಲ್ಪಭಂಗ ಹೊಂದಿದ ಮಿತ್ರರ ಬದಲು ಪಾರಸೀ ರುಸ್ತುಂಜೀ ಪ್ರಾಯಶ್ಚಿತ್ತ ಮಾಡಿದರು. ಜತೆಗೆ ಸಂಕಲ್ಪ ಭಂಗಕ್ಕೆ ಸಹಾಯಕಳಾದ ಆ ಪಾರಸೀ ಸಹೋದರಿಗೆ ಬದಲಾಗಿ ಇತರ ಅನೇಕ ಪಾರಸೀ ಸಹೋದರಿ ಯರು ಖಾದೀ ಸೇವೆಯ ಮೂಲಕ ಪ್ರಾಯಶ್ಚಿತ್ತ ಮಾಡುತ್ತಿದ್ದಾರೆ. ಆದುದರಿಂದ ನಾನು ಆ ದಂಪತಿಗಳನ್ನು ಸಂತೋಷದಿಂದ ಮನ್ನಿಸಿದ್ದೇನೆ. ಶ್ರೀ ದೇಶಪಾಂಡೆಯವರಿಗೆ ವಿವಾಹದ ಆಕರ್ಷಣೆಯೇನೂ ಇರಲಿಲ್ಲ. ಆದರೆ ಅವರಿಗೂ ಆಫ್ರಿಕಾಕ್ಕೆ ಹೊರಡಲು ಸಾಧ್ಯವಾಗಲಿಲ್ಲ. ಈಗ ಅವರು ಸಹ ವಾಗ್ದಾನಕ್ಕೆ ತಪ್ಪಿದುದಕ್ಕೆ ಸಾಕಾದಷ್ಟು ಪ್ರಾಯಶ್ಚಿತ್ತವನ್ನು ತಾವೇ ಮಾಡಿಕೊಳ್ಳುತ್ತಿದ್ದಾರೆ. ದಕ್ಷಿಣ ಆಫ್ರಿಕಾಕ್ಕೆ ಹಿಂದಿರುಗುವ ದಾರಿಯಲ್ಲಿ ನಾನು ಜಾನ್‌ಜಿಬಾರ್‌ನಲ್ಲಿ ತಯಾಬ್ಜಿ ಕುಟುಂಬಕ್ಕೆ ಸೇರಿದ ಒಬ್ಬಾತನನ್ನು ಸಂಧಿಸಿದೆನು. ಆತನೂ ಸಹ ಬರುವುದಾಗಿಯೂ ನನಗೆ ಸಹಾಯಕನಾಗುವುದಾಗಿಯೂ ಹೇಳಿದನು. ಆದರೆ ಬರಲೇ ಇಲ್ಲ. ಮಿ. ಅಬ್ಬಾಸ್ ತಯಾಬ್ಜಿ ಆತನ ತಪ್ಪಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳು

ತ್ತಿದ್ದಾರೆ. ಹೀಗೆ ಬ್ಯಾರಿಸ್ಟರುಗಳನ್ನು ದಕ್ಷಿಣ ಆಫ್ರಿಕಾಕ್ಕೆ ಕರೆದುಕೊಂಡು ಹೋಗಲು ನಾನು ಮಾಡಿದ ಮೂರು ಪ್ರಯತ್ನಗಳಲ್ಲಿ ಒಂದೂ ಫಲಕಾರಿಯಾಗಲಿಲ್ಲ.

ಈ ಸಂದರ್ಭದಲ್ಲಿ ನನಗೆ ಮಿ. ಪೆಸ್ತೊನ್‌ಜೀ ಪಾಷಾರವರ ನೆನಪು ಉಂಟಾಗುತ್ತದೆ. ನಾನು ವಿಲಾಯತಿಯಲ್ಲಿದ್ದಾಗಿನಿಂದ ಅವರೊಡನೆ ಸ್ನೇಹವಾಗಿದ್ದೆನು. ನಾನು ಅವರನ್ನು ಮೊದಲು ನೋಡಿದುದು ಲಂಡನ್ನಿನ ಒಂದು ಶಾಕಾಹಾರಿ ಫಲಾಹಾರ ಮಂದಿರದಲ್ಲಿ. ಇವರ ಸಹೋದರರಾದ ಬರ್‌ಜೋರಿ ಪಾದಷಾರವರನ್ನು ವಕ್ರಮನುಷ್ಯ ಎಂಬ ಅವರ ಪ್ರಸಿದ್ಧ ನಾಮದಿಂದ ಅರಿತಿದ್ದೆನು. ನಾನು ಅವರನ್ನು ನೋಡಿರಲಿಲ್ಲ. ಆದರೆ ಮಿತ್ರರು, ಆತ ವಿಲಕ್ಷಣ ಪುರುಷನೆಂದು ಹೇಳುತ್ತಿದ್ದರು. ಕುದುರೆಗಳಲ್ಲಿ ಕರುಣೆಯಿಂದ ಅವರು ಟ್ರಾಂ ಗಾಡಿಗಳಲ್ಲಿ ಸಂಚರಿಸುತ್ತಿರಲಿಲ್ಲ. ಅದ್ಭುತವಾದ ಮೇಧಾಶಕ್ತಿ ಇದ್ದರೂ ವಿಶ್ವವಿದ್ಯಾಲಯಗಳ ಪದವಿಗಳನ್ನು ನಿರಾಕರಿಸಿದ್ದರು. ಅವರು ಬಹಳ ಸ್ವತಂತ್ರ ಪ್ರವೃತ್ತಿಯುಳ್ಳವರು. ಅವರು ಪಾರಸಿಗಳಾದರೂ ಶಾಕಾಹಾರಿಗಳಾಗಿದ್ದರು. ಪೆಸ್ತೊಂಜೀಗೆ ಇಷ್ಟರ ಮಟ್ಟಿನ ಪ್ರಖ್ಯಾತಿ ಯಿಲ್ಲದಿದ್ದರೂ ಲಂಡನ್ನಿನಲ್ಲಿಯೂ ಅವರ ಪಾಂಡಿತ್ಯ ಪ್ರಖ್ಯಾತವಾಗಿದ್ದಿತು. ನಮ್ಮಿಬ್ಬರನ್ನೂ ಬಂಧಿಸಿದ್ದ ಸಮಾನ ವಿಷಯ ಶಾಕಾಹಾರ, ಪಾಂಡಿತ್ಯವಲ್ಲ. ಏಕೆಂದರೆ ಪಾಂಡಿತ್ಯದಲ್ಲಿ ಅವರಿಗೆ ಸಮನಾಗುವುದು ನನ್ನ ಶಕ್ತಿಗೆ ಮೀರಿದ ವಿಷಯವಾಗಿದ್ದಿತು.

ನಾನು ಅವರನ್ನು ಮತ್ತೆ ಬೊಂಬಾಯಿಯಲ್ಲಿ ಸಂಧಿಸಿದೆನು. ಅವರು ಹೈಕೋರ್ಟಿನಲ್ಲಿ ಪ್ರೊತೊ ನೋಟರಿ (ಒಬ್ಬ ಅಧಿಕಾರಿ)ಯಾಗಿದ್ದರು. ನಾನು ಅವರನ್ನು ಹೋಗಿ ನೋಡಿದಾಗ ಅವರು ಒಂದು ದೊಡ್ಡ ಗುಜರಾತೀ ಶಬ್ದಕೋಶದ ಕಾರ್ಯದಲ್ಲಿ ತೊಡಗಿದ್ದರು. ದಕ್ಷಿಣ ಆಫ್ರಿಕಾದ ಕಾರ್ಯದ ಸಂಬಂಧದಲ್ಲಿ ನಾನು ನೋಡದಿದ್ದ ಮಿತ್ರರೇ ಇರಲಿಲ್ಲವೆಂದು ನಾನು ಹೇಳಬಹುದು. ಪೆಸ್ತೊಂಜೀ ಪಾದ್‌ಷಾ ನನಗೆ ಸಹಾಯ ಮಾಡಲು ತಿರಸ್ಕರಿಸಿದುದು ಮಾತ್ರವೇ ಅಲ್ಲ. ಮತ್ತೆ ದಕ್ಷಿಣ ಆಫ್ರಿಕಕ್ಕೆ ಹೋಗಬೇಡ ಎಂದೂ ಕೂಡ ನನಗೆ ಸಲಹೆ ಮಾಡಿದರು.

"ನಿಮಗೆ ಸಹಾಯ ಮಾಡುವುದು ಸಾಧ್ಯವಿಲ್ಲ. ನೀವೂ ಕೂಡ

ದಕ್ಷಿಣ ಆಫ್ರಿಕಾಕ್ಕೆ ಹೋಗುವುದು ನನಗೆ ಒಪ್ಪಿಗೆಯಿಲ್ಲ. ನಮ್ಮ ದೇಶದಲ್ಲಿ ಮಾಡುವುದಕ್ಕೆ ಕೆಲಸವಿಲ್ಲವೆ ? ನೋಡಿ ನಮ್ಮ ಭಾಷೆಗಾಗಿ ಮಾಡಬೇಕಾದ ಕೆಲಸ ಕಡಿಮೆ ಇದೆಯೇ ? ನಾನು ವೈಜ್ಞಾನಿಕ ಪದಗಳನ್ನು ಕಂಡುಹಿಡಿಯ ಬೇಕಾಗಿದೆ. ಆದರೆ ಇದು ನಾವು ಮಾಡಲು ಇರುವ ಕೆಲಸದ ಒಂದು ಭಾಗ ಮಾತ್ರ. ನಮ್ಮ ದೇಶದ ದಾರಿದ್ರ್ಯವನ್ನು ಕುರಿತು ಯೋಚಿಸಿ. ನಮ್ಮ ಜನ, ದಕ್ಷಿಣ ಆಫ್ರಿಕಾದಲ್ಲಿ ಕಷ್ಟಸ್ಥಿತಿಯಲ್ಲಿರುವುದು ನಿಜ. ಆದರೆ ಆ ಕೆಲಸಕ್ಕೆ ನಿಮ್ಮಂತಹವರನ್ನು ಬಲಿಕೊಡುವುದನ್ನು ನಾನು ಒಪ್ಪುವುದಿಲ್ಲ. ನಾವು ಮೊದಲು ಇಲ್ಲಿ ಸ್ವರಾಜ್ಯವನ್ನು ಸಂಪಾದಿಸೋಣ. ಅದರಿಂದ ಅಲ್ಲಿ ರುವ ನಮ್ಮ ದೇಶದವರಿಗೆ ಸ್ವಾಭಾವಿಕವಾಗಿಯೇ ನಾವು ಸಹಾಯ ಮಾಡ ಬಹುದು. ನಿಮ್ಮ ಮನಸ್ಸನ್ನು ತಿರುಗಿಸಲು ನನ್ನಿಂದ ಸಾಧ್ಯವಿಲ್ಲವೆಂಬುದು ನನಗೆ ಗೊತ್ತು. ಆದರೆ ನಿಮ್ಮ ಜತೆಗೆ ನಿನ್ನಂಥ ಇತರರು ಯಾರನ್ನೂ ಕಳುಹಿಸಲು ನಾನು ಪ್ರೋತ್ಸಾಹ ಕೊಡುವುದಿಲ್ಲ" ಎಂದರು.

ಅವರ ಈ ಸಲಹೆ ನನಗೆ ಒಪ್ಪಲಿಲ್ಲ. ಆದರೆ ಅದರಿಂದ ಪೆಸ್ತೊಂಜೀ ಯವರಲ್ಲಿ ನನ್ನ ಆದರ ಹೆಚ್ಚಾಯಿತು. ನಮ್ಮ ದೇಶದಲ್ಲಿ ಮತ್ತು ನಮ್ಮ ಭಾಷೆಯಲ್ಲಿ ಆತನಿಗಿದ್ದ ಪ್ರೇಮವನ್ನು ನಾನು ಮೆಚ್ಚಿದೆನು. ಈ ಸಂಗತಿ ಯಿಂದ ನಮ್ಮಿಬ್ಬರ ಸ್ನೇಹ ಇನ್ನೂ ಹೆಚ್ಚು ನಿಕಟವಾಯಿತು. ಅವರ ಅಭಿಪ್ರಾಯ ನನಗೆ ಅರ್ಥವಾಯಿತು. ಆದರೆ ದಕ್ಷಿಣ ಆಫ್ರಿಕಾದಲ್ಲಿ ನನ್ನ ಕೆಲಸವನ್ನು ಬಿಡುವುದರ ಬದಲು, ಅದನ್ನು ಮುಂದುವರಿಸಬೇಕೆಂಬ ನನ್ನ ಸಂಕಲ್ಪ ಇನ್ನೂ ಹೆಚ್ಚು ದೃಢವಾಯಿತು. ದೇಶಪ್ರೇಮಿ, ಮಾತೃ ಭೂಮಿಯ ಸೇವೆಯ ಯಾವ ಭಾಗವನ್ನೂ ಉದಾಸೀನ ಮಾಡುವುದು ಸಾಧ್ಯವಿಲ್ಲ. ನನಗೆ ಗೀತೆಯ ಉಪದೇಶ ಸ್ಪಷ್ಟವೂ ಅಸಂದಿಗ್ಧವೂ ಆಗಿದ್ದಿತು.

ಶ್ರೇಯಾನ್ ಸ್ವಧರ್ಮೋ ವಿಗುಣಃ
ಪರಧರ್ಮಾತ್ ಸ್ವನುಷ್ಠಿತಾತ್
ಸ್ವಧರ್ಮೇ ನಿಧನಂ ಶ್ರೇಯಃ
ಪರಧರ್ಮೋ ಭಯಾವಹಃ

ಚೆನ್ನಾಗಿ ಅನುಷ್ಠಾನ ಮಾಡಿದ ಪರಧರ್ಮಕ್ಕಿಂತಲೂ, ಗುಣವಿಲ್ಲದ ಸ್ವಧರ್ಮವೇ ಶ್ರೇಯಸ್ಕರವಾದುದು. ಸ್ವಧರ್ಮದಲ್ಲಿ ಸಾಯುವುದು ಕೂಡ ಒಳ್ಳೆಯದು. ಪರಧರ್ಮ ಭಯವನ್ನುಂಟುಮಾಡುವುದಾಗಿದೆ."

೨೮

ಪೂನಾ ಮತ್ತು ಮದರಾಸುಗಳಲ್ಲಿ

ಸರ್ ಫಿರೋಜ್‌ಷಾರವರು ನನ್ನ ಮಾರ್ಗವನ್ನು ಸುಲಭವಾಗಿ ಮಾಡಿದ್ದರು. ಅದುವರಿಂದ ನಾನು ಬೊಂಬಾಯಿಯಿಂದ ಪೂನಾಕ್ಕೆ ಹೋದೆನು. ಪೂನಾದಲ್ಲಿ ಎರಡು ಪಕ್ಷಗಳಿದ್ದವು. ನನಗೆ ಎಲ್ಲ ಪಕ್ಷಗಳವರ, ಎಲ್ಲ ಅಭಿಪ್ರಾಯಗಳವರ, ಸಹಾಯವೂ ಬೇಕಾಗಿದ್ದಿತು. ನಾನು ಮೊದಲು, ಲೋಕಮಾನ್ಯ ತಿಲಕರನ್ನು ನೋಡಿದೆನು. ಅವರು ಹೀಗೆ ಹೇಳಿದರು :

"ಎಲ್ಲ ಪಕ್ಷಗಳವರ ಸಹಾಯವನ್ನೂ ನೀವು ಹೊಂದಲು ಬಯಸುವುದು ಸರಿ. ದಕ್ಷಿಣ ಆಫ್ರಿಕಾದ ಪ್ರಶ್ನೆಯ ಮೇಲೆ ಭಿನ್ನಾಭಿಪ್ರಾಯವಿಲ್ಲ. ಆದರೆ ನಿಮ್ಮ ಸಭೆಗೆ, ಯಾವ ಪಕ್ಷಕ್ಕೂ ಸೇರದ ಅಧ್ಯಕ್ಷರು ಬೇಕು. ಪ್ರೊಫೆಸರ್ ಭಂಡಾರ್ಕರ್‌ರವರನ್ನು ಹೋಗಿ ನೋಡಿ. ಈಚೆಗೆ ಅವರು ಯಾವ ಸಾರ್ವಜನಿಕ ಕಾರ್ಯದಲ್ಲಿಯೂ ಭಾಗವಹಿಸುತ್ತಿಲ್ಲ. ಒಂದು ವೇಳೆ ಈ ಪ್ರಶ್ನೆ ಅವರನ್ನು ಹೊರಕ್ಕೆ ಎಳೆಯಬಹುದು. ಅವರನ್ನು ನೋಡಿ ಬಂದು ಅವರು ಏನು ಹೇಳುತ್ತಾರೆಂಬುದನ್ನು ನನಗೆ ಹೇಳಿ. ನಾನು ನಿಮಗೆ ಪೂರ್ಣ ಸಹಾಯ ಮಾಡ ಬಯಸುತ್ತೇನೆ. ನಿಮಗೆ ಬೇಕಾದಾಗ ನೀವು ನನ್ನನ್ನು ನೋಡಬಹುದು. ಯಾವಾಗ ಬೇಕಾದರೂ ನನ್ನನ್ನು ಬಂದು ನೋಡಿ."

ಲೋಕಮಾನ್ಯರೊಂದಿಗೆ ಅದು ನನ್ನ ಮೊದಲನೆಯ ಭೆಟ್ಟಿಯಾಗಿದ್ದಿತು. ಅವರನ್ನು ನೋಡಿದ ಮೇಲೆ ಅವರು ಅಷ್ಟು ಜನ ಪ್ರಿಯರಾಗಿರುವುದರ ಮತ್ತು ಅವರ ವಿಶಿಷ್ಟವಾದ ವ್ಯಕ್ತಿತ್ವದ ರಹಸ್ಯ ನನಗೆ ಗೊತ್ತಾಯಿತು.

ಆನಂತರ ನಾನು ಗೋಖಲೆಯವರನ್ನು ಹೋಗಿ ನೋಡಿದೆನು. ಅವರು ಫೆರ್ಗುಸನ್ ಕಾಲೇಜಿನ ಆವರಣದಲ್ಲಿದ್ದರು. ಅವರು ನನ್ನನ್ನು ಪ್ರೇಮ

ದಿಂದ ಸ್ವಾಗತಿಸಿದರು. ನನ್ನ ಹೃದಯ, ಕೂಡಲೇ ಅವರಿಗೆ ಮಾರು ಹೋಯಿತು. ಅವರೊಂದಿಗೂ ಅದೇ ನನ್ನ ಪ್ರಥಮ ಭೆಟ್ಟಿಯಾಗಿದ್ದಿತು. ಆದರೆ ನಮ್ಮ ಭೆಟ್ಟಿ, ಹಳೆಯ ಮಿತ್ರತ್ವದ ಪುನರುಜ್ಜೀವನವೋ ಎಂಬಂತೆ ತೋರಿತು. ಸರ್ ಫಿರೋಜ್‌ಷಾ ನನಗೆ ಹಿಮಾಲಯದಂತೆ ಕಂಡಿದ್ದರು. ಲೋಕಮಾನ್ಯರು ಸಾಗರದಂತೆ ಕಂಡಿದ್ದರು. ಆದರೆ ಗೋಖಲೆ, ಗಂಗಾ ನದಿಯಂತಿದ್ದರು. ಆ ಪವಿತ್ರವಾದ ನದಿಯಲ್ಲಿ ಯಾರು ಬೇಕಾದರೂ ಚೈತನ್ಯದಾಯಕ ಸ್ನಾನ ಮಾಡಬಹುದಾಗಿದ್ದಿತು. ಹಿಮಾಲಯವನ್ನು ಹತ್ತುವುದು ಸಾಧ್ಯವಿರಲಿಲ್ಲ; ಸಮುದ್ರದಲ್ಲಿ ಯಾನ ಮಾಡುವುದೂ ಸುಲಭವಲ್ಲ. ಆದರೆ ಗಂಗಾನದಿ ಎಲ್ಲರನ್ನೂ ತೊಡೆಯ ಮೇಲೆ ಆಡಲು, ಹೃದಯದಲ್ಲಿ ನಲಿದಾಡಲು ಆಹ್ವಾನಿಸುತ್ತಾಳೆ. ಗಂಗಾ ನದಿಯಲ್ಲಿ ಪುಟ್ಟ ನಾವೆಯಲ್ಲಿ ಹುಟ್ಟುಹಾಕುತ್ತಾ ಹೋಗಬಹುದು ಅದೇ ಒಂದು ಆನಂದ, ಉಪಾಧ್ಯಾಯನು, ಶಾಲೆಗೆ ಸೇರಲು ಬಂದಿರುವ ವಿದ್ಯಾರ್ಥಿಯನ್ನು ಪರೀಕ್ಷಿಸುವಂತೆ ಗೋಖಲೆಯವರು ನನ್ನನ್ನು ಸೂಕ್ಷ್ಮವಾಗಿ ಪರೀಕ್ಷಿಸಿದರು. ನಾನು ಯಾರು ಯಾರನ್ನು ನೋಡಬೇಕು? ಹೇಗೆ ನೋಡಬೇಕು? ಎಂದೆಲ್ಲ ಅವರು ನನಗೆ ಹೇಳಿ ಕೊಟ್ಟರು. ನನ್ನ ಭಾಷಣವನ್ನು ಕೇಳ ಬಯಸಿದರು. ನನಗೆ ಕಾಲೇಜನ್ನೆಲ್ಲ ತೋರಿಸಿದರು "ಯಾವಾಗ ಬೇಕಾದರೂ ನನ್ನನ್ನು ಬಂದು ನೋಡಿ. ಭಂಡಾರ್ಕರರನ್ನು ಸಂದರ್ಶಿಸಿದನಂತರ ಫಲಿತಾಂಶವನ್ನು ಬಂದು ಹೇಳಿ" ಎಂದು ನನ್ನನ್ನು ಅತ್ಯಂತ ಸುಖಿಯನ್ನಾಗಿಮಾಡಿ ಬೀಳ್ಕೊಟ್ಟರು. ಗೋಖಲೆಯವರು, ಜೀವಿಸಿದ್ದಾಗಲೂ ಮತ್ತು ಈಗಲೂ, ರಾಜಕೀಯ ಕ್ಷೇತ್ರದಲ್ಲಿ ನನ್ನ ಹೃದಯದಲ್ಲಿ ಆಕ್ರಮಿಸಿದ ಸ್ಥಾನವನ್ನು ಮತ್ತಾರೂ ಆಕ್ರಮಿಸಲಿಲ್ಲ. ಅದು ವಿಶೇಷ ರೀತಿಯದಾಗಿದ್ದಿತು.

ಡಾಕ್ಟರ್ ಭಂಡಾರ್ಕರರು, ತಂದೆಯ ಮಮತೆಯಿಂದ ನನ್ನನ್ನು ಬರಮಾಡಿಕೊಂಡರು. ನಾನು ಅವರನ್ನು ನೋಡುವುದಕ್ಕೆ ಹೋದಾಗ ಮಧ್ಯಾಹ್ನವಾಗಿದ್ದಿತು. ಅಂತಹ ಸಮಯದಲ್ಲಿಯೂ ನಾನು ನೋಡಬೇಕಾದವರನ್ನು ನೋಡುತ್ತಾ ಕಾರ್ಯತತ್ಪರನಾಗಿದ್ದುದು ಈ ತೋ ಯೋಗಿ ಶಾಸ್ತ್ರಜ್ಞರಿಗೆ ತುಂಬ ಮೆಚ್ಚಿಕೆಯಾಯಿತು. ಯಾವ ಪಕ್ಷಕ್ಕೂ

ಸೇರದವರೇ ಸಭೆಗೆ ಅಧ್ಯಕ್ಷರಾಗಬೇಕೆಂದು ನಾನು ಒತ್ತಿ ಹೇಳಿದುದನ್ನು ಅವರು ಕೂಡಲೇ ಒಪ್ಪಿ ಅದೇ ಸರಿ," ಎಂದು ಹೇಳಿದರು.

ನನ್ನ ಮಾತುಗಳನ್ನೆಲ್ಲ ಕೇಳಿದಮೇಲೆ ಅವರು ಹೀಗೆ ಹೇಳಿದರು: "ಯಾರನ್ನು ಬೇಕಾದರೂ ಕೇಳಿ. ನಾನು ಈಚೆಗೆ ರಾಜಕೀಯದಲ್ಲಿ ಭಾಗ ವಹಿಸುವುದಿಲ್ಲವೆಂದು ಹೇಳುತ್ತಾರೆ. ಆದರೆ ನಿಮಗೆ ಇಲ್ಲ ಎನ್ನಲಾರೆ. ನಿಮ್ಮ ವಾದದಲ್ಲಿ ತಿರುಳಿದೆ; ನಿಮ್ಮ ಉದ್ಯಮಶೀಲತೆ ಸ್ತುತ್ಯವಾಗಿದೆ. ಆದುದರಿಂದ ನಿಮ್ಮ ಸಭೆಯಲ್ಲಿ ಭಾಗವಹಿಸಲು ನಾನು ನಿರಾಕರಿಸಲಾರೆ. ತಿಲಕ್ ಮತ್ತು ಗೋಖಲೆಯವರ ಸಲಹೆಯನ್ನು ನೀವು ಪಡೆದುದು ಒಳ್ಳೆಯದಾಯಿತು. ಎರಡೂ ಪಕ್ಷಗಳ ಆಶ್ರಯದಲ್ಲಿ ನಡೆಯುವ ಸಭೆಗೆ, ನಾನು ಸಂತೋಷದಿಂದ ಅಧ್ಯಕ್ಷನಾಗುವೆನೆಂದು ಅವರಿಗೆ ತಿಳಿಸಿ. ಸಭೆ, ನಡೆಯಬೇಕಾದ ಕಾಲವನ್ನು ನೀವು ನನಗೆ ಅನುಕೂಲವಾಗಿ ಇಡಬೇಕಾದುದಿಲ್ಲ. ಅವರಿಗೆ ಅನುಕೂಲವಾದ ಕಾಲ, ನನಗೂ ಅನುಕೂಲ." ಹೀಗೆ ಧನ್ಯವಾದಗಳನ್ನು ಹೇಳಿ ಆಶೀರ್ವದಿಸಿ ಕಳುಹಿಸಿಕೊಟ್ಟರು.

ಯಾವ ಗದ್ದಲವೂ ಅಟ್ಟಹಾಸವೂ ಇಲ್ಲದೆ, ಈ ತ್ಯಾಗಿಗಳಾದ ವಿದ್ವಾಂಸರ ಗುಂಪು, ಒಂದು ಸಾಧಾರಣವಾದ ಕಟ್ಟಡದಲ್ಲಿ ಸಭೆ ಸೇರಿಸಿ, ನನಗೆ ಪೂರ್ಣ ಪ್ರೋತ್ಸಾಹವನ್ನು ಕೊಟ್ಟು ಕಳುಹಿಸಿದರು. ನಾನು ಹಿಡಿದ ಕಾರ್ಯದಲ್ಲಿ ನನಗೆ ಹೆಚ್ಚು ಭರವಸೆಯುಂಟಾಗಿ ಅಲ್ಲಿಂದ ಸಂತೋಷದಿಂದ ಹೊರಟೆನು.

ಮುಂದೆ ನಾನು ಮದರಾಸಿಗೆ ಹೋದೆನು. ನನಗೆ, ಅತ್ಯುತ್ಸಾಹ ದಿಂದ ಹುಚ್ಚು ಹಿಡಿದಂತೆ ಆಗಿದ್ದಿತು. ಬಾಲಸುಂದರಂನ ಮೊಕದ್ದಮೆಯ ವಿಷಯ, ಸಭೆಯಲ್ಲಿ ಒಳ್ಳೆಯ ಪರಿಣಾಮವನ್ನುಂಟುಮಾಡಿತು. ಅಚ್ಚಾಗಿದ್ದ ನನ್ನ ಭಾಷಣ, ಸ್ವಲ್ಪ ಉದ್ದವಾಗಿಯೇ ಇದ್ದಿತು. ಆದರೆ ಶ್ರೋತೃಗಳು ಪ್ರತಿ ಮಾತನ್ನೂ ನಿಶ್ಶಬ್ದವಾಗಿ ಕುಳಿತು ಕೇಳಿದರು. ಸಭೆ ಮುಗಿದಮೇಲೆ ಹಸಿರು ಪುಸ್ತಕದ ಪ್ರತಿಗಳೆಲ್ಲ "ಲೂಟಿ"ಯಾಗಿ ಹೋದವು. ನಾನು ಮತ್ತೆ ಹತ್ತು ಸಾವಿರ ಪ್ರತಿಗಳನ್ನು ತಿದ್ದಿ ಮುದ್ರಣ ಮಾಡಿಸಿದೆ. ಅವೂ ಬಹು ಬೇಗ ಮಾರಾಟವಾದವು. ಅಷ್ಟೊಂದು ಪ್ರತಿಗಳು ಬೇಕಿರಲಿಲ್ಲ ಎಂದು ನನಗೆ ಗೊತ್ತಾಯಿತು. ನನ್ನ ಉತ್ಸಾಹದಲ್ಲಿ ನಾನು ಮಾರಾಟ

ವಾಗುವುದಕ್ಕಿಂತ ಹೆಚ್ಚು ಪ್ರತಿಗಳನ್ನು ಛಾಪಿಸಿದ್ದೆನು. ನನ್ನ ಭಾಷಣ, ಇಂಗ್ಲೀಷ್ ಬಲ್ಲವರಿಗಾಗಿ ಬರೆದುದಾಗಿದ್ದಿತು. ಮದರಾಸಿನಲ್ಲಿ ಇಂಗ್ಲೀಷ್ ಬಲ್ಲವರು ಮಾತ್ರವೇ ಅಷ್ಟು ಪ್ರತಿಗಳನ್ನೂ ಕೊಳ್ಳುವಂತಿರಲಿಲ್ಲ.

ಈ ಭಾಗದಲ್ಲಿ ನನಗೆ ದೊಡ್ಡ ಸಹಾಯ ಮದ್ರಾಸ್ ಸ್ಟ್ಯಾಂಡರ್ಡ್ ಸಂಪಾದಕರಾದ ದಿವಂಗತ ಪರಮೇಶ್ವರನ್ ಪಿಳ್ಳೆಯವರಿಂದ ದೊರೆಯಿತು. ಅವರು ದಕ್ಷಿಣ ಆಫ್ರಿಕಾದ ಪ್ರಶ್ನೆಯನ್ನು ಚೆನ್ನಾಗಿ ಅಧ್ಯಯನ ಮಾಡಿದ್ದರು. ಅವರು ನನ್ನನ್ನು ಪದೇ ಪದೇ ತಮ್ಮ ಆಫೀಸಿಗೆ ಆಹ್ವಾನಿಸಿ ಸಲಹೆ ಕೊಡುತ್ತಿದ್ದರು. ಹಿಂದೂ ಪತ್ರಿಕೆಯ ಜಿ. ಸುಬ್ರಹ್ಮಣ್ಯಂ ಮತ್ತು ಡಾಕ್ಟರ್ ಸುಬ್ರಹ್ಮಣ್ಯಂ ಇವರೂ ಸಹ ಬಹಳ ಸಹಾನುಭೂತಿಯುಳ್ಳವರಾಗಿದ್ದರು. ಆದರೆ ಶ್ರೀ ಜಿ. ಪರಮೇಶ್ವರನ್ ಪಿಳ್ಳೆಯವರು ನನ್ನ ಕಾರ್ಯಕ್ಕೆ ತಮ್ಮ ಪತ್ರಿಕೆಯನ್ನು ಉಪಯೋಗಿಸಲು ಪೂರ್ಣ ಅವಕಾಶ ಕೊಟ್ಟರು. ನಾನು ಆ ಪತ್ರಿಕೆಯನ್ನು ನನ್ನ ಪ್ರಚಾರ ಕಾರ್ಯಕ್ಕೆ ಉಪಯೋಗಿಸಿಕೊಂಡೆನು. ನನಗೆ ಜ್ಞಾಪಕವಿರುವ ಮಟ್ಟಿಗೆ ಪಚ್ಚಯ್ಯಪ್ಪ ಭವನದಲ್ಲಿ ನಡೆದ ಸಭೆಗೆ ಡಾ. ಸುಬ್ರಹ್ಮಣ್ಯಂ ಅಧ್ಯಕ್ಷರಾಗಿದ್ದರು.

ಮದರಾಸಿನ ಮಿತ್ರರು ನನ್ನ ಮೇಲೆ ವಾತ್ಸಲ್ಯದ ವೃಷ್ಟಿಯನ್ನೇ ಕರೆದರು. ನಾನು ಮಾಡುತ್ತಿದ್ದ ಕಾರ್ಯದಲ್ಲಿ ಅವರ ಉತ್ಸಾಹ ಅಪಾರವಾಗಿದ್ದಿತು. ನಾನು ಅವರೊಂದಿಗೆ ಇಂಗ್ಲಿಷಿನಲ್ಲಿಯೇ ಮಾತನಾಡಬೇಕಾಗಿದ್ದರೂ ಸಹ ನನಗೆ ನನ್ನ ಮನೆಯವರ ಜತೆಯಲ್ಲಿದ್ದಂತೆಯೇ ಭಾಸವಾಯಿತು. ಪ್ರೇಮವು ಬಿಡಿಸಲಾರದ ಬಂಧನವಲ್ಲವೆ ?

೨೮

ಬೇಗ ಹಿಂದಿರುಗಿ

ನಾನು ಮದರಾಸಿನಿಂದ ಕಲ್ಕತ್ತಾಕ್ಕೆ ಹೋದೆ. ಅಲ್ಲಿ ಕಷ್ಟಗಳೇ ನನ್ನನ್ನು ಸುತ್ತುಗಟ್ಟಿದುವು. ನನಗೆ ತಿಳಿದವರು ಅಲ್ಲಿ ಯಾರೂ ಇರಲಿಲ್ಲ. ಆದುದರಿಂದ ನಾನು ಗ್ರೇಟ್ ಈಸ್ಟರ್ನ್ ಹೋಟೆಲಿನಲ್ಲಿ ಒಂದು ಕೋಣೆಯಲ್ಲಿ ಇಳಿದುಕೊಂಡೆನು. ಇಲ್ಲಿ ನನಗೆ ಡೈಲಿ ಟೆಲಿಗ್ರಾಫ್‌ನ ಪ್ರತಿನಿಧಿಯಾದ ಎಲ್ಲರ್‌ತೋರ್ಪ್‌ರವರ ಪರಿಚಯವಾಯಿತು. ಅವರು ತಾವು

ಉಳಿದಿದ್ದ ಬೆಂಗಾಲ್ ಕ್ಲಬ್‌ಗೆ ನನ್ನನ್ನು ಆಹ್ವಾನಿಸಿದರು. ಭಾರತೀಯರನ್ನು ಆ ಕ್ಲಬ್ಬಿನ ಡ್ರಾಯಿಂಗ್ ರೂಮ್ (ದಿವಾನಖಾನೆ)ಗೆ ಸೇರಿಸುವುದಿಲ್ಲವೆಂಬುದು ಆಗ ಅವರಿಗೆ ತಿಳಿದಿರಲಿಲ್ಲ. ಈ ನಿರ್ಬಂಧ ಗೊತ್ತಾದ ಮೇಲೆ ಅವರು ನನ್ನನ್ನು ತಮ್ಮ ಕೊಠಡಿಗೆ ಕರೆದುಕೊಂಡು ಹೋದರು. ಭಾರತೀಯರ ವಿಷಯದಲ್ಲಿ ಅಲ್ಲಿನ ಇಂಗ್ಲಿಷಿನವರಿಗಿದ್ದ ಈ ಹೀನ ಭಾವನೆಗಾಗಿ ಅವರು ದುಃಖವನ್ನು ಸೂಚಿಸಿ, ನನ್ನನ್ನು ದಿವಾನಖಾನೆಗೆ ಕರೆದೊಯ್ಯಲು ಸಾಧ್ಯವಾಗದುದಕ್ಕೆ ನನ್ನ ಕ್ಷಮೆಯನ್ನು ಕೇಳಿದರು.

ಬಂಗಾಳದ ಅಚ್ಚುಮೆಚ್ಚಿನ ವ್ಯಕ್ತಿಯೆಂದು ಹೆಸರುಗೊಂಡಿದ್ದ ಸರ್ ಸುರೇಂದ್ರನಾಥ ಬ್ಯಾನರ್ಜಿಯವರನ್ನು ನಾನು ನೋಡಲೇ ಬೇಕಾಗಿದ್ದಿತು. ನಾನು ಅವರನ್ನು ನೋಡಲು ಹೋದಾಗ ಅವರ ಸುತ್ತ ಅನೇಕ ಮಿತ್ರರು ಸೇರಿದ್ದರು. ನನಗೆ ಅವರು ಹೀಗೆ ಹೇಳಿದರು:

"ನಿಮ್ಮ ಕಾರ್ಯದಲ್ಲಿ ಇಲ್ಲಿಯ ಜನರಿಗೆ ಕುತೂಹಲವಿಲ್ಲವೆಂದು ಶಂಕಿಸುತ್ತೇನೆ. ನಿಮಗೇ ತಿಳಿದಿರುವಂತೆ, ಇಲ್ಲಿ ನಮ್ಮ ತೊಂದರೆಗಳು ಕಡಿಮೆಯಿಲ್ಲ. ಮಹಾರಾಜರುಗಳ ಸಹಾನುಭೂತಿಯನ್ನೆಲ್ಲ ನೀವು ಸಂಪಾದಿಸಬೇಕಾಗುವುದು. ಜ್ಞಾಪಕವಿರಲಿ; ನೀವು ಬ್ರಿಟಿಷ್ ಇಂಡಿಯನ್ ಅಸೋಸಿಯೇಷನ್ ಪ್ರತಿನಿಧಿಗಳನ್ನೂ ನೋಡಬೇಕು. ನೀವು ರಾಜಾ ಸರ್ ಪ್ಯಾರಿಮೋಹನ್ ಮುಕರ್ಜಿ ಮತ್ತು ಮಹಾರಾಜಾ ಠಾಕೂರ್ ಇವರನ್ನೂ ಕಾಣಬೇಕು. ಇವರಿಬ್ಬರೂ ಉದಾರ ಹೃದಯಿಗಳು ಮತ್ತು ಸಾರ್ವಜನಿಕ ಕಾರ್ಯದಲ್ಲಿ ಭಾಗವಹಿಸುತ್ತಾರೆ."

ನಾನು ಆ ಇಬ್ಬರು ಮಹನೀಯರನ್ನೂ ಹೋಗಿ ನೋಡಿದೆನು. ಏನೂ ಪ್ರಯೋಜನವಾಗಲಿಲ್ಲ. ಇಬ್ಬರೂ ನನ್ನನ್ನು ಉದಾಸೀನಭಾವದಿಂದ ಸ್ವೀಕರಿಸಿದರು. "ಕಲ್ಕತ್ತದಲ್ಲಿ ಸಭೆಯನ್ನು ಕರೆಯುವುದು ಸುಲಭವಾದ ಕೆಲಸವಲ್ಲ. ಇಲ್ಲಿ ಏನಾಗಬೇಕಾದರೂ ಎಲ್ಲ ಸುರೇಂದ್ರನಾಥ ಬ್ಯಾನರ್ಜಿಯವರ ಮೇಲೆ ಅವಲಂಬಿಸಿದೆ" ಎಂದು ಹೇಳಿದರು.

ನನ್ನ ಕಷ್ಟ ಇನ್ನೂ ಹೆಚ್ಚಾಗುತ್ತಿರುವುದು ನನಗೆ ತೋರಿತು. ನಾನು ಅಮೃತ ಬಜಾರ್ ಪತ್ರಿಕೆಯ ಕಛೇರಿಗೆ ಭೆಟ್ಟಿಯಿತ್ತೆನು. ನನ್ನನ್ನು ಅಲ್ಲಿ ಸಂಧಿಸಿದ ಗೃಹಸ್ಥ, ನಾನೊಬ್ಬ ಪ್ರವಾಸೀ ಎಹೂದ್ಯ ಎಂದು ಭಾವಿಸಿದ.

ವಂಗವಾಸಿ ಪತ್ರಿಕೆ, ಇವಕ್ಕಿಂತ ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಯಿತು. ಅದರ ಸಂಪಾದಕರು ನನ್ನನ್ನು ನೋಡುವುದಕ್ಕೆ ಒಂದು ಗಂಟೆ ಕಾಯಿಸಿದರು. ಅವರನ್ನು ಸಂಧಿಸಲು ಬಹಳ ಜನ ಬಂದಿದ್ದರು ಎಂಬುದು ನಿಜ. ಆದರೆ ಅವರನ್ನೆಲ್ಲ ನೋಡಿ ಮುಗಿಸಿದ ಮೇಲೂ ಸಹ ಸಂಪಾದಕರು ನನ್ನ ಕಡೆ ನೋಡಲಿಲ್ಲ. ತುಂಬ ಹೊತ್ತು ಕಾದಿದ್ದನಂತರ ನಾನು ಧೈರ್ಯ ಮಾಡಿ ನನ್ನ ವಿಷಯವನ್ನು ಅವರಿಗೆ ಹೇಳಲು ಮೊದಲು ಮಾಡಿದೆನು. "ನಮಗೆ ಕೈತುಂಬ ಕೆಲಸವಿರುವುದು ನಿಮಗೆ ಕಾಣುವುದಿಲ್ಲವೆ? ನಿಮ್ಮ ಹಾಗೆ ಬರುವವರ ಸಂಖ್ಯೆಗೆ ಮಿತಿಯಿಲ್ಲ. ನೀವು ಹೊರಟು ಹೋಗಿ. ನನಗೆ ನಿಮ್ಮ ಮಾತನ್ನು ಕೇಳುವ ಮನಸ್ಸಿಲ್ಲ" ಎಂದರು. ಒಂದು ಗಳಿಗೆ ನನಗೆ ಕೋಪ ಬಂದಿತು. ಆದರೆ ತತ್‌ಕ್ಷಣ ನನಗೆ ಸಂಪಾದಕನ ಸ್ಥಿತಿಯು ಅರಿವಾಯಿತು. ವಂಗವಾಸಿಯು ಪ್ರಸಿದ್ಧಿಯನ್ನು ನಾನು ಕೇಳಿದ್ದೆನು. ಪತ್ರಿಕಾ ಕಛೇರಿಗೆ ಜನ ಪ್ರವಾಹದಂತೆ ನುಗ್ಗುತ್ತಿದ್ದುದನ್ನು ನಾನು ಪ್ರತ್ಯಕ್ಷ ನೋಡಿದ್ದೆನು. ಅವರೆಲ್ಲ ಸಂಪಾದಕನಿಗೆ ಗೊತ್ತಿದ್ದವರೆ. ಆತನ ಪತ್ರಿಕೆಗೆ ಚರ್ಚಿಸಲು ವಿಷಯುಗಳಿಲ್ಲದೆ ಇರಲಿಲ್ಲ. ದಕ್ಷಿಣ ಆಫ್ರಿಕವೋ? ಆದರ ವಿಷಯವನ್ನೇ ಆಗ ಯಾರೂ ಕೇಳಿರಲಿಲ್ಲ.

ದುಃಖವನ್ನು ಅನುಭವಿಸುತ್ತಿರುವವನ ದೃಷ್ಟಿಯಲ್ಲಿ ತನ್ನ ಕಷ್ಟ ಎಷ್ಟೇ ಹೆಚ್ಚಾಗಿರಲಿ, ಪತ್ರಿಕೆಯ ಸಂಪಾದಕನಿಗೆ ಅವನೂ ಎಲ್ಲರಂತೆಯೇ ಕಷ್ಟವುಳ್ಳ ತನ್ನಲ್ಲಿ ಬರುವ ಅನೇಕರ ಪೈಕಿ ಒಬ್ಬ ಮಾತ್ರ. ಸಂಪಾದಕನು ಎಲ್ಲರನ್ನೂ ನೋಡುವುದು ಹೇಗೆ ಸಾಧ್ಯ? ಅಲ್ಲದೆ ದುಃಖಿತನು, ಸಂಪಾದ ಕನಿಗೆ ದೇಶದಲ್ಲಿ ಬಹಳ ಶಕ್ತಿಯಿದೆ ಎಂದು ಊಹಿಸಿಕೊಳ್ಳುತ್ತಾನೆ. ಆದರೆ ಸಂಪಾದಕನಿಗೆ ಗೊತ್ತು, ತನ್ನ ಅಧಿಕಾರ ತನ್ನ ಕೊಠಡಿಯ ಆಚೆಗೆ ನಡೆಯುವುದಿಲ್ಲವೆಂದು. ಆದರೆ ನಾನು ನಿರುತ್ಸಾಹಿಯಾಗಲಿಲ್ಲ. ನಾನು ಇತರ ಪತ್ರಿಕೆಗಳ ಸಂಪಾದಕರನ್ನು ನೋಡುತ್ತಲೇ ಇದ್ದೆನು. ಪದ್ಧತಿಯಂತೆ ನಾನು ಆಂಗ್ಲೋ ಇಂಡಿಯನ್ ಪತ್ರಿಕೆಗಳ ಸಂಪಾದಕರನ್ನೂ ಹೋಗಿ ನೋಡಿದೆನು. ಸ್ಟೇಟ್ಸ್‌ಮನ್ ಮತ್ತು ಇಂಗ್ಲಿಷ್‌ಮನ್ ಪತ್ರಿಕೆಗಳು ದಕ್ಷಿಣ ಆಫ್ರಿಕಾ ಪ್ರಶ್ನೆಯ ಪ್ರಾಮುಖ್ಯತೆಯನ್ನು ಮನಗಂಡವು. ನಾನು ಅವರಿಗೆ

ಆ ಪ್ರಶ್ನೆಗಳನ್ನು ವಿವರವಾಗಿ ತಿಳಿಸಿದೆನು. ಅವರು ಅವನ್ನು ಪೂರ್ಣವಾಗಿ ಪ್ರಕಟಿಸಿದರು.

ಇಂಗ್ಲಿಷ್‌ಮನ್ ಪ್ರತಿಕೆಯ ಸಂಪಾದಕ ಮಿ. ಸ್ಯಾಂಡರ್ಸ್‌ರು ನನ್ನನ್ನು ತಮ್ಮವನನ್ನಾಗಿ ಭಾವಿಸಿಕೊಂಡರು. ಅವರು ತಮ್ಮ ಆಫೀಸನ್ನೂ ಪತ್ರಿಕೆಯನ್ನೂ ನನ್ನ ಸ್ವಾಧೀನದಲ್ಲಿ ಬಿಟ್ಟರು. ದಕ್ಷಿಣ ಆಫ್ರಿಕಾದ ಪರಿಸ್ಥಿತಿಯನ್ನು ಕುರಿತು ಅವರು ಬರೆದಿದ್ದ ಸಂಪಾದಕೀಯ ಲೇಖನದಲ್ಲಿ—ಅದರ ಪ್ರೂಫನ್ನು ಅವರು ನನಗೆ ಮುಂಚೆ ಕಳುಹಿಸುತ್ತಿದ್ದರು—ನನಗೆ ಬೇಕಾದ ಬದಲಾವಣೆಯನ್ನು ಮಾಡುವ ಸ್ವಾತಂತ್ರ್ಯವನ್ನೂ ಅವರು ಕೊಟ್ಟಿದ್ದರು. ಅವರಿಗೂ ನನಗೂ ತುಂಬ ಸ್ನೇಹ ಬೆಳೆಯಿತೆಂದರೆ ಅತಿಶಯೋಕ್ತಿಯಲ್ಲ. ತಮ್ಮಿಂದಾದ ಎಲ್ಲ ಸಹಾಯವನ್ನೂ ಮಾಡುವುದಾಗಿ ಅವರು ನನಗೆ ವಾಗ್ದಾನ ಮಾಡಿದರು. ಆ ವಾಗ್ದಾನದಂತೆ ನಡೆದರು. ಅವರಿಗೆ ತುಂಬ ಕಾಯಿಲೆಯಾಗುವವರೆಗೆ ನನ್ನೊಂದಿಗೆ ಅವರು ಪತ್ರವ್ಯವಹಾರವನ್ನು ನಡೆಸುತ್ತಲೇ ಇದ್ದರು.

ನನ್ನ ಜೀವನದಲ್ಲೆಲ್ಲ ಈ ರೀತಿಯಾದ ಅನೇಕ ಮಧುರ ಸ್ನೇಹಗಳ ಭಾಗ್ಯ ನನಗೆ ನಾನು ನಿರೀಕ್ಷಿಸದೆಯೇ ದೊರಕಿದೆ. ಸ್ಯಾಂಡರ್ಸ್‌ರು ನನ್ನನ್ನು ಪ್ರೀತಿಸಿದುದು ನನ್ನಲ್ಲಿದ್ದ ಅತಿಶಯೋಕ್ತಿಯ ಅಭಾವ ಮತ್ತು ನನ್ನ ಸತ್ಯಪರಾಯಣತೆ. ನನ್ನ ವಿಷಯದಲ್ಲಿ ಸಹಾನುಭೂತಿಯನ್ನು ತೋರಿಸುವುದಕ್ಕೆ ಮುಂಚೆ ಅವರು ನನ್ನನ್ನು ಸೂಕ್ಷ್ಮವಾದ ಪರೀಕ್ಷೆಗೆ ಒಳಪಡಿಸಿದರು. ದಕ್ಷಿಣ ಆಫ್ರಿಕಾದ ಬಿಳಿಯ ಜನರ ಪಕ್ಷವನ್ನು ಸಹ ನಿಷ್ಪಕ್ಷಪಾತ ದೃಷ್ಟಿಯಿಂದ ಅರಿಯಲು ಮತ್ತು ಅದನ್ನು ಅರ್ಥಮಾಡಿಕೊಳ್ಳಲು ಸಹ ನಾನು ಎಲ್ಲ ಶ್ರಮವನ್ನೂ ಪಟ್ಟಿರುವೆನೆಂಬುದು ಅವರಿಗೆ ಮನದಟ್ಟಾಯಿತು.

ಇತರರ ವಿಷಯದಲ್ಲಿ ನಾವು ನ್ಯಾಯವಾಗಿ ನಡೆದರೆ, ನಮಗೂ ನ್ಯಾಯ ಬಹು ಬೇಗ ದೊರೆಯುವುದೆಂಬುದು ನನಗೆ ಅನುಭವದಿಂದ ತಿಳಿದ ವಿಷಯ.

ಮಿ. ಸ್ಯಾಂಡರ್ಸ್‌ರು ನನಗೆ ಕೊಟ್ಟ ಅನಿರೀಕ್ಷಿತ ಪ್ರೋತ್ಸಾಹದಿಂದ ನಾನು "ಕೊನೆಗೂ ಕಲ್ಕತ್ತದಲ್ಲಿ ಒಂದು ಸಾರ್ವಜನಿಕ ಸಭೆಯನ್ನು ಸೇರಿಸುವುದರಲ್ಲಿ ಜಯಶಾಲಿಯಾಗಬಹುದೆಂದು" ಯೋಚಿಸತೊಡಗಿದೆನು.

ಆ ವೇಳೆಗೆ ನನಗೆ ಡರ್ಬಾನಿನಿಂದ "ಜನವರಿಯಲ್ಲಿ ಪಾರ್ಲಿಮೆಂಟು ಸೇರುತ್ತದೆ. ಬೇಗ ಹಿಂದಿರುಗಿ ಬನ್ನಿ" ಎಂದು ಒಂದು ತಂತಿ ಬಂದಿತು.

ಆದುದರಿಂದ ನಾನು ಪತ್ರಿಕೆಗಳಿಗೆ "ಈ ಕಾರಣಕ್ಕಾಗಿ ಇದ್ದಕ್ಕಿದ್ದಂತೆ ಕಲ್ಕತ್ತವನ್ನು ಬಿಡಬೇಕಾಗಿದೆ" ಎಂದು ಬರೆದು ಕಳುಹಿಸಿ ತತ್‌ಕ್ಷಣ ಬೊಂಬಾಯಿಗೆ ಹೊರಟೆನು. ಹೊರಡುವುದಕ್ಕೆ ಮುಂಚಿತವಾಗಿ ನಾನು ದಾದಾ ಅಬ್ದುಲ್ಲಾ ಕಂಪನಿಯ ಬೊಂಬಾಯಿ ಏಜೆಂಟರಿಗೆ, ದಕ್ಷಿಣ ಆಫ್ರಿಕಕ್ಕೆ ಹೊರಡುವ ಮೊದಲನೆಯ ಹಡಗಿನಲ್ಲಿಯೇ ನನ್ನ ಪ್ರಯಾಣಕ್ಕೆ ಏರ್ಪಾಡು ಮಾಡಲು ತಂತಿಯನ್ನು ಕೊಟ್ಟೆನು. ದಾದಾ ಅಬ್ದುಲ್ಲಾ ಆಗ ತಾನೇ ಕೋರ್‌ಲ್ಯಾಂಡ್ ಎಂಬ ಹಡಗನ್ನು ಕೊಂಡುಕೊಂಡಿದ್ದರು. ಅವರು ನಾನೂ ನನ್ನ ಸಂಸಾರವೂ ಆ ಹಡಗಿನಲ್ಲಿಯೇ ಹೋಗಬೇಕೆಂದೂ ಪ್ರಯಾಣದ ಖರ್ಚನ್ನು ಕೊಡಬೇಕಾದುದಿಲ್ಲವೆಂದೂ ಒತ್ತಾಯ ಮಾಡಿದರು. ನಾನು ಅವರ ಆಹ್ವಾನವನ್ನು ಕೃತಜ್ಞತೆಯಿಂದ ಅಂಗೀಕರಿಸಿದೆನು. ಡಿಸೆಂಬರ್ ತಿಂಗಳ ಆದಿಭಾಗದಲ್ಲಿ ನನ್ನ ಹೆಂಡತಿ ಇಬ್ಬರು ಗಂಡು ಮಕ್ಕಳು, ವಿಧವೆಯಾದ ನನ್ನಕ್ಕನ ಒಬ್ಬನೇ ಮಗ ಇವರೊಡನೆ ಎರಡನೆಯ ಸಲ ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಹೊರಟೆನು. ನಾದೇರಿ ಎಂಬ ಹೆಸರಿನ ಮತ್ತೊಂದು ಹಡಗು ಸಹ ಅದೇ ಕಾಲದಲ್ಲಿ ಡರ್ಬಾನಿಗೆ ಹೊರಟಿತು. ಆ ಕಂಪನಿಯ ಏಜೆಂಟರು ದಾದಾ ಅಬ್ದುಲ್ಲಾ ಕಂಪನಿಯವರೇ ಆಗಿದ್ದರು. ಈ ಎರಡು ಹಡಗುಗಳಲ್ಲಿದ್ದ ಒಟ್ಟು ಪ್ರಯಾಣಿಕರ ಸಂಖ್ಯೆ ಸುಮಾರು 800 ಇದ್ದಿರಬಹುದು. ಅದರ ಪೈಕಿ ಅರ್ಧ ಭಾಗ ಟ್ರಾನ್ಸ್‌ವಾಲಿಗೆ ಹೋಗುವವರಾಗಿದ್ದರು.

ಆತ್ಮಕಥೆ

ಅಥವಾ

ನನ್ನ ಸತ್ಯಾನ್ವೇಷಣೆ

ಭಾಗ ೩

ಬಿರುಗಾಳಿಯ ಚಿಹ್ನೆ

ನನ್ನ ಹೆಂಡತಿ ಮಕ್ಕಳೊಂದಿಗೆ ನಾನು ಸಮುದ್ರ ಪ್ರಯಾಣ ಮಾಡಿದುದು ಅದೇ ಮೊದಲು. "ಮಧ್ಯಮ ತರಗತಿಯ ಹಿಂದೂಗಳಲ್ಲಿ ಬಾಲ್ಯ ವಿವಾಹ ಪದ್ಧತಿಯಿರುವುದರಿಂದ ಗಂಡನು ವಿದ್ಯಾವಂತನಾದರೂ ಹೆಂಡತಿ ಅನಕ್ಷರಸ್ಥಳಾಗಿರುತ್ತಾಳೆ. ಹೆಂಡತಿಗೂ ಗಂಡನಿಗೂ ಮಧ್ಯೆ ದೊಡ್ಡ ಅಂತರುವಿರುತ್ತದೆ. ಗಂಡನು ಹೆಂಡತಿಯ ಉಪಾಧ್ಯಾಯನೂ ಆಗಬೇಕಾಗುತ್ತದೆ" ಎಂಬುದಾಗಿ ಈ ಆತ್ಮಕಥೆಯಲ್ಲಿ ನಾನು ಆಗಾಗ ಹೇಳಿದ್ದೇನೆ. ಆದುದರಿಂದ ನಾನು ಹೊಸ ಆವರಣಕ್ಕೆ ಅನುಗುಣವಾಗುವಂತೆ ನನ್ನ ಹೆಂಡತಿಯೂ ಮಕ್ಕಳೂ ಧರಿಸುವ ಉಡಿಗೆ ತೊಡಿಗೆಗಳು ಅವರ ಆಹಾರ ವ್ಯವಹಾರ ಇವನ್ನೆಲ್ಲ ಕುರಿತು ಯೋಚಿಸಬೇಕಾಗಿದ್ದಿತು. ಆಗಿನ ಕೆಲವು ವಿಷಯಗಳನ್ನು ಜ್ಞಾಪಿಸಿಕೊಂಡರೆ ಈಗಲೂ ನನಗೆ ನಗು ಬರುತ್ತದೆ.

ಪತಿಪರಾಯಣತೆಯೇ ತನ್ನ ಧರ್ಮದ ಪರಾಕಾಷ್ಠೆ, ಎಂದು ಹಿಂದೂ ಮಹಿಳೆಯರು ಎಣಿಸುತ್ತಾರೆ. ಹಿಂದೂ ಪತಿ, ಯಾವಾಗಲೂ ಹೆಂಡತಿಯ ಒಡೆಯ, ಅರಸ; ಆಕೆ ಯಾವಾಗಲೂ ಉಪಚರಿಸುವುದರಲ್ಲಿಯೇ ತೊಡಗಿರಬೇಕು ಎಂದು ಭಾವಿಸುತ್ತಾನೆ.

ಯಾವ ಕಾಲವನ್ನು ಕುರಿತು ಈ ಕಥೆಯನ್ನು ಬರೆಯುತ್ತಿದ್ದೇನೋ ಆಗ ನಾವು ನಾಗರಿಕರಾಗಿ ಕಾಣಬೇಕಾದರೆ ಸಾಧ್ಯವಾದಷ್ಟು ಮಟ್ಟಿಗೆ ನಮ್ಮ ಉಡುಪು ಆಚಾರಗಳಲ್ಲಿ ಐರೋಪ್ಯರಂತೆ ಇರಬೇಕೆಂಬ ನಂಬಿಕೆ ನನಗೆ ಇದ್ದಿತು. ಹೀಗೆ ಮಾಡುವುದರಿಂದ ಮಾತ್ರ ನಮ್ಮ ಮಾತು ನಡೆಯುತ್ತದೆ, ನಮ್ಮ ಪ್ರಭಾವ ಬೆಳೆಯುತ್ತದೆ. ಪ್ರಭಾವವನ್ನು ಬೆಳೆಸಿಕೊಳ್ಳದೆ ದೇಶಸೇವೆ ಸಾಧ್ಯವಿಲ್ಲ ಎಂದು ನಾನು ಯೋಚಿಸಿದ್ದೆನು.

ಆದುದರಿಂದ ನನ್ನ ಹೆಂಡತಿ ಮಕ್ಕಳು ಧರಿಸಬೇಕಾದ ಉಡುಪಿನ ಪ್ರಕಾರವನ್ನು ನಾನೇ ನಿರ್ಣಯಿಸಿದೆನು. ಕಾಥೆಯವಾಡ ಬನಿಯರೆಂದು

ಅವರನ್ನು ತೋರಗೊಡಲು ನನಗೆ ಇಷ್ಟವಿರಲಿಲ್ಲ. ಆಗ ಭಾರತೀಯರಲ್ಲೆಲ್ಲ, ಪಾರಸಿಯವರು ಅತ್ಯಂತ ನಾಗರಿಕರೆಂದು ಎಣಿಸಲ್ಪಡುತ್ತಿದ್ದರು. ಪೂರ್ತಿಯಾಗಿ ಐರೋಪ್ಯರನ್ನೇ ಉಡಿಗೆಯಲ್ಲಿ ಅನುಸರಿಸುವುದು ಸರಿತೋರಲಿಲ್ಲ. ಆದುದರಿಂದ ನಾವು ಪಾರಸಿಯವರ ಪೋಷಾಕನ್ನು ಅಂಗೀಕರಿಸಿದೆವು. ಅದರಂತೆ ನನ್ನ ಹೆಂಡತಿ ಪಾರಸಿಯವರು ಉಡುವಂತೆ ಸೀರೆಯುಡುತ್ತಿದ್ದಳು. ನನ್ನ ಮಕ್ಕಳು ಪಾರಸಿ ಅಂಗಿ ಷರಾಯಿ ಧರಿಸುತ್ತಿದ್ದರು. ಬೂಟ್ಸು ಕಾಲು ಚೀಲಗಳಂತೂ ಎಲ್ಲರಿಗೂ ಬೇಕೇ ಬೇಕು. ನನ್ನ ಹೆಂಡತಿ ಮಕ್ಕಳಿಗೆ ಇವೆಲ್ಲ ಅಭ್ಯಾಸವಾಗಬೇಕಾದರೆ ಬಹಳ ದಿನ ಹಿಡಿಯಿತು. ಬೂಟ್ಸುಗಳು ಕಾಲ-ಗಳನ್ನು ಕಚ್ಚುತ್ತಿದ್ದವು. ಕಾಲು ಚೀಲ ಬೆವತು ವಾಸನೆಯಾಗುತ್ತಿದ್ದಿತು ಅನೇಕ ವೇಳೆ ಕಾಲು ಬೆರಳು ಊದಿ ಗಾಯವಾಗುತ್ತಿದ್ದಿತು. ಈ ಎಲ್ಲ ಆಕ್ಷೇಪಣೆಗಳಿಗೂ ನನ್ನ ಪ್ರತ್ಯುತ್ತರ ಸಿದ್ಧವಾಗಿದ್ದಿತು. ಆದರೆ ನನ್ನ ಪ್ರತ್ಯುತ್ತರದಿಂದಲ್ಲ ಅವರು ಸಮಾಧಾನ ಹೊಂದಿದುದು, ನನ್ನ ಅಧಿಕಾರ ಬಲದಿಂದ ಎಂದು ನನಗೆ ತೋರುತ್ತದೆ. ಉಡುಪಿನ ಮಾದರಿಯನ್ನು ಅವರು ಬದಲಾಯಿಸಿಕೊಳ್ಳಲು ಒಪ್ಪಿದುದು ಬೇರೆ ದಾರಿ ಇಲ್ಲದುದರಿಂದ. ಅದೇ ಮನೋಭಾವದಿಂದ, ಆದರೆ ಇನ್ನೂ ಹೆಚ್ಚು ಅಸಮ್ಮತಿಯಿಂದ ಅವರು ಊಟಕ್ಕೆ ಚಾಕುಗಳನ್ನು ಫೋರ್ಕ್‌ಗಳನ್ನು (ಐರೋಪ್ಯರು ಊಟಕ್ಕೆ ಉಪಯೋಗಿಸುವ ಮುಳ್ಳು ಚಮಚ) ಉಪಯೋಗಿಸ ತೊಡಗಿದರು. ನವ ನಾಗರೀಕತೆಯ ಹುಚ್ಚು ನನ್ನನ್ನು ಬಿಟ್ಟುಹೋಡಲೇ, ಅವರು ಚಾಕುವನ್ನೂ ಫೋರ್ಕನ್ನೂ ಬಿಟ್ಟುಬಿಟ್ಟರು. ಬಹಳ ಕಾಲ ಈ ಹೊಸ ಪದ್ಧತಿಯನ್ನು ಅನುಸರಿಸಿದ ಮೇಲೆ ಮತ್ತೆ ಹಳೆಯ ಪದ್ಧತಿಗೆ ಹಿಂದಿರುಗುವುದು ಅವರಿಗೆ ಅಷ್ಟೇ ಕಷ್ಟವಾಗಿದ್ದಿರಬೇಕು. ಆದರೆ ಈಗ ನನಗೆ ಗೊತ್ತಾಗುತ್ತದೆ. ಈ ಸುಧಾರಣೆಯ ಆಡಂಬರವನ್ನೂ ಭ್ರಮೆಯನ್ನೂ ಬಿಟ್ಟುದರಿಂದ ಆ ಭಾರವ ನ್ನಿಳಿಸಿ ನಾವು ಹಗುರವಾಗಿ ಬಾಳುತ್ತಿದ್ದೇವೆ.

ಅದೇ ಹಡಗಿನಲ್ಲಿ ನಮ್ಮ ಕೆಲವರು ಪರಿಚಿತರೂ ಬಂಧುಗಳೂ ಪ್ರಯಾಣ ಮಾಡುತ್ತಿದ್ದರು. ಹಡಗು ನನ್ನ ಕಕ್ಷಿಗಾರರ ಮಿತ್ರರಿಗೆ ಸೇರಿದುದು. ಆದುದರಿಂದ ನಾನು ಎಲ್ಲಿ ಬೇಕಾದರೆ ಅಲ್ಲಿ ಓಡಾಡುತ್ತಿದ್ದೆನು. ನನ್ನ

ಬಂಧುಗಳನ್ನೂ ಮಿತ್ರರನ್ನೂ ಇತರ ಡೆಕ್ ಪ್ರಯಾಣಿಕರನ್ನೂ ನಾನು ಆಗಾಗ್ಗೆ ಸಂಧಿಸುತ್ತಿದ್ದೆನು.

ಹಡಗು ಮಾರ್ಗದಲ್ಲಿ ರೇವಿನಲ್ಲಿಯೂ ನಿಲ್ಲದೆ ನೇರವಾಗಿ ನೆಟಾಲಿಗೆ ಹೋಗುತ್ತಿದ್ದುದರಿಂದ, ನಮ್ಮ ಪ್ರಯಾಣಕ್ಕೆ ಹದಿನೆಂಟು ದಿನಗಳು ಮಾತ್ರ ಹಿಡಿಯುವುದಾಗಿದ್ದಿತು. ನಾವು ಆಫ್ರಿಕಾದಲ್ಲಿ ಇಳಿದ ಕೂಡಲೇ, ನಮ್ಮನ್ನು ಎದುರುಗೊಳ್ಳುವ ಬಿರುಗಾಳಿಯ ಮುನ್ನೆಚ್ಚರಿಕೆಯೋ ಎಂಬಂತೆ, ನಾವು ನೆಟಾಲನ್ನು ತಲಪುವುದು ಇನ್ನೂ ನಾಲ್ಕು ದಿನಗಳಿರುವಾಗ ಸಮುದ್ರದಲ್ಲಿ ಭಯಂಕರವಾದ ಬಿರುಗಾಳಿ ಎದ್ದಿತು. ದಕ್ಷಿಣಾರ್ಧ ಗೋಳದಲ್ಲಿ ಡಿಸೆಂಬರ್ ತಿಂಗಳು ಸೆಕೆ ಮತ್ತು ಮಳೆ ಬೀಳುವ ಕಾಲ. ಆದುದರಿಂದ ದಕ್ಷಿಣ ಸಮುದ್ರದಲ್ಲಿ ಸಣ್ಣ ಮತ್ತು ದೊಡ್ಡ ಬಿರುಗಾಳಿ ಏಳುವುದೂ ಸ್ವಾಭಾವಿಕ. ಆದರೆ ನಮ್ಮನ್ನು ಸುತ್ತಿದ ಚಂಡಮಾರುತ, ಬಹಳ ಬಿರುಸಾಗಿದ್ದು ಹೆಚ್ಚು ದಿನ ಬೀಸಿದುದರಿಂದ ಪ್ರಯಾಣಿಕರೆಲ್ಲ ಗಾಬರಿಯಾದರು.

ಆ ದೃಶ್ಯ, ಗಂಭೀರವಾಗಿದ್ದಿತು. ದುಃಖದ ಎದುರಿನಲ್ಲಿ ಎಲ್ಲರೂ ಒಂದಾದರು. ಹಿಂದೂ ಮುಸಲ್ಮಾನ, ಕ್ರೈಸ್ತ, ಪಾರಸಿ ಎಲ್ಲರೂ ತಮ್ಮ ತಮ್ಮಲ್ಲಿದ್ದ ವ್ಯತ್ಯಾಸಗಳನ್ನೆಲ್ಲ ಮರೆತು ಒಟ್ಟಾಗಿ ಸೇರಿ "ಏಕಮೇವ, ಅದ್ವಿತೀಯ" ನಾದ ದೇವರನ್ನು ಪ್ರಾರ್ಥಿಸತೊಡಗಿದರು. ಅನೇಕರು ಹರಕೆಗಳನ್ನು ಹೊತ್ತರು. ಹಡಗಿನ ಕಪ್ತಾನನೂ ಸಹ ಪ್ರಯಾಣಿಕರ ಜತೆ ಪ್ರಾರ್ಥನೆಗೆ ಸೇರಿದನು. "ಈ ಬಿರುಗಾಳಿಯಲ್ಲಿ ಅಪಾಯವಿಲ್ಲವೆ ಇಲ್ಲ. ಆದರೆ ನಾನು ಇದಕ್ಕಿಂತ ಬಿರುಸಾಗಿದ್ದ ಅನೇಕ ಚಂಡಮಾರುತಗಳನ್ನು ನೋಡಿದ್ದೇನೆ. ಆದರೆ ಸುಭದ್ರವಾಗಿ ಗಟ್ಟಿಮುಟ್ಟಾಗಿರುವ ಹಡಗು, ಎಂತಹ ಬಿರುಗಾಳಿಯನ್ನೂ ತಡೆಯಬಲ್ಲದು" ಎಂದು ಧೈರ್ಯ ಹೇಳಿದನು. ಆದರೆ ಪ್ರಯಾಣಿಕರು ಅದರಿಂದ ಸಮಾಧಾನಗೊಳ್ಳಲಿಲ್ಲ. ಪ್ರತಿ ಗಳಿಗೆಯಲ್ಲಿಯೂ ಆಗುತ್ತಿದ್ದ ಸದ್ದನ್ನೂ ಆಘಾತವನ್ನೂ ಕೇಳಿದರೆ ಹಡಗು ಒಡೆಯುವುದೋ, ತೂತು ಬೀಳುವುದೋ ಎಂದು ಭಯವುಂಟಾಗುತ್ತಿದ್ದಿತು. ಹಡಗು ಒಂದೇ ಸಮನೆ ಓಲಾಡುತ್ತಿದ್ದಿತು. ಯಾವ ಗಳಿಗೆಯಲ್ಲಿ ಬೇಕಾದರೂ ತಲೆಕೆಳಕಾಗಬಹುದು ಎಂದು ತೋರುತ್ತಿದ್ದಿತು. ಇಂತಹ ಪರಿಸ್ಥಿತಿಯಲ್ಲಿ ಡೆಕ್‌ನ ಮೇಲೆ

ಸಿಲ್ಲುವುದು ಅಸಾಧ್ಯವಾಗಿದ್ದಿತು. ಪ್ರತಿಯೊಬ್ಬರ ಬಾಯಿಯಿಂದಲೂ "ದೇವರ ಇಚ್ಛೆ ಇದ್ದಂತೆ ಆಗಲಿ" ಎಂಬ ಮಾತು ಒಂದೇ ಹೊರಡುತ್ತಿದ್ದಿತು. ಇಪ್ಪತ್ತು ನಾಲ್ಕು ಗಂಟೆಗಳ ಕಾಲ ಬಿರುಗಾಳಿ ಹೀಗೆ ಇದ್ದಿತೆಂದು ನನಗೆ ಜ್ಞಾಪಕ. ಕೊನೆಗೆ ಆಕಾಶ ನಿರ್ಮಲವಾಯಿತು, ಸೂರ್ಯನಾರಾಯಣನ ದರ್ಶನವಾಯಿತು. ಕಪ್ತಾನನು "ಬಿರುಗಾಳಿ ನಿಂತಿತು" ಎಂದು ಹೇಳಿದನು. ಪ್ರಯಾಣಿಕರ ಮುಖದಲ್ಲಿ ಸಂತೋಷ ತೋರಿತು. ಅಪಾಯವು ಮರೆಯಾಯಿತು. ಜತೆಯಲ್ಲಿಯೇ ಅವರು ಮಾಡುತ್ತಿದ್ದ ದೇವರ ಧ್ಯಾನವೂ ಮರೆಯಾಯಿತು. ತಿನ್ನುವುದು, ಕುಡಿಯುವುದು, ಹಾಡುವುದು, ವಿಲಾಸ ಇವು ಮೊದಲಿನಂತೆಯೇ ಪ್ರಾರಂಭವಾದುವು. ಸಾವಿನ ಭಯ ತಪ್ಪಿತು. ಶ್ರದ್ಧಾಭಕ್ತಿಯಿಂದ ಪ್ರಾರ್ಥನೆ ಮಾಡುವ ಕ್ಷಣಿಕವಾದ ಮನೋಭಾವವನ್ನು ಮಾಯೆ ಆಕ್ರಮಿಸಿತು. ಪದ್ಧತಿಯಂತೆ ಅನಂತರವೂ ನಮಾಜ್, ಪ್ರಾರ್ಥನೆ ಇವು ನಡೆಯುತ್ತಿದ್ದವು. ಆದರೆ ಅವುಗಳಲ್ಲಿ ಆ ಚಂಡಮಾರುತದ ಭಯಂಕರ ಸಂದರ್ಭದ ಗಾಂಭೀರ್ಯ ಇರಲಿಲ್ಲ.

ಆದರೆ ಈ ಚಂಡಮಾರುತದಿಂದ ಪ್ರಯಾಣಿಕರಿಗೂ ನನಗೂ ಇದ್ದ ಬಾಂಧವ್ಯ ಹೆಚ್ಚು ನಿಕಟವಾಯಿತು. ನನಗೆ ಸಮುದ್ರದಲ್ಲಿ ಏಳುವ ಬಿರುಗಾಳಿಯ ಭಯವಿರಲಿಲ್ಲ. ಅಂತಹುದರ ಅನುಭವ ನನಗೆ ಹಿಂದೆಯೂ ಇದ್ದಿತು. ನನಗೆ ಹಡಗಿನ ಪ್ರಯಾಣ ಒಗ್ಗಿದ್ದಿತು. ನನಗೆ ವಾಂತಿ ಮುಂತಾದ ವಿಕಾರಗಳು ಆಗುತ್ತಿರಲಿಲ್ಲ. ಆದುದರಿಂದ ನಾನು ನಿರ್ಭಯದಿಂದ ಪ್ರಯಾಣಿಕರನ್ನು ಹೋಗಿ ನೋಡುತ್ತಾ ಕಪ್ತಾನನು ಹೇಳಿದ ಸುದ್ದಿಯನ್ನು ಅವರಿಗೆ ಗಂಟೆಗಂಟೆಗೂ ತಿಳಿಸುತ್ತಾ ಅವರಿಗೆ ಸಮಾಧಾನವನ್ನು ತಂದುಕೊಡಲು ಸಾಧ್ಯವಾಯಿತು. ಹೀಗೆ ಹಡಗಿನಲ್ಲಿ ನನಗೆ ದೊರೆತ ಸ್ನೇಹಬಾಂಧವ್ಯದಿಂದ ಮುಂದೆ ನನಗೆ ಬಹಳ ಸಹಾಯವಾಯಿತು.

ಹಡಗು ಡಿಸೆಂಬರ್ ೧೮ ಅಥವಾ ೧೯ ರಂದು ಡರ್ಬಾನ್ ರೇವನ್ನು ತಲಪಿತು. ನಾದೇರಿ ಹಡಗೂ ಸಹ ಅದೇ ದಿನ ಅಲ್ಲಿಗೆ ಸೇರಿತು.

ಆದರೆ ನಿಜವಾದ ಚಂಡಮಾರುತ, ಮುಂದೆ ಬರುವುದಾಗಿದ್ದಿತು.

೨

ಚಂಡಮಾರುತ

ಎರಡು ಹಡುಗುಗಳೂ ಡರ್ಬಾನ್ ರೇವನ್ನು ಹೆಚ್ಚು ಕಡಿಮೆ ೧೮–೧೯ ನೆಯ ತಾರೀಖು ಸೇರಿದುವೆಂದು ಹೇಳಿದ್ದೇನೆ. ಪೂರ್ಣವಾದ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ್ದಲ್ಲದೆ ಯಾವ ಪ್ರಯಾಣಿಕನಿಗೂ ಹಡಗಿನಿಂದ ಇಳಿಯಲು ಅನುಮತಿ ಕೊಡುವುದಿಲ್ಲ. ಪ್ರಯಾಣಿಕರಲ್ಲಿ ಅಂಟುಜಾಡ್ಯವಿರುವವರು ಯಾರಾದರೂ ಇದ್ದರೆ, ಹಡಗನ್ನು ಕ್ವಾರಂಟೈನ್ (ಕೆಲವು ದಿನ ಸಮುದ್ರದಲ್ಲಿಯೇ)ನಲ್ಲಿ ನಿಲ್ಲಿಸುತ್ತಾರೆ. ನಾನು ಬೊಂಬಾಯಿಯಿಂದ ಹೊರಟಾಗ ಅಲ್ಲಿ ಪ್ಲೇಗು ಇದ್ದುದರಿಂದ ನಾವು ಸ್ವಲ್ಪದಿನ ಕ್ವಾರೆಂಟೈನಿನಲ್ಲಿ ಇರಬೇಕಾಗಬಹುದೆಂದು ನಾವು ಶಂಕಿಸಿದ್ದೆವು. ವೈದ್ಯ ಪರೀಕ್ಷೆಯಾಗುವುದಕ್ಕೆ ಮುಂಚಿತವಾಗಿ ಎಲ್ಲ ಹಡಗುಗಳ ಮೇಲೆಯೂ ಒಂದು ಹಳದಿಯ ಬಾವುಟವನ್ನು ಏರಿಸಿರುತ್ತಾರೆ. ವೈದ್ಯರು ಎಲ್ಲರನ್ನೂ ಪರೀಕ್ಷಿಸಿ ಪ್ರಯಾಣಿಕರೆಲ್ಲ ಆರೋಗ್ಯವಾಗಿರುವರೆಂದು ಅಪ್ಪಣೆ ಕೊಟ್ಟ ಮೇಲೆಯೇ ಆ ಬಾವುಟವನ್ನು ಕೆಳಕ್ಕೆ ಇಳಿಸುವುದು. ಪ್ರಯಾಣಿಕರ ಮಿತ್ರರಿಗೂ ಬಂಧುಗಳಿಗೂ ಬಾವುಟ ಕೆಳಕ್ಕೆ ಇಳಿದ ಮೇಲೆ, ಹಡಗಿಗೆ ಬರಲು ಅನುಮತಿ ದೊರೆಯುವುದು.

ಹೀಗೆ, ವೈದ್ಯರು ನಮ್ಮನ್ನು ಪರೀಕ್ಷಿಸಲು ಬಂದಾಗ ನಮ್ಮ ಹಡಗಿನ ಮೇಲೆ ಹಳದಿಯ ಬಾವುಟ ಹಾರಾಡುತ್ತಿದ್ದಿತು. ಅವರು ಐದು ದಿನ ಕ್ವಾರಂಟೈನಿನಲ್ಲಿ ನಾವು ಇರಬೇಕೆಂದು ಅಪ್ಪಣೆ ಮಾಡಿದರು. ಏಕೆಂದರೆ ಅವರ ಅಭಿಪ್ರಾಯದಂತೆ, ಪ್ಲೇಗು ಕ್ರಿಮಿಗಳು ಪೂರ್ಣವಾಗಿ ಬೆಳೆಯಲು, ಹೆಚ್ಚೆಂದರೆ ಇಪ್ಪತ್ತಮೂರು ದಿನ ಬೇಕಾಗುತ್ತಿದ್ದಿತು. ಆದುದರಿಂದ ನಾವು ಬೊಂಬಾಯಿಯಿಂದ ಹೊರಟು ಇಪ್ಪತ್ತಮೂರನೆಯ ದಿನದವರೆಗೆ ನಮ್ಮ ಹಡಗು ಕ್ವಾರಂಟೈನಿನಲ್ಲಿ ಇರಬೇಕೆಂದು ಅಪ್ಪಣೆಯಾಯಿತು. ಹೀಗೆ ಕ್ವಾರಂಟೈನ್ ಅಪ್ಪಣೆ ಮಾಡಲು, ಪ್ರಯಾಣಿಕರ ಆರೋಗ್ಯಕ್ಕಿಂತ ಇತರ ಬೇರೆ ಕಾರಣಗಳೂ ಇದ್ದವು.

ಡರ್ಬಾನಿನ ಬಿಳಿಯವರು, ನಮ್ಮನ್ನು ಬಲಾತ್ಕಾರದಿಂದ ಹಿಂದಕ್ಕೆ ಕಳುಹಿಸಬೇಕೆಂದು ಚಳವಳಿ ಮಾಡುತ್ತಿದ್ದರು. ಕ್ವಾರಂಟೈನಿನಲ್ಲಿ

ಹಡಗನ್ನು ಇಡಲು ಅದೂ ಒಂದು ಕಾರಣವಾಗಿದ್ದಿತು. ದಾದಾ ಅಬ್ದುಲ್ಲಾ ಕಂಪನಿಯವರು ಡರ್ಬನ್ ಪಟ್ಟಣದಲ್ಲಿ ನಿತ್ಯ ಈ ಚಳುವಳಿಯ ಸಂಬಂಧ ವಾಗಿ ಏನು ನಡೆಯುತ್ತಿದೆ ಎಂಬುದನ್ನು ನನಗೆ ತಿಳಿಸುತ್ತಿದ್ದರು. ಬಿಳಿಯವರು ಪ್ರತಿದಿನವೂ ಭಾರಿ ಸಭೆಗಳನ್ನು ನಡೆಸುತ್ತಿದ್ದರು. ಅವರು ದಾದಾ ಅಬ್ದುಲ್ಲಾ ಕಂಪನಿಗೆ ನಾನಾ ವಿಧವಾದ ಬೆದರಿಕೆಗಳನ್ನು ಹಾಕುತ್ತಿದ್ದರು. ಕೆಲವು ವೇಳೆ ಆಸೆ ತೋರಿಸುತ್ತಿದ್ದರು. ದಾದಾ ಅಬ್ದುಲ್ಲಾ ಕಂಪನಿಯವರು ಎರಡು ಹಡಗುಗಳನ್ನೂ ಭಾರತಕ್ಕೆ ಹಿಂದಿರುಗಿಸುವುದಾದರೆ, ಅದರಿಂದ ಸಂಭವಿಸುವ ನಷ್ಟವನ್ನೆಲ್ಲ ತಾವು ಕಟ್ಟಿಕೊಡುವುದಾಗಿಯೂ ಹೇಳಿದರು. ಆದರೆ ದಾದಾ ಅಬ್ದುಲ್ಲಾ ಕಂಪನಿ ಬೆದರಿಕೆಗೆ ಮಣಿಯುವವರಾಗಿರಲಿಲ್ಲ. ಆಗ ಸೇಠ್ ಅಬ್ದುಲ್ ಕರೀಂ ಹಾಜೀ ಆದಂ ರವರು ಕಂಪನಿಯ ಪಾಲುಗಾರರಾಗಿದ್ದರು. ಅವರು ಏನಾದರೂ ಸರಿಯೆ ಹಡಗನ್ನು ಬಂದರಿಗೆ ತಂದು ಪ್ರಯಾಣಿಕರನ್ನು ಇಳಿಸಲೇ ಬೇಕೆಂದು ದೃಢ ಸಂಕಲ್ಪವುಳ್ಳವರಾಗಿದ್ದರು. ಪರಿಸ್ಥಿಯನ್ನು ಕುರಿತು ಅವರು ನನಗೆ ನಿತ್ಯ ವಿವರವಾಗಿ ಪತ್ರಗಳನ್ನು ಕಳುಹಿಸುತ್ತಿದ್ದರು. ನಮ್ಮ ಸುದೈವ ದಿಂದ, ದಿವಂಗತ ಮನಸುಖಲಾಲ್ ನಾಜರ್, ನನ್ನನ್ನು ಸಂಧಿಸಲು ಆಗ ಡರ್ಬಾನಿಗೆ ಬಂದಿದ್ದರು. ಅವರು ನಿರ್ಭೀತರೂ ಮತ್ತು ಚತುರರೂ ಆಗಿ ಭಾರತೀಯರಿಗೆ ಮಾರ್ಗದರ್ಶನ ಮಾಡುತ್ತಿದ್ದರು. ಅವರ ವಕೀಲರಾದ ಮಿ. ಲಾಟನರೂ ಸಹ ಅವರಂತೆಯೇ ಧೀರರು. ಅವರು ಬಿಳಿಯರ ನಡತೆ ಯನ್ನು ಖಂಡಿಸಿದುದಲ್ಲದೆ, ಭಾರತೀಯರಿಗೆ, ಅವರಿಂದ ಹಣ ತೆಗೆದುಕೊಂಡು ಕೆಲಸ ಮಾಡುವ ವಕೀಲರಂತಲ್ಲದೆ, ನಿಜವಾದ ಮಿತ್ರರಂತೆಯೂ ಸಲಹೆ ಕೊಟ್ಟರು.

ಹೀಗೆ ಡರ್ಬಾನ್, ಅಸಮಾನವಾದ ದ್ವಂದ್ವಯುದ್ಧದ ಕ್ಷೇತ್ರವಾಗಿದ್ದಿತು. ಒಂದು ಕಡೆ ಅಲ್ಪಸಂಖ್ಯೆಯ ಕೆಲವು ಬಡ ಭಾರತೀಯರು ಮತ್ತು ಒಬ್ಬಿಬ್ಬರು ಇಂಗ್ಲಿಷ್ ಮಿತ್ರರು ; ಅವರಿಗೆ ಎದುರಾಗಿ ವಿದ್ಯಾವಂತರೂ ಧನಿಕರೂ ಆದ ಆಯುಧ ಸಜ್ಜಿತ ಬಿಳಿಯರ ದೊಡ್ಡ ಜನ ಸಮೂಹ. ಜತೆಗೆ ಬಿಳಿಯರಿಗೆ ಸರಕಾರದ ಬಲವೂ ಇದ್ದಿತು. ನೆಟಾಲ್ ಸರಕಾರ ಅವರಿಗೆ ಬಹಿರಂಗವಾಗಿಯೇ ಸಹಾಯ ಮಾಡುತ್ತಿದ್ದಿತು. ನೆಟಾಲ್ ಸಚಿವ ಸಂಪುಟದ ಅತ್ಯಂತ ಪ್ರಭಾವ

ಶಾಲಿ ವ್ಯಕ್ತಿಯಾದ ಮಿ. ಹ್ಯಾರಿ ಎಸ್ಕೊಂಬರು ಬಹಿರಂಗವಾಗಿಯೇ ಬಿಳಿಯರ ಸಭೆಗಳಲ್ಲಿ ಭಾಗವಹಿಸುತ್ತಿದ್ದರು.

ಆದುದರಿಂದ ಕ್ವಾರಂಟೈನ್ ಉದ್ದೇಶ ಆರೋಗ್ಯ ರಕ್ಷಣೆ ಮಾತ್ರವಾಗಿರಲಿಲ್ಲ. ಹೇಗಾದರೂ ಮಾಡಿ ಭಾರತೀಯರನ್ನೊ ಅಥವಾ ಹಡಗು ಏಜೆಂಟ್ ಕಂಪನಿಯವರನ್ನೋ ಬೆದರಿಸಿ, ಭಾರತೀಯರನ್ನು ಬಲಾತ್ಕಾರವಾಗಿ ಹಿಂದಕ್ಕೆ ಅಟ್ಟುವುದೇ ಅದರ ಉದ್ದೇಶವಾಗಿದ್ದಿತು. ಏಜೆಂಟರನ್ನು ಆಗಲೇ ಬೆದರಿಸಿಯಾಗಿದ್ದಿತು. ಈಗ ನಮ್ಮನ್ನೂ (ಪ್ರಯಾಣಿಕರನ್ನೂ) ಬೆದರಿಸತೊಡಗಿದರು. "ನೀವು ಹಿಂದಿರುಗದಿದ್ದರೆ ನಿಮ್ಮನ್ನು ಸಮುದ್ರಕ್ಕೆ ತಳ್ಳಿಬಿಡುತ್ತೇವೆ. ಆದರೆ ಹಿಂದಿರುಗಲು ಒಪ್ಪುವುದಾದರೆ ನೀವು ಹಡಗಿಗೆ ಕೊಟ್ಟಿರುವ ಪ್ರಯಾಣದ ಹಣವೂ ನಿಮಗೆ ದೊರೆಯಬಹುದು" ನಾನು ಪ್ರಯಾಣಿಕರನ್ನು ಪದೇ ಪದೇ ಸಂಧಿಸುತ್ತಾ ಅವರಿಗೆ ಧೈರ್ಯವನ್ನು ಹೇಳುತ್ತಲೆ ಇದ್ದೆನು. ಹಾಗೆಯೇ ನಾನು ಎಸ್. ಎಸ್. ನಾದೇರಿ ಹಡಗಿನಲ್ಲಿದ್ದ ಪ್ರಯಾಣಿಕರಿಗೂ ಧೈರ್ಯದ ಸಂದೇಶವನ್ನು ಕಳುಹಿಸುತ್ತಿದ್ದೆನು. ಎಲ್ಲರೂ ಶಾಂತರಾಗಿದ್ದರು. ಧೈರ್ಯಶಾಲಿಗಳು.

ಪ್ರಯಾಣಿಕರ ಮನೋರಂಜನೆಗಾಗಿ ನಾವು ಹಡಗಿನಲ್ಲಿ ಬಗೆಬಗೆಯ ಆಟಗಳನ್ನು ಏರ್ಪಡಿಸುತ್ತಿದ್ದೆವು. ಕ್ರಿಸ್‌ಮಸ್ ಹಬ್ಬದ ದಿನ ಕಪ್ತಾನನು ಸೆಲೂನ್ (ಮೇಲಿನ ದರ್ಜೆ) ಪ್ರಯಾಣಿಕರನ್ನು ಭೋಜನಕ್ಕೆ ಆಹ್ವಾನಿಸಿದ್ದನು. ಅವರ ಪೈಕಿ ನಾನೂ ನನ್ನ ಸಂಸಾರದವರೂ ಮುಖ್ಯರಾಗಿದ್ದೆವು. ಊಟದ ತರುವಾಯ ಭಾಷಣಗಳು ವಾಡಿಕೆಯಂತೆ ಆಗಬೇಕಲ್ಲವೆ ? ನಾನು ಪಾಶ್ಚಾತ್ಯ ನಾಗರಿಕತೆಯನ್ನು ಕುರಿತು ಭಾಷಣ ಮಾಡಿದೆನು. ಗಂಭೀರವಾದ ಭಾಷಣವನ್ನು ಮಾಡುವುದಕ್ಕೆ ಅದು ಕಾಲವಲ್ಲ ಎಂಬುದು ನನಗೆ ಗೊತ್ತಿದ್ದಿತು ಆದರೆ ನಾನು ಬೇರೆ ತೆರನಾದ ಭಾಷಣ ಕೊಡಬಲ್ಲವನಾಗಿರಲಿಲ್ಲ. ನಾನೂ ಈ ಸಂತೋಷ ಸಮಾರಂಭದಲ್ಲಿ ಭಾಗವಹಿಸಿದ್ದೆನು ಆದರೆ ನನ್ನ ಮನಸ್ಸೆಲ್ಲವೂ ಡರ್ಬಾನ್‌ನಲ್ಲಿ ನಡೆಯುತ್ತಿದ್ದ ಹೋರಾಟದಲ್ಲಿಯೇ ಇದ್ದಿತು ಏಕೆಂದರೆ ಬಿಳಿಯರ ಧಾಳಿಯ ಮುಖ್ಯ ಗುರಿ ನಾನೇ ಆಗಿದ್ದೆನು. ನನ್ನ ಮೇಲೆ ಎರಡು ದೋಷಾರೋಪಗಳಿದ್ದವು ;

(೧) ನಾನು ಭಾರತದಲ್ಲಿದ್ದಾಗ ನೆಟಾಲಿನ ಬಿಳಿಯರನ್ನು ಕುರಿತು ಅನುಚಿತ ನಿಂದೆಯನ್ನು ಮಾಡಿದೆನೆಂದು.

(೨) ನೆಟಾಲಿನಲ್ಲಿ ಭಾರತೀಯರನ್ನು ತುಂಬುವುದು ನನ್ನ ಉದ್ದೇಶ. ಇದಕ್ಕಾಗಿಯೇ ನಾನು ವಿಶೇಷವಾಗಿ ಎರಡು ಹಡಗಿನ ತುಂಬ ಪ್ರಯಾಣಿಕರನ್ನು ಕರೆತಂದಿದ್ದೆನೆಂದು.

ನನ್ನ ಜವಾಬ್ದಾರಿ ನನಗೆ ಗೊತ್ತಿದ್ದಿತು. ನನಗಾಗಿ ದಾದಾ ಅಬ್ದುಲ್ಲಾ ಕಂಪನಿಯವರು ಬಹಳ ಕಷ್ಟಕ್ಕೆ ಗುರಿಯಾಗಿದ್ದರು. ಪ್ರಯಾಣಿಕರ ಪ್ರಾಣಗಳು ಅಪಾಯದಲ್ಲಿವೆ, ನನ್ನ ಹೆಂಡತಿ ಮಕ್ಕಳನ್ನು ನಾನು ಕರೆದುಕೊಂಡು ಬಂದು ಅವರನ್ನೂ ಕಷ್ಟಕ್ಕೆ ಸಿಲುಕಿಸಿದೆ ಎಂಬುದು ನನಗೆ ಗೊತ್ತಿದ್ದಿತು.

ಆದರೆ ನಾನು ಪೂರ್ಣವಾಗಿ ನಿರಪರಾಧಿಯಾಗಿದ್ದೆನು. ಯಾರನ್ನೂ ನೆಟಾಲಿಗೆ ಹೋಗಬೇಕೆಂದು ನಾನು ಪ್ರೇರಿಸಿರಲಿಲ್ಲ. 'ನಾದೇರಿ' ಹಡಗಿನಲ್ಲಿದ್ದ ಪ್ರಯಾಣಿಕರ ಪರಿಚಯವೂ ಸಹ ನನಗಿರಲಿಲ್ಲ. 'ಕುರ್‌ಲಂಡ್' ಹಡಗಿನಲ್ಲಿ ನನ್ನ ಇಬ್ಬರು ಮೂವರು ನೆಂಟರ ಹೊರತು, ಆ ಹಡಗುಗಳಲ್ಲಿದ್ದ ನೂರಾರು ಪ್ರಯಾಣಕರ ಪೈಕಿ ಒಬ್ಬರ ಹೆಸರಾಗಲೀ ವಿಳಾಸವಾಗಲೀ ನನಗೆ ತಿಳಿದಿರಲಿಲ್ಲ ಮತ್ತು ನೆಟಾಲ್ ಬಿಳಿಯರ ವರ್ತನೆಯನ್ನು ಕುರಿತು, ನಾನು ಹಿಂದೆಯೇ ನೆಟಾಲಿನಲ್ಲಿ ಹೇಳದಿದ್ದ ಒಂದು ಮಾತನ್ನೂ ಭಾರತದಲ್ಲಿ ಹೇಳಿರಲಿಲ್ಲ. ನಾನು ಹೇಳಿದುದಕ್ಕೆಲ್ಲ ಆಧಾರವಾಗಿ ನನ್ನಲ್ಲಿ ಬೇಕಾದಷ್ಟು ಪ್ರಮಾಣವಿತ್ತು.

ಆದುದರಿಂದ ನೆಟಾಲಿನ ಬಿಳಿಯರು ಯಾವ ನಾಗರಿಕತೆಯ ಫಲವಾಗಿದ್ದರೋ, ಯಾವ ನಾಗರಿಕತೆಯ ಪ್ರತಿನಿಧಿಗಳಾಗಿ ಅದಕ್ಕೆ ಬೆಂಬಲ ಕೊಡುತ್ತಿದ್ದರೋ, ಅದನ್ನು ಕುರಿತು ನನಗೆ ದುಃಖವಾಯಿತು. ಈ ನಾಗರಿಕತೆಯ ವಿಷಯ ನನ್ನ ಮನಸ್ಸಿನಲ್ಲಿ ಉದ್ದಕ್ಕೂ ಇದ್ದಿತು. ಆದುದರಿಂದ ಆ ಸಣ್ಣ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ನನ್ನ ವಿಚಾರಗಳನ್ನು ನಾನು ಮಂಡಿಸಿದೆನು. ಕಪ್ತಾನನೂ ಇತರ ಮಿತ್ರರೂ ನಾನು ಯಾವ ಮನೋಭಾವದಿಂದ ಆ ಭಾಷಣವನ್ನು ಮಾಡಿದ್ದೆನೋ ಅದೇ ಭಾವದಿಂದ ಅದನ್ನು ಶಾಂತರಾಗಿ ಕೇಳಿದರು. ನನ್ನ ಮಾತುಗಳು ಅವರ

ಭವಿಷ್ಯ ಜೀವನದ ಮೇಲೆ ಯಾವ ಪರಿಣಾಮವನ್ನುಂಟುಮಾಡಿತೋ ನಾನು ಹೇಳಲಾರೆನು. ಅನಂತರ ಹಡಗಿನ ಕಪ್ತಾನ ಮತ್ತು ಇತರ ಅಧಿಕಾರಿಗಳೊಂದಿಗೆ ನಾನು ಪಾಶ್ಚಾತ್ಯ ನಾಗರಿಕತೆಯನ್ನು ಕುರಿತು ದೀರ್ಘವಾದ ಚರ್ಚೆಯನ್ನು ನಡೆಸಿದೆನು. ನನ್ನ ಭಾಷಣದಲ್ಲಿ ನಾನು "ಪಾಶ್ಚಾತ್ಯ ನಾಗರಿಕತೆ ಪೌರ್ವಾತ್ಯ ನಾಗರಿಕತೆಯಿಂದ ಭಿನ್ನವಾಗಿದೆ. ಅದು ಹಿಂಸಾ (ಪಶುಬಲ) ಪ್ರಧಾನ ವಾದುದು ಪೌರ್ವಾತ್ಯ ನಾಗರಿಕತೆ ಅಹಿಂಸಾಪ್ರಧಾನವಾದುದು" ಎಂದು ಹೇಳಿದೆನು. ನನಗೆ ಅನೇಕರು ಪ್ರಶ್ನೆಗಳನ್ನು ಹಾಕಿದರು. ಪ್ರಶ್ನಿಸಿದವರ ಪೈಕಿ ಒಬ್ಬಾತ, ಕಪ್ತಾನನೇ ಎಂದು ನೆನಪು. ಆತ ನನ್ನ ತತ್ತ್ವಕ್ಕೆ ನನ್ನನ್ನೇ ಬಂಧಿಸಿ ಹೀಗೆ ಹೇಳಿದನು :

"ಬಿಳಿಯರು, ಹೆದರಿಸುತ್ತಿರುವಂತೆಯೇ ನಿಮಗೆ ಹಾನಿಯುಂಟು ಮಾಡಿದರೆ ನಿಮ್ಮ ಅಹಿಂಸಾ ತತ್ತ್ವವನ್ನು ಹೇಗೆ ಉಳಿಸಿಕೊಳ್ಳುವಿರಿ ?"

ಅದಕ್ಕೆ ನಾನು ಹೀಗೆ ಪ್ರತ್ಯುತ್ತರವಿತ್ತೆನು : "ಅವರನ್ನು ಕ್ಷಮಿಸಲು, ಅವರ ಮೇಲೆ ಕಾನೂನಿಗನುಸಾರವಾಗಿ ಮೊಕದ್ದಮೆ ಹೂಡದಿರಲು ದೇವರು ನನಗೆ ಧೈರ್ಯವನ್ನೂ ಸದ್ಬುದ್ಧಿಯನ್ನೂ ಕೊಡುವನೆಂದು ಆಶಿಸುತ್ತೇನೆ. ಅವರಲ್ಲಿ ನನಗೆ ಕೋಪವಿಲ್ಲ. ಅವರ ಅಜ್ಞಾನ ಮತ್ತು ಸಂಕುಚಿತ ಬುದ್ಧಿಗಾಗಿ ಮಾತ್ರ ನಾನು ದುಃಖಿಸುತ್ತೇನೆ. ತಾವು ಮಾಡುತ್ತಿರುವುದು ನ್ಯಾಯವೆಂದು ಅವರ ಶುದ್ಧ ಭಾವನೆ ಎಂದು ನನಗೆ ಗೊತ್ತು. ಆದುದರಿಂದ ಅವರ ಮೇಲೆ ಕೋಪಿಸಿಕೊಳ್ಳಲು ನನಗೆ ಕಾರಣವಿಲ್ಲ."

ಪ್ರಶ್ನೆ ಹಾಕಿದವರು ನಕ್ಕರು. ಪ್ರಾಯಶಃ ನನ್ನ ಮಾತಿನಲ್ಲಿ ಅವರಿಗೆ ನಂಬಿಕೆ ಬರಲಿಲ್ಲ.

ಹೀಗೆ ದಿನಗಳು ನಿಧಾನವಾಗಿ ಸಾಗಿದುವು. ಕ್ವಾರಂಟೈನ್ ಯಾವಾಗ ಮುಗಿಯುವುದೆಂಬುದು ಇನ್ನೂ ಖಚಿತವಾಗಿರಲಿಲ್ಲ. ಕ್ವಾರಂಟೈನ್ ಅಧಿಕಾರಿಯನ್ನು ಪ್ರಶ್ನಿಸಲಾಗಿ ವಿಷಯ ತನ್ನ ಕೈಬಿಟ್ಟು ಹೋಯಿತೆಂದೂ ಸರಕಾರದಿಂದ ಅಪ್ಪಣೆ ಬಂದ ಕೂಡಲೇ ನಮ್ಮನ್ನು ಹಡಗಿನಿಂದ ಇಳಿಯಗೊಡುವುದಾಗಿಯೂ ಅವನು ತಿಳಿಸಿದನು.

ಕೊನೆಗೆ ಪ್ರಯಾಣಿಕರಿಗೂ ನನಗೂ ಕಡೆಯ ಎಚ್ಚರಿಕೆ ಕೊಡಲ್ಪಟ್ಟಿತು. "ನಿಮ್ಮ ಪ್ರಾಣ ಉಳಿಸಿಕೊಳ್ಳಬೇಕಾದರೆ ನಮ್ಮ ಆದೇಶದಂತೆ ನಡೆಯಿರಿ"

ಎಂದು ತಿಳಿಸಿದರು. ನಾನೂ ಮತ್ತು ಪ್ರಯಾಣಿಕರೂ ನೆಟಾಲ್ ಬಂದರಿನಲ್ಲಿ ಇಳಿಯಲು ನಮಗೆ ಹಕ್ಕು ಇದೆಯೆಂದೂ ಎಷ್ಟೇ ಕಷ್ಟವಾಗಲೀ ನೆಟಾಲನ್ನು ಪ್ರವೇಶಿಸುವುದು ನಮ್ಮ ದೃಢನಿಶ್ಚಯವೆಂದೂ ಉತ್ತರವಿತ್ತೆವು.

ಇಪ್ಪತ್ತುಮೂರು ದಿನಗಳ ಕೊನೆಯಲ್ಲಿ ಬಂದರನ್ನು ಪ್ರವೇಶಿಸಲು ಹಡಗುಗಳಿಗೆ ಅಪ್ಪಣೆ ದೊರಕಿತು; ಪ್ರಯಾಣಿಕರು ಇಳಿಯುವುದಕ್ಕೂ ಅನುಮತಿ ಸಿಕ್ಕಿತು.

೩

ಪರೀಕ್ಷೆ

ಹೀಗೆ ಹಡಗುಗಳು ಬಂದರಿಗೆ ಬಂದವು. ಪ್ರಯಾಣಿಕರು ಇಳಿಯ ತೊಡಗಿದರು. ಆದರೆ ಮಿ. ಎಸ್ಕೊಂಬರು ಕಪ್ತಾನನಿಗೆ ಹೀಗೆ ಹೇಳಿ ಕಳುಹಿಸಿದ್ದರು: "ಬಿಳಿಯರು ಬಹಳ ರೊಚ್ಚಿಗೆದ್ದಿರುವುದರಿಂದ ಮಿ. ಗಾಂಧೀಯವರ ಜೀವಕ್ಕೆ ಅಪಾಯವಿದೆ. ಗಾಂಧೀಯವರೂ ಅವರ ಸಂಸಾರದವರೂ ಸಂಜೆಯ ಮಬ್ಬಿನಲ್ಲಿ ಹಡಗಿನಿಂದ ಇಳಿದು ಬರಲಿ. ಪೋಲಿಸ್ ಸೂಪರಿಂಟೆಂಡೆಂಟ್ ಟೇಟಂ ಅವರು ಮನೆ ಸೇರುವತನಕ ಕಾವಲಿರುತ್ತಾರೆ." ಕಪ್ತಾನನು ಈ ವಿಷಯವನ್ನು ನನಗೆ ತಿಳಿಸಿದನು; ನಾನು ಹಾಗೆಯೇ ನಡೆಯಲು ಒಪ್ಪಿದೆನು. ಆದರೆ ಇದಾದ ಅರ್ಧ ಗಂಟೆಯೊಳಗೆ ಮಿ. ಲಾಟನರು ಬಂದು ಕಪ್ತಾನನನ್ನು ಕಂಡು ಹೀಗೆ ಹೇಳಿದರು: "ಮಿ. ಗಾಂಧೀಯವರಿಗೆ ಆಕ್ಷೇಪಣೆಯಿಲ್ಲದಿದ್ದರೆ ಅವರನ್ನು ನನ್ನ ಜತೆ ಕರೆದುಕೊಂಡು ಹೋಗಬೇಕೆಂದಿದ್ದೇನೆ. ಏಜೆಂಟ್ ಕಂಪನಿಯ ವಕೀಲನಾಗಿ ನಿಮಗೆ ಹೇಳುತ್ತೇನೆ. ಮಿ. ಎಸ್ಕೊಂಬ್ ಹೇಳಿದಂತೆ ನೀವು ಕೇಳಬೇಕಾದುದಿಲ್ಲ." ಅನಂತರ ಅವರು ನನ್ನಲ್ಲಿ ಬಂದು ಈ ಅಭಿಪ್ರಾಯ ಬರುವಂತೆ ಹೇಳಿದರು: "ನಿಮಗೆ ಹೆದರಿಕೆಯಿಲ್ಲದಿದ್ದರೆ ಹೀಗೆ ಮಾಡೋಣ. ಶ್ರೀಮತಿ ಗಾಂಧೀ ಮತ್ತು ಮಕ್ಕಳು ರುಸ್ತುಂಜೀಯವರ ಮನೆಗೆ ಗಾಡಿಯಲ್ಲಿ ಹೋಗಲಿ. ನಾವು ಹಿಂದಿನಿಂದ ನಡೆದುಕೊಂಡು ಹೋಗೋಣ. ನೀವು ರಾತ್ರಿಯ ಹೊತ್ತು ಕಳ್ಳನಂತೆ ಊರನ್ನು ಪ್ರವೇಶಿಸುವುದು ನನಗೆ ಒಪ್ಪಿಗೆ

ಯಿಲ್ಲ. ನಿಮಗೆ ಯಾರಾದರೂ ಅಪಾಯವುಂಟುಮಾಡುವರೆಂದು ನನಗೆ ತೋರುವುದಿಲ್ಲ. ಈಗ ಎಲ್ಲ ಶಾಂತವಾಗಿದೆ. ಬಿಳಿಯರೆಲ್ಲ ಅಲ್ಲಿ ಇಲ್ಲಿ ಹೋಗಿದ್ದಾರೆ. ಹೇಗೂ ನೀವು ರಹಸ್ಯದಲ್ಲಿ ನಗರವನ್ನು ಪ್ರವೇಶಿಸುವುದು ಉಚಿತವಲ್ಲವೆಂಬುದು ನನಗೆ ಮನದಟ್ಟಾಗಿದೆ." ನಾನು ಅವರ ಮಾತನ್ನು ಒಪ್ಪಿದೆನು. ನನ್ನ ಹೆಂಡತಿಯೂ ಮಕ್ಕಳೂ ರುಸ್ತುಂಜೀಯವರ ಮನೆಗೆ ಗಾಡಿಯಲ್ಲಿ ಸುಖವಾಗಿ ಹೋಗಿ ತಲಪಿದರು. ಕಪ್ತಾನನ ಅಪ್ಪಣೆ ಪಡೆದು ನಾನು ಮಿ. ಲಾಟನ್‌ರವರೊಡನೆ ಹಡಗಿನಿಂದ ಇಳಿದೆನು. ಮಿ. ರುಸ್ತುಂಜೀಯವರ ಮನೆ ಬಂದರಿನಿಂದ ಎರಡು ಮೈಲಿ ದೂರದಲ್ಲಿದ್ದಿತು.

ನಾವು ಇಳಿದಕೂಡಲೇ ಕೆಲವು ಹುಡುಗರು ನನ್ನನ್ನು ಗುರುತಿಸಿ "ಗಾಂಧೀ, ಗಾಂಧೀ" ಎಂದು ಕೂಗಿದರು. ಇನ್ನೂ ಐದು ಆರು ಜನ ಅಲ್ಲಿಗೆ ಓಡಿಬಂದು ತಾವೂ ಕೂಗಿದರು. ಮಿ. ಲಾಟನ್‌ರಿಗೆ ಗುಂಪು ದೊಡ್ಡದಾಗ ಬಹುದೆಂಬ ಭಯವಾಯಿತು. ಅವರು ಒಂದು ರಿಕ್‌ಷಾವನ್ನು ಕೂಗಿದರು. ರಿಕ್‌ಷಾ ಹತ್ತುವುದು ನನಗೆ ಎಂದಿಗೂ ಇಷ್ಟವಾಗಿರಲಿಲ್ಲ. ಇದೇ ನನ್ನ ಮೊದಲನೆಯ ಅನುಭವವಾಗಿದ್ದಿತು. ಆದರೆ ಆ ಹುಡುಗರು ನನ್ನನ್ನು ಹತ್ತುವುದಕ್ಕೇ ಬಿಡಲಿಲ್ಲ. ಅವರು ರಿಕ್‌ಷಾ ಹುಡುಗನನ್ನು ಭಯಂಕರವಾಗಿ ಹೆದರಿಸಿಬಿಟ್ಟರು. ಅವನು ಆ ಸ್ಥಳ ಬಿಟ್ಟು ಓಡಿಬಿಟ್ಟನು. ನಾವು ಮುಂದ್ಮುವರಿದಂತೆ ಗುಂಪು ಅಗಾಧವಾಗಿ ಬೆಳೆಯಿತು. ನಮಗೆ ಮುಂದೆ ಹೆಜ್ಜೆ ಇಡಲು ಅವಕಾಶವಾಗಲಿಲ್ಲ. ಅವರು ಮೊದಲು ಮಿ. ಲಾಟನ್‌ರನ್ನು ಹಿಡಿದು, ನನ್ನಿಂದ ಬೇರೆ ಮಾಡಿದರು. ಅನಂತರ ನನ್ನನ್ನು ಕಲ್ಲುಗಳಿಂದಲೂ ಇಟ್ಟಿಗೆಗಳಿಂದಲೂ ಕೊಳೆತ ಮೊಟ್ಟೆಗಳಿಂದಲೂ ಹೊಡೆದರು. ಒಬ್ಬ ನನ್ನ ರುಮಾಲನ್ನು ಕಿತ್ತುಕೊಂಡ. ಉಳಿದವರು ನನ್ನನ್ನು ಹೊಡೆಯುವುದಕ್ಕೂ ಬಡಿಯುವುದಕ್ಕೂ ಪ್ರಾರಂಭಿಸಿದರು. ನಾನು ತಲೆತಿರುಗಿ ಎಚ್ಚರ ತಪ್ಪಿ ಉಸಿರು ತೆಗೆದುಕೊಳ್ಳಲು ಒಂದು ಮನೆಯ ಕಟಕಟೆಯನ್ನು ಹಿಡಿದು ನಿಂತುಕೊಂಡೆನು. ಆದರೆ ಅದು ಸಾಧ್ಯವಾಗಲಿಲ್ಲ. ಅವರು ಇನ್ನೂ ನನ್ನನ್ನು ಹೊಡೆಯುತ್ತಾ ಬಡಿಯುತ್ತಾ ಮೇಲೇರಿ ಬಂದರು. ಪೋಲೀಸ್ ಸೂಪರಿಂಟೆಂಡೆಂಟರ ಪತ್ನಿ (ಆಕೆಗೆ ನನ್ನ ಪರಿಚಯವಿದ್ದಿತು) ಆ ದಾರಿಯಲ್ಲಿ ಹೋಗುತ್ತಿದ್ದಳು. ಆ ವೀರ ಮಹಿಳೆ ನನ್ನ ಸಮೀಪಕ್ಕೆ ಬಂದು, ಬಿಸಿಲಿಲ್ಲದಿದ್ದರೂ

ತನ್ನ ಸಣ್ಣ ಛತ್ರಿಯನ್ನು ಬಿಚ್ಚಿ ಹಿಡಿದು ನನಗೂ ಆ ಗುಂಪಿಗೂ ನಡುವೆ ನಿಂತುಕೊಂಡಳು. ಇದರಿಂದ ಗುಂಪಿನ ಕೋಪ ಸ್ವಲ್ಪ ಹತೋಟಿಗೆ ಬಂದಿತು. ಏಕೆಂದರೆ ಶ್ರೀಮತಿ ಅಲೆಗ್ಸಾಂಡರಿಗೆ ಏಟು ಬೀಳದಂತೆ ನನ್ನನ್ನು ಹೊಡೆಯಲು ಸಾಧ್ಯವಿರಲಿಲ್ಲ.

ಈ ಮಧ್ಯೆ ಈ ವಿಷಯಗಳನ್ನೆಲ್ಲ ನೋಡಿದ್ದ ಒಬ್ಬ ಭಾರತೀಯ ಯುವಕ ಪೋಲೀಸ್ ಸ್ಟೇಷನ್ನಿಗೆ ಓಡಿಹೋಗಿ ಸುದ್ದಿ ಕೊಟ್ಟನು. ಪೋಲೀಸ್ ಸೂಪರಿಂಟೆಂಡೆಂಟರು ಒಂದು ಪೋಲೀಸ್ ದಳವನ್ನು ಕಳುಹಿಸಿ ನನ್ನನ್ನು ಅವರು ಸುತ್ತುಗಟ್ಟಿ ನಾನು ಹೋಗಬೇಕಾಗಿದ್ದ ಸ್ಥಳಕ್ಕೆ ಸುರಕ್ಷಿತವಾಗಿ ಮುಟ್ಟಿಸುವಂತೆ ಆಜ್ಞೆ ಮಾಡಿದರು. ಅವರು ಬಂದುದು ಸಕಾಲವೇ ಆಗಿತ್ತು. ಪೋಲೀಸ್ ಸ್ಟೇಷನ್ ನಮ್ಮ ದಾರಿಯಲ್ಲಿಯೇ ಇದ್ದಿತು. ನಾವು ಅಲ್ಲಿಗೆ ಹೋದಾಗ ಪೋಲೀಸ್ ಸೂಪರಿಂಟೆಂಡೆಂಟರು: "ಇಲ್ಲಿ ರಕ್ಷಣೆ ಪಡೆಯಿರಿ" ಎಂದು ಹೇಳಿದರು. ನಾನು ಅವರ ಆ ಸೂಚನೆಯನ್ನು ಕೃತಜ್ಞತೆಯಿಂದ ನಿರಾಕರಿಸಿದೆನು. ತಮ್ಮ ತಪ್ಪು ಅವರಿಗೆ ತಿಳಿದ ಕೂಡಲೇ ಅವರು ಶಾಂತರಾಗಿ ಸುಮ್ಮನಾಗುತ್ತಾರೆ. ಅವರ ನ್ಯಾಯ ಬುದ್ಧಿಯಲ್ಲಿ ನನಗೆ ವಿಶ್ವಾಸವಿದೆ ಎಂದು ಹೇಳಿದೆನು. ಪೋಲೀಸಿನವರ ಕಾವಲಿನಲ್ಲಿ ನಾನು ಮತ್ತಾವ ತೊಂದರೆಗೂ ಒಳಗಾಗದೆ ರುಸ್ತುಂಜೀಯವರ ಮನೆಯನ್ನು ತಲಪಿದೆನು. ನನ್ನ ಮೈಯೆಲ್ಲ ತರೆದು ಹೋಗಿದ್ದು ಮೂರು ಗಾಯಗಳಾಗಿದ್ದರೂ ಒಂದು ಕಡೆ ಮಾತ್ರ ಸ್ವಲ್ಪ ರಕ್ತ ಬರುತ್ತಿತ್ತು. ಅಲ್ಲೇ ಇದ್ದ ಹಡಗಿನ ಡಾಕ್ಟರ್ ದಾದಿಬಾರ್ ಜೋರವರು ಅತ್ಯುತ್ತಮ ಚಿಕಿತ್ಸೆ ಶುಶ್ರೂಷೆಗಳನ್ನು ಮಾಡಿದರು.

ಮನೆಯೊಳಗೆ ಶಾಂತವಾಗಿದ್ದರೂ ಬಿಳಿಯರು ಮನೆಯ ಸುತ್ತ ಮುತ್ತಿದ್ದರು. ರಾತ್ರಿಯಾಗುತ್ತಿದ್ದಿತು. ದೊಂಬಿಕಾರರು "ನಮಗೆ ಗಾಂಧೀಯನ್ನು ಒಪ್ಪಿಸಿ" ಎಂದು ಕಿರುಚಿ ಕೂಗುತ್ತಿದ್ದರು. ಪರಿಸ್ಥಿತಿಯನ್ನು ಅರಿತಿದ್ದ ಪೋಲೀಸ್ ಸೂಪರಿಂಟೆಂಡೆಂಟರು ತತ್‌ಕ್ಷಣ ಅಲ್ಲಿಗೆ ಬಂದರು. ಅವರು ಭಯವನ್ನು ತೋರಿಸದೆ ಒಳ್ಳೆಯ ಮಾತುಗಳಿಂದಲೇ ಗುಂಪನ್ನು ಹತೋಟಿಗೆ ತರಲು ಪ್ರಯತ್ನಿಸುತ್ತಿದ್ದರು. ಆದರೆ ಅವರಿಗೂ ಚಿಂತೆ ಪೂರ್ತಿಯಾಗಿ ಇಲ್ಲದಿರಲಿಲ್ಲ. ಅವರು ನನಗೆ ಹೀಗೆ ಹೇಳಿಕಳುಹಿಸಿದರು:

"ನಿಮ್ಮ ಮಿತ್ರರ ಮನೆಯನ್ನೂ ಆಸ್ತಿಯನ್ನೂ ಉಳಿಸಬೇಕಾದರೆ, ಮತ್ತು ನಿಮ್ಮ ಹೆಂಡತಿ ಮಕ್ಕಳ ಪ್ರಾಣವನ್ನು ಉಳಿಸಬೇಕಾದರೆ ನೀವು ನಾನು ಹೇಳುವಂತೆ ವೇಷ ಧರಿಸಿಕೊಂಡು ಮನೆಯಿಂದ ಹೊರ ಬೀಳಬೇಕು.

ಹೀಗೆ ಒಂದೇ ದಿನ ಪರಸ್ಪರ ವಿರುದ್ಧವಾದ ಎರಡು ರೀತಿಗಳಲ್ಲಿ ನಡೆದುಕೊಳ್ಳಬೇಕಾಯಿತು. ಪ್ರಾಣಾಪಾಯ, ಬರಿಯ ಕಲ್ಪನೆ ಮಾತ್ರ ಎಂದು ತೋರಿದಾಗ ಮಿ. ಲಾಟನ್‌ರು, "ಧೈರ್ಯವಾಗಿ ಹೊರಗೆ ಹೊರಡಿ" ಎಂದು ಸಲಹೆ ಮಾಡಿದರು. ನಾನು ಆ ಸಲಹೆಯನ್ನು ಅಂಗೀಕರಿಸಿದೆನು. ಅಪಾಯ ನಿಜವೆಂದು ಆದಾಗ ಮತ್ತೊಬ್ಬ ಮಿತ್ರರು ಅದಕ್ಕೆ ವಿರುದ್ಧವಾದ ಸಲಹೆಯನ್ನು ಕೊಟ್ಟರು. ನಾನು ಅದನ್ನೂ ಅಂಗೀಕರಿಸಿದೆನು. ನನ್ನ ಜೀವಕ್ಕೆ ಅಪಾಯ ಬಂದಿದ್ದುದರಿಂದ ನಾನು ಹಾಗೆ ಮಾಡಿದೆ ಎನ್ನಲೇ ಅಥವಾ ನನ್ನ ಮಿತ್ರರ ಜೀವವನ್ನೂ ಆಸ್ತಿಯನ್ನೂ ಉಳಿಸುವುದಕ್ಕಾಗಿ ಹಾಗೆ ಮಾಡಿದೆ ಎನ್ನಲಿ ? ಅಥವಾ ನನ್ನ ಹೆಂಡತಿ ಮಕ್ಕಳ ಪ್ರಾಣವನ್ನು ರಕ್ಷಿಸಲು ಹಾಗೆ ಮಾಡಿದೆ ಎನ್ನಲಿ ? ಯಾರು ಹೇಳಬಲ್ಲರು ? ಆದರೆ ಒಂದು ವಿಷಯವನ್ನು ಮಾತ್ರ ಸ್ಪಷ್ಟವಾಗಿ ಹೇಳಬಹುದು. ಮೊದಲು ನಾನು ಧೈರ್ಯವಾಗಿ ಗುಂಪನ್ನು ಎದುರಿಸಿದುದೂ ಸರಿ. ಅನಂತರ ವೇಷ ಮರೆಸಿಕೊಂಡು ಮನೆಯಿಂದ ತಪ್ಪಿಸಿಕೊಂಡು ಹೋದುದೂ ಸರಿ.

ನಡೆದುಹೋದ ಸಂಗತಿಗಳು ಸರಿಯೇ ತಪ್ಪೇ ಎಂದು ಈಗ ಅವುಗಳ ನಿರ್ಣಯಕ್ಕೆ ಕೂಡುವುದು ವ್ಯರ್ಥ. ಅವುಗಳ ಅರ್ಥವನ್ನು ತಿಳಿದುಕೊಂಡು ಸಾಧ್ಯವಾದರೆ ಭವಿಷ್ಯತ್ತಿಗಾಗಿ ಅವುಗಳಿಂದ ಪಾಠ ಕಲಿತುಕೊಳ್ಳಬೇಕು. ಒಬ್ಬ ವ್ಯಕ್ತಿ, ಒಂದು ವಿಶಿಷ್ಟ ಪರಿಸ್ಥಿತಿಯಲ್ಲಿ ಹೇಗೆ ನಡೆದುಕೊಳ್ಳುತ್ತಾನೆ ಎಂದು ಹೇಳುವುದು ಕಷ್ಟ. ಮನುಷ್ಯನನ್ನು ಬಾಹ್ಯ ಆಚರಣೆಗಳಿಂದಲೇ ಅಳೆಯುವುದು, ಅವನ ಯೋಗ್ಯತೆ ಕುರಿತು ಬರಿಯ ಊಹೆ ಮಾತ್ರವಾಗುತ್ತದೆ. ಏಕೆಂದರೆ ಆ ಊಹೆಗೆ ಸರಿಯಾದ ಆಧಾರಗಳಿರುವುದಿಲ್ಲ.

ಅದು ಹೇಗಾದರೂ ಇರಲಿ. ತಪ್ಪಿಸಿಕೊಂಡು ಹೋಗುವ ಸಿದ್ಧತೆಯಲ್ಲಿ ನಾನು ನನ್ನ ಗಾಯಗಳನ್ನು ಮರೆತೆನು. ಸೂಪರಿಂಟೆಂಡೆಂಟರು ಸೂಚಿಸಿದಂತೆ ನಾನು ಭಾರತೀಯ ಪೋಲಿಸಿನವನ ಸಮವಸ್ತ್ರವನ್ನು ಧರಿಸಿ, ತಲೆಯ ಮೇಲೆ ಟೋಪಿಗೆ ಬದಲಾಗಿ ಹಿತ್ತಾಳೆಯ ತಟ್ಟೆಯನ್ನು ಮದರಾಸಿನ

ವನಂತೆ ಮುಂಡಾಸಿನಿಂದ ಬಿಗಿಸಿದೆನು. ವಸ್ತ್ರದಲ್ಲಿ ಸುತ್ತಿ ಇಟ್ಟುಕೊಂಡೆನು. ಇಬ್ಬರು ಪೋಲೀಸ್ ಗೂಢಚಾರರು ನನ್ನ ಜತೆ ಇದ್ದರು. ಒಬ್ಬನು ಭಾರ ತೀಯ ವರ್ತಕನಂತೆ ವೇಷಹಾಕಿಕೊಂಡು ಮುಖಕ್ಕೆ ಬಣ್ಣ ಬಳಿದುಕೊಂಡಿ ದ್ದನು. ಮತ್ತೊಬ್ಬನು ಯಾವ ವೇಷ ಹಾಕಿದ್ದನೋ ಈಗ ನೆನಪಿಲ್ಲ. ನಾವು ಒಂದು ಓಣಿಯನ್ನು ದಾಟಿ ಮಗ್ಗಲು ಅಂಗಡಿಯನ್ನು ಸೇರಿದೆವು. ಉಗ್ರಾಣ ದಲ್ಲಿ ತುಂಬಿದ್ದ ಗೋಣಿಯ ಚೀಲಗಳ ಮರೆಯಲ್ಲಿ ಆ ದೊಂಬಿಕಾರರ ಮಧ್ಯೆ ತೂರಿಕೊಂಡು, ನನಗಾಗಿ ರಸ್ತೆಯ ಕೊನೆಯಲ್ಲಿ ಸಿದ್ಧವಾಗಿ ನಿಂತಿದ್ದ ಗಾಡಿ ಯನ್ನು ತಲಪಿದೆವು. ಅನಂತರ ಗಾಡಿಯಲ್ಲಿ ಕುಳಿತು, ಅಲೆಗ್ಸಾಂಡರರು ನನಗೆ ಮೊದಲೇ ರಕ್ಷಣೆ ಕೊಡುತ್ತೇನೆಂದು ಹೇಳಿದ್ದ ಪೋಲೀಸ್ ಸ್ಟೇಷನ್‌ಗೆ ಹೋದೆವು. ನಾನು ಅಲೆಗ್ಸಾಂಡರ್‌ರನ್ನೂ ಪೋಲೀಸ್ ಗೂಢಚಾರ ಅಧಿಕಾರಿ ಗಳನ್ನೂ ಅವರ ಸಹಾಯಕ್ಕಾಗಿ ವಂದಿಸಿದೆನು.

ಈ ರೀತಿ ನಾನು ತಪ್ಪಿಸಿಕೊಂಡು ಹೋಗುತ್ತಿದ್ದಾಗ ಮಿ. ಅಲೆಕ್ಸಾಂಡ ರರು ಹೀಗೆ ಹಾಡಿ ಗುಂಪನ್ನು ವಿನೋದಗೊಳಿಸುತ್ತಿದ್ದರು ;

"ಎಳಿ, ಗಾಂಧಿಯನ್ನು ನೇಣುಹಾಕುವ ; ಅಲ್ಲಿನ ಹುಣಸೇ ಮರಕ್ಕೆ ನೇಣುಹಾಕುವ."

ನಾನು ಸುರಕ್ಷಿತವಾಗಿ ಪೋಲೀಸ್ ಸ್ಟೇಷನನ್ನು ತಲಪಿದ ಸಂಗತಿ ಅವರಿಗೆ ತಿಳಿದಕೂಡಲೇ ಅವರು ಗುಂಪಿನ ಜನರಿಗೆ ಹೀಗೆ ಹೇಳಿದರು : "ಒಳ್ಳೆಯದು ನಿಮ್ಮ ಷಿಕಾರಿ, ಮಗ್ಗಲು ಅಂಗಡಿಯ ಮೂಲಕ ತಪ್ಪಿಸಿಕೊಂಡು ಹೋಗಿಬಿಟ್ಟಿದ್ದಾನೆ. ಈಗ ನೀವೂ ಮನೆಗೆ ಹೋಗಿ." ನೆರೆದಿದ್ದವರ ಪೈಕಿ ಕೆಲವರಿಗೆ ಕೋಪ ಬಂದಿತು. ಕೆಲವರು ನಕ್ಕುಬಿಟ್ಟರು. ಉಳಿದವರು ಈ ಕಥೆಯನ್ನು ನಂಬಲಿಲ್ಲ.

ಆಗ ಸೂಪರಿಂಟೆಂಡೆಂಟರು, "ಒಳ್ಳೆಯದು, ನನ್ನ ಮಾತನ್ನು ನೀವು ನಂಬದಿದ್ದಲ್ಲಿ, ನನ್ನ ಜತೆಗೆ ನಿಮ್ಮ ಒಬ್ಬರು ಇಬ್ಬರು ಪ್ರತಿನಿಧಿಗಳನ್ನು ಚುನಾಯಿಸಿ ಕಳುಹಿಸಿ. ನಾನು ಅವರನ್ನು ಒಳಕ್ಕೆ ಕರೆದುಕೊಂಡು ಹೋಗಲು ಸಿದ್ಧನಾಗಿದ್ದೇನೆ. ಗಾಂಧೀ ಒಳಗಿರುವುದನ್ನು ಅವರು ಕಂಡು ಹಿಡಿದರೆ ನಾನು ಗಾಂಧೀಯನ್ನು ನಿಮಗೆ ಒಪ್ಪಿಸುತ್ತೇನೆ. ಆತ ಒಳಗೆ

ಇಲ್ಲದಿದ್ದರೆ ನೀವು ನಿಮ್ಮ ನಿಮ್ಮ ಮನೆಗಳಿಗೆ ಹೊರಟು ಹೋಗಬೇಕು. ರುಸ್ತುಂಜೀಯವರ ಮನೆಯನ್ನು ಸುಡುವುದಾಗಲೀ ಅಥವಾ ಗಾಂಧೀಯವರ ಹೆಂಡತಿ ಮಕ್ಕಳಿಗೆ ತೊಂದರೆ ಮಾಡುವುದಾಗಲೀ ನಿಮ್ಮ ಉದ್ದೇಶವಲ್ಲ; ಖಂಡಿತ ಮಾಡಲಾರಿರೆಂಬ ವಿಶ್ವಾಸ ನನಗಿದೆ" ಎಂದು ಹೇಳಿದರು.

ಗುಂಪು, ಮನೆಯನ್ನು ಹುಡುಕಲು ತಮ್ಮ ಪ್ರತಿನಿಧಿಗಳನ್ನು ಚುನಾಯಿಸಿ ಕಳುಹಿತು. ಅವರು ನಿರುತ್ಸಾಹದ ಸುದ್ದಿಯೊಡನೆ ಹಿಂದಿರುಗಿದರು. ಅದು ಕೊನೆಗೆ ಚದುರತೊಡಗಿತು. ಬಹು ಮಂದಿ, ಸೂಪರಿಂಟೆಂಡೆಂಟರು ಇಷ್ಟು ಚಾತುರ್ಯದಿಂದ ಪರಿಸ್ಥಿತಿಯನ್ನು ಹತೋಟಿಗೆ ತಂದುದಕ್ಕೆ ಮೆಚ್ಚುಗೆ ವ್ಯಕ್ತಪಡಿಸುತ್ತಲೂ, ಕೆಲವರು ಕೋಪದಿಂದ ಕುದಿಯುತ್ತಲೂ—ಅಂತೂ ಎಲ್ಲರೂ ಹೊರಟು ಹೋದರು.

ಆಗ, ದಿವಂಗತ ಚೇಂಬರ್‌ಲೇನರು ವಸಾಹತುಗಳ ಕಾರ್ಯದರ್ಶಿಯಾಗಿದ್ದರು. ಅವರು ನೆಟಾಲ್ ಸರಕಾರಕ್ಕೆ, "ಗಾಂಧೀಯವರ ಆಕ್ರಮಣಕಾರರ ಮೇಲೆ ಮೊಕದ್ದಮೆ ಹೂಡಿ" ಎಂದು ತಂತಿ ಕಳುಹಿಸಿದರು. ಮಿ. ಎಸ್ಕೊಂಬರು ನನಗೆ ಹೇಳಿಕಳುಹಿಸಿದರು. ನನಗೆ ಆದ ಹಿಂಸೆಗಾಗಿ ವಿಷಾದವನ್ನು ವ್ಯಕ್ತಪಡಿಸಿ "ನಿಮ್ಮ ದೇಹಕ್ಕೆ ಅತ್ಯಲ್ಪ ನೋವಾದರೂ ನಾನು ಅದಕ್ಕೆ ದುಃಖಪಡುತ್ತೇನೆ. ಲಾಟನ್‌ರ ಸಲಹೆಯಂತೆ ನಡೆದುಕೊಂಡು ಏನು ಒಂದರೂ ಎದುರಿಸಲು ಸಿದ್ಧರಾಗಿದ್ದುದಕ್ಕೆ ನಿಮಗೆ ಹಕ್ಕುಂಟು. ಆದರೆ ನೀವು ನನ್ನ ಸೂಚನೆಯನ್ನು ಅಂಗೀಕರಿಸಿದರೆ ಈ ವಿಷಾದಪೂರ್ಣವಾದ ಘಟನೆಗಳು ಖಂಡಿತ ನಡೆಯುತ್ತಿರಲಿಲ್ಲ. ನಿಮ್ಮ ಆಕ್ರಮಣಕಾರರನ್ನು ನೀವು ಗುರುತಿಸಿ ಹೇಳುವಿರಾದರೆ ಅವರನ್ನು ಬಂಧಿಸಿ ಅವರ ಮೇಲೆ ಮೊಕದ್ದಮೆ ಹೂಡಲು ನಾನು ಸಿದ್ಧನಾಗಿದ್ದೇನೆ. ಹಾಗೆ ಮಾಡಬೇಕೆಂಬುದು ಮಿ. ಚೇಂಬರ್‌ಲೇನ್‌ರ ಇಷ್ಟವೂ ಹೌದು" ಎಂದು ಹೇಳಿದರು.

ಅವರಿಗೆ ನಾನು ಈ ಉತ್ತರವನ್ನು ಕೊಟ್ಟೆನು.

"ಯಾರ ಮೇಲೂ ಮೊಕದ್ದಮೆ ನಡೆಸಲು ನನಗೆ ಇಷ್ಟವಿಲ್ಲ. ದೊಂಬಿಕಾರರ ಪೈಕಿ ಒಬ್ಬರು ಇಬ್ಬರನ್ನು ಗುರುತಿಸಲು ನನಗೆ ಸಾಧ್ಯವಾಗಬಹುದು. ಆದರೆ ಅವರಿಗೆ ಶಿಕ್ಷೆ ಕೊಡಿಸುವುದರಿಂದ ಪ್ರಯೋಜನವೇನು? ಅಲ್ಲದೆ ಆಕ್ರಮಣಕಾರರನ್ನು ನಾನು ತಪ್ಪಿತಸ್ಥರೆಂದು ಭಾವಿಸುವುದಿಲ್ಲ.

ನಾನು ಭಾರತದಲ್ಲಿ, ನೆಟಾಲಿನ ಬಿಳಿಯರನ್ನು ಕುರಿತು ಅತಿಶಯೋಕ್ತಿಯುಳ್ಳ ಹೇಳಿಕೆಯನ್ನು ಕೊಟ್ಟು ಅವರನ್ನು ದೂಷಿಸಿದೆನೆಂದು ತಿಳಿದುಕೊಂಡಿದ್ದಾರೆ. ಆ ಸುದ್ದಿಯನ್ನು ನಂಬಿದ ಮೇಲೆ ಅವರಿಗೆ ರೋಷವುಂಟಾದುದರಲ್ಲಿ ಏನೂ ಆಶ್ಚರ್ಯವಿಲ್ಲ.

ದೋಷ ಬಿಳಿಯ ಮುಖಂಡರದು. ನಾನು ಹೇಳುವುದಕ್ಕೆ ನೀವು ಅವಕಾಶ ಕೊಡುವುದಾದರೆ, ನೀವೂ ಇದರಲ್ಲಿ ತಪ್ಪಿತಸ್ಥರು. ನೀವು ಜನರಿಗೆ ಸರಿಯಾದ ಮಾರ್ಗದರ್ಶನವನ್ನು ಮಾಡಬಹುದಾಗಿದ್ದಿತು. ಆದರೆ ನೀವೂ ರಾಯ್‌ಟರ್ ಕಳುಹಿಸಿದ ಸುದ್ದಿಯನ್ನು ಓದಿ ನಾನು ಅತಿಶಯೋಕ್ತಿಗಳನ್ನು ಹೇಳಿದನೆಂದು ನಂಬಿದಿರಿ. ಯಾರ ಮೇಲೂ ಮೊಕದ್ದಮೆಯನ್ನು ನಡೆಸಲು ನನಗೆ ಇಷ್ಟವಿಲ್ಲ. ಸತ್ಯ ಗೊತ್ತಾದ ಮೇಲೆ ಅವರು ತಮ್ಮ ನಡತೆಗಾಗಿ ವಿಷಾದಪಡುವರೆಂದು ನನಗೆ ಗೊತ್ತು.

ಎಸ್ಕೊಂಬರು "ಇದನ್ನು ನನಗೆ ನೀವು ಬರೆದು ಕೊಡುವಿರಾ ? ಏಕೆಂದರೆ ಈ ವಿಷಯವನ್ನು ನಾನು ಮಿ. ಚೇಂಬರ್‌ಲೇನ್‌ರಿಗೆ ತಿಳಿಸಬೇಕಾಗಿದೆ. ನೀವು ಆತುರದಲ್ಲಿ ಯಾವ ಹೇಳಿಕೆಯನ್ನೂ ಕೊಡಬೇಕೆಂಬುದು ನನ್ನ ಅಭಿಮತವಲ್ಲ. ಬೇಕಾದರೆ ನೀವು ಮಿ. ಲಾಟನ್ ಮತ್ತು ಇತರ ನಿಮ್ಮ ಸ್ನೇಹಿತರೊಂದಿಗೆ ಸಮಾಲೋಚಿಸಿ ಅನಂತರ ಅಂತಿಮ ನಿರ್ಧಾರಕ್ಕೆ ಬರಬಹುದು. ಆದರೆ ಇಷ್ಟನ್ನು ಮಾತ್ರ ನಾನು ಹೇಳಬಲ್ಲೆನು : "ನಿಮ್ಮ ಆಕ್ರಮಣಕಾರರ ಮೇಲೆ ಮೊಕದ್ದಮೆ ಹೂಡುವ ಹಕ್ಕನ್ನು ನೀವು ಬಿಟ್ಟುಕೊಟ್ಟರೆ, ಶಾಂತಿಯನ್ನು ಸ್ಥಾಪಿಸಲು ನೀವು ಬಹುಮಟ್ಟಿಗೆ ನನಗೆ ಸಹಾಯ ಮಾಡಿದಂತಾಗುವುದು. ಜತೆಗೆ ನಿಮ್ಮ ಗೌರವವೂ ಹೆಚ್ಚುವುದು" ಎಂದು ಹೇಳಿದರು.

ನಾನು, "ನಿಮಗೆ ಕೃತಜ್ಞನಾಗಿದ್ದೇನೆ. ನಾನು ಯಾರ ಸಲಹೆಯನ್ನೂ ಕೇಳಬೇಕಾಗಿಲ್ಲ. ನಾನು ನಿಮ್ಮಲ್ಲಿಗೆ ಬರುವುದಕ್ಕೆ ಮುಂಚೆಯೇ ಈ ಸಂಬಂಧವಾಗಿ ನನ್ನ ನಿರ್ಣಯವನ್ನು ಮಾಡಿಕೊಂಡಿದ್ದೇನೆ. ನನ್ನ ಆಕ್ರಮಣಕಾರರ ಮೇಲೆ ಮೊಕದ್ದಮೆಯನ್ನು ಹೂಡಕೂಡದೆಂಬುದು ನನ್ನ ಖಚಿತ ನಂಬಿಕೆ. ಬೇಕಾದರೆ ಈಗಲೇ ಅದನ್ನು ಬರೆದುಕೊಡಲು ಸಿದ್ಧನಾಗಿದ್ದೇನೆ" ಎಂದು ಹೇಳಿದೆನು.

ಹೀಗೆ ಹೇಳಿ ಅವರು ಕೋರಿದಂತೆ ಹೇಳಿಕೆಯನ್ನು ಅವರಿಗೆ ಬರೆದು ಕೊಟ್ಟೆನು.

೪

ಬಿರುಗಾಳಿಯ ನಂತರ ಶಾಂತಿ

ನನ್ನ ಮೇಲೆ ಆಕ್ರಮಣ ನಡೆದ ಎರಡು ದಿನಗಳ ಮೇಲೆ—ನಾನೂ ಇನ್ನೂ ಪೋಲಿಸ್ ಠಾಣೆಯಲ್ಲಿಯೇ ಇದ್ದೆನು — ಮಿ. ಎಸ್ಕೋಂಬರನ್ನು ನೋಡಲು ನನ್ನನ್ನು ಕರೆದುಕೊಂಡು ಹೋದರು. ಅಂತಹ ಎಚ್ಚರಿಕೆ ಆವಶ್ಯಕವಿರಲಿಲ್ಲವಾದರೂ ಆಗ ಇಬ್ಬರು ಪೋಲಿಸಿನವರು ನನ್ನ ರಕ್ಷಣೆಗೆ ಜತೆಯಲ್ಲಿ ಇದ್ದರು.

ನಾವು ಹಡಗಿನಿಂದ ಇಳಿದ ದಿನ, ಹಳದಿ ಬಾವುಟವನ್ನು ಕೆಳಕ್ಕೆ ಇಳಿಸಿದ ಕೂಡಲೇ, 'ನೆಟಾಲ್ ಅಡ್ವರ್ಟೈಸರ್' ಪತ್ರಿಕೆಯ ಒಬ್ಬ ಪ್ರತಿನಿಧಿ, ನನ್ನನ್ನು ಸಂದರ್ಶಿಸಲು ಬಂದಿದ್ದರು ; ಅನೇಕ ಪ್ರಶ್ನೆಗಳನ್ನು ಕೇಳಿದರು. ನಾನು ನನ್ನ ಉತ್ತರದಲ್ಲಿ ನನ್ನ ಮೇಲೆ ಬಂದಿದ್ದ ಪ್ರತಿಯೊಂದು ದೋಷಾರೋಪಣೆಗೂ ಉತ್ತರ ಕೊಡಲು ಶಕ್ತನಾದೆನು. ಸರ್ ಫಿರೋಜ್ ಷಾ ಮೆಹತಾರವರ ಸಲಹೆಯಂತೆ ನಾನು ಭಾರತದಲ್ಲಿ ಮಾಡಿದ ಭಾಷಣಗಳನ್ನು ಬರೆದು ಓದಿದ್ದೆನು. ಅವುಗಳೆಲ್ಲದರ ನಕಲುಗಳೂ ಮತ್ತು ನನ್ನ ಇತರ ಲೇಖನಗಳ ನಕಲುಗಳೂ ನನ್ನಲ್ಲಿ ಇದ್ದುವು. ನನ್ನ ಭೆಟ್ಟಿಗೆ ಬಂದಿದ್ದವರಿಗೆ ನಾನು ಈ ಸಾಹಿತ್ಯವನ್ನೆಲ್ಲ ತೋರಿಸಿ "ನಾನು ದಕ್ಷಿಣ ಆಫ್ರಿಕಾದಲ್ಲಿರುವಾಗ ಇದಕ್ಕಿಂತ ಹೆಚ್ಚು ಬಲವಾಗಿ ಹೇಳದಿರುವ ಯಾವ ವಿಷಯವನ್ನೂ ಭಾರತದಲ್ಲಿ ಹೇಳಲಿಲ್ಲವೆಂದು ತೋರಿಸಿದೆನು. 'ಕೋರ್‌ಲಾಂಡ್' ಮತ್ತು "ನಾದೇರಿ' ಹಡಗುಗಳಲ್ಲಿ ಬಂದ ಪ್ರಯಾಣಿಕರನ್ನು ಕರೆತರುವುದರಲ್ಲಿ ನನ್ನ ಕೈವಾಡವೇನೂ ಇರಲಿಲ್ಲವೆಂದೂ ಅವರಲ್ಲಿ ಬಂದವರ ಪೈಕಿ ಅನೇಕರು ಹಿಂದೆ ಆಫ್ರಿಕಾದಲ್ಲಿ ಇದ್ದವರೇ ಆಗಿದ್ದರೆಂದೂ ಅವರಲ್ಲಿ ಬಹುಮಂದಿ ನೆಟಾಲ್‌ನಲ್ಲಿ ಉಳಿಯದೆ ಟ್ರಾನ್ಸ್‌ವಾಲ್‌ಗೆ ಹೋಗುವ ಉದ್ದೇಶವುಳ್ಳವರಾಗಿದ್ದರೆಂದೂ ಹೇಳಿದೆನು. ಆ ಕಾಲದಲ್ಲಿ ಧನಸಂಪಾದನೆಗೆ ನೆಟಾಲಿಗಿಂತ ಟ್ರಾನ್ಸ್‌ವಾಲ್‌ನಲ್ಲಿ ಹೆಚ್ಚಾದ

ಅವಕಾಶಗಳಿದ್ದವು. ಆದುದರಿಂದ ಅನೇಕ ಭಾರತೀಯರು ಅಲ್ಲಿಗೆ ಹೋಗಲು ಹೆಚ್ಚು ಇಷ್ಟವುಳ್ಳವರಾಗಿದ್ದರು.

ಪತ್ರಿಕಾ ಪ್ರತಿನಿಧಿಗೂ ನನಗೂ ಸಂದರ್ಶನದಲ್ಲಿ ನಡೆದ ಸಂಭಾಷಣೆ ಮತ್ತು ನನ್ನ ಆಕ್ರಮಣಕಾರರ ಮೇಲೆ ಮೊಕದ್ದಮೆ ಹೂಡಲು ನಾನು ನಿರಾಕರಿಸಿದುದು ಇವು ದಕ್ಷಿಣ ಆಫ್ರಿಕಾದ ಐರೋಪ್ಯರ ಮೇಲೆ ಎಂತಹ ಪರಿಣಾಮವನ್ನುಂಟುಮಾಡಿದವೆಂದರೆ, ತಮ್ಮ ನಡತೆಗಾಗಿ ಅವರಿಗೇ ನಾಚಿಕೆಯಾಯಿತು. ಪತ್ರಿಕೆಗಳವರೆಲ್ಲ ನಾನು ನಿರಪರಾಧಿ ಎಂದು ಹೇಳಿ ದೊಂಬಿಕಾರರನ್ನು ಖಂಡಿಸಿದರು: ಹೀಗೆ ನನ್ನನ್ನು ಜನ ಹಿಂಸಿಸಿದುದು ಕಡೆಗೆ ನನಗೆ - ಅಂದರೆ ದಕ್ಷಿಣ ಆಫ್ರಿಕಾದ ಭಾರತೀಯರ ಪ್ರಶ್ನೆಗೆ—ಉಪಕಾರವಾಗಿ ಪರಿಣಮಿಸಿತು. ಅದು ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ಗೌರವವನ್ನು ಹೆಚ್ಚಿಸಿ ನನ್ನ ಕಾರ್ಯವನ್ನು ಸುಲಭ ಮಾಡಿತು.

ಮೂರು ನಾಲ್ಕು ದಿನಗಳಲ್ಲಿ ನಾನು ನನ್ನ ಮನೆಗೆ ಹೋದೆನು. ಹಿಂದಿನಂತೆ ನಾನು ನನ್ನ ಕೆಲಸಕಾರ್ಯಗಳಲ್ಲಿ ಬಹುಬೇಗ ವ್ಯವಸ್ಥಿತವಾಗ ತೊಡಗಿದೆನು. ಈ ಘಟನೆಯಿಂದ ನನ್ನ ವಕೀಲಿ ವೃತ್ತಿಯೂ ವೃದ್ಧಿಗೊಂಡಿತು. ಆದರೆ ಈ ಪ್ರಕರಣ ಭಾರತೀಯರ ಪ್ರತಿಷ್ಠೆಯನ್ನು ಹೆಚ್ಚಿಸಿದ್ದರೂ ಅವರ ಮೇಲೆ ಬಿಳಿಯರ ದ್ವೇಷವನ್ನೂ ಬೆಳೆಸಿತು. ಭಾರತೀಯರು ಶೌರ್ಯದಿಂದ ಹೋರಾಡಬಲ್ಲರು ಎಂಬುದು ಸಿದ್ಧವಾದ ಮೇಲೆ, ಇವರಿಂದ ತಮಗೆ ಅಪಾಯ ಎಂದು ಬಿಳಿಯರು ಹೆದರಿದರು. ನೆಟಾಲ್ ಶಾಸನ ಸಭೆಯಲ್ಲಿ, ಎರಡು ಮಸೂದೆಗಳು ಮಂಡಿತವಾದುವು ; ಒಂದು ಭಾರತೀಯರ ವ್ಯಾಪಾರಿಗಳಿಗೆ ಪ್ರತಿಕೂಲ ಮಾಡುವುದಕ್ಕಾಗಿ ; ಮತ್ತೊಂದು ಭಾರತದಿಂದ ವಲಸೆ ಬರುವುದನ್ನು ಕಠಿಣವಾದ ಹತೋಟಿಯಲ್ಲಿಡುವುದಕ್ಕಾಗಿ. ಸುದೈವದಿಂದ ಮತಾಧಿಕಾರದ ಮಸೂದೆಯ ವಿರುದ್ಧ ಹೋರಾಡಿದುದರಿಂದ, ಒಂದು ತೀರ್ಮಾನವನ್ನು ಸರಕಾರ ಕೈಗೊಂಡಿದ್ದಿತು. ಭಾರತೀಯರಿಗೆಂದೇ ಯಾವ ಕಾನೂನನ್ನೂ ಸಭೆಯಲ್ಲಿ ತರುವಂತೆ ಇರಲಿಲ್ಲ ಎಂಬುದೇ ಅದು. ಅಂದರೆ ಕಾನೂನು ಜಾತಿಭೇದ ಅಥವಾ ವರ್ಣಭೇದವನ್ನು ಒಪ್ಪಕೂಡದು. ಮೇಲೆ ಹೇಳಿದ ಎರಡು ಮಸೂದೆಗಳ ಭಾಷೆಯನ್ನು ನೋಡಿದರೆ ಅದು ಎಲ್ಲರಿಗೂ ಅನ್ವಯಿಸುವಂತೆ ತೋರು

ತ್ತಿದ್ದಿತು. ಆದರೆ ನೆಟಾಲಿನ ಭಾರತೀಯರ ಮೇಲೆ ಇನ್ನೂ ಹೆಚ್ಚಾದ ಪ್ರತಿಬಂಧಕಗಳನ್ನು ಹಾಕುವುದೇ ಅವುಗಳ ಮೂಲ ಉದ್ದೇಶವಾಗಿದ್ದಿತು.

ಈ ಮಸೂದೆಗಳಿಂದ ನನ್ನ ಸಾರ್ವಜನಿಕ ಕೆಲಸ ಬಹಳ ಹೆಚ್ಚಾಯಿತು. ಭಾರತೀಯರು ತಮ್ಮ ಕರ್ತವ್ಯದಲ್ಲಿ ಎಂದಿಗಿಂತಲೂ ಹೆಚ್ಚು ಜಾಗ್ರತರಾಗುವಂತೆಯೂ ಇವು ಮಾಡಿದುವು. ಮಸೂದೆಗಳನ್ನು ಭಾರತೀಯ ಭಾಷೆಗಳಿಗೆ ಪರಿವರ್ತಿಸಿ ಅವುಗಳ ಸೂಕ್ಷ್ಮವಾದ ಅರ್ಥವನ್ನು ಜನರಿಗೆ ತಿಳಿಯುವಂತೆ ನಾವು ವಿವರಿಸಿದೆವು; ವಸಾಹತು ಕಾರ್ಯದರ್ಶಿಗೂ ಮನವಿ ಮಾಡಿಕೊಂಡೆವು. ಆದರೆ ಅವರು ಇದರಲ್ಲಿ ಪ್ರವೇಶಿಸಲು ನಿರಾಕರಿಸಿದರು. ಆದುದರಿಂದ ಮಸೂದೆಗಳು ಕಾನೂನುಗಳಾದವು.

ಈಗ ನನ್ನ ಕಾಲದ ಬಹು ಭಾಗ, ಸಾರ್ವಜನಿಕ ಕಾರ್ಯಕ್ಕೆ ವಿನಿಯೋಗವಾಗ ತೊಡಗಿತು. ನಾನು ಮೊದಲೇ ಹೇಳಿರುವಂತೆ ಶ್ರೀಮನಸುಖಲಾಲ್ ನಾಜರ್‌ರು ಡರ್ಬಾನಿಗೆ ಆಗತಾನೆ ಬಂದಿದ್ದರು. ಅವರು ನನ್ನ ಜತೆಗೆ ಇದು ತಮ್ಮ ಕಾಲವನ್ನು ಸಾರ್ವಜನಿಕ ಕಾರ್ಯಗಳಿಗೆ ವಿನಿಯೋಗಿಸ ತೊಡಗಿದರು. ಇದರಿಂದ ನನ್ನ ಹೊರೆ ಸ್ವಲ್ಪ ಹಗುರವಾಯಿತು.

ನನ್ನ ಗೈರುಹಾಜರಿಯಲ್ಲಿ ಸೇಠ್ ಆದಂಜೀ ಮಿಯಾಖಾನರು ತಾವು ವಹಿಸಿಕೊಂಡಿದ್ದ ಕಾರ್ಯದರ್ಶಿತ್ವದ ಜವಾಬ್ದಾರಿಯನ್ನು ಬಹಳ ಸ್ತುತ್ಯವಾಗಿ ನಿರ್ವಹಿಸಿದ್ದರು. ಅವರು ನೆಟಾಲ್ ಇಂಡಿಯನ್ ಕಾಂಗ್ರೆಸಿಗೆ ಹೆಚ್ಚು ಸದಸ್ಯರನ್ನು ಸೇರಿಸಿದ್ದುದಲ್ಲದೆ ಸುಮಾರು ಸಾವಿರ ಪೌಂಡು ಹಣವನ್ನು ಸಹ ಕೂಡಿಸಿದ್ದರು. ಎರಡು ಹೊಸ ಮಸೂದೆಗಳಿಂದ ಉಂಟಾದ ಜನ ಜಾಗ್ರತಿ ಹಡಗಿನಿಂದ ಪ್ರಯಾಣಿಕರನ್ನು ಇಳಿಯಗೊಡದ ಪ್ರದರ್ಶನ ಇವುಗಳನ್ನೆಲ್ಲ ಉಪಯೋಗಿಸಿಕೊಂಡು, ನಾನು ಕಾಂಗ್ರೆಸ್ಸಿನ ಸದಸ್ಯತ್ವಕ್ಕೂ ಹೆಚ್ಚು ಹಣ ಸಂಗ್ರಹಣಕ್ಕೂ ಮನವಿ ಮಾಡಿಕೊಂಡೆನು. ಕಾಂಗ್ರೆಸಿನ ನಿಧಿ ೫ ಸಾವಿರ ಪೌಂಡುಗಳಿಗೆ ಏರಿತು. ಕಾಂಗ್ರೆಸ್ಸಿಗೆ ಒಂದು ಶಾಶ್ವತ ನಿಧಿಯನ್ನು ಏರ್ಪಡಿಸಬೇಕು. ಇದರಿಂದ ಯಾವುದಾದರೂ ಆಸ್ತಿಯನ್ನು ಮಾಡಬೇಕು. ಆ ಆಸ್ತಿಯ ಬಾಡಿಗೆಯಿಂದ ಕಾಂಗ್ರೆಸ್ ಕೆಲಸವನ್ನು ಮಾಡಬೇಕು ಎಂಬುದು ನನ್ನ ಇಷ್ಟವಾಗಿದ್ದಿತು. ಸಾರ್ವಜನಿಕ ಸಂಸ್ಥೆಯನ್ನು ನಡೆಸುವುದರಲ್ಲಿ ಅದು

ನನ್ನ ಮೊದಲನೆಯ ಅನುಭವ. ನನ್ನ ಸಲಹೆಯನ್ನು ನನ್ನ ಸಹೋದ್ಯೋಗಿಗಳ ಮುಂದೆ ಇಟ್ಟೆನು. ಅವರು ಅದನ್ನು ಸಂತೋಷದಿಂದ ಸ್ವಾಗತಿಸಿದರು. ನಾವು ಒಂದು ಆಸ್ತಿಯನ್ನು ಕೊಂಡುಕೊಂಡೆವು. ಅದರಿಂದ ಬರುವ ಬಾಡಿಗೆ ಕಾಂಗ್ರೆಸ್ಸಿನ ದಿನನಿತ್ಯದ ಕಾರ್ಯ ವೆಚ್ಚಕ್ಕೆ ಸಾಕಾಗುತ್ತಿದ್ದಿತು. ಆ ಆಸ್ತಿ, ಯೋಗ್ಯರಾದ ಧರ್ಮದರ್ಶಿ (ಟ್ರಸ್ಟಿ)ಗಳ ವಶಕ್ಕೆ ಕೊಡಲ್ಪಟ್ಟಿತು. ಈಗಲೂ ಆ ಆಸ್ತಿ ಇದೆ. ಆದರೆ ಅದು ಕೊನೆಯಿಲ್ಲದ ಪರಸ್ಪರ ಕಲಹಕ್ಕೆ ಕಾರಣವಾಗಿ ಈಗ ಅದರಿಂದ ಬರುವ ಬಾಡಿಗೆ ಕೋರ್ಟಿಗೆ ಜಮಾ ಆಗುತ್ತಿದೆ.

ಈ ದುಃಖದ ಪರಿಸ್ಥಿತಿ ನಾನು ದಕ್ಷಿಣ ಆಫ್ರಿಕಾವನ್ನು ಬಿಟ್ಟಮೇಲೆ ಸಂಭವಿಸಿತು. ಆದರೆ ಈ ವ್ಯತ್ಯಾಸ ಉಂಟಾಗುವುದಕ್ಕಿಂತ ಬಹಳ ಮುಂಚಿತವಾಗಿಯೇ, ಸಾರ್ವಜನಿಕ ಕಾರ್ಯಗಳಿಗಾಗಿ ಶಾಶ್ವತ ನಿಧಿಯನ್ನು ಇಟ್ಟುಕೊಳ್ಳುವ ವಿಷಯದಲ್ಲಿ ನನ್ನ ಅಭಿಪ್ರಾಯ ಬಹಳ ಬದಲಾವಣೆ ಹೊಂದಿತು. ಈಚೆಗೆ ನಾನು ನಡೆಸಿರುವ ಅನೇಕ ಸಾರ್ವಜನಿಕ ಸಂಸ್ಥೆಗಳ ಅನುಭವದಿಂದ ನನಗೆ, ಶಾಶ್ವತ ನಿಧಿಯನ್ನಿಟ್ಟುಕೊಂಡು ಸಾರ್ವಜನಿಕ ಸಂಸ್ಥೆಗಳನ್ನು ನಡೆಸುವುದು ಸರಿಯಲ್ಲ ಎಂಬ ಉಚಿತವಾದ ಅಭಿಪ್ರಾಯ ಉಂಟಾಗಿದೆ. ಶಾಶ್ವತ ನಿಧಿ, ಸಂಸ್ಥೆಯ ಅವನತಿಯ ಬೀಜವನ್ನು ತನ್ನಲ್ಲಿಯೆ ಗೋಪ್ಯವಾಗಿ ಹೊಂದಿರುತ್ತದೆ.

ಸಾರ್ವಜನಿಕ ಸಂಸ್ಥೆ ಎಂದರೆ ಸಾರ್ವಜನಿಕರ ಹಣ ಮತ್ತು ಒಪ್ಪಿಗೆಯಿಂದ ನಡೆಯುವ ಸಂಸ್ಥೆ ಎಂದು ಅರ್ಥ. ಅಂತಹ ಸಂಸ್ಥೆಗೆ ಸಾರ್ವಜನಿಕ ಬೆಂಬಲ ಕಡಿಮೆಯಾದರೆ, ಅದು ಜೀವಿಸುವ ತನ್ನ ಹಕ್ಕನ್ನು ಕಳೆದುಕೊಳ್ಳುತ್ತದೆ. ಶಾಶ್ವತ ನಿಧಿಯಿಂದ ನಡೆಯುತ್ತಿರುವ ಸಂಸ್ಥೆಗಳು ಅನೇಕ ವೇಳೆ ಸಾರ್ವಜನಿಕ ಅಭಿಪ್ರಾಯವನ್ನು ಕಡೆಗಣಿಸಿ ಅದಕ್ಕೆ ವಿರೋಧವಾಗಿಯೇ ನಡೆಯುವುದು ಕಂಡುಬಂದಿದೆ. ಹೆಜ್ಜೆ ಹೆಜ್ಜೆಗೂ ಇದರ ಅನುಭವ ನಮಗೆ ನಮ್ಮ ದೇಶದಲ್ಲಿ ಆಗುತ್ತಿದೆ. ಧಾರ್ಮಿಕ ವಿಶ್ವಸ್ತ (ಟ್ರಸ್ಟ್) ಎನ್ನಿಸಿಕೊಳ್ಳುವ ಸಂಸ್ಥೆಗಳಲ್ಲಿ ಕೆಲವು, ಲೆಕ್ಕಪತ್ರಗಳನ್ನಿಡುವುದನ್ನೇ ಬಿಟ್ಟುಬಿಟ್ಟಿವೆ. ವಿಶ್ವಸ್ತರೇ ಒಡೆಯರಾಗಿದ್ದಾರೆ; ಅವರು ಯಾರಿಗೂ ಜವಾಬುದಾರರಲ್ಲ. ಸಾರ್ವಜನಿಕ ಸಂಸ್ಥೆಗಳೂ ಸಹ ಪ್ರಕೃತಿಯಂತೆ ಆಯಾ ದಿನಕ್ಕೆ ಜೀವಿಸುತ್ತಾ ಹೋಗುವುದೇ ಅತ್ಯುತ್ತಮವೆಂದು

ನಾನು ಭಾವಿಸುತ್ತೇನೆ. ಸಾರ್ವಜನಿಕ ಬೆಂಬಲವನ್ನು ಗಳಿಸಲಾರದ ಸಂಸ್ಥೆಗೆ, ಜೀವಿಸಿರಲು ಅಧಿಕಾರವಿಲ್ಲ. ಸಂಸ್ಥೆಗೆ ವರುಷ ವರುಷವೂ ಬರುವ ಚಂದಾ ಹಣ, ಆ ಸಂಸ್ಥೆಯ ಜನಪ್ರಿಯತೆಗೂ ಆಡಳಿತದ ಪ್ರಾಮಾಣಿಕತೆಗೂ ಒರೆಗಲ್ಲು. ಪ್ರತಿಯೊಂದು ಸಂಸ್ಥೆಯೂ ಇಂತಹ ಒರೆಗಲ್ಲು ಪರೀಕ್ಷೆಗೆ ಒಳಪಡಬೇಕೆಂಬುದು ನನ್ನ ಅಭಿಪ್ರಾಯ.

ಆದರೆ ನನ್ನನ್ನು ಯಾರೂ ತಪ್ಪು ತಿಳಿದುಕೊಳ್ಳಬಾರದು. ತಾನು ಮಾಡುತ್ತಿರುವ ಕಾರ್ಯದ ಸ್ವಭಾವದಿಂದಲೇ ಶಾಶ್ವತವಾದ ಕಟ್ಟಡಗಳಿಲ್ಲದೆ ಕೆಲಸಮಾಡಲು ಸಾಧ್ಯವಿಲ್ಲದ ಸಂಸ್ಥೆಗಳಿಗೆ ನನ್ನ ಈ ಮಾತುಗಳು ಅನ್ವಯಿಸುವುದಿಲ್ಲ. ನಾನು ಹೇಳುವುದೇನೆಂದರೆ ಸಂಸ್ಥೆಯ ದಿನದಿನದ ವಚ್ಚವನ್ನು ಆಯಾ ವರುಷದಲ್ಲಿ ಕೂಡಿಸುವ ಚಂದಾ ಹಣದಿಂದಲೇ ನಡೆಸಿಕೊಳ್ಳಬೇಕು.

ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹವನ್ನು ನಡೆಸುತ್ತಿದ್ದ ಕಾಲದಲ್ಲಿ ಈ ಅಭಿಪ್ರಾಯಗಳು ಸ್ಥಿರಪಟ್ಟವು. ಆರು ವರುಷ ನಡೆದ ಆ ಅದ್ಭುತ ಚಳುವಳಿ ಅದಕ್ಕೆ ಅನೇಕ ಲಕ್ಷ ರೂಪಾಯಿಗಳ ಆವಶ್ಯಕತೆಯಿದ್ದರೂ ಶಾಶ್ವತ ನಿಧಿ ಇಲ್ಲದೆ ನಡೆಯಿತು. "ನಾಳೆ ಚಂದಾ ಬರದಿದ್ದರೆ ಮುಂದಕ್ಕೆ ಹೇಗೆ ? ಎಂದು ನೆನೆಸಿದ ಅನೇಕ ದಿನಗಳು, ನನಗೆ ನೆನಪಿದೆ. ಆದರೆ ಮುಂದಿನ ವಿಷಯಗಳನ್ನು ಈಗ ಹೇಳುವುದು ಬೇಡ. ಮುಂದಿನ ಕಥೆಯಲ್ಲಿ ನಾನು ಹೇಳಿದ ಅಂಶಗಳು ಸ್ಥಿರಪಡುವುದು ವಾಚಕರಿಗೆ ಗೊತ್ತಾಗುತ್ತದೆ.

೫
ಹುಡುಗರ ವಿದ್ಯಾಭ್ಯಾಸ

ನಾನು ೧೮೯೭ರ ಜನವರಿಯಲ್ಲಿ ಡರ್ಬಾನಿನಲ್ಲಿ ಇಳಿದಾಗ ನನ್ನ ಜತೆಯಲ್ಲಿ ಮೂರು ಹುಡುಗರಿದ್ದರು. ಹತ್ತು ವರುಷ ವಯಸ್ಸಿನ ನಮ್ಮಕ್ಕನ ಮಗ ಮತ್ತು ಒಂಬತ್ತು ವರುಷ ಮತ್ತು ಐದು ವರುಷ ವಯಸ್ಸಿನ ನನ್ನ ಸ್ವಂತ ಮಕ್ಕಳು ಇಬ್ಬರು. ಇವರ ವಿದ್ಯಾಭ್ಯಾಸಕ್ಕೆ ಏನು ಏರ್ಪಾಡು ಮಾಡುವುದು ?

ಐರೋಪ್ಯರ ಹುಡುಗರ ಶಾಲೆಗೆ ನಾನು ಅವರನ್ನು ಕಳುಹಿಸಬಹುದಾಗಿದ್ದಿತು. ಆದರೆ ಅದು ನನ್ನ ಮಕ್ಕಳಲ್ಲಿ ಶಾಲೆಯ ಅಧಿಕಾರಿಗಳ ಕೃಪೆ ಮತ್ತು ವಿಶೇಷ ರಿಯಾಯತಿಯ ರೂಪ ತಾಳುವಂತಿತ್ತು. ಆ ಶಾಲೆಗಳಿಗೆ ಬೇರೆ ಯಾವ ಭಾರತೀಯ ವಿದ್ಯಾರ್ಥಿಯನ್ನೂ ಸೇರಿಸುತ್ತಿರಲಿಲ್ಲ. ಭಾರತೀಯ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ಕ್ರೈಸ್ತ ಮಿಷನ್‌ಗಳಿಂದ ನಡೆಸಲ್ಪಡುತ್ತಿದ್ದ ಶಾಲೆಗಳಿದ್ದವು. ಆದರೆ ಅಲ್ಲಿ ಬೋಧಿಸುತ್ತಿದ್ದ ಕ್ರಮ ನನಗೆ ಒಪ್ಪಿಗೆಯಾಗದುದರಿಂದ ನನ್ನ ಮಕ್ಕಳನ್ನು ಆ ಶಾಲೆಗಳಿಗೆ ಕಳುಹಿಸಲು ನನಗೆ ಇಷ್ಟವಿರಲಿಲ್ಲ. ಗುಜರಾತೀ ಮೂಲಕ ಕಲಿಯಲು ಅವಕಾಶವೇ ಇರಲಿಲ್ಲ. ಇಂಗ್ಲಿಷ್ ಮೂಲಕ ಮಾತ್ರ, ಅಥವಾ ಅಶುದ್ಧ ಹಿಂದಿ ಅಥವಾ ತಮಿಳಿನಲ್ಲಿ ಆ ಶಾಲೆಗಳಲ್ಲಿ ಬೋಧಿಸುತ್ತಿದ್ದರು. ಅದನ್ನು ಮಾಡುವುದಕ್ಕೆ ಸಹ ಅವರಿಗೆ ಬಹಳ ಪ್ರಯಾಸವಾಗುತ್ತಿದ್ದಿತು. ಇದೂ ಮತ್ತು ಇತರ ಕೊರತೆಗಳು ನನಗೆ ಎಂದಿಗೂ ಸರಿಬೀಳುತ್ತಿರಲಿಲ್ಲ.

ಈ ಮಧ್ಯೆ ಅವರಿಗೆ ಶಿಕ್ಷಣ ಕೊಡಲು ನಾನೇ ಸ್ವಲ್ಪ ಪ್ರಯತ್ನ ನಡೆಸಿದೆನು. ಆದರೆ ಇದು ನಿಯಮಿತ ರೂಪದಲ್ಲಿ ನಡೆಯುತ್ತಿರಲಿಲ್ಲ. ನನಗೆ ಸರಿಯಾದ ಒಬ್ಬ ಗುಜರಾತೀ ಉಪಾಧ್ಯಾಯರೂ ಸಿಕ್ಕಿರಲಿಲ್ಲ.

ಏನು ಮಾಡಬೇಕೆಂಬುದು ನನಗೆ ಹೊಳೆಯಲಿಲ್ಲ. ಒಬ್ಬ ಇಂಗ್ಲೀಷ್ ಉಪಾಧ್ಯಾಯ ಬೇಕು. ಆದರೆ ಆತ ನನ್ನ ಅಭಿಪ್ರಾಯಗಳಿಗನುಗುಣವಾಗಿ ಬಾಲಕರಿಗೆ ಪಾಠ ಹೇಳಿಕೊಡಬೇಕು ಎಂದು ಪತ್ರಿಕೆಗಳಲ್ಲಿ ಪ್ರಕಟನೆ ಹೊರಡಿಸಿದೆನು. ಈ ಉಪಾಧ್ಯಾಯ, ಕೆಲವು ಅಂಶಗಳಲ್ಲಿ ಹುಡುಗರಿಗೆ ಕ್ರಮವಾಗಿ ವಿದ್ಯಾಭ್ಯಾಸ ಮಾಡಿಸಬೇಕೆಂದೂ ಉಳಿದುದಕ್ಕೆ ನಾನು ಆಗಾಗ ಹೇಳಿಕೊಡುತ್ತಿದ್ದ ಅಲ್ಪಸ್ವಲ್ಪವೇ ಸಾಕೆಂದೂ ನಿಶ್ಚಯಿಸಿದೆನು. ಹೀಗೆ ನಾನು ತಿಂಗಳಿಗೆ ಏಳು ಪೌಂಡು ಸಂಬಳದ ಮೇಲೆ ಒಬ್ಬ ಇಂಗ್ಲಿ ಮಹಿಳೆಯನ್ನು ಗೊತ್ತು ಮಾಡಿದೆನು. ಇದು ಸ್ವಲ್ಪಕಾಲ ನಡೆಯಿತು. ಆದರೆ ಅದರಿಂದ ನನಗೆ ಸಮಾಧಾನವಾಗಲಿಲ್ಲ. ಹುಡುಗರಿಗೆ ಅಲ್ಪಸ್ವಲ್ಪ ಗುಜರಾತಿಯ ಜ್ಞಾನವುಂಟಾಯಿತು. ನಾನು ಅವರೊಂದಿಗೆ ಪೂರ್ಣವಾಗಿ ಮಾತೃಭಾಷೆಯಲ್ಲಿಯೇ ಮಾತುಕತೆಯಾಡುತ್ತಿದ್ದೆನು. ಅವರನ್ನು ಭಾರತಕ್ಕೆ ಹಿಂದಕ್ಕೆ ಕಳುಹಿಸುವುದು ನನಗೆ ಇಷ್ಟವಿರಲಿಲ್ಲ. ಏಕೆಂದರೆ ಸಣ್ಣ

ಹುಡುಗರು ತಾಯಿತಂದೆಯರಿಂದ ಅಗಲಿರುವುದು ಸರಿಯಲ್ಲವೆಂಬುದು ಆಗಲೂ ನನ್ನ ಅಭಿಪ್ರಾಯವಾಗಿದ್ದಿತು. ಒಳ್ಳೆಯ ವ್ಯವಸ್ಥೆಯಿರುವ ಮನೆಯಲ್ಲಿ ಮಕ್ಕಳು ಸ್ವಾಭಾವಿಕವಾಗಿ ಕಲಿಯುವ ಶಿಕ್ಷಣವನ್ನು ವಿದ್ಯಾರ್ಥಿ ನಿಲಯಗಳಲ್ಲಿ (ಹಾಸ್ಟೆಲ್) ಪಡೆಯಲು ಸಾಧ್ಯವಿಲ್ಲ. ಆದುದರಿಂದ ನಾನು ನನ್ನ ಮಕ್ಕಳನ್ನು ಜತೆಯಲ್ಲಿಯೇ ಇಟ್ಟುಕೊಂಡೆನು. ನನ್ನ ಹಿರಿಯ ಮಗನನ್ನು ನಮ್ಮಕ್ಕನ ಮಗನನ್ನೂ ವಿದ್ಯಾಭ್ಯಾಸಕ್ಕಾಗಿ ಭಾರತದಲ್ಲಿ ವಸತಿ ವಿದ್ಯಾಲಯಕ್ಕೆ (ರೆಸಿಡನ್ಷಿಯಲ್ ಸ್ಕೂಲ್) ಕೆಲವು ಕಾಲ ಕಳುಹಿಸಿದ್ದುದು ಉಂಟು. ಆದರೆ ಅವರನ್ನೂ ಬೇಗನೆ ಹಿಂದಕ್ಕೆ ಕರೆಸಿದೆ. ಅನಂತರ ನನ್ನ ಹಿರಿಯ ಮಗ— ವಯಸ್ಸಿಗೆ ಬಂದ ಎಷ್ಟೋ ದಿನಗಳ ಮೇಲೆ—ನನ್ನನ್ನು ಬಿಟ್ಟು ಭಾರತಕ್ಕೆ ಹೋಗಿ ಹೈಸ್ಕೂಲನ್ನು ಸೇರಿಕೊಂಡನು. ನಮ್ಮಕ್ಕನ ಮಗ ನಾನು ಕೊಟ್ಟ ಶಿಕ್ಷಣದಿಂದಲೇ ತೃಪ್ತನಾಗಿದ್ದನೆಂಬುದು ನನ್ನ ಭಾವನೆ. ದುರ್ದೈವದಿಂದ ಅವನು ತನ್ನ ಯೌವನದ ಪ್ರಾದುರ್ಭಾವದಲ್ಲಿಯೇ ನಾಲ್ಕಾರು ದಿನದ ಕಾಯಿಲೆಯಿಂದ ಸಾವಿಗೆ ತುತ್ತಾದನು. ನನ್ನ ಉಳಿದ ಮೂರು ಮಕ್ಕಳು, ಯಾವ ಸಾರ್ವಜನಿಕ ಶಾಲೆಗೂ ಯಾವಾಗಲೂ ಹೋಗಲೇ ಇಲ್ಲ. ಆದರೆ ನಾನು ಆಫ್ರಿಕಾದಲ್ಲಿ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ತಂದೆತಾಯಿಗಳ ಮಕ್ಕಳಿಗಾಗಿ, ಏರ್ಪಡಿಸಿ ನಡೆಸಿದ ಶಾಲೆಗಳಲ್ಲಿ ಅವರಿಗೆ ಅಷ್ಟು ಇಷ್ಟು ಕ್ರಮವಾದ ಶಿಕ್ಷಣ ದೊರೆಯಿತು.

ನನ್ನ ಈ ಪ್ರಯೋಗಗಳೆಲ್ಲ ಅಪೂರ್ಣವಾಗಿದ್ದುವು. ನನ್ನ ಬಾಲಕರ ಶಿಕ್ಷಣಕ್ಕಾಗಿ ಎಷ್ಟು ಸಮಯವನ್ನು ವಿನಿಯೋಗಿಸಬೇಕೆಂದು ನನಗೆ ಆಸೆಯಿದ್ದಿತೋ ಅಷ್ಟನ್ನು ವಿನಿಯೋಗಿಸಲು ನನ್ನಿಂದ ಸಾಧ್ಯವಾಗಿರಲಿಲ್ಲ. ನನ್ನ ಮಕ್ಕಳ ಶಿಕ್ಷಣಕ್ಕೆ ಪೂರ್ಣ ಲಕ್ಷ್ಯ ಕೊಡಲು ನನಗೆ ಸಾಧ್ಯವಾಗದುದು ಮತ್ತು ಇತರ ಅನಿವಾರ್ಯ ಕಾರಣಗಳಿಂದ, ನಾನು ಬಯಸಿದ ಅಕ್ಷರ ಜ್ಞಾನ ಶಿಕ್ಷಣ ಅವರಿಗೆ ದೊರಕಲಿಲ್ಲ. ಈ ವಿಷಯದಲ್ಲಿ ನನ್ನ ಎಲ್ಲ ಮಕ್ಕಳ ಆಕ್ಷೇಪಣೆ ನನ್ನ ಮೇಲೆ ಇದ್ದೇ ಇದೆ. ಒಬ್ಬ ಎಂ.ಎ., ಅಥವಾ ಬಿ.ಎ. ಕೊನೆಗೆ ಮೆಟ್ರಿಕುಲೇಷನ್ ಆದವನು ಅವರ ಕಣ್ಣಿಗೆ ಬಿದ್ದರೂ ಸಹ ಅವರಿಗೆ, ನಮಗೆ ಇಂತಹ ಶಾಲೆಯ ಶಿಕ್ಷಣ ದೊರೆಯಲಿಲ್ಲವಲ್ಲಾ ಎಂಬ ಕೊರಗು ಉಂಟಾಗುತ್ತದೆ.

ಆದರೂ ನನ್ನ ಖಚಿತವಾದ ಅಭಿಪ್ರಾಯ ಇದು ; ಹೇಗಾದರೂ ಸರಿಯೆ ಅವರಿಗೆ ಸಾರ್ವಜನಿಕ ಶಾಲೆಯಲ್ಲಿ ಶಿಕ್ಷಣ ದೊರೆತರೆ ಸಾಕು ಎಂದು ನಾನು ಒತ್ತಾಯ ಪಡಿಸಿದ್ದರೆ, ಅನುಭವದ ಪಾಠಶಾಲೆಯಲ್ಲಿಯೂ ಮತ್ತು ತಾಯಿತಂದೆಯರೊಡಿಗೆ ಸದಾ ಇರುವುದರಿಂದಲೂ ದೊರೆಯುವ ಶಿಕ್ಷಣ, ಸ್ವತಂತ್ರ ಜೀವನವನ್ನು ನಡೆಸುವ ಪ್ರಾಯೋಗಿಕ ಪಾಠ ಅವರಿಗೆ ಇಲ್ಲ ವಾಗುತ್ತಿದ್ದಿತು. ಆಗ ಅವರಿಗಾಗಿ ನನ್ನ ಚಿಂತೆ ಕಡಿಮೆಯಾಗುತ್ತಲೇ ಇರಲಿಲ್ಲ. ಅವರು ನನ್ನಿಂದ ಬೇರೆಯಾಗಿ ಇಂಗ್ಲೆಂಡಿನಲ್ಲಿಯೋ ದಕ್ಷಿಣ ಆಫ್ರಿಕಾದಲ್ಲಿಯೋ ಹೊಂದಬಹುದಾಗಿದ್ದ ಕೃತಕ ಶಿಕ್ಷಣ, ಈ ದಿವಸ ಅವರಲ್ಲಿ ಪ್ರಕಟವಾಗುತ್ತಿರುವ ಸರಳತನ ಮತ್ತು ಸೇವಾ ಬುದ್ಧಿಯನ್ನು ಎಂದಿಗೂ ಅವರಿಗೆ ಕಲಿಸುತ್ತಿರಲಿಲ್ಲ ಮತ್ತು ಅವರ ಕೃತಕವಾದ ಆ ಜೀವನ ಕ್ರಮ ನನ್ನ ಸಾರ್ವಜನಿಕ ಕಾರ್ಯಕ್ಕೆ ಅಡ್ಡಿಯಾಗಿ ಸಹ ಆಗಬಹು ದಾಗಿದ್ದಿತು. ಹೀಗೆ ನಾನು ಅವರಿಗೆ ಅಕ್ಷರ ಜ್ಞಾನ ಕೊಡಲಾಗದಿದ್ದರೂ, ಕಳೆದುಹೋದ ನನ್ನ ಕಾಲವನ್ನು ಈಗ ನೋಡುವುದರಲ್ಲಿ, ನಾನು ನನ್ನ ಶಕ್ತಿಯಿದ್ದಷ್ಟು ಮಟ್ಟಿಗೆ ಅವರ ವಿಷಯದಲ್ಲಿ ನನ್ನ ಕರ್ತವ್ಯವನ್ನು ಮಾಡ ಲಿಲ್ಲವೆಂದು ಹೇಳಲಾರೆನು. ಅವರನ್ನು ಸಾರ್ವಜನಿಕ ಶಾಲೆಗಳಿಗೆ ಕಳುಹಿಸ ಲಿಲ್ಲವೆಂದು ನನಗೆ ಪಶ್ಚಾತ್ತಾಪವೂ ಇಲ್ಲ. ನನ್ನ ಹಿರಿಯ ಮಗನಲ್ಲಿ ನಾನು ನೋಡುತ್ತಿರುವ ಅನಿಷ್ಟ ಲಕ್ಷಣಗಳು ನನ್ನ ಅಪರಿಪಕ್ವ ಪ್ರಾರಂಭ ಜೀವನ ಕಾಲದ ಅಶಿಸ್ತು ಬಾಳಿನ ಪ್ರತಿಧ್ವನಿಗಳು. ಅದು ಅರ್ಧ ಮಾಗಿದ ಸುಖ ಲಾಲಸೆಯ ಕಾಲವೆಂದು ನನ್ನ ಭಾವನೆ. ಆಗ ನನ್ನ ಹಿರಿಯ ಮಗನಿಗೆ ಹುಡುಗರ ಮನಸ್ಸಿನ ಮೇಲೆ ಯಾವ್ರವೂ ಚೆನ್ನಾಗಿ ಪ್ರತಿಬಿಂಬಿತವಾಗುವ ವಯಸ್ಸು. ಅವನು, ಸ್ವಾಭಾವಿಕವಾಗಿ ಅದು ನನ್ನ ಭೋಗಲಾಲಸೆಯ ಮತ್ತು ಅನುಭವದ ಕಾಲ ಎಂಬುದನ್ನು ಒಪ್ಪುವುದಿಲ್ಲ. ಅದರ ಬದಲು ಆ ಕಾಲವೇ ನನ್ನ ಬಾಳಿನ ಅತ್ಯಂತ ವೈಭವದ ಕಾಲವೆಂದೂ ಈಚೆಗೆ ಉಂಟಾದ ಬದಲಾವಣೆಗಳು ಅನುಚಿತ ಮೋಹಜಾಲ ಜ್ಞಾನವೆಂಬ ಭ್ರಾಂತಿ ಯೆಂದೂ ಆತನ ಅಭಿಪ್ರಾಯ. ಅವನ ಅಭಿಪ್ರಾಯಕ್ಕೆ ಆಶ್ಚರ್ಯಪಡ ಬೇಕಾಗಿಲ್ಲ. ನನ್ನ ಬಾಲ್ಯ ಜೀವನದ ಪ್ರಾರಂಭ ವರ್ಷಗಳು ನನ್ನ ಜ್ಞಾನೋದಯ ಕಾಲವೆಂದು ಈಚಿನ ವರ್ಷಗಳೇ ಈ ಪೂರ್ಣ ಬದಲಾ

ವಣೆಯು ನನ್ನ ಅಜ್ಞಾನದ ಮತ್ತು ಅಹಂಕಾರದ ದಿನಗಳಿಂದೂ ಅವನು ಏಕೆ ಎಣಿಸಕೂಡದು? ಸ್ನೇಹಿತರು ನನ್ನನ್ನು ಅನೇಕ ವೇಳೆ ಅನೇಕ ಪ್ರಶ್ನೆಗಳನ್ನು ಕೇಳಿದ್ದಾರೆ; ನನ್ನ ಮಕ್ಕಳಿಗೆ ಕಾಲೇಜು ಪ್ರೌಢ ಶಿಕ್ಷಣವನ್ನು ಕೊಡಿಸಿದ್ದರೆ ಆಗುತ್ತಿದ್ದ ಕೆಡಕೇನು? ಅವರ ರೆಕ್ಕೆಪುಕ್ಕಗಳನ್ನು ಕತ್ತರಿಸಲು ನನಗೆ ಏನು ಅಡ್ಡಿಬರಬೇಕಾಗಿದ್ದಿತು? ಎಂದು

ಈ ಆಕ್ಷೇಪಣೆಗಳಲ್ಲಿ ತಿರುಳಿದೆಯೆಂದು ನಾನು ಭಾವಿಸುವುದಿಲ್ಲ. ನನಗೆ ಅಸಂಖ್ಯಾತ ವಿದ್ಯಾರ್ಥಿಗಳೊಡನೆ ಸಂಬಂಧವುಂಟಾಗಿದೆ. ನಾನಾಗಿಯೇ ಮತ್ತು ಇತರರ ಮೂಲಕವೂ ಮಕ್ಕಳ ಮೇಲೆ ನನ್ನ ಈ ಶಿಕ್ಷಣದ ಪ್ರಯೋಗಗಳನ್ನು ಮಾಡಲು ಪ್ರಯತ್ನಿಸಿದ್ದೇನೆ, ಮತ್ತು ಅವುಗಳ ಫಲವನ್ನೂ ನೋಡಿದ್ದೇನೆ. ನನ್ನ ಮಕ್ಕಳ ವಯಸ್ಸಿನ ಅನೇಕರು ನನಗೆ ಗೊತ್ತು. ಆದರೆ ಮನುಷ್ಯತ್ವದಲ್ಲಿ ಅವರು ನನ್ನ ಮಕ್ಕಳಿಗಿಂತ ಉತ್ತಮರಾಗಿಲ್ಲ. ಮತ್ತು ನನ್ನ ಮಕ್ಕಳು ಅವರಿಂದ ಕಲಿಯಬೇಕಾದುದೇನೂ ಇದೆಯೆಂದು ನಾನು ಭಾವಿಸುವುದಿಲ್ಲ.

ಆದರೆ ನನ್ನ ಪ್ರಯೋಗಗಳ ಅಂತ್ಯ ಪರಿಣಾಮ ಭವಿಷ್ಯದ ಗರ್ಭದಲ್ಲಿದೆ. ಈ ವಿಷಯವನ್ನು ಇಲ್ಲಿ ಚರ್ಚಿಸುವ ನನ್ನ ಉದ್ದೇಶ ಇದು; ಶಿಸ್ತಿನ ಗೃಹ ಶಿಕ್ಷಣಕ್ಕೂ ಹಾಗೆಯೇ ಶಿಸ್ತಿನ ಶಾಲಾ ಶಿಕ್ಷಣಕ್ಕೂ ಇರುವ ವ್ಯತ್ಯಾಸವನ್ನೂ ಮತ್ತು ತಮ್ಮ ತಂದೆತಾಯಿಗಳ ಮೂಲಕ ಮಕ್ಕಳ ಮೇಲೆ ಉಂಟಾಗುವ ಪರಿಣಾಮವನ್ನು ಮನುಷ್ಯಜಾತಿಯಲ್ಲಿ ಉಂಟಾಗುವ ಕ್ರಾಂತಿಯನ್ನು ಅಧ್ಯಯನ ಮಾಡುವವರು ಗಣನೆಗೆ ತೆಗೆದುಕೊಳ್ಳಲಿ ಎನ್ನುವುದು ಅಷ್ಟೇ ಅಲ್ಲ, ಸತ್ಯದ ಪೂಜಾರಿಯನ್ನು ಸತ್ಯದ ಪ್ರಯೋಗಗಳು ಎಷ್ಟು ದೂರ ಎಳೆದುಕೊಂಡು ಹೋಗುತ್ತವೆ, ಮತ್ತು ಸ್ವಾತಂತ್ರ್ಯ ದೇವತೆ ಯಾವ ಯಾವ ಬಲಿದಾನಗಳನ್ನು ಬಯಸುತ್ತಾಳೆ, ಎಂಬುದನ್ನು ತೋರಿಸುವುದೂ ಈ ಅಧ್ಯಾಯದ ಉದ್ದೇಶವಾಗಿದೆ. ನನಗೆ ಸ್ವಾಭಿಮಾನವಿಲ್ಲದೆ, ನಾನು ಇತರ ಮಕ್ಕಳಿಗೆ ದೊರಕದೆ ಇದ್ದ ಶಿಕ್ಷಣವನ್ನು ನನ್ನ ಮಕ್ಕಳಿಗೆ ಕೊಡಿಸಿದ್ದರೆ, ಅವರಿಗೆ ಅಕ್ಷರಜ್ಞಾನ ಶಿಕ್ಷಣವೇನೋ ಉಂಟಾಗುತ್ತಿದ್ದಿತು. ಆದರೆ ಅವರು ಕಲಿತಿರುವ ಸ್ವಾತಂತ್ರ್ಯದ ಅನುಭವ ಪಾಠಗಳೂ ಮತ್ತು ಸ್ವಾಭಿಮಾನವೂ ಎಂದಿಗೂ ಅವರಿಗೆ ಉಂಟಾಗುತ್ತಿರಲಿಲ್ಲ. ಸ್ವಾತಂತ್ರ್ಯ ಮತ್ತು ಅಕ್ಷರಜ್ಞಾನ

ಈ ಎರಡರಲ್ಲಿ ಒಂದನ್ನು ಆರಿಸಿಕೊಳ್ಳುವುದಾದರೆ ಅಕ್ಷರಜ್ಞಾನಕ್ಕಿಂತ ಸ್ವಾತಂತ್ರ್ಯ ಸಾವಿರ ಪಾಲು ಉತ್ತಮ ಎಂದು ಯಾರು ತಾನೇ ಹೇಳುವುದಿಲ್ಲ.

“ಗುಲಾಮಗಿರಿಯ ಕೋಟೆಗಳಾಗಿರುವ ಸ್ಕೂಲು ಕಾಲೇಜುಗಳನ್ನು ತೊರೆದು ಬನ್ನಿ. ಗುಲಾಮಗಿರಿಯ ಸಂಕೋಲೆಗಳೊಡನೆ ಅಕ್ಷರಜ್ಞಾನವನ್ನು ಸಂಪಾದಿಸುವುದರ ಬದಲು, ಸ್ವಾತಂತ್ರ್ಯಕ್ಕಾಗಿ ಕಲ್ಲು ಒಡೆಯುತ್ತಾ ಅನಕ್ಷರಸ್ಥರಾಗಿ ಉಳಿಯುವುದು ಉತ್ತಮ” ಎಂದು ೧೯೨೦ರಲ್ಲಿ ನಾನು ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಕೊಟ್ಟ ಕರೆಯ ಮರ್ಮ ಈಗ ಅವರಿಗೆ ಗೊತ್ತಾಗಬಹುದು.

೭

ಸೇವೆಯ ಭಾವನೆ

ನನ್ನ ವಕೀಲಿ ವೃತ್ತಿ ಚೆನ್ನಾಗಿ ನಡೆಯುತ್ತಿದ್ದಿತು. ಆದರೆ ಅದರಿಂದ ತೃಪ್ತಿಯುಂಟಾಗಲಿಲ್ಲ. ನನ್ನ ಜೀವನವನ್ನು ಇನ್ನೂ ಹೆಚ್ಚು ಸರಳಮಾಡಿಕೊಳ್ಳಬೇಕು, ಜನರಿಗೆ ಏನಾದರೂ ಸ್ಪಷ್ಟವಾದ ಇನ್ನೂ ಹೆಚ್ಚು ಶಾರೀರಿಕ ಶ್ರಮದಿಂದ ಸೇವೆ ಮಾಡಬೇಕು ಎಂಬುದು ನನ್ನ ಮನಸ್ಸಿನಲ್ಲಿ ಮಥನವಾಗುತ್ತಿದ್ದಿತು. ಆಗ ನನ್ನ ಬಾಗಿಲಿಗೆ ಒಬ್ಬ ಕುಷ್ಠರೋಗಿ ಬಂದನು. ಒಂದು ಊಟವನ್ನು ಹಾಕಿ ಅವನನ್ನು ಕಳುಹಿಸಿ ಬಿಡುವುದಕ್ಕೆ ನನ್ನ ಮನಸ್ಸು ಒಪ್ಪಲಿಲ್ಲ. ಆದುದರಿಂದ ನಾನು ಅವನನ್ನು ಒಂದು ಕೊಠಡಿಯಲ್ಲಿ ಮಲಗಿಸಿ ಘಾಯಗಳಿಗೆ ಔಷಧಿ ಹಾಕಿ ಶುಶ್ರೂಷೆ ಮಾಡಿದೆನು. ಆದರೆ ಬಹಳ ದಿವಸಗಳು ನಾನು ಹೀಗೆ ಮಾಡುವುದು ಸಾಧ್ಯವಿರಲಿಲ್ಲ. ನನಗೆ ಅದಕ್ಕೆ ಬೇಕಾದ ಅನುಕೂಲವಿರಲಿಲ್ಲ. ಯಾವಾಗಲೂ ನನ್ನ ಜತೆಯಲ್ಲಿಯೇ ಅವನನ್ನು ಇಟ್ಟುಕೊಂಡಿರಲು ನನಗೆ ದೃಢ ನಿರ್ಧಾರವೂ ಇರಲಿಲ್ಲ. ಆದುದರಿಂದ ಆತನನ್ನು ನಾನು ಕರಾರು ಕೂಲಿಗಳ ವೈದ್ಯಶಾಲೆಗೆ ಕಳುಹಿಸಿಕೊಟ್ಟೆನು.

ಆದರೆ ಇದರಿಂದ ನನಗೆ ತೃಪ್ತಿಯಾಗಲಿಲ್ಲ. ಸೇವೆ ಮತ್ತು ಶುಶ್ರೂಷೆಯು ಯಾವುದಾದರೂ ಕಾರ್ಯದಲ್ಲಿ ಯಾವಾಗಲೂ ತೊಡಗಿರಬೇಕೆಂಬುದು ನನ್ನ ಇಷ್ಟವಾಗಿದ್ದಿತು. ಡಾ. ಬೂತ್‌ರು ಸಂತ ಐಡಾನ್ ಮಿಷನ್ನಿನ ಅಧ್ಯಕ್ಷರಾಗಿದ್ದರು. ಅವರು ದಯಾಶಾಲಿಗಳು : ರೋಗಿಗಳಿಗೆ, ಹಣ ತೆಗೆದುಕೊಳ್ಳದೆ ಚಿಕಿತ್ಸೆ ಮಾಡುತ್ತಿದ್ದರು. ಅವರು ರುಸ್ತುಂಜೀಯವರ ದಾನ ದ್ರವ್ಯದಿಂದ, ಡಾಕ್ಟರ್ ಬೂತ್ ರ ಮೇಲ್ವಿಚಾರಣೆಯಲ್ಲಿ ಒಂದು ಸಣ್ಣ ವೈದ್ಯ ಶಾಲೆಯನ್ನು ಧರ್ಮಾರ್ಥವಾಗಿ ತೆರೆದರು. ಈ ವೈದ್ಯಶಾಲೆಯಲ್ಲಿ ರೋಗಿಗಳ ಶುಶ್ರೂಷೆಯ ಕೆಲಸದಲ್ಲಿ (ನರ್ಸ್) ತೊಡಗಬೇಕೆಂಬುದು ನನ್ನ ತೀವ್ರ ಇಚ್ಛೆಯುಂಟಾಯಿತು. ಔಷಧಿಗಳನ್ನು ಕೊಡುವುದು ದಿನಕ್ಕೆ ಒಂದು ಎರಡು ಗಂಟೆಗಳ ಕಾಲ ಮಾತ್ರ ಹಿಡಿಯುವ ಕೆಲಸವಾಗಿದ್ದಿತು. ಕಾಂಪೌಂಡರ್‌ನಿಗೆ ಬದಲಾಗಿ, ನನ್ನ ಆಫೀಸಿನ ವೇಳೆಯಿಂದ ಆ ಕಾಲವನ್ನು ಮಿಗಿಸಿ ಈ ಕೆಲಸಕ್ಕೆ ವಿನಿಯೋಗಿಸಬೇಕೆಂದು ನಾನು ನಿಶ್ಚಯಿಸಿದೆನು. ನನ್ನ ವಕೀಲಿ ವೃತ್ತಿಯಿಂದ ಬಹುಭಾಗದ ಕೆಲಸ, ಆಫೀಸಿನಲ್ಲಿಯೇ ಕುಳಿತುಕೊಂಡು ಕಕ್ಷಿಗಾರರೊಂದಿಗೆ ಸಮಾಲೋಚನೆ ಮಾಡುವುದು, ಕಾಗದ ಪತ್ರಗಳನ್ನು ಬರೆಯುವುದು ಪಂಚಾಯಿತಿಯ ಕೆಲಸ ಇವೇ ಆಗಿದ್ದವು. ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಸಂಬಂಧಪಟ್ಟ ಕೆಲವು ಮೊಕದ್ದಮೆಗಳೇನೋ ನನಗೆ ಬರುತ್ತಿದ್ದವು. ಅವುಗಳು ಬಹಳ ಮಟ್ಟಿಗೆ ಕ್ಲಿಷ್ಟವಲ್ಲದ ಮೊಕದ್ದಮೆಗಳು. ನನ್ನೊಂದಿಗೆ ದಕ್ಷಿಣ ಆಫ್ರಿಕಾಕ್ಕೆ ಬಂದು ನನ್ನ ಜತೆಯಲ್ಲಿಯೇ ಆಗ ವಾಸಿಸುತ್ತಿದ್ದ ಮಿ. ಖಾನ್‌ರು, ನಾನು ಇಲ್ಲದ ವೇಳೆಯಲ್ಲಿ ಆ ಮೊಕದ್ದಮೆಗಳನ್ನು ಕೋರ್ಟಿನಲ್ಲಿ ನೋಡಿಕೊಳ್ಳುವುದಾಗಿ ಒಪ್ಪಿಕೊಂಡರು. ಹೀಗೆ ವೈದ್ಯಶಾಲೆಯಲ್ಲಿ ಸೇವೆ ಸಲ್ಲಿಸಲು ನನಗೆ ಕಾಲ ದೊರಕಿತು. ಪ್ರತಿದಿನವೂ ಸುಮಾರು ಎರಡು ಘಂಟೆಗಳ ಕಾಲ ಇವಕ್ಕೆ ಮೀಸಲಾಗಿದ್ದ ಈ ಕಾರ್ಯದಿಂದ ನನ್ನ ಮನಸ್ಸಿಗೆ ಸ್ವಲ್ಪ ಶಾಂತಿಯುಂಟಾಯಿತು. ರೋಗಿಯ ರೋಗದ ವಿಷಯಗಳನ್ನು ತಿಳಿದುಕೊಳ್ಳುವುದು ಅದನ್ನೆಲ್ಲ ವೈದ್ಯರಿಗೆ ಹೇಳುವುದು ಔಷಧಿಗಳನ್ನು ಸಿದ್ಧಪಡಿಸಿ ಕೊಡುವುದು ಇದು ನನ್ನ ಕೆಲಸವಾಗಿದ್ದಿತು. ಇದರಿಂದ ನರಳುತ್ತಿದ್ದ ಕರಾರು ಕೂಲಿಗಳಿಗೂ ನನಗೂ ನಿಕಟ ಪರಿಚಯವುಂಟಾಯಿತು. ಆ ಕೂಲಿಗಳೆಲ್ಲ ಹೆಚ್ಚಾಗಿ ತಮಿಳರು, ತೆಲುಗರು ಮತ್ತು ಉತ್ತರ ಭಾರತದವರೇ ಇದ್ದರು.

ಬೋಯರ್ ಯುದ್ಧದ ಕಾಲದಲ್ಲಿ ನಾನು, ಘಾಯಗೊಂಡ ಮತ್ತು ರೋಗಿಗಳಾದ ಸಿಪಾಯಿಗಳಿಗೆ ಶುಶ್ರೂಷೆ ಮಾಡಲು ಮುಂದಾಳಾದಾಗ, ಈ ಅನುಭವದಿಂದ ನನಗೆ ತುಂಬ ಪ್ರಯೋಜನವಾಯಿತು.

ಬಾಲಕರ ಪೋಷಣೆಯ ವಿಷಯ ಯಾವಾಗಲೂ ನನ್ನ ಮನಸ್ಸಿನಲ್ಲಿ ಇದ್ದೇ ಇದ್ದಿತು. ನನಗೆ ದಕ್ಷಿಣ ಆಫ್ರಿಕಾದಲ್ಲಿ ಇಬ್ಬರು ಗಂಡು ಮಕ್ಕಳು ಹುಟ್ಟಿದರು. ವೈದ್ಯಶಾಲೆಯಲ್ಲಿ ನನಗೆ ದೊರೆತ ಅನುಭವದಿಂದ ಅವರ ಲಾಲನೆ ಪೋಷಣೆಯ ವಿಷಯದಲ್ಲಿ ನನಗೆ ಬಹಳ ಸಹಾಯವಾಯಿತು. ನನ್ನ ಸ್ವತಂತ್ರ ಸ್ವಭಾವವೇ ನನಗೆ ಯಾವಾಗಲೂ ಕಷ್ಟವನ್ನು ಕೊಡುತ್ತಿದ್ದಿತು. ನನ್ನ ಹೆಂಡತಿಯ ಪ್ರಸವದ ಕಾಲದಲ್ಲಿ, ಅತ್ಯುತ್ತಮವಾದ ವೈದ್ಯಕೀಯ ಸಹಾಯವನ್ನು ಪಡೆಯಬೇಕೆಂಬುದೇ ನನ್ನ ಮತ್ತು ಅವಳ ಇಚ್ಛೆಯಾಗಿದ್ದಿತು. ಆದರೆ ವೈದ್ಯರೂ ದಾದಿಯೂ (ನರ್ಸ್) ನಮ್ಮನ್ನು ನಡುನೀರಿನಲ್ಲಿ ಕೈಬಿಟ್ಟರೆ ನಮ್ಮ ಗತಿಯೇನು ? ಸೂಲಗಿತ್ತಿ ಭಾರತೀಯಳೇ ಆಗಬೇಕಾಗಿದ್ದಿತು. ಭಾರತದಲ್ಲೇ ಸುಶಿಕ್ಷಿತ ಸೂಲಗಿತ್ತಿ ದೊರೆಯುವುದು ಕಷ್ಟವೆಂದಮೇಲೆ ದಕ್ಷಿಣ ಆಫ್ರಿಕಾದಲ್ಲಿ, ಶಿಕ್ಷಣ ಪಡೆದ ಸೂಲಗಿತ್ತಿ ದೊರೆಯುವುದು ದುಸ್ತರವೆಂದು ಬೇರೆ ಹೇಳಬೇಕೇ ? ಆದುದರಿಂದ ಸುಖಪ್ರಸವಕ್ಕೆ ಏನೇನು ಆಗಬೇಕು ಎಂಬುದನ್ನೆಲ್ಲ ನಾನು ಅಧ್ಯಯನ ಮಾಡಿದೆನು. ತ್ರಿಭುವನ ದಾಸರು ಬರೆದಿದ್ದ ಮಾ-ನೇ ಶಿಖಾಮಣ್ (ತಾಯಿಗೆ ಶಿಕ್ಷಣ) ಎಂಬ ಗ್ರಂಥವನ್ನು ನಾನು ವ್ಯಾಸಂಗ ಮಾಡಿದೆನು. ಇತರ ಕಡೆಗಳಲ್ಲಿ ನನಗೆ ದೊರಕಿದ್ದ ಅನುಭವಗಳನ್ನೂ ಸೇರಿಸಿಕೊಂಡು, ಆ ಪುಸ್ತಕದಲ್ಲಿ ಹೇಳಿದ್ದ ಸಲಹೆಗಳಿಗನುಗುಣವಾಗಿ ನನ್ನ ಎರಡು ಮಕ್ಕಳನ್ನೂ ನಾನೇ ಪೋಷಿಸಿದೆನು. ದಾದಿಯ ಸೇವೆಯನ್ನು—ಒಂದು ಸಲಕ್ಕೆ ಎರಡು ತಿಂಗಳಿಗೆ ಹೆಚ್ಚಿಲ್ಲವಂತೆ ಉಪಯೋಗಿಸಿಕೊಂಡೆವು. ದಾದಿಯ ಕೆಲಸ ಮುಖ್ಯವಾಗಿ ನನ್ನ ಹೆಂಡತಿಯ ಶುಶ್ರೂಷೆಯಾಗಿದ್ದಿತೇ ಹೊರತು ಮಕ್ಕಳನ್ನು ನೋಡಿಕೊಳ್ಳುವುದಲ್ಲ. ಮಕ್ಕಳಿಗೆ ನೀರು ಹಾಕುವುದು, ಸ್ವಚ್ಛ ಮಾಡುವುದು ಈ ಕಾರ್ಯವನ್ನು ನಾನೇ ಮಾಡುತ್ತಿದ್ದೆನು.

ಕೊನೆಯ ಮಗುವಿನ ಜನನ ಸಮಯದಲ್ಲಿ ನನಗೆ ಅತ್ಯಂತ ಕಠಿಣವಾದ ಪರೀಕ್ಷೆಯೊದಗಿತು. ಪ್ರಸವವೇದನೆ ಇದ್ದಕ್ಕಿಂತೆಯೇ ಮೊದ

ಲಾಯಿತು. ವೈದ್ಯರು ತತ್‌ಕ್ಷಣ ಸಿಕ್ಕಲಿಲ್ಲ. ಸೂಲಗಿತ್ತಿಯನ್ನು ಕರೆದು ಕೊಂಡು ಬರುವುದರಲ್ಲಿ ಸ್ವಲ್ಪ ಕಾಲ ಕಳೆದುಹೋಯಿತು. ಅವಳು ತತ್‌ಕ್ಷಣವೇ ಬಂದಿದ್ದರೂ ಆಕೆಯೇನೂ ಪ್ರಸವದಲ್ಲಿ ಸಹಾಯ ಮಾಡುವಂತಿರಲಿಲ್ಲ. ಸುಖಪ್ರಸವಕ್ಕಾಗಿ ಮಾಡಬೇಕಾದ ಕಾರ್ಯಗಳೆಲ್ಲ ನಾನೇ ಮಾಡಬೇಕಾಯಿತು. ಡಾ. ತ್ರಿಭುವನದಾಸರು ತಮ್ಮ ಪುಸ್ತಕದಲ್ಲಿ ಬರೆದಿದ್ದ ವಿಷಯಗಳನ್ನು ನಾನು ಲಕ್ಷ್ಯವಿಟ್ಟು ಓದಿದ್ದರಿಂದ ನನಗೆ ಅನುಕೂಲ್ಯವಾದ ಸಹಾಯವಾಯಿತು. ಆದುದರಿಂದ ನನಗೇನೂ ಭಯವಿರಲಿಲ್ಲ.

ಮಕ್ಕಳನ್ನು ಸರಿಯಾಗಿ ಲಾಲನೆ ಪೋಷಣೆ ಮಾಡಲು, ತಂದೆ-ತಾಯಿಗಳಿಬ್ಬರಿಗೂ ಶಿಶು ರಕ್ಷಣೆ ಪೋಷಣೆಯ ಸಾಮಾನ್ಯ ಜ್ಞಾನವಿರಬೇಕೆಂಬುದು ನನಗೆ ಚೆನ್ನಾಗಿ ಮನದಟ್ಟಾಗಿದೆ. ನಾನು ಈ ವಿಷಯವನ್ನು ಚೆನ್ನಾಗಿ ವ್ಯಾಸಂಗ ಮಾಡಿದುದರಿಂದ ಹೆಜ್ಜೆ ಹೆಜ್ಜೆಗೂ ಪ್ರಯೋಜನವಾದುದು ನನಗೆ ಗೊತ್ತಾಗಿದೆ. ನಾನು ಈ ವಿಷಯವನ್ನು ಚೆನ್ನಾಗಿ ಅಭ್ಯಾಸಮಾಡಿ, ಅದನ್ನು ಕಾರ್ಯರೂಪಕ್ಕೆ ತರದೆ ಹೋಗಿದ್ದರೆ ನನ್ನ ಮಕ್ಕಳಿಗೆ ಇಂದು ಇರುವ ಆರೋಗ್ಯ ಭಾಗ್ಯ ಇರುತ್ತಿರಲಿಲ್ಲ. ಮಗು, ಪ್ರಾರಂಭದ ಐದು ವರುಷಗಳಲ್ಲಿ ಕಲಿಯಬೇಕಾದುದು ಏನೂ ಇಲ್ಲವೆಂಬ ಮೂಢ ನಂಬಿಕೆಗೆ ನಾವು ಗುರಿಯಾಗಿದ್ದೇವೆ. ಆದರೆ ನಿಜವಾದ ವಿಷಯವೇನೆಂದರೆ ಮಗು ಪ್ರಾರಂಭದ ಐದು ವರುಷಗಳಲ್ಲಿ ಕಲಿಯುವುದನ್ನು ಅಲ್ಲಿಂದ ಮುಂದೆ ತನ್ನ ಜೀವಮಾನದಲ್ಲಿ ಮತ್ತೆಂದೂ ಕಲಿಯುವುದಿಲ್ಲ. ಗರ್ಭಧಾರಣೆಯೊಂದಿಗೆ ಮಗುವಿನ ಶಿಕ್ಷಣ ಪ್ರಾರಂಭವಾಗುವುದೆಂಬುದನ್ನು ನಾನು ಅನುಭವದಿಂದ ಹೇಳುತ್ತೇನೆ. ಗರ್ಭಧಾರಣೆಯ ಸಮಯದಲ್ಲಿ ಮಾತಾ ಪಿತೃಗಳಿಗಿರುವ ದೈಹಿಕ ಮತ್ತು ಮಾನಸಿಕ ಸ್ಥಿತಿಯು ಮಗುವಿನಲ್ಲಿ ಪುನರಂಕುರಿಸುತ್ತದೆ. ಅನಂತರ ಗರ್ಭ ಬೆಳೆಯುತ್ತಾ ಹೋದಂತೆ ತಾಯಿಯ ಮನೋಧರ್ಮ, ಬಯಕೆ, ಸ್ವಭಾವ, ಆಹಾರ, ವಿಹಾರ ಮತ್ತು ಜೀವನ ಕ್ರಮವನ್ನು ಅನುಸರಿಸಿ ಮಗು ಬೆಳೆಯುತ್ತದೆ. ಹುಟ್ಟಿದ ಮೇಲೆ ಮಗು ತಾಯಿ ತಂದೆಯನ್ನು ಅನುಕರಿಸುತ್ತದೆ; ಅನಂತರ ಅನೇಕ ವರುಷಗಳವರೆಗೆ ತನ್ನ ವಿಕಾಸಕ್ಕೆ ತಂದೆತಾಯಿಗಳನ್ನೇ ಪೂರ್ಣವಾಗಿ ಅವಲಂಬಿಸುತ್ತದೆ.

ಈ ವಿಚಾರಗಳನ್ನು ಚೆನ್ನಾಗಿ ಅರಿತ ದಂಪತಿಗಳಾರೂ, ತಮ್ಮ ವಿಷಯ ವಾಸನೆಯ ತೃಪ್ತಿಗಾಗಿಯೇ ದಾಂಪತ್ಯ ಸಂಗವನ್ನು ಬಯಸರು. ಮಕ್ಕಳಾಗ ಬೇಕೆಂಬ ಇಚ್ಛೆಯುಂಟಾದಾಗ ಮಾತ್ರ ಸೇರುತ್ತಾರೆ. ರತಿ ಸುಖವು ಮನುಷ್ಯನಿಗೆ ನಿದ್ರೆ ಊಟದಂತೆ ಆವಶ್ಯಕವಾದ ಒಂದು ಸ್ವತಂತ್ರ ಕಾರ್ಯ ಎಂದು ತಿಳಿಯುವುದು ಘೋರ ಅಜ್ಞಾನವೆಂದು ನನ್ನ ಭಾವನೆ. ಜಗತ್ತಿನ ಅಸ್ತಿತ್ವ ಜನನ ಕ್ರಿಯೆಯ ಮೇಲೆ ಅವಲಂಬಿಸಿದೆ. ಜಗತ್ತು ಈಶ್ವರನ ಲೀಲಾಭೂಮಿ, ಅವನ ವೈಭವದ ಪ್ರತಿಬಿಂಬ. ಇದರ ಸುವ್ಯವಸ್ಥಿತ ವೃದ್ಧಿಗಾಗಿಯೇ ರತಿ ಕ್ರಿಯೆಯಲ್ಲಿ ಸಂಯಮವಿರಬೇಕು. ಇದನ್ನು ಅರಿತವರು, ಎಷ್ಟೇ ಕಷ್ಟವಾದರೂ ತಮ್ಮ ಕಾಮವೃತ್ತಿಯನ್ನು ತಡೆಹಿಡಿಯುತ್ತಾರೆ. ತಮ್ಮ ಸಂತಾನದ ದೈಹಿಕ ಮಾನಸಿಕ ಮತ್ತು ಅಧ್ಯಾತ್ಮ ಬೆಳವಣಿಗೆಗೆ ಅವಶ್ಯಕವಾದ ಜ್ಞಾನವನ್ನು ತಾವು ಸಂಪಾದಿಸಿಕೊಂಡು, ಆ ಜ್ಞಾನದ ಲಾಭವನ್ನು ಮುಂದಿನ ಸಂತತಿಗೆ ನೀಡುತ್ತಾರೆ.

೭

ಬ್ರಹ್ಮಚರ್ಯ-೧

ನಾನು ಬ್ರಹ್ಮಚರ್ಯವ್ರತವನ್ನು ತೆಗೆದುಕೊಳ್ಳಬೇಕೆಂದು ಗಂಭೀರವಾಗಿ ಯೋಚನೆ ಮಾಡಿದ ಸಮಯ, ಈ ಕಥೆಯಲ್ಲಿ ಈಗ ಬಂದಿದೆ. ನಾನು ಮದುವೆಯಾದಂದಿನಿಂದ, ಏಕಪತ್ನಿವ್ರತ ನನ್ನ ಹೃದಯದಲ್ಲಿ ಸ್ಥಾಪನೆಯಾಗಿದ್ದಿತು. ಪತ್ನಿಯ ವಿಷಯದಲ್ಲಿ ಪ್ರಾಮಾಣಿಕ ನಡತೆ ನನ್ನ ಸತ್ಯದ ಆರಾಧನೆಯ ಅಂಗವೇ ಆಗಿದ್ದಿತು. ಆದರೆ ನನ್ನ ಪತ್ನಿಯ ವಿಷಯದಲ್ಲಿಯೂ ಬ್ರಹ್ಮಚರ್ಯವನ್ನು ಆಚರಿಸಬೇಕೆಂಬ ಮನೋನಿಶ್ಚಯದ ಪ್ರಾಮುಖ್ಯತೆ ನನಗೆ ಮೊದಲು ಉಂಟಾದುದು ದಕ್ಷಿಣ ಆಫ್ರಿಕಾದಲ್ಲಿಯೆ. ಯಾವ ಸಂಭವ ಅಥವಾ ಯಾವ ಗ್ರಂಥಾಭ್ಯಾಸ, ನನ್ನನ್ನು ಈ ಆಲೋಚನಾ ಮಾರ್ಗಕ್ಕೆ ಎಳೆಯಿತು ಎಂಬುದು ಈಗ ಸ್ಪಷ್ಟವಾಗಿ ನೆನಪಿಲ್ಲ. ಆದರೆ ಇದಕ್ಕೆ ಮುಖ್ಯಕಾರಣ, ಈಗಾಗಲೇ ನಾನು ಹೇಳಿರುವಂತೆ ನನ್ನ ಮೇಲೆ ರಾಯಚಂದಭಾಯಿಯವರ ಪ್ರಭಾವವಾಗಿತ್ತು. ಆತನಿಗೂ ನನಗೂ ನಡೆದ ಒಂದು ಸಂಭಾಷಣೆ ಇನ್ನೂ ಜ್ಞಾಪಕವಿದೆ. ಒಂದು ಸಲ ನಾನು, ಶ್ರೀಮತಿ ಗ್ಲಾಡ್‌ಸ್ಟನ್‌ರವರ ಪತಿ

ಪರಾಯಣತೆಯನ್ನು ಕುರಿತು ತುಂಬ ಪ್ರಶಂಸಿಸಿ ಮಾತನಾಡಿದೆನು. ಆಕೆ ಕಾಮನ್ಸ್ ಸಭೆಯಲ್ಲಿ ಸಹ ಮಿ. ಗ್ಲಾಡ್‌ಸ್ಟನ್‌ರಿಗೆ ತಾನೇ ಟೀ ಸಿದ್ಧ ಮಾಡಿ ಕೊಡುತ್ತಿದ್ದಳೆಂದೂ ತಮ್ಮ ಜೀವನವನ್ನು ನಿಯಮಗಳಿಗೆ ಅನುಸಾರವಾಗಿ ನಡೆಸುತ್ತಿದ್ದ ಈ ಪ್ರಸಿದ್ಧ ದಂಪತಿಗಳ ಜೀವನದಲ್ಲಿ ಅದೂ ಒಂದು ನಿಯಮವಾಗಿದ್ದಿತೆಂದೂ ಎಲ್ಲಿಯೋ ಓದಿದ್ದುದನ್ನು ನಾನು ರಾಯಚಂದಭಾಯಿಗೆ ಹೇಳಿದೆನು. ಈ ವಿಷಯವನ್ನು ಕವಿಗೆ ಹೇಳುತ್ತಾ ಜತೆಯಲ್ಲಿಯೇ ದಾಂಪತ್ಯ ಪ್ರೇಮವನ್ನೂ ಕುರಿತು ಪ್ರಶಂಸಿಸಿದೆನು. ರಾಯಚಂದಭಾಯಿ ಹೀಗೆ ಕೇಳಿದರು ; "ನೀವು ಎರಡು ಪ್ರೇಮಗಳಲ್ಲಿ ಯಾವುದಕ್ಕೆ ಹೆಚ್ಚಾಗಿ ಬೆಲೆ ಕೊಡುತ್ತೀರಿ ? ಗಂಡನಲ್ಲಿ ಶ್ರೀಮತಿ ಗ್ಲಾಡ್‌ಸ್ಟನ್‌ರ ಅಥವಾ ಆಕೆಯ ಸೇವಾಭಾವಕ್ಕೋ ? ಒಂದು ಪಕ್ಷ ಆಕೆ, ಅವರ ಸಹೋದರಿಯೋ ಅಥವಾ ನಂಬಿಕೆಯ ಸೇವಕಿಯೋ ಆಗಿದ್ದು ಅಷ್ಟೇ ಶ್ರದ್ಧೆಯಿಂದ ಆತನ ಸೇವೆಯನ್ನು ಮಾಡಿದ್ದಿದ್ದರೆ ಆಗ ನೀವು ಏನು ಹೇಳುತ್ತಿದ್ದಿರಿ. ? ಅಂತಹ ಶ್ರದ್ಧಾವಂತ ಸಹೋದರಿಯರ ಅಥವಾ ಸೇವಕರ ಉದಾಹರಣೆಯನ್ನು ನಾವು ಕೇಳಿಲ್ಲವೆ ? ಅಥವಾ ಒಂದು ಗಂಡು ಆಳಿನಲ್ಲಿ ನೀವು ಇದೇ ಬಗೆಯ ಪ್ರೇಮ ಮತ್ತು ಶ್ರದ್ಧೆಯನ್ನು ಕಂಡಿದ್ದರೆ, ಶ್ರೀಮತಿ ಗ್ಲಾಡ್‌ಸ್ಟನ್‌ರ ವಿಷಯದಲ್ಲಿ ಉಂಟಾದ ಆನಂದ ಆಶ್ಚರ್ಯವುಂಟಾಗುತ್ತಿದ್ದಿತೇ. ? ನಾನು ಸೂಚಿಸಿರುವ ಈ ದೃಷ್ಟಿಯಿಂದ ವಿಷಯವನ್ನು ಪರೀಕ್ಷಿಸಿ."

ರಾಯಚಂದಭಾಯಿಯವರು ವಿವಾಹಿತರಾಗಿದ್ದರು. ಅವರು ಹೇಳಿದಾಗ ಅವರ ಮಾತು ಸ್ವಲ್ಪ ಕಠಿಣವಾಯಿತು ಎಂದು ನನಗೆ ತೋರಿದ ಜ್ಞಾಪಕ. ಆದರೆ ಅದು ನನ್ನ ಮನಸ್ಸಿನಲ್ಲಿ ಬಲವಾಗಿ ಬೇರೂರಿತು. ಸೇವಕನ ಸ್ವಾಮಿ ನಿಷ್ಠೆ, ಹೆಂಡತಿಗೆ ಗಂಡನಲ್ಲಿರುವ ಪತಿನಿಷ್ಠೆಗಿಂತ ಸಾವಿರ ಪಾಲು ಹೆಚ್ಚು ಪ್ರಶಂಸನೀಯವಾದುದು, ಗಂಡ ಹೆಂಡರ ಬಾಂಧವ್ಯ ಅವಿಭಾಜ್ಯ. ಆದುದರಿಂದ ಗಂಡನಲ್ಲಿ ಹೆಂಡತಿಯ ಶ್ರದ್ಧಾಪ್ರೇಮ, ಏನೂ ಆಶ್ಚರ್ಯವಲ್ಲ. ಈ ನಿಷ್ಠೆ ಸ್ವಾಭಾವಿಕ. ಆದರೆ ಸೇವಕನಿಗೂ ಯಜಮಾನನಿಗೂ ನಡುವೆ ಇಂತಹ ನಿಷ್ಠೆ ಬೆಳೆಯಬೇಕಾದರೆ ಅದಕ್ಕೆ ವಿಶೇಷ ಶ್ರಮ ಪಡಬೇಕಾಗುವುದು. ರಾಯಚಂದಭಾಯಿಯವರ ದೃಷ್ಟಿಕೋನ ನಿಧಾನವಾಗಿ ನನ್ನ ಮನಸ್ಸನ್ನು ಆಕ್ರಮಿಸತೊಡಗಿತು.

ಹಾಗಾದರೆ ನನ್ನ ಹೆಂಡತಿಯೊಂದಿಗೆ ನನ್ನ ಸಂಬಂಧ ಹೇಗಿರಬೇಕು ಎಂದು ನನ್ನನ್ನು ನಾನೇ ಕೇಳಿಕೊಂಡೆನು. ಪತ್ನಿಯನ್ನು ನನ್ನ ಭೋಗಲಾಲಸೆಯ ವಸ್ತುವನ್ನಾಗಿ ಮಾಡಿಕೊಳ್ಳುವುದೇ ಆಕೆಯಲ್ಲಿ ನನ್ನ ಪ್ರೇಮ ಚಿಹ್ನೆಯೇ ? ಎಲ್ಲಿಯವರೆಗೆ ನಾನು ವಿಷಯಾಸಕ್ತಿಗೆ ಗುಲಾಮನಾಗಿರುವೆನೋ ಅಲ್ಲಿಯವರೆಗೆ ನಾನು ನನ್ನ ಹೆಂಡತಿಯಲ್ಲಿ ಇಟ್ಟಿರುವ ಪ್ರೀತಿಗೆ ಏನೂ ಬೆಲೆ ಇರಲಿಲ್ಲ. ನಿಜವನ್ನು ಹೇಳಬೇಕಾದರೆ ನನ್ನ ಹೆಂಡತಿ ನನ್ನನ್ನು ಚಪಲಗೊಳಿಸುವ ಮಾಯಗಾತಿಯಾಗಿರಲಿಲ್ಲ. ಆದುದರಿಂದ ನನ್ನಲ್ಲಿ ಮನಸ್ಥೈರ್ಯವಿದ್ದರೆ ಬ್ರಹ್ಮಚರ್ಯವ್ರತವನ್ನು ಅಂಗೀಕರಿಸುವುದು ನನಗೆ ಅತ್ಯಂತ ಸುಲಭವಾಗಿದ್ದಿತು. ನನ್ನ ಅಶಕ್ತಿ ಅಥವಾ ವಿಷಯಾಸಕ್ತಿಯೇ ಇದಕ್ಕೆ ತಡೆಯಾಗಿದ್ದಿತು.

ನನ್ನ ಮನಸ್ಸು ಈ ವಿಷಯದಲ್ಲಿ ಜಾಗ್ರತವಾದ ಮೇಲೆ ಸಹ ನಾನು ಎರಡು ಬಾರಿ ವಿಫಲನಾದೆನು. ನನ್ನ ಉದ್ದೇಶ ಉಚ್ಚತರವಾಗಿಲ್ಲದುದೇ ಇದಕ್ಕೆ ಕಾರಣ. ನನ್ನ ಮುಖ್ಯ ಉದ್ದೇಶ ಹೆಚ್ಚು ಮಕ್ಕಳಾಗುವುದನ್ನು ತಪ್ಪಿಸಿಕೊಳ್ಳುವುದೇ ಆಗಿದ್ದಿತು. ನಾನು ಇಂಗ್ಲೆಂಡಿನಲ್ಲಿರುವಾಗ ಸಂತತಿ ನಿರೋಧ ಉಪಕರಣ ವಿಷಯವಾಗಿ ಸ್ವಲ್ಪ ಓದಿದ್ದೆನು. ಡಾ. ಅಲಿಸನ್‌ರ ಮಿತ ಸಂತಾನ ಪ್ರಚಾರದ ವಿಷಯವಾಗಿಯೂ, ಶಾಕಾಹಾರದ ಅಧ್ಯಾಯದಲ್ಲಿ ಆಗಲೇ ಹೇಳಿದ್ದೇನೆ. ಡಾ. ಅಲಿಸನ್‌ರ ವಾದ ನನ್ನ ಮೇಲೆ ಕೇವಲ ತಾತ್ಕಾಲಿಕ ಪರಿಣಾಮವನ್ನು ಹೊಂದಿದ್ದಿತು. ಆದರೆ ಬಾಹ್ಯ ಹತೋಟಿಗಿಂತ ಅಂತರಂಗದ ಸಂಯಮ ಹೆಚ್ಚು ಪರಿಣಾಮಕಾರಿ, ಎಂದು ವಾದಿಸಿದ ಮಿ. ಹಿಲ್‌ರ ವಿರೋಧವಾದ—ಒಂದು ಮಾತಿನಲ್ಲಿ ಹೇಳಬೇಕಾದರೆ ಆತ್ಮಸಂಯಮನ—ನನ್ನ ಮೇಲೆ ಬಹಳ ಹೆಚ್ಚಾದ ಪರಿಣಾಮವನ್ನುಂಟು ಮಾಡಿತು. ಆ ಪರಿಣಾಮ, ಶಾಶ್ವತವಾಯಿತು. ನನಗೆ ಇನ್ನು ಹೆಚ್ಚು ಮಕ್ಕಳಾಗಬೇಕೆಂಬ ಆಸೆ ಇಲ್ಲದುದರಿಂದ ನಾನು ಆತ್ಮಸಂಯಮವನ್ನೇ ಸಾಧಿಸತೊಡಗಿದೆನು. ಈ ಸಾಧನೆಯಲ್ಲಿ ಅಸಂಖ್ಯಾತ ಕಷ್ಟಗಳಾದವು. ನಾವು ಬೇರೆ ಬೇರೆ ಹಾಸಿಗೆಗಳಲ್ಲಿ ಮಲಗತೊಡಗಿದೆವು. ದಿವಸದ ಕೆಲಸಗಳೆಲ್ಲ ಮುಗಿದು ನನಗೆ ಪೂರ್ಣವಾಗಿ ಆಯಾಸವಾದ ತರುವಾಯ ನಾನು ಮಲಗಿಕೊಳ್ಳುತ್ತಿದ್ದೆನು. ಆದರೆ ಈ ಯಾವ ಪರಿಶ್ರಮದಿಂದಲೂ ಹೆಚು

ಫಲವಾದಂತೆ ತೋರಲಿಲ್ಲ. ಆದರೆ ನಾನು ಹಿಂದೆ ನಡೆದುದನ್ನು ಯೋಚಿಸಿ ನೋಡಿದರೆ, ಕೊನೆಯ ಸಂಕಲ್ಪ, ಈ ಎಲ್ಲ ವಿಫಲ ಪ್ರಯತ್ನಗಳ ಒಟ್ಟು ಗೂಡಿದ ಫಲವೆಂದು ತೋರುತ್ತದೆ.

ಕೊನೆಯ ಸಂಕಲ್ಪ ೧೯೦೬ನೆಯ ವರ್ಷಕ್ಕೆ ಮುಂಚಿತವಾಗಿ ಆಗಲಿಲ್ಲ. ಆ ವೇಳೆಗೆ ಸತ್ಯಾಗ್ರಹದ ಆರಂಭವಾಗಿರಲಿಲ್ಲ. ಆಗ ಅದು ಸಾಧಿಸುವುದೇ ಎಂಬುದನ್ನು ನಾನು ಕನಸಿನಲ್ಲಿಯೂ ಎಣಿಸಿರಲಿಲ್ಲ. ಬೋಯರ ಯುದ್ಧ ನಡೆದ ನಂತರ ಜೂಲೂ ಜನರು ನೆಟಾಲಿನಲ್ಲಿ ದಂಗೆ ಎದ್ದರು. ಆಗ ನಾನು ಜೊಹಾನ್ಸ್‌ಬರ್ಗ್‌ನಲ್ಲಿ ವಕೀಲಿ ವೃತ್ತಿಯನ್ನು ನಡೆಸುತ್ತಿದ್ದೆನು. ನನ್ನ ಸೇವೆಯನ್ನು ನೆಟಾಲ್ ಸರಕಾರಕ್ಕೆ ಅರ್ಪಿಸಬೇಕೆಂದು ನಾನು ಬಯಸಿದೆನು. ನನ್ನ ಸೇವೆಯನ್ನು ಸರಕಾರ ಒಪ್ಪಿಕೊಂಡಿತು. ಮುಂದೆ ಬರುವ ಅಧ್ಯಾಯ ದಲ್ಲಿ ಅದರ ವರ್ಣನೆ ಇದೆ. ಈ ಕಾರ್ಯ, ನನ್ನನ್ನು ಸಂಯಮದ ತೀವ್ರಾಲೋಚನೆಯಲ್ಲಿ ತೊಡಗಿಸಿತು. ನನ್ನ ಪದ್ಧತಿಯಂತೆ, ನಾನು ನನ್ನ ಅಭಿಪ್ರಾಯಗಳನ್ನು ಕುರಿತು ಸಹೋದ್ಯೋಗಿಗಳೊಂದಿಗೆ ಚರ್ಚಿಸಿದೆನು. ಸಂತಾನೋತ್ಪತ್ತಿ ಮತ್ತು ಇದರ ಫಲವಾದ ಸಂತಾನ ರಕ್ಷಣೆ, ಸಾರ್ವಜನಿಕ ಕೆಲಸಕ್ಕೆ ವಿರೋಧವೆಂಬುದು ನನ್ನ ನಿಶ್ಚಿತ ಅಭಿಪ್ರಾಯವಾಯಿತು. ನಾನು ದಂಗೆಯ ಕಾಲದಲ್ಲಿ ಸೇವೆ ಸಲ್ಲಿಸುವುದಕ್ಕೆ ಸಾಧ್ಯವಾಗಲು ಜೊಹಾನ್ಸ್‌ಬರ್ಗ್‌ನಲ್ಲಿದ್ದ ನನ್ನ ಮನೆಯನ್ನು ಬಿಡಬೇಕಾಗಿದ್ದಿತು. ನಾನು ಅಷ್ಟು ಎಚ್ಚರಿಕೆಯಿಂದಲೂ ಶ್ರಮದಿಂದಲೂ ಸಜ್ಜುಗೊಳಿಸಿದ್ದ ಮನೆಯನ್ನು ಬಿಡ ಬೇಕಾಗಿದ್ದಿತು. ನಾನು ಹೆಂಡತಿ-ಮಕ್ಕಳನ್ನು ಫೀನಿಕ್ಸ್‌ಗೆ ಕರೆದುಕೊಂಡು ಹೋಗಿಬಿಟ್ಟು, ನೆಟಾಲಿನ ಸೈನ್ಯಕ್ಕೆ ಸೇರಿದ್ದ ಭಾರತೀಯ ಡೋಲಿಯನ್ನು ಹೊರುವ ಶುಶ್ರೂಷಾ ಪಡೆಯನ್ನು ತೆಗೆದುಕೊಂಡು ಹೋಗಬೇಕಾಯಿತು. ಕಠಿಣವಾದ ಪ್ರವಾಸಗಳನ್ನು ಮಾಡುತ್ತಿದ್ದ ಆ ಕಾಲದಲ್ಲಿ "ನಾನು ಪೂರ್ಣ ವಾಗಿ ಹೀಗೆ ಸಾರ್ವಜನಿಕ ಕಾರ್ಯದಲ್ಲಿಯೇ ತೊಡಗಬೇಕಾದರೆ ಮಕ್ಕಳ ಆಸೆ ಯನ್ನೂ ಐಶ್ವರ್ಯದ ಆಸೆಯನ್ನೂ (ಪುತ್ರೈಷಣ, ವಿತ್ತೈಷಣಗಳನ್ನು) ಬಿಡ ಬೇಕು. ವಾನಪ್ರಸ್ಥನ (ಸಂಸಾರದ ಹೊರೆಯಿಂದ ಮುಕ್ತವಾದ) ಬಾಳನ್ನು ನಡೆಸಬೇಕು ಎಂಬುದು ನನಗೆ ಹೊಳೆಯಿತು.

ದಂಗೆಯಲ್ಲಿ ನಾನು ಆರುವಾರಗಳಿಗಿಂತ ಹೆಚ್ಚು ಕಾಲ ಸೇವೆ ಸಲ್ಲಿಸ

ಬೇಕಾಗಲಿಲ್ಲ. ಆದರೆ ಈ ಅಲ್ಪಕಾಲವೇ ನನ್ನ ಜೀವಮಾನದಲ್ಲಿ ಅತ್ಯಂತ ಅಮೂಲ್ಯವಾದ ಕಾಲವಾಯಿತು. ವ್ರತಗಳ ಮಹತ್ವ ಹಿಂದೆ ಯಾವಾಗಲೂ ಇಲ್ಲದಷ್ಟು ನನಗೆ ಮನವಟ್ಟಾಯಿತು. ವ್ರತಬಂಧನ, ಸ್ವಾತಂತ್ರ್ಯದ ಬಾಗಿಲನ್ನು ಮುಚ್ಚುವುದಿಲ್ಲ ಮಾತ್ರವಲ್ಲ ! ತೆರೆಯುತ್ತದೆ ಎಂಬುದು ನನಗೆ ಅರ್ಥವಾಯಿತು. ಅಲ್ಲಿಯವರೆಗೆ ನನ್ನ ಪ್ರಯತ್ನಗಳಿಗೆ ಜಯವಾಗಿರಲಿಲ್ಲ. ಅದಕ್ಕೆ ಕಾರಣ ನನ್ನ ನಿಶ್ಚಯ ದೃಢವಾದುದಾಗಿರಲಿಲ್ಲ. ನನ್ನ ಶಕ್ತಿಯಲ್ಲಿಯೇ ನನಗೆ ನಂಬಿಕೆಯಿರಲಿಲ್ಲ. ಭಗವಂತನ ಕೃಪೆಯಲ್ಲಿಯೂ ನನಗೆ ವಿಶ್ವಾಸವಿರಲಿಲ್ಲ. ಆದುದರಿಂದ ನನ್ನ ಮನಸ್ಸು ಅನೇಕ ತರಂಗಗಳಿಂದಲೂ ವಿಕಾರಗಳಿಂದಲೂ ಸಂಶಯವೆಂಬ ಸಮುದ್ರದಲ್ಲಿ ತೊಳಲಾಡುತ್ತಿದ್ದಿತು. ವ್ರತಬಂಧನವನ್ನು ತೆಗೆದುಕೊಳ್ಳದವನು ಮೋಹಕ್ಕೆ ಈಡಾಗುತ್ತಾನೆ. ವ್ರತದಿಂದ ಬಂಧಿತನಾಗುವುದು ಸ್ವೇಚ್ಛಾಚಾರವನ್ನು ಬಿಟ್ಟು ಏಕಪತ್ನೀ ವ್ರತಸ್ಥನಾದಂತೆ ಎಂಬುದು ನನಗೆ ಮನವರಿಕೆಯಾಯಿತು. "ನನಗೆ ಪ್ರಯತ್ನದಲ್ಲಿ ನಂಬಿಕೆ. ವ್ರತದಿಂದ ಬಂಧಿತನಾಗುವುದು ನನ್ನ ಇಷ್ಟವಲ್ಲ" ಎಂದು ಹೇಳುವುದು ದೌರ್ಬಲ್ಯದ ಗುರುತು. ಬೇಡವಾದುದನ್ನು ಭೋಗಿಸುವ ಇಚ್ಛೆ ಅದರಲ್ಲಡಗಿದೆ. ಇಲ್ಲದಿದ್ದರೆ ಬಿಡಬೇಕಾದುದನ್ನು ಪೂರ್ಣವಾಗಿ ಬಿಟ್ಟುಬಿಡುವುದರಲ್ಲಿ ಕಷ್ಟವೇನು ? ಹಾವು ನನ್ನನ್ನು ಕಡಿಯುವುದೆಂದು ನನಗೆ ಗೊತ್ತು. ಆದುದರಿಂದ ಅದರಿಂದ ತಪ್ಪಿಸಿಕೊಂಡು ಓಡಿಹೋಗಲು ನಾನು ಪ್ರತಿಜ್ಞೆ ಮಾಡುತ್ತೇನೆ. ನಾನು ಅದರಿಂದ ಓಡಿಹೋಗಲು ಸುಮ್ಮನೆ ಪ್ರಯತ್ನವನ್ನು ಮಾತ್ರ ಮಾಡುವುದಿಲ್ಲ. ಬರಿಯ ಪ್ರಯತ್ನದಲ್ಲಿ ಮರಣ, ಖಂಡಿತವೆಂದು ನನಗೆ ಗೊತ್ತು. ಬರಿಯ ಪ್ರಯತ್ನ ಮಾಡುವುದೆಂದರೆ ಹಾವು ನನ್ನನ್ನು ಖಂಡಿತವಾಗಿ ಕೊಲ್ಲುವುದೆಂಬ ವಿಷಯದಲ್ಲಿ ಸ್ಪಷ್ಟ ಜ್ಞಾನದ ಅಭಾವ. ಆದುದರಿಂದ ನಾನು ಬರಿಯ ಪ್ರಯತ್ನದಿಂದ ತೃಪ್ತನಾಗುತ್ತೇನೆ ಎನ್ನುವುದು, ನಾನು ಮಾಡಬೇಕಾದ ಕಾರ್ಯವನ್ನು ನಾನು ಸ್ಪಷ್ಟವಾಗಿ ತಿಳಿದುಕೊಂಡಿಲ್ಲ ಎಂದು ಆಯಿತು. "ಆದರೆ ಮುಂದೆ ನನ್ನ ಅಭಿಪ್ರಾಯಗಳು ಬದಲಾವಣೆಯಾದರೆ ? ವ್ರತದ ಕಟ್ಟಿಗೆ ನಾನು ಹೇಗೆ ಈಡಾಗಲಿ ?" ಎಂದು ಸಂಶಯ ಅನೇಕ ವೇಳೆ ವ್ರತವನ್ನು ತೆಗೆದುಕೊಳ್ಳಲು ಅಡ್ಡಿ ಬರುತ್ತದೆ. ಒಂದು ವಸ್ತು ತ್ಯಾಜ್ಯ ಎಂಬುದರ ಸ್ಪಷ್ಟ ಭಾವನೆ

ಇಲ್ಲದಿರುವುದನ್ನು ಸಹ ಈ ಶಂಕೆ ಸೂಚಿಸುತ್ತದೆ. ಆದುದರಿಂದಲೇ ನಿಷ್ಕುಲಾನಂದರು ಹೀಗೆ ಹಾಡಿದ್ದಾರೆ.

ತ್ಯಾಗನಟಕೇರೇ ವೈರಾಗವಿನಾ (ವೈರಾಗ್ಯವಿಲ್ಲದ ತ್ಯಾಗ ಶಾಶ್ವತವಲ್ಲ).

ಆದುದರಿಂದ ಆಸೆ ನಿರ್ನಾಮವಾದರೆ ತ್ಯಾಗವ್ರತ ಸ್ವಾಭಾವಿಕವೂ ಅನಿವಾರ್ಯವೂ ಆದ ಫಲವಾಗುತ್ತದೆ.

೮

ಬ್ರಹ್ಮಚರ್ಯ-೨

ಪೂರ್ಣವಾಗಿ ಚರ್ಚೆಮಾಡಿ ಸಾವಧಾನವಾಗಿ ಆಲೋಚಿಸಿ ೧೯೦೬ರಲ್ಲಿ ನಾನು ಬ್ರಹ್ಮಚರ್ಯ ವ್ರತವನ್ನು ಕೈಕೊಂಡೆನು. ಅಲ್ಲಿಯವರೆಗೆ ನನ್ನ ಹೆಂಡತಿಯೊಂದಿಗೆ ಈ ವಿಚಾರವನ್ನು ಚರ್ಚಿಸಿರಲಿಲ್ಲ. ವ್ರತವನ್ನು ಹಿಡಿಯುವಾಗ ಮಾತ್ರ ಆಕೆಯ ಸಲಹೆಯನ್ನು ಕೇಳಿದೆನು. ಅವಳದೇನೂ ಆಕ್ಷೇಪಣೆಯಿರಲಿಲ್ಲ. ಆದರೆ ಕೊನೆಯ ನಿರ್ಣಯವನ್ನು ತೆಗೆದುಕೊಳ್ಳುವುದು ನನಗೇ ಬಹಳ ಕಷ್ಟವಾಯಿತು. ನನ್ನಲ್ಲಿ ಅವಕ್ಕೆ ಸಾಕಷ್ಟು ಶಕ್ತಿಯಿರಲಿಲ್ಲ. ನನ್ನ ವಿಕಾರಗಳನ್ನು ಹಿಡಿತದಲ್ಲಿಟ್ಟುಕೊಳ್ಳುವುದು ಹೇಗೆ? ತನ್ನ ಹೆಂಡತಿಯೊಂದಿಗೆ ಸಹ ವಿಷಯ ವಿಕಾರದಿಂದ ಅಲಿಪ್ತನಾಗಿರುವುದು ಒಂದು ವಿಚಿತ್ರ ವಿಚಾರವಾಗಿ ನನಗೆ ತೋರಿತು. ಆದರೆ ಕೈಹಿಡಿದು ನಡೆಸುವ ಈಶ್ವರನ ಮೇಲೆ ಭಾರಹಾಕಿ ವ್ರತವನ್ನು ಕೈಕೊಂಡೆನು.

ಆ ವ್ರತವನ್ನು ಕೈಕೊಂಡ ಈ ಇಪ್ಪತ್ತು ವರುಷಗಳ ನಂತರ—ಯೋಚಿಸಿದಂತೆಲ್ಲ—ನನಗೆ ಆಶ್ಚರ್ಯವೂ ಆನಂದವೂ ಉಂಟಾಗುತ್ತಿದೆ. ಸ್ವಲ್ಪ ಹೆಚ್ಚು ಕಡಿಮೆ ಜಯಪ್ರದವಾಗಿಯೇ ಸಂಯಮದ ಅಭ್ಯಾಸ ೧೯೦೧ನೆಯ ಇಸವಿಯಿಂದ ನನಗೆ ಆಗುತ್ತಿದ್ದಿತು. ಆದರೆ ಈ ವ್ರತವನ್ನು ಹಿಡಿದ ಮೇಲೆ ನಾನು ಅನುಭವಿಸಿರುವ ಸ್ವಾತಂತ್ರ್ಯ ಮತ್ತು ಆನಂದವನ್ನು ೧೯೦೬ಕ್ಕೆ ಮುಂಚೆ ಎಂದೂ ಅನುಭವಿಸಿರಲಿಲ್ಲ. ವ್ರತವನ್ನು ಹಿಡಿಯುವುದಕ್ಕೆ ಮುನ್ನ ಇಂದ್ರಿಯ ವಿಕಾರ ಯಾವಾಗ ಬೇಕಾದರೂ ನನ್ನನ್ನು ಜಯಿಸಿಬಿಡಬಹುದಾಗಿದ್ದಿತು. ಆದರೆ ವಾಸನೆ, ಈಗ ನನ್ನ ಮೇಲೆ ಸವಾರಿ ಮಾಡದಂತೆ ವ್ರತ, ನನ್ನ ಗುರಾಣಿಯಾಯಿತು. ಬ್ರಹ್ಮಚರ್ಯದ

ಮಹಿಮೆ ನನಗೆ ದಿನದಿನಕ್ಕೆ ಅಧಿಕ ಅಧಿಕವಾಗಿ ಸ್ಪಷ್ಟವಾಗುತ್ತ ಬಂದಿತು. ವ್ರತವನ್ನು ನಾನು ಹಿಡಿದುದು ಫೀನಿಕ್ಸ್‌ನಲ್ಲಿದ್ದಾಗ. ನನಗೆ ರೋಗಿಗಳ ಶುಶ್ರೂಷೆಯ ಕಾರ್ಯದಿಂದ ಬಿಡುಗಡೆಯಾದ ಕೂಡಲೇ ನಾನು ಫೀನಿಕ್ಸ್‌ಗೆ ಹೋದೆನು. ಅಲ್ಲಿಂದ ನಾನು ಜೋಹಾನ್ಸ್‌ಬರ್ಗಿಗೆ ಹಿಂದಿರುಗಬೇಕಾಯಿತು. ಅಲ್ಲಿಗೆ ನಾನು ಹಿಂದಿರುಗಿದ ಒಂದು ತಿಂಗಳಿನೊಳಗಾಗಿ ಸತ್ಯಾಗ್ರಹ ಸಂಗ್ರಾಮದ ಅಂಕುರಾರ್ಪಣೆಯಾಯಿತು. ನನಗೆ ಗೊತ್ತಿಲ್ಲದಂತೆಯೋ ಎಂಬಂತೆ ಬ್ರಹ್ಮಚರ್ಯವ್ರತ ನನ್ನನ್ನು ಅದಕ್ಕೆ ಸಿದ್ಧಪಡಿಸುತ್ತಿದ್ದಿತು. ಸತ್ಯಾಗ್ರಹ, ಪೂರ್ವಭಾವಿಯಾಗಿ ಸಿದ್ಧಮಾಡಿಕೊಂಡ ಕಾರ್ಯವಲ್ಲ. ಅದು ಸ್ವಾಭಾವಿಕವಾಗಿ ಅನಾಯಾಸವಾಗಿ, ನಾನು ಬಯಸದೆಯೇ ಸಂಭವಿಸಿತು. ಆದರೆ ನನ್ನ ಹಿಂದಿನ ಕಾರ್ಯಗಳೆಲ್ಲ ನನ್ನನ್ನು ಆ ಗುರಿಗೇ ಮುಟ್ಟಿಸುತ್ತಿದ್ದುವೆಂಬುದನ್ನು ನಾನು ಅರಿತೆನು. ನಾನು ಜೊಹಾನ್ಸ್‌ಬರ್ಗಿನಲ್ಲಿ ಮನೆಯ ಹೆಚ್ಚು ವೆಚ್ಚವನ್ನೆಲ್ಲ ತಗ್ಗಿಸಿ, ಬ್ರಹ್ಮಚರ್ಯವ್ರತ ಪಾಲನೆಗಾಗಿಯೋ ಎಂಬಂತೆ ಫೀನಿಕ್ಸ್‌ಗೆ ಹೋಗಿದ್ದೆನು.

ಬ್ರಹ್ಮಚರ್ಯ ವ್ರತವನ್ನು ಸರಿಯಾಗಿ ಪಾಲಿಸುವುದೆಂದರೆ, ಬ್ರಹ್ಮದರ್ಶನವೆಂದು ಅರ್ಥ. ಇದು ನನಗೆ ಶಾಸ್ತ್ರಾಭ್ಯಾಸದಿಂದ ಉಂಟಾಗಲಿಲ್ಲ ; ಅನುಭವದಿಂದ ನಿಧಾನವಾಗಿ ನನಗೆ ಸಿದ್ಧಿಯಾಗುತ್ತಾ ಬಂದಿತು. ಈ ವಿಷಯವನ್ನು ಕುರಿತ ಶಾಸ್ತ್ರ ಗ್ರಂಥಗಳನ್ನು ನಾನು ಆಮೇಲೆ ಓದಿದೆನು. ಈ ವ್ರತಾನುಷ್ಠಾನದಲ್ಲಿ ಒಂದೊಂದು ದಿನವೂ, ಬ್ರಹ್ಮಚರ್ಯದಲ್ಲಿ ದೇಹದ ಮನಸ್ಸಿನ ಮತ್ತು ಆತ್ಮದ ರಕ್ಷಣೆಯಿದೆ ಎಂಬ ಜ್ಞಾನದ ಸಮೀಪಕ್ಕೆ ನನ್ನನ್ನು ಕರೆದುಕೊಂಡು ಹೋಗುತ್ತಿದೆ, ಈಗ ನನಗೆ ಬ್ರಹ್ಮಚರ್ಯ ಘೋರವಾದ ತಪಶ್ಚರ್ಯವಾಗಲಿಲ್ಲ. ಅದರ ಬದಲು ಶಾಂತಿಮಯವೂ ಆನಂದದಾಯಕವೂ ಆಯಿತು. ದಿನದಿನವೂ ನನಗೆ ಅದರಲ್ಲಿ ಹೊಸ ಸೊಬಗು ತೋರುತ್ತಿದ್ದಿತು.

ಹೀಗೆ ಅದು ದಿನದಿನವೂ ಹೆಚ್ಚು ಹೆಚ್ಚು ಆನಂದದಾಯಕವಾಗುತ್ತಿದ್ದರೂ, ಅದರ ಆಚರಣೆ ನನಗೆ ಸುಲಭವಾಗಿದ್ದಿತೆಂದು ಯಾರೂ ಭಾವಿಸದಿರಲಿ. ಈಗ ನನಗೆ ಐವತ್ತಾರು ವರುಷಗಳಾಗಿದ್ದರೂ ಅದು ಎಷ್ಟು ಕಷ್ಟ ಎಂಬುದು ನನಗೆ ಮನವರಿಕೆಯಾಗುತ್ತಿದೆ. ಅದು ಕತ್ತಿಯ

ಅಲಗಿನ ಮೇಲೆ ನಡೆಯುವಂತೆ ಎಂಬುದು ನನಗೆ ದಿನದಿನಕ್ಕೆ ಗೊತ್ತಾಗುತ್ತಿದೆ. ನಿರಂತರವಾದ ಜಾಗರೂಕತೆ ಇದರ ವಿಷಯದಲ್ಲಿ ಅಗತ್ಯ.

ಬ್ರಹ್ಮಚರ್ಯ ವ್ರತವನ್ನು ಪಾಲಿಸುವವರಿಗೆ ಸ್ವಾದೇಂದ್ರಿಯ (ನಾಲಗೆಯ ರುಚಿಯ ಮೇಲೆ ಹತೋಟಿ) ಮೊಟ್ಟಮೊದಲು ವಶವಾಗಿರಬೇಕು. ನಾಲಿಗೆಯ ರುಚಿಯ ಮೇಲೆ ಪೂರ್ಣ ಹತೋಟಿ ಇಡುವುದರಿಂದ ಬ್ರಹ್ಮಚರ್ಯ ವ್ರತಾನುಷ್ಠಾನ ಸುಲಭವೆಂಬುದು ನನಗೆ ಗೊತ್ತಾಯಿತು. ಆದುದರಿಂದ ನಾನು ಈಗ ಆಹಾರದ ವಿಷಯದಲ್ಲಿ ನನ್ನ ಪ್ರಯೋಗಗಳನ್ನು ಬರಿಯ ಶಾಕಾಹಾರದ ದೃಷ್ಟಿಯಿಂದ ಮಾತ್ರವೇ ಅಲ್ಲದೆ ಬ್ರಹ್ಮಚರ್ಯದ ದೃಷ್ಟಿಯಿಂದಲೂ ನಡೆಸತೊಡಗಿದೆನು. ಈ ಪ್ರಯೋಗಗಳ ಪರಿಣಾಮವಾಗಿ, ಬ್ರಹ್ಮಚಾರಿಯ ಆಹಾರ ಮಿತವಾಗಿರಬೇಕು, ಸರಳವಾಗಿರಬೇಕು, ಸಾಂಬಾರವಸ್ತು ರಹಿತವಾಗಿರಬೇಕು ಮತ್ತು ಸಾಧ್ಯವಾದರೆ ಸ್ವಾಭಾವಿಕವಾಗಿ (ಬೇಯಿಸದೆ) ಇರಬೇಕು ಎಂಬುದನ್ನು ನಾನು ಮನಗಂಡೆನು.

ಆರು ವರುಷಗಳ ಅನುಭವದಿಂದ ನನಗೆ ಬ್ರಹ್ಮಚಾರಿಗೆ ಉತ್ತಮವಾದ ಆಹಾರ ಹೊಸ ಮಾಗಿದ ಹಣ್ಣುಗಳು ಮತ್ತು ನೆಲಗಡಲೆ ಮುಂತಾದ ಬೀಜವೆಂಬುದು ಗೊತ್ತಾಗಿದ್ದಿತು. ಈ ಬಗೆಯ ಆಹಾರವನ್ನು ನಾನು ತಿನ್ನುತ್ತಿದ್ದಾಗ ನನಗೆ ಇದ್ದ ನಿರ್ವಿಕಾರ ಭಾವನೆಯನ್ನು, ಆ ಆಹಾರವನ್ನು ಬದಲಾಯಿಸಿದ ಮೇಲೆ ನಾನು ಎಂದೂ ಅನುಭವಿಸಲಿಲ್ಲ. ನಾನು ದಕ್ಷಿಣ ಆಫ್ರಿಕಾದಲ್ಲಿ ಇರುವಾಗ ಮಾಗಿದ ಹೊಸ ಹಣ್ಣು ಮತ್ತು ನೆಲಗಡಲೆ ಮುಂತಾದುವುಗಳ ಮೇಲೆಯೇ ಜೀವಿಸುತ್ತಿದ್ದೆನು. ಆಗ ನನಗೆ ಬ್ರಹ್ಮಚರ್ಯ ವ್ರತವನ್ನು ಅನುಸರಿಸಲು ಕಷ್ಟವೇ ಆಗಲಿಲ್ಲ. ನಾನು ಹಾಲನ್ನು ಕುಡಿಯಲು ಪ್ರಾರಂಭಿಸಿದಂದಿನಿಂದ ಈ ಬ್ರಹ್ಮಚರ್ಯ ಪಾಲನೆ ಬಹಳ ಕಷ್ಟದ ಕಾರ್ಯವಾಗಿದೆ. ನಾನು ಫಲದ ಆಹಾರವನ್ನು ಬಿಟ್ಟು ಹಾಲನ್ನು ಕುಡಿಯಲು ಹೇಗೆ ಪ್ರಾರಂಭಿಸಿದೆ ಎಂಬುವನ್ನು ಅವಕ್ಕೆ ಉಚಿತವಾದ ಸ್ಥಳದಲ್ಲಿ ಹೇಳುತ್ತೇನೆ. ಇಲ್ಲಿ ಇಷ್ಟು ಹೇಳಿದರೆ ಸಾಕು ; ಹಾಲನ್ನು ಕುಡಿಯುವುದರಿಂದ ಬ್ರಹ್ಮಚರ್ಯವನ್ನು ಆಚರಿಸಲು ಅತ್ಯಂತ ಕಷ್ಟವಾಗುವುದು. ಇದರಿಂದ ಎಲ್ಲ ಬ್ರಹ್ಮಚಾರಿಗಳೂ ಹಾಲು ಕುಡಿಯುವುದನ್ನು

ಬಿಡಬೇಕೆಂದು ಅರ್ಥಮಾಡಿಕೊಳ್ಳಬೇಕಾದುದಿಲ್ಲ. ಬೇರೆ ಬೇರೆ ಆಹಾರಗಳನ್ನು ತೆಗೆದುಕೊಳ್ಳುವುದರಿಂದ ಬ್ರಹ್ಮಚರ್ಯದ ಪಾಲನೆಯ ಮೇಲೆ ಉಂಟಾಗುವ ಪರಿಣಾಮವನ್ನು, ಅನೇಕ ಪ್ರಯೋಗಗಳನ್ನು ನಡೆಸಿದ ನಂತರ ಮಾತ್ರ ನಿರ್ಣಯಿಸಬಹುದು. ಹಾಲಿನಂತೆ ಪುಷ್ಟಿಕರವಾದ ಮತ್ತು ಸುಲಭವಾಗಿ ಜೀರ್ಣವಾಗಬಲ್ಲ ಹಣ್ಣು ಇನ್ನೂ ನನಗೆ ಸಿಕ್ಕಿಲ್ಲ. ವೈದ್ಯರೂ ಡಾಕ್ಟರರೂ ಹಕೀಮರೂ ಅಂತಹ ಹಣ್ಣನ್ನು ನನಗೆ ತೋರಿಸಿಲ್ಲ. ಆದುದರಿಂದ ಹಾಲು ಸ್ವಲ್ಪ ಮಟ್ಟಿಗೆ ಇಂದ್ರಿಯ ವಿಕಾರೋತ್ಪಾದಕವಾದುದೆಂದು ನನಗೆ ಗೊತ್ತಿದ್ದರೂ ಅದನ್ನು ಬಿಟ್ಟುಬಿಡಿ ಎಂದು ಈಗ ನಾನೂ ಯಾರಿಗೂ ಹೇಳುವುದಿಲ್ಲ.

ಬ್ರಹ್ಮಚರ್ಯ ಪಾಲನೆಯಲ್ಲಿ ಬಾಹ್ಯ ಸಹಾಯಕ್ಕೆ ಆಹಾರದಲ್ಲಿ ಸಂಯಮ ಹೇಗೆ ಆವಶ್ಯಕವೋ, ಹಾಗೆಯೇ ಉಪವಾಸವೂ ಆವಶ್ಯಕ. ಇಂದ್ರಿಯಗಳು ಅತಿ ಬಲಿಷ್ಠವಾದುವು. ಅವುಗಳನ್ನು ಪೂರ್ಣವಾಗಿ ಮೇಲೆ ಕೆಳಗೆ ಸುತ್ತ ಎಲ್ಲ ಕಡೆಗಳಿಂದಲೂ ಅದುಮಿ ಇಟ್ಟಿದ್ದ ಹೊರತು ಅವುಗಳನ್ನು ಅಂಕೆಯಲ್ಲಿಡುವುದು ಸಾಧ್ಯವಿಲ್ಲ. ಆಹಾರವಿಲ್ಲದಿದ್ದಲ್ಲಿ ಇಂದ್ರಿಯಗಳು ಬಲಹೀನವಾಗುತ್ತವೆಂಬುದು ಎಲ್ಲರಿಗೂ ಗೊತ್ತು. ಆದುದರಿಂದ ಇಂದ್ರಿಯಗಳನ್ನು ಹತೋಟಿಯಲ್ಲಿಡುವ ಉದ್ದಿಶ್ಯದಿಂದ ಆಚರಿಸುವ ಉಪವಾಸದಿಂದ ಅದಕ್ಕೆ ತುಂಬ ಸಹಾಯವಾಗುವುದರಲ್ಲಿ ನನಗೆ ಸಂದೇಹವೇ ಇಲ್ಲ. ಕೆಲವರಿಗೆ ಉಪವಾಸದಿಂದ ಏನೂ ಪ್ರಯೋಜನವಾಗುವುದಿಲ್ಲ. ಏಕೆಂದರೆ ಬರಿಯ ಯಾಂತ್ರಿಕ ಉಪವಾಸದಿಂದ ಫಲವುಂಟಾಗುವುದೆಂದು ಅವರು ಭಾವಿಸುತ್ತಾರೆ. ಅವರ ದೇಹಕ್ಕೆ ಆಹಾರವಿಲ್ಲದಿದ್ದರೂ, ಉಪವಾಸ ಮುಕ್ತಾಯವಾದನಂತರ ತಾವು ತಿನ್ನುವ ರುಚಿ ರುಚಿಯಾದ ಆಹಾರ, ಪಾನೀಯ ಇವುಗಳ ವಿಷಯವನ್ನು ಕುರಿತು ಯೋಚಿಸುತ್ತಾ ಮನಸ್ಸಿನಲ್ಲಿಯೇ ಮಧುರ ಭೋಜನವ ಭೋಗಗಳನ್ನು ಅನುಭವಿಸುತ್ತಿರುತ್ತಾರೆ. ಇಂತಹ ಉಪವಾಸದಿಂದ ಹೊಟ್ಟೆಯನ್ನಾಗಲೀ ಇಂದ್ರಿಯಗಳನ್ನಾಗಲೀ ಹತೋಟಿಯಲ್ಲಿಟ್ಟುಕೊಳ್ಳಲು ಅವರಿಗೆ ಸಾಧ್ಯವಾಗುವುದಿಲ್ಲ. ಉಪವಾಸ ಮಾಡುತ್ತಿರುವ ದೇಹದೊಂದಿಗೆ ಮನಸ್ಸೂ ಸಹಕರಿಸಿದರೆ ಅಂದರೆ ದೇಹಕ್ಕೆ ದೊರಕದ ವಸ್ತುವಿಗೆ ಮನಸ್ಸಿನಲ್ಲಿಯೂ ಅರುಚಿಯುಂಟಾದರೆ ಆಗ ಮಾತ್ರ ಉಪ

ವಾಸದಿಂದ ಪ್ರಯೋಜನವಾಗುತ್ತದೆ. ಎಲ್ಲ ಇಂದ್ರಿಯ ಭೋಗದ ಮೂಲವೂ ಮನಸ್ಸೆ. ಆದುದರಿಂದ ಉಪವಾಸದ ಪ್ರಯೋಜನ ಮಿತ ವಾಗಿದೆ. ಏಕೆಂದರೆ ಉಪವಾಸ ಮಾಡುತ್ತಿರುವವನೂ ಕೂಡ ವಿಷಯಗಳ ಕೈಯಲ್ಲಿ ಸಿಕ್ಕಿಕೊಳ್ಳಬಹುದು. ಆದರೆ ಉಪವಾಸವಿಲ್ಲದೆ ಇಂದ್ರಿಯ ಸುಖದ ಇಚ್ಛೆಯನ್ನು ಜಯಿಸುವುದು ಎಂದಿಗೂ ಸಾಧ್ಯವಿಲ್ಲವೆಂದು ಖಂಡಿತ ವಾಗಿ ಹೇಳಬಹುದು. ಬ್ರಹ್ಮಚರ್ಯಪಾಲನೆಗೆ, ಉಪವಾಸ ಮಾಡುವುದು ಅನಿವಾರ್ಯ ನಿಯಮವೆಂದು ಹೇಳಬಹುದು. ಬ್ರಹ್ಮಚರ್ಯ ಪಾಲನೆಯಲ್ಲಿ ಅನೇಕ ಸಾಧಕರು ವಿಫಲರಾಗುತ್ತಾರೆ. ಇದಕ್ಕೆ ಕಾರಣ ಅವರು ತಮ್ಮ ಇತರ ಇಂದ್ರಿಯಗಳ ವಿಷಯದಲ್ಲಿ ಬ್ರಹ್ಮಚಾರಿಗಳಲ್ಲದವರು ನಡೆಯು ವಂತೆಯೇ ನಡೆದುಕೊಳ್ಳುತ್ತಾರೆ. ಅವರ ಪ್ರಯತ್ನ, ಬೇಸಿಗೆಯಲ್ಲಿ, ಕೊರೆಯುವ ಚಳಿಯನ್ನು ಅನುಭವಿಸಬೇಕೆಂಬ ಇಷ್ಟದಂತೆ ವ್ಯರ್ಥವಾಗು ತ್ತದೆ. ಬ್ರಹ್ಮಚಾರಿಯಾದವನ ಜೀವನ ಕ್ರಮಕ್ಕೂ ಬ್ರಹ್ಮಚಾರಿಯಲ್ಲ ದವನ ಜೀವನ ಕ್ರಮಕ್ಕೂ ಸ್ಪಷ್ಟವಾದ ವ್ಯತ್ಯಾಸವಿರಬೇಕು. ಅವರಿಬ್ಬ ರಲ್ಲಿಯೂ ಕಾಣುವ ಸಾಮ್ಯ, ಬರಿಯ ಹೊರಗಿನ ನೋಟ ಮಾತ್ರ. ಈ ವ್ಯತ್ಯಾಸ, ಹಗಲು ಬೆಳಕಿನಂತೆ ಸ್ಪಷ್ಟವಾಗಿರಬೇಕು. ಇಬ್ಬರೂ ತಮ್ಮ ಕಣ್ಣುಗಳನ್ನು ಉಪಯೋಗಿಸುತ್ತಾರೆ. ಬ್ರಹ್ಮಚಾರಿಯು ಪರಮಾತ್ಮನ ವೈಭವವನ್ನು ನೋಡಲು ಉಪಯೋಗಿಸಿದರೆ, ಇನ್ನೊಬ್ಬ ತನ್ನ ಸುತ್ತಲ ಕ್ಷುದ್ರ ವಿನೋದಗಳನ್ನು ನೋಡುತ್ತಾನೆ. ಇಬ್ಬರೂ ಕಿವಿಗಳನ್ನು ಉಪ ಯೋಗಿಸುತ್ತಾರೆ. ಒಬ್ಬ ದೇವರ ಹೊಗಳಿಕೆಯನ್ನು ಹೊರತು ಮತ್ತೇ ನನ್ನೂ ಕೇಳುವುದಿಲ್ಲ. ಮತ್ತೊಬ್ಬ ತನ್ನ ಕಿವಿಗಳಿಂದ ಆಭಾಸವಿನೋದ ಗಳನ್ನು ಕೇಳುತ್ತಾನೆ. ಇಬ್ಬರೂ ರಾತ್ರಿಯ ಹೊತ್ತು ಎಚ್ಚರವಾಗಿರುತ್ತಾರೆ. ಒಬ್ಬನು ಆ ವೇಳೆಯಲ್ಲಿ ಹೃದಯ ಮಂದಿರದಲ್ಲಿರುವ ದೇವರ ಪ್ರಾರ್ಥನೆ ಯನ್ನು ಮಾಡುತ್ತಾನೆ. ಮತ್ತೊಬ್ಬನು ಅವುಗಳನ್ನು ವ್ಯರ್ಥವಾದ ನೃತ್ಯ ಸಂಗೀತಾದಿಗಳಲ್ಲಿ ನಿದ್ರಿಸುವ ಪರಿವೆಯೇ ಇಲ್ಲದೆ ಕಳೆಯುತ್ತಾನೆ. ಇಬ್ಬರೂ ಆಹಾರವನ್ನು ಸೇವಿಸುತ್ತಾರೆ. ಒಬ್ಬ ಪರಮಾತ್ಮನ ದೇವಾಲಯವನ್ನು (ದೇಹ) ಸರಿಯಾದ ಸ್ಥಿತಿಯಲ್ಲಿಡುವುದಕ್ಕಾಗಿ; ಮತ್ತೊಬ್ಬ ನೀತಿಯಿಲ್ಲದೆ ಹೊಟ್ಟೆ ತುಂಬಿಕೊಂಡು ಪವಿತ್ರ ದೇಹವನ್ನು ದುರ್ಗಂಧದ ಆಗರವನ್ನಾಗಿ

ಮಾಡುತ್ತಾನೆ. ಹೀಗೆ ಈ ಇಬ್ಬರೊಳಗೆ ಅಂತರ ಬಹಳ ಇರುತ್ತದೆ. ಕಾಲ ಕಳೆದಂತೆ ಈ ಅಂತರ ಹೆಚ್ಚುವುದೇ ಹೊರತು ಕಡಿಮೆಯಾಗುವುದಿಲ್ಲ.

ಬ್ರಹ್ಮಚರ್ಯವೆಂದರೆ ಕಾಯಾ ವಾಚಾ ಮನಸಾ ಪೂರ್ಣ ಇಂದ್ರಿಯ ನಿಗ್ರಹ. ನಾನು ಮುಂದೆ ಹೇಳಿದ ಸಂಯಮಗಳ ಆವಶ್ಯಕತೆ ನನಗೆ ದಿನ ದಿನಕ್ಕೂ ಹೆಚ್ಚು ಹೆಚ್ಚಾಗಿ ಮನವರಿಕೆಯಾಗುತ್ತಿದೆ. ತ್ಯಾಗದ ಶಕ್ತಿಗೆ ಬ್ರಹ್ಮಚರ್ಯದ ಶಕ್ತಿಗೆ ಹೇಗೆ ಮಿತಿಯಿಲ್ಲವೋ ಹಾಗೆ ಮಿತಿಯೇ ಇಲ್ಲ. ಇಂತಹ ಬ್ರಹ್ಮಚರ್ಯ ಅಲ್ಪವಾದ ಪ್ರಯತ್ನದಿಂದ ಸಾಧ್ಯವಲ್ಲ. ಅನೇಕರಿಗೆ ಅದು ಬರಿಯ ಒಂದು ಆದರ್ಶ ಧ್ಯೇಯವಾಗಿ ಮಾತ್ರ ಉಳಿಯಬಲ್ಲುದು. ಬ್ರಹ್ಮಚರ್ಯದ ಸಾಧಕನು ತನ್ನ ಕುಂದುಕೊರತೆಗಳನ್ನು ಅರಿತು ತನ್ನ ಹೃದಯಾಂತರಾಳದಲ್ಲಿ ಅಡಗಿರುವ ಇಂದ್ರಿಯ ವಿಕಾರಗಳನ್ನು ಹುಡುಕಿ ಅವುಗಳನ್ನು ತನ್ನಿಂದ ಹೊರದೂಡಲು ಸತತ ಪ್ರಯತ್ನ ಮಾಡುವನು. ಆಲೋಚನೆ, ಎಲ್ಲಿಯವರೆಗೆ ಪೂರ್ಣವಾಗಿ ಹತೋಟಿಯಲ್ಲಿರುವುದಿಲ್ಲವೋ, ಅಲ್ಲಿಯವರೆಗೆ ಪೂರ್ಣ ಬ್ರಹ್ಮಚರ್ಯ ಸಾಧ್ಯವಿಲ್ಲ. ತನ್ನ ಇಚ್ಛೆಯಿಲ್ಲದೆ ಮನಸ್ಸಿನಲ್ಲಿ ಬರುವ ಆಲೋಚನೆಗಳೂ ಮನೋವಿಕಾರಗಳೇ ಆದುದರಿಂದ ಆಲೋಚನೆಗಳನ್ನು ಅಡಗಿಸುವುದೆಂದರೆ ಮನಸ್ಸನ್ನೇ ಅಡಗಿಸಿದಂತೆ. ಮನಸ್ಸನ್ನು ಅಡಗಿಸುವುದು ಗಾಳಿಯನ್ನು ಅಡಗಿಸುವಷ್ಟೇ ಕಷ್ಟ. ಆದರೂ ನಮ್ಮ ಅಂತರಾತ್ಮದಲ್ಲಿರುವ ದೇವರು, ಮನಸ್ಸನ್ನು ವಶದಲ್ಲಿಟ್ಟುಕೊಳ್ಳುವುದನ್ನೂ ಸಾಧ್ಯ ಮಾಡಿಕೊಡುತ್ತಾನೆ. ಅದು ಕಷ್ಟವಾದ ಮಾತ್ರಕ್ಕೆ ಅಸಾಧ್ಯ ಎಂದು ಯಾರೂ ಭಾವಿಸದಿರಲಿ. ಬ್ರಹ್ಮಚರ್ಯ, ಅತ್ಯುಚ್ಚ ಧ್ಯೇಯ. ಅದನ್ನು ಸಾಧಿಸಲು ಅತ್ಯುಚ್ಚ ಪ್ರಯತ್ನ ಆವಶ್ಯಕವೆಂಬುದು ಏನೂ ಆಶ್ಚರ್ಯವಲ್ಲ.

ಆದರೆ, ಇಂತಹ ಬ್ರಹ್ಮಚರ್ಯವನ್ನು, ಬರಿಯ ಮನುಷ್ಯ ಪ್ರಯತ್ನದಿಂದ ಸಾಧಿಸಲು ಅಸಾಧ್ಯವೆಂಬುದು ನನಗೆ ಭಾರತಕ್ಕೆ ಬಂದಮೇಲೆ ಮನವರಿಕೆಯಾಯಿತು. ಅಲ್ಲಿಯವರೆಗೆ ನಾನು "ಫಲಗಳ ಆಹಾರದಿಂದ ಎಲ್ಲ ಮನೋವಿಕಾರಗಳನ್ನು ಜಯಿಸಬಲ್ಲೆ" ಎಂಬ ಭ್ರಾಂತಿಯಲ್ಲಿದ್ದು ನಾನು ಮಾಡಬೇಕಾದುದು ಮತ್ತೇನೂ ಇಲ್ಲವೆಂದು ನಂಬಿ ಹೆಮ್ಮೆಪಡುತ್ತಿದ್ದೆನು.

ಆದರೆ ಮುಂದಿನ ನನ್ನ ಹೋರಾಟವನ್ನು ಕುರಿತು ಈಗಲೇ ಹೇಳುವುದಿಲ್ಲ. ಈ ಮಧ್ಯೆ ಇಷ್ಟನ್ನು ಮಾತ್ರ ಸ್ಪಷ್ಟಪಡಿಸುತ್ತೇನೆ. ಮೋಕ್ಷ ಸಾಧನೆಗಾಗಿ ಬ್ರಹ್ಮಚರ್ಯ ವ್ರತವನ್ನು ಸಾಧಿಸಲು ಬಯುಸುವವರು ತಮ್ಮ ಸ್ವಂತ ಪ್ರಯತ್ನದಲ್ಲಿ ಅವರಿಗೆ ಎಷ್ಟು ನಂಬಿಕೆಯಿದೆಯೋ, ಅಷ್ಟೇ ದೇವರಲ್ಲಿಯೂ ಭಕ್ತಿಯನ್ನು ಇಟ್ಟರೆ ನಿರುತ್ಸಾಹಿಗಳಾಗಬೇಕಾದುದಿಲ್ಲ.

ವಿಷಯಾ ವಿನಿವರ್ತಂತೇ ನಿರಾಹಾರಾಸ್ಯ ದೇಹಿನಃ
ರಸವರ್ಜಂ ರಸೋಽಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೆ

(ಗೀತಾ ೨-೫೯)

(ದೇಹಧಾರಿ, ನಿರಾಹಾರಿಯಾಗಿದ್ದರೆ ಅವನ ವಿಷಯಗಳು ಮಂದವಾಗುತ್ತವೆ. ಆದರೆ ರಾಗ ಹೋಗುವುದಿಲ್ಲ. ಈಶ್ವರನ ಸಾಕ್ಷಾತ್ಕಾರವಾದರೆ ರಾಗ, ನಿರ್ಮೂಲವಾಗುವುದು.)

ಆದುದರಿಂದ ಆತ್ಮಾರ್ಥಿಯ (ಮೋಕ್ಷಸಾಧಕನ) ಅಂತಿಮ ಸಾಧನ ಭಗವಂತ ಮತ್ತು ಅವನ ಅನುಗ್ರಹ. ಈ ಸತ್ಯ ನನಗೆ ಹೊಳೆದುದು ನಾನು ಭಾರತಕ್ಕೆ ಹಿಂದಿರುಗಿದ ಮೇಲೆಯೇ.

೯

ಸರಳ ಜೀವನ

ನಾನು ಭೋಗಜೀವನವನ್ನೇನೊ ಪ್ರಾರಂಭಿಸಿದ್ದೆನು. ಆದರೆ ಅದು ಬಹುಕಾಲ ನಡೆಯಲಿಲ್ಲ. ನಾನು ಎಚ್ಚರಿಕೆಯಿಂದ ಮನೆಯನ್ನು ಸಾಮಾನುಗಳಿಂದ ಸಜ್ಜುಗೊಳಿಸಿದ್ದರೂ, ಅದರಿಂದ ಮೋಹಿತನಾಗಲಿಲ್ಲ. ಆ ಜೀವನವನ್ನು ನಾನು ಪ್ರಾರಂಭಿಸಿದುದೇ ತಡ, ಕೂಡಲೇ ನನ್ನ ವೆಚ್ಚಗಳನ್ನೆಲ್ಲ ಕಡಿಮೆ ಮಾಡತೊಡಗಿದೆನು. ಅಗಸನಿಗೆ ತಿಂಗಳು ತಿಂಗಳೂ ಕೊಡಬೇಕಾದ ಹಣ ಹೆಚ್ಚಾಗಿದ್ದಿತು. ಅವನು ಕಾಲಕ್ಕೆ ಸರಿಯಾಗಿ ಬಟ್ಟೆಗಳನ್ನು ಮಡಿ ಮಾಡಿ ತಂದು ಕೊಡುತ್ತಿರಲಿಲ್ಲವಾಗಿ ಎರಡು ಮೂರು ಡಜನ್ ಷರ್ಟ್ ಕಾಲರುಗಳು ನನ್ನಲ್ಲಿ ಇದ್ದರೂ ನನಗೆ ಸಾಕಾಗುತ್ತಿರಲಿಲ್ಲ. ಪ್ರತಿದಿನವೂ ಮಡಿಮಾಡಿದ ಕಾಲರುಗಳನ್ನು ಹಾಕಿಕೊಳ್ಳಬೇಕಾಗಿದ್ದಿತು. ಮತ್ತು ಷರಟುಗಳನ್ನು ನಿತ್ಯವೂ ಬದಲಾಯಿಸದಿದ್ದರೂ ದಿನಬಿಟ್ಟು ದಿನ ಬದಲಾಯಿಸ

ಬೇಕಾಗಿದ್ದಿತು. ಇದರಿಂದ ವೆಚ್ಚ, ಒಂದಕ್ಕೆ ಇಮ್ಮಡಿಯಾಗುತ್ತಿದ್ದಿತು. ಅದು ಅನಾವಶ್ಯಕವೆಂದು ನನಗೆ ತೋರಿತು. ಈ ಹಣವನ್ನು ಉಳಿಸಲು ನಾನೇ ಒಗೆಯುವ ಉಪಕರಣಗಳನ್ನು ಒದಗಿಸಿಕೊಂಡೆನು. ಬಟ್ಟೆಗಳನ್ನು ಮಡಿಮಾಡುವ ವಿಷಯವನ್ನು ಕುರಿತ ಒಂದು ಪುಸ್ತಕವನ್ನು ನಾನು ಕೊಂಡು ಕೊಂಡೆನು. ಅದನ್ನು ಅಧ್ಯಯನ ಮಾಡಿ ನನ್ನ ಹೆಂಡತಿಗೂ ಹೇಳಿಕೊಟ್ಟೆನು. ಇದರಿಂದ ನನ್ನ ಕೆಲಸವೇನೋ ಹೆಚ್ಚಾಯಿತು. ಆದರೆ ಈ ಹೊಸ ಉದ್ಯಮ ದಿಂದ ಮನಸ್ಸಿಗೆ ಆನಂದವೂ ಆಗುತ್ತಿದ್ದಿತು.

ನಾನೇ ಸ್ವತಃ ಮಡಿಮಾಡಿದ ಮೊದಲನೆಯ ಕಾಲರನ್ನು ಎಂದಿಗೂ ಮರೆಯಲಾರೆನು. ನಾನು ಬೇಕಾದುದಕ್ಕಿಂತ ಹೆಚ್ಚು ಗಂಜಿಯನ್ನು ಹಾಕಿ ಬಿಟ್ಟಿದ್ದೆನು. ಇಸ್ತ್ರಿಪೆಟ್ಟಿಗೆಯನ್ನು ಎಷ್ಟು ಬೇಕೋ ಅಷ್ಟು ಬಿಸಿ ಮಾಡಿರ ಲಿಲ್ಲ. ಕಾಲರು ಎಲ್ಲಿ ಸುಟ್ಟುಹೋಗುವುದೋ ಎಂದು ನನಗೆ ಭಯವಾಗಿದ್ದು ದರಿಂದ, ಇಸ್ತ್ರಿಪೆಟ್ಟಿಗೆಯನ್ನು ಚೆನ್ನಾಗಿ ಊರಿ ಇಸ್ತ್ರಿ ಮಾಡಲಿಲ್ಲ. ಇದರ ಫಲವಾಗಿ ಕಾಲರು ತಕ್ಕಮಟ್ಟಿಗೆ ಬಿರುಸಾಗಿದ್ದರೂ ಅದರಿಂದ ಹಿಟ್ಟು ಉದುರುತ್ತಲೇ ಇದ್ದಿತು. ಆ ಕಾಲರನ್ನೇ ಧರಿಸಿಕೊಂಡು ನಾನು ಕೋರ್ಟಿಗೆ ಹೋಗಿ ಇತರ ಬ್ಯಾರಿಸ್ಟರ್‌ಗಳ ಅಪಹಾಸ್ಯಕ್ಕೆ ಗುರಿಯಾದೆನು. ಆ ಕಾಲ ದಲ್ಲಿಯೂ ಸಹ ನಾನು ಅಂತಹ ಕುಚೋದ್ಯಗಳನ್ನು ಸಹಿಸುವ ಶಕ್ತಿಯುಳ್ಳವ ನಾಗಿದ್ದೆನು.

"ನನ್ನ ಬಟ್ಟೆಗಳನ್ನು ನಾನೇ ಮಡಿಮಾಡಿಕೊಳ್ಳುವುದು ಇದೇ ಮೊದಲ ನೆಯ ಪ್ರಯೋಗ. ಆದುದರಿಂದ ಗಂಜಿ ಹೆಚ್ಚಾಗಿ ಹಿಟ್ಟು ಉದುರುತ್ತಿದೆ. ಇದರಿಂದ ನನಗೇನೂ ತೊಂದರೆಯಿಲ್ಲ. ಇದರಿಂದ ನಿಮ್ಮ ಇಷ್ಟೊಂದು ವಿನೋದಕ್ಕೆ ಅವಕಾಶವಾಯಿತಲ್ಲ ಅದೂ ಒಂದು ಲಾಭನೆ" ಎಂದು ನಾನು ವಿವರಿಸಿದೆನು.

ಒಬ್ಬ ಮಿತ್ರರು "ಆದರೆ ಇಲ್ಲಿ ಅಗಸರು ಇಲ್ಲವೆ ಬರಗಾಲ ಬಂತೆ ?" ಎಂದು ಕೇಳಿದರು

ನಾನು ಹೇಳಿದೆ : "ಅಗಸರವನಿಗೆ ಕೊಡುವ ಹಣ ಬಹಳ ಹೆಚ್ಚಾಗು ತ್ತಿದೆ. ಒಂದು ಕಾಲರನ್ನು ಮಡಿಮಾಡುವ ಕೂಲಿ ಆ ಕಾಲರಿನ ಬೆಲೆ ಯಷ್ಟೇ ಆಗುತ್ತಿದೆ. ಜತೆಗೆ ನಾವು ಯಾವಾಗಲೂ ಅಗಸನ ಮೇಲೆಯೇ

ಅವಲಂಬಿಸಬೇಕಾಗುತ್ತದೆ. ಆದುದರಿಂದ ನನ್ನ ವಸ್ತ್ರಗಳನ್ನು ನಾನೇ ಮಡಿಮಾಡಿಕೊಳ್ಳುವುದು ಒಳ್ಳೆಯದೆಂದು ನನಗೆ ತೋರುತ್ತದೆ."

ಆದರೆ ನನ್ನ ಮಿತ್ರರಿಗೆ ಈ ಸ್ವಾವಲಂಬನ ಸುಖ ಅರ್ಥವಾಗಲಿಲ್ಲ. ಸ್ವಲ್ಪ ಕಾಲದೊಳಗೆ ನಾನು ನನ್ನ ಬಟ್ಟೆಗಳಿಗೆ ನಿಪುಣನಾದ "ಅಗಸನೇ" ಆದೆನು. ನಾನು ಮಡಿಮಾಡುತ್ತಿದ್ದುದು, ಅಗಸರ ಮಡಿಗೆ ಯಾವ ವಿಧದಲ್ಲಿಯೂ ಕಡಿಮೆಯಾಗಲಿಲ್ಲ. ನನ್ನ ಕಾಲರುಗಳು ಇತರರು ಧರಿಸುತ್ತಿದ್ದ ಕಾಲರುಗಳಿಗಿಂತ ಗಟ್ಟಿಯಲ್ಲಿಯೂ ಹೊಳಪಿನಲ್ಲಿಯೂ ಕಡಿಮೆಯಾಗಿರಲಿಲ್ಲ.

ಗೋಖಲೆಯವರು ದಕ್ಷಿಣ ಆಫ್ರಿಕಾಕ್ಕೆ ಬಂದಾಗ, ಅವರ ಹತ್ತಿರ ಮಹದೇವ ಗೋವಿಂದ ರಾನಡೆಯವರು ಜ್ಞಾಪಕಾರ್ಥವಾಗಿ ಕೊಟ್ಟಿದ್ದ ಒಂದು ಅಂಗವಸ್ತ್ರವಿದ್ದಿತು. ಈ ನೆನಪಿನ ಗುರುತನ್ನು ಗೋಖಲೆಯವರು ಬಹಳ ಜೋಪಾನವಾಗಿಟ್ಟುಕೊಂಡು ಅದನ್ನು ವಿಶೇಷ ಸಂದರ್ಭಗಳಲ್ಲಿ ಮಾತ್ರ ಧರಿಸುತ್ತಿದ್ದರು. ಜೊಹಾನ್ಸ್‌ಬರ್ಗ್ ಭಾರತೀಯರು ಅವರಿಗೆ ಔತಣವನ್ನು ಏರ್ಪಡಿಸಿದುದು ಅಂತಹ ವಿಶೇಷ ಸಮಾರಂಭವಾಗಿದ್ದಿತು. ಅಂಗವಸ್ತ್ರ ಸುಕ್ಕುಸುಕ್ಕಾಗಿ ಅದನ್ನು ಇಸ್ತ್ರಿ ಮಾಡಬೇಕಾಗಿದ್ದಿತು. ಅದನ್ನು ಅಗಸನಲ್ಲಿಗೆ ಕಳುಹಿಸಿ, ಸಕಾಲದಲ್ಲಿ ಹಿಂದಕ್ಕೆ ತರಿಸಲು ಸಮಯವಿರಲಿಲ್ಲ. ನಾನು ಇಸ್ತ್ರಿ ಮಾಡಿಕೊಡುತ್ತೇನೆಂದು ಗೋಖಲೆಯವರಿಗೆ ಹೇಳಿದೆನು.

ಗೋಖಲೆಯವರು "ವಕೀಲಿ ವೃತ್ತಿಯಲ್ಲಿ ನೀವು ಗಟ್ಟಿಗರೆಂದು ನಂಬಬಲ್ಲೆನು. ಆದರೆ ಅಗಸನಾಗಿ ನಿಮ್ಮನ್ನು ನಂಬಲಾರೆನು. ನೀವು ಇದನ್ನು ಕೆಡಿಸಿಬಿಟ್ಟರೆ ? ಈ ಅಂಗವಸ್ತ್ರ, ನನಗೆ ಎಷ್ಟು ಬೆಲೆಯಾದುದೆಂದು ನಿಮಗೆ ಗೊತ್ತೆ ?" ಎಂದು ಕೇಳಿದರು.

ಅವರು ತಮಗೆ ಆ ವಸ್ತ್ರವನ್ನು ರಾನಡೆಯವರು ಕೊಟ್ಟ ಕಥೆಯನ್ನು ಬಹಳ ಉಲ್ಲಾಸದಿಂದ ಹೇಳಿದರು. ಆದರೂ ನಾನು ಒತ್ತಿ ಹೇಳಿ ಚೆನ್ನಾಗಿ ಕೆಲಸ ಮಾಡುವುದಾಗಿ ಆಶ್ವಾಸನ ಕೊಟ್ಟು ಅವರ ಅನುಮತಿಯನ್ನು ಪಡೆದು ಅದನ್ನು ಇಸ್ತ್ರಿ ಮಾಡಿ ಅವರಿಂದ ಮೆಚ್ಚುಗೆಯನ್ನು ಪಡೆದೆನು. ಅನಂತರ, ಜಗತ್ತೆಲ್ಲ ನನಗೆ ಮೆಚ್ಚುಗೆಯನ್ನು ಕೊಡದಿದ್ದರೂ ನಾನೂ ಚಿಂತಿಸುವವನಾಗಿರಲಿಲ್ಲ.

ಅಗಸರವನ ಮೇಲೆ ನನ್ನ ಅವಲಂಬನೆಯನ್ನು ತಪ್ಪಿಸಿಕೊಂಡಂತೆ ನಾನು ಕ್ಷೌರಿಕನ ಕೈಯಿಂದಲೂ ತಪ್ಪಿಸಿಕೊಂಡೆನು. ಇಂಗ್ಲೆಂಡಿಗೆ ಹೋಗುವವರೆಲ್ಲ, ಕ್ಷೌರಮಾಡಿಕೊಳ್ಳುವುದನ್ನು ಕಲಿತುಕೊಳ್ಳುತ್ತಾರೆ. ಆದರೆ ಸ್ವಂತವಾಗಿ ಕೂದಲನ್ನು ಕತ್ತರಿಸಿಕೊಳ್ಳುವುದನ್ನು ಕಲಿತವರು ನನಗೆ ತಿಳಿಯದು. ನಾನು ಅದನ್ನೂ ಕಲಿಯಬೇಕಾಗಿದ್ದಿತು. ನಾನು ಪ್ರಿಟೋರಿಯಾದಲ್ಲಿ ಒಂದು ಬಾರಿ ಇಂಗ್ಲಿಷ್ ಕ್ಷೌರಿಕನ ಅಂಗಡಿಗೆ ಹೋದೆನು, ಅವನು ನನ್ನ ಕೂದಲನ್ನು ಕತ್ತರಿಸಲು ಒಪ್ಪಲಿಲ್ಲ. ಅವನು ತೋರಿಸಿದ ತಿರಸ್ಕಾರ, ಅಸಹನೀಯವಾಗಿದ್ದಿತು. ನನಗೆ ಬಹಳ ದುಃಖ ಉಂಟಾಯಿತು. ನಾನು ಕೂಡಲೇ ಅಂಗಡಿಗೆ ಹೋಗಿ ಕತ್ತರಿಯನ್ನು ಕೊಂಡುಕೊಂಡು ಬಂದು ಕನ್ನಡಿಯ ಮುಂದೆ ನಿಂತುಕೊಂಡು ನನ್ನ ಕೂದಲನ್ನು ಕತ್ತರಿಸಿಕೊಂಡೆನು. ಮುಂದುಗಡೆಯ ಕೂದಲನ್ನು ಸ್ವಲ್ಪ ಹೆಚ್ಚು ಕಡಿಮೆ ಸರಿಯಾಗಿಯೇ ಕತ್ತರಿಸಿದೆನು. ಆದರೆ ಹಿಂಬಾಗವಲ್ಲಿ ಕೆಟ್ಟುಹೋಯಿತು. ಕೋರ್ಟಿನಲ್ಲಿ ಮಿತ್ರರೆಲ್ಲ ಬಿದ್ದು ಬಿದ್ದು ನಕ್ಕರು.

"ಗಾಂಧೀ ನಿಮ್ಮ ಕೂದಲಿಗೆ ಏನಾಗಿದೆ ?" ಅದನ್ನು ಇಲಿಗಳು ತಿಂದಂತೆ ಕಾಣುತ್ತಿದೆಯಲ್ಲ ?"

"ಇಲ್ಲ. ಬಿಳಿಯ ಕ್ಷೌರಿಕ ನನ್ನ ಕಪ್ಪು ತಲೆಯನ್ನು ಹೇಗೆ ಮುಟ್ಟಿಯಾನು ? ಆದುದರಿಂದ ನಾನೇ ಅದನ್ನು ಕತ್ತರಿಸಿಕೊಂಡೆನು. ಎಷ್ಟು ಕೆಟ್ಟು ಹೋದರೂ ಚಿಂತೆಯಿಲ್ಲ" ಎಂದು ಉತ್ತರ ಕೊಟ್ಟೆನು.

ಈ ಉತ್ತರದಿಂದ ಮಿತ್ರರಿಗೆ ಆಶ್ಚರ್ಯವಾಗಲಿಲ್ಲ.

ನನ್ನ ಕೂದಲನ್ನು ಕತ್ತರಿಸುವುದಕ್ಕೆ ನಿರಾಕರಿಸಿದುದರಲ್ಲಿ ಕ್ಷೌರಿಕನದೇನೂ ತಪ್ಪು ಇರಲಿಲ್ಲ. ಅವನು ಕಪ್ಪು ಜನರ ಸೇವೆ ಮಾಡಿದ್ದರೆ, ಅವನ ಬಿಳಿಯ ಗಿರಾಕಿಗಳೆಲ್ಲ ಅವನನ್ನು ಬಿಟ್ಟು ಹೋಗುವ ಸಂಭವವಿದ್ದಿತು. ನಾವು ನಮ್ಮ ಕ್ಷೌರಿಕರು ನಮ್ಮ ದೇಶದ ಅಸ್ಪೃಶ್ಯ ಬಂಧುಗಳಿಗೆ ಕ್ಷೌರ ಮಾಡಲು ಅವಕಾಶ ಕೊಡುವುದಿಲ್ಲ. ನನಗೆ ಇದಕ್ಕಾಗಿ ದಕ್ಷಿಣ ಆಫ್ರಿಕಾದಲ್ಲಿ ಒಂದು ಸಲವಲ್ಲ, ಅನೇಕ ಸಲ ತಕ್ಕ ಪ್ರತಿಫಲ ದೊರಕಿತು. ಇದು ನಮ್ಮ ಪಾಪಕ್ಕೆ ಪ್ರಾಯಶ್ಚಿತ್ತವೆಂಬುದು ನನಗೆ ಮನವರಿಕೆಯಾಗಿದ್ದುದರಿಂದ ಅದರಿಂದ ನನಗೆ ಕೋಪ ಬರಲಿಲ್ಲ.

ಸ್ವಾವಲಂಬನೆ ಮತ್ತು ಸರಳತೆಯು ನನ್ನ ಇಚ್ಛೆ ಎಂತಹ ತೀವ್ರ ಸ್ವರೂಪ ದಲ್ಲಿ ಕೊನೆಗೆ ಪ್ರಕಟವಾಯಿತೆಂಬ ಸಂಗತಿಗಳು, ಮುಂದೆ ಸರಿಯಾದ ಸ್ಥಳದಲ್ಲಿ ವಿವರಿಸಲ್ಪಡುವುವು. ಆದರೆ ಅದರ ಬೀಜಾರೋಪಣೆ ಬಹಳ ಹಿಂದೆಯೇ ಆಗಿದ್ದಿತು. ಬೇರುಬಿಟ್ಟು ಹೂವು ಹಿಡಿದು ಫಲ ಬಿಡಲು ನೀರೆರೆಯುವುದು ಮಾತ್ರ ಆವಶ್ಯಕವಾಗಿದ್ದಿತು. ಆ ನೀರೆರೆಯುವುದೂ ಸಕಾಲದಲ್ಲಿ ಉಂಟಾ ಯಿತು.

೧೦

ಬೋಯರ್ ಯುದ್ಧ

೧೮೯೭–೧೮೯೯ ಈ ಸಂವತ್ಸರಗಳ ನಡುವಣ ಅನೇಕ ಅನುಭವಗಳನ್ನು ಬಿಟ್ಟು ಬಿಟ್ಟು, ಈಗ ನೇರವಾಗಿ ಬೋಯರ್ ಯುದ್ಧದ ವಿಷಯಕ್ಕೆ ಹೋಗ ಬೇಕಾಗಿದೆ.

ಯುದ್ಧ ಪ್ರಾರಂಭವಾದಾಗ ನನ್ನ ಸಹಾನುಭೂತಿ ಎಲ್ಲ ಬೋಯರ್‌ರ ಕಡೆಗೇ ಇದ್ದಿತು. ಆದರೆ ಅಂತಹ ಸಂದರ್ಭಗಳಲ್ಲಿ ನನ್ನ ಸ್ವಂತ ಅಭಿ ಪ್ರಾಯಕ್ಕನುಗುಣವಾಗಿ ನಡೆಯಲು ನನಗೆ ಅಧಿಕಾರವಿರಲಿಲ್ಲವೆಂದು ಆಗ ನಾನು ಭಾವಿಸಿದ್ದೆನು. ಇದರ ಸಂಬಂಧದಲ್ಲಿ ಉಂಟಾದ ಮಾನಸಿಕ ಹೋರಾಟವನ್ನು ಕುರಿತು ನಾನು ದಕ್ಷಿಣ ಆಫ್ರಿಕಾ ಸತ್ಯಾಗ್ರಹದ ಇತಿಹಾಸದಲ್ಲಿ ವಿವರವಾಗಿ ಹೇಳಿದ್ದೇನೆ. ಹೆಚ್ಚು ಕುತೂಹಲವಿರುವವರು ಆ ಗ್ರಂಥವನ್ನು ಓದಬಹುದು. ಇಷ್ಟು ಹೇಳಿದರೆ ಸಾಕು. ಬ್ರಿಟಿಷ್ ಸರಕಾರದಲ್ಲಿ ನನಗಿದ್ದ ರಾಜನಿಷ್ಠೆ, ನಾನು ಅವರ ಪಕ್ಷವನ್ನು ಹಿಡಿದು ಈ ಯುದ್ಧದಲ್ಲಿ ಭಾಗವಹಿಸುವಂತೆ ಮಾಡಿತು ಎಂದು ಹೇಳಿದರೆ ಸಾಕಾಗಿದೆ. ಬ್ರಿಟಿಷ್ ಪ್ರಜೆಯೆಂದು ಹೇಳಿ ಕೊಂಡು ಆ ಹಕ್ಕುಗಳನ್ನು ನಾನು ಕೇಳುತ್ತಿರುವುದರಿಂದ ಬ್ರಿಟಿಷ್ ಚಕ್ರಾಧಿ ಪತ್ಯದ ರಕ್ಷಣೆಯಲ್ಲಿ ಭಾಗವಹಿಸುವುದು ನನ್ನ ಕರ್ತವ್ಯವೆಂದು ನಾನು ಭಾವಿಸಿದೆನು. ಭಾರತ, ಬ್ರಿಟಿಷ್ ಸಾಮ್ರಾಜ್ಯದಲ್ಲಿ ಅದರ ಮೂಲಕವೇ ಸಮಸ್ತ ಉನ್ನತಿಯನ್ನೂ ಸಾಧಿಸಬಲ್ಲುದೆಂಬ ನಂಬಿಕೆ ನನಗೆ ಆಗ ದೃಢ ವಾಗಿದ್ದಿತು. ಆದುದರಿಂದ ನಾನು ಸಾಧ್ಯವಾದಷ್ಟು ಮಿತ್ರರನ್ನು ಕೂಡಿಸಿ ಗಾಯಗೊಂಡ ಸಿಪಾಯಿಗಳಿಗಾಗಿ ಒಂದು ಶುಶ್ರೂಷಾದಳವನ್ನು ಏರ್ಪಡಿಸಿ,

ಬಹಳ ಶ್ರಮದಿಂದ, ಅವರ ಸೇವೆಯನ್ನು ಸರಕಾರ ಅಂಗೀಕರಿಸುವಂತೆ ಮಾಡಿದೆನು.

"ಭಾರತೀಯರು ಹೇಡಿಗಳು, ಅಪಾಯವನ್ನು ಎದುರಿಸಲಾರರು, ಸ್ವಾರ್ಥದ ಹೊರತು ಇನ್ನಾವುದನ್ನೂ ಅವರು ಪರಿಗಣಿಸುವುದಿಲ್ಲ" ಎಂಬುದು ಸಾಮಾನ್ಯ ಇಂಗ್ಲಿಷಿನವರ ಅಭಿಪ್ರಾಯವಾಗಿದ್ದಿತು. ಆದುದರಿಂದ ಅನೇಕ ಆಂಗ್ಲೇಯ ಮಿತ್ರರು ನನ್ನ ಯೋಜನೆಗೆ ತಣ್ಣೀರೆರಚಿದರು. ಆದರೆ ಡಾ. ಬೂತ್‌ರವರು ಮಾತ್ರ ನನಗೆ ಪೂರ್ಣ ಪ್ರೋತ್ಸಾಹವನ್ನು ಕೊಟ್ಟರು. ಅವರು ನಮಗೆ ಗಾಯಗೊಂಡ ಸಿಪಾಯಿಗಳನ್ನು ಶುಶ್ರೂಷೆ ಮಾಡುವುದರಲ್ಲಿ ತಯಾರಿ ಕೊಟ್ಟರು. "ಇವರು ಸೇವೆ ಮಾಡಲು ಅರ್ಹರು" ಎಂಬುದಾಗಿ ಸಾಕ್ಷಿ ವೈದ್ಯರುಗಳಿಂದ ಯೋಗ್ಯತಾ ಪತ್ರವನ್ನು ಸಂಪಾದಿಸಿಕೊಂಡೆವು. ಮಿ. ಲಾಟನ್ ಮತ್ತು ದಿವಂಗತ ಎಸ್ಕೊಂಬರು ಉತ್ಸಾಹದಿಂದ ನಮ್ಮ ಕಾರ್ಯಕ್ಕೆ ಬೆಂಬಲವಿತ್ತರು. ಕೊನೆಯಲ್ಲಿ ನಾವು ಯುದ್ಧ ಭೂಮಿಯಲ್ಲಿ ಸೇವೆ ಮಾಡಲು ಸರಕಾರದ ಅನುಮತಿಯನ್ನು ಕೇಳಿದೆವು. ಸರಕಾರ, ನಮ್ಮ ಅರ್ಜಿಗೆ ಧನ್ಯವಾದ ಹೇಳಿತು. ಆದರೆ ನಮ್ಮ ಸೇವೆ ಆಗ ಅಗತ್ಯವಿಲ್ಲವೆಂದೂ ತಿಳಿಸಿತು.

ಅವರು ಹೀಗೆ ಬೇಡವೆಂದುದರಿಂದ ನಾನು ತೃಪ್ತನಾಗಿ ಸುಮ್ಮನೆ ಕೂಡಲಿಲ್ಲ. ಡಾ. ಬೂತ್‌ರವರ ಪರಿಚಯದಿಂದ ನೆಟಾಲ್ ಬಿಷಪ್‌ರನ್ನು ಹೋಗಿ ನೋಡಿದೆನು. ನಮ್ಮ ದಳದಲ್ಲಿ ಅನೇಕ ಭಾರತೀಯ ಕ್ರೈಸ್ತರು ಇದ್ದರು. ನನ್ನ ಉದ್ದೇಶವನ್ನು ಕೇಳಿ ಬಿಷಪ್‌ರಿಗೆ ಸಂತೋಷವಾಯಿತು. ಸರಕಾರ ನಿಮ್ಮ ಸೇವೆಯನ್ನು ಸ್ವೀಕರಿಸಲು ಸಹಾಯಮಾಡುತ್ತೇನೆ" ಎಂದು ಅವರು ನನಗೆ ವಾಗ್ದಾನವಿತ್ತರು.

ಕಾಲವೂ ನಮಗೆ ಅನುಕೂಲವಾಗಿದ್ದಿತು. ಬೋಯರ್‌ಗಳು ನಿರೀಕ್ಷಿಸಿದುದಕ್ಕಿಂತ ಹೆಚ್ಚಾದ ಧೈರ್ಯ, ದೃಢತೆ ಮತ್ತು ವೀರತನವನ್ನು ಪ್ರಕಟಿಸುತ್ತಿದ್ದರು. ಕೊನೆಯಲ್ಲಿ ಸರಕಾರ, ನಮ್ಮ ಸೇವೆಯನ್ನು ಅಂಗೀಕರಿಸಿತು.

ನಮ್ಮ ದಳದಲ್ಲಿ ೧೧೦೦ ಜನರಿದ್ದರು ; ಸುಮಾರು ೪೦ ಮಂದಿ ನಾಯಕರಿದ್ದರು. ಸ್ವಯಂಸೇವಕರ ಪೈಕಿ ಸುಮಾರು ೩೦೦ ಸ್ವತಂತ್ರ

ಭಾರತೀಯರೂ ಉಳಿದವರು ಕರಾರು ಕೂಲಿಗಳು ಆಗಿದ್ದರು. ಡಾ. ಬೂತ್‌ರೂ ನಮ್ಮ ಜತೆಯಲ್ಲಿದ್ದರು. ದಳ ಚೆನ್ನಾಗಿ ಕೆಲಸ ಮಾಡಿತು. ನಮ್ಮ ಕಾರ್ಯರಂಗ, ಗುಂಡಿನ ಏಟಿನ ಪ್ರದೇಶದ ಆಚೆಗಿದ್ದಿತು. ಮತ್ತು ನಮಗೆ ರೆಡ್‌ಕ್ರಾಸ್‌ನ ರಕ್ಷಣೆಯಿದ್ದಿತು. ಆದರೆ ಒಂದು ಸಂಧಿಗ್ಧ ಪರಿಸ್ಥಿತಿಯಲ್ಲಿ ಗುಂಡು ಬೀಳುವ ಪ್ರದೇಶದಲ್ಲಿಯೂ ನಮಗೆ ಕೆಲಸವನ್ನು ನಿಯಮಿಸಿದರು. ಗುಂಡು ಬೀಳುವೆಡೆ ಬೇಡ ಎಂದು ನಾವು ಕೇಳಿಕೊಂಡಿರಲಿಲ್ಲ. ಅದು ಸರ್ಕಾರದ ತೀರ್ಮಾನವಾಗಿದ್ದಿತು. ಸ್ಪಿಯನ್‌ಕಾಪ್ ಎಂಬಲ್ಲಿ ಬ್ರಿಟಿಷರು ಹಿಮ್ಮೆಟ್ಟಿದ ಮೇಲೆ, ಪರಿಸ್ಥಿತಿ ಬದಲಾಯಿಸಿತು. ಜನರಲ್ ಬುಲ್ಲರ್‌ರವರು ನಾವು ಅಪಾಯ ಪ್ರದೇಶಕ್ಕೆ ಹೋಗಲು ಬದ್ಧರಲ್ಲವಾದರೂ, ನಾವು ಯುದ್ಧ ಭೂಮಿಗೆ ಹೋಗಿ ಗಾಯಗೊಂಡವರನ್ನು ತೆಗೆದುಕೊಂಡು ಬಂದರೆ ಸರಕಾರಕ್ಕೆ ಸಹಾಯ ಮಾಡಿದಂತಾಗುವುದೆಂದೂ ಹೇಳಿ ಕಳುಹಿಸಿದರು. ನಾವು ಹಿಂಜೆಗೆಯ ಲಿಲ್ಲ. ಸ್ಪಿಯನ್‌ಕೋಪ್ ಯುದ್ಧದಲ್ಲಿ ನಾವು ಗುಂಡುಬೀಳುವ ಸ್ಥಳದಲ್ಲಿ ಕೆಲಸ ಮಾಡುತ್ತಿದ್ದೆವು. ಆ ಮೂರು ದಿನಗಳಲ್ಲಿ ನಾವು ಗಾಯಗೊಂಡವರನ್ನು ಡೋಲಿ(ಸ್ಟ್ರೆಚರ್)ಯಲ್ಲಿ ಹೊತ್ತುಕೊಂಡು ದಿನಕ್ಕೆ ೨೦–೨೫ ಮೈಲಿಗಳನ್ನು ನಡೆಯಬೇಕಾಗಿದ್ದಿತು. ಗಾಯಗೊಂಡವರ ಪೈಕಿ ಜನರಲ್ ಉಡ್‌ಗೇಟ್ ಮುಂತಾದ ಯೋಧರನ್ನು ಸಾಗಿಸುವ ಗೌರವವೂ ನಮಗೆ ದೊರಕಿತು.

ಆರು ವಾರಗಳ ಸೇವೆ ಸಲ್ಲಿಸಿದ ಮೇಲೆ ನಮ್ಮ ದಳವನ್ನು ಸದ್ಯಕ್ಕೆ ವಿಸರ್ಜಿಸಿದರು. ಸ್ಪಿಯನ್‌ಕೋಪ್ ಮತ್ತು ವಾಲ್‌ಕ್ರಾನ್ಸ್‌ನಲ್ಲಿ ಸೋಲು ಉಂಟಾದ ಮೇಲೆ ಲೇಡಿಸ್ಮಿತ್ ಮುಂತಾದ ಸ್ಥಳಗಳನ್ನು ತತ್‌ಕ್ಷಣವೇ ಶತ್ರುಗಳ ಮುತ್ತಿಗೆಯಿಂದ ಬಿಡಿಸುವ ಕಾರ್ಯವನ್ನು ಬ್ರಿಟಿಷ್ ಕಮಾಂಡರ್ ಇನ್ ಚೀಫ್‌ರು ಬಿಟ್ಟುಬಿಟ್ಟು, ಇಂಗ್ಲೆಂಡಿನಿಂದಲೂ ಇಂಡಿಯಾದಿಂದಲೂ ಹೆಚ್ಚು ಸೈನ್ಯ ಬರುವುದನ್ನು ಕಾಯುತ್ತಾ ನಿಧಾನವಾಗಿ ಮುಂದುವರಿಯಲು ನಿಶ್ಚಯಿಸಿದರು.

ನಮ್ಮ ಈ ಅಲ್ಪವಾದ ಸೇವೆಯನ್ನು ಆಗ ಬಹಳ ಹೊಗಳಿದರು. ಇದರಿಂದ ಭಾರತೀಯರಲ್ಲಿ ಗೌರವ ಹೆಚ್ಚಾಯಿತು. ವರ್ತಮಾನ ಪತ್ರಿಕೆ

ಗಳು “ಎಷ್ಟೇ ಆಗಲಿ. ನಾವೆಲ್ಲ ಸಾಮ್ರಾಜ್ಯದ ಪುತ್ರರು” ಎಂಬ ಪಲ್ಲವಿಯ ಪ್ರಶಂಸಾ ಪದ್ಯಗಳನ್ನು ಪ್ರಕಟಿಸಿದವು.

ಜನರಲ್ ಬುಲ್ಲರ್‌ರವರು ತಮ್ಮ ಪತ್ರವ್ಯವಹಾರದಲ್ಲಿ ಈ ದಳದ ವಿಷಯವನ್ನು ಪ್ರಶಂಸಿಸಿ ಬರೆದರು. ದಳದ ನಾಯಕರಿಗೆ ಯುದ್ಧ ಪ್ರಶಸ್ತಿ ಪದಕಗಳು ಕೊಡಲ್ಪಟ್ಟವು.

ಇದರ ಫಲವಾಗಿ ಭಾರತೀಯರಲ್ಲಿ ಸಂಘಟನೆ ಉತ್ತಮವಾಯಿತು. ನಾನು ಕರಾರು ಕೂಲಿಗಳೊಡನೆ ಹೆಚ್ಚು ಸಂಪರ್ಕವನ್ನು ಹೊಂದಿದೆನು. ಅವರಲ್ಲಿ ಹೆಚ್ಚಾದ ಜಾಗ್ರತಿವುಂಟಾಯಿತು; ಹಿಂದೂಗಳು ಮುಸಲ್ಮಾನರು ಕ್ರೈಸ್ತರು ತಮಿಳರು ಗುಜರಾತಿಗಳು ಮತ್ತು ಸಿಂಧೀಗಳು ಎಲ್ಲರೂ ಭಾರತೀಯರು, ಎಲ್ಲರೂ ಒಂದೇ ತಾಯಿಯ ಮಕ್ಕಳು ಎಂಬ ಭಾವನೆ ಅವರಲ್ಲಿ ಬೆಳೆದು ಆಳವಾಗಿ ಬೇರೂರಿತು. ಇನ್ನು ಭಾರತೀಯರ ಕಷ್ಟಗಳು ಖಂಡಿತವಾಗಿ ದೂರವಾಗುತ್ತವೆ ಎಂದು ಎಲ್ಲರೂ ನಂಬಿದರು. ಆ ಗಳಿಗೆಯಲ್ಲಿ ಭಾರತೀಯರ ವಿಷಯದಲ್ಲಿ ಬಿಳಿಯರ ಮನೋಭಾವ ಸ್ಪಷ್ಟವಾಗಿ ಬದಲಾವಣೆಯಾದಂತೆ ತೋರಿತು. ಬಿಳಿಯರೊಂದಿಗೆ ಭಾರತೀಯರಿಗೆ ಯುದ್ಧಕಾಲದಲ್ಲಿ ಉಂಟಾದ ಸಂಬಂಧ, ಅತ್ಯಂತ ಮಧುರವಾಗಿದ್ದಿತು. ನಾವು ಸಹಸ್ರಾರು ಟಾಮಿ (ಐರೋಪ್ಯ ಸಿಪಾಯಿ)ಗಳ ಸಹವಾಸ ಮಾಡಿದ್ದೆವು. ಅವರು ನಮ್ಮ ಮಿತ್ರರಾಗಿದ್ದರು ಮತ್ತು ಅವರ ಸೇವೆಗಾಗಿ ನಾವು ಅಲ್ಲಿ ಇದ್ದೆವಲ್ಲಾ ಎಂದು ಕೃತಜ್ಞರಾಗಿದ್ದರು.

ಮನುಷ್ಯಸ್ವಭಾವ ಕಷ್ಟಕಾಲದಲ್ಲಿ ತನ್ನ ಉತ್ಕೃಷ್ಟತೆಯನ್ನು ಹೇಗೆ ಮೆರೆಯುತ್ತದೆ ಎಂಬ ಒಂದು ಮಧುರ ಸ್ಮೃತಿಯನ್ನು ಕುರಿತು ಬರೆಯದೆ ಇರಲಾರೆನು. ನಾವು ಚೀವೆಲೆ ಶಿಬಿರದ ಕಡೆಗೆ ಹೋಗುತ್ತಿದ್ದೆವು. ಅಲ್ಲಿ ಲೆಫ್ಟಿನೆಂಟ್ ರಾಬರ್ಟ್ (ಲಾರ್ಡ್ ರಾಬರ್ಟರ ಮಗ) ಪ್ರಾಣಾಪಾಯಕರವಾದ ಗಾಯವನ್ನು (ಗುಂಡು) ಹೊಂದಿ ಯುದ್ಧಭೂಮಿಯಲ್ಲಿ ಬಿದ್ದಿದ್ದರು. ಅವರ ಶವವನ್ನು ಯುದ್ಧಭೂಮಿಯಿಂದ ಹೊತ್ತುಕೊಂಡು ಹೋಗುವ ಗೌರವ ನಮ್ಮ ದಳದ ಪಾಲಿಗೆ ದೊರಕಿತು. ಅಂದು ಬಿಸಿಲು, ಸೆಕೆ ಹೆಚ್ಚಾಗಿದ್ದಿತು. ಎಲ್ಲರಿಗೂ ಬಹಳ ಬಾಯಾರಿಕೆಯಾಗಿ ನೀರಿಗೆ ಹಾತೊರೆಯುತ್ತಿದ್ದರು. ನಾವೆಲ್ಲರೂ ನೀರು ಕುಡಿದು ಬಾಯಾರಿಕೆ ಅಡಗಿಸಿಕೊಳ್ಳ

ಬಹುದಾದ ಒಂದು ಸಣ್ಣ ಝರಿ, ದಾರಿಯಲ್ಲಿದ್ದಿತು. ಆದರೆ ಯಾರು ಮೊದಲು ನೀರು ಕುಡಿಯಬೇಕು ? "ಮೊದಲು ಟಾಮಿಗಳಿಗಾಗಲಿ, ಅನಂತರ ನಮಗೆ" ಎಂದು ನಾವು ಹೇಳಿದೆವು. ಆದರೆ ಅವರು ಮೊದಲು ಕುಡಿಯದೆ ನಾವೇ ಮೊದಲು ಕುಡಿಯಬೇಕೆಂದು ಒತ್ತಾಯಮಾಡಿದರು. ಹೀಗೆ ಇಬ್ಬರ ನಡುವೆ ನಿಮಗೆ ಮುಂಚೆ, ನಿಮಗೆ ಮುಂಚೆ ಎಂದು ಮಧುರ ಪೈಪೋಟಿ ಸ್ವಲ್ಪ ಹೊತ್ತು ನಡೆಯಿತು

೧೧

ನೈರ್ಮಲ್ಯ ಮತ್ತು ಕ್ಷಾಮನಿವಾರಣೆ

ಸಮಾಜದ ಯಾವ ಅಂಗವಾಗಲಿ ಅನುಪಯುಕ್ತವಾಗಿರುವುದನ್ನು ಸಹಿಸುವುದು ನನಗೆ ಯಾವಾಗಲೂ ಸಾಧ್ಯವಿಲ್ಲ. ಜನರ ದೋಷಗಳನ್ನು ಮುಚ್ಚಿಡುವುದು ಅಥವಾ ಅದರ ಜತೆ ಸಹಕರಿಸುವುದು, ಅಥವಾ ಆ ದೋಷಗಳನ್ನು ದೂರಮಾಡದೆ, ನಮ್ಮ ಅಧಿಕಾರಕ್ಕಾಗಿ ಹೊಡೆದಾಡುವುದು, ಇದು ನನಗೆ ಯಾವಾಗಲೂ ಅರುಚಿಕರ. ಆದುದರಿಂದ ನಾನು ದಕ್ಷಿಣ ಆಫ್ರಿಕಾದಲ್ಲಿ ನೆಲೆಸಿದಂದಿನಿಂದ ಭಾರತೀಯರ ಮೇಲೆ ಬಂದಿದ್ದ ಒಂದು ಆಕ್ಷೇಪಣೆಯನ್ನು —ಇದು ಸಂಪೂರ್ಣವಾಗಿ ನಿರಾಧಾರವಾದ ಆಕ್ಷೇಪಣೆಯಲ್ಲ ಪರಿಹರಿಸಲು ಪ್ರಯತ್ನಿಸುತ್ತಿದ್ದೆನು. "ಭಾರತೀಯ, ಕೊಳಕು ಸ್ವಭಾವದವನು, ತನ್ನ ಮನೆಯನ್ನೂ ಆವರಣವನ್ನೂ ಶುದ್ಧವಾಗಿ ಇಟ್ಟುಕೊಳ್ಳುವುದಿಲ್ಲ" ಎಂಬುದು ಭಾರತೀಯರ ಮೇಲೆ ಬಂದಿದ್ದ ಆಕ್ಷೇಪಣೆಯಾಗಿದ್ದಿತು. ಸಮಾಜದ ಮುಖಂಡರು ಆಗಲೇ ತಮ್ಮ ಮನೆಗಳನ್ನು ಸರಿಯಾದ ಸ್ಥಿತಿಯಲ್ಲಿಡಲು ಪ್ರಾರಂಭಿಸಿದ್ದರು. ಆದರೆ ಡರ್ಬಾನಿನಲ್ಲಿ ಪ್ಲೇಗು ರೋಗ ಪ್ರಾರಂಭವಾದಾಗಲೇ ಪ್ರತಿ ಮನೆಯ ಪರೀಕ್ಷೆ ನಡೆದುದು. ಇದನ್ನು ಮಾಡಿದುದು ಪೌರಸಭಾಸದಸ್ಯರೊಡನೆ ಸಮಾಲೋಚಿಸಿ ಅವರ ಒಪ್ಪಿಗೆಯನ್ನು ಪಡೆದ ಮೇಲೆಯೇ, ಅವರೂ ನಮ್ಮ ಸಹಕಾರವನ್ನು ಬಯಸಿದರು. ನಮ್ಮ ಸಹಕಾರದಿಂದ ಅವರ ಕಾರ್ಯ ಸುಲಭವಾಯಿತು ; ಜತೆಯಲ್ಲಿಯೇ ನಮ್ಮ ಕಷ್ಟಗಳೂ ಕಡಿಮೆಯಾದವು. ಏಕೆಂದರೆ ಸೋಂಕು ಜಾಡ್ಯ ಹರಡಿದೆಡೆಗಳಲ್ಲೆಲ್ಲ, ಅಧಿಕಾರಿಗಳು ತಾಳ್ಮೆಗೆಟ್ಟು ಮಿತಿಮೀರಿ ವರ್ತಿಸಿ, ತಮಗೆ ಯಾರಲ್ಲಿ ಅಸಮಾ

ಧಾನವಾಗಿದೆಯೋ ಅವರೊಡನೆ ಕ್ರೂರವಾಗಿ ವರ್ತಿಸುತ್ತಾರೆ. ಭಾರತೀಯರು ತಾವಾಗಿಯೇ ನೈರ್ಮಲ್ಯ ಕ್ರಮಗಳನ್ನು ಅನುಸರಿಸಿ ಈ ದೌರ್ಜನ್ಯದಿಂದ ತಪ್ಪಿಸಿಕೊಂಡರು.

ಆದರೆ ನನಗೆ ಸ್ವಲ್ಪ ಕಟು ಅನುಭವವುಂಟಾಯಿತು. ನಮ್ಮ ಜನ ಸರಕಾರದಿಂದ ಹೆಚ್ಚು ಅಧಿಕಾರಕ್ಕಾಗಿ ಹೋರಾಡಲು ನನ್ನೊಂದಿಗೆ ಸಹ ಕರಿಸುತ್ತಿದ್ದಂತೆ, ತಮ್ಮ ಕರ್ತವ್ಯವನ್ನು ಮಾಡುವುದರಲ್ಲಿ ಸಹಕರಿಸುವುದಿಲ್ಲ ವೆಂಬುದನ್ನು ನಾನು ಕಂಡುಕೊಂಡೆನು. ಕೆಲವು ಕಡೆ ನನಗೆ ಅವಮಾನ ವಾಯಿತು. ಉಳಿದ ಕಡೆ ವಿನಯಪೂರ್ವಕ ಔದಾಸೀನ್ಯ, ತಮ್ಮ ಸುತ್ತ ಮುತ್ತಲ ಪ್ರದೇಶವನ್ನು ಶುಚಿಯಾಗಿಡಲು ಪ್ರಯತ್ನಿಸುವುದು ಅವರಿಗೆ ಸಹಿಸಲಾರದ ಕಷ್ಟವಾಗಿಯೇ ತೋರಿತು. ಈ ಕೆಲಸಕ್ಕೆ ಅವರು ಹಣವನ್ನು ಒದಗಿಸುವರೆಂದು ಯೋಚಿಸುವುದು ಊಹೆಗೆ ಮೀರಿದ ಮಾತಾಗಿದ್ದಿತು. ಈ ಅನುಭವಗಳಿಂದ ನಾನು, "ಅಮಿತವಾದ ಸಹನೆಯಿಲ್ಲದಿದ್ದರೆ ಜನರಿಂದ ಯಾವ ಕೆಲಸವನ್ನೂ ಮಾಡಿಸಲು ಸಾಧ್ಯವಿಲ್ಲ" ಎಂಬ ಪಾಠವನ್ನು ಕಲಿತೆನು. ಸುಧಾರಣೆ ಬೇಕಾಗಿರುವುದು ಸುಧಾರಕನಿಗೆ; ಸಮಾಜಕ್ಕಲ್ಲ. ಸಮಾಜ ದಿಂದ ಅವನಿಗೆ ವಿರೋಧ, ತಿರಸ್ಕಾರ, ಕೊನೆಗೆ ಪ್ರಾಣಹಾನಿಕರವಾದ ಹಿಂಸೆ ಇವು ಹೊರತು ಮತ್ತೇನೂ ದೊರೆಯುವುದಿಲ್ಲ. ಸುಧಾರಕನು ತನ್ನ ಪ್ರಾಣ ದಷ್ಟೇ ಪ್ರಿಯವಾದುವೆಂದು ಎಣಿಸುವ ಸುಧಾರಣೆಗಳನ್ನು ಸಮಾಜ, ಪ್ರತಿ ಗಾಮಿ ಪ್ರವೃತ್ತಿ (ಹಿಂದಕ್ಕೆ ಸರಿಯುವುದು) ಎಂದು ಎಣಿಸಕೂಡದೇಕೆ ?

ಇಷ್ಟಾದರೂ ಈ ಚಳುವಳಿಯಿಂದ ಪ್ರಯೋಜನವಾಯಿತು. ತಮ್ಮ ಮನೆಗಳನ್ನೂ ಆವರಣಗಳನ್ನೂ ಶುದ್ಧವಾಗಿಡುವುದು ಆವಶ್ಯಕವೆಂಬುದು ನೆಟಾಲಿನ ಭಾರತೀಯರಿಗೆ ಹೆಚ್ಚು ಹೆಚ್ಚಾಗಿ ಮನವರಿಕೆಯಾಗತೊಡಗಿತು. ನನಗೆ ಅಧಿಕಾರಿಗಳಲ್ಲಿ ಗೌರವ ಹೆಚ್ಚಿತು. ಭಾರತೀಯರ ಕಷ್ಟಗಳನ್ನು ಪ್ರಕಟಿಸಿ ಅವರ ಅಧಿಕಾರಕ್ಕಾಗಿ ಹೋರಾಡುವುದನ್ನು ನಾನು ನನ್ನ ಉದ್ಯೋಗವನ್ನಾಗಿ ಮಾಡಿಕೊಂಡಿದ್ದರೂ, ಅವರ ಅಂತರಂಗ ಶುದ್ಧಿಯ ವಿಷಯದಲ್ಲಿಯೂ ಅಷ್ಟೇ ದೃಢತೆಯಿಂದ ಒತ್ತಾಯ ಪಡಿಸುತ್ತಿದ್ದೇನೆಂಬುದನ್ನು ಅವರು ಅರಿತರು.

ಆದರೂ ಮಾಡಬೇಕಾದ ಕೆಲಸ ಇನ್ನೂ ಒಂದು ಇದ್ದಿತು. ಅದೇ, ಭಾರತದಿಂದ ಹೋಗಿ ಆಫ್ರಿಕಾದಲ್ಲಿ ನೆಲೆಸಿದ್ದ ಭಾರತೀಯರಲ್ಲಿ, ಮಾತೃ ಭೂಮಿಯ ಪ್ರೇಮವನ್ನು ಎಚ್ಚರಗೊಳಿಸುವುದು. ಭಾರತ, ದರಿದ್ರ ವಾಗಿತ್ತು. ಇಲ್ಲಿಂದ ಆಫ್ರಿಕಾಕ್ಕೆ ವಲಸೆ ಹೋದವರು ಐಶ್ವರ್ಯ ಸಂಪಾದನೆ ಗಾಗಿ ಹೋದರು. ಭಾರತದಲ್ಲಿ ಕಷ್ಟದಲ್ಲಿರುವ ತಮ್ಮ ದೇಶಬಾಂಧವರ ಒಳಿತಿಗಾಗಿ ತಮ್ಮ ಸಂಪಾದನೆಯ ಒಂದು ಭಾಗವನ್ನು ಅರ್ಪಿಸುವುದು ಅವರ ಕರ್ತವ್ಯವಾಗಿದ್ದಿತು. ವಲಸೆಗಾರರು ೧೮೯೭–೯೯ರ ಭಯಂಕರ ಕ್ಷಾಮ ಕಾಲದಲ್ಲಿ ಕ್ಷಾಮ ಪರಿಹಾರ ನಿಧಿಗೆ ಬಹಳ ಧನ ಸಹಾಯ ಮಾಡಿದರು. ೧೮೯೭ರಲ್ಲಿ ಮಾಡಿದುದಕ್ಕಿಂತ ೧೮೯೯ರಲ್ಲಿ ಇನ್ನೂ ಹೆಚ್ಚಾಗಿ ಮಾಡಿದರು. ನಾವು ಧನ ಸಹಾಯಕ್ಕಾಗಿ ಆಂಗ್ಲೇಯರಿಗೂ ಮನವಿಗಳನ್ನು ಕೊಟ್ಟಿದ್ದೆವು. ಅವರೂ ಸಹ ಬಹಳ ಹಣ ಸಹಾಯ ಮಾಡಿದರು. ಕರಾರು ಕೂಲಿಗಳು ಸಹ ಕ್ಷಾಮ ನಿಧಿಗೆ ತಮ್ಮ ಭಾಗವನ್ನು ಕೊಟ್ಟರು. ಆ ಕ್ಷಾಮ ಕಾಲದಲ್ಲಿ ಪ್ರಾರಂಭವಾದ ಪದ್ಧತಿ, ಈವರೆಗೂ ನಡೆದು ಬರುತ್ತಿದೆ. ಭಾರತಕ್ಕೆ ಅಪಾಯ ಅಥವಾ ಕಷ್ಟ ಒದಗಿದಾಗಲೆಲ್ಲ, ದಕ್ಷಿಣ ಆಫ್ರಿಕಾದಲ್ಲಿರುವ ಭಾರತೀಯರು, ಹೆಚ್ಚಾದ ಧನ ಸಹಾಯವನ್ನು ಕಳುಹಿಸಲು ಎಂದಿಗೂ ತಪ್ಪಿಲ್ಲವೆಂಬುದು ನಮ್ಮ ಅನುಭವವಾಗಿದೆ.

ಹೀಗೆ ದಕ್ಷಿಣ ಆಫ್ರಿಕಾದ ಭಾರತೀಯರ ಸೇವೆ, ನನಗೆ ಪ್ರತಿಯೊಂದು ಹೆಜ್ಜೆಯಲ್ಲಿಯೂ ಸತ್ಯದ ಹೊಸ ಅರ್ಥವನ್ನು ಅನಾಯಾಸವಾಗಿ ಕಲಿಸು ತ್ತಿದೆ. ಸತ್ಯ, ಒಂದು ದೊಡ್ಡ ವೃಕ್ಷದಂತೆ. ಹೆಚ್ಚು ಹೆಚ್ಚಾಗಿ ಪೋಷಿಸಿ ದಂತೆ ಅದು ಹೆಚ್ಚು ಹೆಚ್ಚು ಫಲಗಳನ್ನು ಕೊಡುತ್ತದೆ. ಸತ್ಯದ ಗಣಿಯಲ್ಲಿ ಆಳವಾಗಿ ಹುಡುಕಿದಷ್ಟೂ, ಅದರಲ್ಲಿ ಹುದುಗಿರುವ ಅನರ್ಘ್ಯಗಳಾದ ರತ್ನಗಳು ದೊರಕುತ್ತವೆ. ಹಲವು ಬಗೆಗಳಲ್ಲಿ ಸೇವೆ ಸಲ್ಲಿಸುವ ಅವಕಾಶಗಳೇ ಆ ರತ್ನಗಳು.

೧೨

ಹಿಂದೂಸ್ಥಾನಕ್ಕೆ ಹಿಂದಿರುಗಿದುದು

ನಾನು ಯುದ್ಧದ ಕೆಲಸದಿಂದ ಬಿಡುಗಡೆ ಹೊಂದಿದ ಮೇಲೆ, ನನ್ನ ಕೆಲಸ ಇನ್ನು ಇರುವುದು ದಕ್ಷಿಣ ಆಫ್ರಿಕಾದಲ್ಲಲ್ಲ, ಆದರೆ ಭಾರತದಲ್ಲಿ ಎಂದು ನನಗೆ ತೋರಿತು. ದಕ್ಷಿಣ ಆಫ್ರಿಕಾದಲ್ಲಿ ಮಾಡಬೇಕಾದ ಕೆಲಸವಿರಲಿಲ್ಲ ಎಂದಲ್ಲ ಆದರೆ ಅಲ್ಲಿದ್ದರೆ ಹಣ ಸಂಪಾದನೆಯೇ ನನ್ನ ಮುಖ್ಯ ಕಾರ್ಯವಾಗ ಬಹುದೆಂದು ನನಗೆ ಹೆದರಿಕೆಯುಂಟಾಯಿತು.

ಭಾರತದಲ್ಲಿ ಮಿತ್ರರೂ ನನ್ನನ್ನು ಹಿಂದಿರುಗಬೇಕೆಂದು ಒತ್ತಾಯ ಪಡಿಸುತ್ತಿದ್ದರು. ನನಗೂ ಸಹ ಭಾರತದಲ್ಲಿ ನನ್ನಿಂದ ಹೆಚ್ಚು ಸೇವೆಯಾಗು ತ್ತದೆ ಎಂದು ತೋರಿತು. ಆಫ್ರಿಕಾದ ಕೆಲಸಮಾಡಲು ಖಾನ್ ಮತ್ತು ಮನಸುಖಲಾಲ್ ನಾಸರ್ ಅಲ್ಲಿದ್ದರು. ಆದುದರಿಂದ ನಾನು, ಸಹೋದ್ಯೋಗಿ ಗಳಿಗೆ ನನ್ನನ್ನು ಬಿಟ್ಟುಕೊಡುವಂತೆ ಹೇಳಿಕೊಂಡೆನು. ನಾನು ಬಹಳ ಹೇಳಿಕೊಂಡನಂತರ ನನ್ನ ಪ್ರಾರ್ಥನೆಯನ್ನು ಒಂದು ಷರತ್ತಿಗೆ ಒಳಪಡಿಸಿ ಒಪ್ಪಿಕೊಂಡರು. ಆ ಷರತ್ತು ಇದು. ನಾನು ಭಾರತಕ್ಕೆ ಪ್ರಯಾಣ ಮಾಡಿದ ಒಂದು ವರುಷದೊಳಗೆ, ಆಫ್ರಿಕಾದ ಭಾರತೀಯರಿಗೆ ನನ್ನ ಆವಶ್ಯ ಕತೆಯುಂಟಾದರೆ ನಾನು ಮತ್ತೆ ಆಫ್ರಿಕಾಕ್ಕೆ ಹಿಂದಿರುಗಲು ಒಪ್ಪಬೇಕೆಂಬುದು. ಆ ಷರತ್ತು ಬಹಳ ಕಠಿಣವಾದುದೆಂದು ನನಗೆ ತೋರಿತು. ಆದರೆ ಭಾರತೀಯ ರಲ್ಲಿ ನನಗೆ ಇದ್ದ ಪ್ರೇಮ ಬಂಧನ, ನಾನು ಅದನ್ನು ಒಪ್ಪುವಂತೆ ಮಾಡಿತು.

ಕಾಚ ರೇ ತಾಂತಣೆ ಮನೇ ಹರಜೀ ಏ ಬಾಂಧಿ
ಜೇಮ ತಾಣೇ ತೇಮ ತೇಮನೀ ರೇ
ಮನೇ ಲಾಗೀ ಕಟಾರೀ ಪ್ರೇಮನೀ

"ದೇವರು ನನ್ನನ್ನು ಪ್ರೇಮವೆಂಬ ನೂಲೆಳೆಯಿಂದ ಬಂಧಿಸಿದ್ದಾನೆ. ನಾನು ಆತನ ದಾಸಿಯಾಗಿದ್ದೇನೆ" ಎಂದು ಹಾಡಿದಳು ಮೀರಾ. ನೆಟಾಲಿನ ಭಾರತೀಯರೊಂದಿಗೆ ನನ್ನನ್ನು ಬಂಧಿಸಿದ್ದ ನೂಲೆಳೆ ಕೀಳಲಾರದಷ್ಟು ಬಲವಾಗಿದ್ದಿತು. ಜನತೆಯ ವಾಕ್ಯವೇ ದೇವರ ವಾಕ್ಯ. ನನ್ನ ಮಿತ್ರರ

ಮಾತನ್ನು ತಿರಸ್ಕರಿಸಲು ನನಗೆ ಸಾಧ್ಯವಾಗಲಿಲ್ಲ. ಅವರ ಷರತ್ತಿಗೆ ನಾನು ಒಪ್ಪಿಕೊಂಡು, ಹೊರಡಲು ಅವರ ಅನುಮತಿ ಪಡೆದನು.

ಆಗ ನನಗೆ ನೆಟಾಲಿನೊಂದಿಗೆ ಮಾತ್ರ ನಿಕಟಬಾಂಧವ್ಯವಿದ್ದಿತು. ನೆಟಾಲ್ ಭಾರತೀಯರು ನನ್ನನ್ನು ಪ್ರೇಮಾಮೃತದಲ್ಲಿ ಸ್ನಾನ ಮಾಡಿಸಿದರು. ಎಲ್ಲೆಲ್ಲಿಯೂ ನನ್ನನ್ನು ಬೀಳ್ಕೊಡುವ ಸಮಾರಂಭ ಸಭೆಗಳು ನಡೆದು ಅಭಿನಂದನ ಪತ್ರಗಳು ಕೊಡಲ್ಪಟ್ಟವು. ನನಗೆ ಅಮೂಲ್ಯವಾದ ಉಡುಗೊರೆಗಳನ್ನೂ ಕಾಣಿಕೆಗಳನ್ನೂ ಕೊಟ್ಟರು.

ನಾನು ೧೮೯೯ರಲ್ಲಿ ಭಾರತಕ್ಕೆ ಹಿಂದಿರುಗಿದಾಗಲೂ ನನಗೆ ಉಡುಗೊರೆಗಳನ್ನು ಕೊಟ್ಟಿದ್ದರು. ಆದರೆ ಈ ಸಲದ ಬೀಳ್ಕೊಡುಗೆಯ ಸಮಾರಂಭಗಳು ಎಂದೂ ಇಲ್ಲದಷ್ಟು ವೈಭವಪೂರ್ಣವಾಗಿದ್ದವು. ಕಾಣಿಕೆಗಳಲ್ಲಿ ಚಿನ್ನ ಬೆಳ್ಳಿಯ ವಸ್ತುಗಳಂತೂ ಇದ್ದೇ ಇದ್ದುವು. ಜತೆಗೆ ಬೆಲೆಯಾದ ವಜ್ರದ ಪದಾರ್ಥಗಳೂ ಇದ್ದವು.

ಈ ಬಹುಮಾನಗಳನ್ನೆಲ್ಲ ತೆಗೆದುಕೊಳ್ಳಲು ನನಗೇನು ಹಕ್ಕು? ಅವುಗಳನ್ನು ಸ್ವೀಕರಿಸಿ, ಯಾವ ಪ್ರತಿಫಲವೂ ಇಲ್ಲದೆ ನಾನು ನಮ್ಮ ಜನರ ಸೇವೆ ಮಾಡುತ್ತಿರುವೆನೆಂದು ಹೇಗೆ ತಾನೆ ಹೇಳಿಕೊಳ್ಳಲಿ? ನನ್ನ ಕಕ್ಷಿಗಾರರು ಕೊಟ್ಟಿದ್ದ ಕೆಲವು ಬಹುಮಾನಗಳ ಹೊರತು, ಉಳಿದುವೆಲ್ಲ, ನಮ್ಮ ಜನಕ್ಕೆ ನಾವು ಮಾಡಿದ್ದ ಸಾರ್ವಜನಿಕ ಸೇವೆಗಾಗಿ ಬಂದ ಬಹುಮಾನಗಳು. ಕಕ್ಷಿಗಾರರೂ ಸಹೋದ್ಯೋಗಿಗಳಿಗೂ ನಾನು ವ್ಯತ್ಯಾಸಮಾಡುವಂತೆ ಇರಲಿಲ್ಲ. ಏಕೆಂದರೆ ನನ್ನ ಕಕ್ಷಿಗಾರರೂ ನನ್ನ ಸಾರ್ವಜನಿಕ ಕಾರ್ಯದಲ್ಲಿ ಸಹಾಯಕರಾಗಿದ್ದರು.

ಬಹುಮಾನಗಳ ಪೈಕಿ ಒಂದು, ಐವತ್ತು ಗಿನಿ (ಸುಮಾರು ಎಂಟು ನೂರು ರೂಪಾಯಿ) ಬಾಳುವ ಚಿನ್ನದ ಸರ ; ನನ್ನ ಹೆಂಡತಿಗಾಗಿ ಅದನ್ನು ಆ ವಸ್ತುವನ್ನು ಕೊಟ್ಟಿದ್ದುದೂ ನನ್ನ ಸಾರ್ವಜನಿಕ ಕಾರ್ಯಗಳಿಗಾಗಿಯೇ, ಆದುದರಿಂದ ಅದು ಇತರ ವಸ್ತುಗಳಿಂದ ಬೇರೆ ಎಂದು ಹೇಳುವಂತಿಲ್ಲ.

ಈ ವಸ್ತುಗಳಲ್ಲಿ ಹೆಚ್ಚು ಭಾಗ ನನಗೆ ಕೊಡಲ್ಪಟ್ಟ ದಿನ, ನನಗೆ ರಾತ್ರಿ ನಿದ್ರೆಯೇ ಬರಲಿಲ್ಲ. ನಾನು ಅಶಾಂತನಾಗಿ ನನ್ನ ಕೊಠಡಿಯಲ್ಲಿ ಹಿಂದಕ್ಕೂ ಮುಂದಕ್ಕೂ ಹುಚ್ಚನಂತೆ ತಿರುಗಾಡಿದೆನು. ಆದರೆ ನನಗೆ

ಪರಿಹಾರ ಕಾಣಲಿಲ್ಲ. ಸಾವಿರಾರು ರೂಪಾಯಿ ಬಾಳುವ ಬಹುಮಾನಗಳನ್ನು ತ್ಯಜಿಸುವುದು ಕಷ್ಟವಾಗಿ ತೋರಿತು. ಆದರೆ ಅವುಗಳನ್ನು ಇಟ್ಟುಕೊಳ್ಳು ವುದು ಅದಕ್ಕಿಂತಲೂ ಕಷ್ಟವಾಗಿ ತೋರಿತು.

ನಾನು ಒಂದು ಪಕ್ಷ ಇಟ್ಟುಕೊಂಡರೂ, ನನ್ನ ಮಕ್ಕಳ ವಿಚಾರ ಹೇಗೆ ? ನನ್ನ ಹೆಂಡತಿಯ ವಿಚಾರ ಹೇಗೆ ? ಸೇವೆಯ ಜೀವನಕ್ಕೆ ಅವರನ್ನು ಸಿದ್ಧಗೊಳಿಸುತ್ತಿದ್ದೆನು. ಸೇವೆಯ ಪ್ರತಿಫಲ ಸೇವೆಯೇ, ಎಂಬುದು ಅವರಿಗೆ ಕೊಟ್ಟ ಶಿಕ್ಷಣವಾಗಿದ್ದಿತು.

ನನ್ನ ಮನೆಯಲ್ಲಿ ಬೆಲೆಯಾದ ಒಡವೆಗಳಾವುವೂ ಇರಲಿಲ್ಲ. ನಾವು ಬೇಗ ಬೇಗ ನಮ್ಮ ಜೀವನವನ್ನು ಸರಳವಾಗಿ ಮಾಡಿಕೊಳ್ಳುತ್ತಿದ್ದೆವು. ಹೀಗಿರುವಾಗ ಚಿನ್ನದ ಗಡಿಯಾರಗಳನ್ನು ಇಟ್ಟುಕೊಳ್ಳಲು ನಮಗೆ ಹೇಗೆ ತಾನೆ ಸಾಧ್ಯವಾದೀತು. ಚಿನ್ನದ ಸರಗಳನ್ನೂ ವಜ್ರದ ಉಂಗುರಗಳನ್ನೂ ನಾವು ಹೇಗೆ ತಾನೇ ಧರಿಸಬಲ್ಲೆವು ? ಆಗ ಸಹ ನಾನು ಜನರಿಗೆ ಒಡವೆಗಳ ಆಸೆಯನ್ನು ಜಯಿಸಿರಿ ಎಂದು ಕೇಳಿಕೊಳ್ಳುತ್ತಿದ್ದೆನು. ಈಗ ನನಗೆ ಬಂದಿರುವ ಒಡವೆಗಳನ್ನೆಲ್ಲ ನಾನು ಏನು ಮಾಡಬೇಕು ?

ಈ ಒಡವೆಗಳನ್ನೆಲ್ಲ ನಾನು ಇಟ್ಟುಕೊಳ್ಳಲಾರೆನೆಂದು ನಿಶ್ಚಯಿಸಿದೆನು. ಅವುಗಳನ್ನೆಲ್ಲ ನಮ್ಮ ಜನಕ್ಕಾಗಿ ಒಂದು ಟ್ರಸ್ಟ (ಧರ್ಮನಿಧಿ) ಮಾಡಿ, ಅದಕ್ಕೆ ಪಾರಸೀ ರುಸ್ತುಂಜೀಯವರನ್ನೂ ಇತರ ಕೆಲವರನ್ನೂ ಟ್ರಸ್ಟಿಗಳ ನ್ನಾಗಿ (ಧರ್ಮದರ್ಶಿಗಳನ್ನಾಗಿ) ಮಾಡಿದೆನು. ಒಂದು ಪತ್ರವನ್ನು ಬರೆದೆನು. ಮರುದಿನ ಬೆಳಿಗ್ಗೆ ನನ್ನ ಹೆಂಡತಿ ಮಕ್ಕಳೊಂದಿಗೆ ನಾನು ಸಮಾಲೋಚನೆ ನಡೆಸಿ ಈ ಹೊರೆಯನ್ನು ಕಳೆದುಕೊಳ್ಳಲು ನಿರ್ಣಯಿಸಿದೆನು.

ನನ್ನ ಹೆಂಡತಿಯನ್ನು ಒಪ್ಪಿಸುವುದು ಸ್ವಲ್ಪ ಕಷ್ಟವಾಗಬಹುದೆಂದೂ, ಮಕ್ಕಳನ್ನು ಒಪ್ಪಿಸಲು ಏನೂ ಕಷ್ಟವಾಗದೆಂದೂ ನನಗೆ ತಿಳಿದಿದ್ದಿತು. ಆದುದರಿಂದ ಆ ಹುಡುಗರೇ ನನ್ನ ಪಕ್ಷ ಹಿಡಿದು ವಾದಿಸುವಂತೆ ಮಾಡಲು ನಿಶ್ಚಯಿಸಿದೆನು.

ಮಕ್ಕಳು ನನ್ನ ಸಲಹೆಗೆ ಕೂಡಲೆ ಒಪ್ಪಿದರು. "ನಮಗೆ ಬೆಲೆಯಾದ ಒಡವೆಗಳು ಬೇಕಿಲ್ಲ. ಅವುಗಳನ್ನು ನಾವು ನಮ್ಮ ಜನರಿಗೆ ಹಿಂದಿರುಗಿಸ

ಬೇಕು. ನಮಗೆ ಬೇಕಾದಾಗ, ನಾವೇ ಅವುಗಳನ್ನು ಸುಲಭವಾಗಿ ಕೊಂಡು ಕೊಳ್ಳಬಹುದು" ಎಂದರು.

ನನಗೆ ಬಹಳ ಸಂತೋಷವಾಯಿತು. "ಹಾಗಾದರೆ ನೀವು ನಿಮ್ಮ ತಾಯಿಗೆ ಹೇಳಿ ಒಪ್ಪಿಸುವಿರಿ ; ಅಲ್ಲವೇ ?" ಎಂದೆನು.

"ಹೌದು. ಅದು ನಮ್ಮ ಹೊಣೆಗಾರಿಕೆ. ಆಕೆ ಈ ಒಡವೆಗಳನ್ನು ಇಟ್ಟುಕೊಳ್ಳಲು ಬಯಸುವುದೇ ಇಲ್ಲ. ಅವಳು ಇವನ್ನು ಇಟ್ಟುಕೊಳ್ಳುವುದು ನಮಗಾಗಿ ನಾವು ಬೇಡವೆಂದರೆ ಇವನ್ನು ಇಟ್ಟುಕೊಳ್ಳಲು ಆಕೆ ಏಕೆ ಬಯಸುತ್ತಾಳೆ ?" ಎಂದರು ಹುಡುಗರು.

ಆದರೆ ಹೇಳುವುದು ಸುಲಭವಾಯಿತು. ಮಾಡುವುದು ಕಷ್ಟವಾಯಿತು.

ನನ್ನ ಹೆಂಡತಿ ಹೀಗೆ ಹೇಳಿದಳು : "ನಿಮಗೆ ಅವು ಬೇಕಾಗದೆ ಇರಬಹುದು. ನಿಮ್ಮ ಮಕ್ಕಳಿಗೂ ಬೇಕಾಗದಿರಬಹುದು. ನೀವು ಪುಸಲಾಯಿಸಿದರೆ ಅವರು ನಿಮ್ಮ ತಾಳಕ್ಕೆ ಕುಣಿಯುತ್ತಾರೆ. ನಾವು ಅವುಗಳನ್ನು ಧರಿಸುವುದನ್ನು ನೀವು ಒಪ್ಪುವುದಿಲ್ಲ. ಅದೂ ನನಗೆ ಅರ್ಥವಾಗುತ್ತದೆ. ಆದರೆ ನನ್ನ ಸೊಸೆಯರ ವಿಚಾರ ಹೇಗೆ ? ಅವರಿಗೆ ಇವು ಬೇಕೇ ಬೇಕು. ನಾಳೆ ಏನಾಗುತ್ತೋ ಬಲ್ಲವರಾರು ? ಇಷ್ಟು ಪ್ರೀತಿಯಿಂದ ಅವರು ಕೊಟ್ಟಿರುವ ಬಹುಮಾನಗಳನ್ನು ನಾನು ಎಂದಿಗೂ ಹಿಂದಕ್ಕೆ ಕೊಡುವುದಿಲ್ಲ."

ಹೀಗೆ ವಾದ, ಧಾರಾಕಾರವಾಗಿ ಹೊರಟಿತು. ಅದರ ಜತೆಯಲ್ಲಿ ಅಶ್ರುಧಾರೆಯೂ ಸೇರಿತು. ಆದರೆ ಮಕ್ಕಳು ತಮ್ಮ ದೃಢತೆಯನ್ನು ಬಿಡಲಿಲ್ಲ. ನಾನೂ ವಿಚಲಿತನಾಗಲಿಲ್ಲ.

ನಾನು ಮೃದುವಾಗಿ ಹೇಳಿದೆನು : "ಮಕ್ಕಳಿಗೆ ಮದುವೆಯಾಗಲು ಇನ್ನೂ ಕಾಲವಿದೆ. ಬಾಲ್ಯದಲ್ಲಿಯೇ ಅವರ ಮದುವೆಮಾಡುವುದು ನಮಗೆ ಇಷ್ಟವಲ್ಲವಲ್ಲ. ಅವರಿಗೆ ವಯಸ್ಸಾದನಂತರ ಅವರ ಪಾಡನ್ನು ಅವರು ನೋಡಿಕೊಳ್ಳುತ್ತಾರೆ. ಒಡವೆಗಳ ಆಸೆ ಇರುವವರನ್ನು ನಾವೇನೂ ನಮ್ಮ ಸೊಸೆಯರಾಗಿ ತರುವುದಿಲ್ಲ. ಹಾಗೂ ಅವರಿಗೆ ಒಡವೆಗಳನ್ನು ಕೊಡಲೇ ಬೇಕಾದರೆ ನಾನು ಇದ್ದೇನಲ್ಲ. ಆಗ ನನ್ನನ್ನು ಕೇಳಿದರೆ ಆಯಿತು."

"ನಿಮ್ಮನ್ನು ಕೇಳುವುದೆ ? ಈ ವೇಳೆಗೆ ನಿಮ್ಮ ವಿಷಯ ನನಗೆ ಚೆನ್ನಾಗಿ ಗೊತ್ತಾಗಿದೆ. ನನ್ನ ಒಡವೆಗಳೊಂದೂ ಇಲ್ಲದಂತೆ ಮಾಡಿದಿರಿ. ಅವು ಇರುವವರೆಗೆ ನನ್ನನ್ನು ಶಾಂತವಾಗಿ ನೀವು ಬಿಡಲಿಲ್ಲ. ನೀವೇ ನಮ್ಮ ಸೊಸೆಯರಿಗೆ ಒಡವೆಗಳನ್ನು ಕೊಂಡುಕೊಡುವವರು ? ಇವತ್ತಿನಿಂದಲೇ ನನ್ನ ಮಕ್ಕಳನ್ನು ಬೈರಾಗಿಗಳನ್ನಾಗಿ ಮಾಡಲು ಪ್ರಯತ್ನಿಸುತ್ತಿದ್ದೀರಿ. ಇಲ್ಲ, ಆಭರಣಗಳನ್ನು ಹಿಂದಕ್ಕೆ ಕೊಡುವುದಿಲ್ಲ. ಅದಿರಲಿ, ನನ್ನ ಹಾರದ ಮೇಲೆ ನಿಮಗೇನು ಅಧಿಕಾರ ?" ಎಂದಳು.

ನಾನು "ಆದರೆ ಹಾರವನ್ನು ನೀನು ಮಾಡಿದ ಸೇವೆಗಾಗಿ ಕೊಟ್ಟಿದ್ದಾರೆಯೋ ?" ಎಂದು ಕೇಳಿದೆನು.

"ಅದೇನೊ ಸರಿ. ಆದರೆ ನೀವು ಮಾಡಿದ ಸೇವೆಯೇ ನನ್ನ ಸೇವೆ. ನಾನು ಹಗಲು ರಾತ್ರಿ ನಿಮಗಾಗಿ ಎಡಬಿಡದೆ ದುಡಿದಿದ್ದೇನೆ. ಅದೇನು ಸೇವೆಯಲ್ಲವೇ ? ನೀವು ಯಾರು ಯಾರನ್ನೋ ಮನೆಗೆ ಕರೆದುಕೊಂಡು ಬಂದು, ನನ್ನ ಕಣ್ಣೀರನ್ನು ಹರಿಸಿದಿರಿ. ನಾನು ಅವರೆಲ್ಲರ ಚಾಕರಿಯನ್ನೂ ಮಾಡಿದೆನು."

ಆ ಬಾಣಗಳೆಲ್ಲ ತೀಕ್ಷ್ಣವಾಗಿದ್ದವು. ಕೆಲವು ನನ್ನಲ್ಲಿ ಆಳವಾಗಿ ನಾಟಿದುವು. ಆದರೆ ಒಡವೆಗಳನ್ನು ಹಿಂದಿರುಗಿಸಬೇಕೆಂಬುದು ನನ್ನ ದೃಢಸಂಕಲ್ಪವಾಗಿದ್ದಿತು. ಹೇಗೋ ಅವಳ ಒಪ್ಪಿಗೆಯನ್ನು ಪಡೆದು ಕೊಂಡೆನು. ೧೮೯೬ರಲ್ಲಿ ಮತ್ತು ೧೯೦೧ರಲ್ಲಿ ನನಗೆ ದೊರೆತಿದ್ದ ಬಹುಮಾನಗಳನ್ನೆಲ್ಲ ಹಿಂದಿರುಗಿಸಿದೆನು. ಒಂದು ಟ್ರಸ್ಟ್ ಮಾಡಿ ಪತ್ರವನ್ನು ಬರೆದುಕೊಟ್ಟೆನು. ಒಡವೆಗಳನ್ನು ನನ್ನ ಅಥವಾ ಧರ್ಮದರ್ಶಿಗಳ ಅಭಿಪ್ರಾಯಕ್ಕನುಗುಣವಾಗಿ, ದಕ್ಷಿಣ ಆಫ್ರಿಕಾದ ಭಾರತೀಯರ ಸೇವೆಗೆ ವಿನಿಯೋಗಿಸಬೇಕೆಂದು, ಒಂದು ಬ್ಯಾಂಕಿನಲ್ಲಿ ಅವುಗಳನ್ನು ಇಟ್ಟೆವು.

ಸಾರ್ವಜನಿಕ ಕಾರ್ಯಗಳಿಗಾಗಿ ನನಗೆ ಹಣಬೇಕಾಗಿ ಅದನ್ನು ಟ್ರಸ್ಟಿನಿಂದ ತೆಗೆದುಕೊಳ್ಳಬೇಕೆಂದು ತೋರಿದಾಗಲೆಲ್ಲ, ಟ್ರಸ್ಟನ್ನು ಮುಟ್ಟದೆಯೇ ನನಗೆ ಬೇಕಾದ ಹಣವನ್ನು ಕೂಡಿಸಿದ್ದೇನೆ. ಟ್ರಸ್ಟ್ ಈಗಲೂ ಇದೆ. ಆವಶ್ಯಕವಾದಾಗ ಉಪಯೋಗವಾಗುತ್ತಿದೆ ಮತ್ತು ಅದು ಕ್ರಮವಾಗಿ ಹೆಚ್ಚುತ್ತಲೂ ಇದೆ.

ನನ್ನ ಈ ಕಾರ್ಯದಿಂದ ನನಗೆ ಎಂದಿಗೂ ಪಶ್ಚಾತ್ತಾಪವುಂಟಾಗಿಲ್ಲ. ದಿನಗಳು ಕಳೆದಂತೆ, ನನ್ನ ಹೆಂಡತಿಗೂ ಅದರ ಔಚಿತ್ಯ ಗೊತ್ತಾಗುತ್ತಾ ಬಂದಿದೆ. ಅದು ನಮ್ಮನ್ನು ಅನೇಕ ದುರಾಸೆಗಳಿಂದ ರಕ್ಷಿಸಿದೆ.

ಸಾರ್ವಜನಿಕ ಕೆಲಸಗಾರ, ಬೆಲೆಯಾದ ಬಹುಮಾನಗಳನ್ನು ಸ್ವೀಕರಿಸ ಕೂಡದೆಂಬುದು ನನ್ನ ಸ್ಪಷ್ಟ ಅಭಿಪ್ರಾಯವಾಗಿದೆ.

೧೩

ಪುನಃ ಭಾರತದಲ್ಲಿ

ಹೀಗೆ ನಾನು ಹಡಗಿನಲ್ಲಿ ಭಾರತಕ್ಕೆ ಹೊರಟೆನು. ದಾರಿಯಲ್ಲಿ ಮಾರಿಷಸ್ ರೇವಿನಲ್ಲಿ ಹಡಗು ನಿಲ್ಲುವುದಾಗಿದ್ದಿತು. ಅಲ್ಲಿ ಹಡಗು ಸ್ವಲ್ಪ ಹೆಚ್ಚು ಕಾಲವೇ ನಿಲ್ಲುತ್ತಿದ್ದುದರಿಂದ ನಾನು ಅಲ್ಲಿ ಇಳಿದು ಮಾರಿಷಸ್‌ನ ಸ್ಥಿತಿಗತಿಗಳನ್ನು ಚೆನ್ನಾಗಿಯೇ ತಿಳಿದುಕೊಂಡೆನು. ನಾನು ಒಂದು ದಿನ ಅಲ್ಲಿನ ಗವರ್ನರ್ ಆದ ಸರ್ ಚಾರ್ಲ್ಸ್ ಬ್ರೂಸರ ಅತಿಥಿಯಾಗಿದ್ದೆನು.

ಭಾರತವನ್ನು ತಲುಪಿದಮೇಲೆ, ಸ್ವಲ್ಪ ಕಾಲ ದೇಶದಲ್ಲೆಲ್ಲ ಸುತ್ತಾಡಿದೆನು. ಅದು ೧೯೦೧ನೆ ವರುಷ. ಕಾಂಗ್ರೆಸ್ ಮಹಾಸಭೆ ಶ್ರೀ (ಈಚೆಗೆ ಸರ್) ದಿನಷ್ ವಾಚಾರವರ ಅಧ್ಯಕ್ಷತೆಯಲ್ಲಿ ಕಲ್ಕತ್ತಾದಲ್ಲಿ ಸೇರಿದ್ದಿತು. ನಾನು ಆ ಸಭೆಗೆ ಹೋದೆನು. ಅದೇ ನನಗೆ ಕಾಂಗ್ರೆಸ್ ಮಹಾಸಭೆಯ ಮೊದಲನೆಯ ಅನುಭವ.

ನಾನು ಬೊಂಬಾಯಿನಿಂದ, ಸರ್ ಫಿರೋಜ್‌ಷಾ ಮೆಹತಾ ಪ್ರಯಾಣ ಮಾಡುತ್ತಿದ್ದ ರೈಲುಗಾಡಿಯಲ್ಲಿಯೇ ಪ್ರಯಾಣಮಾಡಿದೆನು. ಅವರೊಂದಿಗೆ ನಾನು ದಕ್ಷಿಣ ಆಫ್ರಿಕಾದ ವಿಷಯಗಳನ್ನು ಕುರಿತು ಮಾತನಾಡಬೇಕಾಗಿದ್ದಿತು. ಅವರು ರಾಜವೈಭವದಿಂದ ಜೀವನ ನಡೆಸುತ್ತಿದ್ದುದು ನನಗೆ ಗೊತ್ತಿದ್ದಿತು. ಅವರು ತಮಗಾಗಿಯೇ ಒಂದು ವಿಶೇಷ ಗಾಡಿ (ಸೆಲೂನ್) ಯನ್ನು ಗೊತ್ತುಮಾಡಿಕೊಂಡಿದ್ದರು. ಮಧ್ಯ ಮಾರ್ಗದಲ್ಲಿ ಸ್ವಲ್ಪ ಕಾಲ ಅವರ ಗಾಡಿಯಲ್ಲಿ ಕುಳಿತು ಅವರೊಡನೆ ಮಾತನಾಡಬೇಕೆಂದು ನನಗೆ ಅಪ್ಪಣೆಯಾಗಿದ್ದಿತು. ಆದುದರಿಂದ ನಾನು, ಮೊದಲೇ ಗೊತ್ತಾಗಿದ್ದ ಸ್ಟೇಷನ್ನಿನಲ್ಲಿ ಅವರ ಗಾಡಿಗೆ ಹೋಗಿ ಅವರನ್ನು ಕಂಡೆನು. ಅವರೊಂದಿಗೆ

ಸರ್ ದಿನ್‌ಷಾ ವಾಚಾ ಮತ್ತು ಸರ್ ಚಿಮನ್‌ಲಾಲ್ ಸೆಟಲ್‌ವಾಡ್, ರಾಜಕೀಯ ವಿಷಯಗಳನ್ನು ಚರ್ಚಿಸುತ್ತಾ ಕುಳಿತಿದ್ದರು. ಸರ್ ಫಿರೋಜ್ ಷಾ ನನ್ನನ್ನು ನೋಡಿದ ಕೂಡಲೇ "ಗಾಂಧೀ ನಿಮಗಾಗಿ ಏನನ್ನೂ ಮಾಡಲು ಸಾಧ್ಯವಾಗುವಂತೆ ಕಾಣುವುದಿಲ್ಲ. ನೀವು ಹೇಳುವ ನಿರ್ಣಯವನ್ನೇನೋ ಅಂಗೀಕರಿಸುತ್ತೇವೆ. ಆದರೆ ನಮ್ಮ ದೇಶದಲ್ಲಿಯೇ ನಮಗೆ ಯಾವ ಹಕ್ಕುಗಳು ಇವೆ? ನಮ್ಮ ದೇಶದಲ್ಲಿ ನಮಗೆ ಅಧಿಕಾರ ದೊರೆಯುವವರೆಗೆ ವಸಾಹತುಗಳಲ್ಲಿ ನಿಮ್ಮ ಸ್ಥಿತಿ ಉತ್ತಮವಾಗುವುದಿಲ್ಲವೆಂಬುದು ನನ್ನ ಮತ" ಎಂದರು.

ಅದನ್ನು ಕೇಳಿ ನಾನು ಸ್ತಂಭಿತನಾದೆನು. ಶ್ರೀ ಸೆಟಲ್‌ವಾಡರು ಆ ಅಭಿಪ್ರಾಯವನ್ನೇ ಒಪ್ಪಿದಂತೆ ತೋರಿತು. ದಿನ್‌ಷಾರವರು ನನ್ನನ್ನು ದಯಾದೃಷ್ಟಿಯಿಂದ ನೋಡಿದರು.

ನಾನು ಸರ್ ಫಿರೋಜ್‌ಷಾರವರನ್ನು ಒಡಂಬಡಿಸುವುದಕ್ಕೆ ಪ್ರಯತ್ನಿಸಿದೆನು. ಆದರೆ ಬೊಂಬಾಯಿನ ಅನಭಿಷಿಕ್ತ ರಾಜನನ್ನು ನಾನು ಒಪ್ಪಿಸುವುದೆಂದರೇನು? ನಿರ್ಣಯವನ್ನು ಸಭೆಯ ಮುಂದೆ ಇಡಲು ನನಗೆ ಅವಕಾಶ ದೊರೆತ ಕಷ್ಟದಿಂದಲೇ ನಾನು ತೃಪ್ತನಾಗಬೇಕಾಯಿತು.

ನನಗೆ ಪ್ರೋತ್ಸಾಹ ಕೊಡಬೇಕೆಂದು ಮಿ. ವಾಚಾರವರು "ನಿಮ್ಮ ನಿರ್ಣಯವನ್ನು ನನಗ ತೋರಿಸುವಿರಷ್ಟೆ," ಎಂದು ಕೇಳಿದರು. ನಾನು ಅವರನ್ನು ವಂದಿಸಿ ಮುಂದಿನ ಸ್ಟೇಷನ್‌ನಲ್ಲಿ ನನ್ನ ಗಾಡಿಗೆ ಹೋದೆನು.

ಹೀಗೆ ನಾವು ಕಲ್ಕತ್ತಾವನ್ನು ತಲುಪಿದೆವು. ಅಧ್ಯಕ್ಷರನ್ನು ಸ್ವಾಗತ ಸಮಿತಿಯವರು ವೈಭವದಿಂದ ಅವರ ಬಿಡಾರಕ್ಕೆ ಕರೆದುಕೊಂಡು ಹೋದರು. ನಾನು ಎಲ್ಲಿ ಇಳಿದುಕೊಳ್ಳಬೇಕು ಎಂದು ಒಬ್ಬ ಸ್ವಯಂಸೇವಕನನ್ನು ಕೇಳಿದೆನು. ಆತ ನನ್ನನ್ನು ರಿಪನ್ ಕಾಲೇಜಿಗೆ ಕರೆದುಕೊಂಡು ಹೋದನು. ಅದು ಪ್ರತಿನಿಧಿಗಳ ಬಿಡಾರವಾಗಿದ್ದಿತು. ನನ್ನ ಅದೃಷ್ಟ ಚೆನ್ನಾಗಿದ್ದಿತು. ಲೋಕಮಾನ್ಯರ ಬಿಡಾರವೂ ಅದೇ ಆಗಿದ್ದಿತು. ಅವರು ನಾನು ಹೋದ ಮರು ದಿವಸ ಅಲ್ಲಿಗೆ ಬಂದರೆಂದು ನೆನಪು.

ಸಹಜವಾಗಿ ಲೋಕಮಾನ್ಯರಿದ್ದ ಕಡೆ, ಒಂದು ಸಣ್ಣ ದರಬಾರ್ ಇದ್ದೇ ಇರುತ್ತಿತ್ತು. ನಾನು ಒಬ್ಬ ಚಿತ್ರಗಾರನಾಗಿದ್ದರೆ ಹಾಸಿಗೆಯ

ಮೇಲೆ ಅವನು ಕುಳಿತಂತೆ ಅವರನ್ನು ಚಿತ್ರಿಸುತ್ತಿದ್ದೆನು. ಆ ಪೂರ್ಣ ದೃಶ್ಯ ನನ್ನ ಮನಸ್ಸಿನಲ್ಲಿ ಅಷ್ಟು ಸ್ಪಷ್ಟವಾಗಿ ಅಚ್ಚು ಒತ್ತಿದೆ. ಅವರನ್ನು ನೋಡಲು ಬಂದ ಅಸಂಖ್ಯಾತ ಜನರ ಪೈಕಿ, ಇಂದು ನನಗೆ ಜ್ಞಾಪಕವಿರುವುದು ಒಬ್ಬರು ಮಾತ್ರ. ಅಮೃತ ಬಜಾರ್ ಪತ್ರಿಕೆಯ ಸಂಪಾದಕರಾದ ದಿವಂಗತ ಬಾಬು ಮೋತಿಲಾಲ್ ಘೋಷರು. ಅವರ ಗಟ್ಟಿಯಾದ ನಗು ಮತ್ತು ಆಳ್ವಿಕೆಗಾರರ ಅನ್ಯಾಯಗಳನ್ನು ಕುರಿತ ಅವರ ಮಾತುಗಳು ಎಂದಿಗೂ ಮರೆಯುವಂತಿಲ್ಲ.

ಆಗಿನ ಆ ಬಿಡಾರದ ಸ್ಥಿತಿಗತಿಗಳನ್ನು ಕುರಿತು ಸ್ವಲ್ಪ ವಿವರವಾಗಿ ಪರಿಶೀಲಿಸುವುದು ನನ್ನ ಉದ್ದೇಶ. ಸ್ವಯಂಸೇವಕರು, ಒಬ್ಬರಿಗೊಬ್ಬರು ಅಡ್ಡಿ ಬರುತ್ತಿದ್ದರು. ಒಬ್ಬನಿಗೆ ನೀವು ಒಂದು ಕೆಲಸಮಾಡು ಎಂದು ಹೇಳಿದರೆ, ಆತ ಅದನ್ನು ಮತ್ತೊಬ್ಬನಿಗೆ ಹೇಳುತ್ತಿದ್ದನು. ಅವನು ಮೂರನೆಯವನಿಗೆ, ಮೂರನೆಯವನು ನಾಲ್ಕನೆಯವನಿಗೆ ಹೀಗೆ ಆಗುತ್ತಿತ್ತು. ಪಾಪ ಪ್ರತಿನಿಧಿಗಳಿಗೆ ಏನು ಮಾಡಬೇಕೆಂಬುದು ಗೊತ್ತಾಗುತ್ತಿರಲಿಲ್ಲ.

ನಾನು ಕೆಲವು ಸ್ವಯಂಸೇವಕರೊಂದಿಗೆ ಗೆಳೆತನವನ್ನು ಬೆಳೆಸಿದೆನು. ಅವರಿಗೆ ದಕ್ಷಿಣ ಆಫ್ರಿಕಾದ ವಿಷಯವನ್ನು ಸ್ವಲ್ಪ ಹೇಳಿದೆನು. ಕೇಳಿ ಅವರಿಗೆ ನಾಚಿಕೆಯಾಯಿತು. ಸೇವೆಯ ಮರ್ಮವನ್ನು ಅವರಿಗೆ ಪರಿಚಯ ಮಾಡಿಕೊಡಲು ಪ್ರಯತ್ನಿಸಿದೆನು. ಅವರಿಗೆ ಅದು ಅರ್ಥವಾದಂತೆ ತೋರಿತು. ಆದರೆ ಸೇವೆ ಎಂಬುದು, ಇದ್ದಕ್ಕಿದ್ದಂತೆ ನಾಯಿಕೊಡೆಯಂತೆ ಬೆಳೆಯುವುದಿಲ್ಲ. ಅದಕ್ಕೆ ಮೊದಲು ಇಚ್ಛೆ ಇರಬೇಕು. ಅನಂತರ ಅನುಭವ, ಅಭ್ಯಾಸಬೇಕು. ಆದರೆ ಅವರಿಗೆ ಅನುಭವ ಇರಲಿಲ್ಲ. ಕಾಂಗ್ರೆಸ್, ವರ್ಷದಲ್ಲಿ ಮೂರು ದಿನ ಸಭೆ ಸೇರಿ, ಅನಂತರ ನಿದ್ರೆ ಹೋಗಿಬಿಡುತ್ತಿದ್ದಿತು. ವರುಷಕ್ಕೊಂದು ಸಲ, ಮೂರುದಿನ ಸೇರುವ ಪ್ರದರ್ಶನದಿಂದ, ಯಾವ ತಯಾರಿ ದೊರೆಯುತ್ತದೆ! ಮತ್ತು ಪ್ರತಿನಿಧಿಗಳೂ ಸ್ವಯಂಸೇವಕರಂತೆಯೇ ಇದ್ದರು. ಅವರಿಗೂ ಉತ್ತಮವಾದ ಅಥವಾ ಹೆಚ್ಚು ಕಾಲದ ಸಿದ್ಧತೆ ದೊರೆತಿರಲಿಲ್ಲ. ಅವರು ತಮ್ಮ ಯಾವ ಕಾರ್ಯವನ್ನೂ ತಾವೇ ಮಾಡಿಕೊಳ್ಳುತ್ತಿರಲಿಲ್ಲ. "ಸ್ವಯಂಸೇವಕರೇ ಇದನ್ನು ಮಾಡಿ, ಸ್ವಯಂ

ಸೇವಕರೇ ಅದನ್ನು ಮಾಡಿ” ಎಂಬುದೇ ಅವರ ಯಾವಾಗಿನ ಅಪ್ಪಣೆಯೂ ಆಗಿದ್ದಿತು.

ಇಲ್ಲಿಯೂ ಸಹ ಅಸ್ಪೃಶ್ಯತೆ, ತಕ್ಕ ಪ್ರಮಾಣದಲ್ಲಿ ನನ್ನನ್ನು ಎದುರಿಸಿತು. ತಮಿಳರ ಪಾಕಶಾಲೆ, ಇತರ ಪಾಕಶಾಲೆಗಳಿಗಿಂತ ದೂರದಲ್ಲಿದ್ದಿತು. ತಮಿಳು ಪ್ರತಿನಿಧಿಗಳು ಊಟಮಾಡುತ್ತಿರುವಾಗ ಇತರರು ಅವರನ್ನು ನೋಡಿದರೂ ಸಹ; ಅವರಿಗೆ ಮೈಲಿಗೆಯುಂಟಾಗುತ್ತಿದ್ದಿತು. ಆದುದರಿಂದ ಅವರಿಗೆ ಕಾಲೇಜು ಆವರಣದಲ್ಲಿ, ಇಟ್ಟಿಗೆ ಗೋಡೆಗಳಿಂದ ಮರೆಯಾದ ಒಂದು ಅಡಿಗೆ ಮನೆಯನ್ನು ಮಾಡಿದ್ದರು. ಅದರಲ್ಲಿ ಹೊಗೆ ತುಂಬಿ, ಉಸಿರಾಡುವುದು ಕಷ್ಟವಾಗಿದ್ದಿತು. ಅದೇ ಅಡಿಗೆ ಮನೆ, ಸ್ನಾನದ ಮನೆ ಬಚ್ಚಲು ಮನೆ ಎಲ್ಲ ಎಂಬಂತೆ ಆಗಿದ್ದಿತು. ಅದರಿಂದ ಹೊರಕ್ಕೆ ದಾರಿಯಿರಲಿಲ್ಲ. ಇದು ನನಗೆ ವರ್ಣ ಧರ್ಮದ ಆಭಾಸವಾಗಿ ತೋರಿತು. ಕಾಂಗ್ರೆಸ್ ಪ್ರತಿನಿಧಿಗಳಲ್ಲಿಯೇ ಇಂತಹ ಅಸ್ಪೃಶ್ಯತೆ, ಇದ್ದಮೇಲೆ, ಇವರನ್ನು ಆರಿಸಿ ಕಳುಹಿಸಿದ ಕ್ಷೇತ್ರದಲ್ಲಿ ಇನ್ನು ಎಷ್ಟರಮಟ್ಟಿಗೆ ಇರಬಹುದು ಎಂದು ನನ್ನಲ್ಲಿ ನಾನೇ ಹೇಳಿಕೊಂಡೆನು. ಈ ಯೋಚನೆಯಿಂದ ನಾನು ನಿಟ್ಟುಸಿರು ಬಿಟ್ಟೆನು.

ಕೊಳೆಗಂತೂ ಕೊನೆಯೇ ಇರಲಿಲ್ಲ. ಎಲ್ಲೆಲ್ಲಿಯೂ ನೀರು ಹಳ್ಳಹಳ್ಳವಾಗಿ ನಿಂತಿರುತ್ತಿದ್ದಿತು. ಕಕ್ಕಸುಗಳು ಬಹಳ ಕಡಿಮೆ ಸಂಖ್ಯೆಯಲ್ಲಿದ್ದವು. ಅವುಗಳ ದುರ್ಗಂಧವನ್ನು ನೆನೆಸಿಕೊಂಡರೆ ನನಗೆ ಈಗಲೂ ಮೈ ಜುಮ್ಮೆನ್ನುತ್ತದೆ. ಇದನ್ನು ನಾನು ಸ್ವಯಂಸೇವಕನಿಗೆ ತೋರಿಸಿದೆನು. ಅವನು ಸ್ಪಷ್ಟವಾಗಿ “ಇದು ನಮ್ಮ ಕೆಲಸವಲ್ಲ. ಜಾಡಮಾಲಿಯ ಕೆಲಸ” ಎಂದನು. “ನನಗೆ ಒಂದು ಪರಕೆಯನ್ನು ಕೊಡಿ” ಎಂದು ಕೇಳಿದೆನು. ಅತ, ಆಶ್ಚರ್ಯದಿಂದ ನನ್ನನ್ನೇ ನೋಡಿದನು. ನಾನು ಒಂದು ಪರಕೆಯನ್ನು ಒದಗಿಸಿಕೊಂಡು ಕಕ್ಕಸನ್ನು ಶುದ್ಧಿಮಾಡಿದೆನು. ಅದರೆ ಅದು ನನ್ನಷ್ಟಕ್ಕೇ ಆಯಿತು. ಜನರ ಗುಂಪು ಅಧಿಕವಾಗಿದ್ದಿತು. ಕಕ್ಕಸುಗಳು ಬಹಳ ಕಡಿಮೆ ಇದ್ದವು. ಅವುಗಳನ್ನು ಪದೇ ಪದೆ ಶುದ್ಧಿ ಮಾಡುವುದು ಆವಶ್ಯಕವಾಗಿದ್ದಿತು. ಅದು ನನ್ನ ಶಕ್ತಿಗೆ ಮೀರಿದ ಕಾರ್ಯವಾಗಿದ್ದಿತು. ಆದುದರಿಂದ ನಾನು ನನ್ನ ಕಾರ್ಯವನ್ನು ಮಾಡಿಕೊಂಡು ತೃಪ್ತನಾಗಬೇಕಾಯಿತು.

ಇತರರು ದುರ್ಗಂಧವನ್ನೂ ಕೊಳಕನ್ನೂ ಮನಸ್ಸಿಗೆ ಹಚ್ಚಿಕೊಂಡಂತೆ ತೋರಲಿಲ್ಲ.

ಇಷ್ಟೇ ಅಲ್ಲ ಕೆಲವು ಪ್ರತಿನಿಧಿಗಳು, ತಮ್ಮ ಕೊಠಡಿಗಳ ಹೊರ ಆವರಣವನ್ನೇ, ರಾತ್ರಿಯ ಹೊತ್ತು, ಪಾಯಖಾನೆ ಸ್ಥಳಗಳನ್ನಾಗಿ ಉಪಯೋಗಿಸಿಕೊಳ್ಳಲು ಹಿಂಜರಿಯಲಿಲ್ಲ. ಪ್ರಾತಃಕಾಲ ಆ ಸ್ಥಳಗಳನ್ನೆಲ್ಲ ನಾನು ಸ್ವಯಂಸೇವಕರಿಗೆ ತೋರಿಸಿದೆನು. ಸ್ವಚ್ಛತೆಯ ಕಾರ್ಯವನ್ನು ಮಾಡಲು ಯಾರೂ ಮುಂದಾಗಿ ಬರಲಿಲ್ಲ. ನಾನು ಮಾಡುತ್ತಿರುವಾಗ ನನ್ನ ಜತೆಯಲ್ಲಿ, ಆ ಗೌರವಕ್ಕೆ ಭಾಗಿಯಾಗಲೂ ಯಾರೂ ಸಿದ್ಧರಾಗಲಿಲ್ಲ. ಈಚೆಗೆ ಈ ವಿಷಯದಲ್ಲಿ ಎಷ್ಟೋ ಸುಧಾರಣೆಯಾಗಿದೆ. ಆದರೆ ಇಂದೂ ಸಹ ಕಾಂಗ್ರೆಸ್ ಆವರಣದಲ್ಲಿ ಎಲ್ಲಿ ಅಂದರೆ ಅಲ್ಲಿ ಮಲಮೂತ್ರ ವಿಸರ್ಜನೆ ಮಾಡಿ ಹೊಲಸು ಮಾಡುವ ಅವಿಚಾರಿ ಪ್ರತಿನಿಧಿಗಳು ಇಲ್ಲದೆ ಇಲ್ಲ, ಮತ್ತು ತತ್‌ಕ್ಷಣವೇ ಎಲ್ಲ ಸ್ವಯಂಸೇವಕರೂ ಅದನ್ನು ಶುದ್ಧಿ ಮಾಡಲು ಸದಾ ಸಿದ್ಧರಾಗಿರುವುದಿಲ್ಲ.

ಕಾಂಗ್ರೆಸ್ ಮಹಾಸಭೆಯ ಕಾರ್ಯಕಲಾಪಗಳು ಮುಂದುವರಿದರೆ ಸಾಂಕ್ರಾಮಿಕ ಜಾಡ್ಯ ಹರಡಲು, ಪರಿಸ್ಥಿತಿ ಅನುಕೂಲವಾಗಿದೆಯೆಂದು ನನಗೆ ತೋರಿತು.

೧೪

ಗುಮಾಸ್ತ ಮತ್ತು ಜವಾನ

ಕಾಂಗ್ರೆಸ್ ಮಹಾಸಭೆ ಪ್ರಾರಂಭವಾಗಲೂ ಇನ್ನೂ ಎರಡು ದಿನಗಳಿದ್ದುವು. ಕಾಂಗ್ರೆಸ್ ಕಛೇರಿಯಲ್ಲಿ ಕೆಲಸಗಾರನಾಗಿ ಸೇರಿ ಅನುಭವವನ್ನು ಪಡೆದುಕೊಳ್ಳಬೇಕೆಂದು ನಾನು ನಿರ್ಣಯಿಸಿಕೊಂಡಿದ್ದೆನು. ಆದುದರಿಂದ ಕಲ್ಕತ್ತೆಗೆ ಬಂದ ಕೂಡಲೇ, ನನ್ನ ನಿತ್ಯವಿಧಿಗಳನ್ನು ಮುಗಿಸಿಕೊಂಡು ಕಾಂಗ್ರೆಸ್ ಕಛೇರಿಗೆ ಹೋದೆನು.

ಬಾಬು ಭೂಪೇಂದ್ರನಾಥ ಬಸು ಮತ್ತು ಶ್ರೀ ಘೋಷಾಲ್‌ರವರು ಜನರಲ್ ಸೆಕ್ರಟರಿಗಳಾಗಿದ್ದರು. ನಾನು ಭೂಪೇಂದ್ರ ಬಾಬುರವರಲ್ಲಿ ಹೋಗಿ ನನ್ನ ಸೇವೆಯನ್ನು ಸ್ವೀಕರಿಸಬೇಕೆಂದು ಕೇಳಿಕೊಂಡೆನು. ಅವರು

"ಇಲ್ಲಿ ನೋಡಿ, ನನ್ನ ಬಳಿ ನಿಮಗೆ ಕೊಡುವುದಕ್ಕೆ ಯಾವ ಕೆಲಸವೂ ಇಲ್ಲ. ಆದರೆ ಘೋಷಾಲ್‌ರು ನಿಮಗೆ ಯಾವುದಾದರೂ ಕೆಲಸವನ್ನು ಕೊಡಬಹುದು. ಅವರಲ್ಲಿ ದಯವಿಟ್ಟು ಹೋಗಿ" ಎಂದು ಹೇಳಿದರು.

ಘೋಷಾಲರು ನನ್ನನ್ನು ಮೇಲೂ ಕೆಳಗೆ ನೋಡಿದರು. ಅನಂತರ ನಕ್ಕು "ನಾನು ನಿಮಗೆ ಗುಮಾಸ್ತೆಯ ಕೆಲಸವನ್ನು ಮಾತ್ರ ಕೊಡಬಲ್ಲೆನು. ನೀವು ಅದನ್ನು ಮಾಡುವಿರಾ ?" ಎಂದರು.

"ಅಗತ್ಯವಾಗಿ ನನ್ನ ಶಕ್ತಿಗೆ ಮೀರದಿರುವ ಯಾವ ಕೆಲಸವನ್ನಾದರೂ ಮಾಡುವುದಕ್ಕೇ ಇಲ್ಲಿ ಬಂದಿದ್ದೇನೆ" ಎಂದೆನು.

ಅವರು, "ಅದೀಗ ಸರಿಯಾದ ಭಾವನೆ" ಎಂದರು. ಅನಂತರ ಸುತ್ತ ನಿಂತಿದ್ದ ಸ್ವಯಂ ಸೇವಕರನ್ನು ಕುರಿತು "ಈ ಯುವಕ ಹೇಳುವುದನ್ನು ಕೇಳಿದಿರಾ ?" ಎಂದು ಕೇಳಿದರು.

ಅನಂತರ ನನ್ನ ಕಡೆ ತಿರುಗಿ "ಹಾಗಾದರೆ, ಇಲ್ಲಿ ಒಂದು ರಾಶಿ ಕಾಗದಗಳು ಬಂದು ಬಿದ್ದಿವೆ. ಅವುಗಳ ವ್ಯವಸ್ಥೆ ಮಾಡಬೇಕು. ಆ ಕುರ್ಚಿಯನ್ನು ಎಳೆದುಕೊಂಡು ಕೆಲಸ ಪ್ರಾರಂಭಿಸು. ನೀನೇ ನೋಡುತ್ತಿರುವಂತೆ ನನ್ನ ಬಳಿಗೆ ನೂರಾರು ಜನ ಬರುತ್ತಿದ್ದಾರೆ. ನಾನು ಇವರನ್ನು ನೋಡಲೊ ? ಅಥವಾ ನನ್ನನ್ನು ಈ ಕಾಗದಗಳಿಂದ ಮುಳುಗಿಸುತ್ತಿರುವ ಆ ಕೆಲಸವಿಲ್ಲದವರಿಗೆ ಪ್ರತ್ಯುತ್ತರ ಬರೆಯಲೋ ? ಈ ಕೆಲಸವನ್ನು ಮಾಡಬಲ್ಲ ಗುಮಾಸ್ತ ನನಗೆ ಇಲ್ಲ. ಇವುಗಳಲ್ಲಿ, ಹೆಚ್ಚು ಕಾಗದಗಳಲ್ಲಿ ಏನೂ ಇರುವುದೇ ಇಲ್ಲ. ಆದರೆ ನೀನು ದಯವಿಟ್ಟು ಈ ಪತ್ರಗಳನ್ನೆಲ್ಲ ಓದಿ ನೋಡು. ಈ ಕಾಗದಗಳಲ್ಲಿ ಯಾವುದಕ್ಕೆ "ತಲಪಿದೆ" ಎಂದು ಉತ್ತರ ಕೊಡಬೇಕೋ ಅದಕ್ಕೆ ಹಾಗೆ ಉತ್ತರ ಕೊಡು. ಉತ್ತರ ಕೊಡುವುದಕ್ಕೆ ಮುಂಚೆ, ಯೋಚನೆ ಮಾಡಬೇಕಾದ ಅಂಶಗಳಿದ್ದರೆ, ಆ ಕಾಗದಗಳನ್ನು ನನಗೆ ಕೊಡು" ಎಂದು ಹೇಳಿದರು.

ಅವರು ನನ್ನಲ್ಲಿಟ್ಟ ಈ ನಂಬಿಕೆಯಿಂದ ನನಗೆ ಸಂತೋಷವಾಯಿತು.

ನನಗೆ ಈ ಕೆಲಸವನ್ನು ಕೊಟ್ಟಾಗ ಶ್ರೀ ಘೋಷಾಲ್‌ರಿಗೆ ನನ್ನ ಪರಿಚಯವಿರಲಿಲ್ಲ. ನನ್ನ ಗುರುತು ಪರಿಚಯವನ್ನು ಅವರು ಆ ಮೇಲೆ ಕೇಳಿ ತಿಳಿದುಕೊಂಡರು.

ಕಾಗದಗಳ ರಾಶಿಯನ್ನು ಕರಗಿಸುವ ಕೆಲಸ ನನಗೆ ಸುಲಭವಾಗಿ ತೋರಿತು. ಅದನ್ನು ನಾನು ಬಹು ಬೇಗ ಮುಗಿಸಿದೆನು. ಶ್ರೀ ಘೋಷಾಲ್‌ರಿಗೆ ತುಂಬ ಸಂತೋಷವುಂಟಾಯಿತು. ಅವರದು ಹೆಚ್ಚು ಮಾತಾನಾಡುವ ಸ್ವಭಾವ. ಅವರು ಗಂಟೆಗಟ್ಟಲೆ ಮಾತನಾಡುತ್ತಿದ್ದರು. ನಾನು ಯಾರೆಂದು ತಿಳಿದುಕೊಂಡ ಮೇಲೆ, ನನಗೆ ಗುಮಾಸ್ತೆಯ ಕೆಲಸವನ್ನು ಕೊಟ್ಟುದಕ್ಕೆ ಅವರಿಗೆ ಸ್ವಲ್ಪ ಪಶ್ಚಾತ್ತಾಪವುಂಟಾಯಿತು. ಆದರೆ ನಾನು ಅವರನ್ನು ಸಮಾಧಾನ ಪಡಿಸಿದೆನು. "ಇದನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡಿ. ನಿಮ್ಮ ಮುಂದೆ ನಾನು ಎಷ್ಟರವನು ? ಕಾಂಗ್ರೆಸ್ ಸೇವೆಯಲ್ಲಿಯೇ ನೀವು ಮುದುಕರಾಗಿದ್ದೀರಿ. ನೀವು ನನಗೆ ಹಿರಿಯರು. ನಾನು ಅನನುಭವಿ ಯುವಕ. ಈ ಕೆಲಸವನ್ನು ನನಗೆ ವಹಿಸಿ, ನೀವು ಬಹಳ ಉಪಕಾರ ಮಾಡಿದಿರಿ. ನನಗೆ ಕಾಂಗ್ರೆಸ್ ಕೆಲಸ ಮಾಡಲು ಇಷ್ಟ. ಅದನ್ನು ವಿವರವಾಗಿ ತಿಳಿದುಕೊಳ್ಳುವ ಈ ಅಪೂರ್ವ ಅವಕಾಶವನ್ನು ನೀವು ನನಗೆ ಕಲ್ಪಿಸಿಕೊಟ್ಟಿದ್ದೀರಿ" ಎಂದು ಹೇಳಿದೆನು.

ಅವರು "ನಿಜ ಹೇಳಬೇಕಾದರೆ, ಅದೇ ಸರಿಯಾದ ಮನೋಭಾವನೆ. ಆದರೆ ಇಂದಿನ ಯುವಕರಿಗೆ ಅದು ಅರ್ಥವಾಗಿಲ್ಲ. ನನಗೆ ಕಾಂಗ್ರೆಸ್ಸು, ಅದರ ಜನ್ಮಕಾಲದಿಂದಲೂ ಗೊತ್ತು. ಕಾಂಗ್ರೆಸ್, ಸ್ಥಾಪನೆಯಾಗಲು ಮಿ. ಹ್ಯೂಮ್‌ರೊಂದಿಗೆ ನನ್ನ ಭಾಗವೂ ಸ್ವಲ್ಪ ಇದ್ದಿತೆಂದು ನಾನು ಹೇಳಿಕೊಳ್ಳಬಹುದು" ಎಂದರು.

ಹೀಗೆ ನಾವು ಮಿತ್ರರಾದೆವು. ನಾನು ಅವರ ಜತೆ ಊಟಮಾಡಬೇಕೆಂದು ಅವರು ನನ್ನನ್ನು ಒತ್ತಾಯ ಪಡಿಸಿದರು.

ಶ್ರೀ ಘೋಷಾಲರ ಷರಟಿನ ಗುಂಡಿಯನ್ನು ಅವರ ಜವಾನನು ಹಾಕುತ್ತಿದ್ದನು. ಈ ಜವಾನನ ಕಾರ್ಯವನ್ನು ಮಾಡಲು ನಾನೇ ಮುಂದಾದೆನು. ಅಂಥ ಸೇವೆ ಮಾಡುವುದರಲ್ಲಿ ನನಗೆ ಸಂತೋಷವಿದ್ದಿತು. ಏಕೆಂದರೆ ಹಿರಿಯರ ವಿಷಯದಲ್ಲಿ ನನಗೆ ಯಾವಾಗಲೂ ಗೌರವ. ಇದು ಅವರಿಗೆ ತಿಳಿದಾಗ, ನಾನು ಅವರ ಸಣ್ಣ ಸಣ್ಣ ಸೇವೆ ಮಾಡುವುದರಿಂದ ಅವರಿಗೆ ಸಂಕೋಚವುಂಟಾಗಲಿಲ್ಲ. "ಗುಂಡಿಯನ್ನು ಹಾಕು" ಎಂದು ಅವರು ನನಗೆ ಹೇಳುತ್ತಾ "ಈಗ ನೋಡು ತನ್ನ ಷರಟಿನ ಗುಂಡಿಯನ್ನು ಹಾಕಿ

ಕೊಳ್ಳುವುದಕ್ಕೂ ಕಾಂಗ್ರೆಸ್ ಸೆಕ್ರೆಟರಿಗೆ ಸಮಯವಿಲ್ಲ. ಅವನಿಗೆ ಯಾವಾಗಲೂ ಬೇರೆ ಕೆಲಸವಿರುತ್ತದೆ" ಎನ್ನುತ್ತಿದ್ದರು. ಈ ಸರಳತೆಯಿಂದ ನನಗೆ ವಿನೋದವಾದರೂ, ಆ ಬಗೆಯ ಸೇವೆಯಲ್ಲಿ ನನಗೆ ಅತೃಪ್ತಿಯುಂಟಾಗಲಿಲ್ಲ. ಈ ಸೇವೆ ಮಾಡುವುದರಿಂದ ನನಗೆ ದೊರೆತ ಲಾಭ ಅಮೌಲ್ಯವಾದುದು.

ಕೆಲವು ದಿನಗಳಲ್ಲಿ ನನಗೆ ಕಾಂಗ್ರೆಸ್ ಕಾರ್ಯಕ್ರಮಗಳೆಲ್ಲ ಗೊತ್ತಾದುವು. ನಾನು ಮುಖಂಡರ ಪೈಕಿ ಅನೇಕರ ಪರಿಚಯ ಮಾಡಿಕೊಂಡೆನು. ಸುರೇಂದ್ರನಾಥ್, ಗೋಖಲೆ ಮುಂತಾದ ಅತಿರಥ ಮಹಾರಥರ ಚಲನವಲನಗಳನ್ನು ತಿಳಿದುಕೊಂಡೆನು. ಕಾಂಗ್ರೆಸ್ಸಿನಲ್ಲಿ ಸಮಯ, ಬಹಳವಾಗಿ ಪೋಲಾಗುತ್ತಿರುವುದನ್ನೂ ನೋಡಿದೆನು. ಇಂಗ್ಲಿಷ್ ಭಾಷೆಗೆ, ನಮ್ಮ ಕಾರ್ಯ ಕಲಾಪಗಳಲ್ಲಿ ಕೊಡುತ್ತಿದ್ದ ಪ್ರಾಮುಖ್ಯತೆಯನ್ನು ಆಗಲೂ ದುಃಖದಿಂದ ಗಮನಿಸಿದೆನು. ಮನುಷ್ಯ ಶಕ್ತಿಯ ವೆಚ್ಚದಲ್ಲಿ ಮಿತವ್ಯಯವಿರಲಿಲ್ಲ. ಒಬ್ಬ ಮಾಡುವ ಕಾರ್ಯವನ್ನೇ ಅನೇಕರು ಮಾಡುತ್ತಿದ್ದರು. ಅತಿ ಮುಖ್ಯವಾದ ಅನೇಕ ಕಾರ್ಯಗಳನ್ನು ಯಾರೂ ಮಾಡುತ್ತಲೇ ಇರಲಿಲ್ಲ.

ಇವುಗಳನ್ನೆಲ್ಲಾ ನೋಡುವುದರಲ್ಲಿ ನನ್ನ ವಿಮರ್ಶಾಬುದ್ಧಿ ಜಾಗ್ರತವಾಗಿದ್ದರೂ ನನ್ನ ಹೃದಯದಲ್ಲಿ ಔದಾರ್ಯವೂ ಇದ್ದಿತು. ಆದುದರಿಂದ, ಪರಿಸ್ಥಿತಿಯಲ್ಲಿ ಇದಕ್ಕಿಂತ ಉತ್ತಮವಾಗಿ ಮಾಡಲು ಸಾಧ್ಯವಿಲ್ಲದಿರಬಹುದೆಂದು ನಾನು ಭಾವಿಸಿದೆನು. ಇದರಿಂದ ಯಾವ ಕೆಲಸಕ್ಕೂ ನಾನು ಕಡಿಮೆ ಬೆಲೆಯನ್ನು ಕಟ್ಟುವವನಾಗಲಿಲ್ಲ.

೧೫

ಕಾಂಗ್ರೆಸ್ ಮಹಾಸಭೆಯಲ್ಲಿ

ಕೊನೆಗೆ ಕಾಂಗ್ರೆಸ್ ಮಹಾಸಭೆ ಪ್ರಾರಂಭವಾಯಿತು. ಭವ್ಯವಾದ ಸಭಾಂಗಣ, ಗಂಭೀರವಾದ ಸಮವಸ್ತ್ರಗಳಿಂದ ರಾಜಿಸುತ್ತಿದ್ದ ಸ್ವಯಂಸೇವಕ ದಳದ ವ್ಯೂಹರಚನೆ ; ವೇದಿಕೆಯ ಮೇಲೆ ಮಂಡಿಸಿದ್ದ ಹಿರಿಯರು ಇವರನ್ನೆಲ್ಲ ನೋಡಿ ನಾನು ಆಶ್ಚರ್ಯ ಚಕಿತನಾದೆನು. "ಈ ವಿಶಾಲವಾದ ಸಭೆ ಎಲ್ಲಿ ನಾನೆಲ್ಲಿ ?" ಎಂದು ನನಗೆ ತೋರಿತು.

ಸಭಾಪತಿಗಳ ಭಾಷಣ ಒಂದು ಪುಸ್ತಕವೇ ಆಗಿದ್ದಿತು. ಅದನ್ನು ಮೊದಲಿನಿಂದ ಕೊನೆಯವರೆಗೆ ಓದುವ ಪ್ರಶ್ನೆಯೇ ಇರಲಿಲ್ಲ. ಅಲ್ಲಲ್ಲಿ ಕೆಲವು ಭಾಗಗಳನ್ನು ಮಾತ್ರ ಸಭಾಪತಿಗಳು ಓದಿದರು. ಇದಾದ ಮೇಲೆ ವಿಷಯ ನಿಯಾಮಕ ಸಮಿತಿಗೆ ಸದಸ್ಯರನ್ನು ಆರಿಸಿದರು. ಗೋಖಲೆಯವರು ನನ್ನನ್ನು ಸಮಿತಿಯ ಸಭೆಗಳಿಗೆ ಕರೆದೊಯ್ದರು.

ಸರ್ ಫಿರೋಜ್‌ಷಾ ರವರೇನೋ ನನ್ನ ನಿರ್ಣಯವನ್ನು ಸಭೆಯ ಮುಂದೆ ಇಡಲು ಅನುಮತಿ ಕೊಟ್ಟಿದ್ದರು. ಆದರೆ ಅದನ್ನು ವಿಷಯ ನಿಯಾಮಕ ಸಮಿತಿಯ ಮುಂದೆ ಯಾರು, ಯಾವಾಗ ಇಡುತ್ತಾರೆ ಎಂಬು ದನ್ನು ನಾನು ಯೋಚಿಸುತ್ತಿದ್ದೆನು. ಏಕೆಂದರೆ ಪ್ರತಿಯೊಂದು ನಿರ್ಣಯ ವನ್ನು ಸಭೆಯ ಮುಂದೆ ಇಟ್ಟಾಗಲೂ ಉದ್ದುದ್ದವಾದ ಭಾಷಣಗಳಾಗುತ್ತಿ ದ್ದವು. ಸಾಲದುದಕ್ಕೆ ಇಂಗ್ಲಿಷಿನಲ್ಲಿ ಪ್ರತಿಯೊಂದು ನಿರ್ಣಯಕ್ಕೂ ಬೆಂಬಲ ಕೊಡಲು ಒಬ್ಬೊಬ್ಬ ಪ್ರಸಿದ್ಧರಾದ ವಾಗ್ಮಿಗಳಿದ್ದರು. ಈ ಭೇರಿ ನಗಾರಿ ಗಳ ಮಧ್ಯದಲ್ಲಿ ನನ್ನ ನಿಶ್ಯಕ್ತ ಪಿಳ್ಳಂಗೋವಿಯನ್ನು ಕೇಳುವವರಾರು ? ರಾತ್ರಿ ಯಾಗುತ್ತಾ ಬಂದಂತೆ ನನ್ನ ಎದೆ ಡವಡವನೆ ಹೊಡೆದುಕೊಳ್ಳತೊಡಗಿತು. ಸಭೆಯ ಕೊನೆಗೆ ತೆಗೆದುಕೊಳ್ಳುತ್ತಿದ್ದ ನಿರ್ಣಯಗಳನ್ನು, ಮಿಂಚಿನ ವೇಗ ದಲ್ಲಿ ಮುಗಿಸಿಬಿಡುತ್ತಿದ್ದರೆಂದು ನನಗೆ ನೆನಪು. ಎಲ್ಲರೂ ಹೊರಡಲು ಆತುರ ರಾಗಿದ್ದರು. ಆಗಲೇ ರಾತ್ರಿ ಹನ್ನೊಂದು ಗಂಟೆಯಾಗಿದ್ದಿತು. ನಾನು ಗೋಖಲೆಯವರನ್ನು ನೋಡಿ ಹೇಳಿದ್ದೆನು. ಅವರು ಆಗಲೇ ನನ್ನ ನಿರ್ಣಯ ವನ್ನು ಓದಿದ್ದರು. ಆದುದರಿಂದ ನಾನು ಅವರು ಕುಳಿತಿದ್ದೆಡೆಗೆ ಹೋಗಿ "ನೀವು ನನಗೆ ಸಹಾಯ ಮಾಡಬೇಕು" ಎಂದು ಹೇಳಿದೆನು. ಅವರು ಹೇಗೆ ಓದಿಸಿಕೊಂಡು ಹೋಗುತ್ತಿದ್ದಾರೆ ನೋಡು. ಆದರೆ ನಿನ್ನ ನಿರ್ಣಯವನ್ನು ಮರೆಯಗೊಡುವುದಿಲ್ಲ" ಎಂದರು.

ಆ ವೇಳೆಗೆ ಸರ್ ಫಿರೋಜ್‌ಷಾ ಮೆಹತಾರವರು "ಅಂತೂ ನಮ್ಮ ಕಾರ್ಯ ಮುಗಿಯಿತು" ಎಂದರು.

ಗೋಖಲೆಯವರು "ಇಲ್ಲ, ಇಲ್ಲ, ದಕ್ಷಿಣ ಆಫ್ರಿಕಾವನ್ನು ಕುರಿತ ನಿರ್ಣಯ ಇನ್ನೂ ಆಗಿಲ್ಲ. ಮಿ. ಗಾಂಧೀ ತುಂಬ ಹೊತ್ತಿನಿಂದ ಕಾಯುತ್ತಿ ದ್ದಾರೆ" ಎಂದು ಕೂಗಿದರು.

ಸರ್ ಫಿರೋಜ್‌ರು "ನೀವು ನಿರ್ಣಯವನ್ನು ನೋಡಿದ್ದೀರಾ ?" ಎಂದು ಕೇಳಿದರು.

"ಹೌದು, ಓದಿದ್ದೇನೆ."

"ಅದು ನಿಮಗೆ ಒಪ್ಪಿಗೆ ತಾನೆ ?"

"ನಿರ್ಣಯ ಚೆನ್ನಾಗಿದೆ"

"ಹಾಗಾದರೆ ಒಳ್ಳೆಯದು. ಗಾಂಧೀ, ನಿರ್ಣಯವನ್ನು ಸಭೆಯ ಮುಂದೆ ಇಡು."

ನಾನು ನಡುಗುತ್ತಾ ನಿರ್ಣಯವನ್ನು ಓದಿದೆನು. ಗೋಖಲೆ ಅದನ್ನು ಅನುಮೋದಿಸಿದರು.

"ಸರ್ವಾನುಮತದಿಂದ ಅಂಗೀಕೃತವಾಗಿದೆ" ಎಂದು ಎಲ್ಲರೂ ಕೂಗಿದರು.

"ಅದರ ಮೇಲೆ ಮಾತನಾಡಲು ನಿಮಗೆ ಐದು ನಿಮಿಷ ಅವಕಾಶವಿದೆ ಗಾಂಧೀ" ಎಂದರು ಮಿ. ವಾಚಾ.

ಆ ಕ್ರಮದಿಂದ ನನಗೆ ಸಂತೋಷವಾಗಲಿಲ್ಲ. ನಿರ್ಣಯವನ್ನು ಅರ್ಥ ಮಾಡಿಕೊಳ್ಳಲು ಯಾರೂ ಶ್ರಮಪಡಲಿಲ್ಲ. ಪ್ರತಿಯೊಬ್ಬರೂ ಹೊರಡಲು ಆತುರರಾಗಿದ್ದರು. ಗೋಖಲೆಯವರು ನಿರ್ಣಯವನ್ನು ನೋಡಿದ್ದುದರಿಂದ ಇತರರು ಅದನ್ನು ಓದುವುದಾಗಲೀ ಅರ್ಥಮಾಡಿಕೊಳ್ಳುವುದಾಗಲೀ ಅವಶ್ಯಕವೆಂದು ಭಾವಿಸಲಿಲ್ಲ.

ಪ್ರಾತಃಕಾಲ, ನನ್ನ ಭಾಷಣವನ್ನು ಕುರಿತೇ ನಾನು ಚಿಂತಿಸುತ್ತಿದ್ದೆ. ಐದು ನಿಮಿಷಗಳಲ್ಲಿ ನಾನು ಹೇಳುವುದು ತಾನೇ ಏನನ್ನು ? ನಾನು ಭಾಷಣವನ್ನೇನೋ ಚೆನ್ನಾಗಿಯೇ ಸಿದ್ಧಮಾಡಿಕೊಂಡಿದ್ದೆನು. ಆದರೆ ಶಬ್ದಗಳು ಬಾಯಿಗೆ ಒದಗಿ ಬರುತ್ತಿರಲಿಲ್ಲ. ಭಾಷಣವನ್ನು ಬರೆದು ಓದಬಾರದು ಅಲ್ಲಿಯೇ ಎದ್ದು ನಿಂತು ತೋರಿದಂತೆ ಮಾತನಾಡಬೇಕು ಎಂದು ನಿಶ್ಚಯಿಸಿಕೊಂಡಿದ್ದೆನು. ಆದರೆ ನಾನು ದಕ್ಷಿಣ ಆಫ್ರಿಕಾದಲ್ಲಿ ಸಂಪಾದಿಸಿದ್ದ ವಾಕ್ ಸೌಲಭ್ಯ, ಆ ಗಳಿಗೆಯಲ್ಲಿ ನನ್ನನ್ನು ಬಿಟ್ಟು ಹೋಗಿದ್ದಂತೆ ತೋರಿತು.

ನನ್ನ ಠರಾವಿನ ಸಮಯ ಬಂದಕೂಡಲೇ ಮಿ. ವಾಚಾ ನನ್ನ ಹೆಸರು ಹಿಡಿದು ಕರೆದರು. ನಾನು ಎದ್ದು ನಿಂತುಕೊಂಡೆನು. ನನ್ನ ತಲೆ, ತಿರುಗು

ತ್ತಿದ್ದಿತು. ನಾನು ಹೇಗೋ ನಿರ್ಣಯವನ್ನು ಓದಿದೆನು. ಪರದೇಶದಲ್ಲಿ ಹೋಗಿ ನೆಲಸುವುದನ್ನು ಪ್ರಶಂಸಿಸಿ, ಒಬ್ಬರು ಒಂದು ಕವನವನ್ನು ಬರೆದು ಅದರ ಪ್ರತಿಗಳನ್ನು ಪ್ರತಿನಿಧಿಗಳಿಗೆಲ್ಲ ಹಂಚಿದ್ದರು. ನಾನು ಆ ಪದ್ಯವನ್ನು ಓದಿ, ದಕ್ಷಿಣ ಆಫ್ರಿಕಾದಲ್ಲಿ ಹೋಗಿ ನೆಲೆಸಿರುವ ಭಾರತೀಯರ ಕಷ್ಟಗಳ ವಿಷಯವನ್ನೆತ್ತಿದೆನು. ಅದೇ ಗಳಿಗೆಯಲ್ಲಿ ಮಿ. ವಾಚಾ ಗಂಟೆಯನ್ನು ಹೊಡೆದರು. ನಾನು ಐದು ನಿಮಿಷಗಳು ಮಾತನಾಡಿಲ್ಲವೆಂಬುದು ನನಗೆ ಸ್ಪಷ್ಟವಾಗಿದ್ದಿತು. ಇನ್ನು ಎರಡು ನಿಮಿಷಗಳೊಳಗಾಗಿ ಮುಗಿಸಬೇಕು ಎಂದು ನನ್ನನ್ನು ಎಚ್ಚರಿಸಲು, ಗಂಟೆಯನ್ನು ಬಾರಿಸಿದರೆಂಬುದು ನನಗೆ ಗೊತ್ತಾಗಲಿಲ್ಲ. ಇತರರು ಅರ್ಧ ಗಂಟೆ, ಮುಕ್ಕಾಲು ಗಂಟೆ ಮಾತನಾಡಿದುದನ್ನು ನಾನು ಕೇಳಿದ್ದೆನು. ಆದರೆ ಅವರು ಮಾತನಾಡುವಾಗ ಗಂಟೆಯನ್ನು ಹೊಡೆಯಲಿಲ್ಲ. ನನಗೆ ದುಃಖವಾಯಿತು. ಗಂಟೆಯನ್ನು ಬಾರಿಸಿದ ಕೂಡಲೇ ನಾನು ಕುಳಿತುಬಿಟ್ಟೆನು. ನನ್ನ ಮಗುವಿನಂತಹ ಸರಳ ಬುದ್ಧಿಗೆ, ಆ ಪದ್ಯದಲ್ಲಿ ಸರ್ ಫಿರೋಜ್‌ಷಾ ರವರಿಗೆ ಸರಿಯಾದ ಉತ್ತರವಿದೆಯೆಂದು ತೋರಿತು. ಠರಾವಿನ ಅಂಗೀಕಾರದ ಪ್ರಶ್ನೆಯೇ ಇರಲಿಲ್ಲ. ಆ ಕಾಲದಲ್ಲಿ ಪ್ರೇಕ್ಷಕರಿಗೂ ಪ್ರತಿನಿಧಿಗಳಿಗೂ ವ್ಯತ್ಯಾಸವೇ ಇರಲಿಲ್ಲ. ಪ್ರತಿಯೊಬ್ಬರೂ ಕೈಯೆತ್ತಿ ಠರಾವು ಸರ್ವಾನುಮತದಿಂದ ಅಂಗೀಕೃತವಾಗುತ್ತಿದ್ದವು. ನನ್ನ ಠರಾವಿಗೂ ಇದೇ ಗತಿಯಾಗಿ ನನ್ನ ದೃಷ್ಟಿಯಲ್ಲಿ ಅದರ ಪ್ರಾಮುಖ್ಯತೆ ಮರೆಯಾಯಿತು. ಆದರೆ ಅದು ಕಾಂಗ್ರೆಸ್ಸಿನಲ್ಲಿ ಅಂಗೀಕೃತವಾದ ಸಂಗತಿಯೇ ನನ್ನ ಹೃದಯವನ್ನು ಆನಂದದಿಂದ ತುಂಬಿತು. ಕಾಂಗ್ರೆಸ್ಸಿನ ಸಮ್ಮತಿಯೆಂದರೆ ದೇಶದ ಸಮ್ಮತಿಯ ಮುದ್ರೆ ಎಂದು ತಿಳಿದ ಯಾರಿಗೆ ತಾನೆ ಆನಂದವಾಗದು ?

೧೬

ಲಾರ್ಡ್ ಕರ್ಜನ್‌ರ ದರಬಾರ್

ಕಾಂಗ್ರೆಸ್ ಮುಗಿಯಿತು. ಆದರೆ ದಕ್ಷಿಣ ಆಫ್ರಿಕಾದ ಕಾರ್ಯದ ಸಂಬಂಧದಲ್ಲಿ ಚೇಂಬರ್ ಆಫ್ ಕಾಮರ್ಸ್‌ನವರನ್ನೂ ಇತರ ಅನೇಕರನ್ನೂ ನೋಡಬೇಕಾಗಿದ್ದುದರಿಂದ ನಾನು ಕಲ್ಕತ್ತಾದಲ್ಲಿ ಒಂದು ತಿಂಗಳ ಕಾಲ

ಉಳಿದೆನು. ಹೋಟಲಿನಲ್ಲಿ ಉಳಿಯುವುದರ ಬದಲು ನಾನು ಇಂಡಿಯಾ ಕ್ಲಬ್‌ನಲ್ಲಿ ನಿಲ್ಲಲು ಆವಶ್ಯಕವಾದ ಪರಿಚಯ ಪತ್ರವನ್ನು ತರಿಸಲು ಏರ್ಪಾಡು ಮಾಡಿಕೊಂಡೆನು. ಆ ಕ್ಲಬ್‌ನ ಸದಸ್ಯರ ಪೈಕಿ ಕೆಲವು ಪ್ರಮುಖ ಭಾರತೀಯರು ಇದ್ದರು. ಅವರ ಪರಿಚಯ ಮಾಡಿಕೊಂಡು, ದಕ್ಷಿಣ ಆಫ್ರಿಕಾದ ಕೆಲಸದ ಬಗೆಗೆ ಅವರಲ್ಲಿ ಕುತೂಹಲವನ್ನು ಹುಟ್ಟಿಸಬಹುದೆಂದು, ನಾನು ನಿರೀಕ್ಷಿಸುತ್ತಿದ್ದೆನು. ಗೋಖಲೆಯವರು ಈ ಕ್ಲಬ್‌ಗೆ ಬಿಲಿಯರ್ಡ್ ಆಟ ಆಡಲು ಆಗಾಗ್ಗೆ ಹೋಗುತ್ತಿದ್ದರು. ನಾನು ಕಲ್ಕತ್ತಾದಲ್ಲಿ ಕೆಲವು ದಿನಗಳು ನಿಲ್ಲುವುದು ಅವರಿಗೆ ಗೊತ್ತಾದಾಗ ಅವರು ನನ್ನನ್ನು ತಮ್ಮ ಜತೆಯಲ್ಲಿಯೇ ಇರಲು ಆಹ್ವಾನಿಸಿದರು. ನಾನು ಆಹ್ವಾನವನ್ನು ಕೃತಜ್ಞತೆಯಿಂದ ಅಂಗೀಕರಿಸಿದೆನು. ಆದರೆ ನಾನಾಗಿಯೇ ಅವರ ಮನೆಗೆ ಹೋಗುವುದು ಸರಿಯೆಂದು ಭಾವಿಸಲಿಲ್ಲ. ಅವರು ಒಂದೆರಡು ದಿನ ಕಾದು ನೋಡಿ, ಅನಂತರ ತಾವೇ ಬಂದು ನನ್ನನ್ನು ಕರೆದುಕೊಂಡು ಹೋದರು. ನನ್ನ ಸಂಕೋಚ ಸ್ವಭಾವ ಅವರಿಗೆ ಗೊತ್ತಾಯಿತು. ಅವರು "ಗಾಂಧೀ ನೀವು ಈ ದೇಶದಲ್ಲಿಯೇ ಇರಬೇಕಾಗಿದೆ. ಈ ಬಗೆಯ ಸಂಕೋಚ ನಡೆಯುವುದಿಲ್ಲ. ಸಾಧ್ಯವಾದಷ್ಟು ಜನರ ಸಂಪರ್ಕವನ್ನು ನೀವು ಬೆಳೆಸಿಕೊಳ್ಳಬೇಕು. ನೀವು ಕಾಂಗ್ರೆಸ್ ಕೆಲಸ ಮಾಡಬೇಕೆಂಬುದು ನನ್ನ ಇಷ್ಟ" ಎಂದು ಹೇಳಿದರು.

ಗೋಖಲೆಯವರ ಜತೆಯಲ್ಲಿ ನಾನು ತಂಗಿದ್ದ ವಿಷಯವನ್ನು ಹೇಳುವುದಕ್ಕೆ ಮುಂಚಿತವಾಗಿ, ಇಂಡಿಯಾ ಕ್ಲಬ್‌ನಲ್ಲಿ ನನಗೆ ಉಂಟಾದ ಒಂದು ಅನುಭವವನ್ನು ಕುರಿತು ಹೇಳುತ್ತೇನೆ.

ಈ ಸಮಯದಲ್ಲಿಯೇ ಲಾರ್ಡ್ ಕರ್ಜನ್‌ರ ದರ್ಬಾರು ನಡೆಯಿತು. ದರ್ಬಾರಿಗೆ ಆಹ್ವಾನಿತರಾಗಿದ್ದ ಕೆಲವು ರಾಜರೂ, ಮಹಾರಾಜರೂ ಕ್ಲಬ್‌ನ ಸದಸ್ಯರಾಗಿದ್ದರು. ಕ್ಲಬ್‌ನಲ್ಲಿ ಅವರು ಸೊಗಸಾದ ಬಂಗಾಳಿ ಧೋತಿ, ಷರಟುಗಳು ಶಲ್ಯಗಳನ್ನು ಧರಿಸುತ್ತಿದ್ದುದನ್ನು ನಾನು ನೋಡುತ್ತಿದ್ದೆನು. ದರಬಾರಿನ ದಿವಸ ಅವರು ಪರಿಚಾರಕರಿಂದ (ವೇಟರ್) ಅರ್ಹವಾದ ಷರಾಯಿಗಳನ್ನೂ ಹೊಳೆಯುವ ಬೂಟ್ಸ್‌ಗಳನ್ನೂ ಧರಿಸಿಕೊಂಡರು. ಇದನ್ನು ನೋಡಿ ನನಗೆ ದುಃಖವಾಯಿತು. ಅವರಲ್ಲಿ ಒಬ್ಬರನ್ನು ಆ ಬದಲಾವಣೆಗೆ ಕಾರಣವನ್ನು ಕೇಳಿದೆನು.

"ನಮ್ಮ ಶೋಚನೀಯ ಪರಿಸ್ಥಿತಿ, ನಮಗೆ ಗೊತ್ತು. ನಮ್ಮ ಸಂಪತ್ತನ್ನೂ ಪದವಿಗಳನ್ನೂ ಉಳಿಸಿಕೊಳ್ಳಲು ನಾವು ಯಾವ ಯಾವ ಅವಮಾನಗಳಿಗೆ ತಲೆ ಬಾಗಬೇಕಾಗಿದೆ ಎಂಬುದು ನಮಗೇ ಗೊತ್ತು" ಎಂದು ಅವರು ಪ್ರತ್ಯುತ್ತರವಿತ್ತರು.

"ಆದರೆ ಈ ಜವಾನರ ರುಮಾಲು, ಹೊಳೆಯುವ ಬೂಟ್ಸು ಇವೆಲ್ಲಾ ಏತಕ್ಕೆ ?" ಎಂದು ನಾನು ಕೇಳಿದೆನು.

"ನಮಗೂ ಜವಾನರಿಗೂ (ಕೆಲಸದವರು) ಏನಾದರೂ ವ್ಯತ್ಯಾಸವಿದೆ ಎಂದು ನಿಮಗೆ ತೋರುತ್ತಿದೆಯೇ ?" ಎಂದು ಅವರು ಕೇಳಿದರು. ಮತ್ತೆ "ಅವರು ನಮ್ಮ ಊಳಿಗದವರು, ನಾವು ಲಾರ್ಡ್ ಕರ್ಜನ್‌ರ ಊಳಿಗದವರು. ನಾನು ದರ್ಬಾರಿಗೆ ಹೋಗದಿದ್ದರೆ ಅದರ ಫಲವನ್ನು ಅನುಭವಿಸಬೇಕಾದೀತು. ನನ್ನ ಸ್ವಾಭಾವಿಕವಾದ ಉಡುಪಿನಲ್ಲಿ ಅಲ್ಲಿ ಹೋದರೆ ಅದು ಒಂದು ಅಪರಾಧ ವಾಗುತ್ತದೆ. ಅಲ್ಲಿ ಲಾರ್ಡ್ ಕರ್ಜನರೊಂದಿಗೆ ಮಾತನಾಡಲು ನನಗೆ ಅವಕಾಶ ದೊರಕುವುದೆಂದು ನೀವು ಭಾವಿಸುತ್ತೀರಾ ? ಇಲ್ಲವೇ ಇಲ್ಲ" ಎಂದರು.

ಆ ಸರಳ ಹೃದಯದ ಮಿತ್ರನಲ್ಲಿ ನನಗೆ ದಯವುಂಟಾಯಿತು. ಇದರ ಜತೆಯಲ್ಲಿ ನನಗೆ ಇನ್ನೊಂದು ದರ್ಬಾರು ನೆನಪಿಗೆ ಬರುತ್ತದೆ.

ಲಾರ್ಡ್ ಹಾರ್ಡಿಂಜರು ಹಿಂದೂ ವಿಶ್ವವಿದ್ಯಾಲಯದ ಅಸ್ತಿಬಾರ ವನ್ನು ಹಾಕಿದಾಗ ಒಂದು ದರಬಾರು ನಡೆಯಿತು. ದರಬಾರಿನಲ್ಲಿ ರಾಜ ಮಹಾರಾಜರು ಇದ್ದೇ ಇದ್ದರು. ಆದರೆ ಪಂಡಿತ್ ಮಾಳವೀಯರು ನನ್ನನ್ನು ವಿಶೇಷವಾಗಿ ಆಹ್ವಾನಿಸಿದರು. ನಾನು ಹೋದೆನು.

ರಾಜಮಹಾರಾಜರು ಹೆಂಗಸರಂತೆ ವಸ್ತ್ರಾಲಂಕಾರ ಭೂಷಿತರಾಗಿದ್ದು ದನ್ನು ಕಂಡು ನನಗೆ ದುಃಖವುಂಟಾಯಿತು. ರೇಶಿಮೆಯ ಪಾಯಿಜಾಮು, ರೇಶಿಮೆಯ ಅಚ್‌ಕಾನ್ ಕತ್ತಿಗೆ ಮುತ್ತಿನ ಹಾರ ಕೈಗೆ ಬಳೆ (ಬಾಜುಬಂದ್) ರುಮಾಲಿಗೆ ವಜ್ರ ಮತ್ತು ಮುತ್ತಿನ ಕುಚ್ಚುಗಳು, ಜತೆಗೆ ಸೊಂಟದ ಪಟ್ಟಿಯಿಂದ ತೂಗಾಡುತ್ತಿದ್ದ ಚಿನ್ನದ ಒರೆಯಲ್ಲಿದ್ದ ಕತ್ತಿಗಳು. ಇವು ರಾಜತ್ವದ ಚಿಹ್ನೆಗಳಲ್ಲ, ಗುಲಾಮಗಿರಿಯ ಚಿಹ್ನೆಗಳೆಂದು ನಾನು ಕಂಡು ಕೊಂಡೆನು. ಅವರು, ಸ್ವಂತ ಇಚ್ಛೆಯಿಂದಲೇ ಈ ಪೌರುಷ ಹೀನತೆಯ

ಚಿಹ್ನೆಗಳನ್ನು ಧರಿಸಿದ್ದರೆಂದು ನಾನು ಭಾವಿಸಿದ್ದೆನು. ಆದರೆ ಅಂತಹ ದರ್ಬಾರುಗಳಲ್ಲಿ ರಾಜಮಹಾರಾಜರು ತಮ್ಮ ಎಲ್ಲ ಅಮೂಲ್ಯ ರತ್ನಾಭರಣಗಳನ್ನೂ ಧರಿಸಲೇ ಬೇಕೆಂಬ ನಿಬಂಧನೆಯಿದೆ ಎಂಬುದು ನನಗೆ ಅನಂತರ ತಿಳಿಯಿತು. ಕೆಲವು ರಾಜರಿಗೆ ಈ ಜವಹರಿಯನ್ನು ಧರಿಸುವುದು ಪೂರ್ಣವಾಗಿ ಅಪ್ರಿಯವೆಂದೂ, ಅವರು ಅವುಗಳನ್ನು ಇಂತಹ ದರ್ಬಾರ್ ಸಂದರ್ಭಗಳಲ್ಲಿ ಹೊರತು ಮತ್ತಾವಾಗಲೂ ಧರಿಸುತ್ತಲೇ ಇರಲಿಲ್ಲವೆಂದೂ ನಾನು ತಿಳಿದೆನು.

ಈ ವಿಷಯ ಎಷ್ಟರಮಟ್ಟಿಗೆ ಸತ್ಯವೋ ನನಗೆ ತಿಳಿಯದು. ರಾಜರು ಅವುಗಳನ್ನು ಇತರ ಸಂದರ್ಭಗಳಲ್ಲಿ ಧರಿಸಲಿ ಅಥವಾ ಬಿಡಲಿ; ಕೇವಲ ಸ್ತ್ರೀಯರು ಮಾತ್ರ ಧರಿಸುವ ಜವಹಿರಿಯನ್ನು ಧರಿಸಿಕೊಂಡು ವೈಸರಾಯರ ದರ್ಬಾರಿಗೆ ಹೋಗುವುದು ಸಾಕಷ್ಟು ವಿಷಾದಕರ ಸಂಗತಿ.

ಐಶ್ವರ್ಯ, ಅಧಿಕಾರ ಮತ್ತು ಪ್ರತಿಷ್ಠೆ ಮನುಷ್ಯನಿಂದ ಮಾಡಿಸುವ ಪಾಪ ಅನರ್ಥಗಳು ಎಷ್ಟು ಹೆಚ್ಚು!

೧೭

ಗೋಖಲೆಯವರೊಂದಿಗೆ ಒಂದು ತಿಂಗಳು-೧

ನಾನು ಅವರ ಮನೆಗೆ ಹೋದ ದಿನದಿಂದಲೆ ನಾನು ಅವರ ಮನೆಯವನೇ ಎಂಬ ಭಾವ ನನಗೆ ಬರುವಂತೆ ಗೋಖಲೆಯವರು ಮಾಡಿದರು. ಅವರು ನನ್ನನ್ನು ತಮ್ಮ ಸ್ವಂತ ತಮ್ಮನಂತೆ ಕಂಡರು: ನನಗೆ ಬೇಕಾದುದೇನು ಎಂಬುದನ್ನೆಲ್ಲ ತಿಳಿದುಕೊಂಡು ಅವೆಲ್ಲವೂ ನನಗೆ ದೊರೆಯುವಂತೆ ಏರ್ಪಡಿಸಿದರು. ಸುದೈವದಿಂದ ನನ್ನ ಆವಶ್ಯಕತೆಗಳು ಕಡಿಮೆಯಾಗಿದ್ದುವು. ಇತರರಿಂದ ಸೇವೆ ನನಗೆ ಅಷ್ಟೇನೂ ಆವಶ್ಯಕವಿರಲಿಲ್ಲ. ನನ್ನ ಸ್ವಾವಲಂಬನೆ, ಸ್ವಚ್ಛತೆ, ಉದ್ಯಮಶೀಲತೆ ನಿಯಮಬದ್ಧ ಜೀವನ ಇವು ಅವರಿಗೆ ಒಪ್ಪಿಗೆಯಾಗಿದ್ದುವು. ಇವನ್ನು ಕಂಡು ಅವರು ನನ್ನನ್ನು ತುಂಬ ಹೊಗಳುತ್ತಿದ್ದರು.

ನನ್ನಿಂದ ಅವರು ಯಾವುದನ್ನೂ ರಹಸ್ಯವಾಗಿ ಇಟ್ಟಂತೆ ತೋರಲಿಲ್ಲ. ಅವರನ್ನು ನೋಡುವುದಕ್ಕೆ ಬಂದ ಎಲ್ಲ ಪ್ರಮುಖರಿಗೂ ಅವರು ನನ್ನ

ಪರಿಚಯವನ್ನೂ ಮಾಡಿಸುತ್ತಿದ್ದರು. ಅವರ ಪೈಕಿ ನನಗೆ ಚೆನ್ನಾಗಿ ಜ್ಞಾಪಕವಿರುವವರೊಬ್ಬರು ಡಾಕ್ಟರ್ (ಈಗ ಸರ್) ಪ್ರಫುಲ್ಲ ಚಂದ್ರರಾಯ್ ಅವರು ಗೋಖಲೆಯವರ ಮನೆಯ ಹತ್ತಿರವೇ ಇದ್ದರು. ಮತ್ತು ಪದೇ ಪದೇ ಗೋಖಲೆಯವರನ್ನು ನೋಡಲು ಬರುತ್ತಿದ್ದರು.

ಅವರು ಡಾಕ್ಟರ್ ರಾಯ್‌ರನ್ನು ಹೀಗೆ ಪರಿಚಯ ಮಾಡಿಕೊಟ್ಟರು: "ಇವರು ಪ್ರೊಫೆಸರ್ ರಾಯ್. ಇವರ ಸಂಬಳ ತಿಂಗಳಿಗೆ ೮೦೦ ರೂಪಾಯಿ. ಅದರಲ್ಲಿ ಇವರು ನಲವತ್ತು ರೂಪಾಯಿಗಳನ್ನು ಮಾತ್ರ ಸ್ವಂತಕ್ಕೆ ವೆಚ್ಚ ಮಾಡಿಕೊಂಡು, ಉಳಿದುದನ್ನೆಲ್ಲ ಸಾರ್ವಜನಿಕ ಕಾರ್ಯಕ್ಕೆ ವಿನಿಯೋಗಿಸುತ್ತಾರೆ. ಇವರಿಗೆ ಮದುವೆಯಾಗಿಲ್ಲ; ಮಾಡಿಕೊಳ್ಳಲು ಇಷ್ಟವೂ ಇಲ್ಲ."

ಇಂದಿನ ಡಾಕ್ಟರ್ ರಾಯ್‌ರವರಿಗೂ ಅಂದಿನ ರಾಯ್‌ರಿಗೂ ನನಗೆ ಏನೇನೂ ವ್ಯತ್ಯಾಸ ಕಾಣುವುದಿಲ್ಲ. ಅವರ ಉಡುಪು ಇಂದು ಇರುವಷ್ಟೇ ಆಗಲೂ ಸರಳವಾಗಿದ್ದಿತು. ಆದರೆ ಒಂದು ವ್ಯತ್ಯಾಸ. ಇಂದು ಅದು ಖಾದಿಯದಾಗಿದೆ. ಆಗ ಭಾರತದ ಮಿಲ್ ಬಟ್ಟೆಯದಾಗಿದ್ದಿತು. ಡಾಕ್ಟರ್ ರಾಯ್ ಮತ್ತು ಗೋಖಲೆಯವರ ಸಂಭಾಷಣೆಯನ್ನು ಎಷ್ಟು ಕೇಳಿದರೂ ನನಗೆ ತೃಪ್ತಿಯೇ ಆಗುತ್ತಿರಲಿಲ್ಲ. ಅವು ಯಾವಾಗಲೂ ಸಾರ್ವಜನಿಕ ಹಿತ ಅಥವಾ ಜ್ಞಾನಬೋಧೆಯುಳ್ಳವಾಗಿರುತ್ತಿದ್ದವು. ಕೆಲವು ವೇಳೆ ಅವು ದುಃಖದಾಯಕವೂ ಆಗಿರುತ್ತಿದ್ದವು. ಏಕೆಂದರೆ ಅವು ಸಾರ್ವಜನಿಕ ಮುಖಂಡರ ದೋಷಗಳಿಗೆ ಸಂಬಂಧಿಸಿದುದಾಗಿರುತ್ತಿದ್ದವು. ಇವುಗಳ ಫಲವಾಗಿ, ನಾನು ಮಹಾಯೋಧರೆಂದು ಎಣಿಸಿದ್ದ ಕೆಲವರು ಅಲ್ಪರಾಗಿ ಕಾಣತೊಡಗಿದರು.

ಗೋಖಲೆಯವರು ಕೆಲಸ ಮಾಡುವುದನ್ನು ನೋಡುವುದೇ ಒಂದು ಸಂತೋಷವೂ ಶಿಕ್ಷಣಪ್ರದವೂ ಆಗಿದ್ದಿತು. ಅವರು ಒಂದು ನಿಮಿಷವನ್ನೂ ವ್ಯರ್ಥಮಾಡುತ್ತಿರಲಿಲ್ಲ. ಜನತೆಯೊಂದಿಗೆ ಅವರ ಸಂಪರ್ಕ, ಸ್ನೇಹ ಇವೆಲ್ಲ ಸಾರ್ವಜನಿಕ ಒಳಿತಿಗಾಗಿಯೇ ಆಗಿದ್ದುವು. ಅವರ ಸಂಭಾಷಣೆ ಯಾವಾಗಲೂ ದೇಶದ ಹಿತಕ್ಕೆ ಸಂಬಂಧಿಸಿದ್ದುದಾಗಿದ್ದಿತು. ಅದರಲ್ಲಿ ಅಸತ್ಯ ಅಥವಾ ಕಾಪಟ್ಯದ ಸುಳಿವೂ ಇರುತ್ತಿರಲಿಲ್ಲ. ಭಾರತದ ದಾರಿದ್ರ್ಯ ಮತ್ತು ಪಾರತಂತ್ರ್ಯ

ಇವು ಸದಾ ಅವರ ತೀವ್ರ ಚಿಂತೆಗಳಾಗಿದ್ದುವು. ಬೇರೆ ಬೇರೆ ಜನರು ಅವರಲ್ಲಿ ಬೇರೆ ಬೇರೆ ಕಾರ್ಯಗಳಲ್ಲಿ ಕುತೂಹಲವನ್ನುಂಟುಮಾಡಲು ಬರುತ್ತಿದ್ದರು. ಅವರಿಗೆಲ್ಲ ಅವರು ಕೊಡುತ್ತಿದ್ದುದು ಒಂದೇ ಉತ್ತರ: "ನಿಮ್ಮ ಕಾರ್ಯವನ್ನು ನೀವು ಮಾಡಿ. ನನ್ನ ಕಾರ್ಯವನ್ನು ನಾನು ಮಾಡುತ್ತೇನೆ. ನನಗೆ ಬೇಕಾಗಿರುವುದು ನಮ್ಮ ದೇಶದ ಸ್ವಾತಂತ್ರ್ಯ. ನನ್ನ ಎಲ್ಲ ಕಾಲವನ್ನೂ ಶಕ್ತಿಯನ್ನೂ ವಿನಿಯೋಗಿಸಿದರೂ ಅದಕ್ಕೇ ಸಾಲದಾಗಿದೆ."

ರಾನಡೆಯವರ ವಿಷಯದಲ್ಲಿ ಅವರಿಗಿದ್ದ ಪೂಜ್ಯಭಾವನೆ ಗಳಿಗೆ ಗಳಿಗೆಗೂ ವ್ಯಕ್ತವಾಗುತ್ತಲೇ ಇದ್ದಿತು. ಎಲ್ಲ ವಿಷಯಗಳಲ್ಲಿಯೂ ರಾನಡೆಯವರ ಮಾತೇ ಅವರಿಗೆ ವೇದವಾಕ್ಯವಾಗಿದ್ದಿತು. ರಾನಡೆಯವರ ಮಾತನ್ನು ಅವರು ಹೆಜ್ಜೆ ಹೆಜ್ಜೆಗೆ ಉದಾಹರಿಸುತ್ತಿದ್ದರು. ನಾನು ಗೋಖಲೆಯವರ ಜತೆ ಇದ್ದಾಗ ರಾನಡೆಯವರ ಜಯಂತಿಯೋ (ಅಥವಾ ಪುಣ್ಯತಿಥಿಯೋ ನನಗೆ ಸರಿಯಾಗಿ ನೆನಪಿಲ್ಲ) ಬಂದಿತು. ಗೋಖಲೆಯವರು ಅದನ್ನು ತಪ್ಪದೆ ಆಚರಿಸುತ್ತಿದ್ದರು. ಆ ಕಾಲದಲ್ಲಿ ಅವರ ಜತೆಯಲ್ಲಿ ನಾನಲ್ಲದೆ ಅವರ ಮಿತ್ರರಾದ ಪ್ರೊಫೆಸರ್ ಕಾಥವಟೆ ಮತ್ತು ಮತ್ತಾರೋ ಸಬ್‌ಜಡ್ಜರು ಒಬ್ಬರು ಇದ್ದರು. ಜಯಂತಿಯ ಉತ್ಸವದಲ್ಲಿ ಭಾಗವಹಿಸಲು ಅವರು ನಮ್ಮನ್ನು ಆಹ್ವಾನಿಸಿದರು. ಆಗ ಅವರು ಮಾಡಿದ ಭಾಷಣದಲ್ಲಿ ರಾನಡೆಯವರನ್ನು ಕುರಿತು ತಮ್ಮ ಕೆಲವು ನೆನಪುಗಳನ್ನು ಹೇಳಿದರು. ಅವರು ಸ್ವಾಭಾವಿಕವಾಗಿ ರಾನಡೆ, ತೆಲಾಂಗ್, ಮಾಂಡಲಿಕ್ ಇವರನ್ನು ಹೋಲಿಕೆ ಮಾಡಿದರು. ತೆಲಾಂಗ್‌ರ ಮನೋಹರವಾದ ಶೈಲಿಯನ್ನು ಪ್ರಶಂಸಿಸಿದರು. ಮಾಂಡಲಿಕರನ್ನು ದೊಡ್ಡ ಸುಧಾರಕರೆಂದು ಹೊಗಳಿದರು. ತಮ್ಮ ಕಕ್ಷಿಗಾರರ ವಿಷಯದಲ್ಲಿ ಮಾಂಡಲಿಕರ ಕರ್ತವ್ಯ ಪಾಲನೆಯ ದೃಷ್ಟಾಂತವನ್ನು ಹೇಳಿದರು: "ಒಂದು ಸಲ ಕಕ್ಷಿಗಾರನ ಮೊಕದ್ದಮೆಗೆ ಹೋಗಲು ಮಾಂಡಲಿಕರಿಗೆ ರೈಲು ತಪ್ಪಿ ಹೋಯಿತು. ಆಗ ಮಾಂಡಲಿಕರು ಒಂದು ವಿಶೇಷ ರೈಲನ್ನು ಗೊತ್ತು ಮಾಡಿಕೊಂಡು ಸಕಾಲದಲ್ಲಿ ಹೋಗಿ ಕಕ್ಷಿಗಾರರ ಮೊಕದ್ದಮೆಯನ್ನು ನಡೆಸಿದರು." ಆದರೆ ರಾನಡೆ ಇವರೆಲ್ಲರನ್ನೂ ಮೀರಿಸಿದ್ದರು. ಅವರದು ಸರ್ವತೋಮುಖವಾದ ಶಕ್ತಿಯಾಗಿದ್ದಿತು. ಅವರು

ದೊಡ್ಡ ನ್ಯಾಯಾಧಿಪತಿಗಳು ಮಾತ್ರವೇ ಅಲ್ಲ ಮಹಾನ್ ಇತಿಹಾಸಕಾರರೂ ಅರ್ಥಶಾಸ್ತ್ರಜ್ಞರೂ ದೊಡ್ಡ ಸಮಾಜ ಸುಧಾರಕರೂ ಆಗಿದ್ದರು. ಅವರು ನ್ಯಾಯಾಧಿಪತಿಗಳಾಗಿದ್ದರೂ, ನಿರ್ಭಯವಾಗಿ ಕಾಂಗ್ರೆಸ್ ಮಹಾಸಭೆಗೆ ಬರುತ್ತಿದ್ದರು. ಅವರ ವಿವೇಕದಲ್ಲಿ ಎಲ್ಲರಿಗೂ ಪೂರ್ಣನಂಬಿಕೆಯಿದ್ದುದರಿಂದ ಅವರ ನಿರ್ಣಯಗಳನ್ನು ಎಲ್ಲರೂ ಮರುಮಾತಾಡದೆ ಒಪ್ಪುತ್ತಿದ್ದರು." ಹೀಗೆ ತಮ್ಮ ಗುರುಗಳಲ್ಲಿ ಮಿಳನವಾಗಿದ್ದ ಹೃದಯ ಮತ್ತು ಬುದ್ಧಿಯ ವೈಭವವನ್ನು ವರ್ಣಿಸುವುದರಲ್ಲಿ ಗೋಖಲೆಯವರ ಆನಂದಕ್ಕೆ ಪಾರವೇ ಇರಲಿಲ್ಲ.

ಆ ಕಾಲದಲ್ಲಿ ಗೋಖಲೆಯವರು ಒಂದು ಕುದುರೆ ಗಾಡಿಯನ್ನು ಇಟ್ಟುಕೊಂಡಿದ್ದರು. ಕುದುರೆಗಾಡಿ ಅವರಿಗೆ ಏಕೆ ಆವಶ್ಯಕ ಎಂಬ ಸಂದರ್ಭ, ನನಗೆ ಗೊತ್ತಿರಲಿಲ್ಲ. ಆದುದರಿಂದ ನಾನು ಅವರಿಗೆ ಹೀಗೆ ಹೇಳಿದೆ: "ಸ್ಥಳದಿಂದ ಸ್ಥಳಕ್ಕೆ ಹೋಗಲು ನೀವು ಟ್ರಾಮ್ ಕಾರನ್ನು ಯಾಕೆ ಉಪಯೋಗಿಸಿಕೊಳ್ಳಬಾರದು. ಇದು ಮುಖಂಡರ ಘನತೆಗೆ ಕಡಿಮೆಯೆ?"

ಅವರು ಸ್ವಲ್ಪ ಖಿನ್ನರಾಗಿ ಹೀಗೆ ಹೇಳಿದರು: "ನೀವೂ ಕೂಡ ನನ್ನನ್ನು ಅರ್ಥಮಾಡಿಕೊಳ್ಳಲಿಲ್ಲ. ನನ್ನ ಕೌನ್ಸಿಲ್ ಸಂಬಳವನ್ನು ನಾನು, ನನ್ನ ಸ್ವಂತ ವೆಚ್ಚಕ್ಕೆ ಬಳಸಿಕೊಳ್ಳುವುದಿಲ್ಲ. ನೀವು ಟ್ರಾಮ್‌ನಲ್ಲಿ ಹೋಗುವುದನ್ನು ನೋಡಿದರೆ ನನಗೆ ಅಸೂಯೆಯುಂಟಾಗುತ್ತಿದೆ. ಆದರೆ ನಿಮ್ಮ ಹಾಗೆ ಮಾಡಲಾರೆನೆಂದು ನನಗೆ ದುಃಖ. ನನ್ನಷ್ಟೇ ಪ್ರಸಿದ್ಧಿಗೆ ನೀವೂ ಬಲಿಯಾದಾಗ, ಟ್ರಾಮಿನಲ್ಲಿ ಪ್ರಯಾಣ ಮಾಡುವುದು—ಅಸಾಧ್ಯವಲ್ಲದಿದ್ದರೂ ಕಷ್ಟವೆಂಬುದು ನಿಮಗೆ ಗೊತ್ತಾಗುವುದು. ಮುಖಂಡರು ಮಾಡುವುದೆಲ್ಲ ಸ್ವಂತ ಸುಖದ ಆಸೆಯಿಂದ ಎಂದು ಭಾವಿಸಲು ಕಾರಣವಿಲ್ಲ. ನಿಮ್ಮ ಸರಳ ಅಭ್ಯಾಸಗಳು ನನಗೆ ಇಷ್ಟ. ಆದರೆ ನಾನೂ ಸಾಧ್ಯವಾದಷ್ಟು ಸರಳವಾಗಿ ಜೀವಿಸುತ್ತೇನೆ. ಆದರೆ ನನ್ನಂತಹವರಿಗೆ ಕೆಲವು ವೆಚ್ಚಗಳು ಅನಿವಾರ್ಯ."

ಹೀಗೆ ಅವರು ನನ್ನ ಒಂದು ಆಕ್ಷೇಪಣೆಗೆ ಸಮಾಧಾನ ಹೇಳಿ ನನ್ನನ್ನು ತೃಪ್ತಿ ಪಡಿಸಿದರು. ಆದರೆ ನಾನು ಎತ್ತಿದ್ದ ಇನ್ನೊಂದು ಆಕ್ಷೇಪಣೆಗೆ ಅವರು ಕೊಟ್ಟ ಸಮಾಧಾನ ನನಗೆ ತೃಪ್ತಿಯಾಗಲಿಲ್ಲ.

"ಆದರೆ ನೀವು ತಿರುಗಾಡುವುದಕ್ಕೆ ಸಹ ಹೋಗುವುದಿಲ್ಲ. ನೀವು ಯಾವಾಗಲೂ ಕಾಯಿಲೆಯಿಂದ ನರಳುತ್ತಿರುವುದರಲ್ಲಿ ಆಶ್ಚರ್ಯವೇನು ? ಸಾರ್ವಜನಿಕ ಕಾರ್ಯದಲ್ಲಿ ವ್ಯಾಯಾಮಕ್ಕ ಅವಕಾಶವೇ ದೊರೆಯಬಾರದೆ ?" ಎಂದು ಕೇಳಿದೆನು.

"ತಿರುಗಾಡಲು ಹೋಗುವುದಕ್ಕೆ ನನಗೆಲ್ಲಿ ಅವಕಾಶವಿದೆ ನೀವೇ ಹೇಳಿ?"

ಗೋಖಲೆಯವರಲ್ಲಿ ನನಗೆ ಬಹಳ ಗೌರವವಿದ್ದಿತು. ನಾನು ಅವರೊಂದಿಗೆ ಎಂದಿಗೂ ವಾದಮಾಡುತ್ತಿರಲಿಲ್ಲ. ಅವರ ಈ ಪ್ರತ್ಯುತ್ತರದಿಂದ ನನಗೆ ಸಮಾಧಾನವಾಗದಿದ್ದರೂ ನಾನು ಮೌನವಾಗಿ ಬಿಟ್ಟೆ—ಎಷ್ಟೇ ಕೆಲಸವಿದ್ದರೂ ಊಟಮಾಡಲು ಸಮಯವನ್ನು ಉಳಿಸಿಕೊಳ್ಳುವಂತೆ ವ್ಯಾಯಾಮಕ್ಕೂ ಸಮಯವನ್ನು ಉಳಿಸಿಕೊಳ್ಳಬೇಕೆಂದು ಆಗ ನನ್ನ ನಂಬಿಕೆಯಾಗಿದ್ದಿತು. ಈಗಲೂ ಅದೇ ನನ್ನ ನಂಬಿಕೆ. ಅದು, ನಮ್ಮ ಕೆಲಸ ಮಾಡುವ ಶಕ್ತಿಯನ್ನು ಕಡಿಮೆ ಮಾಡುವುದರ ಬದಲು ಹೆಚ್ಚಿಸುತ್ತದೆ, ಎಂಬುದು ನನ್ನ ನಮ್ರ ಅಭಿಪ್ರಾಯವಾಗಿದೆ.

೧೮

ಗೋಖಲೆಯವರೊಡನೆ ಒಂದು ತಿಂಗಳು—೨

ನಾನು ಗೋಖಲೆಯವರ ಮನೆಯಲ್ಲಿರುವಾಗ, ನನ್ನ ಕಾಲವನ್ನೆಲ್ಲ ಮನೆಯಲ್ಲಿಯೇ ಕುಳಿತು ಕಳೆಯಲಿಲ್ಲ.

ದಕ್ಷಿಣ ಆಫ್ರಿಕಾದ ನನ್ನ ಕ್ರೈಸ್ತ ಮಿತ್ರರಿಗೆ, ಭಾರತದಲ್ಲಿ ನಾನು ಇರುವಾಗ ಭಾರತದ ಕ್ರೈಸ್ತರನ್ನು ಸಂಧಿಸಿ ಅವರ ಸ್ಥಿತಿಗತಿಗಳನ್ನು ತಿಳಿದುಕೊಳ್ಳುವೆನೆಂದು ಹೇಳಿದ್ದೆನು. ಬಾಬು ಕಾಳಿಚರಣ ಬ್ಯಾನರ್ಜಿಯವರ ವಿಷಯವನ್ನು ನಾನು ಕೇಳಿದ್ದೆನು. ಅವರಲ್ಲಿ ನನಗೆ ತುಂಬ ಗೌರವವಿದ್ದಿತು. ಅವರು ಕಾಂಗ್ರೆಸ್‌ನಲ್ಲಿ ಮುಖ್ಯ ಪಾತ್ರವನ್ನು ವಹಿಸಿದ್ದರು. ಹಿಂದೂಗಳಿಂದಲೂ ಮುಸಲ್ಮಾನರಿಂದಲೂ ಬೇರೆಯಾಗಿ ತಮ್ಮ ಪ್ರತ್ಯೇಕತೆಯನ್ನೇ ತೋರುತ್ತಿದ್ದ ಇತರ ಭಾರತದ ಕ್ರೈಸ್ತರ ವಿಷಯದಲ್ಲಿದ್ದ ಸಂಶಯ, ನನಗೆ ಕಾಳಿಚರಣ ಬಾಬುಗಳಲ್ಲಿ ಇರಲಿಲ್ಲ. ನಾನು ಗೋಖಲೆಯವರಿಗೆ "ಕಾಳ

ಚರಣ ಬಾಬುಗಳನ್ನು ಹೋಗಿ ನೋಡುತ್ತೇನೆ" ಎಂದು ಹೇಳಿದೆ. ಅವರು "ಅವರನ್ನು ನೀವು ಹೋಗಿ ನೋಡುವುದರಿಂದ ಪ್ರಯೋಜನವೇನು ? ಅವರೇನೊ ಬಹಳ ಒಳ್ಳೆಯ ಮನುಷ್ಯರು. ಆದರೆ ಅವರು ನಿಮ್ಮನ್ನು ತೃಪ್ತಿ ಪಡಿಸಲಾರರೆಂದು ನನಗೆ ತೋರುತ್ತದೆ. ನನಗೆ ಅವರು ಚೆನ್ನಾಗಿ ಗೊತ್ತು. ಹೇಗೇ ಆಗಲಿ ನಿಮಗೆ ಇಷ್ಟವಿದ್ದರೆ ಅಗತ್ಯವಾಗಿ ಹೋಗಿ ನೋಡಬಹುದು." ಎಂದರು.

ನಾನು ಅವರ ಸಂದರ್ಶನಕ್ಕೆ ಕಾಲವನ್ನು ಬೇಡಿ ಕಾಗದ ಬರೆದೆನು. ಅವರು ಕೂಡಲೇ ಒಪ್ಪಿದರು. ನಾನು ಅವರ ಮನೆಗೆ ಹೋದಾಗ ಅವರು, ಮರಣಶಯ್ಯೆಯಲ್ಲಿದ್ದ ತಮ್ಮ ಹೆಂಡತಿಯ ಬಳಿ ಇದ್ದರು. ಅವರ ಮನೆ ಸರಳವಾಗಿದ್ದಿತು. ಕಾಂಗ್ರೆಸ್‌ನಲ್ಲಿ ಅವರು ಕೋಟನ್ನೂ ಷರಾಯಿಯನ್ನೂ ಧರಿಸಿದ್ದರು. ಆದರೆ ಮನೆಯಲ್ಲಿ ಅವರು ಬಂಗಾಳಿ ಪಂಚೆ ಮತ್ತು ಷರ್ಟನ್ನು ಧರಿಸಿದ್ದುದನ್ನು ನೋಡಿ ನನಗೆ ಸಂತೋಷವಾಯಿತು. ನಾನು ಆಗ ಪಾರಸೀ ಕೋಟು ಮತ್ತು ಷರಾಯಿಯನ್ನೂ ಧರಿಸಿದ್ದರೂ, ಅವರ ಸರಳವಾದ ಉಡುಗೆ ನನಗೆ ಇಷ್ಟವಾಯಿತು. ನಾನು ಬೇರೆ ಮಾತುಗಳಲ್ಲಿ ಕಾಲ ಕಳೆಯದೆ ನನ್ನ ಸಂಶಯಗಳನ್ನು ಅವರಿಗೆ ತಿಳಿಸಿದೆನು. ಅವರು, "ನಮ್ಮ ಮೂಲ, ಪಾಪದಲ್ಲಿದೆ" ಎಂಬುದನ್ನು ನೀವು ನಂಬುತ್ತೀರಾ ?" ಎಂದು ಕೇಳಿದರು.

ನಾನು "ಹೌದು, ನಂಬುತ್ತೇನೆ" ಎಂದೆನು.

ಅವರು "ಸರಿ, ಈ ಪಾಪಕ್ಕೆ ಹಿಂದೂ ಧರ್ಮದಲ್ಲಿ ನಿವಾರಣೋಪಾಯವಿಲ್ಲ. ಕ್ರೈಸ್ತ ಧರ್ಮದಲ್ಲಿ ಇದೆ. ಪಾಪಕ್ಕೆ ಪ್ರಾಯಶ್ಚಿತ್ತ ಮರಣ. ಏಸುವಿಗೆ ಶರಣಾಗತರಾಗುವುದೇ ಮುಕ್ತಿಗೆ ಮಾರ್ಗವೆಂದು ಬೈಬಲ್ ಹೇಳುತ್ತದೆ" ಎಂದರು. ನಾನು ಭಗವದ್ಗೀತೆಯ ಭಕ್ತಿ ಮಾರ್ಗವನ್ನು ಅವರ ಮುಂದೆ ಇಟ್ಟೆನು. ಆದರೆ ಅದರಿಂದ ಏನೂ ಪ್ರಯೋಜನವಾಗಲಿಲ್ಲ. ಅವರ ಒಳ್ಳೆಯತನಕ್ಕಾಗಿ ನಾನು ಅವರನ್ನು ವಂದಿಸಿದೆನು. ನನ್ನನ್ನು ತೃಪ್ತಿಪಡಿಸಲು ಅವರು ಶಕ್ತರಾಗಲಿಲ್ಲ. ಆದರೆ ಅವರನ್ನು ಸಂಧಿಸಿದುದರಿಂದ ನನಗೆ ಲಾಭವಾಯಿತು.

ಆ ದಿನಗಳಲ್ಲಿ ನಾನು ಕಲ್ಕತ್ತೆಯ ರಸ್ತೆಗಳನ್ನೂ ಗಲ್ಲಿಗಳನ್ನೂ ಚೆನ್ನಾಗಿ ಪರಿಚಯ ಮಾಡಿಕೊಂಡೆನು. ನಾನು ಯಾವ ಕಾರ್ಯದ ಮೇಲೆ ಹೋದಾಗಲೂ ನಡೆದುಕೊಂಡೇ ಹೋಗುತ್ತಿದ್ದೆನು. ನಾನು ನ್ಯಾಯಾಧಿಪತಿಗಳಾದ ಮಿತ್ರರನ್ನೂ ಸರ್ ಗುರುದಾಸ್ ಬ್ಯಾನರ್ಜಿಯವರನ್ನೂ ಹೋಗಿ ನೋಡಿದೆನು. ದಕ್ಷಿಣ ಆಫ್ರಿಕಾದ ಕೆಲಸದಲ್ಲಿ ಅವರ ಸಹಾಯ ನನಗೆ ಬೇಕಾಗಿದ್ದಿತು. ಇದೇ ಸಮಯದಲ್ಲಿಯೇ ನಾನು ರಾಜಾ ಸರ್ ಪ್ರಿಯಮೋಹನ್ ಮುಕರ್ಜಿಯವರನ್ನೂ ಸಂದರ್ಶಿಸಿದೆನು.

ಕಾಳಿಚರಣ ಬ್ಯಾನರ್ಜಿಯವರು ನನ್ನೊಂದಿಗೆ ಕಾಳೀ ದೇವಾಲಯವನ್ನು ಕುರಿತು ಮಾತನಾಡಿದ್ದರು. ದೇವಾಲಯವನ್ನು ನೋಡಲು ನನಗೆ ಕುತೂಹಲವಿದ್ದಿತು. ನಾನು ಅದರ ವಿಷಯವನ್ನು ಪುಸ್ತಕಗಳಲ್ಲಿ ಓದಿದ್ದೆನು. ನಾನು ಒಂದು ದಿನ ಅಲ್ಲಿಗೆ ಹೋದೆನು. ನ್ಯಾಯಮೂರ್ತಿ ಮಿತ್ರರ ಮನೆಯೂ ಅದೇ ಪ್ರದೇಶದಲ್ಲಿದ್ದುದರಿಂದ ಅವರ ಮನೆಗೆ ಹೋದ ದಿನವೇ ದೇವಸ್ಥಾನಕ್ಕೂ ಹೋದೆನು. ದಾರಿಯಲ್ಲಿ, ಕಾಳಿಗೆ ಬಲಿ ಕೊಡುವ ಕುರಿಗಳ ದೊಡ್ಡ ಸಾಲನ್ನು ನೋಡಿದೆನು. ದೇವಸ್ಥಾನಕ್ಕೆ ಹೋಗುವ ಓಣಿಯ ಎರಡು ಕಡೆಗಳಲ್ಲಿಯೂ ಭಿಕ್ಷುಕರು ನೆರೆದಿದ್ದರು. ಅಲ್ಲಿ ಸಾಧುಗಳೂ ಬೈರಾಗಿಗಳೂ ಸಹ ಇದ್ದರು. ಆ ಕಾಲದಲ್ಲಿ ಸಹ ಹೃಷ್ಟಪುಷ್ಟರಾದ ಭಿಕ್ಷುಕರಿಗೆ ಭಿಕ್ಷೆ ಕೊಡುವುದಕ್ಕೆ ನನ್ನ ತೀವ್ರ ವಿರೋಧವಿದ್ದಿತು. ಅವರ ಒಂದು ಗುಂಪೇ ನನ್ನನ್ನು ಬೆನ್ನುಹತ್ತಿತ್ತು. ಅವರ ಪೈಕಿ ಒಬ್ಬರು ಪಡಶಾಲೆಯಲ್ಲಿ ಕುಳಿತಿದ್ದರು. ಅವರು ನಮ್ಮನ್ನು ತಡೆದು "ಎಲ್ಲಿ ಹೋಗುತ್ತಿದ್ದೀ ಮಗು ?" ಎಂದು ಕೇಳಿದರು. ನಾನು ಉತ್ತರವಿತ್ತೆನು.

ಅವರು ನನ್ನನ್ನೂ ನನ್ನ ಜತೆಗಾರನನ್ನೂ ಕುಳ್ಳಿರಲು ಹೇಳಿದರು. ನಾವು ಕುಳಿತೆವು.

"ಈ ಬಲಿಕೊಡುವುದನ್ನು, ಧರ್ಮವೆಂದು ನೀವು ಎಣಿಸುತ್ತೀರಾ ?" ಎಂದು ನಾನು ಕೇಳಿದೆನು.

"ಪ್ರಾಣಿಗಳನ್ನು ಕೊಲ್ಲುವುದು ಧರ್ಮವೆಂದು ಯಾರು ಹೇಳುತ್ತಾರೆ ?"

"ಅದು ನನ್ನ ಕೆಲಸವಲ್ಲ. ದೇವರನ್ನು ಪೂಜೆಮಾಡುವುದಷ್ಟೇ ನಮ್ಮ ಕೆಲಸ".

"ಆದರೆ, ದೇವರನ್ನು ಪೂಜೆಮಾಡಲು ನಿಮಗೆ ಬೇರೆ ಸ್ಥಳ ಸಿಕ್ಕುವುದಿಲ್ಲವೆ ?"

"ನಮಗೆ ಎಲ್ಲ ಸ್ಥಳಗಳೂ ಒಂದೇ ಸಮನಾಗಿ ಚೆನ್ನಾಗಿವೆ. ಜನ ಕುರಿಗಳು, ಮುಖಂಡರು ಕರೆದುಕೊಂಡು ಹೋದಕಡೆಗೆ ಹೋಗುತ್ತಾರೆ. ಅದನ್ನು ಕಟ್ಟಿಕೊಂಡು ಸಾಧುಗಳಾದ ನಮಗೇನು ?"

ನಾವು ಚರ್ಚೆಯನ್ನು ಮುಂದುವರಿಸದೆ ದೇವಾಲಯಕ್ಕೆ ಹೋದೆವು. ನಮ್ಮ ಕಣ್ಣಿಗೆ ಬಿದ್ದುದು ರಕ್ತದ ಕಾಲುವೆ. ನನಗೆ ಅಲ್ಲಿ ನಿಲ್ಲುವುದಕ್ಕೆ ಆಗಲಿಲ್ಲ. ನನ್ನ ಮನಸ್ಸು ತುಂಬ ಕ್ಷೋಭೆಗೊಂಡಿತು. ನಾನು ತಳಮಳಗೊಂಡೆನು. ಆ ದೃಶ್ಯವನ್ನು ನಾನು ಇಂದಿಗೂ ಮರೆಯಲು ಸಾಧ್ಯವಾಗಿಲ್ಲ.

ಆ ರಾತ್ರಿ ಕೆಲವು ಬಂಗಾಲಿ ಮಿತ್ರರು ನನ್ನನ್ನು ಊಟಕ್ಕೆ ಆಹ್ವಾನಿಸಿದ್ದರು. ಅಲ್ಲಿ ನಾನು ಒಬ್ಬ ಮಿತ್ರರೊಂದಿಗೆ ಈ ಕ್ರೂರ ಪೂಜೆಯನ್ನು ಕುರಿತು ಮಾತನಾಡಿದೆನು. ಅವರು "ಕುರಿಗಳಿಗೆ ನೋವು ಕಾಣುವುದಿಲ್ಲ. ಬಲಿಕೊಡುವ ಸಮಯದಲ್ಲಿ ನಗಾರಿಯನ್ನು ಬಡಿದು ಬಾರಿಸುವುದರಿಂದ ಅವಕ್ಕೆ ನೋವು ಗೊತ್ತಾಗುವುದಿಲ್ಲ" ಎಂದನು.

ಈ ಉತ್ತರದಿಂದ ನಾನು ಸುಮ್ಮನಾಗಲಿಲ್ಲ. "ಕುರಿಗಳಿಗೆ ಮಾತು ಬಂದಿದ್ದರೆ ಅವು ಬೇರೆ ಕಥೆ ಹೇಳುತ್ತಿದ್ದುವು" ಎಂದು ನಾನು ಅವರಿಗೆ ಉತ್ತರವಿತ್ತೆನು. ಈ ಕ್ರೂರ ಪದ್ಧತಿಯನ್ನು ತಪ್ಪಿಸಬೇಕು ಎಂದು ನನಗೆ ತೋರಿತು. ನನಗೆ ಬುದ್ಧನು ಪ್ರಾಣಿಗಳನ್ನು ರಕ್ಷಿಸಿದ ಕಥೆ ಜ್ಞಾಪಕಕ್ಕೆ ಬಂದಿತು. ಆದರೆ ಅದು ನನ್ನ ಶಕ್ತಿಗೆ ಮೀರಿದುದು ಎಂಬುದೂ ತಿಳಿಯಿತು.

ನನ್ನ ಅಭಿಪ್ರಾಯ ಅಂದು ಹೇಗಿದ್ದಿತೋ ಇಂದಿಗೂ ಹಾಗೆಯೇ ಇದೆ. ನನ್ನ ಅಭಿಪ್ರಾಯದಲ್ಲಿ, ಕುರಿಯ ಜೀವ, ಮನುಷ್ಯನ ಜೀವಕ್ಕಿಂತ ಕಡಿಮೆ ಬೆಲೆಯುಳ್ಳದುದಲ್ಲ. ಮನುಷ್ಯನ ದೇಹರಕ್ಷಣೆಗಾಗಿ, ಕುರಿಯ ಪ್ರಾಣವನ್ನು ತೆಗೆಯಲು ನಾನು ಒಪ್ಪುವುದಿಲ್ಲ. ಪ್ರಾಣಿಗಳು ನಿಸ್ಸಹಾ

ಯಕವಾದದ್ದೂ, ಅವು ಮನುಷ್ಯನ ರಕ್ಷಣೆಗೆ–ಅವನ ಕ್ರೌರ್ಯದಿಂದ ರಕ್ಷಣೆಗೆ–ಅರ್ಹವಾಗಿವೆ ಎಂಬುದು ನನ್ನ ಅಭಿಪ್ರಾಯ.

ಆದರೆ ಈ ಸೇವೆಗೆ ಯೋಗ್ಯತೆಯನ್ನು ಸಂಪಾದಿಸಿಕೊಳ್ಳದೆ ಇರುವವರು ಕುರಿಗಳಿಗೆ ಯಾವ ರಕ್ಷಣೆಯನ್ನೂ ಕೊಡಲಾರರು. ಈ ಅಧರ್ಮವಾದ ಬಲಿಯಿಂದ ಕುರಿಗಳನ್ನು ಉಳಿಸಬೇಕಾದರೆ ನನ್ನಲ್ಲಿ ಇನ್ನೂ ಹೆಚ್ಚಾಗಿ ಆತ್ಮಶುದ್ಧಿಯೂ ತ್ಯಾಗವೂ ಬೆಳೆಯಬೇಕು. ಇಂದು ಈ ಆತ್ಮಶುದ್ಧಿ ಮತ್ತು ತ್ಯಾಗಕ್ಕಾಗಿ ಹಂಬಲಿಸುತ್ತಾ ಸಾಯಬೇಕೆಂದು ನನಗೆ ತೋರುತ್ತದೆ. ನಮ್ಮನ್ನು ಈ ಮಹಾಪಾತಕದಿಂದ ಬಿಡುಗಡೆ ಮಾಡಿ, ನಿರಪರಾಧಿಗಳಾದ ಪ್ರಾಣಿಗಳನ್ನು ರಕ್ಷಿಸಿ, ದೇವಾಲಯಗಳನ್ನು ಪವಿತ್ರ ಮಾಡುವ, ಕರುಣಾಮಯರಾದ ತೇಜಸ್ವೀ ಪುರುಷ ಅಥವಾ ಸಾಧ್ವಿಮಣಿ, ಈ ಭೂಮಿಯಲ್ಲಿ ಜನ್ಮವೆತ್ತಲಿ ಎಂಬುದೇ ಪರಮಾತ್ಮನಲ್ಲಿ ನನ್ನ ಸತತ ಪ್ರಾರ್ಥನೆ. ಜ್ಞಾನಿಗಳೂ, ಬುದ್ಧಿಶಾಲಿಗಳೂ ಭಾವಜೀವಿಗಳೂ ತ್ಯಾಗಿಗಳೂ ಆದ ಬಂಗಾಳಿಗಳು ಈ ಹತ್ಯೆಯನ್ನು ಸಹಿಸುವರೇಕೆ ?

ಗೋಖಲೆಯವರೊಡನೆ ಒಂದು ತಿಂಗಳು–೩

ಧರ್ಮದ ಹೆಸರಿನಲ್ಲಿ ಕಾಳಿಗೆ ಅರ್ಪಿಸುತ್ತಿದ್ದ ಭಯಂಕರವಾದ ಬಲಿಯನ್ನು ನೋಡಿ, ಬಂಗಾಳಿಗಳ ಜೀವನವನ್ನು ಇನ್ನೂ ಹೆಚ್ಚಾಗಿ ತಿಳಿಯಬೇಕೆಂದು ನನಗೆ ಬಯಕೆಯುಂಟಾಯಿತು. ನಾನು ಬ್ರಹ್ಮಸಮಾಜವನ್ನು ಕುರಿತು ಬಹಳ ಓದಿದ್ದೆನು. ಆದರ ವಿಷಯವೂ ನನಗೆ ಬಹುಮಟ್ಟಿಗೆ ಗೊತ್ತಿದ್ದಿತು. ಪ್ರತಾಪಚಂದ್ರ ಮಜುಂದಾರರ ಜೀವನ ಚರಿತ್ರೆಯೂ ನನಗೆ ಕೆಲವು ಮಟ್ಟಿಗೆ ಗೊತ್ತಿದ್ದಿತು. ಅವರು ಭಾಷಣ ಮಾಡಿದ ಕೆಲವು ಸಭೆಗಳಿಗೂ ನಾನು ಹೋಗಿದ್ದೆನು. ಅವರು ಬರೆದಿದ್ದ ಕೇಶವಚಂದ್ರಸೇನರ ಜೀವನ ಚರಿತ್ರೆಯನ್ನು ತಂದು ತುಂಬ ಉತ್ಸಾಹದಿಂದ ಓದಿದೆನು. ನನಗೆ ಸಾಧಾರಣ ಬ್ರಹ್ಮಸಮಾಜ ಮತ್ತು ಆದಿ ಬ್ರಹ್ಮಸಮಾಜಗಳಿಗೆ ಇದ್ದ ವ್ಯತ್ಯಾಸ ಗೊತ್ತಾಯಿತು. ನಾನು ಶ್ರೀ ಶಿವನಾಥ ಶಾಸ್ತ್ರಿಯವರನ್ನು ಹೋಗಿ ನೋಡಿದೆನು. ಪ್ರೊಫೆಸರ್ ಕಥಾವಟೆಯವರೊಡನೆ ಮಹರ್ಷಿ ದೇವೇಂದ್ರ

ನಾಥ ಠಾಕೂರರನ್ನು ನೋಡಲು ಹೋದೆವು. ಆದರೆ ಅವರ ಸಂದರ್ಶನಕ್ಕೆ ಅವಕಾಶ ಕೊಡುತ್ತಿರಲಿಲ್ಲವಾದುದರಿಂದ ಅವರನ್ನು ನೋಡಲಾಗಲಿಲ್ಲ. ಆದರೆ ಅವರ ನಿವಾಸದಲ್ಲಿ ನಡೆದ ಬ್ರಹ್ಮಸಮಾಜದ ಒಂದು ಉತ್ಸವಕ್ಕೆ ನಮ್ಮನ್ನು ಆಹ್ವಾನಿಸಿದರು. ಅಲ್ಲಿ ನಮಗೆ ಸೊಗಸಾದ ಬಂಗಾಳೀ ಸಂಗೀತವನ್ನು ಕೇಳುವ ಸುಸಂಧಿ ದೊರಕಿತು. ಅಂದಿನಿಂದ ನಾನು ಬಂಗಾಳೀ ಸಂಗೀತದ ಪ್ರೇಮಿಯಾಗಿದ್ದೇನೆ.

ಬ್ರಹ್ಮಸಮಾಜದ ವಿಷಯವನ್ನು ಇಷ್ಟು ತಿಳಿದುಕೊಂಡ ಮೇಲೆ ಸ್ವಾಮಿ ವಿವೇಕಾನಂದರನ್ನು ನೋಡದೆ ತೃಪ್ತಿ ಎಲ್ಲಿ ? ಆದುದರಿಂದ ನಾನು ಬಹಳ ಉತ್ಸಾಹದಿಂದ ಬೇಲೂರು ಮಠಕ್ಕೆ ಬಹು ಭಾಗ ನಡೆದುಕೊಂಡೇ ಹೋದೆನು. ದೂರವಾಗಿ ಏಕಾಂತ ಸ್ಥಾನದಲ್ಲಿದ್ದ ಮಠದ ಸನ್ನಿವೇಶ ನನಗೆ ಸಂತೋಷವುಂಟುಮಾಡಿತು. "ಸ್ವಾಮಿಗಳು ಕಲ್ಕತ್ತೆಯ ತಮ್ಮ ಮನೆಯಲ್ಲಿ ಕಾಯಿಲೆ ಮಲಗಿದ್ದಾರೆ. ನೋಡಲು ಸಾಧ್ಯವಿಲ್ಲ" ಎಂದು ತಿಳಿದು ನನಗೆ ದುಃಖವೂ ನಿರಾಶೆಯೂ ಉಂಟಾಯಿತು.

ಅನಂತರ ನಾನು ಸಿಸ್ಟರ್ (ಭಗಿನಿ) ನಿವೇದಿತಾರವರ ಮನೆ ಎಲ್ಲಿದೆ ಎಂದು ಕೇಳಿ ತಿಳಿದುಕೊಂಡೆನು. ಆಕೆ ಇದ್ದ ಚೌರಂಗಿ ಭವನಕ್ಕೆ ಹೋಗಿ ಆಕೆಯನ್ನು ಸಂಧಿಸಿದೆನು. ಅವಳ ಸುತ್ತ ಇದ್ದ ವೈಭವವನ್ನು ನೋಡಿ ನಾನು ಆಶ್ಚರ್ಯಚಕಿತನಾದೆನು. ನಮ್ಮ ಸಂಭಾಷಣೆಯಲ್ಲಿಯೂ ಆಕೆಗೂ ನನಗೂ ಹೆಚ್ಚು ಸಹಮತವಿರಲಿಲ್ಲ. ಆಮೇಲೆ ನಾನು ಈ ವಿಷಯವನ್ನು ಒಂದು ಗೋಖಲೆಯವರಲ್ಲಿ ಹೇಳಿದೆನು. ಅವರು ನನಗೂ, ಬಹಳ ಉತ್ಸಾಹ ಚಂಚಲತೆಯುಳ್ಳ ಆಕೆಗೂ ಹೊಂದಾಣಿಕೆ ಆಗದಿದ್ದುದು ಆಶ್ಚರ್ಯವಲ್ಲವೆಂದು ಹೇಳಿದರು.

ನಾನು ಆಕೆಯನ್ನು ಮತ್ತೆ ಪೆಸ್ತೊಂಜೀ ಪಾದಷಾರವರ ಮನೆಯಲ್ಲಿ ಸಂಧಿಸಿದೆನು. ಆಕೆ, ನಾನು ಅಲ್ಲಿ ಹೋದಾಗ ಪೆಸ್ತೊಂಜಿಯವರ ವೃದ್ಧ ತಾಯಿಯೊಂದಿಗೆ ಮಾತನಾಡುತ್ತಿದ್ದಳು. ಆದುದರಿಂದ ನಾನು ದ್ವಿಭಾಷಿಯಾದೆನು. ಅವಳೊಂದಿಗೆ ನನಗೆ ಸಹಮತವುಂಟಾಗದಿದ್ದರೂ ಅವಳಿಗೆ ಹಿಂದೂ ಧರ್ಮದಲ್ಲಿದ್ದ ಅಪಾರವಾದ ಪ್ರೇಮಕ್ಕಾಗಿ ಆಕೆಯನ್ನು ಬಹಳ

ಮೆಚ್ಚಿದೆನು. ಆಕೆಯು ಬರೆದಿದ್ದ ಗ್ರಂಥಗಳ ವಿಷಯವನ್ನು ನಾನು ಅನಂತರ ಅರಿತೆನು.

ಕಲ್ಕತ್ತಾದಲ್ಲಿ ನನ್ನ ಕಾಲವನ್ನು ನಾನು, ದಕ್ಷಿಣ ಆಫ್ರಿಕಾದ ಕೆಲಸದ ವಿಷಯದಲ್ಲಿ ಮುಖಂಡರನ್ನು ನೋಡುವುದು ಮತ್ತು ಅಲ್ಲಿಯ ನಾನಾ ಧಾರ್ಮಿಕ ಮತ್ತು ಸಾರ್ವಜನಿಕ ಸಂಸ್ಥೆಗಳನ್ನು ಸಂದರ್ಶಿಸುವುದು ಹೀಗೆ ವಿನಿಯೋಗಿಸುತ್ತಿದ್ದೆನು. ಬೋಯರ್ ಯುದ್ಧದಲ್ಲಿ ಭಾರತೀಯ ಯೋಧ ಶುಶ್ರೂಷಾದಳದವರು ಮಾಡಿದ ಕಾರ್ಯವನ್ನು ಕುರಿತು ಡಾಕ್ಟರ್ ಮಲ್ಲಿಕ್ ರವರ ಅಧ್ಯಕ್ಷತೆಯಲ್ಲಿ ಒಂದು ಭಾಷಣ ಮಾಡಿದೆನು. 'ಇಂಗ್ಲಿಷ್‌ಮನ್' ಪತ್ರಿಕೆಯೊಂದಿಗೆ ನನಗಿದ್ದ ಪರಿಚಯದಿಂದ ಆಗಲೂ ತುಂಬಾ ಸಹಾಯ ವಾಯಿತು. ಮಿ. ಸಾಂಡರ್ಸ್‌ರು ಆಗ ಕಾಯಿಲೆ ಬಿದ್ದಿದ್ದರು. ಆದರೂ ೧೮೯೬ರಲ್ಲಿ ನನಗೆ ಮಾಡಿದಷ್ಟೇ ಸಹಾಯವನ್ನು ಈಗಲೂ ಮಾಡಿದರು. ಗೋಖಲೆಯವರು ನನ್ನ ಈ ಭಾಷಣವನ್ನು ಬಹಳ ಮೆಚ್ಚಿದರು. ಡಾಕ್ಟರ್ ರಾಯರು ಅದರ ಪ್ರಶಂಸೆ ಮಾಡಿದುದನ್ನು ಕೇಳಿ ಅವರಿಗೆ ಬಹಳ ಸಂತೋಷ ವಾಯಿತು.

ಹೀಗೆ ಗೋಖಲೆಯವರ ಮನೆಯಲ್ಲಿ ನನ್ನ ವಾಸದಿಂದ, ನಾವು ಕಲ್ಕತ್ತಾದಲ್ಲಿ ಮಾಡಬೇಕಾದ ಕೆಲಸ ಬಹಳ ಸುಲಭವಾಯಿತು. ಅದರಿಂದ ನನಗೆ ಅನೇಕ ಪ್ರಮುಖ ವಂಗ ಸಂಸಾರಗಳ ಪರಿಚಯವಾಗಿ, ಬಂಗಾಳಿ ಗಳೊಂದಿಗೆ ನನ್ನ ನಿಕಟ ಸಂಪರ್ಕಕ್ಕೆ ನಾಂದಿಯಾಯಿತು.

ಎಂದಿಗೂ ಜ್ಞಾಪಕವಿರುವ, ಆ ತಿಂಗಳಿನ ಅನೇಕ ನೆನಪುಗಳನ್ನು ಬಿಟ್ಟು ಮುಂದೆ ಹೋಗಬೇಕು. ಬರ್ಮಾಕ್ಕೆ ನಾನು ಕೊಟ್ಟ ಅವಸರದ ಭೇಟಿಯನ್ನೂ ಅಲ್ಲಿಯ ಪೂಂಗಿ (ಭಿಕ್ಷು) ಗಳನ್ನು ನೋಡಿದುದನ್ನೂ ಒಂದೆ ರಡು ಮಾತುಗಳಲ್ಲಿ ಹೇಳುತ್ತೇನೆ. ಅವರ ಸೋಮಾರಿತನವನ್ನು ನೋಡಿ ನನಗೆ ದುಃಖವುಂಟಾಯಿತು. ಅಲ್ಲಿಯ ಚಿನ್ನದ ದೇವಾಲಯವನ್ನು ನೋಡಿ ದೆನು. ಅಸಂಖ್ಯಾತವಾದ ಸಣ್ಣ ಸಣ್ಣ ಮೇಣದ ಬತ್ತಿಗಳು ಉರಿಯುತ್ತಿದ್ದುದು ನನಗೆ ಸಂತೋಷವಾಗಲಿಲ್ಲ. ಗರ್ಭಗುಡಿಯಲ್ಲಿ ಇಲಿಗಳು ಓಡಾಡುತ್ತಿದ್ದು ದನ್ನು ನೋಡಿದಾಗ, ಸ್ವಾಮಿ ದಯಾನಂದರಿಗೆ ಮೂರ್ತಿ ಪೂಜೆಯಲ್ಲಿ ಉಂಟಾದ ಅನುಭವಗಳು ನನ್ನ ಮನಸ್ಸಿಗೂ ಬಂದುವು. ಬರ್ಮಾ ಸ್ತ್ರೀಯರ

ಸ್ವಾತಂತ್ರ್ಯ, ಉತ್ಸಾಹಗಳು, ಪುರುಷರ ಸೋಮಾರಿತನ ನನಗೆ ದುಃಖ ವುಂಟುಮಾಡಿದಂತೆ, ನನ್ನನ್ನು ಮುಗ್ಧನನ್ನಾಗಿ ಮಾಡಿದುವು. ನಾನು ಅಲ್ಲಿದ್ದ ಆ ಅಲ್ಪ ಕಾಲದಲ್ಲಿ, ಒಂಬಾಯಿ ಭಾರತವಲ್ಲ ಎಂಬುದು ತಿಳಿದಂತೆ, ರಂಗೂನ್ ಬರ್ಮಾ ಅಲ್ಲ ಎಂಬುದು ಗೊತ್ತಾಯಿತು. ಮತ್ತು ನಾವು ಭಾರತ ದಲ್ಲಿ ಇಂಗ್ಲಿಷ್ ವ್ಯಾಪಾರಿಗಳ ಕಮಿಷನ್ ಏಜೆಂಟರಾಗಿರುವಂತೆ ಬರ್ಮಾ ದಲ್ಲಿಯೂ ಬರ್ಮೀಯರನ್ನು ನಮ್ಮ ಕಮಿಷನ್ ಏಜೆಂಟರನ್ನಾಗಿ ಮಾಡುವುದ ದಲ್ಲಿ ಇಂಗ್ಲಿಷ್ ವರ್ತಕರೊಂದಿಗೆ ಸೇರಿಕೊಂಡಿದ್ದೇವೆ ಎಂಬುದೂ ಗೊತ್ತಾ ಯಿತು.

ಬರ್ಮಾದಿಂದ ಹಿಂದಿರುಗಿದ ತರುವಾಯ ನಾನು ಗೋಖಲೆಯವರಿಂದ ಬೀಳ್ಕೊಂಡೆನು. ಆ ವಿಯೋಗ ನನಗೆ ಬಹಳ ದುಃಖವನ್ನುಂಟು ಮಾಡಿತು. ಆದರೆ ಬಂಗಾಳದಲ್ಲಿ—ಅಥವಾ ಕಲ್ಕತ್ತದಲ್ಲಿ—ನಾನು ಮಾಡುವ ಕೆಲಸ ಮುಗಿದಿದ್ದುದರಿಂದ, ನಾನು ಅಲ್ಲಿ ಇನ್ನು ಹೆಚ್ಚು ಕಾಲ ಇರಬೇಕಾದ ಕಾರಣ ವಿರಲಿಲ್ಲ.

ಒಂದು ಸ್ಥಳದಲ್ಲಿ ನಲೆಯಾಗಿ ನಿಲ್ಲುವುದಕ್ಕೆ ಮುಂಚೆ, ಭಾರತವನ್ನೆಲ್ಲ ರೈಲಿನ ಮೂರನೆಯ ದರ್ಜೆಯಲ್ಲಿ ಪ್ರಯಾಣಮಾಡಿ, ಆ ತರಗತಿಯವರ ಕಷ್ಟಗಳನ್ನು ತಿಳಿದುಕೊಳ್ಳಬೇಕೆಂದು ಯೋಚನೆ ಮಾಡಿದ್ದೆನು. ಈ ವಿಷಯ ವನ್ನು ನಾನು ಗೋಖಲೆಯವರೊಂದಿಗೆ ಮಾತನಾಡಿದೆನು. ಪ್ರಾರಂಭದಲ್ಲಿ ಅವರು ನನ್ನನ್ನು ಹಾಸ್ಯಮಾಡಿದರು. ಆದರೆ ನಾನು ಏನನ್ನು ನೋಡಲು ನಿರೀಕ್ಷಿಸುತ್ತಿರುವೆನೆಂಬುದನ್ನು ಅವರಿಗೆ ಹೇಳಿದಮೇಲೆ, ಅವರು ಸಂತೋಷ ದಿಂದ ಒಪ್ಪಿದರು. ನಾನು ಮೊದಲು ವಾರಾಣಸಿಗೆ ಹೋಗಿ, ಅಲ್ಲಿ ಕಾಯಿಲೆ ಮಲಗಿದ್ದ ಶ್ರೀಮತಿ ಬೆಸೆಂಟರಿಗೆ ನನ್ನ ಗೌರವಾರ್ಪಣೆಮಾಡಿ ಬರಬೇಕೆಂದು ಯೋಚಿಸಿದೆನು.

ನನ್ನ ಮೂರನೆಯ ದರ್ಜೆಯ ಪ್ರಯಾಣಕ್ಕಾಗಿ ಹೊಸ ಸಿದ್ಧತೆಗಳನ್ನು ಮಾಡಿಕೊಳ್ಳುವುದು ಅವಶ್ಯಕವಾಗಿದ್ದಿತು. ಗೋಖಲೆಯವರೇ ನನಗೆ ಒಂದು ಹಿತ್ತಾಳೆಯ ತಿಂಡಿ ಡಬ್ಬಿಯನ್ನು ಕೊಟ್ಟು ಅದರಲ್ಲಿ ಪೂರಿ ಲಾಡು ಗಳನ್ನು ತುಂಬಿಸಿದರು. ನಾನು ಹನ್ನೆರಡಾಣೆ ಕೊಟ್ಟು ಒಂದು ಕ್ಯಾನ್‌ವಾಸ್ ಚೀಲವನ್ನೂ, ಪೋರ್ ಬಂದರಿನ ಛಾಯಾ ಎಂಬಲ್ಲಿ ತಯಾರಾದ ಒಂದು

ಉಣ್ಣೆಯ ನಿಲುವಂಗಿಯನ್ನೂ ಕೊಂಡುಕೊಂಡೆನು. ಈ ಚೀಲದಲ್ಲಿ ಈ ನಿಲುವಂಗಿ, ಒಂದು ಪಂಚೆ, ಒಂದು ಷರಟು ಒಂದು ಟವಲು ಹಿಡಿಸುತ್ತಿದ್ದಿತು. ಹೊದೆದುಕೊಳ್ಳಲು ಒಂದು ಕಂಬಳಿ ಮತ್ತು, ಒಂದು ನೀರು ತುಂಬುವ ಹೂಜಾವನ್ನೂ ಇಟ್ಟುಕೊಂಡೆನು. ಹೀಗೆ ಸಿದ್ಧನಾಗಿ ನಾನು ಪ್ರಯಾಣ ಹೊರಟೆನು. ಗೋಖಲೆಯವರೂ ಡಾಕ್ಟರ್ ರಾಯರೂ ಸ್ಟೇಷನ್‌ಗೆ ಬಂದು ನನ್ನನ್ನು ಕಳುಹಿಸಿಕೊಟ್ಟರು. "ನೀವು ತೊಂದರೆ ತೆಗೆದುಕೊಳ್ಳಬೇಡಿ" ಎಂದು ನಾನು ಅವರಿಬ್ಬರಿಗೂ ಹೇಳಿದ್ದೆನು. ಆದರೆ ಬಂದೇ ಬರುವುದಾಗಿ ಅವರು ಒತ್ತಾಯ ಮಾಡಿದರು. ಗೋಖಲೆಯವರು "ನೀವು ಪ್ರಥಮ ದರ್ಜೆಯಲ್ಲಿ ಹೋಗಿದ್ದರೆ ನಾನು ಇಲ್ಲಿ ಬರುತ್ತಿರಲಿಲ್ಲ. ಆದರೆ ಈಗ ಬರಲೇ ಬೇಕಾಯಿತು" ಎಂದರು.

ಗೋಖಲೆಯವರು ಪ್ಲಾಟ್‌ಫಾರಂಗೆ ಹೋಗುವಾಗ ಅವರನ್ನು ಯಾರೂ ತಡೆಯಲಿಲ್ಲ. ಅವರು ರೇಶಿಮೆ ರುಮಾಲು ಅಂಗಿ ಪಂಚೆಗಳನ್ನು ಧರಿಸಿದ್ದರು. ಡಾಕ್ಟರ್ ರಾಯ್ ತಮ್ಮ ಬಂಗಾಳಿ ಉಡುಪನ್ನು ಧರಿಸಿದ್ದರು. ಟಿಕೇಟನ್ನು ಪರೀಕ್ಷಿಸುವ ಗುಮಾಸ್ತ, ಅವರನ್ನು ತಡೆದನು. ಆದರೆ ಗೋಖಲೆಯವರು "ಇವರು ನನ್ನ ಮಿತ್ರರು" ಎಂದು ಹೇಳಿದ ಮೇಲೆ, ಡಾಕ್ಟರ್ ರಾಯರನ್ನೂ ಒಳಕ್ಕೆ ಬಿಟ್ಟರು.

ಹೀಗೆ ಅವರ ಶುಭಾಶಯಗಳೊಂದಿಗೆ ನಾನು ನನ್ನ ಪ್ರಯಾಣವನ್ನು ಪ್ರಾರಂಭಿಸಿದೆನು.

೨೦

ವಾರಾಣಸಿಯಲ್ಲಿ

ನಾನು ಕಲ್ಕತ್ತದಿಂದ ರಾಜಕೋಟೆಗೆ ಪ್ರಯಾಣ ಹೊರಟಿದ್ದೆನು. ದಾರಿಯಲ್ಲಿ ವಾರಾಣಸಿ, ಆಗ್ರಾ, ಜಯಪುರ್, ಪಾಲನ್‌ಪುರ್‌ಗಳಲ್ಲಿ ಇಳಿದು ನೋಡಿಕೊಂಡು ಹೋಗುವುದು ನನ್ನ ಉದ್ದೇಶವಾಗಿದ್ದಿತು. ನನಗೆ ಜ್ಞಾಪಕವಿರುವ ಮಟ್ಟಿಗೆ, ಈ ಪ್ರಯಾಣಕ್ಕೆ ನಾನು ರೈಲು ಟಿಕೆಟ್ಟಿಗೆ ಕೊಟ್ಟ ಹಣವೂ ಸೇರಿ ಮುವತ್ತೊಂದು ರೂಪಾಯಿಗಳಿಗಿಂತ ಹೆಚ್ಚಾಗಿ ವೆಚ್ಚಮಾಡಲಿಲ್ಲ.

ಮೂರನೆಯ ತರಗತಿಯಲ್ಲಿ ಪ್ರಯಾಣ ಮಾಡುವಾಗ ನಾನು ಹೆಚ್ಚಾಗಿ, ಮೇಲನ್ನು ಬಿಟ್ಟು ಸಾಧಾರಣ ಗಾಡಿಯಲ್ಲಿಯೇ, ಪ್ರಯಾಣ ಮಾಡುತ್ತಿದ್ದೆನು. ಸಾಧಾರಣ ಗಾಡಿಗಳಲ್ಲಿ ಗುಂಪು ಕಡಿಮೆ ಮತ್ತು ಟಿಕೆಟ್ಟಿಗೆ ಕೊಡುವ ಹಣವೂ ಕಡಿಮೆ ಎಂಬುದು ನನಗೆ ಗೊತ್ತಿದ್ದಿತು.

ಇಂದೂ ಸಹ ಮೂರನೆಯ ದರ್ಜೆಯ ಗಾಡಿಗಳು ಹಿಂದೆ ಇದ್ದಷ್ಟೇ ಕೊಳಕಾಗಿವೆ. ಶೌಚಗೃಹಗಳೂ ಅಷ್ಟೇ ಅಶುಚಿಯಾಗಿವೆ. ಈಗ ಸ್ವಲ್ಪ ಉತ್ತಮವಾಗಿರಬಹುದು. ಆದರೆ ಒಂದು ಎರಡನೆಯ ದರ್ಜೆಯ ಗಾಡಿಗಳಲ್ಲಿ ಏರ್ಪಡಿಸಿರುವ ಸೌಕರ್ಯ ಆ ತರಗತಿಗಳಿಗೆ ಕೊಡುವ ಹೆಚ್ಚು ಹಣಕ್ಕಿಂತ, ಬಹಳ ಅಧಿಕವಾಗಿದೆ. ಮೂರನೆಯ ತರಗತಿಯ ಪ್ರಯಾಣಿಕರನ್ನು ಕುರಿಗಳಂತೆ ಕಾಣುತ್ತಾರೆ. ಅವರಿಗೆ ಕೊಡುವ ಸೌಕರ್ಯವೂ ಕುರಿಗಳಿಗೆ ಕೊಡುವ ಸೌಕರ್ಯಗಳೇ. ನಾನು ಯೂರೋಪಿನಲ್ಲಿ ಒಂದು ಸಲ ಮೂರನೆಯ ದರ್ಜೆಯಲ್ಲಿ ಪ್ರಯಾಣ ಮಾಡಿದೆ—ಹೇಗಿದೆ ಎಂಬುದನ್ನು ನೋಡುವುದಕ್ಕಾಗಿ. ಒಂದೇ ಸಲ ಮೊದಲನೆಯ ದರ್ಜೆಯಲ್ಲಿಯೂ ಪ್ರಯಾಣ ಮಾಡಿದೆ—ಆದರೆ ಅಲ್ಲಿ ಮೊದಲನೆಯ ತರಗತಿಗೂ ಮೂರನೆಯ ತರಗತಿಗೂ ಇಷ್ಟು ವ್ಯತ್ಯಾಸವಿಲ್ಲ. ದಕ್ಷಿಣ ಆಫ್ರಿಕಾದಲ್ಲಿ ಮೂರನೆಯ ದರ್ಜೆಯಲ್ಲಿ ಪ್ರಯಾಣ ಮಾಡುವವರು ಹೆಚ್ಚಾಗಿ ನೀಗ್ರೋ ಜನರು. ದಕ್ಷಿಣ ಆಫ್ರಿಕಾದ ಕೆಲವು ಭಾಗಗಳಲ್ಲಿ ಮೂರನೆಯ ತರಗತಿಯ ಗಾಡಿಗಳಲ್ಲಿ ಮಲಗಲು ಸ್ಥಳ ಮತ್ತು ಮೆತ್ತನೆಯ ಆಸನಗಳೂ ಸಹ ಒದಗಿಸಿದ್ದಾರೆ. ಗುಂಪು ಹೆಚ್ಚದಂತೆ, ಕೂರುವವರ ಸಂಖ್ಯೆಯನ್ನೂ ಮಿತಗೊಳಿಸಿದ್ದಾರೆ. ಆದರ ಇಲ್ಲಿ ನಿಗದಿಯಾದ ಸಂಖ್ಯೆಯನ್ನು ಮೀರಿಯೇ ಜನ ಸಾಧಾರಣವಾಗಿ ಗಾಡಿಗೆ ತುಂಬುತ್ತಾರೆ.

ಮೂರನೆಯ ದರ್ಜೆಯ ಪ್ರಯಾಣಿಕರ ಸೌಕರ್ಯದ ವಿಷಯದಲ್ಲಿ ರೈಲ್ವೆ ಅಧಿಕಾರಿಗಳ ಔದಾಸೀನ್ಯ, ಜತೆಗೆ ಪ್ರಯಾಣಿಕರ ಕೊಳಕು ಮತ್ತು ಇತರರ ಅನಾನುಕೂಲವನ್ನೂ ಗಣಿಸದ ಸ್ವೇಚ್ಛಾಪ್ರವರ್ತನೆ ಇವುಗಳಿಂದ ಪರಿಶುದ್ಧ ಸ್ವಭಾವದ ಪ್ರಯಾಣಿಕರಿಗೆ ಬಹಳ ಕಷ್ಟವಾಗಿ ಒಂದು ಶಿಕ್ಷೆಯನ್ನೇ ಅನುಭವಿಸುವಂತಾಗುತ್ತದೆ. ದುರಾಭ್ಯಾಸಗಳೆಂದರೆ ಗಾಡಿಯಲ್ಲಿ ಎಲ್ಲಿ ಬೇಕಾದರೂ ಉಗುಳುವುದು ಕಸಕಡ್ಡಿಗಳನ್ನು ಹಾಕುವುದು, ಎಲ್ಲೆಲ್ಲಿಯೂ

ಯಾವಾಗಲೂ ಹೊಗೆಬತ್ತಿ ಸೇದುತ್ತಿರುವುದು, ವಿಳ್ಯದೆಲೆ ಅಡಿಕೆ ಹೊಗೆ ಸೊಪ್ಪನ್ನು ಅಗಿಯುತ್ತಿರುವುದು ; ಗಾಡಿಯಲ್ಲೇ ಕೂಗುವುದು ಕಿರಚುವುದು ಬಯ್ಯುವುದು, ಜತೆ ಪ್ರಯಾಣಿಕರ ಯಾವ ಅಸೌಕರ್ಯವನ್ನು ಗಮನಿಸದಿರುವುದು ಮುಂತಾದುವೆಲ್ಲ ಸೇರಿವೆ. ನಾನು ೧೯೦೨ರಲ್ಲಿ ಮಾಡಿದ ಮೂರನೆಯ ದರ್ಜೆಯ ಪ್ರಯಾಣದ ಅನುಭವಗಳಿಗೂ ಮತ್ತು ೧೯೧೫ರಿಂದ ೧೯೧೯ರ ವರೆಗೆ ಅವಿಚ್ಛಿನ್ನವಾಗಿ ಮಾಡಿದ ಮೂರನೆಯ ತರಗತಿಯ ಪ್ರಯಾಣದ ಅನುಭವಗಳಿಗೂ ಯಾವ ವ್ಯತ್ಯಾಸವೂ ನನಗೆ ಕಾಣಬಂದಿಲ್ಲ.

ಈ ಘೋರ ಪರಿಸ್ಥಿತಿಗೆ ನನಗೆ ತೋರುವುದು ಒಂದೇ ಪರಿಹಾರ ಮಾರ್ಗ ; ವಿದ್ಯಾವಂತರು ಮೂರನೆಯ ತರಗತಿಯಲ್ಲಿಯೇ ಪ್ರಯಾಣ ಮಾಡಲು ಬದ್ಧಕಂಕಣರಾಗಬೇಕು. ಪ್ರಯಾಣಿಕರ ಅಭ್ಯಾಸಗಳನ್ನೂ ಅವರು ತಿದ್ದಬೇಕು. ಜತೆಗೆ ರೈಲ್ವೆ ಅಧಿಕಾರಿಗಳು ಸುಮ್ಮನೆ ಕುಳಿತಿರಲು ಅವಕಾಶ ಕೊಡಬಾರದು. ಅವರಿಗೆ ಪದೇ ಪದೇ ಹೇಳುತ್ತಲೇ ಇರಬೇಕು. ಅರ್ಜಿಗಳನ್ನೂ ಮನವಿಗಳನ್ನೂ ಕೊಡುತ್ತಲೇ ಇರಬೇಕು. ರೈಲಿನಲ್ಲಿ ತಮ್ಮ ಸ್ವಂತ ಸುಖಪ್ರಯಾಣಕ್ಕಾಗಿ ಲಂಚ ಮುಂತಾದುವನ್ನು ಕೊಡಬಾರದು. ನಿಯಮಗಳನ್ನು ಯಾರು ಮೀರಿ ನಡೆದರೂ ಸಹಿಸಬಾರದು. ಇದರಿಂದ ಪರಿಸ್ಥಿತಿ ಬಹುಮಟ್ಟಿಗೆ ಉತ್ತಮಗೊಳ್ಳುವುದೆಂದು ನಾನು ಖಂಡಿತವಾಗಿ ಹೇಳಬಲ್ಲೆನು.

೧೯೧೮-೧೯ರಲ್ಲಿ ನನಗೆ ತೀವ್ರ ಕಾಯಿಲೆಯುಂಟಾದುದರಿಂದ ನಾನು ದುರದೃಷ್ಟವಶದಿಂದ ಮೂರನೆಯ ತರಗತಿಯ ಪ್ರಯಾಣವನ್ನು ಬಿಡಬೇಕಾಯಿತು. ಅದು ನನಗೆ ಶಾಶ್ವತ ದುಃಖ ಮತ್ತು ನಾಚಿಕೆಯ ಪ್ರಸಂಗವಾಗಿದೆ. ಏಕೆಂದರೆ ಮೂರನೆಯ ತರಗತಿಯ ಪ್ರಯಾಣಿಕರ ಕಷ್ಟನಿವಾರಣೆಯ ಚಳುವಳಿ ಆಗ ಫಲಕಾರಿಯಾಗುವ ಮಾರ್ಗವನ್ನು ಹಿಡಿದಿದ್ದಿತು. ರೈಲ್ವೆ ಮತ್ತು ಹಡಗುಗಳ ಬಡ ಪ್ರಯಾಣಿಕರ ಕಷ್ಟಸ್ಥಿತಿ, ಅವುಗಳನ್ನು ಹೆಚ್ಚಿಸುವ ಅವರ ದುರಭ್ಯಾಸಗಳು, ಸರಕಾರ ಪರದೇಶಿ ವ್ಯಾಪಾರಕ್ಕೆ ಮಾಡಿಕೊಟ್ಟಿರುವ ಮಿತಿಮೀರಿದ ಸೌಲಭ್ಯಗಳು ಇವೆಲ್ಲ ಇಂದಿನ ಮುಖ್ಯ ಪ್ರಶ್ನೆಗಳು. ಇವು ತಮ್ಮ ಸಮಸ್ತ ಕಾಲವನ್ನೂ

ವಿನಿಯೋಗಿಸಿ ಈ ಕೆಲಸ ಮಾಡಬಹುದಾದ ಒಬ್ಬಿಬ್ಬರು ಸತತ ಪ್ರಯತ್ನದ ಸಾಹಸಿ ಕೆಲಸಗಾರರಿಗೆ ಕಾರ್ಯವಾಗುತ್ತದೆ.

ಆದರೆ ಮೂರನೆಯ ದರ್ಜೆಯ ಪ್ರಯಾಣಿಕರನ್ನು ಇಷ್ಟಕ್ಕೇ ಬಿಟ್ಟು ವಾರಾಣಸಿಯ ನನ್ನ ಮುಂದಿನ ಅನುಭವಗಳನ್ನು ಹೇಳುತ್ತೇನೆ. ನಾನು ವಾರಾಣಸಿಯನ್ನು ಪ್ರಾತಃಕಾಲ ತಲುಪಿದೆನು. ಒಬ್ಬ ಪಂಡನ ಮನೆಯಲ್ಲಿ ರುವುದು ನನ್ನ ಉದ್ದೇಶವಾಗಿದ್ದಿತು. ನಾನು ರೈಲಿನಿಂದ ಇಳಿದ ಕೂಡಲೇ ಅಸಂಖ್ಯಾತ ಬ್ರಾಹ್ಮಣರು ನನ್ನನ್ನು ಸುತ್ತು ಗಟ್ಟಿದರು. ಅವರ ಪೈಕಿ ಇರುವುದರಲ್ಲಿ ಶುಚಿಯಾಗಿ ಉತ್ತಮರಾದವರೆಂದು ತೋರಿದವರೊಬ್ಬರನ್ನು ನಾನು ಆರಿಸಿಕೊಂಡು ಅವರ ಮನೆಗೆ ಹೋದೆನು. ನನ್ನ ಚುನಾವಣೆ ಸರಿಯಾಗಿದ್ದಿತೆಂದು ಆಮೇಲೆ ತೋರಿತು. ಅವರ ಪಡಸಾಲೆಯಲ್ಲಿ ಒಂದು ಹಸುವು ಇದ್ದಿತು. ಮಹಡಿಯ ಮೇಲೆ, ನಾನು ಇಳಿದುಕೊಳ್ಳಲು ಅವರು ನನಗೆ ಒಂದು ಕೊಠಡಿಯನ್ನು ಕೊಟ್ಟರು. ಗಂಗಾ ನದಿಯಲ್ಲಿ ವಿಧ್ಯುಕ್ತ ಸ್ನಾನಮಾಡದೆ ನನಗೆ ಆಹಾರವನ್ನು ಸೇವಿಸಲು ಇಷ್ಟವಿರಲಿಲ್ಲ. ಪಂಡರು ಮೊದಲೇ ಇದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿದರು. ನಾನು ಅವರಿಗೆ ಇದಕ್ಕಾಗಿ ಒಂದೂಕಾಲು ರೂಪಾಯಿಗಿಂತ ಹೆಚ್ಚಾಗಿ ಒಂದು ಕಾಸನ್ನೂ ದಕ್ಷಿಣೆ ಕೊಡುವುದಿಲ್ಲವೆಂದೂ ಆದುದರಿಂದ ಏರ್ಪಾಡು ಮಾಡುವಾಗ ಇದನ್ನು ನೆನಪಿಡಬೇಕೆಂದೂ ಮೊದಲೇ ಹೇಳಿದ್ದೆನು.

ಪಂಡ, ಇವಕ್ಕೆ ಕೂಡಲೇ ಒಪ್ಪಿಕೊಂಡನು. "ಯಾತ್ರಿಕ ಧನಿಕನಾಗಿರಲಿ, ಬಡವನಾಗಿರಲಿ ಮಾಡಿಸುವ ಪೂಜಾವಿಧಾನ ಎಲ್ಲರಿಗೂ ಒಂದೇ. ಆದರೆ ದಕ್ಷಿಣೆ ಕೊಡುವುದೂ ಯಾತ್ರಿಕರ ಇಚ್ಛೆ ಮತ್ತು ಶಕ್ತಿಗೆ ಸೇರಿದುದು ಎಂದು ಅವನು ಹೇಳಿದನು. ಪಂಡ, ನನ್ನ ವಿಷಯದಲ್ಲಿ ಪೂಜೆ ಮುಂತಾದುವನ್ನು ಕಡಿಮೆ ಮಾಡಿದಂತೆ ನನಗೆ ತೋರಲಿಲ್ಲ. ಹನ್ನೆರಡು ಗಂಟೆಗೆ ಪೂಜೆ ಮುಗಿಯಿತು. ನಾನು ಕಾಶೀ ವಿಶ್ವನಾಥನ ದರ್ಶನಕ್ಕೆ ಹನ್ನೆರಡು ಗಂಟೆಗೆ ದೇವಾಲಯಕ್ಕೆ ಹೋದೆನು. ಅಲ್ಲಿ ನನಗೆ ಕಂಡ ಸಂಗತಿಗಳಿಂದ ನಾನು ತುಂಬ ದುಃಖಿತನಾದೆನು. ಬೊಂಬಾಯಿಯಲ್ಲಿ ನಾನು ಬ್ಯಾರಿಸ್ಟರ್ ವೃತ್ತಿಯಲ್ಲಿದ್ದಾಗ, ಪ್ರಾರ್ಥನಾ ಸಮಾಜದಲ್ಲಿ ನಡೆದ "ಕಾಶೀಯಾತ್ರೆ" ಎಂಬ ಭಾಷಣವನ್ನು ಕೇಳಿದ್ದೆನು. ಇದರಿಂದ ನಾನು ಸ್ವಲ್ಪ ಮಟ್ಟಿಗೆ ನಿರಾಶೆಗೆ ಸಿದ್ಧನಾಗಿ

ದ್ದೆನು. ಆದರೆ ನಾನು ವಾಸ್ತವವಾಗಿ ನೋಡಿದುದು ನಾನು ನಿರೀಕ್ಷಿಸಿದುದ ಕ್ಕಿಂತ ಮೀರಿದುದಾಗಿದ್ದಿತು.

ದೇವಸ್ಥಾನದ ದಾರಿ ಇಕ್ಕಟ್ಟಾದ ಇಳಿಜಾರು ಓಣಿ. ಅಲ್ಲಿ ಅಶಾಂತಿ ತುಂಬಿದ್ದಿತು. ಯಾತ್ರಿಕರೂ ಅಂಗಡಿಯವರೂ ಮಾಡುತ್ತಿದ್ದ ಗದ್ದಲ ಸಹಿ ಸಲಸಾಧ್ಯವಾಗಿದ್ದಿತು.

ಎಲ್ಲಿ ಧ್ಯಾನ, ಭಗವದ್ವಿಷಯ, ಚಿಂತನೆ ಇವು ಇರುವುವೆಂದು ಜನ ನಿರೀಕ್ಷಿಸುತ್ತಾರೆಯೋ, ಅಂತಹ ಸ್ಥಳದಲ್ಲಿ ಅವುಗಳ ಹೆಸರೇ ಇರಲಿಲ್ಲ. ಆ ಶಾಂತಿಯನ್ನು ಭಕ್ತ, ತನ್ನಲ್ಲಿಯೇ ಕಂಡುಕೊಳ್ಳಬೇಕಾಗಿದ್ದಿತು. ಪರಿಸ್ಥಿತಿಯು ಗದ್ದಲವನ್ನು ಮರೆತು ಧ್ಯಾನದಲ್ಲಿ ಲೀನರಾಗಿದ್ದ ಅನೇಕ ಭಗಿನಿಯರನ್ನು ನಾನು ನೋಡಿದೆನು. ಆದರೆ ದೇವಸ್ಥಾನದ ಅಧಿಕಾರಿಗಳಿಗೆ ಇದರ ಕೀರ್ತಿ ಸಲ್ಲತಕ್ಕುದಲ್ಲ. ದೇವಸ್ಥಾನದ ಅಧಿಕಾರಿಗಳು ದೇವಸ್ಥಾನದಲ್ಲಿ ದೈಹಿಕ ಮತ್ತು ಆಧ್ಯಾತ್ಮಿಕವಾದ ಶುದ್ಧವಾದ ಮಧುರವಾದ, ಶಾಂತವಾದ ವಾತಾ ವರಣವನ್ನು ನಿರ್ಮಿಸುವ ಹೊಣೆಗಾರಿಕೆಯನ್ನು ಹೊರಬೇಕು. ಅದರ ಬದಲು ನಾನು ನೋಡಿದುದು ತಂತ್ರಿಗಳಾದ ಅಂಗಡಿಯವರು ಜನರಿಗೆ ಮಿಠಾಯಿ ಗಳನ್ನೂ ಆಧುನಿಕ ರೀತಿಯ ಬೊಂಬೆಗಳನ್ನೂ ಮಾರುತ್ತಿದ್ದ ಅಂಗಡಿ ಬೀದಿಯನ್ನು.

ದೇವಾಲಯದ ಬಾಗಿಲಿಗೆ ನಾನು ಹೋಕ್ಕಾಗ ನನ್ನ ಕಣ್ಣಿಗೆ ಕಂಡುದು ಕೊಳೆತು ದುರ್ನಾತ ಬರುತ್ತಿರುವ ಹಳೆಯ ಹೂವುಗಳ ರಾಶಿ, ನೆಲಕ್ಕೆ, ಸೊಗಸಾದ ಅಮೃತಶಿಲೆಯನ್ನು ಹಾಸಿದ್ದರು. ಆದರೆ ಕಲಾಜ್ಞಾನವಿಲ್ಲದ ಯಾರೋ, ಭಕ್ತರು, ಅದರಲ್ಲೆಲ್ಲ ರೂಪಾಯಿಗಳನ್ನು ಹುದುಗಿಸಿಟ್ಟಿದ್ದರು. ಅದು ಕೊಳ್ಳೆಗೆ ಒಳ್ಳೆಯ ಆಗರವಾಗಿದ್ದಿತು.

ನಾನು ಜ್ಞಾನವಾಪಿ (ಜ್ಞಾನದ ಭಾವಿ)ಯ ಹತ್ತಿರ ಹೋಗಿ ನೋಡಿ ದೆನು. ನಾನು ಅಲ್ಲಿ ದೇವರನ್ನು ಹುಡುಕಿದೆನು. ಆದರೆ ನನಗೆ ಅತ ಸಿಕ್ಕಲಿಲ್ಲ. ಆದುದರಿಂದ ನನ್ನ ಮನಸ್ಸಿಗೆ ಸ್ವಲ್ಪವೂ ಸಮಾಧಾನವುಂಟಾ ಗಿರಲಿಲ್ಲ. ಜ್ಞಾನವಾಪಿಯ ಸುತ್ತ ಮುತ್ತಲ ಆವರಣವೆಲ್ಲ ಕೊಳಕಾಗಿದ್ದಿತು. ದಕ್ಷಿಣೆಯನ್ನು ಕೊಡಲು ನನಗೆ ಮನಸ್ಸು ಬರಲಿಲ್ಲ. ಆದುದರಿಂದ ನಾನು ಒಂದು ಕಾಸನ್ನು ಕೊಟ್ಟೆನು. ಅಲ್ಲಿದ್ದ ಪಂಡ ಕೋಪಗೊಂಡು ಅದನ್ನು

ಎಸೆದನು. ನನ್ನನ್ನು ಬೈದು "ಈ ಅಪಮಾನ ನಿನ್ನನ್ನು ನರಕಕ್ಕೆ ನೇರವಾಗಿ ಎಳೆದೊಯ್ಯುವುದು" ಎಂದು ಹೇಳಿದನು.

ಇದರಿಂದ ನನಗೆ ಗಾಬರಿಯಾಗಲಿಲ್ಲ. "ಮಹಾರಾಜ್, ನನ್ನ ಗತಿ ಏನು ಬೇಕಾದರೂ ಆಗಲಿ. ಇಂತಹ ಮಾತುಗಳನ್ನಾಡುವುದು ನಿಮಗೆ ತರವಲ್ಲ. ತೆಗೆದುಕೊಳ್ಳುವುದಾದರೆ ಈ ಕಾಸನ್ನು ತೆಗೆದುಕೊಳ್ಳಿ. ಇಲ್ಲ ದಿದ್ದರೆ ಅದೂ ನಿಮಗೆ ಇಲ್ಲವಾಗುವುದು" ಎಂದೆನು.

ಅವನು "ಇಲ್ಲಿಂದ ಹೊರಡು, ನಿನ್ನ ಕಾಸು ನನಗೆ ಬೇಡ" ಎಂದನು. ಅನಂತರ ಮತ್ತಷ್ಟು ಬಯ್ದನು.

ನಾನು ಕಾಸನ್ನು ವಾಪಸು ಪಡೆದು "ಬ್ರಾಹ್ಮಣನಿಗೆ ಕಾಸು ಹೋಯಿತು. ನನಗೆ ಒಂದು ಕಾಸು ಉಳಿಯಿತು" ಎಂದುಕೊಂಡು ನನ್ನ ದಾರಿ ಹಿಡಿದೆನು. ಆದರೆ ಆ ಮಹಾರಾಯ, ಕಾಸನ್ನು ಅಷ್ಟು ಸುಲಭವಾಗಿ ಬಿಡುವವನಾಗಿರಲಿಲ್ಲ. ಆತ ನನ್ನನ್ನು ಕರೆದು "ಆಗಲಿ ಕಾಸನ್ನು ಇಲ್ಲಿಡು, ನನಗೆ ನಿನ್ನ ಹಾಗೆ ಇರುವ ಇಷ್ಟವಿಲ್ಲ, ಕಾಸನ್ನು ನಾನು ತಿರಸ್ಕರಿಸಿದರೆ ನಿನಗೆ ಕೆಟ್ಟದಾಗುವುದು" ಎಂದನು.

ನಾನು ಮಾತನಾಡದೆ ಕಾಸನ್ನು ಆತನಿಗೆ ಕೊಟ್ಟು ನಿಟ್ಟುಸಿರು ಬಿಡುತ್ತಾ ಹೊರಟು ಬಂದೆನು.

ಅಲ್ಲಿಂದ ಈಚೆಗೆ ನಾನು ಎರಡು ಸಲ ಕಾಶಿಗೆ ಹೋಗಿದ್ದೇನೆ. ಆದರೆ ಅವು 'ಮಹಾತ್ಮಾ ಪಟ್ಟ ನನಗೆ ಅಂಟಿದ ಮೇಲೆ ; ಮೇಲೆ ಹೇಳಿದ ಅನುಭವ ಗಳು ನನಗೆ ಈಗ ದೊರಕುವಂತಿಲ್ಲ.' ನನ್ನ ದರ್ಶನಾಕಾಂಕ್ಷಿಗಳು ದೇವಾಲಯದ ದರ್ಶನಕ್ಕೇ ನನಗೆ ಅವಕಾಶ ಕೊಡುತ್ತಿಲ್ಲ. ಮಹಾತ್ಮರ ಕಷ್ಟಗಳು ಮಹಾತ್ಮರಿಗೇ ಗೊತ್ತು. ಇದನ್ನು ಬಿಟ್ಟರೆ ದೇವಸ್ಥಾನದ ಕೊಳಕು ಮತ್ತು ಗದ್ದಲ ಮೊದಲಿನಂತೆಯೇ ಇದ್ದವು.

ಪರಮಾತ್ಮನ ಕರುಣೆಯಲ್ಲಿ ಯಾರಿಗಾದರೂ ಸಂಶಯವಿದ್ದರೆ ಆತ ಈ ಪವಿತ್ರಸ್ಥಾನಗಳನ್ನು ಹೋಗಿ ಒಂದು ಸಲ ನೋಡಲಿ. ತನ್ನ ಪವಿತ್ರ ವಾದ ಹೆಸರಿನಲ್ಲಿ ಎಷ್ಟೊಂದು ದಂಭಾಚಾರ ಮತ್ತು ಅಧರ್ಮ ನಡೆದರೂ ಆ ಮಹಾಯೋಗಿ ಅದನ್ನು ಸಹಿಸುತ್ತಾನೆ! ಆತ ಬಹಳ ಹಿಂದೆಯೇ ಹೀಗೆ ಹೇಳಲಿಲ್ಲವೆ ?

ಯೇ ಯಥಾಮಾಂ ಪ್ರಪದ್ಯಂತೇ
ತಾಂಸ್ತ ಥೈವ ಭಜಾಮ್ಯಹಂ

(ಯಾರು ಯಾವ ರೀತಿಯಲ್ಲಿ ನನ್ನ ಆಶ್ರಯವನ್ನು ಪಡೆಯುತ್ತಾರೆಯೋ ಆ ರೀತಿಯ ಫಲವನ್ನೇ ನಾನು ಅವರಿಗೆ ಕೊಡುತ್ತೇನೆ.

ಮನುಷ್ಯ, ಬಿತ್ತಿದುದನ್ನೇ ಬೆಳೆಯುತ್ತಾನೆ. ಕರ್ಮದ ನಿಯಮವನ್ನು ಯಾರೂ ತಪ್ಪಿಸಿಕೊಳ್ಳಲಾರರು. ಆದುದರಿಂದ ದೇವರು ಮಧ್ಯೆ ಪ್ರವೇಶಿಸುವ ಆವಶ್ಯಕತೆಯೇ ಇಲ್ಲ. ಅವನು ತನ್ನ ಕಾನೂನನ್ನು ಸ್ಥಾಪಿಸಿ ತಾನು ಹಿಂದಕ್ಕೆ ಸರಿದು ನಿಂತನೋ ಏನೋ.

ಹೀಗೆ ದೇವಾಲಯದ ಅನುಭವವನ್ನು ಹೊಂದಿ ನಾನು ಶ್ರೀಮತಿ ಬೆಸೆಂಟರ ದರ್ಶನಕ್ಕಾಗಿ ಹೋದೆನು. ಆಕೆ ಆಗತಾನೆ ಕಾಯಿಲೆಯಿಂದ ಗುಣಮುಖರಾಗುತ್ತಿರುವುದು ನನಗೆ ತಿಳಿದಿದ್ದಿತು. ನಾನು ನನ್ನ ಹೆಸರಿನ ಚೀಟಿಯನ್ನು ಒಳಕ್ಕೆ ಕಳುಹಿಸಿದೆನು. ಆಕೆ ತತ್‌ಕ್ಷಣ ಬಂದರು. ನಾನು ಹೋಗಿದ್ದುದು ಅವರ ದರ್ಶನವನ್ನು ಪಡೆಯುವುದಕ್ಕಾಗಿ ಮಾತ್ರ. ಆದುದರಿಂದ ನಾನು ಹೀಗೆ ಹೇಳಿದೆನು : "ನನಗೆ ನಿಮ್ಮ ಅನಾರೋಗ್ಯ ಸ್ಥಿತಿ ಗೊತ್ತು. ನಾನು ತಮ್ಮ ದರ್ಶನ ಭಾಗ್ಯಕ್ಕಾಗಿ ಮಾತ್ರ ಬಂದಿದ್ದೇನೆ. ನಿಮ್ಮ ಅನಾರೋಗ್ಯ ಸ್ಥಿತಿಯಲ್ಲಿಯೂ ನೀವು ನನಗೆ ದರ್ಶನ ಕೊಟ್ಟುದಕ್ಕೆ ನಾನು ನಿಮ್ಮನ್ನು ವಂದಿಸುತ್ತೇನೆ. ನಿಮ್ಮನ್ನು ಹೆಚ್ಚು ಹೊತ್ತು ಇನ್ನು ತಡೆಯುವುದಿಲ್ಲ" ಹೀಗೆ ಹೇಳಿ ನಾನು ಅಲ್ಲಿಂದ ಹೊರಟೆನು.

೨೧

ಬೊಂಬಾಯಿನಲ್ಲಿ ನೆಲೆಸಿದೆನು

ನಾನು ಬೊಂಬಾಯಿನಲ್ಲಿ ನೆಲಸಬೇಕು ; ಅಲ್ಲಿಯ ನ್ಯಾಯಸ್ಥಾನಗಳಲ್ಲಿ ವಕೀಲಿ ಕೆಲಸವನ್ನು ಮಾಡಬೇಕು ; ಮತ್ತು ಸಾರ್ವಜನಿಕ ಕಾರ್ಯದಲ್ಲಿ ತಮಗೆ ನೆರವಾಗಬೇಕು ಎಂಬುದು ಗೋಖಲೆಯವರ ತೀವ್ರ ಆಸಕ್ತಿಯಾಗಿದ್ದಿತು. ಆ ಕಾಲದಲ್ಲಿ ಸಾರ್ವಜನಿಕ ಕೆಲಸವೆಂದರೆ ಕಾಂಗ್ರೆಸ್‌ನ ಕೆಲಸವೇ ಆಗಿದ್ದಿತು. ಅವರ ನೆರವಿನಿಂದಲೇ ಸ್ಥಾಪಿತವಾದ ಕಾಂಗ್ರೆಸ್ ಸಂಸ್ಥೆಯ

ವ್ಯವಸ್ಥೆಯನ್ನು ಚೆನ್ನಾಗಿ ನಡೆಸುವುದೇ ಆ ಸಭೆಯ ಮುಖ್ಯ ಕಾರ್ಯವಾಗಿದ್ದಿತು.

ಗೋಖಲೆಯವರ ಸಲಹೆ ನನಗೆ ಒಪ್ಪಿಗೆಯಾಯಿತು. ಆದರೆ ವಕೀಲನಾಗಿ ನಾನು ಜಯಶಾಲಿಯಾಗಬಲ್ಲೆನೆಂಬ ನಂಬಿಕೆ ನನಗೆ ಇರಲಿಲ್ಲ. ಹಿಂದಿನ ಅಪಜಯದ ಕಹಿ ನೆನಪು ನನಗೆ ಮರೆತಿರಲಿಲ್ಲ. ಕಕ್ಷಿಗಾರರನ್ನು ಹೊಗಳಿ ಮೊಕದ್ದಮೆಗಳನ್ನು ಸಂಪಾದಿಸುವುದು ನನಗೆ ಆಗಲೂ ವಿಷಪ್ರಾಯವಾಗಿದ್ದಿತು.

ಆದುದರಿಂದ ನಾನು ಮೊದಲು ರಾಜಕೋಟೆಯಲ್ಲಿ ವಕೀಲಿಯ ಕಾರ್ಯವನ್ನು ಪ್ರಾರಂಭಿಸಬೇಕೆಂದು ನಿಶ್ಚಯಿಸಿಕೊಂಡೆನು. ನನ್ನನ್ನು ಇಂಗ್ಲೆಂಡಿಗೆ ಹೋಗಲು ಪ್ರೇರಿಸಿದ ನನ್ನ ಹಿತೈಷಿ ಕೇವಲರಾಮ್ ಮಾವಜೀ ದವೆಯವರು ಅಲ್ಲಿದ್ದರು. ತತ್‌ಕ್ಷಣವೇ ಅವರು ನನಗೆ ಮೂರು ಮೊಕದ್ದಮೆಗಳನ್ನು ತಂದುಕೊಟ್ಟರು. ಅವುಗಳ ಪೈಕಿ ಎರಡು ಕಾಥೆವಾಡದ ಪೊಲಿಟಿಕಲ್ ಏಜೆಂಟರ ಜುಡಿಷಿಯಲ್ ಅಸಿಸ್ಟೆಂಟರ ಕೋರ್ಟಿನಲ್ಲಿ ನಡೆಯಬೇಕಾದ "ಅಪೀಲ್". ಮತ್ತೊಂದು ಜಾಮನಗರದಲ್ಲಿ ನಡೆಯಬೇಕಾಗಿದ್ದ ಒರಿಜಿನಲ್ ಮೊಕದ್ದಮೆಯಾಗಿದ್ದಿತು. ಈ ಕೊನೆಯದು ಸ್ವಲ್ಪ ಮುಖ್ಯವಾದ ಮೊಕದ್ದಮೆಯಾಗಿದ್ದಿತು. ಈ ಮೊಕದ್ದಮೆಯನ್ನು ಗೆಲ್ಲುವುದು ನನಗೆ ಸಾಧ್ಯವೇ ಎಂದು ನಾನು ಸಂಶಯವನ್ನು ವ್ಯಕ್ತಪಡಿಸಿದಾಗ, ಕೇವಲ ರಾಮ್‌ದವೇ "ಗೆಲ್ಲುವುದು ಅಥವಾ ಸೋಲುವುದು ನಿಮಗೆ ಸಂಬಂಧಪಟ್ಟ ವಿಷಯವಲ್ಲ. ನೀವಿರುವುದು ನಿಮ್ಮ ಕೈಲಾದಷ್ಟು ಪ್ರಯತ್ನ ಮಾಡುವುದಕ್ಕಾಗಿ ; ನಿಮ್ಮ ಸಹಾಯಕ್ಕೆ ನಾನಂತೂ ಇದ್ದೇ ಇದ್ದೇನೆ" ಎಂದು ಹೇಳಿದರು.

ನನ್ನ ಎದುರು ಪಕ್ಷಕ್ಕೆ ದಿವಂಗತ ಸಮರ್ಥರು ವಕೀಲರಾಗಿದ್ದರು. ನಾನು ಚೆನ್ನಾಗಿಯೇ ಸಿದ್ಧಮಾಡಿಕೊಂಡಿದ್ದೆನು. ನನಗೆ ಇಂಡಿಯನ್ ಲಾ (ಕಾನೂನು) ತುಂಬ ಗೊತ್ತಿದ್ದಿತು ಎಂದಲ್ಲ. ಆದರೆ ಕೇವಲರಾಮ್ ದವೇಯವರು ನನಗೆ ಮೊಕದ್ದಮೆ ವಿಷಯವನ್ನು ಚೆನ್ನಾಗಿ ತಿಳಿಸಿದ್ದರು. ನಾನು ದಕ್ಷಿಣ ಆಫ್ರಿಕಾಕ್ಕೆ ಹೋಗುವುದಕ್ಕೆ ಮುಂಚೆ "ಸರ್ ಫಿರೋಜ್ ಷಾರವರಿಗೆ ಸಾಕ್ಷ್ಯಕ್ಕೆ ಸಂಬಂಧಪಟ್ಟ (ಎವಿಡೆನ್ಸ್) ಕಾನೂನು ಕರತಲಾ

ಮೂಲಕವಾಗಿದೆ. ಅದೇ ಅವರ ಜಯದ ಗುಟ್ಟು" ಎಂದು ಹೇಳುತ್ತಿದ್ದುದನ್ನು ಕೇಳಿದ್ದೆನು. ಇದನ್ನು ನಾನು ಜ್ಞಾಪಕದಲ್ಲಿಟ್ಟುಕೊಂಡು, ಹಡಗಿನ ಪ್ರಯಾಣ ಕಾಲದಲ್ಲಿ ಸಹ ಸಾಕ್ಷೀ ಕಾನೂನು ಶಾಸ್ತ್ರವನ್ನು (ಎವಿಡೆನ್ಸ ಆಕ್ಟ್) ಚೆನ್ನಾಗಿ ಅಭ್ಯಾಸ ಮಾಡಿದ್ದೆನು. ಜತೆಗೆ ದಕ್ಷಿಣ ಆಫ್ರಿಕಾದ ನನ್ನ ಕಾನೂನು ಅನುಭವವೂ ಸೇರಿದ್ದಿತು.

ನಾನು ಮೊಕದ್ದಮೆಯನ್ನು ಗೆದ್ದೆನು. ಇದರಿಂದ ನನಗೆ ಸ್ವಲ್ಪ ಧೈರ್ಯವುಂಟಾಯಿತು. ಅಪೀಲುಗಳ ವಿಷಯದಲ್ಲಿ ನನಗೆ ಭಯವಿರಲಿಲ್ಲ. ಅವುಗಳಲ್ಲಿಯೂ ಜಯವಾಯಿತು. ಇವೆಲ್ಲವುಗಳಿಂದ ನಾನು ಬೊಂಬಾಯಿ ನಲ್ಲಿಯೂ ಅಪಜಯವನ್ನು ಹೊಂದಲಾರೆ ಎಂಬ ಧೈರ್ಯ ನನ್ನಲ್ಲಿ ಅಂಕುರಿಸಿತು.

ಆದರೆ ನಾನು ಬೊಂಬಾಯಿಗೆ ಹೋಗುವ ವಿಷಯವನ್ನು ಶೀರ್ಮಾ ನಿಸಿದುದನ್ನು ವಿವರಿಸುವುದಕ್ಕೆ ಮುಂಚೆ, ಆಂಗ್ಲೇಯ ಅಧಿಕಾರಿಗಳ ಅವಿಚಾರ ಮತ್ತು ಅಜ್ಞಾನವನ್ನು ಕುರಿತು ನನ್ನ ಅನುಭವಗಳನ್ನು ವಿವರಿಸುತ್ತೇನೆ. ಜುಡಿಶೀಯಲ್ ಅಸಿಸ್ಟೆಂಟರ ಕೋರ್ಟು ಒಂದೇ ಕಡೆ ಸ್ಥಾಯಿಯಾಗಿ ನಿಲ್ಲುವ ಕೋರ್ಟು ಆಗಿರಲಿಲ್ಲ. ಆತನು ಯಾವಾಗಲೂ ಸಂಚಾರದಲ್ಲಿರುತ್ತಿದ್ದನು. ತನ್ನ ಸಿಬ್ಬಂದಿಗಳ ಜತೆ, ಅವನು ಹೋದಲ್ಲಿಗೆ ವಕೀಲರೂ ಕಕ್ಷಿಗಾರರೂ ಹೋಗಬೇಕಾಗಿದ್ದಿತು. ತಮ್ಮ ಸ್ಥಳದಿಂದ, ಬೇರೆ ಕಡೆಗೆ ಹೋಗಬೇಕಾದರೆ ವಕೀಲರು ಕಕ್ಷಿಗಾರರ ವೆಚ್ಚ ಒಂದಕ್ಕೆ ಎರಡಾಗುತ್ತಿದ್ದಿತು. ಈ ಅನಾನು ಕೂಲ ನ್ಯಾಯಾಧಿಪತಿಗಳ ಮನಸ್ಸಿಗೆ ಬಂದಂತೆಯೇ ತೋರಲಿಲ್ಲ.

ನಾನು ಮೇಲೆ ಹೇಳಿದ ಅಪೀಲಿನ ವಿಚಾರಣೆಯು ವೇರಾವಲದಲ್ಲಿ, ನಡೆಯಬೇಕಾಗಿದ್ದಿತು. ಅಲ್ಲಿ ಆಗ ಪ್ಲೇಗು ಇದ್ದಿತು. ೫೫೦೦ ಜನರಿದ್ದ ಈ ಊರಿನಲ್ಲಿ, ದಿನಕ್ಕೆ ೫೦ ಜನರು ಇದಕ್ಕೆ ತುತ್ತಾಗುತ್ತಿದ್ದರೆಂದು ನನಗೆ ನೆನಪು. ಪ್ಲೇಗಿನ ಕಾರಣದಿಂದ ಊರು ಬರಿದಾಗಿದ್ದಿತು. ಊರಿನಿಂದ ಸ್ವಲ್ಪ ದೂರದಲ್ಲಿದ್ದ ಧರ್ಮಶಾಲೆಯಲ್ಲಿ ನಾನು ತಂಗಿದೆನು. ಆದರೆ ಕಕ್ಷಿ ಗಾರರಿಗೆ ಇರಲು ಸ್ಥಳವೆಲ್ಲಿ ? ಅವರು ಬಡವರಾಗಿದ್ದರಂತೂ ದೇವರ ಮೇಲೆ ಭಾರ ಹಾಕುವುದೊಂದೇ ಅವರಿಗಿದ್ದ ದಾರಿ.

ಅದೇ ಕೋರ್ಟಿನಲ್ಲಿ ಮತ್ತೊಬ್ಬ ವಕೀಲರೂ ನಡೆಸಬೇಕಾದ ಮೊಕದ್ದಮೆಗಳಿದ್ದವು. ಅವರು "ವೇರಾವಲದಲ್ಲಿ ಪ್ಲೇಗು ಇರುವುದರಿಂದ ಮೊಕದ್ದಮೆಯನ್ನು ಬೇರೆ ಕಡೆಗೆ ವರ್ಗಾಯಿಸುವಂತೆ ಕೋರ್ಟಿಗೆ ಅರ್ಜಿ ಹಾಕಿ" ಎಂದು ನನಗೆ ತಾರು ಕೊಟ್ಟರು. ನಾನು ಅರ್ಜಿಯನ್ನು ಕೋರ್ಟಿಗೆ ಒಪ್ಪಿಸಿದೆನು. ಸಾಹೇಬರು "ನಿಮಗೆ ಭಯವೆ ?" ಎಂದು ಕೇಳಿದರು.

"ನನ್ನ ಭಯದ ವಿಷಯವಲ್ಲ. ನನ್ನ ಪಾಡನ್ನು ಹೇಗೋ ಮಾಡಿಕೊಳ್ಳುತ್ತೇನೆ. ಆದರೆ ಕಕ್ಷಿಗಾರರ ಗತಿಯೇನು ?" ಎಂದು ನಾನು ಕೇಳಿದೆನು.

ಸಾಹೇಬರು "ಪ್ಲೇಗಂತೂ ಭಾರತದಲ್ಲಿ ಬಂದು ನೆಲೆಸಿಯಾಯಿತು. ಇನ್ನು ಅದಕ್ಕೆ ಹೆದರಿ ಪ್ರಯೋಜನವೇನು ? ವೇರಾವಲದ ಹವ ಸೊಗಸಾಗಿದೆ. (ಸಾಹೇಬರು ಊರಿನಿಂದ ದೂರವಾಗಿ, ಸಮುದ್ರ ತೀರದಲ್ಲಿ ತಮಗಾಗಿ ಕಟ್ಟಿದ್ದ ಅರಮನೆಯಂತಹ ಗುಡಾರದ ಮನೆಯಲ್ಲಿ ಇದ್ದರು) ಜನರು ಹೀಗೆ ಬಯಲಿನಲ್ಲಿ ವಾಸಿಸುವುದನ್ನು ಕಲಿಯುವುದು ಒಳ್ಳೆಯದಲ್ಲವೆ ?"

ಈ ವೇದಾಂತಕ್ಕೆ ಎದುರಾಗಿ ವಾದಿಸುವುದರಿಂದ ಏನೂ ಪ್ರಯೋಜನವಿರಲಿಲ್ಲ. ಸಾಹೇಬರು ಶಿರಸ್ತೆದಾರರಿಗೆ ಹೀಗೆ ಹೇಳಿದರು. "ಮಿ. ಗಾಂಧೀಯವರು ಹೇಳುವುದನ್ನು ನೆನಪಿಟ್ಟುಕೊಳ್ಳಿ, ವಕೀಲರಿಗಾಗಲೀ ಕಕ್ಷಿಗಾರರಿಗಾಗಲಿ ತುಂಬ ತೊಂದರೆಯಾದರೆ ನನಗೆ ತಿಳಿಸಿ" ಎಂದು ಹೇಳಿದರು.

ಯಾವುದು ಸರಿಯೆಂದು ತಮಗೆ ತೋರಿತೋ, ಆ ಕಾರ್ಯವನ್ನು ಸಾಹೇಬರು ಪ್ರಾಮಾಣಿಕವಾಗಿ ಮಾಡಿದ್ದರು. ಆದರೆ ಆತನಿಗೆ ಬಡ ಭಾರತದ ಕಷ್ಟ ತಿಳಿಯುವುದು ಹೇಗೆ ? ನಮ್ಮ ಜನರ ಆವಶ್ಯಕತೆಗಳು, ಒಳ್ಳೆಯ—ಕೆಟ್ಟ ಪದ್ಧತಿಗಳು, ರೀತಿನೀತಿಗಳು—ಇವೆಲ್ಲ ಹೇಗೆ ಗೊತ್ತಾಗಬೇಕು ? ಚಿನ್ನದ ಸವರನ್‌ಗಳಲ್ಲಿ ಅಳೆಯುತ್ತಿರುವವನು, ಇದ್ದಕ್ಕಿದ್ದಂತೆ ತಾಮ್ರದ ಚೂರು(ಕಾಸು)ಗಳಲ್ಲಿ ಲೆಕ್ಕ ಮಾಡುವುದು ಹೇಗೆ ಸಾಧ್ಯ ? ಎಷ್ಟೇ ಒಳ್ಳೆಯದಾದರೂ ಆನೆ, ಇರುವೆಯ ಮಟ್ಟದಲ್ಲಿ ಯೋಚಿಸಲು ಸಾಧ್ಯವಿಲ್ಲ. ಹಾಗೆಯೇ ಇಂಗ್ಲಿಷಿನವನು ಭಾರತೀಯರ ಮಟ್ಟದಲ್ಲಿ ಯೋಚಿಸಲು ಅಥವಾ ಅವರಿಗೆ ನಿಯಮಗಳನ್ನು ಮಾಡಲು ಅಸಮರ್ಥನಾಗುತ್ತಾನೆ.

ಆದರೆ ಕಥೆಯನ್ನು ಮುಂದುವರಿಸೋಣ. ಮೊಕದ್ದಮೆಯಲ್ಲಿ ನನಗೆ ಜಯವಾದರೂ ನಾನು ಇನ್ನೂ ಸ್ವಲ್ಪ ಕಾಲ ರಾಜಕೋಟೆಯಲ್ಲಿಯೇ ಇರಬೇಕೆಂದು ತೀರ್ಮಾನಿಸಿದ್ದೆನು. ಆಗ ಒಂದು ದಿನ ಕೇವಲರಾಮ್ ದವೇ ನನ್ನಲ್ಲಿ ಬಂದು "ಗಾಂಧಿ, ನೀವು ಇಲ್ಲೇ ಕೊಳೆಯುತ್ತಿರುವುದು ನನಗೆ ಸರಿಯಾಗಿ ತೋರುವುದಿಲ್ಲ. ಬೊಂಬಾಯಿಗೆ ಯಾವಾಗ ಹೊರಡುತ್ತೀರಿ ? —ಹೇಳಿ" ಎಂದು ಹೇಳಿದರು.

ನಾನು "ಅಲ್ಲಿ ನನಗೆ ಕೆಲಸ ತಂದು ಕೊಡುವವರು ಯಾರು ? ನನ್ನ ಖರ್ಚಿಗೆ ಹಣವನ್ನು ನೀವು ಒದಗಿಸುತ್ತೀರಾ ? ಎಂದು ಕೇಳಿದೆನು.

ಅವರು "ಅಗತ್ಯವಾಗಿ, ನಾನು ಒದಗಿಸುತ್ತೇನೆ. ನಿಮ್ಮನ್ನು ದೊಡ್ಡ ಬ್ಯಾರಿಸ್ಟರ್‌ರಾಗಿ ಯಾವುದಾದರೂ ಮೊಕದ್ದಮೆಗಳಿಗೆ ಇಲ್ಲಿಗೆ ಕರೆಸುತ್ತೇವೆ. ದಾವಾ ಮುಂತಾದ ಕಾಗದ ಪತ್ರಗಳನ್ನೂ ಅಲ್ಲಿಗೇ ಕಳುಹಿಸುತ್ತೇವೆ. ಬ್ಯಾರಿಸ್ಟರ್‌ಗಳನ್ನು ಅಭಿವೃದ್ಧಿಪಡಿಸುವುದೂ ಕೆಳಕ್ಕಿಳಿಸುವುದೂ ವಕೀಲರಾದ ನಮ್ಮ ಕೈಯ್ಯಲ್ಲಿಯೇ ಇದೆಯಲ್ಲವೆ ? ನಿಮ್ಮ ಯೋಗ್ಯತೆಯನ್ನು ಜಾಮ್‌ನಗರದಲ್ಲಿಯೂ ವೇರಾವಲದಲ್ಲಿಯೂ ನೀವು ತೋರಿಸಿದ್ದೀರಿ, ಆದುದರಿಂದ ನಿಮ್ಮ ವಿಷಯದಲ್ಲಿ ನಮಗೇನೂ ಚಿಂತೆಯಿಲ್ಲ. ಸಾರ್ವಜನಿಕ ಕಾರ್ಯಗಳನ್ನು ಮಾಡುವುದಕ್ಕಾಗಿಯೇ ನೀವು ಜನ್ಮವೆತ್ತಿರುವುದು. ಆದುದರಿಂದ ಬೊಂಬಾಯಿಗೆ ಯಾವಾಗ ಹೋಗುತ್ತೀರಿ, ಹೇಳಿ" ಎಂದರು.

"ನೆಟಾಲ್‌ನಿಂದ ಸ್ವಲ್ಪ ಬಾಕಿ ಹಣ ಬರಬೇಕಾಗಿದೆ. ಅದನ್ನು ನಿರೀಕ್ಷಿಸುತ್ತಿದ್ದೇನೆ. ಅದು ಬಂದೊಡನೆಯೇ ಹೊರಡುತ್ತೇನೆ" ಎಂದು ನಾನು ಉತ್ತರವಿತ್ತೆನು.

ಎರಡು ವಾರಗಳೊಳಗೆ ಆ ಹಣವೂ ಬಂದಿತು. ನಾನು ಬೊಂಬಾಯಿಗೆ ಹೋಗಿ ಪೆಯ್ನ್ ಗಿಲ್ಬರ್ಟ್ ಮತ್ತು ಸಯಾನಿಯವರ ಕೊಠಡಿಯನ್ನು ಬಾಡಿಗೆಗೆ ಗೊತ್ತು ಮಾಡಿಕೊಂಡೆನು. ನನ್ನ ಜೀವನ ಒಂದು ಸ್ಥಿಮಿತಕ್ಕೆ ಬಂದಂತೆ ತೋರಿತು.

೨೨
ಧರ್ಮ ಸಂಕಟ

ನಾನು ಕೋಟೆಯಲ್ಲಿ ಆಫೀಸಿಗಾಗಿ ಕೊಠಡಿಗಳನ್ನೂ ಗಿರಿಗಾಂನಲ್ಲಿ ವಾಸಕ್ಕೆ ಮನೆಯನ್ನೂ ಗೊತ್ತು ಮಾಡಿಕೊಂಡಿದ್ದರೂ ಭಗವಂತನು ನನ್ನನ್ನು ಒಂದು ಕಡೆ ನೆಲಸುವುದಕ್ಕೆ ಬಿಡಲಿಲ್ಲ. ನಾನು ಹೊಸ ಮನೆಗೆ ಬಂದು ಆಗ ತಾನೇ ನೆಲಸಿದ್ದೆನು. ನನ್ನ ಎರಡನೆಯ ಮಗ ಮಣಿಲಾಲ್‌ನು ತೀವ್ರವಾದ ವಿಷಮಶೀತ ಜ್ವರಕ್ಕೆ ಗುರಿಯಾದನು. ಜತೆಗೆ, ನ್ಯೂಮೋನಿಯ ಮತ್ತು ರಾತ್ರಿಯ ವೇಳೆ ಸನ್ನಿ ಸಹ ತಲೆದೋರಿತು. ಕೆಲವು ವರ್ಷಗಳ ಕೆಳಗೆ ಇವನು ಬಲವಾದ ಸಿಡುಬು ರೋಗ ತಗುಲಿ ಗುಣ ಹೊಂದಿದ್ದನು.

ಡಾಕ್ಟರರನ್ನು ಕರೆಸಿದೆವು. "ಆತನು ಔಷಧದಿಂದ ಪ್ರಯೋಜನವಿಲ್ಲ. ಆದರೆ ಮೊಟ್ಟೆಯನ್ನೂ ಕೋಳಿ ಮರಿಯ ಸಾರನ್ನೂ ಕೊಟ್ಟರೆ ಅನುಕೂಲ ವಾಗಬಹುದು" ಎಂದು ಹೇಳಿದನು.

ಮಣಿಲಾಲ್‌ನಿಗೆ ಆಗ ವಯಸ್ಸು ಹತ್ತು. ಅವನ ಇಷ್ಟವನ್ನು ಕೇಳು ವುದರಿಂದ ಪ್ರಯೋಜನವಿರಲಿಲ್ಲ. ಅವನ ಪೋಷಕನಾದ ನಾನು ನಿರ್ಣಯಿಸ ಬೇಕಾಗಿದ್ದಿತು. ಡಾಕ್ಟರು ಪಾರಸೀಯವರು ಒಳ್ಳೆಯವರು. ನಾನು ಆತನಿಗೆ "ನಾವೆಲ್ಲ ಶಾಕಾಹಾರಿಗಳು. ನನ್ನ ಮಗನಿಗೆ ನೀವು ಹೇಳುವ ಯಾವ ಪದಾರ್ಥಗಳನ್ನೂ ಕೊಡುವಂತೆ ಇಲ್ಲ. ಆದುದರಿಂದ ಅವನಿಗೆ ಕೊಡಲು ಬೇರೆ ಏನನ್ನಾದರೂ ಸೂಚಿಸುವಿರಾ ?" ಎಂದು ಕೇಳಿದೆನು.

ಡಾಕ್ಟರು ಒಳ್ಳೆಯವರು. ಅವರು "ನಿಮ್ಮ ಮಗನ ಪ್ರಾಣ ಅಪಾಯ ದಲ್ಲಿದೆ. ಅವನಿಗೆ ನೀರು ಬೆರಸಿದ ಹಾಲನ್ನು ಕೊಡಬಹುದು. ಆದರೆ ಅದರಿಂದ ಅವನಿಗೆ ಸಾಕಷ್ಟು ಪುಷ್ಟಿ ದೊರಕುವುದಿಲ್ಲ. ನಿಮಗೇ ತಿಳಿದಿರು ವಂತೆ ಅನೇಕ ಹಿಂದೂ ಸಂಸಾರಗಳಿಗೆ ನಾನು ವೈದ್ಯ. ನಾನು ಔಷಧವಾಗಿ ಹೇಳುವುದನ್ನು ಅವರು ತಿರಸ್ಕರಿಸುವುದಿಲ್ಲ. ನಿಮ್ಮ ಮಗನ ವಿಷಯದಲ್ಲಿ ನೀವು ಇಷ್ಟು ಕಟ್ಟುನಿಟ್ಟಾಗಿ ಇರಬಾರದೆಂದೂ ಸಲಹೆ ಮಾಡುತ್ತೇನೆ" ಎಂದರು.

ನಾನು "ನೀವು ಹೇಳುವುದು ಬಹಳ ಸರಿ. ಡಾಕ್ಟರಾಗಿ ನೀವು ಬೇರೇನನ್ನೂ ಹೇಳುವುದು ಸಾಧ್ಯವಿಲ್ಲ. ಆದರೆ ನನ್ನ ಹೊಣೆಗಾರಿಕೆ ಬಹಳ

ಹೆಚ್ಚು. ಹುಡುಗನಿಗೆ ವಯಸ್ಸಾಗಿದಿದ್ದರೆ ನಾನು ಅವನ ಇಷ್ಟವನ್ನು ತಿಳಿದು ಅದರಂತೆ ನಡೆಯುಬಹುದಾಗಿದ್ದಿತು. ಆದರೆ ಈಗ ನಾನೇ ಅವನಿಗಾಗಿ ಯೋಚನೆಯನ್ನೂ ಮಾಡಿ ಅದರಂತೆ ನಡೆಯುಬೇಕು. ಇಂತಹ ಸಂದರ್ಭ ವಲ್ಲಿಯೇ ಮನುಷ್ಯನ ಧರ್ಮ ಪರೀಕ್ಷೆ ನಡೆಯುವುದೆಂದು ನನಗೆ ತೋರುತ್ತದೆ. ಸರಿಯೋ ತಪ್ಪೋ, ಮನುಷ್ಯ ಮಾಂಸ-ಮೊಟ್ಟೆ ಮುಂತಾದುವುಗಳನ್ನು ತಿನ್ನ ಬಾರದೆಂಬುದು ನನ್ನ ಧರ್ಮದ ಅಂಗವಾದ ದೃಢ ಭಾವನೆ. ನಮ್ಮ ಪ್ರಾಣ ವನ್ನು ಉಳಿಸಿಕೊಳ್ಳಲು ಉಪಯೋಗಿಸುವ ಸಾಧನಗಳಿಗೂ ಒಂದು ಮಿತಿ ಇರಬೇಕು. ಜೀವವನ್ನು ಉಳಿಸಿಕೊಳ್ಳುವುದಕ್ಕಾಗಿ ಸಹ ನಾವು ಕೇವಲ ಕಾರ್ಯಗಳನ್ನು ಮಾಡಬಾರದು. ನನಗೆ ತಿಳಿದಮಟ್ಟಿಗೆ ನನ್ನ ಧರ್ಮ ಇಂತಹ ಸಂದರ್ಭದಲ್ಲಿ ಸಹ, ನಾನಾಗಲೀ ನನಗೆ ಸೇರಿದವರಾಗಲೀ ಮೊಟ್ಟೆ ಮಾಂಸ ಮುಂತಾದುವನ್ನು ಉಪಯೋಗಿಸಲು ನಿಷೇಧಿಸುತ್ತದೆ. ಆದುದರಿಂದ ನೀವು ಸಂಭವಿಸಬಹುದೆಂದು ಹೇಳುವ ಅಪಾಯಕ್ಕೆ ನಾನು ಸಿದ್ಧನಾಗಿರಬೇಕು. ಆದರೆ ನಿಮಗೆ ಒಂದನ್ನು ಕೇಳಿಕೊಳ್ಳುತ್ತೇನೆ. ನೀವು ಸೂಚಿಸುವ ಔಷಧಿ ಗಳನ್ನು ನಾನು ತೆಗೆದುಕೊಳ್ಳಲು ಸಾಧ್ಯವಿಲ್ಲದುದರಿಂದ, ನನಗೆ ತಿಳಿದಿರುವ ಕೆಲವು ಜಲ ಚಿಕಿತ್ಸೆಗಳನ್ನು ಪ್ರಯೋಗಿಸಬೇಕೆಂದಿದ್ದೇನೆ. ಆದರೆ ಮಗುವಿನ ನಾಡಿ ಎದೆ, ಶ್ವಾಸಕೋಶ ಮುಂತಾದುವುಗಳನ್ನು ಪರೀಕ್ಷೆ ಮಾಡಲು ನನಗೆ ತಿಳಿಯದು. ನೀವು ಆಗಾಗ ಇಲ್ಲಿ ಬಂದು ಅವನನ್ನು ಪರೀಕ್ಷಿಸಿ ಅವರ ಸ್ಥಿತಿ ಯನ್ನು ನನಗೆ ಹೇಳುತ್ತಿದ್ದರೆ ನಾನು ನಿಮಗೆ ತುಂಬ ಕೃತಜ್ಞನಾಗಿರುವೆನು.

ಡಾಕ್ಟರು, ಒಳ್ಳೆಯವರು, ನನ್ನ ಕಷ್ಟವನ್ನು ತಿಳಿದುಕೊಂಡರು. ನನ್ನ ಕೋರಿಕೆಗೆ ಒಪ್ಪಿದರು. ಮಣಿಲಾಲ್‌ನಿಗೆ ನಿರ್ಣಯಿಸುವ ಶಕ್ತಿಯಿಲ್ಲದಿದ್ದರೂ, ನನಗೂ ಡಾಕ್ಟರಿಗೂ ನಡೆದ ಸಂಭಾಷಣೆಯನ್ನೆಲ್ಲ ನಾನು ಅವನಿಗೆ ಹೇಳಿ, ಅವನ ಅಭಿಪ್ರಾಯವನ್ನು ಕೇಳಿದೆನು.

ಅವನು "ನಿಮ್ಮ ಜಲಚಿಕಿತ್ಸೆಯನ್ನೆ ಮಾಡಿ. ನನಗೆ ಮೊಟ್ಟೆಯೂ ಕೋಳಿಮರಿಯ ಸಾರೂ ಬೇಡ" ಎಂದು ಹೇಳಿದನು.

ಮೊಟ್ಟೆ ಅಥವಾ ಗೋಮಾಂಸ ಸಾರಿನ ಹೊರತು, ಯಾವುದನ್ನಾದರೂ ಕೊಟ್ಟಿದ್ದರೆ ಅವನು ಅದನ್ನು ತೆಗೆದುಕೊಳ್ಳುತ್ತಿದ್ದನೆಂಬುದು ನನಗೆ ಗೊತ್ತಿದ್ದರೂ, ಅವನು ಹೇಳಿದುದನ್ನು ಕೇಳಿ ನನಗೆ ಸಂತೋಷವಾಯಿತು.

ಕೂನೆಯುವರ ಚಿಕಿತ್ಸಾಕ್ರಮ ನನಗೆ ಗೊತ್ತಿದ್ದಿತು. ನಾನು ಅದರ ಪ್ರಯೋಗವನ್ನೂ ಮಾಡಿದ್ದೆನು. ಉಪವಾಸಮಾಡಿದರೂ ಪ್ರಯೋಜನ ವುಂಟೆಂಬುದು ನನಗೆ ಗೊತ್ತಿದ್ದಿತು. ಆದುದರಿಂದ ನಾನು ಕೂನೆಯುವರ ಪದ್ಧತಿಗನುಗುಣವಾಗಿ ಮಣಿಲಾಲ್‌ನಿಗೆ ಕಟಿಸ್ನಾನವನ್ನು ಮಾಡಿಸಲು ಮೊದಲು ಮಾಡಿದೆನು. ಒಂದು ಸಲಕ್ಕೆ ಮೂರು ನಿಮಿಷಕ್ಕಿಂತ ಹೆಚ್ಚಾಗಿ ಅವನನ್ನು ನೀರಿನಲ್ಲಿ ಬಿಡುತ್ತಿರಲಿಲ್ಲ. ಅವನಿಗೆ ಮೂರು ದಿನಗಳವರೆಗೆ ನೀರು ಸೇರಿಸಿದ ಕಿತ್ತಲೆ ರಸವನ್ನು ಕೊಡುತ್ತಿದ್ದೆನು.

ಆದರೆ ಜ್ವರ ಇದ್ದೇ ಇದ್ದಿತು. ೧೦೪ ಡಿಗ್ರಿಗೆ ಏರಿತು. ರಾತ್ರಿಯ ಹೊತ್ತು ಸನ್ನಿ. ನನಗೆ ಯೋಚನೆ ಇಟ್ಟುಕೊಂಡಿತು. ಜನ ನನ್ನನ್ನು ಏನನ್ನಬಹುದು ? ನಮ್ಮಣ್ಣ ಏನಂದಾನು ? ಬೇರೊಬ್ಬ ಡಾಕ್ಟರನನ್ನು ಕರೆದು ತೋರಿಸೋಣವೆ ? ಆಯುರ್ವೇದ ಡಾಕ್ಟರಿಗಾದರೂ ತೋರಿಸೋಣವೆ ? ತಮ್ಮ ಹುಚ್ಚಿಗೆ ಮಕ್ಕಳನ್ನು ಬಲಿಕೊಡಲು ತಂದೆತಾಯಿಯರಿಗೆ ಏನು ಅಧಿಕಾರ ?

ಈ ವಿಧವಾದ ಯೋಚನೆಗಳು ನನ್ನನ್ನು ಮುತ್ತಿದವು. ಅನಂತರ ಅದಕ್ಕೆ ವಿರೋಧವಾದ ಯೋಚನಾತರಂಗ, ಪ್ರಾರಂಭವಾಗುತ್ತಿದ್ದಿತು. ನನಗೆ ರೋಗ ಬಂದರೆ ನಾನು ಯಾವ ಔಷಧಿ ಉಪಚಾರಗಳನ್ನು ಮಾಡಿ ಕೊಳ್ಳುತ್ತಿದ್ದೆನೋ ಅದನ್ನೇ ನನ್ನ ಮಗನಿಗೂ ಮಾಡುತ್ತಿರುವುದರಿಂದ ದೇವರಿಗೆ ದಿಟವಾಗಿ ಸಂತೋಷವಾಗುವುದು. ನನಗೆ ಜಲಚಿಕಿತ್ಸೆಯಲ್ಲಿ ನಂಬಿಕೆಯಿದ್ದಿತು. ಅಲೋಪತಿ ಪದ್ಧತಿಯಲ್ಲಿ ಸ್ವಲ್ಪವೂ ಇರಲಿಲ್ಲ. ಡಾಕ್ಟರೇನೂ ಪ್ರಾಣವುಳಿಸುವ ಆಶ್ವಾಸನವನ್ನು ಕೊಡಲಾರರು. ಹೆಚ್ಚೆಂದರೆ ಅವರೂ ಸಹ ಪ್ರಯತ್ನ ಮಾಡಿ ನೋಡಬಲ್ಲರು. ಜೀವನ ತಂತು ಇರುವುದು ದೇವರ ಕೈಯ್ಯಲ್ಲಿ, ಆದುದರಿಂದ ದೇವರನ್ನು ನಂಬಿ ಆತನ ಹೆಸರಿನಲ್ಲಿ, ನನಗೆ ಸರಿಯೆಂದು ತೋರಿದ ಔಷಧೋಪಚಾರಗಳನ್ನು ಸುಮ್ಮನೆ ಏಕೆ ಮಾಡಬಾರದು ?

ಈ ಎರಡು ಪರಸ್ಪರ ವಿರುದ್ಧವಾದ ಯೋಚನೆಗಳು ನನ್ನ ಮನಸ್ಸನ್ನು ಎಳೆದಾಡುತ್ತಿದ್ದವು. ರಾತ್ರಿಯಾಯಿತು. ನಾನು ಮಣಿಲಾಲನ ಹಾಸಿಗೆಯಲ್ಲಿ ಅವನ ಮಗ್ಗುಲಿನಲ್ಲಿಯೇ ಮಲಗಿಕೊಂಡೆನು. ಅವನಿಗೆ ಆಗಲೇ ಒದ್ದೆಬಟ್ಟೆಯ ಚಿಕಿತ್ಸೆಯನ್ನು ಮಾಡಬೇಕೆಂದು ನಿಶ್ಚಯಿಸಿದೆನು. ನಾನು ಹಾಸಿಗೆಯಿಂದ ಎದ್ದು, ಒಂದು ಮಂದವಾದ ಬಟ್ಟೆಯನ್ನು ನೀರಿನಲ್ಲಿ ನೆನಸಿ, ನೀರನ್ನೆಲ್ಲ ಹಿಂಡಿ ಅದರಲ್ಲಿ ಮಣಿಲಾಲನನ್ನು ತಲೆಯಿಂದ ಕಾಲಿನವರೆಗೆ—ತಲೆಯನ್ನು ಮಾತ್ರ ಬಿಟ್ಟು—ಸುತ್ತಿದೆನು. ಆದರ ಮೇಲೆ ಅವನಿಗೆ ಎರಡು ಕಂಬಳಿಗಳನ್ನು ಹೊದಿಸಿದೆನು. ತಲೆಗೆ ಒಂದು ಒದ್ದೆಯ ಟವಲನ್ನು ಸುತ್ತಿದೆನು. ಅವನ ದೇಹ ಕಾದ ಕಬ್ಬಿಣನಂತೆ ಸುಡುತ್ತಿದ್ದಿತು. ಮೈ ಒಣಗಿದ್ದಿತು. ಬೆವರುತ್ತಿರಲಿಲ್ಲ.

ನನಗೂ ತುಂಬ ಆಯಾಸವಾಗಿದ್ದಿತು. ನಾನು ಮಣಿಲಾಲನನ್ನು ಅವನ ತಾಯಿಯ ವಶದಲ್ಲಿ ಬಿಟ್ಟು ಚೌಪಾತಿ ಸಮುದ್ರ ತೀರದಲ್ಲಿ ತಿರುಗಾಡಿ ವಿಶ್ರಾಂತಿ ಪಡೆಯಲು ಹೋದೆನು. ಆಗ ರಾತ್ರಿ ಹತ್ತು ಗಂಟೆ. ಅಲ್ಲಿ ತಿರುಗಾಡುತ್ತಿದ್ದವರ ಸಂಖ್ಯೆ ಬಹಳ ಕಡಿಮೆಯಾಗಿದ್ದಿತು. ನಾನು ಆಳವಾದ ಯೋಚನೆಯಲ್ಲಿ ಮುಳುಗಿದ್ದುದರಿಂದ ಅವರ ಕಡೆ ನೋಡಲೇ ಇಲ್ಲ. "ದೇವರೇ ಈ ಧರ್ಮಸಂಕಟದಲ್ಲಿ ನನ್ನ ಮಾನರಕ್ಷಣೆ ನಿನ್ನ ಕೈಯ್ಯಲ್ಲಿದೆ" ಎಂದು ಹೇಳಿಕೊಂಡೆನು. ರಾಮನಾಮ ನನ್ನ ಬಾಯಿಂದ ತಾನೇತಾನಾಗಿ ಹೊರಡುತ್ತಿದ್ದಿತು. ಸ್ವಲ್ಪ ಹೊತ್ತು ಬಿಟ್ಟು ನಾನು ಹಿಂದಿರುಗಿದೆನು. ನನ್ನ ಎದೆ ಡವಡವನೆ ಹೊಡೆದುಕೊಳ್ಳುತ್ತಿದ್ದಿತು.

ನಾನು ಮನೆಯನ್ನು ಸೇರಿದ ಕೂಡಲೇ ಮಣಿಲಾಲನು "ಬಾಪೂ ಆಗಲೇ ಬಂದು ಬಿಟ್ಟಿರಿ ?" ಎಂದು ಕೇಳಿದನು. "ಹೌದು ಮಗು."

"ನನ್ನನ್ನು ಇದರಿಂದ ಪಾರುಮಾಡಿ. ನಾನು ಸುಟ್ಟುಹೋಗುತಿದ್ದೇನೆ."

"ಬೆವತಿದೆಯೇ ಮಗು ?"

"ಬೆವರು ಹರಿದು ಸ್ನಾನವಾಗುತ್ತಿದೆ. ಈಗ ನನ್ನನ್ನು ಹೊರಕ್ಕೆ ತೆಗೆಯುವಿರಿ ತಾನೆ ?"

ನಾನು ಮಣಿಲಾಲನ ತಲೆಯನ್ನು ಮುಟ್ಟಿ ನೋಡಿದೆನು. ಅಲ್ಲಿ ಬೆವರಿನ ಹನಿಗಳು ತುಂಬಿದ್ದುವು. ಜ್ವರ ಇಳಿಯುತ್ತಿದ್ದಿತು. ನಾನು ದೇವರನ್ನು ವಂದಿಸಿದೆನು.

"ಮಣಿಲಾಲ್, ನಿನ್ನ ಜ್ವರ ಇನ್ನು ಖಂಡಿತ ಓಡಿಹೋಗುತ್ತೆ, ಇನ್ನಷ್ಟು ಬೆವರಲಿ, ಕೂಡಲೆ ನಿನ್ನ ಹೊದಿಕೆಗಳನ್ನೆಲ್ಲ ತೆಗೆದು ಬಿಡುತ್ತೇನೆ."

"ಬೇಡ, ಬೇಡ. ಈ ಬೆಂಕಿಯಿಂದ ಈಗಲೇ ನನ್ನನ್ನು ಹೊರಕ್ಕೆ ತೆಗೆಯಿರಿ. ಬೇಕಾದರೆ ಇನ್ನಾವಗಲಾದರೂ ಹೊದಿಸಿರಿ".

ಹೀಗೆ ಮಾತನಾಡುತ್ತಾ ಇನ್ನಷ್ಟು ನಿಮಿಷಗಳು ನಾನು ಅವನನ್ನು ಹಾಸಿಗೆಯಲ್ಲಿ ಇರಿಸಿದೆನು. ಬೆವರು ಇನ್ನೂ ಅವನ ಹಣೆಯಿಂದ ಸುರಿಯು ತ್ತಲೇ ಇದ್ದಿತು. ನಾನು ಒದ್ದೆ ಬಟ್ಟೆಯನ್ನು ತೆಗೆದು ಹಾಕಿ ಅವನ ಮೈಯನ್ನೆಲ್ಲ ಚೆನ್ನಾಗಿ ಒರೆಸಿದೆನು. ಆಮೇಲೆ ತಂದೆ ಮಕ್ಕಳಿಬ್ಬರೂ ಒಂದೇ ಹಾಸಿಗೆಯಲ್ಲಿ ಮಲಗಿ ನಿದ್ರೆ ಹೋದೆವು.

"ನಾವಿಬ್ಬರೂ ಗಾಢ ನಿದ್ರೆ ಹೋದೆವು. ಮರುದಿನ ಬೆಳಿಗ್ಗೆ ಮಣಿ ಲಾಲನ ಜ್ವರ ಕಡಿಮೆಯಾಯಿತು. ಹೀಗೆ ಅವನು ನೀರು, ಹಾಲು ಮತ್ತು ಕಿತ್ತಲೆರಸದಲ್ಲಿ ನಲವತ್ತು ದಿನ ಇದ್ದನು. ಇನ್ನು ಭಯವಿರಲಿಲ್ಲ. ಅದೊಂದು ಮೊಂಡು ಜ್ವರ ; ಆದರೆ ಅದು ಹತೋಟಿಗೆ ಬಂದಿದ್ದಿತು.

ಇಂದು ಮಣಿಲಾಲ್, ನನ್ನ ಮಕ್ಕಳಲ್ಲೆಲ್ಲಾ ಹೆಚ್ಚು ಆರೋಗ್ಯ ದೃಢ ಕಾಯನಾಗಿದ್ದಾನೆ. ಅವನು ಜ್ವರದಿಂದ ಚೇತರಿಸಿಕೊಂಡುದು ದೇವರ ಕೃಪೆಯಿಂದಲೆ ? ಅಥವಾ ಜಲಚಿಕಿತ್ಸೆಯಿಂದಲೇ ? ಅಥವಾ ಎಚ್ಚರಿಕೆ ಯಿಂದ ಮಿತವಾಗಿ ಕೊಟ್ಟ ಆಹಾರಕ್ರಮದಿಂದಲೇ ಯಾರು ಹೇಳಬಲ್ಲರು ? ಅವರವರು ಅವರವರ ನಂಬಿಕೆಗನುಸಾರವಾಗಿ ನಿರ್ಣಯಿಸಿಕೊಳ್ಳಲಿ, ನನ್ನ ಮಟ್ಟಿಗೆ, ದೇವರು ನನ್ನ ಮಾನವನ್ನು ಉಳಿಸಿದ ಎಂಬುದೇ ನನ್ನ ದೃಢ ನಂಬಿಕೆಯಾಗಿದ್ದಿತು. ಇಂದಿಗೂ ನನ್ನ ಆ ನಂಬಿಕೆ ಅಚ್ಚಳಿಯದೆ ಉಳಿದಿದೆ.

೨೨

ಮತ್ತೆ ದಕ್ಷಿಣ ಆಫ್ರಿಕಾಕ್ಕೆ

ಮಣಿಲಾಲನಿಗೇನೋ ಗುಣವಾಯಿತು. ಆದರೆ ಗಿರಿಗಾಮಿನ ಮನೆ ವಾಸಕ್ಕೆ ಅನುಕೂಲವಾಗಿಲ್ಲವೆಂಬುದನ್ನು ನಾನು ಕಂಡೆನು. ಅದು ತೇವ ವಾಗಿದ್ದಿತಲ್ಲದೆ ಅದರಲ್ಲಿ ಸಾಕಷ್ಟು ಬೆಳಕು ಇರಲಿಲ್ಲ. ಆದುದರಿಂದ ಶ್ರೀ ರೇವಾಶಂಕರ ಜಗಜೀವನ್‌ರೊಂದಿಗೆ ಆಲೋಚಿಸಿ ನಾನು ಬೊಂಬಾಯಿಯ

ಒಂದು ಬಡಾವಣೆಯಲ್ಲಿ ಗಾಳಿ ಬೆಳಕು ಚೆನ್ನಾಗಿರುವ ಒಂದು ಬಂಗಲೆಯನ್ನು ಬಾಡಿಗೆಗೆ ತೆಗೆದುಕೊಳ್ಳಬೇಕೆಂದು ನಿಶ್ಚಯಿಸಿದೆನು. ಬಾಂದ್ರಾ ಮತ್ತು ಸಾಂತಾಕ್ರೂಸ್ ಈ ಬಡಾವಣೆಗಳಲ್ಲೆಲ್ಲ ನಾನು ತಿರುಗಾಡಿದೆ. ಬಾಂದ್ರಾದಲ್ಲಿ ಕಟುಕರ ಅಂಗಡಿಯಿದ್ದುದರಿಂದ ಅಲ್ಲಿ ಮನೆಯನ್ನು ತೆಗೆದುಕೊಳ್ಳುವ ಪ್ರಶ್ನೆಯೇ ಏಳಲಿಲ್ಲ. ಘಾಟಕೋಪರ್ ಮತ್ತು ಅದರ ಸಮೀಪದ ಸ್ಥಳಗಳು ಸಮುದ್ರದಿಂದ ದೂರವಾಗಿದ್ದುವು. ಕೊನೆಯಲ್ಲಿ ಸಾಂತಾಕ್ರೂಸ್‌ನಲ್ಲಿ ನಮಗೆ ಒಂದು ಒಳ್ಳೆಯ ಮನೆ ಸಿಕ್ಕಿತು. ಆರೋಗ್ಯ ದೃಷ್ಟಿಯಿಂದ ಅದು ಅತ್ಯುತ್ತಮವಾದುದೆಂದು ಅದನ್ನು ಬಾಡಿಗೆಗೆ ತೆಗೆದುಕೊಂಡೆನು.

ನಾನು ಸಾಂತಾಕ್ರೂಸ್‌ನಿಂದ ಚರ್ಚ್ ಗೇಟಿಗೆ ಒಂದು ಪ್ರಥಮ ದರ್ಜೆಯ "ಸೀಜನ್ ಪಾಸ್" (ತಿಂಗಳು ೩ ತಿಂಗಳಿಗೆ ಒಟ್ಟಾಗಿ ಹಣಕೊಟ್ಟು ರಿಯಾಯಿತಿಯಲ್ಲಿ ಪಡೆಯುವ ಟಿಕೀಟು)ನ್ನು ಕೊಂಡುಕೊಂಡೆನು. ನಾನು ಕುಳಿತ್ತಿದ್ದ ಗಾಡಿಯಲ್ಲಿ ನಾನೊಬ್ಬನೇ ಪ್ರಥಮ ದರ್ಜೆಯ ಪ್ರಯಾಣಿಕ ಎಂದು ಅನೇಕ ದಿನ ನಾನು ಹೆಮ್ಮೆಗೊಂಡುದು ಜ್ಞಾಪಕವಿದೆ. ಅನೇಕ ದಿನಗಳು ಬಾಂದ್ರಾಕ್ಕೆ ನಡೆದುಕೊಂಡು ಹೋಗಿ ಅಲ್ಲಿಂದ ಚರ್ಚ್ ಗೇಟಿಗೆ, ವೇಗವಾಗಿ ಹೋಗುತ್ತಿದ್ದ ರೈಲಿನಲ್ಲಿ ಹೋಗುತ್ತಿದ್ದೆನು.

ನಾನು ನಿರೀಕ್ಷಿಸಿದುದಕ್ಕಿಂತ ಚೆನ್ನಾಗಿಯೇ ನನ್ನ ವೃತ್ತಿಯಲ್ಲಿ ನನಗೆ ಏಳಿಗೆಯುಂಟಾಯಿತು. ನನ್ನ ದಕ್ಷಿಣ ಆಫ್ರಿಕಾದ ಕಕ್ಷಿಗಾರರು ನನಗೆ ಆಗಾಗ್ಗೆ ಕೆಲಸವನ್ನು ವಹಿಸುತ್ತಿದ್ದರು. ಆದರಿಂದ ನನ್ನ ಜೀವನಕ್ಕೆ ಸಾಕಾಗುವ ಹಣ ಸಂಪಾದನೆಯಾಗುತ್ತಿದ್ದಿತು.

ನನಗೆ ಇನ್ನೂ ಹೈಕೋರ್ಟಿಗೆ ಸಂಬಂಧಪಟ್ಟ ಮೊಕದ್ದಮೆ ಯಾವುದೂ ದೊರೆತಿರಲಿಲ್ಲ. ಆದರೂ ಆ ಕಾಲದಲ್ಲಿ ನಡೆಯುತ್ತಿದ್ದ "ಮೂಟ್" (ಚರ್ಚಾಕೂಟ)ಕ್ಕೆ ನಾನು ಹೋಗುತ್ತಿದ್ದೆನು. ಅದರಲ್ಲಿ ನಾನು ಭಾಗವಹಿಸುತ್ತಿರಲಿಲ್ಲ. ಜಮಿಯುತ್‌ರಾಂ ನಾನಾಭಾಯಿಯವರು ಪ್ರಮುಖ ಪಾತ್ರವನ್ನು ವಹಿಸುತ್ತಿದ್ದುದು ನನಗೆ ಜ್ಞಾಪಕವಿದೆ. ಇತರ ಹೊಸ ಬ್ಯಾರಿಸ್ಟರ್‌ಗಳಂತೆ ಹೈಕೋರ್ಟಿನಲ್ಲಿ ಮೊಕದ್ದಮೆಗಳನ್ನು ನಡೆಯುವುದನ್ನು ನೋಡಲು

ನಾನೂ ಹೋಗುತ್ತಿದ್ದೆನು. ನಾನು ಹೋಗುತ್ತಿದ್ದುದು, ಜ್ಞಾನಾರ್ಜನೆಗಿಂತ ಹೆಚ್ಚಾಗಿ ಸಮುದ್ರದಿಂದ ಬೀಸುತ್ತಿದ್ದ ತೂಕಡಿಕೆ ಬರಿಸುವ ಗಾಳಿಯ ಸುಖವನ್ನು ಅನುಭವಿಸುವುದಕ್ಕಾಗಿ ಎಂದು ಹೇಳಬಲ್ಲೆನು. ಈ ಆನಂದವನ್ನು ಅನುಭವಿಸುತ್ತಿದ್ದವನು ನಾನೊಬ್ಬನೇ ಅಲ್ಲ ಎಂಬುದೂ ನನಗೆ ಕಾಣುತ್ತಿದ್ದಿತು. ಅದೇ "ಫ್ಯಾಷನ್" ಆಗಿದ್ದುದರಿಂದ ಅದರಲ್ಲಿ ನಾಚಿಕೆಗೇನೂ ಕಾರಣವಿರಲಿಲ್ಲ.

ನಾನು ಹೈಕೋರ್ಟಿನ ಪುಸ್ತಕ ಭಂಡಾರವನ್ನು ಉಪಯೋಗ ಮಾಡಿಕೊಳ್ಳತೊಡಗಿದೆನು. ನನಗೆ ಹೊಸ ಹೊಸ ಜನರ ಪರಿಚಯಗಳೂ ಆಗುತ್ತಿದ್ದವು. ಬಹಳ ಬೇಗ ಹೈಕೋರ್ಟ್ ಕೆಲಸ ಸಹ ನನಗೆ ದೊರಕುವುದೆಂದು ನಾನು ತಿಳಿದುಕೊಂಡೆನು.

ಹೀಗೆ ಒಂದು ಕಡೆ, ನನ್ನ ವೃತ್ತಿಯಲ್ಲಿ ನನಗೆ ತಕ್ಕಮಟ್ಟಿಗೆ ನಿಶ್ಚಿಂತೆಯುಂಟಾಯಿತು. ಮತ್ತೊಂದು ಕಡೆ ಗೋಖಲೆಯವರು ನನ್ನನ್ನು ಮರೆಯದೆ ನನಗಾಗಿ ತಮ್ಮ ಸ್ವಂತ ಏರ್ಪಾಡುಗಳನ್ನು ಮಾಡತೊಡಗಿದ್ದರು. ಅವರು ವಾರಕ್ಕೆ ಎರಡು ಮೂರು ಸಲ ನನಗೆ ಪರಿಚಯಮಾಡಿಸಬೇಕಾದವರ ಜತೆಯಲ್ಲಿ ಬಂದು ಅವರ ಪರಿಚಯವನ್ನು ನನಗೆ ಮಾಡಿಸುತ್ತಿದ್ದರು ಮತ್ತು ನನ್ನನ್ನು ನೋಡಿ ತಮ್ಮ ಕಾರ್ಯಕ್ರಮ ವಿಧಾನಗಳನ್ನೆಲ್ಲ ನನಗೆ ತಿಳಿಸಿ ಹೋಗುತ್ತಿದ್ದರು.

ಆದರೆ ದೇವರು ನನ್ನ ಯೋಜನೆಗಳು ನಡೆಯಲು ಯಾವಾಗಲೂ ಅವಕಾಶವನ್ನು ಕೊಡಲಿಲ್ಲವೆಂದು ಹೇಳಬಹುದು. ಅವನು ಅವುಗಳನ್ನು ತನಗೆ ತೋರಿದಂತೆ ನಡೆಸಿದ್ದಾನೆ.

ಹೀಗೆ ನನ್ನ ಏರ್ಪಾಡಿನಂತೆ ನಾನು ಸ್ಥಿರವಾಗಿ ನಿಲ್ಲಬೇಕೆಂದು ನಿಶ್ಚಯಿಸಿದ್ದಾಗ, ದಕ್ಷಿಣ ಆಫ್ರಿಕಾದಿಂದ ಅನಿರೀಕ್ಷಿತವಾಗಿ ಒಂದು ತಾರು ನನಗೆ ಬಂದಿತು. "ಮಿ. ಛೇಂಬರ್‌ಲೇನರು ಬರುವವರಿದ್ದಾರೆ. ದಯವಿಟ್ಟು ಒಡನೆಯೇ ಹೊರಟುಬನ್ನಿ." ನಾನು ಅವರಿಗೆ ಕೊಟ್ಟ ವಾಗ್ದಾನ ನನ್ನ ನೆನಪಿನಲ್ಲಿದ್ದಿತು. ನಾನು "ಅವರು ಹಣ ಕಳುಹಿಸಿದ ಕೂಡಲೇ ಹೊರಡುವೆನೆಂದು ಪ್ರತ್ಯುತ್ತರವನ್ನು ಕೊಟ್ಟೆನು. ಅವರು ತತ್‌ಕ್ಷಣವೇ ಹಣವನ್ನು

ಕಳುಹಿಸಿದರು. ನಾನು ನನ್ನ ಆಫೀಸ್ ಜಾಡಿಗೆ ಕೊಠಡಿಗಳನ್ನು ಬಿಟ್ಟು ಕೊಟ್ಟು, ದಕ್ಷಿಣ ಆಫ್ರಿಕಾಕ್ಕೆ ಹೊರಟೆನು.

ಅಲ್ಲಿಯ ಕೆಲಸ ಒಂದು ವರುಷವಾದರೂ ಹಿಡಿಯುಬಹುದೆಂದು ನನಗೆ ತೋರಿತು. ಆದುದರಿಂದ ನಾನು ಮನೆಯನ್ನು ಇಟ್ಟುಕೊಂಡು ಅಲ್ಲಿ ನನ್ನ ಹೆಂಡತಿ ಮಕ್ಕಳನ್ನು ಇರಿಸಿದೆನು.

ಈ ದೇಶದಲ್ಲಿ ಉದ್ಯೋಗ ದೊರಕದ ಸಾಹಸೀ ಯುವಕರು ಇತರ ದೇಶಗಳಿಗೆ ಹೋಗಬೇಕು ಎಂಬುವು ನನ್ನ ಆಗಿನ ಅಭಿಪ್ರಾಯವಾಗಿದ್ದಿತು. ಆದುದರಿಂದ ನಾನು ನನ್ನ ಜತೆಯಲ್ಲಿ ಅಂತಹ ನಾಲ್ಕು ಐದು ಯುವಕರನ್ನು ಕರೆದುಕೊಂಡು ಹೋದೆನು. ಅವರ ಪೈಕಿ ಮಗನ್‌ಲಾಲ್ ಗಾಂಧೀ ಸಹ ಒಬ್ಬನಾಗಿದ್ದನು.

ಗಾಂಧೀ ಮನೆತನ ದೊಡ್ಡದಾಗಿತು ; ಈಗಲೂ ಹಾಗೆಯೇ ಇದೆ. ಅವರಲ್ಲಿ ಹಳೆಯ ಹಾದಿಯನ್ನು ಬಿಟ್ಟು ಹೊಸ ಮಾರ್ಗದಲ್ಲಿ ಹೋಗುವ ಸಾಹಸವಿರುವವರನ್ನೆಲ್ಲ ಕಾಣಬೇಕೆಂದು ನನ್ನ ಇಷ್ಟವಾಗಿದ್ದಿತು. ನಮ್ಮ ತಂದೆ ಅಂತಹ ಅನೇಕರನ್ನು ರಾಜ್ಯ ಸರಕಾರದ ನೌಕರಿಯಲ್ಲಿ ಸೇರಿಸುತ್ತಿದ್ದರು. ಆ ನೌಕರಿ ವ್ಯಾಮೋಹದಿಂದ ಅವರನ್ನು ಬಿಡಿಸಬೇಕೆಂಬುದು ನನ್ನ ಆಸೆಯಾಗಿದ್ದಿತು. ಅವರಿಗೆ ಇತರ ನೌಕರಿಗಳನ್ನು ಕೊಡಿಸಲು ನನಗೆ ಇಷ್ಟವೂ ಶಕ್ತಿಯೂ ಇರಲಿಲ್ಲ. ಅವರು ಸ್ವಾವಲಂಬಿಗಳಾಗಬೇಕೆಂಬುದು ನನ್ನ ಇಷ್ಟವಾಗಿದ್ದಿತು.

ಆದರೆ ನನ್ನ ಧ್ಯೇಯಗಳು ಬೆಳೆದಂತೆ, ಈ ಯುವಕರನ್ನೂ ನನ್ನ ಧ್ಯೇಯಗಳಿಗನುಸಾರವಾಗಿ ನಡೆಯುವಂತೆ ಪ್ರೇರಿಸಲು ನಾನು ಪ್ರಯತ್ನಿಸಿದೆನು. ಮಗನ್‌ಲಾಲ್‌ನಿಗೆ ಮಾರ್ಗದರ್ಶನ ಮಾಡುವುದರಲ್ಲಿ ನಾನು ತುಂಬ ಜಯಶಾಲಿಯಾದೆನು. ಆದರೆ ಅದರ ವಿಷಯ ಮುಂದೆ ಪ್ರಸ್ತಾಪಿಸೋಣ.

ಹೆಂಡತಿ ಮಕ್ಕಳನ್ನು ಬಿಟ್ಟು ಹೋಗುವುದು, ಹೂಡಿದ್ದ ಸಂಸಾರವನ್ನು ಒಡೆಯುವುದು, ನಿಶ್ಚಿತ ಸ್ಥಿತಿಯಿಂದ ಅನಿಶ್ಚಿತಕ್ಕೆ ಹೋಗುವುದು, ಇವೆಲ್ಲ ಆ ಗಳಿಗೆಯಲ್ಲಿ ದುಃಖದಾಯಕವೇ ಆಗಿದ್ದಿತು. ಇದರ ಅನಿಶ್ಚಿತ ಜೀವನಕ್ಕೆ ನಾನು ಒಗ್ಗಿಹೋಗಿದ್ದೆನು. ಈ ಜಗತ್ತಿನಲ್ಲಿ ಇಂತಹುದು ನಿಶ್ಚಿತ

ಎಂದು ನಿರೀಕ್ಷಿಸುವುದು ತಪ್ಪು. ದೇವರು ಅಥವಾ ಸತ್ಯದ ಹೊರತು ಇಲ್ಲಿ ಉಳಿದುದೆಲ್ಲ ಅನಿಶ್ಚಿತವೇ. ನಮಗೆ ಕಾಣುವುದು ನಮ್ಮ ಸುತ್ತಮುತ್ತ ನಡೆಯುತ್ತಿರುವುದು ಎಲ್ಲಾ ಅನಿಶ್ಚಿತ, ನಶ್ವರ. ಆದರೆ ಅದರೊಳಗೆ ನಿಶ್ಚಿತನಾದ ಪರಮಾತ್ಮ ಅಡಗಿದ್ದಾನೆ. ಆತನ ನಿಶ್ಚಿತ ದರ್ಶನ ದೊರೆತವರು ಧನ್ಯರು. ನಮ್ಮ ಬಾಳನ್ನು ಅವನೊಂದಿಗೆ ಸೇರಿಸಬೇಕು. ಅವನಲ್ಲಿ ನಮ್ಮ ಶ್ರದ್ಧೆ ಬೆಳೆಯಬೇಕು. ಆಗ ನಮ್ಮ ಬಾಳು ಸಾರ್ಥಕವಾಗುತ್ತದೆ. ಆ ಸತ್ಯವನ್ನು ಹುಡುಕುವುದೇ ಪರಮ ಪುರುಷಾರ್ಥ.

ನಾನು ಡರ್ಬಾನಿನಲ್ಲಿ ಎಂದು ಇರಬೇಕಾಗಿದ್ದಿತೋ, ಅಂದಿಗಿಂತ ಒಂದು ದಿನವೂ ಮುಂಚೆ ಅಲ್ಲಿಗೆ ಸೇರಲಿಲ್ಲ. ಅಲ್ಲಿ ನನಗಾಗಿ ಕೆಲಸ ಕಾಯುತ್ತಿದ್ದಿತು. ಚೇಂಬರ್‌ಲೇನ್‌ರನ್ನು ಸಂಧಿಸಲು ನಿಯೋಗಕ್ಕೆ ತಾರೀಖು ನಿಗದಿಯಾಗಿದ್ದಿತು. ಅವರಿಗೆ ಅರ್ಪಿಸಬೇಕಾದ ನಿವೇದನ ಪತ್ರಿಕೆಯನ್ನು ಸಿದ್ಧಪಡಿಸಿ, ಆ ನಿಯೋಗದೊಡನೆ ನಾನೂ ಹೋಗಬೇಕಾಗಿದ್ದಿತು.

ಶ್ರೀನಿಧಿ ಪವರ್ ಪ್ರೆಸ್, ನಂ. 5/1, ಆರ್. ಕೆ. ಪುರಂ, ಬೆಂಗಳೂರು-560 009.

t
ports
the
d acc
ev